UNIVERSAL
LIBRARY
OU_200477
UNIVERSAL
LIBRARY

ದುರ್ಗಾತ್ತ್ರಾಯಸೇ ದುರ್ಗೇ ತತ್ತ್ವಂ ದುರ್ಗಾ ಸ್ಮೃತಾ ಜನೈಃ

" ಜಯತ್ತ್ವಂ ವಿಜಯಾಚೈವ ಸಂಗ್ರಾಮೇಚ ಜಯಪ್ರದಾ
ಮಮಾಪಿ ವಿಜಯಂ ದೇಹಿ ವರದಾ ತ್ವಂಚ ಸಾಂಪ್ರತಂ "॥

# ವಿಷಯಾನುಕ್ರಮಣಿಕೆ.


| ಪ್ರಕರಣ | ವಿಷಯ | ಪುಟಸಂಖ್ಯೆ |
|---|---|---|
| ೧ | ಒಬ್ಬ ಮಾರ್ಗಸ್ಥ | ೧—೧೪ |
| ೨ | ವಿಜಯಸಿಂಹ ವಿಮಲೆ | ೧೪—೨೨ |
| ೩ | ಅಚಲೇಶ್ವರ ಮತ್ತು ವೈಕುಂಠಯೋಗಿ | ೨೨—೪೧ |
| ೪ | ಯಶವಂತಸಿಂಹ | ೪೨—೪೯ |
| ೫ | ಔರಂಗಜೇಬನ ಪ್ರತಿಜ್ಞೆ | ೪೯—೫೮ |
| ೬ | ಚಂದ್ರಾವತಿ | ೫೮—೭೫ |
| ೭ | ದುರ್ಗಾದಾಸ-ನಯನಪಾಲ | ೭೫—೮೩ |
| ೮ | ಅನುರಾಗಾಂಕುರವು | ೮೩—೯೧ |
| ೯ | ಪದ್ಮೆಯಸಾಹಸ | ೯೨—೯೯ |
| ೧೦ | ರಾಜಸಿಂಹ | ೧೦೦—೧೦೬ |
| ೧೧ | ನಯನಪಾಲ | ೧೦೭—೧೧೫ |
| ೧೨ | ಆಶಾಭಂಗವು | ೧೧೫—೧೨೩ |
| ೧೩ | ತಾನೊಂದೆಣಿಸಿದರೆ ದೈವ ವೊಂದನ್ನು ನೆನೆಯುವುದು | ೧೨೪—೧೩೦ |
| ೧೪ | ಇಂದಿರಾ | ೧೩೦—೧೩೭ |
| ೧೫ | ಡಿಲ್ಲೀನಗರ | ೧೩೮—೧೪೫ |
| ೧೬ | ಮೊಗಲಾಯಿಜನಾನಾ | ೧೪೫—೧೫೪ |
| ೧೭ | ರೂಪನಗರದ ಮುತ್ತಿಗೆ | ೧೫೪—೧೬೩ |
| ೧೮ | ರುಕ್ಮಿಣೀಕಲ್ಯಾಣ | ೧೬೩—೧೭೭ |
| ೧೬ | ಶ್ಯಾಮಲಪಂಡಿತ | ೧೭೮—೧೮೪ |
| ೨೦ | ಪಾರವಾಳವೆಲ್ಲಿಗೆ ಹೋಯಿತು | ೧೮೪—೧೮೮ |
| ೨೧ | ಮೋಹಪ್ರಭಾವ | ೧೮೯—೧೯೨ |

| ಪ್ರಕರಣ | ವಿಷಯ | ಪುಟಸಂಖ್ಯೆ |
|---|---|---|
| ೨೨ | ಔರಂಗಜೇಬನ ಖಾಯಿಲೆ | ೧೯೨—೧೯೮ |
| ೨೩ | ಘೋಟುಸಿಂಗ | ೧೯೮—೨೦೨ |
| ೨೪ | ತಲೆಗಂಡಾಯ | ೨೦೨—೨೦೭ |
| ೨೫ | ಗೋಲಕೊಂಡ | ೨೦೭—೨೧೦ |
| ೨೬ | ಮೊಗಲರ ಕಾರಾಗೃಹ | ೨೧೦—೨೨೪ |
| ೨೭ | ಕಪಟನಾಟಕವು | ೨೨೪—೨೩೨ |
| ೨೮ | ಫಕೀರನು | ೨೩೨—೨೪೪ |
| ೨೯ | ಆಬೂಪರ್ವತದ ಮೇಲೆ | ೨೪೫—೨೫೧ |
| ೩೦ | ಇಂದಿರೆಯು ಅದೃಶ್ಯ | ೨೫೨—೨೫೫ |
| ೩೧ | ರಾಜಸಿಂಹನ ಪ್ರತಿಜ್ಞೆ | ೨೫೫—೨೬೦ |
| ೩೨ | ಯಮುನಾನದಿ | ೨೬೦—೨೬೮ |
| ೩೩ | ಜೋಹರ್ | ೨೬೯—೨೭೬ |
| ೩೪ | ಮೂವರು ಪ್ರಯಾಣಿಕರು | ೨೭೬—೨೮೩ |
| ೩೫ | ಹಾವನ್ನು ಹಾವೇ ಕಚ್ಚಿತು | ೨೮೩—೨೮೯ |
| ೩೬—೩೭ | ರಾಜಪುತ್ರರ ಯುದ್ಧ | ೨೮೯—೩೦೧ |
| ೩೮ | ಸುಖಾಗಮನ | ೩೦೧—೩೦೭ |
| | ಪರಿಸಮಾಪ್ತಿ | ೩೦೭—೩೦೮ |

# ಶುದ್ಧ ಪತ್ರಿಕೆ.

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೧ | ೩ | [illegible] | [illegible]ದಲ್ಲಿರು[illegible] |
| ೪ | ೯ ೧೦ | [illegible] | [illegible]ಸಿರುವುದು |
| ,, | [illegible] | [illegible] | [illegible]ದಲ್ಲ ! |
| ೭ | ೧೦ | [illegible] | [illegible] |
| ,, | ೨ | [illegible] | [illegible] |
| ೯ | [illegible] | [illegible] | [illegible]ಸಾದ |
| ೧೫ | ೨೧ | [illegible] | [illegible] |
| ೧೭ | ೧೦ | [illegible] | [illegible] |
| ೧೮ | ೧ | [illegible] | [illegible] |
| ,, | ೧೪ | [illegible] | [illegible]ಪುತ್ರ ಸ್ಥಾನ |
| ೧೯ | [illegible] | [illegible] | [illegible] |
| ,, | [illegible] | [illegible] | [illegible] |
| ,, | ೧೯ | [illegible] | [illegible] |
| ೨೦ | [illegible] | [illegible] | ತಂದಂತಾಗು |
| ,, | ೧೨ | [illegible] | [illegible] |
| ೨೧ | [illegible] | [illegible] | [illegible]ರಡು[illegible] |
| ೨೨ | ೧೨ | [illegible] | ಸ್ವರೂಪನಾದ ತಂದೆಯು |
| ,, | ೧೪ | [illegible] | ತನ್ನ |
| ೨೪ | ೧೪ | [illegible] | ವಿಪಿಯಾಗಿ |
| ೨೫ | ೨೨ | [illegible] | ವೇಷ |

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೩೦ | ೮ | ಸಿರಭಾಕ | ಸ್ಥಿರಭಾವ |
| ೩೨ | ೧೧ | ಸಂಗಮುಲಿ | ಸಂಗಮುವರಿ |
| ೩೪ | ೨೪ | ತಿಳಿಯುತ್ತಿದ್ದತೇ | ತಿಳಿಯುತ್ತಿದ್ದಿತೇ |
| ,, | ೨ | ಸತ | ಸತ್ವ |
| ,, | ೧೭ | ಕಾಲುಜಾಗಿ | ಕಾಲುಜಾರಿ |
| ,, | ೧೪ | ಸಂಸಾಕ | ಸಂಸ್ಕಾರ |
| ೪೦ | ೫ | ಹೆ:ರು | ಹೆಸರು |
| ೪೪ | ೨೪ | ಯೋಚಿಸುತ್ತಿದು | ಯೋಚಿಸುತ್ತಿದ್ದನು |
| ,, | ,, | ಒ:ು | ಒಬ್ಬ |
| ೪೨ | ೧೬ | ಇತನ | ಇವನ |
| ೪೮ | ೦ | ಪ:ವಾರನೆಲ್ಲವೂ | ಪರಿವಾರವೆಲ್ಲವೂ |
| ೫೪ | ೬ | ಅವಳೇ | ಆವಳೇ |
| ೫೬ | ೭ | ರಾಹಸ್ಯ | ರಹಸ್ಯ |
| ೫೭ | ೨೧ | ಪಟ್ಟನಾರೂ ಒಡದನೆಯೇ | ಪಟ್ಟನಾದರೂ ಒಡನೆಯೇ |
| ,, | ೨೨ | ನೋಡು | ನೋಡುವ |
| ೬೬ | ೨ | ಅಕೆ | ಆಕೆ |
| ,, | ೬ | ಎರುಡು | ಎರಡು |
| ೬೯ | ೫ | ಶಯುರ | ಶಹರ |
| ೭೪ | ೧೦ | ಕೊಳ್ಳುವೆನ | ಕೊಳ್ಳುವನು. |
| ೭೫ | ೧೪ | ಈದೇ | ಇದೇ |
| ೭೮ | ೨೩ | ವಿಷಯುವನ್ನು ನನ್ನ | ನನ್ನ ವಿಷಯುವನ್ನು |
| ೭೯ | ೯ | ವಿಯಸುದಲ್ಲಿ | ವಿಷಯುದಲ್ಲಿ |
| ,, | ೧೮ | ಅದೃಷ | ಅದೃಷ್ಟ |
| ೮೫ | ೮ | ಅಜಾನು | ಆಜಾನು |

| ಪುಟ | ಸಾಲು | ಶುದ್ಧ | ಅಶುದ್ಧ |
|---|---|---|---|
| ೮೬ | ೧ | ಭಲೆ | ಭಲ್ಲೆ |
| ೮೯ | ೨ | ಆಧಾರ | ಆದರ |
| ,, | ೧೩ | ನೋಡಿದ್ದ | ನೋಡದಿದ್ದ |
| ೯೪ | ೨೩ | ಅಂತರ್ಧ್ವನಿಯನ್ನು | ಅಂತರ್ಧ್ವನಿಯುನ್ನು |
| ,, | ೧೭ | ನಿನಗೆ | ನಿವ ಗೆ |
| ೧೦೪ | ೧೫ | ಇಷ್ಟು | ಇಸ್ಟು |
| ,, | ೧೯ | ಸ್ಥಾನ | ಸ್ಥನ |
| ೧೧೭ | ೧೮ | ನಾಟಿದ್ದವು ಆಶಾಬೀಜ | ನಾಟಿದ್ದ ಆಶಾಬೀಜವು |
| ೧೨೦ | ೨ | ಬಿಡುವೆನೆಂದು | ಬಿಡುವೆವೆಂದು |
| ೧೩೩ | ೧೪ | ಮೂಡಿ | ಮಾಡಿ |
| ,, | ೧೬ | ಗೊಡೆಯು | ಗೋಡೆಯು |
| ೧೬೦ | ೨೩ | ಕಾಗದನ್ನು | ಕಾಗದವನ್ನು |
| ೧೬೮ | ೧೧ | ಇಷ್ಟಕ್ಕೇ | ಇಸ್ಟಕ್ಕೇ |
| ೧೮೦ | ೪ | ಹೇಳಬಲ್ಲೆ | ಕೇಳಬಲ್ಲೆ |
| ೧೭೫ | ೧೦ | ಇದರೆ | ಆದರೆ |
| ೧೯೪ | ೧ | ವಿಶ್ವಾಸ | ವಿಶ್ವಸ |
| ,, | ೨೧ | ದರ್ಶನಾ | ದರ್ಶನ |
| ೧೯೩ | ೧೫ | ಮಾಸಾದವನು | ಮಸಾವದನು |
| , | ೨೧-೨೨ | ಪರುಕ್‌ಷ್ಮೈರನು | ಪರುಕ್‌ಷ್ಮೈರನು |

(ಪರುಕ್ ಷ್ಮೈರನು' ಎಂದಿದ್ದ ಕಡೆಯಲ್ಲೆಲ್ಲಾ 'ಪರುಕ್‌ಷ್ಮೈರನು' ಎಂದು ಓದಿಕೊಳ್ಳಬೇಕು.

| ಪುಟ | ಸಾಲು | ಶುದ್ಧ | ಅಶುದ್ಧ |
|---|---|---|---|
| ೨೦೧ | ೧೬ | ಸೇವಕ | ಸೇವಕರು |
| ೨೦೩ | ೧೬ | ನಿರ್ವಹಿಸು | ನಿರ್ವಹಿಸು |
| ೨೦೪ | ೭ | ಗತಿಯಲ್ಲದೆ | ಗತಿಯಿಲ್ಲದೆ |

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೨೦೭ | ೬ | ಗೂ[illegible]ಚಾರ್ಗಿಂದ | ಗೂಢ[illegible]ರದಿಂದ |
| ೨೧೦ | ೨ | [illegible] | ತು[illegible]ಸ್ಕ |
| ,, | ೨೨ | [illegible] | [illegible]ಸ |
| ೨[illegible] | ೨೪ | [illegible] | ಭು[illegible]ದು |
| ೨೧೫ | ೨೦ ೨೧ | [illegible] | [illegible]ಯ |
| ೨೧೬ | ೬-೭ | [illegible] | [illegible]ತೋರಿ |
| ೨೨೫ | ೮೫೭ | [illegible] | ಅಗ[illegible]ದ |
| ೨೩೩ | ೧ | ಕೆ[illegible] | ಕೆ[illegible] |
| ೨೩೭ | ೧೮ | [illegible] | [illegible] |
| ೨೩೯ | ೫ | [illegible]ದಿಯಾ | ಪ[illegible]ದಿಯಾ |
| ೨೪೧ | ೨೨ | [illegible] | [illegible] |
| ೨೫೪ | ೯ | ಕೆ[illegible] | ಕೆ[illegible]ಕೆ |
| ೨೮[illegible] | ೧[illegible] | [illegible] | ಪ್ರ[illegible]ತ್ತಕ್ಕೆ |
| ೨೯೮ | ೭ | [illegible] | [illegible]ಕ್ಕ |
| ೩೦೧ | ೧೫ | ಘ[illegible] | [illegible] |

ಮಿ[illegible]. ಇದರಲ್ಲಿ ಕೇ[illegible] ಅಕ್ಷರ [illegible]ರ್ಯಾಸ[illegible] [illegible]ವಂತಹ ತಪ್ಪುಗಳನ್ನು ಮಾತ್ರವೇ ಎತ್ತಿ ತೋರಿಸಿರುವೆವು. [illegible]ದ ತಪ್ಪು[illegible]ನ್ನು ವಾಚಕರೇ ಸರಿಪಡಿಸಿಕೊಂಡು ಓ[illegible] ಪ್ರಾರ್ಥನೆ

# ಪ್ರಸ್ತಾವನೆ

---

## ಗುಣೈಕದೃಕ್ಕುಗಳಾದ ದೇಶಬಾಂಧವರೇ !

'ವಿಮಲಾದೇವಿ' ಎಂಬ ಈ ಗ್ರಂಥವು ಮೊದಲು ಬಾಲಕವಿ ಭೋಗರಾಜು ನಾರಾಯಣಮೂರ್ತಿಯವರಿಂದ ಆಂಧ್ರಭಾಷೆಯಲ್ಲಿ ಲಿಖಿತವಾಗಿ ವಿಜ್ಞಾನ ಚಂದ್ರಿಕಾಮಂಡಲಿಯವರಿಂದ ಮುದ್ರಿಸಲ್ಪಟ್ಟು ಪ್ರಕಟವಾಯಿತು. ದ್ರವಿಡಭಾಷೆಗಳಲ್ಲಿ ಒಂದಾಗಿರುವ ಆಂಧ್ರಭಾಷೆಯನ್ನು ಭಾಷಾಭಿಮಾನಿಗಳಾದ ಆಂಧ್ರರು ಸರ್ವತೋಪರಿ ಅಭಿವೃದ್ಧಿಸ್ಥಿತಿಗೆ ತಂದು ತರುತ್ತಲಿರುವುದೂ ಹಾಗೆ ತಮ್ಮ ದೇಶಭಾಷೆಗಳ ಅಭ್ಯುದಯಕ್ಕಾಗಿ ಶ್ರಮಪಡುತ್ತಿರುವ ದೇಶಭಕ್ತರಲ್ಲಿ ವಿಜ್ಞಾನಚಂದ್ರಿಕಾಗ್ರಂಥ ಮಂಡಲಿಯವರು ಅಗ್ರಗಣ್ಯರೆನ್ನಿಸಿರುವುದೂ ಸಾಮಾನ್ಯವಾಗಿ ತಿಳಿದ ವಿಷಯವೇ ಆಗಿರುವುದು.

ಈ ವಿಮಲಾದೇವಿಯು ಮೂಲಗ್ರಂಥಕರ್ತರಾದ ಬಾಲಕವಿ ಭೋಗರಾಜು ನಾರಾಯಣಮೂರ್ತಿಯವರು ಮಹಾರಾಷ್ಟ್ರಭಾಷೆಯಲ್ಲಿರುವ ವಿಮಲಾದೇವಿಯೆಂಬ ಗ್ರಂಥವನ್ನು ಓದಿ ಅದರಲ್ಲಿಯ ಅಂಶಗಳನ್ನೂ ಇನ್ನೂ ಇತರ ಅನೇಕ ಅಂಶಗಳನ್ನೂ ಸೇರಿಸಿ ಬರೆದಿರುವರು. ಅದು ವಿಜ್ಞಾನಚಂದ್ರಿಕಾಗ್ರಂಥಮಾಲೆಯ ಒಂಭತ್ತನೆಯ ಗ್ರಂಥವಾಗಿ ಪ್ರಕಟವಾಗಿರುವುದು.

ನಾನು ಕನ್ನಡಿಗನಾದರೂ ತೆಲುಗುಭಾಷೆಯಲ್ಲಿ ಅಲ್ಪಸ್ವಲ್ಪ ಪರಿಚಯವನ್ನು ಪಡೆದಿದ್ದು ವಿಜ್ಞಾನಚಂದ್ರಿಕಾಗ್ರಂಥಮಾಲೆಯಲ್ಲಿ ಪ್ರಕಟವಾದ ಗ್ರಂಥಗಳನ್ನು ಓದುತ್ತಲಿದ್ದೆನು. ನಾನು ಓದಿದ ಐತಿಹಾಸಿಕ ಗ್ರಂಥಗಳಲ್ಲೆಲ್ಲಾ ನನಗೆ ಇದೇ ರಸವತ್ತಾಗಿಯೂ ಕನ್ನಡನಾಡಿನಲ್ಲಿ ಇದನ್ನು ಪ್ರಸಿದ್ಧಿಗೆ ತರಬೇಕೆಂಬ ಆಶೆಯುಂಟಾದುದರಿಂದಲೂ ಇದನ್ನು ತೆಲುಗು ನುಡಿಯಿಂದ ಕನ್ನಡನುಡಿಗೆ ಮಾರ್ಪಡಿಸಬೇಕೆಂದೆನಿಸಿ ನನ್ನ ಅಭಿಲಾಷೆಯನ್ನು ವಿಜ್ಞಾನಚಂದ್ರಿಕಾಮಂಡಲಿಯ ಸರ್ವಾಧಿಕಾರಿಗಳೂ ಉದಾರಚರಿತರೂ ದೇಶವತ್ಸಲರೂ ಆದ ಶ್ರೀಯುತ ಕೆ. ವಿ. ಲಕ್ಷ್ಮಣರಾವ್ ಎಂ. ಎ. ಅವರಿಗೆ ನಿವೇದಿಸಿದೆನು. ಅವರು ಒಡನೆಯೇ ದೇಶಭಾಷಾಸೇವೆಯಲ್ಲಿ ನನಗುಂಟಾದ ಆಶೆಗಾಗಿ ಸಂತೋಷಪಟ್ಟು ಪರಿವರ್ತನಕ್ಕೆ ಸಮ್ಮತಿಸಿ ಮುದ್ರಣ ಪ್ರಕಟನಾದಿ ಸರ್ವಾಧಿಕಾರವನ್ನೂ ಪ್ರತಿಫಲಾಪೇಕ್ಷೆಯಿಲ್ಲದೆ ನನಗೇ ಒಪ್ಪಿಸಿದರು

ಭಾಷಾಂತರಕ್ಕೆ ಅಪ್ಪಣೆಯನ್ನು ಪಡೆದ ನಾನು ಉತ್ಸಾಹದಿಂದ ಕೆಲವು ತಿಂಗಳಲ್ಲಿಯೇ (ನನ್ನ ವಿದ್ಯಾಭ್ಯಾಸದೊಡನೆಯೇ) ಇದರ ಪರಿವರ್ತನವನ್ನೂ ಮಾಡಿ ಮುಗಿಸಿದೆನು. ಆದರೇನು? ಕಷ್ಟಪಟ್ಟು ಬರೆದುದೇನೋ ಆಯಿತು. ಮುದ್ರಣ ಪ್ರಸಾರಗಳಿಗೆ ದ್ರವ್ಯಾನುಕೂಲ, ಸಹಾಯ, ಸಂಪತ್ತಿಗಳಿರಬೇಕಲ್ಲವೆ? ಇದರಮೇಲೆ ನಾನು ಕೇವಲ ವಿದ್ಯಾರ್ಥಿಯಾಗಿದ್ದವನು. ಹೀಗಿರುವಲ್ಲಿ ಪುಸ್ತಕವು ಪ್ರಚುರವಾಗುವ ಉಪಾಯವೇನೆಂದು ಯೋಚಿಸುತ್ತಿದ್ದ ನನಗೆ ನಂಜನಗೂಡಿನಲ್ಲಿ ಸತೀಹಿತೈಷಿಣೀ ಗ್ರಂಥಮಾಲೆಯು ಪ್ರಕಟಗೊಳ್ಳುತ್ತಿದ್ದುದು ತಿಳಿದು ಬಂದು ಅದರಲ್ಲಿ ಈ ಗ್ರಂಥವನ್ನು ಪ್ರಕಟಗೊಳಿಸಬೇಕೆಂದು ಏತದ್ಗ್ರಂಥಮಾಲಾ ಸಂಪಾದಿಕೆಯಾಗಿದ್ದ ಶ್ರೀಮತಿ ತಿರುಮಲಾಂಬಾಯವರನ್ನು ಪ್ರಾರ್ಥಿಸಿದೆನು. ಅವರು ಪುಸ್ತಕವನ್ನು ಸಮಗ್ರವಾಗಿ ಓದಿ ತಾವು ಪ್ರಕಟಿಸುತ್ತಿದ್ದ ಮಾಸಪತ್ರಿಕೆಯಾದ ಕರ್ಣಾಟಕನಂದಿನಿಯಲ್ಲಿ ಒಮ್ಮೆ ಪ್ರಕಟಿಸಿ ಆ ಬಳಿಕ ಪ್ರತ್ಯೇಕ ಪುಸ್ತಕವಾಗಿ ಪ್ರಸಿದ್ಧಪಡಿಸುವುದಾಗಿ ಭರವಸೆಯಿತ್ತುದರಮೇಲೆ ನಾನು ಸಂತೋಷದಿಂದ ಕನ್ನಡಭಾಷಾಂತರದ ಸರ್ವಸ್ವಾತಂತ್ರ್ಯವನ್ನೂ ಅವರಿಗೇ ವಹಿಸಿ ಇದರಿಂದಾಗ ಬಹುದಾದ ಲಾಭನಷ್ಟಗಳೆಲ್ಲವೂ ಸತೀಹಿತೈಷಿಣಿಗೇ ಸೇರಿದುದೆಂದು ಒಪ್ಪಿಸಿದೆನು. ಅದರಂತೆಯೇ ಶ್ರೀಮತಿಯವರು ಇದನ್ನು ಅವಲೋಕಿಸಿ ನಂದಿನಿಯ ೧-೨ ನೆ ಸಂಪುಟಗಳಲ್ಲಿ ಮೊದಲು ಮುದ್ರಿಸಿ ಈಗ ಮತ್ತೆ ಪುಸ್ತಕರೂಪವಾಗಿ ಮುದ್ರಿಸಿ ಪ್ರಕಟಗೊಳಿಸಿ ಈ ದೇಶಭಾಷಾ ಸೇವಕನ ಸಂಕಲ್ಪವನ್ನು ಸಫಲಗೊಳಿಸಿದರು.

ಭಾಷಾಂತರಕ್ಕೆ ಅನುಮತಿಯಿತ್ತ ವಿಜ್ಞಾನಚಂದ್ರಿಕಾವ್ಯವಸ್ಥಾಪಕರಾದ ಶ್ರೀಯುತ ಕೆ. ವಿ. ಲಕ್ಷ್ಮಣರಾವ್ ಎಂ. ಎ. ಅವರಿಗೂ ಪುಸ್ತಕವನ್ನು ಹೆಚ್ಚು ಕಡಿಮೆಮಾಡಿ, ತಿದ್ದಿ, ವಾಚಕರ ಮನಸ್ಸಿಗೆ ಸಂತೋಷತರುವಂತೆ ಮಾಡಿ ಮುದ್ರಿಸಿ ಪ್ರಕಟಗೊಳಿಸಿದ ಸೋದರಿ ಶ್ರೀ ತಿರುಮಲಾಂಬಾಯವರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸುವೆನು.

ತಾ|| ೨೪—೯—೨೦
ತಿರುಚನಾಪಳ್ಳಿ

ಇಂತು ಬಿನ್ನವಿಸುವ,
ಸಜ್ಜನ ವಿಧೇಯ,

ತಿರುನಾರಾಯಣಶರ್ಮ

# ವಿನಯ ನಿವೇದನ

ಸುಹೃದಯ ಸೋದರಿಯರಲ್ಲಿ—

ಈ 'ವಿಮಲಾದೇವಿ' ಎಂಬ ಗ್ರಂಥವು ಮುದ್ರಣ-ಪ್ರಕಟನಗಳಿಗೆಂದು ನಮ್ಮ ಕಡೆಗೆ ೧೯೧೬ ನೆ ಇಸವಿ ಮಾರ್ಚಿ ಏಪ್ರಿಲ್ ಸುಮಾರಿಗೆ ಬಂದಿತು. ಆಗ ಗ್ರಂಥದ ಪರಿವರ್ತನಕಾರರಾದ ಶ್ರೀ ತಿರುನಾರಾಯಣಶರ್ಮರವರು ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ VI ಫಾರಮಿನಲ್ಲಿ ಓದುತ್ತಲಿದ್ದ ವಿದ್ಯಾರ್ಥಿಗಳಾಗಿದ್ದು ಇಷ್ಟು ಉತ್ಸಾಹದಿಂದಲೂ ಅಭಿಮಾನದಿಂದಲೂ ಭಾಷಾಸೇವೆಗೆ ತೊಡಗಿರುವುದಕ್ಕಾಗಿ ನಮಗೆ ಸಂತೋಷವುಂಟಾಗಿ ಅವರನ್ನು ಅಭಿನಂದಿಸಿ ಹಸ್ತಪ್ರತಿಯನ್ನು ತರಿಸಿಕೊಂಡೆವು. ಟಿ. ಎನ್. ಶರ್ಮರವರು ಹಸ್ತಪ್ರತಿಯೊಡನೆಯೇ ಇದರಿಂದಾಗುವ ಲಾಭವೇನಿದ್ದರೂ ಸತೀಹಿತೈಷಿಣಿಯ ಅಭಿವೃದ್ಧಿಗೆ ಉಪಯೋಗಿಸಬೇಕೆಂದು ಬರೆದು ಇದರ ಸರ್ವಸ್ವಾತಂತ್ರ್ಯದೊಡನೆ ಒಪ್ಪಿಸಿಬಿಟ್ಟರು.

ಹಸ್ತಪತ್ರಿಕೆಯನ್ನು ಸಮಗ್ರವಾಗಿ ಸಮಾಲೋಚಿಸಿ ಅಸ್ವಾಭಾವಿಕವಾದ ವರ್ಣನಾಭಾಗಗಳನ್ನೂ ಅತಿ ಲಂಬವಾದ ಉದ್ಬುದ್ಧದ ಮಾತುಗಳನ್ನೂ ಸಡಿಲವಾದ ವಾಕ್ಯಗಳನ್ನೂ ತೆಗೆದುಹಾಕಿ ಅರ್ಥ-ಅಭಿಪ್ರಾಯಗಳಿಗೆ ತಕ್ಕಂತೆ ಬೇರೆ ಬೇರೆ ಸುಲಭ ಪದಗಳನ್ನು … ದಷ್ಟು ಸಂಗ್ರಹವಾಗಿಯೂ ಚಿಕ್ಕದಾಗಿಯೂ ಬರೆದು ಕರ್ಣಾಟಕ ನಂದಿನಿಯಲ್ಲಿ ಕ್ರಮಶಃ ಪ್ರಕಟಿಸತೊಡಗಿದೆವು. ನಂದಿನಿಯ ೧ ನೆ ಸಂಪುಟದ (೧೯೧೬—೧೭) ರಲ್ಲಿ ಇದರ ಎಂಟು ಪ್ರಕರಣಗಳೂ ೨ ನೆಯ ಸಂಪುಟದಲ್ಲಿ ಉಳಿದ ಭಾಗವೂ ಪ್ರಕಟವಾಯಿತು. ಇದನ್ನು ಓದಿದ ಅನೇಕ ಸೋದರರ ಸೋದರಿಯರೂ ಪುಸ್ತಕವ್ಯಾಪಾರಿಗಳೂ ನಮ್ಮ ಹಿತೈಷಿಗಳೂ ಇದನ್ನು ಸ್ವತಂತ್ರ ಪುಸ್ತಕವನ್ನಾಗಿ ಮುದ್ರಿಸಿದರೆ ಉಪಯೋಗವಾಗುವುದೆಂದು ಹೇಳಿದುದರಿಂದ ೧೯೧೯ ನೆ ಡಿಸೆಂಬರ್ ತಿಂಗಳಲ್ಲಿ ಇದನ್ನು ಮುದ್ರಿಸಲು ಕಳುಹಿದೆವು.

ಒಂದೆರಡು ತಿಂಗಳೊಳಗಾಗಿ ವಿಮಲಾದೇವಿಯ ೧೦ ಫಾರಂಗಳು (೮೦ ಪುಟಗಳು) ಮುದ್ರಣವಾಗಿ ಮುಂದೆ ಅನೇಕ ಅನಾನುಕೂಲಗಳಿಂದ ಮುದ್ರಣಕಾರ್ಯವು ನಿಂತುಹೋಯಿತು. ದೇಶಭಾಷಾಭಿಮಾನಿಗಳ ಪ್ರೋತ್ಸಾಹಬಲದಿಂದ ಪುನಃ ೧೯೨೨ ನೆ ಜುಲೈ ತಿಂಗಳಿಂದ ಮುದ್ರಣಕ್ಕೆ ಪ್ರಾರಂಭವಾಯಿತು. ಅಷ್ಟರಲ್ಲಿ ಎಂದರೆ ಇದರ

೧೫ ಫಾರಂಗಳು (೧೨೦ ಪುಟ) ಮುದ್ರಣವಾಗುವವರೆಗೂ ಹೊಸಟೈಪು (ಅಕ್ಷರಗಳು) ಬಂದಿರಲಿಲ್ಲವಾದುದರಿಂದ ಹಳೆಯ ಅಕ್ಷರಗಳಿಂದ ಮುದ್ರಿತವಾಗಿ ೧೨೧ ನೆಯ ಪುಟದಿಂದ ಹೊಸಅಕ್ಷರಗಳಲ್ಲಿ ಶುದ್ಧವಾಗಿಯೂ ಅಂದವಾಗಿಯೂ ಮುದ್ರಣವಾದವು ಇದಕ್ಕಾಗಿ-ಎಂದರೆ ಹಿಂದೆ ಆಗಿರುವ ತಪ್ಪಿಗಾಗಿ ವಾಚಕರು ಬೇಸರಿಸದೆ ಇದೊಮ್ಮೆ ಕ್ಷಮಿಸಿ ಇದರಲ್ಲಿ ಕೊಟ್ಟಿರುವ ಶುದ್ಧಿಪತ್ರಿಕೆಯನ್ನು ಅವಲೋಕಿಸಿ ಅದರಂತೆ ಸವರಿಸಿಕೊಂಡು ಅವಲೋಕಿಸುವರೆಂದು ಎಂದಿನಂತೆ ಪ್ರೋತ್ಸಾಹಿಸಿ ನಮ್ಮಿಂದ ದೇಶಭಾಷಾಸೇವೆಯನ್ನು ಇತೋಽಪ್ಯತಿಶಯವಾಗಿ ಮಾಡಿಸುತ್ತ ಬರುವರೆಂದೂ ಆಶಿಸುವೆವು. ಅನುಕೂಲವಾದರೆ ಇರಾವತಿಯ ಮುಂದಿನ ಭಾಗವನ್ನು ನಾದಿನಿಯ ಆಕಾರದಲ್ಲಿಯೇ ಮ್ಮೆ ಮುದ್ರಿಸಿ ಸ್ವಲ್ಪಾವಕಾಶದಲ್ಲಿಯೇ ಸ್ವತಂತ್ರ ಪುಸ್ತಕವಾಗಿ ಮುದ್ರಿಸುವೆವೆಂದು ಭರವಸೆಯನ್ನು ಕೊಡಬಲ್ಲೆವು. ಇನ್ನು ಪುಸ್ತಕದ ಗುಣದೋಷ ವಿಮರ್ಶೆಯನ್ನು ವಾಚಕರ ಕೆಲಸವೆಂದು ನಿವೇದಿಸಿ, ನಮ್ಮ ಇಂದಿನವರೆಗಿನ ಭಾಷಾಸೇವೆಗೆ ಆಶ್ರಯ ಹಾಗು ಪ್ರೋತ್ಸಾಹಗಳನ್ನು ಕಲ್ಪಿಸಿಕೊಡುತ್ತ ಬಂದಿರುವ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರ, ಮದ್ರಾಸು, ಮೈಸೂರು, ವಿದ್ಯಾಂಗದವರ ಸಂಘದ ಮಹಾಜನರು ದೇಶೀಯ ಸೋದರೀ ಸೋದರರ ಉಪಕಾರವನ್ನು ಸ್ಮರಿಸಿ ಅವರ ಶ್ರೇಯೋಭಿವೃದ್ಧಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿ ಮುದ್ರಣಕಾರ್ಯದಲ್ಲಿ ಶ್ರಮವನ್ನೂ ಕ್ಷಮೆಯನ್ನೂ ವಹಿಸಿದ್ದ ಮುದ್ರಾಶಾಲೆಯವರ ಸೋದರವಾತ್ಸಲ್ಯವನ್ನು ಸಂಸ್ಮರಿಸುತ್ತ ಭಗವಂತನು ಇತೋಽಪ್ಯತಿಶಯವಾಗಿ ಸಹಾಯಸಂಪತ್ತಿಗಳನ್ನೊದಗಿಸಿಕೊಟ್ಟು ನಮ್ಮಿಂದ ಸೇವೆಯನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸುತ್ತ ಸದ್ಯಕ್ಕೆ ವಿರಮಿಸುವೆವು.

ನಂಜನಗೂಡು,<br>
ದುಂದುಭಿ ಮಾಘಶುದ್ಧ ಷಷ್ಠಿ,<br>
೧೯೨೩ ಜನವರಿ

ಹಿತೈಷಿಣಿ,<br>
ಸಂ. ನಂ.

|| ಶ್ರೀ ||

|| ಸರ್ವಂ ಸಹಾಯ್ಯೈನಮಃ ||

# ಹಿಮಲಾದೇವಿ.

## ಮೊದಲನೆಯ ಪ್ರಕರಣ.

(ಒಬ್ಬ ಮಾರ್ಗಸ್ಥ)

೧೬೭೮ ನೇ ಇಸವಿ ಡಿಶಂಬರ್ ತಿಂಗಳು; ಒಂದು ದಿನದ ಪ್ರಾತಃಕಾಲ; ಸ್ಥಳವಾದರೋ ಹಿಮಾಲಯ ಪರ್ವತದಲ್ಲಿರುವ "ಕೈಬರ್" ಕಣಿವೆಯ ದಾರಿ; ಮಾರ್ಗಸ್ಥನೆಂದರೆ, ಒಬ್ಬ ವೃದ್ಧನು! ಇನ್ನವನ ಸ್ಥಿತಿಯನ್ನು ಹೇಳಬೇಕೇ?

ಹಿಮಾಲಯವು ಪರ್ವತಗಳಿಗೆಲ್ಲಾ ಅಧಿಪತಿಯು. ಎತ್ತರದಲ್ಲಿಯೂ, ವಿಸ್ತಾರದಲ್ಲಿಯೂ ಸೃಷ್ಟಿಸೌಂದರ್ಯ-ವೈಚಿತ್ರ್ಯದಲ್ಲಿಯೂ ಇದಕ್ಕಾವ ಪರ್ವತವೂ ಸಮಾನವಾಗಲಾರದು. ಮೇಘಮಂಡಲವನ್ನು ಭೇದಿಸಿಕೊಂಡು ಆಕಾಶಮಾರ್ಗವಾಗಿ ಹೋಗುತ್ತಾ ಸೂರ್ಯಕಿರಣಗಳಿಂದ ಚಿನ್ನದ ಕಲಶಗಳಂತೆ ಪ್ರಕಾಶಿಸುತ್ತಿರುವ ಅಸಂಖ್ಯಾತ ಶಿಖರಗಳೂ, ನಾನಾವರ್ಣಶೋಭಿತವಾದ ಫಲಪುಷ್ಪಗಳಿಂದ ನಿಬಿಡವಾದ ಅಶೇಷವೃಕ್ಷಸಮೂಹವುಳ್ಳ ಅರಣ್ಯಗಳೂ, 'ಲಕ್ಷ್ಮೀನಿವಾಸ' ವೆಂಬ

ಮಾನಸವನ್ನು ತಮ್ಮ ಸೌಂದರ್ಯಾತಿಶಯದಿಂದ ಸ್ಥಾಪಿಸುವ ಕಮಲ ಸಹಸ್ರಗಳಿಂದಲೂ, ಮಾಧುರ್ಯಕ್ಕೂ ನೈರ್ಮಲ್ಯಕ್ಕೂ ಮಾತೃಭೂಮಿಯೆನಿಸಿದ ಅಮೃತತುಲ್ಯವಾದ ಜಲಸಮೃದ್ಧಿಯುಳ್ಳ ಮಾನಸಸರೋವರದಂತೆಸೆವ ಸರೋವರಗಳೂ, ತಮ್ಮ ಉತ್ಪತ್ತಿಸ್ಥಲದಿಂದ ಅಸ್ಪಷ್ಟ ಮಂಜುಲಧ್ವನಿ ಮಾಡುತ್ತಾ ಹೊರಟು ಮೊದಮೊದಲು ಸೂಕ್ಷ್ಮಗತಿಯಿಂದ ಪ್ರವಹಿಸಿ ಕ್ರಮಕ್ರಮವಾಗಿ ವಿಶಾಲರೂಪಗಳನ್ನು ಧರಿಸಿ, ತಾವು ಹೋಗುವ ಪ್ರದೇಶವನ್ನೆಲ್ಲಾ ಸಸ್ಯ-ಸಂಪಚ್ಛೋಭಿತವಾಗಿ ಮಾಡುತ್ತ ಜಗದ್ವಿಖ್ಯಾತವಾಗಿರುವ ಗಂಗಾ, ಸಿಂಧು, ಬ್ರಹ್ಮಪುತ್ರಾದಿ ನದೀ-ನದಗಳೂ, ಕಣ್ಣೋಟವು ಹೋಗುವವರೆಗೂ ಬೆಳ್ಳಿಯ ತಗಡಿನಂತೆ ಕಾಣಿಸುವ ಮಂಜಿನ ಗಡ್ಡೆಗಳಿಂದಲೂ, ಕಾಡು ಜನರು ವಾಸಕ್ಕಾಗಿ ಕಟ್ಟಿಕೊಂಡಿರುವ ಸಾವಿರಾರು ಮನೆಗಳಿಂದಲೂ, ಪಶುಗಣದಿಂದಲೂ ಶೋಭಿತವಾದ ಪರ್ವತ ಭೂಮಿಗಳೂ, ಪರಬ್ರಹ್ಮನ ಸೃಷ್ಟಿರಚನಾ ಚಮತ್ಕಾರವನ್ನು ತೋರಿಸುವವೆಂಬಂತೆ ಎಲ್ಲಿ ನೋಡಿದಲ್ಲಿ ಆಶ್ಚರ್ಯವನ್ನುಂಟುಮಾಡುವಂತಿದ್ದಿತು.

ಹಿಂದೂ ದೇಶದ ಉತ್ತರದಲ್ಲಿ ಸೃಷ್ಟಿದೇವತೆಯಿಂದ ೧೫೦೦ ಮೈಲಿ ಉದ್ದವೂ, ಆರುಮೈಲಿ ಎತ್ತರವಾಗಿಯೂ, ಮೂರು ವರಸೆಗಳಾಗಿಯೂ ಇಡಲ್ಪಟ್ಟ ಬ್ರಹ್ಮಾಂಡತುಲ್ಯವಾದ ಆ ಕಲ್ಲಿನ ಗೋಡೆಗೆ ಆ ದೇವತೆಯು ದಾರಿಗಳನ್ನಿಡದಿದ್ದ ಪಕ್ಷದಲ್ಲಿ, ಅವನ್ನು ದಾಟಲು ಮನುಷ್ಯಮಾತ್ರರಿಗಲ್ಲ, ದೇವತೆಗಳಿಗೂ ಸಾಧ್ಯವಲ್ಲವೆಂದು ತೋರುವದು. ಹಿಂದೂ ದೇಶದ ವಾಯುವ್ಯ ಭಾಗದಲ್ಲಿರುವ ಈ ಪರ್ವತಭಾಗದಲ್ಲಿ ಅನೇಕ ದಾರಿಗಳಾಗಿರುವವು. ಉತ್ತರ ಭಾಗದಲ್ಲಿ "ಖೈಬರ್"

ಕಣಿವೆಯೂ, ದಕ್ಷಿಣದಲ್ಲಿ "ಬೋಲನ್" ಎಂಬ ಕಣಿವೆಯೂ, ಅವುಗಳಲ್ಲಿ ಮುಖ್ಯವಾದುವುಗಳು. ಕೈಬರ್ ಕಣಿವೆಯು ಚರಿತ್ರೆಯಲ್ಲಿ ಅನೇಕ ವಿಧವಾದ ಖ್ಯಾತಿಯನ್ನು ಹೊಂದಿರುವುದು. ಹಿಂದೂ ದೇಶದಿಂದ ಕಾಬೂಲ್ ದೇಶಕ್ಕೆ ಹೋಗಲು ಇದು ಒಂದು ದಾರಿ. ಇದು ೩೦ ಮೈಲಿಗಳಿಗೂ ಹೆಚ್ಚು ದೂರವುಳ್ಳುದಾಗಿದೆ; ವಾಯುವ್ಯ ಸರಹದ್ದಿನ ಸೀಮೆಗಳ ಮುಖ್ಯ ಪಟ್ಟಣವಾದ 'ಪೆಷಾವರ್' ಪಟ್ಟಣಕ್ಕೆ ಪಶ್ಚಿಮದಲ್ಲಿ ೧೦ ಮೈಲಿ ದೂರದಲ್ಲಿರುವ ಜಮುರೂದ್ ಎಂಬ ಪಟ್ಟಣದಿಂದ ಮೊದಲುಮಾಡಿ, ಕಾಬೂಲ್ ಪಟ್ಟಣಕ್ಕೆ ಸಮೀಪದಲ್ಲಿರುವ ಜಲಾಲಾಬಾದ್ ದುರ್ಗದವರೆಗೂ ಈ ಕಣಿವೆಯು ವ್ಯಾಪಿಸಿರುವುದು. ಇದರ ನಡುವೆ ಅಲ್ಲಲ್ಲಿ ಚಿಕ್ಕಚಿಕ್ಕ ಹಳ್ಳಿಗಳೂ ಇರುವುವು. ಇವುಗಳಲ್ಲಿ ಜಮುರೂದ್ ಪಟ್ಟಣಕ್ಕೆ ೧೦ ಮೈಲಿ ದೂರದಲ್ಲಿರುವ ಆಲಿಮಜ್ಜರ್ ದುರ್ಗವೂ, ಇದಕ್ಕೆ ೧೦ ಮೈಲಿ ದೂರದಲ್ಲಿರುವ 'ಲಂಡೀ ಕೋಟಾಲ್' ಎಂಬ ಗ್ರಾಮವೂ ಮುಖ್ಯವಾದುವು.

ಇಕ್ಕಡೆಗಳಲ್ಲಿಯೂ ಭಯಂಕರವಾದ ಪರ್ವತಶ್ರೇಣಿಗಳೂ, ಕ್ರೂರಮೃಗ ಸಂಕೀರ್ಣವಾದ ಅಡವಿಗಳೂ, ಪುಷ್ಯ ಮಾಘ ಮಾಸಗಳಲ್ಲಿ ತುಂಬಿ ಹರಿಯುವ ಮಹಾನದಿಗಳೂ, ಮೇಕೆಗಳು ಕೂಡ ಸರಿಯಾಗಿ ನಡೆಯಲು ದಾರಿಯಿಲ್ಲದ ಸಮೋನ್ನತ ಶಿಲಾಮಯವಾದ ದುರ್ಗಮ ಮಾರ್ಗವೂ, ಈ ಕಣಿವೆಯಲ್ಲಿ ಬಲುವಾಗಿರುವುದರಿಂದ ಪ್ರಯಾಣಿಕರಿಗೆ ಈ ಮಾರ್ಗದಲ್ಲಿ ಪ್ರಯಾಣ ಮಾಡುವುದು ಬಲು ಕಷ್ಟವೇ ಸರಿ. ಎಂದರೆ, ಆ ಪರ್ವತ ಪ್ರಾಂತ್ಯದಲ್ಲಿ ಮಾನವ ಸಂಚಾರವೇ ಇಲ್ಲವೆಂದು ಊಹಿಸಬಾರದು. ಮಾನವಬುದ್ಧಿಗೆ ಸಾಧ್ಯವಲ್ಲದ

ಸ್ಥಳವಿರುವುದೇ? ಇಕ್ಕಡೆಗಳಲ್ಲಿಯೂ ಮಾನವ ನಿವಾಸಕ್ಕೆ ಯೋಗ್ಯವಾದ ಸಮಭೂಮಿಗಳಿರುವುದರಿಂದ ಕಾಡುಜನರು ಅಲ್ಲಲ್ಲಿ ಗ್ರಾಮಗಳನ್ನು ಕಟ್ಟಿಕೊಂಡಿರುವರು. ಇಷ್ಟೆ ಅಲ್ಲದೆ, ಪಶುಗಳನ್ನೂ ಇಟ್ಟುಕೊಂಡು ವ್ಯವಸಾಯ ಮಾಡುತ್ತಾ ಪರ್ವತದ ಮೇಲ್ಗಡೆಯಲ್ಲಿ ಕೂಡ, ಅನೇಕ ವಿಧವಾದ ಧಾನ್ಯಗಳನ್ನು ಬೆಳೆಯುವರು. ಸೋಪಾನ ಕಟ್ಟಿದಂತೆ ಒಂದು ಪರ್ವತದ ಮೇಲೆ ಮತ್ತೊಂದು ಪರ್ವತವಿದ್ದು ಅಲ್ಲಿಯ ನಿವಾಸಿಗಳು ಅಲ್ಲಿಯೇ ವ್ಯವಸಾಯ ಮಾಡುತ್ತಿರುವುದರಿಂದ ಆ ದಾರಿಯಲ್ಲಿ ಹೋಗುವ ಪಾಂಥನು ಬೆಳೆಯುದಿನಗಳಲ್ಲಿ ತಲೆಯೆತ್ತಿ ಮೇಲೆ ನೋಡಿದುದಾದರೆ, ಸ್ವರ್ಗವನ್ನೇರಲು, ಹಸುರು ಬಣ್ಣದ ರತ್ನಗಂಬಳಿಗಳಿಂದ ಶೃಂಗರಿಸಲ್ಪಟ್ಟ ಸೋಪಾನ ಪಂಕ್ತಿಯೇ ನಿರ್ಮಿಸಲ್ಪಟ್ಟಿರುವದೋ ಎಂಬಂತೆ, ಫಲದಿಂದ ಕೂಡಿ ಸಸ್ಯರಾಶಿಗಳು, ಆ ಪಾಂಥನಿಗೆ ಸಂಶಯವನ್ನುಂಟು ಮಾಡುವಂತಿರುವುವು.

ಇರಲಿ ವಿಶೇಷ ವಿವರಣೆಯಿಂದ ಕಥಾಸ್ವಾರಸ್ಯವು ಕೆಡಬಹುದಲ್ಲವೆ? ಹಾಗಿದ್ದರೆ ಬನ್ನಿರಿ ಪಾಠಕರೇ, ಮುಂಬರಿದು ಪಾಂಥನಮಾರ್ಗಾನುಸಂಧಾನ ಮಾಡುವ. ನೋಡಿರಿ, ಮಾರ್ಗಸ್ಥನು ದಾರಿಯಲ್ಲಿ ಹೋಗುತ್ತ ತನ್ನಲ್ಲಿ ತಾನೇ ಗೊಣಗುಟ್ಟುತ್ತಿರುವನು. ಅದೇನೆಂದು? "ಅಯ್ಯಯ್ಯೋ! ಏನನ್ಯಾಯವು! ಇಂತಹ ವಿಪರೀತವನ್ನು ಹಿಂದೆ ಕಂಡು-ಕೇಳಿರಲಿಲ್ಲ. ಅಬ್ಬ! ಎಂತಹ ದಾರುಣ ಕೃತ್ಯ! ಎಳೆಯ ಮಗುವನ್ನು ಕೊಲ್ಲಲು ಕೈಗಳು ತಾನೇ ಹೇಗೆ ಬಂದವು! ಛೀ! ಛೀ!! ಮಹಮ್ಮದೀಯನಾದರೇನು? ಹಿಂದುವಾದರೇನು? ಖುರಾನವನ್ನು ಓದಿದರೇನು? ಪುರಾಣವನ್ನು ಕೇಳಿದರೇನು! ಎಲ್ಲಾ ಒಂದೇ!! ಯಾವ

ಶಾಸ್ತ್ರದಲ್ಲಿಯೋ ಆಗಲಿ, ದಯಾ - ದಾಕ್ಷಿಣ್ಯಗಳು ಒಳ್ಳೆಯ ಗುಣ ವೆಂದು ಹೇಳಲ್ಪಟ್ಟಿವೆಯಲ್ಲದೆ, ಮೋಸ, ಮಿತ್ರದ್ರೋಹಗಳು ಒಳ್ಳೆಯವೆಂದು ಎಲ್ಲಿಯೂ ಹೇಳಿರುವುದಿಲ್ಲ. ಹುಂ; ನಡೆದು ಹೋದುದಕ್ಕೆ ನುಡಿದು ಫಲವೇನು? ಮುಂದಿನ ಕಾರ್ಯವನ್ನು ನೋಡಬೇಕು" ಎಂದು ಹೇಳಿ, ಒಂದೆರಡು ಹೆಜ್ಜೆಗಳನ್ನಿಟ್ಟು, ಚಳಿಯಿಂದ ನಡಗುತ್ತ ಮತ್ತೆ ಗೊಣಗಿದನು. "ಯಾ ಅಲ್ಲಾ! ಯಾ ಖುದಾ! ಪರ್ವರ್ ದಿಗಾರ್!! ಅಬ್ಬಬ್ಬಾ!! ಏನು ಈ ಚಳಿ! ಪ್ರಾಣವನ್ನು ಹಿಂಡುತ್ತಿದೆಯಲ್ಲಾ! ಜಾವ ಹೊತ್ತಾಗಿ ದ್ದರೂ ಕಡಮೆಯಾಗಿಲ್ಲವಲ್ಲಾ! ಕೆಳಗೆ ನೋಡಿದರೂ, ಮೇಲೆ ನೋಡಿದರೂ, ಸುತ್ತಲೂ ನೋಡಿದರೂ, ಮಂಜು ಹೊರತು ಮತ್ತೇನೂ ಕಾಣಬರುವದಿಲ್ಲಾ!! ದಾರಿಯಲ್ಲಿರುವ ಕಲ್ಲುಗ ಳೆಲ್ಲಾ ತಣ್ಣಗಿರುವದರಿಂದ ಕಾಲನ್ನೆತ್ತಿಡಲಾಗದೆ, ಮೇಲಕ್ಕೆ ನೇದುತ್ತಿರುವುದಲ್ಲಾ! ತಲೆಯೆತ್ತಿ ಯಾವಕಡೆ ನೋಡಿದರೂ ಆಕಾಶವನ್ನು ಭೇದಿಸಿರುವ ಪರ್ವತ ಶಿಖರಗಳೂ, ಅದರ ಮೇ ಲ್ಭಾಗದಲ್ಲಿ ಮಂಜಿನ ಗಡ್ಡೆಗಳೂ ಕಾಣಬರುತ್ತವೆ. ಈ ಪರ್ವತ ಗಳಿಗೆ ಹಿಮಾಲಯವೆಂಬ ಹೆಸರು ಸಾರ್ಥಕವಾಯಿತು. ಮಂಜಿನ ಬೆಟ್ಟವೆಂದರೆ ಇದೇ ಸರಿ!!

ಶ್ಲೋ|| ಅನಂತರತ್ನ ಪ್ರಭವಸ್ಯಯಸ್ಯ|ಹಿಮಂನಸಾಭಾಗ್ಯವಿಲೋಪಿ
ಜಾತಂ | ಏಕೋಹಿದೋಷೋ ಗುಣಸನ್ನಿಪಾತೇ ನಿಮಜ್ಜ
ತೀಂದೋಕಿರಣೇಷ್ವಿವಾಂಕಃ ||

ಉಹೂ! ಏನೀ ಕಾಳಿದಾಸನ ಹುಚ್ಚು? ಹಿಮಾಲಯ ದಲ್ಲಿ ಚಳಿಯಿರುವುದೆಂಬುದು ದೋಷವಂತೆ! ಆದರೆ, ಹಿಮಾ ಲಯವು ಅನಂತ ರತ್ನಗಳಿಗೆ ಮಾತೃಭೂಮಿಯಾದುದರಿಂದ ಆ ದೋಷವು, ಚಂದ್ರನ ಕಲೆಯಲ್ಲಿ ಕಳಂಕವು ಲೋಪಿಸಿದಂತೆ

ಹೋಗಿದೆಯಂತೆ! ಹೀಗೆ ಹೇಳಿದ ಆ ಕಾಳಿದಾಸನಿಗೆ ಸ್ವಾನುಭವವಿಲ್ಲವೆಂಬುದು ನಿಜವಾಗಿದೆ. ಆ ಕಾಳಿದಾಸನನ್ನು ಹಿಡಿದು ತಂದು ಈ ಕೈಬರ್ ಕಣಿವೆಯಲ್ಲಿ ಒಂದು ಕ್ಷಣವಾದರೂ ನಿಲ್ಲಿಸಿದರೆ ಆತನು, “ಕುಮಾರಸಂಭವದಲ್ಲಿ ಹೇಳಿರುವ ಮೇಲಿನ ಶ್ಲೋಕವನ್ನು ತಪ್ಪದೆ, ತಪ್ಪದೆ, ತೆಗೆದುಹಾಕುವನು. ಉಹೂ, ಹೂ-ಹೂ-ಅಬ್ಬಾ-ಅಬ್ಬಬ್ಬಾ.”

ಹೀಗೆ ಆ ಮುದಿ ಮಾರ್ಗಸ್ಥನು, ಚಳಿಯಿಂದ ಅತಿಯಾಗಿ ನಡಗುತ್ತ, ತಡೆಯಲಾರದೆ ಕೈಗಳನ್ನು ಬಿಗಿಯಾಗಿ ಬಿಗಿದು ಕಟ್ಟಿಕೊಂಡು, ಮೇಲೆ ಹೇಳಿದಂತೆ ಕೆಲವು ಮಾತುಗಳನ್ನು ಅಸ್ಪಷ್ಟವಾಗಿಯೂ, ಕೆಲವನ್ನು ಗಟ್ಟಿಯಾಗಿಯೂ, ಹೇಳುತ್ತ ಬರುತ್ತಿದ್ದನು. ಈತನಿಗೆ ೭೦ ವರ್ಷಗಳಾಗಿದ್ದರೂ ಇರಬಹುದು; ತಲೆಗೆ ಕುಚ್ಚಿನ ಟೋಪಿಯನ್ನು ಹಾಕಿಕೊಂಡಿದ್ದರೂ ಚಳಿಯನ್ನು ತಡೆಯಲಾರದೆ ಕಿವಿಯ ಮೇಲೆ ಬಿಳುಪಾದ ವಸ್ತ್ರವನ್ನು ಬಿಗಿದಿದ್ದುದನ್ನೂ, ಬೆಳ್ಳಗೆ ಜೋಲಾಡುತಿದ್ದ ಗಡ್ಡವನ್ನೂ, ಕಂಠದಲ್ಲಿದ್ದ ನೀಳರತ್ನ ಹಾರವನ್ನೂ, ಕುತ್ತಿಗೆಯಿಂದ ಹಿಡಿದು ಕಾಲವರೆಗೆ ವ್ಯಾಪಿಸಿದ್ದ ಅಂಗರಖೆ-ಬಿಳಿಯ ಷರಾಯಿ,—ಪಾದಗಳಿಗೆ ತೊಟ್ಟಿದ್ದ ಡಿಲ್ಲಿ ಪಾಪಾಸುಗಳು ಮತ್ತು ಅಡಿಗಡಿಗೆ ಬಿಗ್ಗರದಿಂದ ಹೊರಡುತ್ತಿದ್ದ-‘ಅಲ್ಲಾ! ಯಾಖುದಾ!!’ ಎಂಬ ದೇವತಾಸ್ಮರಣವೂ ಇವೆಲ್ಲವನ್ನೂ ನೋಡಿದುದಾದರೆ, ಮತಾಭಿಮಾನವುಳ್ಳ ಮಹಮ್ಮದೀಯನೆಂದು ಹೇಳಬಹುದಲ್ಲದೆ, ಅವನು ನಡನಡುವೆ ಹೇಳುತ್ತಿದ್ದ ಸಂಸ್ಕೃತ ಶ್ಲೋಕಗಳಿಂದ ಹಿಂದುವಾಗಿರಬಹುದೇನೆಂಬ ಸಂಶಯವೂ ಹುಟ್ಟಬಹುದು. ಆದರೆ, ಆ ಕಾಲದಲ್ಲಿ ಮಹಮ್ಮದೀಯರು ಕೂಡ ಸಂಸ್ಕೃತವನ್ನು ಕಲಿಯುತ್ತಿದ್ದರು. ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ “ಅಬ್ಬುಲ್ ಫಸಲ್” ಎಂಬ

ವನು ಸಂಸ್ಕೃತದಲ್ಲಿ ಪಂಡಿತನಾಗಿದ್ದು ಅನೇಕ ಕಾವ್ಯಗಳನ್ನು ರಚಿಸಿರುವನೆಂದೂ ಕೇಳಿ ತಿಳಿದಿರುವೆವು. ಹಾಗೆಯೇ ಈ ಮಾರ್ಗಸ್ಥನೂ ಆಗಿರಬಹುದಾಗಿದೆ. ಹೇಗೂ ಇರಲಿ, ಪಾಪ! ವೃದ್ಧನು ಚಳಿಯು ಹೊಡೆತವನ್ನು ಹೋಗಲಾಡಿಸಿಕೊಳ್ಳಲು ೫-೬ ಅಂಗರಖೆಗಳನ್ನು ಹಾಕಿಕೊಂಡಿದ್ದರೂ ಹಿಮಾಲಯದಲ್ಲಿದ್ದ ಚಳಿಗೆ ಅದು ಗಣನೆಯಿಲ್ಲದುದಾಯಿತು.

ಕಡೆಗೆ ವೃದ್ಧನು, ಕೋಪವನ್ನು ತಾಳಿ,- “ಆಗಲಿ, ನೋಡುತ್ತೇನೆ ನಾನು ಗೆಲ್ಲುತ್ತೇನೋ ಚಳಿಯು ಗೆಲ್ಲುವುದೋ ನೋಡಿಯೇ ಬಿಡುವೆನು. ಏನು! ಈ ಚಳಿಯು ನನ್ನನ್ನು ಮುದುಕನೆಂದು ತಿಳಿದು ತನ್ನ ಪ್ರತಾಪವನ್ನು ತೋರಿಸುತ್ತಿರುವದಲ್ಲವೆ? ಪ್ರಾಣಹೋದರೂ ಭಯವಿಲ್ಲ, ಕೈಕೊಂಡ ಕೆಲಸವನ್ನು ಕೊನೆಮುಟ್ಟಿಸದೆ, ಇಷ್ಟಕ್ಕೆ ಬೆದರಿ ಹೋಗುವವನು ನಾನಲ್ಲ! ರಾಜಭಕ್ತಿಯನ್ನು ಮೀರಿಸಿದ ಕಾರ್ಯವುಂಟೇ? ಆಹಾ! ಆ ಜೇಷ್ಠಮಲ್ಲನು ಎಂತಹ ಪರೋಪಕಾರಿ! ಈ ಅಪ್ಪಣೆ ಚೀಟಿಯನ್ನು ನನಗೆ ಸಂಪಾದಿಸಿಕೊಡದಿದ್ದರೆ, ನಾನು ಮಾಡಬೇಕೆಂದಿರುವ ಕಾರ್ಯಕ್ಕೆ ಭಂಗವಾಗುತ್ತಿದ್ದಿತಲ್ಲವೆ? ಆತನ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆನು!” ಎಂದು ಹೇಳಿಕೊಳ್ಳುತ್ತಾ ಮೇಲೆ ನೋಡಿ ಸಂತೋಷದಿಂದ- ಭಲೆ! ಮಧ್ಯಾಹ್ನವು ಸಮೀಪಿಸುತ್ತಿದೆ. ಮಧ್ಯಾಹ್ನ ಮಾರ್ತಾಂಡ ಚಂಡ ಕಿರಣಗಳಿಂದ ಈ ಚಳಿಯ ಬಾಧೆಯು ಇನ್ನು ಕಡಿಮೆಯಾದಂತೆಯೇ ಸರಿ. ಇನ್ನು ಮೇಲ್ನಡೆಯಿಂದ ಹೋದರೆ ಸಾಗುವುದಿಲ್ಲ. ಎಂದು ಹೇಳಿ, ವೇಗ ಗಮನದಿಂದ ನಡೆಯುತ್ತಾ, ಕ್ರಮ ಕ್ರಮವಾಗಿ ಅತಿಸುದುರ್ಗಮ ಮಾರ್ಗವನ್ನು ದಾಟಿ, ದಾರಿಯಲ್ಲಿ ಸಿಕ್ಕಿದ

ಪಳ್ಳಿಗಳನ್ನೆಲ್ಲಾ ನಿರಾಯಾಸವಾಗಿ ದಾಟಿ, ೧೦ ಮೈಲಿ ದೂರದಲ್ಲಿದ್ದ ಲಂಡೀಕೋಟಾಲ್ ದುರ್ಗವನ್ನು ಸಮೀಪಿಸಿದನು.

ಲಂಡೀಕೋಟಾಲ್ ಎಂಬುದು ಕೈಬರ್ ಕಣಿವೆಯಲ್ಲಿ ಬಹಳ ಎತ್ತರವಾದ ಸ್ಥಳವೆಂದು ಹಿಂದೆ ಹೇಳಿದೆಯಷ್ಟೆ. ಆ ಶಿಖರದ ಮೇಲೆ ಹತ್ತಿ ನೋಡಿದರೆ ಕೈಬರ್ ಕಣಿವೆಯ ದಾರಿಯು ಸ್ಪಷ್ಟವಾಗಿ ಕಾಣುವುದು. ನಮ್ಮ ದಾರಿಗನು ಆ ಶಿಖರವನ್ನು ಹತ್ತಿ ಕಾಬೂಲ್ ದಾರಿಯ ಕಡೆ ನೋಡಲು, ಇಬ್ಬರು ಮುಹಮ್ಮದೀಯ ಭಟರು ಖಡ್ಗಪಾಣಿಗಳಾಗಿ ಆವನೋ ಪುರುಷನೋರ್ವನನ್ನು ಬಂದಿಯಾಗಿ ಹಿಡಿದುಕೊಂಡು, ಬಾರಿ ಬಾರಿಗೂ ಆತನನ್ನು ಚಿತ್ರಹಿಂಸೆ ಮಾಡುತ್ತ ಕಣಿವೆಯ ದಾರಿಯಲ್ಲಿ ತನಗೆ ಇದಿರಾಗಿ ಬರುತ್ತಿದ್ದುದು ತಿಳಿದು ಬಂದಿತು. ಮಾರ್ಗಸ್ಥನು, ತನಗಾವ ಅಪಾಯವು ಸಂಭವಿಸುವುದೋ ಎಂಬ ಭಯದಿಂದ, ಅಲ್ಲಿಂದ ತಪ್ಪಿಸಿಕೊಳ್ಳುವ ಉಪಾಯವ ನ್ನಾಲೋಚಿಸುತ್ತ, ಅಡಿಗಡಿಗೆ ಗಡ್ಡವನ್ನು ಸವರಿಕೊಳ್ಳುತ್ತ ಗಟ್ಟಿಯಾಗಿ "ರಹಿಮಾನ್-ರಸೂಲ್ ಅಲ್ಲಾಹೋ-ಅಕ್ಬರ್;" ಎಂದು ಪರ್ವತ ಗುಹೆಗಳೂ ಪ್ರತಿಧ್ವನಿಸುವಂತೆ, ಮೇಲೆ ಮೇಲೆ ಉಚ್ಚಸ್ವರದಿಂದ ದೇವರ ನಾಮಸ್ಮರಣೆ ಮಾಡಲಾರಂಭಿಸಿದನು. ಇಷ್ಟರಲ್ಲಿ ಬಂದಿಯೊಡನೆ ರಾಜಭಟರು ಸಮೀಪಿಸಿದರು. ಪಥಿಕನು ಗಟ್ಟಿಯಾಗಿ ಹಾಡುತ್ತಿದ್ದ ಅರಬ್ಬಿ-ಪಾರ್ಸಿ ಹಾಡುಗಳು ಮೈಲಿ ದೂರದಲ್ಲಿಯೇ ಭಟರಿಗೆ ಕೇಳಿ ಬಂದಿದ್ದುದರಿಂದ, ಈತನು ಆವ ಮಹಾತ್ಮನೊ ಆಗಿರಬೇಕೆಂದೂ, ಅಸಾಮಾನ್ಯ ಪಂಡಿತನೆಂದೂ ಊಹಿಸಿ, ಆತನಿಗೆ ಸಲಾಮುಗಳನ್ನು ಮಾಡಿ, ವಿನಯದಿಂದ ನಿಂತರು; ಮತ್ತೂ ಆ ರಾಜಭಟರಲ್ಲಿ ಒಬ್ಬನು ಕೇಳಿದನು—ಸ್ವಾಮಿಾ! ನೀವು ದೊಡ್ಡ

ಮನುಷ್ಯರಂತೆ ಕಾಣುತ್ತಿರುವಿರಿ. ಆದರೂ ನಮ್ಮ ಕೆಲಸವನ್ನು ನಾವು ಮಾಡಬೇಕಾಗಿರುವದಲ್ಲವೆ ? ಆಲಂಘೀರ್ ಬಾದಶಹರ ಅಪ್ಪಣೆ ಚೀಟಿಯಿಲ್ಲದೆ ಈ ದಾರಿಯಲ್ಲಿ ಒಬ್ಬರೂ ಪಯಣ ಮಾಡಕೂಡದು. ಹಾಗೆ ಅಪ್ಪಣೆ ಚೀಟಿಯಿಲ್ಲದೆ ಈ ಮಾರ್ಗವಾಗಿ ಹೋಗುವವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸಬೇಕೆಂದು ಬಾದಶಹರ ಶಾಸನವಾಗಿರುವದು. ಈಗ ನಿಮ್ಮಲ್ಲಿ ಅಪ್ಪಣೆ ಚೀಟಿಯಿರುವದೋ ? ಇದ್ದರೆ ತೋರಿಸಿರಿ, ಇಲ್ಲದಿದ್ದರೆ ಹಿಂತಿರುಗಿ ಹೊರಟು ಹೋಗಿರಿ ! ನೀವು ಎಲ್ಲವನ್ನೂ ತಿಳಿದ ಮುಸಲ್ಮಾನರಾದುದರಿಂದ ನಿಮ್ಮನ್ನು ಹಿಂಸಿಸಲಾರೆವು ! ಇಷ್ಟು ಕಠಿಣವಾಗಿ ಮಾತನಾಡಿದುದಕ್ಕಾಗಿ ನಮ್ಮನ್ನು ಕ್ಷಮಿಸಿರಿ.

ವೃದ್ಧನು ತಲೆದೂಗಿ ನಗುನಗುತ್ತ, ತನ್ನ ಉಡಿಯಲ್ಲಿದ್ದ ಚೀಟಿಯನ್ನು ತೆಗೆದು ತೋರಿಸಿ,—“ ಅರೆ ! ಬಚ್ಚಾ ” ನೀನು ನನ್ನ ಈ ಮುದಿಗಡ್ಡಕ್ಕೆ ರಾಜಭಕ್ತಿಯನ್ನು ಕಲಿಸುತ್ತೀಯೆ ? ರಾಜಭಕ್ತಿಯಲ್ಲಿಯೇ ಹುಟ್ಟಿ, ರಾಜಭಕ್ತಿಯಲ್ಲಿಯೇ ಬೆಳೆದು, ರಾಜಭಕ್ತಿಯಲ್ಲಿಯೇ ಈ ಕರೀ ಗಡ್ಡವು ಬಿಳುಪಾಗಿದೆ. ಆಲಂಘೀರ್ ಬಾದಶಹರೆಂದರೂ, ಅಲ್ಲಾ ಎಂದರೂ ಭೇದವಿರುವುದೇ ? ಒಂದು ವೇಳೆ ಅಲ್ಲಾನ ಆಜ್ಞೆಯನ್ನು ಮಿಾದರೂ ಮಿಾರಬಹುದು ; ಬಾದಶಹರ ಆಜ್ಞೆಯನ್ನು ಮಿಾರಬಹುದೇ ? ನೀವಿನ್ನೂ ಮೊನ್ನೆ ಹುಟ್ಟಿದ ಹುಡುಗರು. ನಾನು ಆಲಂಘೀರ್ ಬಾದಶಹರನ್ನೇ ಅಲ್ಲ, ಅವರ ತಂದೆ ಷಹಜಹಾನನನ್ನೂ, ಅವರ ತಂದೆ ಜಹಂಘೀರನನ್ನೂ ನೋಡಿದ್ದೇನೆ. “ ಬಾದಶಹ ” ಎಂದರೆ ಜಹಂಘೀರು ಬಾದಶಹರೇ ಬಾದಶಹರು. ನಾನು ಪ್ರಾಯದವನಾಗಿದ್ದು ಸೈನ್ಯದಲ್ಲಿ ಸುಬೇದಾರನಾಗಿದ್ದಾಗ, ಜಹಂಘೀರ್ ಬಾದಶಹರ ಅಪ್ಪಣೆಯ

ಮೀರೆಗೆ ಚಾಂದಬೀಬಿಯ ಮೇಲೆ ಯುದ್ಧಕ್ಕೆ ಹೋಗಿದ್ದೆನು. ದೇವಪುರ್ ಯುದ್ಧದಲ್ಲಿ ನನ್ನ ಇಷ್ಟ ಬಂದಂತೆ ಕಾಫರರನ್ನು ಕಡಿದು ಹಾಕಿದೆನು. ಅಬ್ಬ! ಆ ಯುದ್ಧವನ್ನು ಜ್ಞಾಪಿಸಿಕೊಂಡರೆ ಈಗಲೂ ಭಯವಾಗುತ್ತದೆ. ಆ ಚಾಂದಬೀಬಿಯು ಎಷ್ಟು ಚತುರೆ!! ಅಂಥವಳನ್ನು ಒಂದೇ ಗಳಿಗೆಯಲ್ಲಿ ಗೆದ್ದುಬಿಟ್ಟೆನು. ಆ ಯುದ್ಧದಲ್ಲಿ ಗೆದ್ದು ಬಂದುದಕ್ಕಾಗಿ ಬಾದಶಹರು ಭಂಗಾರದ ಹಿಡಿ ಹಾಕಿದ ಕತ್ತಿಯನ್ನು ತಮ್ಮ ಕೈಯಿಂದಲೇ ನನಗೆ ಇನಾಮು ಕೊಟ್ಟಿರುವರು." ಎಂದು ಹೇಳಿ, ಅಂಗಿಯ ಒಳಗಡೆಗೆ ಮರೆಮಾಡಿಕೊಂಡಿದ್ದ ಕತ್ತಿಯನ್ನು ಹೊರತೆಗೆದು ತೋರಿದನು.

ರಾಜಭಟರು, ವೃದ್ಧನ ಮಾತಿಗೆ ಆಶ್ಚರ್ಯಮಗ್ನರಾದರೇ ಹೊರತು; ಅಕ್ಬರ್ ಚಕ್ರವರ್ತಿಯ ಕಾಲದಲ್ಲಿದ್ದ ಚಾಂದಬೀಬೀಯು ಜಹಾಂಗೀರನ ಕಾಲದಲ್ಲಿ ಹೇಗೆ ಬಂದಳೆಂಬುದನ್ನು ಯೋಚಿಸದೆ ಹೋದರು. ಅಷ್ಟೇ ಅಲ್ಲದೆ ಪಥಿಕನು ಅನೇಕ ಪೂರ್ವ ಕಥೆಗಳನ್ನು ಹೇಳಿ,—"ಆ ಕಾಲವೆಲ್ಲಾ ಕಳೆದು ಹೋಯಿತು; ಹೆಂಡತಿ ಮಕ್ಕಳೂ ಸತ್ತುಹೋದರು. ಇನ್ನು ನನಗೆ ಅಲ್ಲಾನ ಹೊರತು ಮತ್ತಾರೂ ಇಲ್ಲ. ನಮ್ಮ ಇಸ್ಲಾಮ್ ಮತವನ್ನು ಅಭಿವೃದ್ಧಿಪಡಿಸಿದ ಪೈಗಂಬರರ ಗೋರಿಗಳನ್ನು ನೋಡುವುದಕ್ಕಾಗಿ ಹೋಗುತ್ತಿದ್ದೇನೆ. ಬಾದಶಹರ ಅಪ್ಪಣೆ ಬೇಕೆಂದು ನನಗೆ ಮೊದಲೇ ಗೊತ್ತಾಗಿದ್ದುದರಿಂದ ನಾನೇ ಬಾದಶಹರ ಬಳಿಗೆ ಹೋಗಿ ಅಪ್ಪಣೆ ಚೀಟಿಯನ್ನು ತೆಗೆದುಕೊಂಡು ಬಂದಿರುತ್ತೇನೆ" ಎಂದು ಹೇಳಿದನು.

ಪಥಿಕನು ಹೇಳಿದ ಪೂರ್ವಕಥೆಗಳನ್ನೂ, ಆತನ ಪೂರ್ವೋತ್ತರ ವೃತ್ತಾಂತವನ್ನೂ ಕೇಳಿ ಆಶ್ಚರ್ಯಮಗ್ನರಾದ

ರಾಜಭಟರು ಆತನನ್ನು ಅದ್ವಿತೀಯ ಪುಣ್ಯಪುರುಷನೆಂದೇ ನಂಬಿ ವಿನಯದಿಂದ ಸಲಾಮುಮಾಡಿ, ಅಪ್ಪಣೆ ಚೀಟಿಯನ್ನು ಕೇಳಿದುದಕ್ಕಾಗಿ ತಮ್ಮನ್ನು ಕ್ಷಮಿಸಬೇಕೆಂದು ಬೇಡಿಕೊಂಡರು. ಮಾರ್ಗಸ್ಥನು, ಭಟರು ತನಗೆ ಸಂಪೂರ್ಣವಶರಾದರೆಂದು ತಿಳಿದು ಮತ್ತೆ "ಬೇಟಾ! ನಿಮ್ಮ ಕೆಲಸವನ್ನು ನೀವು ಮಾಡಿದಿರಿ. ಅದರಲ್ಲಿ ತಪ್ಪೇನಿರುವುದು?" ಎಂದು ಹೇಳುತ್ತಿದ್ದಂತೆಯೇ ಬಂದಿಯಾಗಿದ್ದವನನ್ನು ನೋಡಿ, ಆತನ ಪೂರ್ವೋತ್ತರವನ್ನು ತಿಳಿಯಬೇಕೆಂಬುವ ಕುತೂಹಲದಿಂದ ರಾಜಭಟರಲ್ಲಿ ಹೀಗೆ ಪ್ರಸ್ತಾಪಿಸಲಾರಂಭಿಸಿದನು.

"ಈ ಖೈದಿಯು ಯಾರು? ಕಾಫರನ ಹಾಗೆಯೇ ಕಾಣುವನು. ಎಚ್ಚರಿಕೆ! ಎಚ್ಚರಿಕೆ!!"

ರಾಜಭಟರು — "ಈತನಾರೋ ತಿಳಿಯದು. ಬಾದಶಹರ ಗುಟ್ಟನ್ನೆಲ್ಲಾ ಕಾಬೂಲಿನಲ್ಲಿರುವ ಯಶವಂತಸಿಂಗರಿಗೆ ಹೇಳಲು ಹೋಗುತ್ತಿದ್ದಾನೆ! ಅಪ್ಪಣೆ ಚೀಟಿಯು ಇವನಲ್ಲಿ ಇಲ್ಲವೇ ಇಲ್ಲ."

"ಹಾಗೆಯೇ! ದುರ್ಮಾರ್ಗನು! ಇವನಿಗೆ ಯಾವ ಶಿಕ್ಷೆಯನ್ನು ವಿಧಿಸಿದರೂ ಪಾಪವಿಲ್ಲ. ರಾಜದ್ರೋಹಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಖುರಾನಿನಲ್ಲಿ ಹೇಳಿರುವುದು. ನೀವು ಈತನನ್ನೇನು ಮಾಡಬೇಕೆಂದಿರುವಿರಿ?

ಭಟರು:— ಬಾದಶಹರ ಹತ್ತಿರಕ್ಕೆ ಕರೆದುಕೊಂಡು ಹೋಗುತ್ತೇವೆ. ಆ ಬಳಿಕ ಅವರು ತುಂಡು ತುಂಡಾಗಿ ಕೊಯ್ದು ಹದ್ದು ಕಾಗೆಗಳಿಗೆ ಹಾಕುವರು

ವೃದ್ಧ:— ಅಹ್ವಹ್ವಹ್ವ - ಏಕಾರವಾಗಿ ನಕ್ಕು ಮತ್ತೆ ಗಂಭೀರ ಭಾವದಿಂದ ಯೋಚಿಸುವಂತಿದ್ದು ಕಡೆಗೆ

ತಲೆದೂಗಿ ಬಳಿಕ ಆಯಾಸಪಟ್ಟವನಂತೆ ನಟಿಸಿ ಬಳಿಯಲ್ಲಿದ್ದ ಮರದ ನೆರಳಲ್ಲಿ ಕುಳಿತು, ವಿಶ್ರಮಿಸಿಕೊಳ್ಳಬೇಕೆಂದು ಹೇಳಿ ರಾಜಭಟರೊಡಗೂಡಿ ಬಂದು ಸ್ವಲ್ಪ ಹೊತ್ತು ಕುಳಿತಿದ್ದು, ಆ ಬಳಿಕ ಅವರನ್ನು ಕುರಿತು,—'ಪಾಪ! ನೀವಿಬ್ಬರೂ ಬಲು ಬಳಲಿದಂತೆ ಕಾಣುತ್ತದೆ, ಹತ್ತಿರದಲ್ಲಿಯೇ ಒಂದು ತಾಳೆಯ ಗಿಡವಿರುವುದು. ಅದರ ರಸವನ್ನು ಸ್ವಲ್ಪ ಕುಡಿದರೆ, ಬಲವೂ ಚಟುವಟಿಕೆಯೂ ಉಂಟಾಗುತ್ತದೆ. ನಾನಿದೇ ಕುಡಿದು ಬಂದೆನು. ಅದೆಷ್ಟು ಮಾಧುರ್ಯವಾಗಿದೆಯೆಂದು ಬಲ್ಲಿರಿ! ಅಮೃತದಂತೆಯೇ ಇದೆ. ನೀವು ಅದನ್ನು ಸ್ವಲ್ಪ ಕುಡಿದು ನೋಡಿರಿ. ಬೇಕಾದರೆ ನಿಮಗೆ ಈ ಪಾತ್ರೆಯನ್ನು ಕೊಡುತ್ತೇನೆ. ತೆಗೆದುಕೊಂಡು ಹೋಗಿ ಕುಡಿದು ಬನ್ನಿರಿ. ಪಾಪ! ಆಯಾಸದಿಂದ ನಿಮ್ಮ ಮುಖದಲ್ಲಿ ಬೆವರು ಸುರಿಯುತ್ತಿದೆ. ನೀವು ಅಲ್ಲಿಯವರೆಗೆ ಹೋಗಿ ಕಷ್ಟಪಡಬೇಕಾಗಿಲ್ಲ. ಇಲ್ಲಿಯೇ ಕುಳಿತು ಸುಧಾರಿಸಿಕೊಳ್ಳುತ್ತಿರಿ. ನಾನು ಮುದುಕನಾಗಿದ್ದರೂ, ಪರೋಪಕಾರ ಮಾಡುವುದೇ ನನ್ನ ಮುಖ್ಯ ಸಂದೇಶವಾಗಿರುವದರಿಂದ ನಾನೇ ಹೋಗಿ ಅದರ ರಸವನ್ನು ತಂದು ನಿಮಗೆ ಕುಡಿಯಕೊಡುವೆನು. ಆಮೇಲೆ ಉಳಿದ ವಿಚಾರವಾಗಲಿ' ಎಂದು ಹೇಳಿ ಬಗಲಿಗೆ ಬಿಗಿದುಕೊಂಡಿದ್ದ ಗಂಟನ್ನು ಕೆಳಗೆ ತೆಗೆದಿಟ್ಟು ಅದರೊಳಗಿದ್ದ ಪಾತ್ರೆಯನ್ನು ತೆಗೆದುಕೊಂಡು ಹೋಗಿ, ಅದರ ತುಂಬ ತಾಳೆಯ ರಸವನ್ನು ತುಂಬಿ ತಂದು ಭಟರ ಕೈಗೊಪ್ಪಿಸಿದನು. ಭಟರು ಆತುರದಿಂದದನ್ನು ಕುಡಿದರು.

ಪಾನಮಾಹಾತ್ಮ್ಯದಿಂದುಂಟಾದ ಮತಿಭ್ರಮಣೆಯಿಂದ ಸ್ವಲ್ಪ ಹೊತ್ತಿಗೇ ಗಿಳಿಯಂತೆ ಮಾತನಾಡಲಾರಂಭಿಸಿ, ಕಡೆಗೆ

ಬಕಧ್ಯಾನವನಾಡುತ್ತ ಕುಂಭಕರ್ಣನಂತೆ ಗಾಢನಿದ್ರೆ ಹೊಂದಿ, ನೆಲದ ಮೇಲೆ ದೊಪ್ಪನೆ ಬಿದ್ದರು. ಮಾರ್ಗಸ್ಥನು ತಾನು ಮಾಡಿದ ಉಪಾಯಕ್ಕೆ ಸಂತೋಷಪಡುತ್ತಾ, ಸೆರೆಯಾಗಿದ್ದವನ ಬಳಿಗೆ ಬಂದು, ಆತನ ಭುಜವನ್ನು ತಟ್ಟಿ ಮೆಲ್ಲನೆ "ಬಚ್ಚಾ! ಭಯವಿಲ್ಲ-ಭಯಪಡಬೇಕಾಗಿಲ್ಲ!!" ಎಂದು ಹೇಳಿ ಅವನ ಕೈಗಳನ್ನು ಬಿಚ್ಚಿದನು. ಬಂಧವಿಮೋಚನವಾದೊಡನೆಯೇ ಬಂದಿಯಾಗಿದ್ದವನು, ಆತನ ಸಹಾಯಕ್ಕೆ ಅತ್ಯಂತ ಹರ್ಷಿತನಾಗಿ ಕೈಮುಗಿದು ಹೇಳಿದನು— 'ಮಹನೀಯನೇ; ಆಪದ್ಬಂಧುವಾಗಿ ಬಂದು ನನ್ನ ಮಾನ ಪ್ರಾಣಗಳನ್ನು ಉಳುಹಿದೆ. ಈ ನಿನ್ನ ಸಹಾಯವು ನನಗೆ ಯಾವಜ್ಜೀವವೂ ಮರೆಯುವಂತಹುದಾಗಿಲ್ಲ. ನಿನ್ನಲ್ಲಿ ತೋರಿ ಬರುತ್ತಿರುವ ಭೂತದಯೆ, ಧರ್ಮಶ್ರದ್ಧೆ, ಅನುಕಂಪನೆಗಳೇ ಮೊದಲಾದ ಉದಾರ ಗುಣಗಳಿಂದ ನೀನು ನಿಜವಾಗಿಯೂ ಮಹಮ್ಮದೀಯರ ವಂಶದಲ್ಲಿ ಹುಟ್ಟಿದವನೆಂದು ಹೇಳಲಾರೆನು............'

ಮಾರ್ಗಸ್ಥನು ಕಿರುನಗೆಯಿಂದ— 'ಅರೇ ಬಾಬೂ! ನೀನು ಶಂಕಿಸಬೇಡ. ಧೈರ್ಯವಾಗಿ ಹೇಳು; ನೀನಾರು? ಎಲ್ಲಿಗೆ ಹೋಗುತ್ತಿದ್ದೀಯೇ.'

ವೃದ್ಧನ ಪ್ರಶ್ನೆಗೆ ಆತನೇನೂ ಹೇಳಲಾರದೆ ತಲೆಬಾಗಿ ಸುಮ್ಮನೆ ನಿಂತನು.

ವೃದ್ಧನು ಮತ್ತೆ ಮೊದಲಿನಂತೆಯೇ—"ಅರೇ, ಬಾಬಾ! ನೀನೆಂತಹ ಹುಚ್ಚನು? ಭಯವೇಕೆ, ನನ್ನನ್ನು ನೋಡಿ ಸಂದೇಹಪಡುವೆಯೋ?" ಎಂದು ಬೆಸಗೊಂಡು, ಆ ತರುಣನ ಕಿವಿಯಲ್ಲಿ ಏನೇನನ್ನೋ ಹೇಳಿದನು. ವೃದ್ಧನ ಮಾತಿನಿಂದ

ತರುಣನು ಆನಂದ ಪಾರವಶ್ಯತೆಯಿಂದ ಆತನ ಮುಖವನ್ನೇ ದೃಷ್ಟಿಸುತ್ತ ಮಾತಿಲ್ಲದೆ ನಿಂತನು.

ಮಾರ್ಗಸ್ಥನು ಮತ್ತೆ— "ಇನ್ನು ವಿಳಂಬಿಸಬೇಡ, ಜಾಗ್ರತೆಮಾಡು! ಆ ಉತ್ತರ ಪತ್ರವನ್ನು ನನಗೊಪ್ಪಿಸಿ, ನೀನು ತಲೆತಪ್ಪಿಸಿಕೊಂಡು ಹೊರಟು ಹೋಗು. ನಾನು ಕಾಬೂಲಿಗೆ ಹೋಗಿ ಇದನ್ನು ಯಶವಂತಸಿಂಗನಿಗೆ ಮುಟ್ಟಿಸುವೆನು."

ವೃದ್ಧನ ಮಾತಿಗೆ ಮರುನುಡಿ ನುಡಿಯದೆ ತರುಣನು ತನ್ನ ಉಡಿಯಲ್ಲಿ ಅಡಗಿಸಿಕೊಂಡಿದ್ದ ಉತ್ತರ ಪತ್ರವನ್ನು ವೃದ್ಧನ ವಶಕ್ಕೊಪ್ಪಿಸಿ, ಅತ್ತಿತ್ತ ನೋಡದೆ ಹೊರಟು ಹೋದನು. ವೃದ್ಧನು ಪತ್ರವನ್ನು ತೆಗೆದು ತನ್ನ ಅಂಗಿಯ ಕಿಸೆಯಲ್ಲಿರಿಸಿ ಕೆಳಗೆ ಬಿದ್ದಿದ್ದ ಪಾತ್ರೆಯನ್ನು ತೆಗೆದು ಗಂಟಿಗೆ ಸೇರಿಸಿ, ಮೈಮರೆತು ಬಿದ್ದಿದ್ದ ಭಟರು ಏಳುವುದಕ್ಕೆ ಮೊದಲೇ ಅಲ್ಲಿಂದ ತಪ್ಪಿಸಿಕೊಂಡು ಹೊರಟುಹೋದನು.

---

# ಎರಡನೆಯ ಪ್ರಕರಣ.

---

(ವಿಜಯಸಿಂಹ-ವಿಮಲೆ.)

"ಅಪ್ಪಾಜೀ! ಅರಿಯದ ಹುಡುಗಿಯಾದ ನಾನು ತಮ್ಮ ಮಾತಿಗೆ ಪ್ರತಿಯಾಗಿ ಹೇಳಲಾರೆನು. ತಾವೇ ಯುಕ್ತಾಯುಕ್ತ ವಿಚಾರಮಾಡಿ, ಅಣ್ಣನನ್ನು ಕರೆಯಿಸಬೇಕು?"

"ಮಗು, ವಿಮಲಾ! ನಾನು ಎಷ್ಟುಬಾರಿ ಹೇಳಿದರೂ ಕೇಳದೆ, ನಿನ್ನ ಅಣ್ಣ ಶಿವಸಿಂಗನು ದುರ್ಮುಖತನದಿಂದ ನನ್ನ ಆಜ್ಞೆಯನ್ನು ಮೀರಿದನು. ಆತನ ಅವಿಧೇಯತೆಗಾಗಿ ಆ

ತಿಕ್ಷೆಯನ್ನು ವಿಧಿಸಬೇಕಾಯಿತು. ನಾನೇನು ಮಾಡಲಿ? ಮಗು! ರಜಪೂತರ ಕುಲಕ್ಕೇ ವೈರಿಯಾಗಿರುವ ಆ ಔರಂಗಜೇಬನನ್ನು ಸೇವಿಸುತ್ತ, ತನ್ನ ಕ್ಷಾತ್ರತೇಜಸ್ಸಿಗೇ ಕಲಂಕವನ್ನು ತಂದುಕೊಂಡಿರುವ ಆ ಯಶವಂತಸಿಂಹನೊಡನೆ ಇವನೇಕೆ ಯುದ್ಧಕ್ಕೆ ಹೊರಡಬೇಕು? ನನ್ನ ಇಷ್ಟಕ್ಕೆ ವಿರೋಧವಾಗಿ ನಡೆಯಬೇಕಾದ ಅಗತ್ಯವೇನಿದ್ದಿತು? ನನ್ನ ಆಜ್ಞೆಯು ಇವನಿಗೆ ಅಷ್ಟು ದುರ್ಲಕ್ಷ್ಯ............"

"ಅಪ್ಪಾಜೀ! ಅಷ್ಟರ ಆಗ್ರಹವನ್ನು ವಹಿಸಿದರೆ ಮುಂದೇನುಗತಿ? ಅಣ್ಣನು ಮಾಡಿದ ಈ ಕಾರ್ಯದಿಂದ ದುರ್ಲಕ್ಷ್ಯವೆಂದು ಭಾವಿಸಬಾರದು. ಆತನ ಹೃದಯವು ಅಷ್ಟರ ಕೃತಘ್ನತೆಗೆ ಪಾತ್ರವಾಗಿಲ್ಲ. ಅವನಿಗೆ ಸ್ವಾಭಾವಿಕವಾಗಿ ಯುದ್ಧದಲ್ಲಿ ಅಸಾಧಾರಣವಾದ ಪಾಂಡಿತ್ಯವೂ, ಅಷ್ಟೆ ಆಶೆಯೂ ಇರುವುದು. ಇದರ ಮೇಲೆ ಯಶವಂತಸಿಂಹನು ಕೂಡ ನಮ್ಮ ಸಮೀಪ ಬಂಧುವೇ ಆಗಿರುವನು. ಬಂಧುವಿಗೆ ಸಹಾಯವಾಗಿಯೂ ತನಗೆ ಉಂಟಾಗಿದ್ದ ಯುದ್ಧೋತ್ಸಾಹದಿಂದಲೂ, ಯಶವಂತಸಿಂಹನೊಡನೆ ಹೋದನೇ ಹೊರತು ತಮ್ಮಲ್ಲಿ ಅಲಕ್ಷ್ಯದಿಂದಾಗಲೀ, ಅವಿಧೇಯತೆಯಿಂದಾಗಲಿ ಹೋಗಿಲ್ಲ. ಇಷ್ಟಕ್ಕೇ ಆತನನ್ನು ವಿರೋಧಭಾವದಿಂದ ತಿರಸ್ಕರಿಸಿ ಬಿಡುವುದು ನ್ಯಾಯವಲ್ಲ!"

"ನಿನ್ನ ಮಾತನ್ನು ಕಟ್ಟಿಡು ವಿಮಲಾ! ಕ್ಷತ್ರಿಯಧರ್ಮವನ್ನು ಬಿಟ್ಟು ಯವನರಿಗೆ ವಿಧೇಯನಾಗಿ ನಡೆಯುತ್ತಿರುವಾತನು, ಎಷ್ಟೇ ಸಮೀಪ ಬಂಧುವಾಗಿದ್ದರೂ ತ್ಯಾಜ್ಯನೇ ಸರಿ. ಈ ಕಾರಣದಿಂದಲೇ ಯಶವಂತಸಿಂಹನನ್ನು ರಾಜಲೋಕವೆಲ್ಲವೂ ದೂಷಿಸುತ್ತಿರುವುದು. ನಾನಷ್ಟು ಬಗೆಯಾಗಿ ಬೇಡಿಕೊಂ

ದರೂ ಕೇಳದೆ ನಿಮ್ಮಣ್ಣನಾದ ಶಿವಸಿಂಗನು ಯುದ್ಧಕ್ಕಾಗಿ ಆತನೊಡನೆ ಕಾಬೂಲಿಗೆ ಹೋದನು. ಯುದ್ಧದಲ್ಲಿ ತನಗೆಷ್ಟು ಉತ್ಸಾಹವಿರಲಿ, ಕೌಶಲವಿರಲಿ, ಪೂರ್ವಾಪರ ವಿವೇಚನೆಯೇ ಬೇಡವೇ? ಬಾಲ್ಯದಿಂದ ನಿಮ್ಮಿಬ್ಬರಿಗೂ ಸಮವಾಗಿ ಬಾಣ ವಿದ್ಯೆಯನ್ನು ಕಲಿಯಿಸಿದೆನು. ನೀನೇನೂ ಅವನಿಗೆ ಕಡಮೆ ಯಾದವಳಾಗಿಲ್ಲ. ನಾನು ಬೇಟೆಗೆ ಹೊರಡುವಾಗಲೆಲ್ಲ ನನ್ನೊಡನೆ ನೀನೂ ಬಂದು, ಭಯಂಕರಗಳಾದ ಮೃಗಗಳನ್ನು ಕೊಲ್ಲುವುದರಲ್ಲಿ ಎಷ್ಟು ಬಾರಿ ನಿನ್ನ ಬಾಣ ಕೌಶಲವನ್ನು ಪ್ರಕಟಿಸಿಲ್ಲ? ಈ ಕಾರಣದಿಂದಲೇ ರಾಜಪುತ್ರ ಸಂಸ್ಥಾನದಲ್ಲೆಲ್ಲಾ ನಿನ್ನ ಕೀರ್ತಿಯು ವ್ಯಾಪಿಸಿರುವುದಲ್ಲವೇ? ಇದರಿಂದಲ್ಲವೇ, ಸಮಸ್ತ ರಾಜಲೋಕವೂ ನಿನ್ನಲ್ಲಿ ಅಭಿಮಾನಪಡುತ್ತಿರುವುದು? ಒಂದು ವೇಳೆ ನಿನ್ನ ಇಷ್ಟದಂತೆ ಶಿವಸಿಂಗನನ್ನು ಕರೆಯಿಸಿದುದಾದರೆ, ರಾಜಧರ್ಮನಿಷ್ಠರಾದ ನಮ್ಮ ರಾಜಪುತ್ರರಿಂದ ನನಗೆ ದೊರೆಯುತ್ತಿದ್ದ ಗೌರವವೆಲ್ಲವೂ ಹೋಗಿ, ಅಪವಾದವುಂಟಾಗುವದಿಲ್ಲವೇನು? ಅದಕ್ಕಾಗಿಯೇ ಮಗನನ್ನೂ ಬಿಟ್ಟಿರುವೆನು."

"ಅಪ್ಪಾಜೀ! ಇಷ್ಟರಿಂದಲೇ ಹೀಗೆ ಇಷ್ಟರ ಕಾಠಿಣ್ಯವನ್ನು ವಹಿಸಬಾರದು. ಮಕ್ಕಳು ಎಷ್ಟು ತಪ್ಪುಗಳನ್ನು ಮಾಡುವವರಾದರೂ, ತಾಯಿ ತಂದೆಗಳು ಅವರ ಅಪರಾಧವನ್ನು ಕ್ಷಮಿಸಿ, ಅವರನ್ನು ಮೇಲ್ಮೆಗೆ ತರುವುದು ಅವರ ನಿಸರ್ಗ ವಾತ್ಸಲ್ಯದ ಗುಣವೇ ಆಗಿದೆ. ನೀವೂ ನಮ್ಮ ತಾಯಿ ಗತಿಸಿದುದು ಮೊದಲು ಈ ವರೆಗೆ ನಮಗೆ ಯಾವ ಭಾಗದಲ್ಲಿಯೂ ಕೊರತೆಯಾಗದಂತೆ ಕಾಪಾಡಿದಿರಿ. ನಮ್ಮನ್ನು ತಮ್ಮ ಪ್ರಾಣಕ್ಕೂ ಹೆಚ್ಚಾಗಿಯೇ ಭಾವಿಸಿ ಪ್ರೀತಿಸುತ್ತಲೂ ಇರುವಿರಿ; ನಮ್ಮನ್ನು ಸಂತೋಷಪಡಿಸುವುದಕ್ಕಾಗಿಯೇ ತಮ್ಮ ಎಷ್ಟೋ ರಾಜ

ಚಾರ್ಯರ ಮಧ್ಯದಲ್ಲಿಯೂ ನಮಗಾಗಿ ವಿನೋದವನ್ನು ಕಲ್ಪಿಸಿ ಕೊಟ್ಟು, ನಮ್ಮ ಆಟಪಾಟಗಳಿಂದ ನಲಿವೇರಿ, ನಮ್ಮನ್ನು ಉಬ್ಬಿ ಸಿಯೂ ಇರುತ್ತೀರಿ. ಅಪ್ಪಾಜಿ, ಜ್ಞಾಪಿಸಿಕೊಳ್ಳಿರಿ! ಒಂದಾ ನೊಂದು ದಿನ, ನಾನೂ ನನ್ನ ಅಣ್ಣನೂ ಹಟತೊಟ್ಟು, ಪಂಥ ಪಟ್ಟು, ಧನುರ್ಬಾಣಗಳಿಂದ ವಿನೋದವಾಡುತ್ತಿರಲು, ನೀವು ನಮ್ಮ ಆಟಗಳಿಗೆ ಸಂತೋಷಪಟ್ಟು, ನಮ್ಮ ಅಣ್ಣನನ್ನು ಕರೆದು-'ಶಿವಸಿಂಗ್' ಆ ದೂರದ ರಸಾಲವೃಕ್ಷ ಶಾಖೆಯಲ್ಲಿರುವ ಹಣ್ಣನ್ನು ನಿನ್ನ ಬಾಣದ ಗುರಿಯಿಂದ ಕೆಡಹಬಲ್ಲೆಯಾ? ಅದನ್ನು ನೀನು ಗುರಿಕಟ್ಟಿ ಕೆಡಹಿದೆಯಾದರೆ ನಿನಗೆ ನಾಲ್ಕು ವರಹಗಳನ್ನು ಬಹುಮಾನವಾಗಿ ಕೊಡುವೆನು' ಎಂದು ಹೇಳಲಿಲ್ಲವೇ? ಅದರಂತೆಯೇ ನಮ್ಮ ಅಣ್ಣನೂ ಪಂತವನ್ನು ಗೆದ್ದು, ಹಣ್ಣನ್ನು ಕೆಡಹಿ, ತಮ್ಮಿಂದ ಬಹುಮಾನ ಧನವನ್ನು ಪಡೆಯಲಿಲ್ಲವೇ? ಅಂತಹ ಪ್ರಾಣಾಧಿಕಪುತ್ರನ ವಿಷಯಕವಾಗಿದ್ದ ಪ್ರೀತಿಯೆಲ್ಲವೂ ಈಗ ಏನಾಯಿತು? ಇದೊಂದು ಅಲ್ಪವಾದ ಅಪರಾಧಕ್ಕಾಗಿ ಇಷ್ಟು ಕಠಿಣವಾದ ಶಿಕ್ಷೆಯನ್ನು ವಿಧಿಸುವುದು ನ್ಯಾಯವಾದುದೇ?"

"ಸರಿ ಸರಿ! ವಿಮಲಾ! ನೀನು ಭ್ರಾತೃಸ್ನೇಹದಿಂದ ಇಷ್ಟು ದೂರ ಹೇಳುತ್ತಿರುವೆ; ಬಲ್ಲೆ! ಕೇಳು; ನೀವಿಬ್ಬರೂ ಸೇರಿ ಆಡುತ್ತಿರುವಾಗ ನಿನ್ನೊಬ್ಬಳನ್ನೇ ಪರೀಕ್ಷಿಸಿಲ್ಲವೇ? ನೀನು ಕುದುರೆಯನ್ನೇರಿ ವಾಯುವೇಗದಿಂದ ಹೋಗುತ್ತಿದ್ದರೂ, ನಾನಿಟ್ಟ ಗುರಿಯನ್ನು ನೀನು ಎಷ್ಟುಬಾರಿ ಹೊಡೆಯಲಿಲ್ಲ? ವಿದ್ಯಾಪ್ರವೀಣತೆ ಇರುವುದೆಂದು ದುರ್ಮಾರ್ಗದಲ್ಲಿ ಪ್ರವರ್ತಿಸಬಹುದೇ? ನನಗೂ ದಿನಗಳೆಯುತ ಬಂದಿತು.

ಕೂದಲು ನೆರೆಯುತ್ತಿದೆ. ದೇಹವೂ ಕೃಶವಾಗುತ್ತಿದೆ. ಈ ವೇಳೆಯಲ್ಲಿ ಆಪ್ಯಾಯನನೂ, ಪ್ರಾಯಸಮರ್ಥನೂ, ತೇಜಸ್ವಿಯೂ, ರಾಜ್ಯಾಭಿಷಿಕ್ತನಾಗಲು ಅರ್ಹನೂ ಆದ ಮಗನಲ್ಲಿ ವೃಥಾ ವಿರೋಧವನ್ನು ಬೆಳೆಯಿಸಲೇಕೆಂದು ಎಷ್ಟೋ ಸಾಹಸಪಟ್ಟು ನೋಡಿದೆನು. ಫಲವಿಲ್ಲವಾಯಿತು. ಇನ್ನು ನನಗೆ ಪುತ್ರನೂ ಪುತ್ರಿಯೂ ನೀನೇ ಆಗಿರುವೆ! ನನ್ನ ಕಾಲಾನಂತರದಲ್ಲಿ ನೀನೇ ನನ್ನ ರಾಜ್ಯಾಧಿಕಾರಿಣಿ-''

"ಬೇಡಿರಿ, ಬೇಡಿರಿ, ಅಪ್ಪಾಜೀ! ಉದ್ರೇಕಭರದಿಂದ ಅಭದ್ರವಾಕ್ಯವೇನನ್ನೂ ಆಡಬೇಡಿರಿ! ನಾನು ತಮ್ಮ ಆಶೀರ್ವಾದ ಮಾತ್ರಕ್ಕೆ ಪಾತ್ರಳಲ್ಲದೆ, ಪದವೀಧಾರಣೆಗೆ ಪಾತ್ರಳಲ್ಲ. ಅದಕ್ಕೆ ಪಾತ್ರನು ನನ್ನ ಭ್ರಾತೃ ಶಿವಸಿಂಗನಲ್ಲದೆ ಬೇರೆ ಯಾರೂ ಅರ್ಹರಿಲ್ಲ."

ಮೇಲೆ ಹೇಳಿದ ಉತ್ತರ ಪ್ರತ್ಯುತ್ತರಗಳು, ರೂಪನಗರಾಧಿಪತಿಯಾದ ವಿಜಯಸಿಂಹನಿಗೂ, ಆತನ ಮಗಳಾದ "ವಿಮಲಾದೇವಿ" ಗೂ ನಡೆಯುತ್ತಿದ್ದುವು. ರೂಪನಗರವು ರಾಜಪುತ್ರಸ್ಥಾನದಲ್ಲಿ ಒಂದು ಸಾಮಂತರಾಜ್ಯಕ್ಕೆ ರಾಜಧಾನಿಯಾಗಿದ್ದಿತು. ವಿಜಯಸಿಂಹನೇ ರೂಪನಗರದ ರಾಜನು. ಈತನು ಬುದ್ಧಿಚಾತುರ್ಯ, ರಾಜ್ಯತಂತ್ರ, ಸ್ವಧರ್ಮಾನುಷ್ಠಾನಗಳೇ ಮೊದಲಾದ ಉದಾತ್ತ ಗುಣಗಳಲ್ಲಿ ಅದ್ವಿತೀಯ ಪುರುಷನಾಗಿದ್ದನಲ್ಲದೆ ಪರಿಶುದ್ಧವಾದ ಕ್ಷಾತ್ರತೇಜವನ್ನು ಸಂರಕ್ಷಿಸುವುದರಲ್ಲಿ ಈತನು ತೊಟ್ಟಿದ್ದ ಪ್ರತಿಜ್ಞೆಯು ಆಶ್ಚರ್ಯಕರವೇ ಆಗಿದ್ದಿತು. ಪ್ರತಿಜ್ಞಾಪರಿಪಾಲನೆಯಲ್ಲಿ ಈತನಿಗಿದ್ದ ಜಾಗರೂಕತೆ, ಅವಿಶ್ರಾಂತ ಪ್ರಯತ್ನಗಳನ್ನು ನೋಡಿ, ರಾಜ

ಪುತ್ರರೆಲ್ಲರೂ ಈತನಲ್ಲಿ ಭಕ್ತಿಗೌರವವುಳ್ಳವರಾಗಿದ್ದರು. ಈತನ ಸಂಸಾರದಲ್ಲಿ "ಶಿವಸಿಂಗ" ನೆಂಬ ಮಗನೂ, "ವಿಮಲಾದೇವಿ" ಯೆಂಬ ಮಗಳೂ ಇಬ್ಬರೇ ಮಕ್ಕಳಿದ್ದರು. ಹೆತ್ತ ತಾಯಿಯು, ಈ ಮಕ್ಕಳನ್ನು ಚಿಕ್ಕಂದಿನಲ್ಲಿಯೇ, ಬಿಟ್ಟು, ಕಾಲಧರ್ಮವಶಳಾದಳು. ವಿಜಯಸಿಂಹನು ತನಗಾದ ಪತ್ನೀವಿಯೋಗ ಸಂತಾಪವನ್ನೂ, ಕೇವಲ ಬಾಲ್ಯಾವಸ್ಥೆಯಲ್ಲಿದ್ದ ತನ್ನ ಮಕ್ಕಳಿಗುಂಟಾದ ಮಾತೃವಿಯೋಗದುಃಖವನ್ನೂ, ತನ್ನ ಅಭ್ಯಾಸಬಲದ ಮನೋದಾರ್ಢ್ಯದಿಂದ ಪಡೆದು, ಮಕ್ಕಳನ್ನು ಮುಂದಕ್ಕೆ ತರಲು ಸಂಕಲ್ಪಿಸಿ, ಅವರನ್ನು ತನ್ನ ಪ್ರಾಣಕ್ಕೂ ಹೆಚ್ಚಾಗಿ ಪ್ರೀತಿಸಿ, ಅವರಿಗೆ ರಾಜಯೋಗ್ಯವಾದ ವಿದ್ಯೆಯನ್ನು ಕಲಿಸುತ್ತ ಬಂದನು.

ಕ್ರಮವಾಗಿ ಶಿವಸಿಂಗ ವಿಮಲಾದೇವಿಯರು, ಬಾಣವಿದ್ಯೆ, ರಥ, ಗಜ, ತುರಗಾರೋಹಣವೇ ಮೊದಲಾದ ಅನೇಕ ವಿದ್ಯೆಗಳಲ್ಲಿ ತಮ್ಮ ಸಂಗಡಿಗರನ್ನು ಮೀರಿಸಿ, ತಂದೆಯಾದ ವಿಜಯಸಿಂಹನಿಗೆ ಸಂತೋಷವನ್ನು ಹೆಚ್ಚಿಸುತ್ತ ಬಂದರು. ಶಿವಸಿಂಗನು ಸಹಜವಾದ ಕ್ಷಾತ್ರತೇಜದಿಂದ ಮೆರೆಯುತ್ತಿರುವವನು. ಮೇಲಾಗಿ ಈತನ ಬಾಣವಿದ್ಯಾಕೌಶಲ್ಯ, ಯುದ್ಧೋತ್ಸಾಹಗಳು ಈತನನ್ನು ರಣಕ್ರೀಡೆಯಲ್ಲಿ ಅತ್ಯಾತುರನನ್ನಾಗಿ ಮಾಡಿದುದರಿಂದ ಇವನು ತನ್ನ ಆಶಾಪೂರ್ಣತೆಗೆ ಕಾಲವನ್ನು ಇದಿರು ನೋಡುತ್ತಿದ್ದನು. ಕಾಲವೂ ದೊರೆಯಿತು ಹೇಗೆ? ರಾಜಪುತ್ರರಿಗೆ ಮಹಮ್ಮದೀಯರಲ್ಲದೆ, ಮತ್ತಾವ ಶತ್ರುಗಳೂ ಆ ಕಾಲದಲ್ಲಿರಲಿಲ್ಲವೆಂದೇ ಹೇಳಬಹುದು. ಭೀತಚಿತ್ತರಾದ ಕೆಲವು ಮಂದಿ ರಾಜಪುತ್ರರು,

ಆ ಕಾಲದಲ್ಲಿ ಪ್ರವರ್ಧಮಾನನಾಗಿದ್ದ ಮೊಗಲ್ ಸಾಮ್ರಾಟ್ ಔರಂಗಜೇಬನಿಗೆ ವಿಧೇಯರಾಗಿದ್ದರು. ಇದು ಶಿವಸಿಂಗನಿಗೆ ಸರಿಬೀಳಲಿಲ್ಲವಾದರೂ ಮಾಡುವುದೇನು? ಅಖಂಡವಾದ ಮೊಗಲ್ ಸೇನೆಯನ್ನು ತಮ್ಮ ಅತ್ಯಲ್ಪಸೈನ್ಯದೊಡನೆ ಪ್ರತಿಭಟಿಸುವುದು ಹೇಗೆ? ವೃಥಾ ಪ್ರಯಾಸದಿಂದ ತಾನೇ ಅಪಜಯವನ್ನು ತಂದತಾಗುವುದಲ್ಲವೇ; ಹೀಗೆಂದು ಭಾವಿಸಿ, ತನ್ನ ಪೌರುಷವನ್ನು ಕಟ್ಟಿಡಬೇಕಾಯಿತು. ಆದರೆ ಹೆಚ್ಚುಕಾಲ ಹಾಗೆ ಸುಮ್ಮನಿರಲಾಗಲಿಲ್ಲ. ಯುದ್ಧೋತ್ಸಾಹಿಯಾಗಿದ್ದ ಆ ತರುಣ ರಾಜಪುತ್ರನು, ಔರಂಗಜೇಬನ ಸಾಮಂತ ರಾಜರಲ್ಲೊಬ್ಬನಾದ ಜೋಢ್ಪುರದ ಯಶವಂತಸಿಂಹನು ಬಾದಷಹನ ಅಪ್ಪಣೆಯಂತೆ ಕಾಬೂಲಿಗೆ ದಿಗ್ವಿಜಯಕ್ಕಾಗಿ ಹೊರಟಿದ್ದನ್ನು ಕಂಡು, ತನ್ನ ಕಾಮನೆಯನ್ನು ಈಡೇರಿಸಿಕೊಳ್ಳಲು ಇದನ್ನು ಬಿಟ್ಟರೆ ಮತ್ತೆ ವೇಳೆಯು ಸರಿಯಾಗಿ ದೊರೆಯಲಾರದೆಂದೋ, ಅಥವಾ ಸಮೀಪಬಂಧುವಾದ ಯಶವಂತಸಿಂಹನ ಸಹಾಯವಾಗಿ ಹೋಗುವುದು ತನಗೆ ಕರ್ತವ್ಯವೆಂದೋ ಹೇಗೂ ಈತನು ಆತನೊಡನೆ ದಂಡಯಾತ್ರೆಗೆ ಹೊರಟನು. ಯಶವಂತಸಿಂಹನು ಕ್ಷತ್ರಿಯ ವೀರನಾಗಿದ್ದರೂ, ಔರಂಗಜೇಬನಿಗೆ ವಿಧೇಯನಾಗಿ, ಆತನನ್ನು ಸೇವಿಸುತ್ತಿದ್ದುದರಿಂದ ರಾಜಪುತ್ರರೆಲ್ಲರಿಗೂ ಆತನು ಶತ್ರುವಾಗಿದ್ದನು. ಈ ಕಾರಣದಿಂದಲೇ ವಿಜಯಸಿಂಹನು, ಯಶವಂತನೊಡನೆ ಸೇರಬೇಡವೆಂದು ತನ್ನ ಮಗನಿಗೆ ಎಷ್ಟೋಬಾರಿ ಹೇಳಿದ್ದರೂ, ರಥೋತ್ಸಾಹ ಗರ್ವಿತನಾದ ಶಿವಸಿಂಗನು ತಂದೆಯ ಮಾತುಗಳನ್ನು ಕೇಳದೆ ಹೋದನು. ಇದ

ಗಿಂಪ ವಿಜಯಸಿಂಹನು ಕುಮಾರನ ಮರ್ಯಾದಾತಿಕ್ರಮಣಕ್ಕೆ ಖತಿಗೊಂಡು, ಔರಂಗಜೇಬನ ದಾಸನಾಗಿರುವ ಯಶವಂತನೊಡನೆ ಸೇರಿ, ತನ್ನ ಮನೆತನದ ಗೌರವಕ್ಕೂ, ಕ್ಷತ್ರಿಯ ಧರ್ಮಕ್ಕೂ ಕಲಂಕವನ್ನು ತಂದನೆಂಬ ಆಗ್ರಹದಿಂದ, ಮಗನನ್ನು ತನ್ನ ರಾಜಧಾನಿಯಾದ ರೂಪನಗರದಲ್ಲಿರಲಾಗದೆಂದು ಓಡಿಸಿ, ಮತ್ತೆ ಕಾಲಿಡಕೂಡದೆಂದು ಅಲಂಘ್ಯವಾದ ಶಾಸನವನ್ನು ವಿಧಿಸಿದನು. ಪಿತನ ಆಗ್ರಹಕ್ಕೆ ಪಾತ್ರನಾಗಿ, ಹೊರಡಿಸಲ್ಪಟ್ಟುದು ಮೊದಲು, ಶಿವಸಿಂಗನು, ಯಶವಂತನಿಗೆ ಬಲಭುಜವಾಗಿದ್ದು ಅನೇಕ ಯುದ್ಧಗಳಲ್ಲಿ ಆತನಿಗೆ ಸಹಾಯಮಾಡಿ, ತನ್ನ ಶೌರ್ಯ ಸಾಹಸ, ಕೌಶಲ್ಯ, ಚಾತುರ್ಯಗಳಿಂದ ಕೆಲವು ದಿನಗಳಲ್ಲಿಯೇ ಆರಾವಲೀ ಪರ್ವತಪ್ರಾಂತ ನಿವಾಸಿಗಳಾದ ಭಿಲ್ಲರಿಗೆಲ್ಲ ನಾಯಕನಾಗಿ ಕಾಲ ಕಳೆಯುತ್ತಿದ್ದನು.

ಭಾರ್ಯಾ ಮರಣವೂ, ಪುತ್ರ ವಿರಹವೂ ಅತ್ಯಂತ ಸಂತಾಪಕರವಾಗಿದ್ದರೂ, ವಿಜಯಸಿಂಹನು, ಧೈರ್ಯಗುಂದದೆ ಕೇವಲ ಸ್ವಧರ್ಮ, ಸ್ವದೇಶಾಭಿಮಾನಗಳನ್ನು ಕಾಪಾಡುವುದೇ ಕರ್ತವ್ಯವೆಂಬ ದೃಢನಿಶ್ಚಯಜ್ಞಾನದಿಂದ ತನಗೆ ಇನ್ನು ಮುಂದೆ ಪುತ್ರಿಯೂ, ಪುತ್ರನೂ “ವಿಮಲಾದೇವಿಯೇ” ಆಗಿರುವಳೆಂಬ ಸಮಾಧಾನವನ್ನು ತೆಗೆದು ಕೊಂಡು, ಮಗಳನ್ನು ಅತ್ಯಂತ ಪ್ರೀತಿಯಿಂದ ಕಾಪಾಡುತ್ತಿದ್ದನು. ಮಗಳನ್ನು ಅರೆಗಳಿಗೆ ಯಾದರೂ ಬಿಟ್ಟಿರಲಾರದೆ, ತಾನು ಬೇಟೆಗಾಗಿ ಅಡವಿಗೆ ಹೊರಟಾಗಲೂ, ಯುದ್ಧಕ್ಕೆ ಹೊರಡುವಾಗಲೂ ತನ್ನ ಜೊತೆಯಲ್ಲಿಯೇ ಇವಳನ್ನೂ ಕರೆದುಕೊಂಡು ಹೋಗುತ್ತಿದ್ದನು. ಅಷ್ಟೇ ಅಲ್ಲ! ಒಬ್ಬ ರಾಜಪುತ್ರ ವೀರನಿಗೆ ತನ್ನ ಮಗಳನ್ನು ಕೊಟ್ಟು ಅಳಿಯನನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ನಿಶ್ಚಯಿಸಿದ್ದನು.

ತನ್ನ ಕಾಲಾನಂತರದಲ್ಲಿ ತನ್ನ ರಾಜ್ಯಾಧಿಕಾರಕ್ಕೆ ವಿಮಲೆಯನ್ನೇ ನಿಲ್ಲಿಸಬೇಕೆಂದು ಕೂಡ ಯೋಚಿಸುತ್ತಿದ್ದನು. ಈತನ ದೃಢಪ್ರತಿಜ್ಞೆಯನ್ನು ನೋಡಿ, ಈತನು ಸಾಮಂತರಾಜನಾಗಿದ್ದರೂ, ಈತನ ವಿಷಯದಲ್ಲಿ ಈತನಿಗೂ ಹೆಚ್ಚಾದ ಅಧಿರಾಜರುಗಳು ಅಧಿಕ ವಿಶ್ವಾಸ ಗೌರವಗಳನ್ನಿರಿಸಿದ್ದರು. ಆ ಕಾಲದಲ್ಲಿ, ರಾಜಪುತ್ರ ಕುಲದಲ್ಲಿ ಗಣ್ಯನಾಗಿದ್ದ ಉದಯಪುರಾಧೀಶನಾದ “ ರಾಜಸಿಂಹನು ” ವಿಜಯಸಿಂಹನಿಗೆ ಅಧಿಕ ಮರ್ಯಾದೆಯನ್ನು ಕೊಡುತ್ತಿದ್ದನು.

ಸುಗುಣಾಲಂಕೃತೆಯಾದ ವಿಮಲಾದೇವಿಯು ಪ್ರೇಮಮಯಿಯಾದ ತಾಯಿಯನ್ನು ಕಳೆದುಕೊಂಡು, ಒಡನಾಡಿಯಾದ ಅಣ್ಣನನ್ನೂ ಬಿಟ್ಟಿರುವುದು ತನಗೆ ಬಹು ಕಷ್ಟವಾಗಿ ತೋರಿದರೂ, ತನ್ನ ಏಕಮಾತ್ರ ದೈವಸ್ವರೂಪನಾದ ಮನಸ್ಸಂತೋಷವೇ ತನ್ನ ಸಂತೋಷವೆಂದು ಸಮಾಧಾನವನ್ನು ತಳೆದು, ತನ್ನ ಸದ್ವೃತ್ತದಿಂದ ವಿಜಯಸಿಂಹನಿಗೆ ಸಂತೋಷವನ್ನುಂಟುಮಾಡುತ್ತಿದ್ದಳು. ವಿಮಲೆಯು ಚಿಕ್ಕಂದಿನಿಂದಲೂ, ಅಣ್ಣನೊಡನೆ ಅನೇಕ ವಿದ್ಯೆಗಳನ್ನು ಅಭ್ಯಸಿಸಿ, ತಕ್ಕಮಟ್ಟಿಗೂ ಅವುಗಳಲ್ಲಿ ಪರಿಶ್ರಮ ಹೊಂದಿದ್ದಳಲ್ಲದೆ, ನ್ಯಾಯಶಾಸ್ತ್ರದಲ್ಲಿಯೂ ತಕ್ಕಷ್ಟು ಜ್ಞಾನವನ್ನು ಪಡೆದಿದ್ದಳು. ಒಂದೊಂದುವೇಳೆ ತನ್ನ ತಂದೆಯೊಡನೆ ರಾಜ್ಯಾಂಗವಿಚಾರಗಳನ್ನು ಚರ್ಚಿಸಿ, ನ್ಯಾಯಾನ್ಯಾಯಗಳ ಸೂಕ್ಷ್ಮವನ್ನು ತಿಳಿದುಕೊಳ್ಳುತ್ತಿದ್ದಳು. ತಂದೆಯೊಡನೆ ಬೇಟೆಯಾಡಲು ಹೋಗಿ, ಅನೇಕ ಮೃಗಗಳನ್ನು ಲೀಲಾವಿನೋದದಿಂದ ಹೊಡೆದು, ತನ್ನ ತಂದೆಯನ್ನು ಮೆಚ್ಚಿಸುತ್ತಿದ್ದಳು. ತನ್ನ ಕೆಳದಿಯರಾದ ಕುಂದ, ಪದ್ಮೆಯರಿಗೆ, ಅಡಿಗಡಿಗೆ ಮತಭೋಧೆ, ಕುಲಾಚಾರ, ದೇಶಾಭಿಮಾನಗಳ ವಿಚಾರವಾಗಿ

ಬೋಧಿಸಿ, ತಮ್ಮ ಪವಿತ್ರವಾದ ಕ್ಷಾತ್ರತೇಜಸ್ಸನ್ನು ಆವರೀತಿಯಿಂದ ಕಾಪಾಡಿಕೊಳ್ಳಬೇಕೆಂಬ ಮಾರ್ಗವನ್ನು ಸೂಚಿಸಿ, ತಮ್ಮ ನಿಜತ್ವವೆಂತಹುದೆಂಬುದನ್ನು ಅವರ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವಂತೆ ಮಾಡುತ್ತಿದ್ದಳು. ಚದುರಂಗದ ಆಟದಲ್ಲಿ ಯಾರೂ ಈಕೆಗೆ ಸಮಾನರಾಗುತ್ತಿರಲಿಲ್ಲ. ಇದಲ್ಲದೆ ಈಕೆ ವಿನೋದಕ್ಕಾಗಿ ತನ್ನ ಪ್ರಾಣಸಖಿಯಾದ ಪದ್ಮೆಯೊಡನೆ ಪುರುಷವೇಷಧಾರಿಣಿಯಾಗಿ ಪಂದ್ಯವನ್ನು ಹಾಕಿಕೊಂಡು, ಕುದುರೆಯನ್ನು ಓಡಿಸುವುದರಲ್ಲಿ ತನ್ನ ಅಪ್ರತಿಮ ಚಮತ್ಕಾರ ಬುದ್ಧಿಯನ್ನು ಪ್ರದರ್ಶಿಸುವುದರಲ್ಲಿಯೂ ದಕ್ಷಳಾಗಿದ್ದಳು.

ಎಷ್ಟಾದರೇನು ? ಭ್ರಾತೃಸ್ನೇಹವೆ ಬಲವತ್ತರವು. ಅಣ್ಣನಾದ ಶಿವಲಿಂಗನು ತಂದೆಗೆ ವಿರೋಧವಾಗಿ ನಡೆದು, ಸ್ವದೇಶಚ್ಯುತನಾಗಿ ಹೊರಟು ಹೋದಂದಿನಿಂದಲೂ, ವಿಮಲೆಯ ಉತ್ಸಾಹವು ಅಂತಸ್ಥವಾಗಿಯೇ ಇದ್ದಿತು. ಅಲ್ಲದೆ, ಪದ್ಮೆಯ ಅಂತರಂಗ ಕ್ಲೇಶವನ್ನು ನೋಡಿ ನೋಡಿ, ಅನುಕಂಪನ ಹೃದಯಳಾದ ವಿಮಲೆಗೆ ಅತಿಯಾದ ದುಃಖವುಂಟಾಗುತ್ತಿದ್ದಿತು. ಏಕೆಂದರೆ, ಪದ್ಮೆಯು ವಿಮಲೆಯ ಸೋದರತ್ತೆಯ ಮಗಳು. ಪದ್ಮೆಯು ಸ್ವಭಾವತಃ ತೇಜಸ್ವಿತೆ; ಮೇಲಾಗಿ ವಿಮಲೆಯ ಒಡನಾಡಿಯೂ, ಆಪ್ತಸಖಿಯೂ ಆಗಿದ್ದುದರಿಂದ ಇವಳಲ್ಲಿ ವಿಮಲೆಗೆ ಪ್ರೀತಿಯೂ ಎಷ್ಟುಮಟ್ಟಿಗಿದ್ದಿತೆಂದು ಹೇಳಬೇಕಾದುದಿಲ್ಲ. ಪದ್ಮೆಯು ಬಾಲ್ಯದಲ್ಲಿಯೇ ಮಾತಾಪಿತೃವಿಯೋಗ ಹೊಂದಿ, ಮಾತುಲ (ಸೋದರಮಾವ) ನಾದ ವಿಜಯಸಿಂಹನ ಪೋಷಣೆಗೆ ಒಳಪಟ್ಟುದರಿಂದ ವಿಜಯಸಿಂಹನು ಪದ್ಮೆಯನ್ನು ವಿಮಲೆಯಂತೆಯೇ ಪುತ್ರಿಸ್ನೇಹದಿಂದ ಪಾಲಿಸುತ್ತಿದ್ದನು. ಈ ಕಾರಣದಿಂದ ಒಂದೇಕಡೆಯಲ್ಲಿ ಬೆಳೆದವರಾದ ಶಿವಲಿಂಗ-ಪದ್ಮೆಯರಿಗೆ

ಪರಸ್ಪರ ಸ್ನೇಹಪಾಶವೂ ಬೆಳೆದಿದ್ದಿತೆಂಬುದು ಸ್ವತಸ್ಸಿದ್ಧವಾದ ಮಾತು. ಅದರ ಮೇಲೆ ವೀರರಮಣಿಯರ ಸ್ನೇಹವು ವೀರ ಪುರುಷರಲ್ಲಿಯೇ ಏರಕವಾಗುವುದರಿಂದ ಪದ್ಮೆಯು, ಕ್ಷತ್ರಿಯ ವೀರಸನ್ನಿಸಿ ಕುಲೋದ್ಧಾರಕನಾಗುವನೆಂದು ನಿರೀಕ್ಷಿಸಲ್ಪಟ್ಟಿದ್ದ ಶಿವಶಿಂಗನಲ್ಲಿ ಮನಸೋತವಳಾಗಿದ್ದಳೆಂದೂ ಸುಳ್ಳಾಗುವಂತಿಲ್ಲ. ಹಾಗೆಂದ ಬಳಿಕ ಶಿವಶಿಂಗನು ಹೋರಟುಹೋದದು ಪದ್ಮೆಯ ಮನಸ್ಸಿಗೆ ಎಷ್ಟು ಖೇದವನ್ನುಂಟು ಮಾಡಿರಬೇಕು? ಇತ್ತ ತನ್ನ ಪ್ರಾಣಸಖಿಯಾದ ಪದ್ಮೆಯ ಮನಸ್ತಾಪ, ಅತ್ತ ಭ್ರಾತೃವಿರಹಜನ್ಯ ಸಂತಾಪ, ಇವೆರಡು ತಾಪಗಳೊಡನೆ ಪಿತನ ಅಂತರಂಗಿಕ ಕ್ಲೇಶವನ್ನು ಕುರಿತು ಅನುತಾಪ, ಹೀಗೆ ತಾಪ ತ್ರಯಗಳು ವಿಮಲೆಯನ್ನು ಬಾಧಿಸತೊಡಗಿದವು. ವಿಮಲೆಯು ಪೇಗಾದರೂ ಮಾಡಿ ತಂದೆಯ ಪ್ರಸನ್ನತೆಯನ್ನು ಪಡೆದು ಶಿವ ಶಿಂಗನನ್ನು ಕರೆಯಿಸಿ ಪದ್ಮೆಯನ್ನು ಶಿವಶಿಂಗನ ಮಹಿಷಿಯಾಗಿ ಮಾಡುವುದರಿಂದ ಪರ್ವರ ಮನಸ್ಸಮಾಧಾನವೂ ಆಗುವುದೆಂದು ಭಾವಿಸಿ, ಅಣ್ಣನನ್ನು ಕರೆಯಿಸಬೇಕೆಂದು ಸಮಯ ಪೊದಗಿದಾಗ ಲೆಲ್ಲಾ ತಂದೆಯಲ್ಲಿ ಪ್ರಾರ್ಥಿಸುತ್ತಿದ್ದಳು. ಅದೇರೀತಿಯಾಗಿಯೇ ಒಂದು ದಿನ ಮೇಲಿನ ಸಂಭಾಷಣೆಗಳು ನಡೆಯುತ್ತಿದ್ದವು.

ವಿಮಲಾದೇವಿ-ವಿಜಯಸಿಂಹರ ಸಂಭಾಷಣವು ನಡೆಯುತ್ತಿದ್ದಲ್ಲಿಗೆ ಸೇವಕನೊಬ್ಬನು ಬಂದು ಕೈಮುಗಿದು "ದೇವಾ! ಪಾದಸಂದರ್ಶನಕ್ಕಾಗಿ ಮಹಮ್ಮದೀಯನೊಬ್ಬನು ದಿಲ್ಲಿಯಿಂದ ಬಂದು ನಗರದ್ವಾರದಲ್ಲಿ ನಿಂತು ಕಾದಿರುವನು" ಎಂದು ನಿವೇದಿಸಿದನು.

ವಿಜಯಸಿಂಹನು ಕುತೂಹಲದಿಂದ “ ಅದಾವನೋ ಕೊಂಡುವ ಜಾಗ್ರತೆಯಾಗಿ ಕರೆತಾ ” ಎಂದು ಕಟ್ಟುಮಾಡಿ, ಸೇವಕನನ್ನು ಕಳುಹಿ “ ದಿಲ್ಲಿಯಿಂದ ದೂತನು ಬರುವ ಆಗತ್ಯವೇನು ? ಹಾಗೂ ಮುಹಮ್ಮದಿಯನು ಬಂದಿರುವನೆಂದರೆ ಸಮಯವೆಂತಹದಾಗಿರಬೇಕು ” ಎಂದೀಪರಿಯಿಂದ ಹಲವು ಬಗೆಯಾಗಿ ವಿಚಾರಮಾಡುತ್ತಿದ್ದನು. ಅಷ್ಟರಲ್ಲಿ ಆ ಮೊಗಲ ದೂತನು ಅರಮನೆಯನ್ನು ಹೊಕ್ಕು, ವಿಜಯಸಿಂಹನ ಸಮಕ್ಷಮವನ್ನು ಸೇರಿ, ವಿನಯದಿಂದ ಕೈಮುಗಿದು, ತನ್ನ ಅಂಗರಖೆಯೊಳಗಿದ್ದ ಕಾಗದವನ್ನು ತೆಗೆದು ರಾಜನ ಮುಂದಿರಿಸಿದನು. ವಿಜಯಸಿಂಹನು ಆ ಪತ್ರವನ್ನು ಆತುರದಿಂದ ಕೈಕೊಂಡು, ಬಿಚ್ಚಿ ಓದಿದನು. ಓದುತ್ತಿದ್ದಂತೆಯೇ ಆತನ ಕಣ್ಣುಗಳಿಂದ ಧಾರಾಕಾರವಾಗಿ ಶೋಕಾಶ್ರುಗಳು ಹರಿದು ಸ್ವಲ್ಪದರಲ್ಲಿಯೇ ರಾಜನನ್ನು ಸ್ತಬ್ಧನನ್ನಾಗಿ ಮಾಡಿತು. ವಿಜಯಸಿಂಹನ ಈ ಅವಸ್ಥೆಯನ್ನು ನೋಡಿ, ಆ ಮುಹಮ್ಮದೀಯನು ಹೇಳಿದನು. “ ಮಹಾರಾಜಾ ! ಕ್ಷತ್ರಿಯವೀರರು ಹೀಗೆ ವಿಚಾರಪಡುತ್ತ ಕುಳಿತುಕೊಳ್ಳುವುದು ಸರಿಯಲ್ಲ. ನಡೆದುಹೋದುದನ್ನು ಕುರಿತು ವ್ಯಾಕುಲಪಡುವುದರಿಂದ ಫಲವೇನಾಗುವುದು. ಈ ಯವನರಿಂದ ನಮಗಿನ್ನೂ ಎಷ್ಟು ಕಷ್ಟಗಳು ಪ್ರಾಪ್ತವಾಗುವವೋ ತಿಳಿಯದು. ಈ ಘೋರಕೃತ್ಯವು ನಡೆದ ಮರುದಿನವೇ ತಮ್ಮ ಪುತ್ರನಾದ ಜ್ಯೇಷ್ಠಮಲ್ಲನು, ಈ ಪತ್ರವನ್ನು ತಮಗೆ ಮುಟ್ಟಿಸಬೇಕೆಂದು ನನ್ನ ಕೈಯಲ್ಲಿತ್ತು ಕಳುಹಿಸಿದನು.

“ ಮಹಾರಾಜಾ ! ನನ್ನ ಈ ವೇಷವನ್ನು ನೋಡಿ ಶಂಕಿಸಬೇಕಾದುದಿಲ್ಲ. ನಾನು ಉತ್ತಮಬ್ರಾಹ್ಮಣನು. ' ಮಾರ್ಗ

ಮಧ್ಯದಲ್ಲಿ ಮಹಮ್ಮದೀಯರ ತೊಂದರೆಗಳಿಗೆ ಸಿಕ್ಕದೆ ತಪ್ಪಿಸಿಕೊಂಡು ಬರುವುದಕ್ಕಾಗಿ ಈ ವೇಷವನ್ನು ಧರಿಸಬೇಕಾಯಿತು. ಆದರೆ ದಾರಿಯಲ್ಲಿ ಮಹಮ್ಮದೀಯ ಭಟರು ನನ್ನನ್ನು ಬಿಡದೆ ತೊಂದರೆಪಡಿಸಿದರು. ದೈವಾನುಗ್ರಹದಿಂದ ತಂತ್ರವಮಾಡಿ, ತಪ್ಪಿಸಿಕೊಂಡು ಬಂದೆನು. ಇನ್ನು ವಿಳಂಬಿಸುವುದರಿಂದ ಕಾರ್ಯಹಾನಿಯಾಗಬಹುದು. ವಿಚಾರಪೂರ್ವಕವಾಗಿ ಇನ್ನು ಮುಂದಿನ ಕಾರ್ಯದಲ್ಲಿ ಜಾಗರೂಕರಾಗಿರುವುದು ಆವಶ್ಯಕವು."

ವಿಮಲೆಯು, ದೂತನಾಗಿ ಬಂದು ಪತ್ರವನ್ನೊಪ್ಪಿಸಿ, ಹೇಳಿದ ಆ ವೇಷಧಾರಿಯ ಸ್ಫೂರ್ತಿದಾಯಕಗಳಾದ ಹಿತವಚನಗಳನ್ನೂ, ಪತ್ರಪಠನಮಾತ್ರದಿಂದ ಕ್ಲೇಶರೋಷಗಳಿಂದ ವಿವರ್ಣನಾಗಿ ಕುಳಿತ ಪಿತನ ರೀತಿಯನ್ನೂ ನೋಡಿ, ಪತ್ರಸ್ಥವಿಚಾರವೇನೋ ಪ್ರಮಾದವಾಗಿಯೇ ಇರಬಹುದೆಂದು ಶಂಕಿಸಿದಳು. ಅದನ್ನು ತಾನೊಮ್ಮೆ ನೋಡಬೇಕೆಂದು ಆಶೆಪಟ್ಟಳಾದರೂ ಆ ವೇಳೆಯಲ್ಲಿ ತಂದೆಯ ಮುಂದೆ ನಿಂತು ಮಾತಾಡುವಷ್ಟು ಸಾಹಸಪಡಲಾರದೆ ಶಂಕಾತಂಕಗಳಿಂದ ತಂದೆಯಾಡುವ ಮಾತುಗಳಿಂದಾದರೂ ವಿಷಯವನ್ನು ತಿಳಿಯಬೇಕೆಂದು ನಿರೀಕ್ಷಿಸುತ್ತಿದ್ದಳು. ವಿಜಯಸಿಂಹನು ವೇಷಧಾರಿಯಾದ ಆ ಬ್ರಾಹ್ಮಣನ ನವಿನುಡಿಗಳಿಂದ ಸ್ವಸ್ಥತೆಯನ್ನು ಹೊಂದಿ, ಕ್ಷಾತ್ರ ತೇಜಸ್ಸಿಗೆ ಉಚಿತವಾದ ಗಾಂಭೀರ್ಯದಿಂದ ಆತನನ್ನು ಕುರಿತು ಹೇಳಿದನು "ಆಹಾ! ಎಂತಹ ದಾರುಣವ್ಯಾಪಾರವು ನಡೆದುಹೋಯಿತು! ಯಶವಂತಸಿಂಹನಿಲ್ಲದವೇಳೆಯಲ್ಲಿ, ಸಿಸ್ಕಪಟಿಯಾ ಕುಮಾರ ಪೃಥ್ವೀಸಿಂಗನನ್ನು ಕೊಲ್ಲಲು ಬಾದಶಹನೆನ್ನಿಸಿದ ಆ ಔರಂಗಜೇಬನಿಗೆ ಮನಸ್ಸಾದರೂ ಹೇಗೆ ಬಂದಿತು? ಈ ಕುಹಕವನ್ನು ಅವನೆಷ್ಟು ದಿನಗಳಿಂದಲೂ ಮನಸ್ಸಿನಲ್ಲಿ ಅಡಗಿಸಿ

ಕೊಂಡಿದ್ದನು ? ರಾಜಪುತ್ರಸ್ಥಾನದಲ್ಲಿ ವೀರರಾದ ಕ್ಷತ್ರಿಯರೇ ಇಲ್ಲವೆಂದು ಮಾಡಿದನಲ್ಲವೆ ? ಕ್ಷಾತ್ರತೇಜವೇ ಪರಾಭಿಭೂತ ವಾಗಿ ಹೋಯಿತೆಂದು ತಿಳಿದು, ಈ ಕೃತ್ರಿಮ ಸಂಧಾನವನ್ನು ಮಾಡಿದನಲ್ಲವೆ ? ಆಗಲಿ, ಇಂದು ಅವನು ಹತ್ತಿಸಿದ ಬೆಂಕಿಯೇ ಅವನ ಸರ್ವನಾಶ ಮಾಡುವುದಕ್ಕೆ ಸಾಕಾಗಿದೆ. ಆದರೆ ಮೊಗಲ್ ಸಮ್ರಾಟನ ಕೃಪಾಪಾತ್ರನಾದೆನೆಂದು ಹಿಗ್ಗುತ್ತಿದ್ದ ಯಶವಂತ ಸಿಂಹನು, ತನ್ನ ಪುತ್ರನ ಮರಣವೃತ್ತಾಂತವನ್ನು ಕೇಳಿ ಹೇಗೆ ಸಹಿಸುವನೋ ತಿಳಿಯದು."

ವಿಮಲೆಯು ಇನ್ನು ಮುಂದೆ ಸುಮ್ಮನಿರಲಾರದೆ ದಿಗ್ಗನೆದ್ದು ಬಂದು ತಂದೆಯ ಬಳಿಯಲ್ಲಿ ಕುಳಿತು, ಆತನ ಕೈಯ್ಯಲ್ಲಿದ್ದ ಪತ್ರವನ್ನು ತೆಗೆದುಕೊಂಡು ಗಟ್ಟಿಯಾಗಿ ಓದಿದಳು. ಪತ್ರದಲ್ಲಿ ಈ ಮುಂದೆ ತಿಳಿಸುವ ವಿವರವು ಲಿಖಿತವಾಗಿದ್ದಿತು.

ರೂಪನಗರಾಧೀಶರಾದ ಮಾನ್ಯವರೇಣ್ಯ ಶ್ರೀ ವಿಜಯಸಿಂಹ ಮಹಾರಾಜರಲ್ಲಿ:— ದಿಲ್ಲೀ ನಗರದ ನಿವಾಸಿಯಾದ ಜ್ಯೇಷ್ಠ ಮಲ್ಲನು ನಿವೇದಿಸುವುದೇನಂದರೆ :—

ವಿಜಯಸಿಂಹಮಹಾರಾಜಾ ! ನಿನ್ನಿನ ಸಾಯಂಕಾಲ ಬಾದಶಹನ ದರಬಾರಿನಲ್ಲಿ ಒಂದು ದಾರುಣ ಕೃತ್ಯವು ನಡೆಯಿತು. ಇಂತಹ ದ್ರೋಹವು ಈ ವರೆಗೆ ಎಂದೂ ನಡೆದುದಿಲ್ಲ. ಅಲಂಘೀರಬಾದಶಹನ ಅಪ್ಪಣೆಯಂತೆ ಯಶವಂತಸಿಂಹನು ಕಾಬೂಲ ದೇಶದಲ್ಲಿ ನಡೆಯುತ್ತಿರುವ ದಾಂಧಳೆಯನ್ನು ಅಡಗಿಸುವುದಕ್ಕಾಗಿ ಹೊರಟು, ತನ್ನ ಪುತ್ರನಾದ ಪೃಥವೀಸಿಂಹನನ್ನು ತನ್ನ ಸಿಂಹಾಸನದ ಮೇಲೇರಿಸಿ, ತಾನು ಪತ್ನೀ ಪರಿವಾರದೊಡನೆ ನಿಜಸೈನ್ಯ ಸಮೇತನಾಗಿ ಹೊರಟು ಹೋಗಿರುವುದನ್ನು ತಾವು ತಿಳಿದೇ ಇರುವಿರಷ್ಟೇ ? ಔರಂಗಜೇಬನು ಮೊನ್ನೆ ತನ್ನ ಸೇನೆ

ಯನ್ನೂ ಬಂಗಾರದ ಪಲ್ಲಕ್ಕಿಯನ್ನೂ ಕಳುಹಿ ನೂತನ ಪಟ್ಟಾಭಿಷಿಕ್ತನಾದ ರಾಜನನ್ನು ನೋಡಬೇಕೆಂಬ ನೆವದಿಂದ ಪೃಥವೀಸಿಂಗನನ್ನು ತನ್ನ ಅರಮನೆಗೆ ಕರೆಯಿಸಿಕೊಂಡು, ಆತನನ್ನು ಅತ್ಯಾದರದಿಂದ ಸನ್ಮಾನಿಸಿ, ಉಪಚರಿಸಿ, ಕೇವಲ ಪುತ್ರವಾತ್ಸಲ್ಯವನ್ನಿಸಿ ಆದರಿಸುವನೆಂಬಂತೆ ಸಲಿಗೆಯಿಂದ ಕುಮಾರನನ್ನು ಕುರಿತು "ರಾಜಕುಮಾರ! ನಿನ್ನ ತಂದೆಯಂತೆಯೇ ನೀನೂ ಪರಾಕ್ರಮಶಾಲಿಯಾಗಿ ನಮ್ಮ ರಾಜ್ಯಕ್ಕೆ ಮುಖ್ಯಾಧಾರನಾಗಿ ಕೀರ್ತಿಯನ್ನು ಹೊಂದುವಿಯೆಂದು ನನಗೆ ಭರವಸೆಯಿದೆ." ಎಂದು ಹಲವು ಬಗೆಯಾಗಿ ಹೊಗಳಿ ಆದಿನ ಆತನಿಗೆ ದೊಡ್ಡ ಔತಣವನ್ನು ಮಾಡಿಸಿ, ಆಸ್ಥಾನಕ್ಕೆ ಕರೆಯಿಸಿ, ತನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡು ಸಭಾಸದರೆಲ್ಲರೂ ನೋಡುವಂತೆ "ಪೃಥವೀಸಿಂಗ! ನೀನು ನನ್ನ ಕುಮಾರನೇ ಹೊರತು, ಯಶವಂತಸಿಂಹನ ಕುಮಾರನಲ್ಲ; ನಿನ್ನನ್ನು ನೋಡಿದರೆ ನನಗೆ ತುಂಬಾ ಸಂತೋಷವಾಗುವುದು. ನೀನು ಸ್ವಲ್ಪ ಕಾಲದಲ್ಲಿಯೇ ನಮ್ಮ ರಾಜ್ಯಕ್ಕೆ ಕೀರ್ತಿಯನ್ನು ತರುತ್ತೀಯೆಂದು ನಾನು ನಂಬುತ್ತೇನೆ. ಸಂತೋಷಪೂರ್ವಕವಾಗಿ ನಾನು ಕೊಡುವ ಈ ಬಹುಮಾನಗಳನ್ನು ಸ್ವೀಕರಿಸಿ ಜೋಧ್ಪುರವನ್ನು ಸುರಕ್ಷಿತವಾಗಿ ಸೇರು." ಎಂದು ಹೇಳಿ, ಆತನ ಕಂಠಕ್ಕೆ ಕೆಲವು ಅಮೂಲ್ಯವಾದ ರತ್ನಹಾರಗಳನ್ನು ಹಾಕಿ, ತನ್ನ ಕೈಯ್ಯಿಂದಲೇ ವಿಷವಸ್ತ್ರವನ್ನುಡಿಸಿ ಕಳುಹಿಸಿದನು. ಪಾಪ! ನಿಷ್ಕಲಂಕಿಯಾದ ಸುಕುಮಾರನು ಮನೆಯನ್ನು ಸೇರಿದಾಕ್ಷಣವೇ ವಿಷವಸ್ತ್ರಪ್ರಭಾವದಿಂದ ಜ್ಞಾನತಪ್ಪಿ ಬಿದ್ದು ಸ್ವಲ್ಪ ಹೊತ್ತಿನಲ್ಲಿಯೇ ಪರಲೋಕಗತನಾದನು. ಈ ಸಮಾಚಾರವನ್ನು ತಿಳಿದ ಕೂಡಲೇ ಔರಂಗಜೇಬನು ಅಂತರಂಗದಲ್ಲಿ

ಸಂತೋಷಪಡುತ್ತಿದ್ದರೂ ಹೊರಗೆ ಅತ್ಯಂತ ವ್ಯಾಕುಲಪಟ್ಟಂತೆ ನಟಿಸುತ್ತ ಅಯ್ಯೋ! ಸುಕುಮಾರ! ಪೃಥವೀಸಿಂಗಾ!! ಹೋದೆಯಾ? ಇಷ್ಟು ಬೇಗ ನಮ್ಮೆಲ್ಲರನ್ನೂ ಬಿಟ್ಟುಹೋದೆಯಾ? ಅಯ್ಯೋ! ನಾನೆಂತಹ ಬುದ್ಧಿಹೀನನು? ಲೋಕೋತ್ತರವಾದ ಆ ಸುಕುಮಾರನನ್ನು ಕರೆಯಿಸಿ ರಾಜಸಭೆಯಲ್ಲಿ ನಾನು ಎಲ್ಲರ ಮುಂದೆಯೂ ನನ್ನ ಜೊತೆಯಲ್ಲಿ ಕುಳ್ಳಿರಿಸಿಕೊಂಡು ಸನ್ಮಾನಿಸಿದೆನು. ಸಭಿಕರೆಲ್ಲರ ದೃಷ್ಟಿದೋಷದಿಂದಲೇ ಆತನಿಗೆ ಈ ಅಪಮೃತ್ಯುವುಂಟಾಯಿತು. ಅಯ್ಯೋ! ಆತನು ನನಗೆ ಮುಂದೆ ತುಂಬಾ ಸಹಾಯಕನಾಗುವನೆಂದು ನಂಬಿದ್ದ ನನ್ನ ಆಶೆಯೆಲ್ಲವೂ ನಿರಾಶೆಯಾಯಿತೇ? ದೈವವೇ ನನಗೆ ಹೀಗೆ ವಿರೋಧವಾಗಬಹುದೇ? ಎಂದು ಕಪಟಜಾಲಗಳನ್ನು ಪ್ರದರ್ಶಿಸಿದನು.

ದೇವಾ! ವಿಶೇಷ ವಿವರಣೆಯಿಂದೇನು? ಇಂತಹ ಘೋರಕೃತ್ಯವನ್ನು ಮಾಡುವುದರಿಂದ ತನಗೆ ಎಂತಹ ಪ್ರತಿಫಲವುಂಟಾಗಬಹುದೆಂಬ ವಿಚಾರ ವೆಳ್ಳಷ್ಟೂ ಇಲ್ಲದೆ ರಾಜಪುತ್ರಸ್ಥಾನದಲ್ಲಿ ತನಗೆ ಇದಿರಾಗುವವರೇ ಇಲ್ಲವೆಂದು ತಿಳಿದು ಪೃಥವೀಸಿಂಗನ ಮರಣದಿಂದ ಸಫಲ ಮನೋರಥನಾದೆನೆಂದು ನಲಿಯುತ್ತಿರುವನು. ಈ ಅಧಮ ಕಾರ್ಯವನ್ನು ಕೇಳಿದ ಯಾವ ರಾಜಪುತ್ರವೀರನಾಗಲಿ, ಸುಮ್ಮನಿರಲಾರನೆಂದ ಮೇಲೆ, ಇನ್ನು ಈ ನಮ್ಮ ರಾಜಕುಲದಲ್ಲಿ ಪೂಜ್ಯರಾಗಿರುವ ತಮಗೆ ಮತ್ತೆಷ್ಟು ಖತಿಯನ್ನುಂಟು ಮಾಡುವುದೆಂದು ನಂಬಿ ನಡೆದ ವಿಚಾರವನ್ನು ಸರಿಯಾಗಿ ಬರೆದು ಕಳುಹಿಸಿರುವೆನು. ಇತಿ....

ಪತ್ರಪಠನಾನಂತರದಲ್ಲಿ ವಿಮಲೆಯು ತನ್ನ ಸಮೀಪ ಬಂಧುವಾಗಿದ್ದ ಯಶವಂತಸಿಂಹನಿಗೆ ಉಂಟಾದ ಈ ಪುತ್ರ

ವಿಯೋಗವನ್ನು ಕುರಿತು ದುಃಖಿಸುತ್ತ ಕುಳಿತಳು. ಪುತ್ರಿಯು ಅಳುತ್ತ ಕುಳಿತುದನ್ನು ನೋಡಿ, ಧೈರ್ಯಾಲಂಕೃತನಾದ ವಿಜಯ ಸಿಂಹನು ಹೀಗೆ ಹೇಳಿದನು-" ತಾಯಿಾ, ವಿಮಲಾದೇವಿ! ದುಃಖಪಟ್ಟು ಫಲವೇನು? ದೈವಸಂಘಟನವನ್ನು ತಪ್ಪಿಸಲು ಯಾರಿಗೂ ಆಗಲಾರದು. ಸಂಕಟಪಟ್ಟ ಮಾತ್ರದಿಂದ ಯಶ ವಂತನಿಗಾಗಲೀ, ಆತನ ಪತ್ನಿಗಾಗಲೀ, ಉಂಟಾಗಿರುವ ಈ ದುಃಖವನ್ನು ಹೋಗಲಾಡಿಸಬಲ್ಲೆವೇ? ಶಾಂತಳಾಗು."

ವಿಮಲೆ—ಸ್ಥಿರಭಾವದಿಂದ ಅಪ್ಪಾಜೀ! ಕ್ಷತ್ರಿಯ ವಂಶಕ್ಕೆ ಎಂತಹ ದುರ್ಗತಿ ಪ್ರಾಪ್ತವಾಗಿದೆ, ನೋಡಿದಿರಾ? ಇನ್ನೂ ಎಲ್ಲಿಯವರಿಗೆ ಈ ಕಿರುಕುಳಗಳನ್ನು ಸಹಿಸಬಹುದು? ಘೋರಕೃತ್ಯಗಳನ್ನು ಆಗಾಗ ನಡೆಯಿಸುತ್ತಲೇ ಇರುವ ಔರಂಗ ಜೇಬನ ವಿಷಯವನ್ನು ಆಲೋಚಿಸದೆ ರಾಜಪುತ್ರರು ಏಕೆ ಸುಮ್ಮನಿರುವರು? ಅವರ ಬಾಹುಗಳಲ್ಲಿ ಬಲವಿಲ್ಲವೇ? ಕ್ಷಾತ್ರ ಧರ್ಮವು ಅಳಿಸಿಹೋಯಿತೇ?

ವಿಜಯ — " ಹೋ, ತಾಳು! ವಿಮಲಾ! ದುಡುಕಿ ಬೈಯ್ಯಬೇಡ, ನಿನ್ನ ಮಾತು ನಿಜ! ಈ ದೆಸೆಯಲ್ಲಿ ನಾವು ಸುಮ್ಮನಿರುವುದಾದರೆ ನಮ್ಮ ಕ್ಷತ್ರಿಯವಂಶವೇ ನಾಶವಾಗ ಬಹುದು. ಕೆಲವು ಮಂದಿ ಭೀತಚಿತ್ತರಾದ ರಾಜಪುತ್ರರು ಔರಂಗಜೇಬನಿಗೆ ವಿಧೇಯರಾಗಿ ಅವನ ಕ್ರೂರಕೃತ್ಯಕ್ಕೆ ಸಹಾ ಯಕರಾಗಿರುವರು. ಅದರಿಂದಲೇ ಅವನ ಪುಂಡಾಟವು ಮಿತಿ ಮಿಾರಿ ಹೋಗುತ್ತಿರುವುದು. ಇನ್ನು ತಾಳ್ಮೆಯನ್ನು ಬಿಟ್ಟು, ಅವನ ಸರ್ವನಾಶದ ಪ್ರಯತ್ನದಲ್ಲಿ ಉದ್ಯುಕ್ತನಾಗುವೆನು. ಅದರ ಮೇಲೆ ದೈವಯತ್ನವು ಹೇಗಿರುವುದೋ ಹಾಗಾಗಲಿ ಏನು ಮಾಡಬೇಕೆಂದರೂ ನಮ್ಮ ಕ್ಷತ್ರಿಯ ವಂಶದವರಲ್ಲಿ ಏಕ

ಮಾತ್ರವೆಂಬುದೇ ಇಲ್ಲವಾಗಿದೆ. ಅದು ಕೂಡ ಔರಂಗಜೇಬನ ಹಾವಳಿಯನ್ನು ನೋಡಿ ಸಹಿಸಲಾರದೆ ಅಜ್ಞಾತವಾಸದಲ್ಲಿರು ವಂತೆ ಕಾಣುತ್ತದೆ.

ವಿಮಲಾ:—ಅಪ್ಪಾಜಿ! ಪೃಥವೀಸಿಂಗನ ಮರಣವಾರ್ತೆ ಯನ್ನು ಕೇಳಿ, ಆ ನನ್ನ ಚಿಕ್ಕಮ್ಮ ಚಂದ್ರಾವತಿಯು ಹೇಗೆ ಸಹಿಸ ಬಲ್ಲಳೋ ತಿಳಿಯದೆಂಬುದೇ ನನ್ನ ವ್ಯಾಕುಲವಾಗಿದೆ. ಅಂತಹ ವೀರಮಹಿಷಿಯಾದ ಸಾಧ್ವೀಮಣಿಗೆ ಇಂತಹ ಸಂಕಟವುಂಟಾಗು ವುದೆಂದು ಕನಸಿನಲ್ಲಿಯೂ ತಿಳಿದಿರಲಿಲ್ಲ. ಈ ವೇಳೆಯಲ್ಲಿ ನಾವು ಆ ತಾಯಿಯ ದುಃಖವನ್ನು ವಿಚಾರಿಸುವುದು ಕರ್ತವ್ಯವಾದುದ ರಿಂದ ನೀವು ಸಮ್ಮತಿಸಿದರೆ, ನಾನಾಕೆಗೆ ಒಂದು ಪತ್ರವನ್ನು ಬರೆಯಬೇಕೆಂದಿರುವೆನು,

ವಿಜಯ-ತಾಯಿ! ಇದಕ್ಕೆ ಸಮ್ಮತಿಸದೆ ಇರುವೆನೆ? ನಾನೂ ಯಶವಂತಸಿಂಹನಿಗೆ ಒಂದು ಪತ್ರವನ್ನು ಬರೆಯುವೆನು. ಎರಡನ್ನೂ ಒಟ್ಟಿಗೆ ಕಳುಹಬಹುದು. ವಿಪತ್ಕಾಲದಲ್ಲಿ ಬಂಧು ಗಳಿಗೂ ಮಿತ್ರರಿಗೂ ಸಹಾಯ ಮಾಡಬೇಕಾದುದು ಕರ್ತವ್ಯವು. ಬಂಧುತ್ವವೊಂದೇ ಅಲ್ಲದೆ, ಬಾಲ್ಯದಿಂದಲೂ ಸ್ನೇಹ ಬಾಂಧವ್ಯ ದಲ್ಲಿದ್ದ ಯಶವಂತನನ್ನು ವಿಚಾರಿಸುವುದರಲ್ಲಿ ಹೇಳುವುದೇನು? ಆದರೆ, ನನಗೊಂದು ಸಂದೇಹವಿರುವುದು. ನಮ್ಮ ಪತ್ರಗಳು ಶತ್ರುಗಳ ಕೈಗೆ ಸಿಕ್ಕದೆ ಆತನ ಕೈಸೇರುವುದೇನೆಂಬುದೇ ನನ್ನ ಶಂಕೆಯಾಗಿದೆ. ಇರಲಿ, ನೀನೇನನ್ನು ಬರೆಯಬೇಕೆಂದಿರುವೆಯೋ ಬೇಗಬರೆ; ನಾನು ಚತುರನೂ ತಂತ್ರಗಾರನೂ ಆದ ದೂತನನ್ನು ನೋಡಿ ಅವನಲ್ಲಿ ಕಾಗದ (ಪತ್ರ) ಗಳನ್ನು ಕೊಟ್ಟು ಕಳುಹುವೆನು.

ವಿಮಲೆಯು ಸಮ್ಮತಿಸಿ ಲೇಖನಕಾರ್ಯಕ್ಕುದ್ಯುಕ್ತಳಾದಳು. ವಿಜಯಸಿಂಹನೂ ಮುಂದಿನ ಕಾರ್ಯದಲ್ಲಿ ಅಭಿಮುಖನಾದನು. (ಈ ಪಿತಾಪುತ್ರಿಯರ ಪತ್ರಗಳು ಈ ಚರಿತ್ರೆಗೆ ಎಷ್ಟು ಸಾಧಕವಾದುವೆಂಬುದನ್ನು ನಮ್ಮ ವಾಚಕರು ಮುಂದೆ ತಿಳಿಯುವರು.)

---

## ಮೂರನೆಯ ಪ್ರಕರಣ.

---

### (ಅಚಲೇಶ್ವರ ಮತ್ತು ವೈಕುಂಠಯೋಗಿ.)

"ಆರಾವಲಿ" ಎಂಬ ಪರ್ವತಶ್ರೇಣಿಯು ರಾಜಪುತ್ರಸ್ಥಾನದ ಮಧ್ಯದಲ್ಲಿ ಉತ್ತರ ದಕ್ಷಿಣವಾಗಿ ಕಟ್ಟಲ್ಪಟ್ಟ ಒಂದು ದೊಡ್ಡ ಗೋಡೆಯ ಹಾಗೆ ಹಬ್ಬಿದೆ. 'ಆರಾವಲಿ' ಎಂಬ ಶಬ್ದವು "ಆದರ್ಶಾವಲಿ" ಎಂಬ ಶಬ್ದದಿಂದ ಉತ್ಪನ್ನವಾಗಿರಬಹುದು 'ಆದರ್ಶಾವಲಿ' ಎಂದರೆ ಕನ್ನಡಿಯ ಸಾಲು ಎಂದು ಅರ್ಥವಾಗುವುದು. ಈ ಪರ್ವತದಲ್ಲಿರುವ ಕೆಲವು ಗುಡ್ಡಗಳು "ಸಂಗಮರವರಿ" ಎಂಬ ಬಿಳಿಯ ಚಂದ್ರಕಾಂತ ಶಿಲೆಗಳಿಂದ ತುಂಬಿರುವವು. ಇವು ಹಗಲು ಸೂರ್ಯನಿಂದಲೂ, ರಾತ್ರಿ ಚಂದ್ರನಿಂದಲೂ ಕನ್ನಡಿಯಂತೆ ಫಳಫಳನೆ ಹೊಳೆಯುತ್ತಿರುವುದರಿಂದ ಇವಕ್ಕೆ 'ಆದರ್ಶಾವಲಿ' ಎಂಬ ಹೆಸರು ಬಂದಿರುವುದು. ಈ ಪರ್ವತದ ಸುತ್ತಲೂ ಜಗದ್ವಿಖ್ಯಾತವಾಗಿರುವ ರಾಜಪುತ್ರಸ್ಥಾನಗಳು ಅನೇಕ ವಾಗಿರುವವು. ಈ ಪರ್ವತದ ಈಶಾನ್ಯದಲ್ಲಿ 'ಅಲ್ವಾರ', 'ಭರತಪುರ', ಸಂಸ್ಥಾನಗಳೂ, ಪೂರ್ವದಲ್ಲಿ ಜಯಪುರ, ಬುಂದೀರಾಜ್ಯಗಳೂ, ಆಗ್ನೇಯ ಭಾಗದಲ್ಲಿ ಸುಪ್ರಸಿದ್ಧವಾದ ಉದಯಪುರ, ಸಂಸ್ಥಾನವೂ, ವಾಯವ್ಯಭಾಗದಲ್ಲಿ ಬಿಕಾನೇರರಾಜ್ಯವೂ, ಪಶ್ಚಿಮಭಾಗದಲ್ಲಿ ಜೋಧ್ಪುರಸಂಸ್ಥಾನವೂ ಈ ಪರ್ವತಕ್ಕೆ

ಸ್ವಲ್ಪ ದೂರದಲ್ಲಿಯೇ ಇರುವುವು. ಉದಯಪುರ, ರೂಪನಗರವೇ ಮೊದಲಾದ ಕೆಲವು ಪಟ್ಟಣಗಳು ಪರ್ವತದ ಮಧ್ಯಭಾಗದಲ್ಲಿಯೇ ಕಟ್ಟಲ್ಪಟ್ಟಿರುವುವು. ಹೀಗೆ ಈ ಪರ್ವತವು ರಾಜಪುತ್ರಸ್ಥಾನಗಳೆಲ್ಲಕ್ಕೂ ಯಾವುದಾದರೂ ಒಂದು ಪಕ್ಕದಲ್ಲಿ ಸೇರಿಕೊಂಡಿರುವುದರಿಂದ ಆಯಾ ರಾಜ್ಯದ ಅಧಿಪತಿಗಳಿಗೂ, ಪ್ರಜೆಗಳಿಗೂ ಈ 'ಆರಾವಲಿ' ಪರ್ವತದ ವಿಷಯದಲ್ಲಿ ಅಭಿಮಾನವು ವಿಶೇಷವಾಗಿರುವುದು. ಇಷ್ಟೇ ಅಲ್ಲದೆ, ಜನಗಳಿಗೆ ಉಪಯುಕ್ತವಾದ ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ, ಉಕ್ಕು ಮೊದಲಾದ ಲೋಹಗಳನ್ನೂ, ತಿನ್ನುವುದಕ್ಕೆ ಯೋಗ್ಯವಾದ ನಾನಾವಿಧವಾದ ಹಣ್ಣುಗಳನ್ನೂ, ಇಂಧನ, ಜೇನುತುಪ್ಪ ಮೊದಲಾದ ಪದಾರ್ಥಗಳನ್ನೂ, ಆರಾವಲಿಯೇ ಕೊಡುತ್ತಿರುವುದು. ಹೀಗೆ ಜನರಿಗೆ ಬೇಕಾದ ಮುಖ್ಯ ದ್ರವ್ಯಗಳನ್ನೆಲ್ಲಾ ಕಾಮಧೇನುವಿನಂತೆ ಕೊಡುತ್ತಿರುವ ಆರಾವಲಿಯನ್ನು, ಅವರು ಇಷ್ಟದೇವತೆಯೆಂದೇ ಪೂಜಿಸುತ್ತಿದ್ದರೆಂದರೆ ಆಶ್ಚರ್ಯವೇನು ?

ರಾಜಪುತ್ರರೆಲ್ಲರಿಗೂ ಈ ಪರ್ವತದ ಮೇಲೆ ಅತ್ಯಂತ ಅಭಿಮಾನವಿರುವುದಕ್ಕೆ ಮತ್ತೊಂದು ಕಾರಣವೆಂದರೆ:— ರಾಜಪುತ್ರರ ಆನುಪೂರ್ವಿಕವಾದ ಪುಣ್ಯಚರಿತ್ರೆಗಳನ್ನೂ, ಅವರ ಶೌರ್ಯ ಸಾಹಸಗಳನ್ನೂ ಅವರಲ್ಲಿ ಬೇರುಗೊಂಡಿದ್ದ ದೇಶಭಕ್ತಿಯನ್ನೂ ಹೊಗಳುವ ಭಟ್ಟರಾಜನೆಂದೇ ಇದಕ್ಕೆ ಹೇಳಬಹುದು. ರಾಜಪುತ್ರರ ಅನನ್ಯ ಸಾಮಾನ್ಯಕ್ಷಾತ್ರತೇಜದಿಂದ ಪ್ರಕಾಶಿಸುವ ಕಥಾನಕಗಳನ್ನೂ, ತಮ್ಮ ಸ್ವದೇಶ, ಸ್ವಧರ್ಮಗೌರವಗಳನ್ನು ಸಂರಕ್ಷಿಸುವುದಕ್ಕಾಗಿ, ಹೂವಿನ ಚಂಡಿನಂತೆ ತಮ್ಮ ಶಿರಗಳನ್ನು ರಣದೇವತೆಗೊಪ್ಪಿಸಿದ ಅದ್ಭುತಚರಿತ್ರರಾದ ವೀರಪುರುಷರ ಪ್ರಭಾವಗಳನ್ನೂ, 'ಶರಣ' ಎಂದೊಡನೆಯೇ

ತಮ್ಮ ದೀರ್ಘಶತ್ರುವಾಗಿದ್ದರೂ ಅಂತಹರನ್ನು ಕ್ಷಮಿಸಿ, ರಕ್ಷಿಸಿದ ಕ್ಷತ್ರಿಯ ಮಹಾಪುರುಷರ ಔದಾರ್ಯ ಗುಣವನ್ನೂ ಆ ಪರ್ವತದಲ್ಲಿರುವ ಗಿಡಮರಗಳೂ, ಗುಡ್ಡಗಳೂ, ಕಣಿವೆಗಳೂ ಘಂಟಾಘೋಷದಿಂದ ಹೇಳುತ್ತಿದ್ದುವು.

"ಇದಾವ ಸ್ಥಲವು? ಇದು ಬಪ್ಪಾರಾವಲ್, ಪಾರ್ವಾರ್ ವಂಶಜರನ್ನು ಗೆದ್ದ ಸ್ಥಲವು. ಇದಾವ ಪ್ರದೇಶವು? ಇದು ರಾಣಾ ಮಹಮ್ಮದೀಯರನ್ನು ೨೪ ಸಲ ಓಡಿಸಿದ ಪ್ರದೇಶವು- ಇದೆಂತಹ ಸ್ಥಲವು? ಇದೇ ಕುತುಬುದ್ದೀನನು ಓಡಿಹೋದ ಸ್ಥಲವು. ಇದೇ ಅಲ್ಲಾಉದ್ದೀನನನ್ನು ಮೋಸಪಡಿಸಿದ ಸ್ಥಲವು. ಇದು ರಾಣಾಪ್ರತಾಪಸಿಂಹನ ೧೦೦೦೦ ಸೈನಿಕರು ತಮ್ಮ ರಾಜನಿಗಾಗಿ ಪ್ರಾಣವನ್ನರ್ಪಿಸಿದ ಸ್ಥಲವು."

ಹೀಗೆಯೇ ಆ ಪರ್ವತಪ್ರಾಂತ್ಯದಲ್ಲಿ ಹೋಗಿ ಬರುವಾಗಲೆಲ್ಲ ರಾಜಪುತ್ರರು ಪರಸ್ಪರ ಹೇಳಿಕೊಳ್ಳುತ್ತಾ ರೋಮಾಂಚಿತಗಾತ್ರರಾಗುತ್ತಿರುವರು. ಈ ಪರ್ವತ ಪ್ರದೇಶವು ರಾಜಪುತ್ರರಿಗೆ ಬಲವಾದ ಕೋಟೆಯಂತಿರುವುದು. ರಾಜಪುತ್ರ ಸೈನ್ಯವು ಆ ಪರ್ವತವನ್ನು ಪ್ರವೇಶಿಸಿದ ಕೂಡಲೇ ಎಲ್ಲಿ ಹೋಯಿತೆಂಬುದನ್ನು ತಿಳಿವುದಕ್ಕಾಗಲಿ, ಅವರೊಡನೆ ಯುದ್ಧಮಾಡುವುದಕ್ಕಾಗಲೀ ಎಂತಹ ಪ್ರಬಲಶತ್ರುವಿಗಾದರೂ ಅಸಾಧ್ಯವು. ಒಂದು ವೇಳೆ, ಶತ್ರುಸೈನ್ಯವು ರಾಜಪುತ್ರರನ್ನು ಹಿಮ್ಮೆಟ್ಟಿಸಿ, ಪರ್ವತಾರಣ್ಯಪ್ರದೇಶವನ್ನು ಪ್ರವೇಶಿಸಿದುದಾದರೆ, ಅವರು ಅಲ್ಲಿಂದ ಹಿಂತಿರುಗಿ ಬರುವುದು ದುಸ್ಸಾಧ್ಯವೇಸರಿ. ಅಲ್ಲಿಯ ಪರ್ವತಮಾರ್ಗಗಳೂ, ಕಣಿವೆಯ ದಾರಿಗಳೂ, ಸರ್ವದಾ ಆ ಪರ್ವತಪ್ರಾಂತದಲ್ಲಿ ವಾಸಮಾಡುತ್ತಿದ್ದ ರಾಜಪುತ್ರರಿಗೂ ಅವರ ಸೇವಕರಾದ ಭಿಲ್ಲರಿಗೂ ಮಾತ್ರವೇ ತಿಳಿಯುತ್ತಿದ್ದಿತೇ ಹೊರತು, ಮತ್ತಾರಿಗೂ

ತಿಳಿಯುತ್ತಿರಲಿಲ್ಲ. ಈ ಕಾರಣದಿಂದಲೇ ಮೊಗಲರು ಅನೇಕ ಸಲ ಬೆನ್ನಟ್ಟಿ ಬಂದು, ಈ ಪರ್ವತದ ಕಣಿವೆದಾರಿಯಲ್ಲಿ ಸಿಕ್ಕಿ ಬಾಧೆಪಟ್ಟರು. ಆದರೂ ಅಧರ್ಮ ಯುದ್ಧವನ್ನು ಮಾಡಕೂಡ ದೆಂಬುದು ರಾಜಪುತ್ರರ ಪ್ರತಿಜ್ಞೆಯಾದುದರಿಂದ ಶತ್ರುಗಳು ಹೀಗೆ ಸಿಕ್ಕಿ ಬಾಧೆಪಡುತ್ತಿರುವಾಗ 'ಶರಣು' ಎಂದೊಡನೆಯೇ ಅವರನ್ನು ಮನ್ನಿಸಿಬಿಡುತ್ತಿದ್ದರು. ಎಷ್ಟುದೂರ ಹೇಳಿದರೂ ಹೇಳುತ್ತ ಹೋಗಬಹುದು. ರಾಜಪುತ್ರರ ಸದ್ಗುಣ ವೈಭವಾದಿ ಗಳಿಗೆ ಮೇರೆಯೇ ಇರುವುದಿಲ್ಲವಾದುದರಿಂದ ಕೇವಲ ವರ್ಣನೆ ಮಾಡುವುದರಲ್ಲಿಯೇ ನಮ್ಮ ಕಾಲವನ್ನು ಕಳೆಯಬಾರದಲ್ಲವೆ? (ವಾಚಕರೇ ಕ್ಷಮಿಸಿರಿ, ಇನ್ನು ಇತ್ತ ಬನ್ನಿರಿ. ಆರಾವಲಿಯ ಮೇಲೆಯೇ ಕುಳಿತಿದ್ದರೆ ಸಾಗುವಂತಿಲ್ಲ. ಇನ್ನು ನಮ್ಮ ಕಥಾ ಭಾಗಕ್ಕೆ ಹೆಚ್ಚು ಸಂಬಂಧವುಳ್ಳ ಆಬೂಪರ್ವತವನ್ನು ಗಮ ನಿಸುವ.)

ಆಬೂ ಪರ್ವತವು ಆರಾವಳಿಯ ಒಂದು ಭಾಗವು. ಅಣ್ಣತಮ್ಮಂದಿರಂತೆ ಎರಡು ಪರ್ವತಗಳೂ ಪರಸ್ಪರ ಸಮೀಪ ವಾಗಿಯೇ ಇರುವುವು. ಮುಖ್ಯ ಪರ್ವತಕ್ಕೂ ಆಬೂ ಪರ್ವತಕ್ಕೂ ನಡುವೆ ೧೨ ಮೈಲಿಗಳ ಉದ್ದವಿರುವ ಅಗಾಧವಾದ ಕಣಿವೆಯ ದಾರಿಯೊಂದಿರುವುದು. ಆರಾವಲಿ ಪರ್ವತದಲ್ಲಿ ಹುಟ್ಟಿದ ಒಂದು ನದಿಯು ಈ ಕಣಿವೆಯಲ್ಲಿ ಹರಿದು ಬರುವುದು. ದಕ್ಷಿಣ ಹಿಂದುಸ್ಥಾನದಲ್ಲಿ ನೀಲಗಿರಿ, ಮಹಾಬಲೇಶ್ವರಗಳು ಹೇಗೆ ಆರೋಗ್ಯಸ್ಥಾನವೆಂದು ಹೆಸರು ಗೊಂಡಿವೆಯೋ, ಹಾಗೆಯೇ ಆಬೂಪರ್ವತವೂ ರಾಜಪುತ್ರ ಸ್ಥಾನಕ್ಕೂ, ಗುಜರಾತಿಗೂ ಆರೋಗ್ಯಸ್ಥಾನವೆಂದು ಗಣಿಸ

ಲ್ಪಟ್ಟಿರುವುದು. ಈ ಪರ್ವತದ ಮೇಲೆ ಸುಂದರವಾದ ಅನೇಕ ದೇವಾಲಯಗಳೂ, ಜೈನಮಂದಿರಗಳೂ ಇರುವುವು.

ನಮಗೆ ತಿರುಪತಿ, ಯದುಗಿರಿ ಮೊದಲಾದುವು ಹೇಗೆ ಪವಿತ್ರ ಕ್ಷೇತ್ರಗಳಾಗಿರುವುವೋ, ಹಾಗೆ ಉತ್ತರ ಹಿಂದು ಸ್ಥಾನದವರಿಗೆ ಆಬೂಪರ್ವತವೂ ಪವಿತ್ರ ಕ್ಷೇತ್ರವಾಗಿರುವುದು. ಪೂರ್ವದಲ್ಲಿ ದೇವತೆಗಳಿಗೂ, ಮಹರ್ಷಿಗಳಿಗೂ ಹಿಮಾಲಯವು ಮೊದಲನೆಯ ಸ್ಥಾನವಾಗಿತ್ತೆಂದೂ, ಆಬೂಪರ್ವತವು ಎರಡನೆಯ ಸ್ಥಾನವಾಗಿತ್ತೆಂದೂ ಹೇಳುವರು. ಅಷ್ಟೇ ಅಲ್ಲ; ಹಿಮಾಲಯದಲ್ಲಿ ವಸಿಸುವ ಶಿವನೂ, ಆತನ ಗಣಗಳೂ ವಿಹಾರಾರ್ಥವಾಗಿ ಬಂದು ಅಡಿಗಡಿಗೆ ಆಬೂಪರ್ವತದ ಮೇಲೆ ವಿಹರಿಸುತ್ತಿದ್ದರೆಂದೂ, ಕಲಿಮಹಿಮಾ ಪ್ರಾಬಲ್ಯದಿಂದ, ಅವರತ್ತ ಬರುವುದನ್ನು ನಿಲ್ಲಿಸಿದರೆಂದೂ, ಅವರ — ಎಂದರೆ, ರಾಜಪುತ್ರಸ್ಥಾನದವರ ನಂಬಿಕೆಯಾಗಿದೆ. ಇದರ ವಿಷಯವಾಗಿ ಅವರು ಅನೇಕ ಕಥೆಗಳನ್ನೂ ಹೇಳಿಕೊಳ್ಳುತ್ತಿರುವರು. (ಅದಕ್ಕೆ ಸಂಬಂಧಿಸಿದ ಒಂದು ಕಥೆಯೇ ಈ ಮುಂದೆ ವಿವರಿಸಲ್ಪಡುವುದು.)

ತ್ರೇತಾಯುಗದಲ್ಲಿ ಈ ಪರ್ವತದ ಮೇಲೆ ಶಿವಭಕ್ತಿಪರಾಯಣರಾದ ಋಷಿಗಳು ತಪಸ್ಸುಮಾಡುತ್ತಿದ್ದರು. ಈ ಋಷಿಗಳೆಲ್ಲರಿಗೂ ಭಗವಾನ್ ವಸಿಷ್ಠರು ಕುಲಪತಿಗಳಾಗಿದ್ದರು. ಇವರು, ಸೂರ್ಯೋದಯಕ್ಕೆ ಮೊದಲೇ ಎದ್ದು, ಅಘಮರ್ಷಣಸ್ನಾನವನ್ನು ಮಾಡಿ, ಸ್ವಾಧ್ಯಾಯ, ಬ್ರಹ್ಮಯಜ್ಞ, ಪಿತೃತರ್ಪಣ, ಯಜನ, ಯಜ್ಞ, ಜಪತಪಾದಿ ಪವಿತ್ರತಮಗಳಾದ ನಿತ್ಯಕರ್ಮಗಳನ್ನು ನೆರವೇರಿಸಿ, ಆ ಕಾಮಧೇನುವಿನ ಅಮೃತೋಪಮವಾದ ಹಾಲನ್ನು ಕುಡಿದು, ದೇಹಪೋಷಣ ಮಾಡಿಕೊಳ್ಳುವುದು

ಆ ಋಷಿಪುಂಗವರ ನಿತ್ಯಕರ್ಮಾನುಷ್ಠಾನವಾಗಿದ್ದಿತು. ಆದುದರಿಂದಲೇ ಆ ಕಾಲದಲ್ಲಿ ಶಾಂತಿಯೂ, ಬ್ರಹ್ಮತೇಜಸ್ಸೂ, ಸತ್ವಗುಣಪ್ರಭಾವವೂ ಆ ಪರ್ವತದಲ್ಲೆಲ್ಲಿ ನೋಡಿದರೂ ಕಾಣಬರುತ್ತಿದ್ದುವು. ಮೃಗ-ಪಕ್ಷಿಜಾತಿಗಳೆಲ್ಲವೂ, ಜಾತಿವೈಷಮ್ಯವನ್ನು ಬಿಟ್ಟು, ಪರಮ ಪಾವನ ಶಾಂತಿಕ್ಷೇತ್ರವಾದ ಈ ಸ್ಥಳದಲ್ಲಿ ಪರಸ್ಪರಾನುರಾಗದಿಂದ ವರ್ತಿಸುತ್ತಿದ್ದುದನ್ನು ನೋಡಿ, ಅಲ್ಲಿಯ ತಪಸ್ವಿಗಳೂ, ತಪಸ್ವಿನಿಯರೂ, ತಾಪಸ ಕನ್ಯೆಯರೂ ಆನಂದಪಡುತ್ತಿದ್ದರು. ಇದರ ಮೇಲೆ, ಅಲ್ಲಿಯ ಶಾಂತತೆಯನ್ನು ನೋಡಿ ನಲಿವೇರಿ ಶಂಕರಾದಿ ದೇವತೆಗಳು ಕೂಡ, ಅಲ್ಲಿಗೆ ಬಂದು ಅಲ್ಲಿಯ ನಿವಾಸಿಗಳ ಆನಂದ ಸಂಭ್ರಮಗಳನ್ನು ಮೇಲೆ ಮೇಲೆ ಹೆಚ್ಚಿಸುತ್ತಿದ್ದರು.

ಹೀಗಿರಲು ಒಂದಾನೊಂದು ದಿನ ಮೇಯುವುದಕ್ಕೆ ಹೋಗಿದ್ದ ಕಾಮಧೇನುವು ಹಳ್ಳದಲ್ಲಿ ಕಾಲುಜಾರಿ ಬಿದ್ದು ಬಿಟ್ಟುದು. ಆ ಹಳ್ಳವು ಆಳವಾಗಿದ್ದುದರಿಂದ ಇನ್ನು ತಮಗೆ ಧೇನುವು ಲಭಿಸಲಾರದೆಂದು ಋಷಿಗಳು ಚಿಂತಾಕ್ರಾಂತರಾಗಿ, ಕಾಮಧೇನು ಧ್ಯಾನದಲ್ಲಿಯೇ ಇದ್ದರು. ಇವರ ತಪಃಪ್ರಭಾವದಿಂದ ಸ್ವಲ್ಪ ದಿನಗಳಲ್ಲಿಯೇ ಆ ಹಳ್ಳದಲ್ಲಿ ಗಂಗಾದೇವಿ ಉದ್ಭವಿಸಿ, ಕಾಮಧೇನುವನ್ನು ಮೇಲಕ್ಕೆ ತಂದು, ಋಷಿಗಳಿಗೆ ಒಪ್ಪಿಸಿದಳು. ಮುಂದೆ ಇಂತಹ ಸಂಕಟ ಉಂಟಾಗದಿರಬೇಕೆಂದು ಭಗವಾನ್ ವಸಿಷ್ಠರು ಆ ಹಳ್ಳವನ್ನು ಮುಚ್ಚಿಸಬೇಕೆಂದು ಶಿವನನ್ನು ಪ್ರಾರ್ಥಿಸಿದರು. ಭಕ್ತಪರಾಧೀನನಾದ ಶಿವನು ಭಕ್ತಾಗ್ರಗಣ್ಯರಾದ ವಸಿಷ್ಠರ ಪ್ರಾರ್ಥನೆಯನ್ನು ಮನ್ನಿಸಿ, ಹಿಮಾಲಯದ ಕುಮಾರರೆಲ್ಲರನ್ನೂ ಬಳಿಗೆ ಕರೆದು— “ಅಬೂಪರ್ವತದ ವಸಿಷ್ಠಾಶ್ರಮದಲ್ಲಿರುವ ಹಳ್ಳದಲ್ಲಿ ವಾಸಮಾಡಲು ನಿಮ್ಮಲ್ಲಿ

ಆರಾದರೂ ಒಪ್ಪುವಿರೋ? ಎಂದು ಕೇಳಲು, ಕುಮಾರರಲ್ಲಿ ಒಬ್ಬರೂ ಒಪ್ಪದೆ ಹೋದರು. ಆದರೆ, ಅವರಲ್ಲಿ ಕಡೆಯವನು ಕುಂಟನಾಗಿದ್ದುದರಿಂದ ತನ್ನ ಅಣ್ಣಂದಿರೊಡನೆ ವಿಹರಿಸುವುದಕ್ಕೆ ಶಕ್ತಿಯಿಲ್ಲವೆಂದೂ, ಹಳ್ಳದಲ್ಲಿ ಸುಖವಾಗಿರಬಹುದೆಂದೂ ಯೋಚಿಸಿ, ತಾನು ಅಲ್ಲಿಗೆ ಹೋಗುವೆನೆಂದು ಒಪ್ಪಿದನು. ಈ ಮಾತಿಗೆ ಶಿವನು ಸಂತೋಷಪಟ್ಟು, ಅವನ ಸಹಾಯಕ್ಕಾಗಿ ತಕ್ಷಕನನ್ನು ಕಳುಹಿದನು. ಆ ಕುಂಟ ಪರ್ವತವು ಕೂಡಲೇ ತಕ್ಷಕನ ಮೇಲೇರಿ, ಹೊರಟು ಬಂದು ವಸಿಷ್ಠಾಶ್ರಮವನ್ನು ಹೊಕ್ಕು, ಶಿಷ್ಯರೊಡನೆ ಆ ಋಷಿ ಪುಂಗವನಿಗೆ ನಮಸ್ಕರಿಸಿ, ಆ ಹಳ್ಳದೊಳಕ್ಕೆ ಧುಮ್ಮಿಕ್ಕಿತು. ಕುಂಟಾಗಿದ್ದುದರಿಂದಲೂ, ಮತ್ತು ವಿಶಾಲವಾಗಿದ್ದುದರಿಂದಲೂ, ಗಾಳಿ ಬಂದಾಗ ನಡಗುತ್ತಾ ಅತಿಯಾಗಿ ವ್ಯಸನ ಪಡುತ್ತಿದ್ದಿತು. ಇದನ್ನು ಕಂಡ ಋಷಿಗಳು ಇದೊಂದು ಸಂಕಟವು ಪ್ರಾಪ್ತವಾಯಿತೆಂದು ಭೀತರಾಗಿ, ಮತ್ತೆ ಪಾರ್ವತೀಪತಿಯನ್ನು ಪ್ರಾರ್ಥಿಸಿದರು. ಕಾಮಿತಾರ್ಥಪ್ರದನಾದ ಶಿವನು, ಪರ್ವತವನ್ನು ಚಲಿಸದಂತೆ ಮಾಡಿ, ಪರ್ವತದ ಮತ್ತು ಋಷಿಗಳ ಸಂಕಟಗಳನ್ನು ಪರಿಹರಿಸಿ ಅನುಗ್ರಹಿಸಿದನು. ಶಿವಾನುಗ್ರಹ ಪ್ರಭಾವದಿಂದ ಅಚಲತೆಯನ್ನು ಹೊಂದಿದ ಬಳಿಕ ಆ ಪರ್ವತದ ಮೇಲೆ ಋಷಿಗಳು ದೇವಾಲಯವನ್ನು ಕಟ್ಟಿಸಿ, ಅಲ್ಲಿಯ ಅಚಾರ್ಯ ರೂಪಿಯಾದ ದೇವರಿಗೆ 'ಅಚಲೇಶ್ವರ' ನೆಂದು ಹೆಸರಿಟ್ಟರು.

ಈ ಪರ್ವತದ ಮೇಲೆ ಒಂದು ಸೊಗಸಾದ ಭಾವಿಯಿರುವುದು. ಇದಕ್ಕೆ 'ನಖಿ' ಎಂದು ಹೆಸರು. ಪೂರ್ವದಲ್ಲಿ ಮಹಿಷಾಸುರನು ದೇವತೆಗಳನ್ನು ಬಾಧಿಸುತ್ತಿರಲು ಅವನ ಬಾಧೆಯನ್ನು ತಡೆಯಲಾರದೆ ದೇವತೆಗಳು ಈ ಪರ್ವತಕ್ಕೆ

ಬಂದು ತಮ್ಮ ನಖಗಳಿಂದ ಒಂದು ದೊಡ್ಡ ಹಳ್ಳವನ್ನು ತೋಡಿ, ಅಲ್ಲಿ ರಹಸ್ಯವಾಗಿದ್ದರು. ಹೀಗೆ ನಖಗಳಿಂದ ಮಾಡಲ್ಪಟ್ಟ ಈ ದೊಡ್ಡ ಭಾವಿಗೆ 'ನಖಿ' ಎಂದು ಹೆಸರು ಬಂದಿರುವುದಂತೆ! ಹೀಗೆಯೇ ಇನ್ನೂ ಆ ಪರ್ವತದಲ್ಲಿಯ ದೇವಸ್ಥಾನದ ಮೇಲೆಯೂ, ಗೋಪುರಗಳ ಮೇಲೆಯೂ, ಹಳ್ಳಗಳ ಮೇಲೆಯೂ, ಆ ದೇಶದ ಜನರು ಅನೇಕ ವಿಧವಾಗಿ ಕಥೆಗಳನ್ನು ಹೇಳಿ ಕೊಳ್ಳುತ್ತಿರುವರು. ಈ ಪೌರಾಣಿಕ ಕಥೆಗಳು ನಿಜವೋ ಸುಳ್ಳೋ ಎಂದು ವಿಚಾರಮಾಡುವುದು ನಮ್ಮ ಕೆಲಸವಲ್ಲ. ಅಲ್ಲಿಯವರಿಂದ ಆ ಪರ್ವತವು ಪವಿತ್ರಸ್ಥಲವೆಂದು ಭಾವಿಸಲ್ಪಡುವುದೆಂಬುದಕ್ಕೆ ಮೇಲಿನ ಕಥೆಗಳೇ ದೃಷ್ಟಾಂತವೆಂದರೆ ಸಾಕು.

ಆಬೂ ಪರ್ವತದಲ್ಲಿ ಅಷ್ಟರ ಅದ್ಭುತ ಶಕ್ತಿಯಿರಲು, ಅದರಲ್ಲಿ ತೋರುತ್ತಿರುವ ಸೃಷ್ಟಿಯ ನೈಸರ್ಗಿಕ ಸೌಂದರ್ಯವೊಂದೇ ಸಾಕು. ಈ ಪರ್ವತ ಶಿಖರವು ೫೬೮೩ ಅಡಿ ಎತ್ತರವಿರುವುದು. ಇಲ್ಲಿಗೆ ರಾಜಪುತ್ರ ಸಂಸ್ಥಾನವೆಲ್ಲವೂ ಸರಿಯಾಗಿ ಕಾಣುವುದು. ಕೆಳಗಡೆಯಲ್ಲಿರುವ ಆರಾವಲೀ ಪರ್ವತಪರಂಪರೆಯ ಗುಹೆಗಳೂ, ಕಣಿವೆಗಳೂ, ಅರಣ್ಯಗಳೂ, ಭಿಲ್ಲರ ನಿವಾಸಸ್ಥಳಗಳೂ, ಸ್ವಾದೋದಕ ಪರಿಪೂರ್ಣವಾದ ಗಿರಿ ನದಿಗಳೂ, ಸಂರಕ್ಷಕ ಭಟರಂತೆ ಆ ಪರ್ವತದ ಸುತ್ತಲಿರುವ ಚಿತೋರ್, ಉದಯಪುರ, ಜೋಢ್ಪುರ, ರೂಪನಗರ, ಬುಂದಿ ಮೊದಲಾದ ಕ್ಷಾತ್ರ ತೇಜೋವಿರಾಜಿತಗಳಾದ ದುರ್ಗಗಳೂ, ಏಕಕಾಲದಲ್ಲಿ ಗೋಚರಿಸುತ್ತಾ ಭೂದೇವಿಯ ಸೌಭಾಗ್ಯ ಸಂಪತ್ತಿಯೆಲ್ಲವೂ ಏಕೀಭವಿಸಿದಂತೆ ಕಾಣುತ್ತಿರುವುವು. ಇಂತಹ ಅಪ್ರತಿಮ ಸೃಷ್ಟಿಸೌಂದರ್ಯದಿಂದ ಪ್ರಕಾ

ತಿಸುತ್ತಿರುವ ಈ ಪರ್ವತ ಪ್ರದೇಶವನ್ನು ದೇವಭೂಮಿಯೆಂದು ಹೇಳುವುದರಲ್ಲಿ ಆಶ್ಚರ್ಯವೇನು ?

ಇರಲಿ, ಪ್ರಸ್ತುತದ ಕಥಾನಕವು ನಡೆಯುತ್ತಿದ್ದ ಕಾಲದಲ್ಲ ಆ ಪರ್ವತದ ಮೇಲೆ ಒಬ್ಬ ಯೋಗಿಯು ವಾಸಮಾಡಿಕೊಂಡಿದ್ದನು. ಆತನ ಹೆಸರು "ವೈಕುಂಠಯೋಗಿ." ಆ ಪರ್ವತದ ಮೇಲೆ ಯೋಗಾಭ್ಯಾಸ ಮಾಡುತ್ತಿದ್ದವರೆಲ್ಲರಿಗೂ ಆತನೇ ಗುರುವಾಗಿದ್ದನು. ಅಲ್ಲಿಯ ಜನರೂ, ರಾಜಪುತ್ರಸ್ಥಾನದ ಸಮಸ್ತ ರಾಜಪುಂಗವರೂ ಈತನನ್ನು ಸಾಕ್ಷಾತ್ ಭಗವಾನ್ ವಸಿಷ್ಠಮಹರ್ಷಿಯ ಅಂಶಾವತಾರವೆಂದೇ ನಂಬಿ ಭಕ್ತಿಯುತರಾಗಿ, ತಮಗೆ ಎಂತಹ ಆಪತ್ತು ಪ್ರಾಪ್ತವಾದರೂ ಈತನಲ್ಲಿ ಹೇಳಿಕೊಳ್ಳುತ್ತ, ಈತನಿಂದ ಉಪದಿಷ್ಟಗಳಾದ ಸದುಪಾಯಗಳನ್ನು ಸಂಗ್ರಹಿಸಿ ಅದರಂತೆ ನಡೆಯುತ್ತಿದ್ದರು. ಈತನು ತನ್ನ ಸದ್ಭಾವನಾಯೋಗ ಬಲದಿಂದ ಭೂತ - ಭವಿಷ್ಯತ್ - ವರ್ತಮಾನ ವಿಚಾರಗಳನ್ನು ತಿಳಿದು ರಾಜಪುತ್ರಕುಲಕ್ಕೂ, ಹಿಂದೂ ಸಮಾಜಕ್ಕೂ ಯವನರ ದೆಸೆಯಿಂದಾಗಬಹುದಾದ ಅಪಾಯಗಳಿಂತಹವೆಂದು ಮುಂದಾಗಿ ಸೂಚಿಸಿ, ಅವರನ್ನು ಜಾಗ್ರತರನ್ನಾಗಿ ಮಾಡುತ್ತಿದ್ದನು. ಈತನ ಅನಿಮಿತ್ತ ದೈವಿಕಪ್ರೇಮದ ಸಹಾಯದಿಂದಲೇ ರಾಜಪುತ್ರರ ಸ್ವಾತಂತ್ರ್ಯಕ್ಕೆ ಅಪ್ರತಿಹತವಾದ ಉತ್ಸಾಹವುಂಟಾಗುತ್ತಿದ್ದಿತು.

ಈ ಯೋಗಿಪುಂಗವನು ೭೦ ವರ್ಷದ ತನ್ನ ಮಾನವ ಜೀವಿತದ ವಾರ್ಧಕಾವಸ್ಥೆಯಲ್ಲಿಯೂ ಪ್ರಬುದ್ಧಮಾನವಾದ ಕಾಯಶಕ್ತಿ, ಕಾಂತಿ, ವಕ್ತೃತೆಗಳಲ್ಲಿ ತರುಣನಂತೆಯೇ ಇದ್ದನು. ಈತನು ಪಾದಚಾರಿಯಾಗಿ ಆ ಪರ್ವತಪ್ರಾಂತದಲ್ಲ

ಕೂಡ ನಡೆಯುತ್ತಿದ್ದ ವೇಗವನ್ನು ನೋಡಿದರೆ ಆರಿಗೇ ಆಗಲಿ ಆಶ್ಚರ್ಯವಾಗದಿರದು. ಈ ಯೋಗಿಪುಂಗವನಿಗೆ ಆ ಪರ್ವತ ನಿವಾಸಿಗಳಾದ ಭಿಲ್ಲರೂ, ಭಿಲ್ಲಾಂಗನೆಯರೂ ಶಿಷ್ಯರಾಗಿ ನಿತ್ಯವೂ ಕಂದಮೂಲ ಫಲಾದಿಗಳನ್ನು ತಂದೊಪ್ಪಿಸುತ್ತಿದ್ದರು.

ಈ ಯೋಗಿಯು ಸಾಧಾರಣವಾಗಿ ಅಚಲೇಶ್ವರಾಲಯ ದಲ್ಲಿಯೇ ತಪಸ್ಸುಮಾಡುತ್ತಿದ್ದನು. ಈತನ ಶಿಷ್ಯವರ್ಗಕ್ಕೆ ಸೇರಿದವರಲ್ಲಿ ಮುಖ್ಯರಾದ ನಾಲ್ವರು ಬೈರಾಗಿಗಳೂ ಈತನ ಅನುಗ್ರಹದಿಂದ ಯೋಗರಹಸ್ಯವನ್ನು ತಿಳಿದು ಗುಹೆಗಳಲ್ಲಿ ತಪಸ್ಸು ಮಾಡುತ್ತಿದ್ದರು.

ಈ ಯೋಗಿಯ ಪೂರ್ವ ವೃತ್ತಾಂತವು ಯಾರಿಗೂ ತಿಳಿ ಯದು. ಈತನು ಪುರಾಣಪುರುಷನೆಂದೇ ರಾಜಪುತ್ರರ ನಂ ಬಿಕೆ. ಈತನು ಬ್ರಾಹ್ಮಣನೋ, ಕ್ಷತ್ರಿಯನೋ ಎಂಬುದನ್ನು ವಿಚಾರಮಾಡಬೇಕೆಂಬ ಭಾವನೆಯು ಕೂಡ ಅವರಿಗಿರಲಿಲ್ಲ. ಏಕೆಂದರೆ, ಆತನ ಸಂದರ್ಶನಾರ್ಥವಾಗಿ ಬಂದ ಪಂಡಿತರೊ ಡನೆ ವೇದ-ವೇದಾಂತಾದಿ ಪರತತ್ವ ವಿಚಾರಗಳನ್ನು ವಿಮರ್ಶಿಸು ವುದರಿಂದಲೂ, ಸಂಶಯಗ್ರಸ್ತರನ್ನು ಸದುದಾಹರಣೆಗಳೊ ಡನೆ ಸಮಾಧಾನ ಪಡಿಸಿ, ಆತ್ಮಬೋಧೆಯನ್ನುಂಟು ಮಾಡು ವುದರಿಂದಲೂ ಈತನು, ಬ್ರಹ್ಮವೇತೃವಾದ ಮಹಾ ಪುರುಷ ನೆಂದು ಖಚಿತವಾಗಿ ಬೋಧೆಯಾಗುತ್ತಿದ್ದಿತು. ಇನ್ನಿದರ ಮೇಲೆ ಯೂ ವಿಚಾರಮಾಡಬೇಕಾದುದೇನು ? (ಇಷ್ಟಕ್ಕೆ ಅಚಲೇ ಶ್ವರ ವೈಕುಂಠಯೋಗಿಗಳ ಗುಣವೈಭವ ನಿರೂಪಣವು ಇಲ್ಲಿಗೆ ವಿರತಿಹೊಂದಲಿ.)

---

# ನಾಲ್ಕನೆಯ ಪ್ರಕರಣ.

"ದುರ್ಗಾದಾಸ! ನಾವು ಕಾಬುಲ್ ದೇಶವನ್ನು ಪ್ರವೇಶಿಸಿ, ಪ್ರಜಾಕಲಹವನ್ನು ನಿವಾರಿಸಿ, ಔರಂಗಜೇಬನ ಆಜ್ಞೆಯನ್ನು ನೆರವೇರಿಸಿದೆವು. ಇನ್ನು ನಾವಿಲ್ಲಿ ಮಾಡಬೇಕಾದ ಕಾರ್ಯವೇನಿದೆ?"

"ಮಹಾರಾಜ! ತಮಗೆ ಈ ಕೆಲಸವು ಒಂದು ಗಣನೆಯೇ?"

"ಅಯ್ಯಾ! ಸಕಲ ಸೈನ್ಯಗಳನ್ನೂ ವಶದಲ್ಲಿಟ್ಟುಕೊಂಡು, ಎಂತಹ ಆಪತ್ತುಗಳನ್ನಾದರೂ ತಪ್ಪಿಸಲು ಸಮರ್ಥನಾದ ನೀನಿರುವಲ್ಲಿ ನನಗಿದು ಗಣನೆಯುಲ್ಲವೆಂಬುದು ನಿಜವೇ!"

"ದೇವ! ಅದು ಹಾಗಿರಲಿ, ಔರಂಗಜೇಬನು ನಮ್ಮನ್ನು ಮೋಸಪಡಿಸುವುದಕ್ಕಾಗಿ ಇಲ್ಲಿಗೆ ಕಳುಹಿರುವನೆಂದು ನಾನು ಶಂಕಿಸುತ್ತಿರುವೆನು."

"ಹಾ! ಹಾಗೇಕೆ ಶಂಕಿಸುವೆ? ದುರ್ಗಾದಾಸ! ಆತನು ನನ್ನನ್ನು ಆತನ ತಂದೆಯಾದ ಷಹಜಹಾನನಂತೆಯೇ ಪ್ರೀತಿಸುತ್ತಿರುವನಲ್ಲಾ! ನನ್ನನ್ನು ಆವ ಅಪರಾಧಕ್ಕಾಗಿ ಮೋಸಪಡಿಸುವನೆಂದು ಶಂಕಿಸಬೇಕು?"

"ಯಶವಂತಮಹಾರಾಜಾ! ನೀವು ಇಷ್ಟುಬೇಗ ಮರೆತುಹೋದಿರೋ? ಷಹಜಹಾನನ ಕಾಲದಲ್ಲಿ ಆತನ ಅಪ್ಪಣೆಯಂತೆ ಔರಂಗಜೇಬನನ್ನು ಲಕ್ಷ್ಮಣಪುರಿಯ ಬಳಿ ಸೋಲಿಸಿ, ಓಡಿಸಲಿಲ್ಲವೆ? ಆತನಿಗೆ ಈ ವಿಷಯವು ಜ್ಞಾಪಕವಿಲ್ಲವೆಂದು ತಿಳಿದುಕೊಂಡಿರುವಿರೋ?

“ಪ್ರಭುಚಿತ್ತಾನುಸಾರವಾಗಿ ನಡೆಯಬೇಕಾದುದರಿಂದ ನಾನು ಆಗ ಹಾಗೆ ಮಾಡಿದೆನು. ಈ ಸಂಗತಿಯು ಔರಂಗಜೇಬನಿಗೆ ಗೊತ್ತಿಲ್ಲವೆ? ಇಂತಹ ವಿಷಯದಲ್ಲಿ ನನ್ನ ಮೇಲೆ ಮೋಸ ಬುದ್ಧಿಯನ್ನು ವಹಿಸುವನೆ? ಒಂದುವೇಳೆ ಔರಂಗಜೇಬನೇ ತನ್ನ ಮಗನ ಮೇಲೆ ಯುದ್ಧಕ್ಕೆ ಹೋಗೆಂದು ಆಜ್ಞಾಪಿಸಿದ್ದರೆ ಆ ಕಾರ್ಯವು ನನಗೆ ತಪ್ಪುತಿದ್ದಿತೆ? ರಾಜ್ಯಾಂಗವಿಚಾರವೆಲ್ಲವನ್ನೂ ತಿಳಿದು ರಾಜ್ಯಭಾರ ಮಾಡುತ್ತಿರುವ ಔರಂಗಜೇಬನು ಇಂತಹ ಅನ್ಯಾಯವನ್ನು ಮಾಡುವನೇ?”

“ರಾಜೇಂದ್ರ! ಒಬ್ಬರನ್ನು ಮೋಸಪಡಿಸಬೇಕೆಂದು ಪ್ರಯತ್ನಿಸುವವರು, ಇಷ್ಟು ನ್ಯಾಯಗಳನ್ನು ಆಲೋಚಿಸುವುದಿಲ್ಲ. ದುಷ್ಟರಿಗೆ ಯುಕ್ತಾಯುಕ್ತ ವಿವೇಕವೆಲ್ಲಿಯದು?”

ಮೇಲಿನ ಉತ್ತರ ಪ್ರತ್ಯುತ್ತರಗಳು ಯಶವಂತಸಿಂಹನಿಗೂ-ದುರ್ಗಾದಾಸನಿಗೂ ನಡೆಯುತ್ತಿದ್ದುವು. ಈ ವೇಳೆಗೆ ಯಶವಂತಸಿಂಹನು ಕಾಬೂಲನ್ನು ಜಯಿಸಿ, ಸುಸ್ಥಿತಿಗೆ ತಂದಿದ್ದನು.

ಯಶವಂತಸಿಂಹನು ಪ್ರಜಾಪರಿಪಾಲನೆಯಲ್ಲಿಯೂ, ರಾಜಕಾರ್ಯ ನಿರ್ವಹಣದಲ್ಲಿಯೂ ದಕ್ಷನಾಗಿದ್ದರೂ, ಆತನಿಗೆ ದೀರ್ಘಾಲೋಚನೆಯು ಅಷ್ಟಾಗಿರಲಿಲ್ಲ. ಷಹಜಹಾನನ ಆಡಳಿತದಲ್ಲಿ, ಆತನಿಗೆ ಈತನು ಸಾಮಂತರಾಜನಾಗಿ, ಪಾದಷನ ಅನುಗ್ರಹಕ್ಕೆ ಪಾತ್ರನಾಗಿದ್ದನು. ಔರಂಗಜೇಬನಿಗೆ ಈತನ ಮೇಲೆ ಅಸೂಯೆ ಹುಟ್ಟಲು ಇದೇ ಮೊದಲನೆಯ ಕಾರಣವು. ಷಹಜಹಾನನು ತನ್ನ ಮಗನಾದ ಔರಂಗಜೇಬನೊಡನೆ ವೈರವನ್ನು ಹೊಂದಿ, ಆತನನ್ನು ಅನೇಕಬಾರಿ ರಾಜ್ಯದಿಂದ ಓಡಿಸಿದ್ದನು. ಯಶವಂತಸಿಂಹನನ್ನು ಆತನ ಮೇಲೆ ಯುದ್ಧಕ್ಕೆ ಕಳುಹಲು, ಯಶವಂತಸಿಂಹನು, ಲಕ್ಷ್ಮಣಪುರಿಯ

ಬಳಿಯಲ್ಲಿ ಔರಂಗಜೇಬನನ್ನು ಸೋಲಿಸಿ, ಓಡಿಸಿದನು. ಈ ಕಾರಣದಿಂದ ಔರಂಗಜೇಬನಿಗೆ ಯಶವಂತಸಿಂಹನ ಮೇಲೆ ದ್ವೇಷವು ದ್ವಿಗುಣವಾಯಿತು. ತನ್ನ ತಂದೆಯು ಸಿಂಹಾಸನದ ಮೇಲಿರುವವರೆಗೂ ತನ್ನ ಕಾರ್ಯಗಳಾವುವೂ ಸಾಗುವುದಿಲ್ಲ ವೆಂದು ತಿಳಿದು ಸುಮ್ಮನಿದ್ದು ಸಮಯವನ್ನು ನಿರೀಕ್ಷಿಸುತ್ತಿದ್ದನು. ಕ್ರಮಕ್ರಮವಾಗಿ ಆತನು ತನ್ನ ತಂದೆಯನ್ನು ಪೋಸ ಪಡಿಸಿ ಸಿಂಹಾಸನಾಧಿಪತಿಯಾದಂದಿನಿಂದ ಯಶವಂತಸಿಂಹನ ಮೇಲೆ ಒಂದು ಕಣ್ಣನ್ನಿಟ್ಟೇ ಇದ್ದನು. ಆತನು ಸಿಂಹಾಸನವ ನ್ನೇರುವುದಕ್ಕೆ ಮೊದಲು ಷಹಜಹಾನನ ಹಿರಿಯ ಮಗನಾದ "ದಾರಾ" ಎಂಬುವನೊಡನೆ ಯಶವಂತಸಿಂಹನು ಸೇರಿ ಔರಂಗ ಜೇಬನನ್ನು ಸೋಲಿಸಿದ್ದುದರಿಂದ ಅವನಲ್ಲಿದ್ದ ದ್ವೇಷವು ದಿನ ದಿನಕ್ಕೂ ಹೆಚ್ಚುತ್ತಲೇ ಇದ್ದಿತು.

ಕೃತ್ರಿಮ ಸಂಧಾನಿಯಾದ ಔರಂಗಜೇಬನು ಪಟ್ಟಕ್ಕೆ ಬಂದ ಮೇಲೆ ದುರಾಲೋಚನೆಯಿಲ್ಲದ ಯಶವಂತಸಿಂಹನು ಔರಂಗಜೇಬನು ತನ್ನನ್ನು ಮೋಸಪಡಿಸುವನೆಂದು ತಿಳಿಯ ಲಾರದೆ, ಮೊದಲಿನಂತೆಯೇ ಸಾಮಂತರಾಜನಾಗಿ ಆತನನ್ನು ಸೇವಿಸುತ್ತಿದ್ದನು. ಯಶವಂತನಲ್ಲಿ ಪೂರ್ಣ ದ್ವೇಷಿಯಾಗಿ ದ್ದರೂ, ಯಶವಂತಸಿಂಹನ ಶೌರ್ಯ-ಧೈರ್ಯ - ಸಾಹಸಾದಿಗ ಳನ್ನು ಚೆನ್ನಾಗಿ ತಿಳಿದಿದ್ದ ಔರಂಗಜೇಬನು ಅನೇಕ ಯುದ್ಧಗ ಳಲ್ಲಿ ಆತನನ್ನೇ ಮುಂದೆಮಾಡಿ ಜಯವನ್ನು ಸಂಪಾದಿಸಿ ಕೊಳ್ಳುತ್ತ ಬಂದನು. ಹಠಾತ್ತಾಗಿ ಯಶವಂತಸಿಂಹನಿಗೆ ಏನಾ ದರೂ ಕೇಡಕುಮಾಡಿದರೆ ರಾಜಪುತ್ರರೆಲ್ಲರೂ ಒಟ್ಟಾಗಿ ತನ್ನ ಮೇಲೆ ಬೀಳುವರೆಂಬ ಭಯದಿಂದ ಆತನು ತಕ್ಕ ಉಪಾಯವನ್ನೇ ಯೋಚಿಸುತ್ತಿದ್ದನು. "ವಿರೋಧದಿಂದ ಒಬ್ಬ

ಳಿಗೆ ಹಾಲನ್ನು ಕುಡಿಯಿಸಲಾಗುವದಿಲ್ಲ; ಒಳ್ಳೆಯತನದಿಂದ ವಿಷವನ್ನಾದರೂ ಕುಡಿಸಬಹುದು.” ಎಂಬ ವಿಚಾರವನ್ನು ಅವನು ಚನ್ನಾಗಿ ಅರಿತಿದ್ದುದರಿಂದ, ಯಶವಂತಸಿಂಹನನ್ನು ಕುಟಿಲಮರ್ಯಾದೆಯಿಂದ ಗೌರವಿಸುತ್ತ, ಆತನಲ್ಲಿ ತಾನು ಅತ್ಯಂತ ಪ್ರೀತಿಯುಳ್ಳವನಂತೆ ನಟಿಸುತ್ತಿದ್ದನು. ಪಾಪ! ನಿಷ್ಕಪಟಿಯಾದ ಯಶವಂತಸಿಂಹನು ಈ ಮಾಯೆಯನ್ನರಿಯದೆ, ತನಗೆ ಮಾಡುವ ಮರ್ಯಾದೆಗಳೆಲ್ಲವೂ ನಿಜವಾದುದೆಂದೇ ನಂಬಿದ್ದನು. ಈತನ ಸೇನಾಪತಿಯಾದ ದುರ್ಗಾದಾಸನು ಔರಂಗಜೇಬನ ಕೃತ್ರಿಮಗಳನ್ನು ತಿಳಿದು, ಸಮಯ ದೊರೆತಾಗಲೆಲ್ಲಾ ಯಶವಂತಸಿಂಹನೊಡನೆ ಪಾದಷಹನ ಕೌರ್ಯಗಳನ್ನು ಕುರಿತು ವಿಚಾರಮಾಡುತ್ತಿದ್ದನು. ದುರ್ಗಾದಾಸನೆಂದರೆ, ಬುದ್ಧಿ ಚಾತುರ್ಯದಲ್ಲಿಯೂ, ಪರಾಕ್ರಮದಲ್ಲಿಯೂ, ರಾಜಪುತ್ರರೆಲ್ಲರಲ್ಲಿ ಹೆಸರುಗೊಂಡವನೇ ಸರಿ!

ಔರಂಗಜೇಬನು ಮೊದಲು ಮಹಮುದ್ ಅಮೀರ್ ಖಾನ್ ಎಂಬವನನ್ನು ತನ್ನ ಪ್ರತಿನಿಧಿಯನ್ನಾಗಿಮಾಡಿ, ಕಾಬೂಲಿಗೆ ಕಳುಹಿದನು. ಅಮೀರ್‌ಖಾನನು ೧೬೭೨ ನೆಯ ಇಸವಿಯಲ್ಲಿ ತನ್ನ ೪೦,೦೦೦ ಸೈನಿಕರೊಡನೆ ಕಾಬೂಲಿಗೆ ಹೋಗುತ್ತಿರುವಾಗ ಕೈಬರ್ ಕಣಿವೆಯಲ್ಲಿದ್ದ ಕಾಡುಜನರು ಅವರ ಮೇಲೆ ಶಿಲಾವೃಷ್ಟಿ (ಕಲ್ಲಿನಮಳೆ) ಯನ್ನು ಕರೆದು, ಅನೇಕರನ್ನು ಕೊಂದುಬಿಟ್ಟರು, ಆ ಯುದ್ಧದಲ್ಲಿ ಅಮೀರ್‌ಖಾನನು ಪೂರ್ಣವಾಗಿ ಅಪಜಯವನ್ನು ಹೊಂದಿದನು. ಈ ಸುದ್ದಿಯನ್ನು ಕೇಳಿದ ಕೂಡಲೇ ಪಾದಷಹನು ಯಶವಂತಸಿಂಹನನ್ನೇ ಸೇನಾಧಿಕಾರಿಯಾಗಿ ಮಾಡಿ, ಅಲ್ಪ ಸೈನ್ಯದೊಡನೆ ಆತ

ನನ್ನು ಕಳುಹಿದನು. ಯಶವಂತಸಿಂಹನನ್ನೇ ಯುದ್ಧಕ್ಕೆ ಕಳುಹಿದುದರ ಕಾರಣವು ಇಷ್ಟೇ! ಯಶವಂತಸಿಂಹನು ಕಾಬೂಲನ್ನು ಸೇರಿ, ದಂಗೆಯನ್ನಡಗಿಸಿದರೆ, ತನ್ನ ಕೋರಿಕೆಯಲ್ಲಿ ಅರ್ಧ ಫಲಿಸುವುದೆಂಬುದೂ ಒಂದು ವೇಳೆ ಯಶವಂತಸಿಂಹನೇ ಯುದ್ಧದಲ್ಲಿ ಮಡಿದರೆ ತನ್ನ ಕೋರಿಕೆಯು ಪೂರ್ಣ ಫಲವಾಗುವುದೆಂಬುದೂ ಔರಂಗಜೇಬನ ಮನೋಗತವಾಗಿದ್ದಿತು.

ಯಶವಂತನು ತಾನು ಕೈಕೊಂಡ ಕಾರ್ಯದಲ್ಲಿ ಕೀರ್ತಿಯನ್ನು ಹೊಂದುವಂತೆ ಕಾಬೂಲನ್ನು ಸೇರಿ, ದಂಗೆಯನ್ನು ಅಡಗಿಸಿ, ಜಯವನ್ನು ಸಂಪಾದಿಸಿಕೊಂಡನು. ಆದರೆ, ಹಿಂದು ಮುಂದಿನ ವಿಚಾರವನ್ನು ಆತನು ಹೇಗೆ ತಾನೇ ಊಹಿಸಿ ತಿಳಿಯಬಲ್ಲನು. ಜಯಶಾಲಿಯಾದೆನೆಂದು ಸಮಾಧಾನ ಚಿತ್ತನಾಗಿ, ದುರ್ಗಾದಾಸನೊಡನೆ ಮಾತನಾಡುತ್ತ ಶಿಬಿರದಲ್ಲಿ ಕುಳಿತಿದ್ದನು. ಅಷ್ಟರಲ್ಲಿಯೇ ಒಬ್ಬ ಮಹಮ್ಮದೀಯನು ಬಂದು- "ದಿಲ್ಲೀ ನಗರದಿಂದ ಅಲಂಘೀರ್ ಬಾದಷಹರು ಈ ಕಾಗದವನ್ನು ತಮಗೆ ಮುಟ್ಟಿಸಬೇಕೆಂದು ನನ್ನನ್ನು ಕಳುಹಿರುವರು." ಎಂದು ಹೇಳಿ ತನ್ನ ಅಂಗಿಯ ಕಿಸೆಯಲ್ಲಿದ್ದ ಪತ್ರವನ್ನು ತೆಗೆದು ಮುಂದಿಟ್ಟನು. ಯಶವಂತನು ಆತುರದಿಂದ ಪತ್ರವನ್ನು ಬಿಚ್ಚಿ ನೋಡಿ-ಆರ್ತಸ್ವರದಿಂದ—"ಹಾ! ಹಾ! ಕುಮಾರ!! ಪೃಥಿವೀಸಿಂಗ! ಅಯ್ಯೋ—" ಎಂದು ಎದೆಯನ್ನು ಹೊಡೆದುಕೊಳ್ಳುತ್ತ ಕೆಳಗೆ ಬಿದ್ದು ಮೂರ್ಛಿತನಾದನು. ತತ್‌ಕ್ಷಣವೇ ಪರಿವಾರವೆಲ್ಲವೂ ಆತನ ಸುತ್ತಲೂ ಸೇರಿತು. ದುರ್ಗಾದಾಸ, ಶಿವಸಿಂಗರು ಪತ್ರದ ವಿಚಾರವನ್ನು ತಿಳಿದು ಶೋಕದಿಂದ ಅಳತೊಡಗಿದರು. ಪೃಥಿವೀಸಿಂಗನು ಸತ್ತ ಸುದ್ದಿಯನ್ನು ಕೇಳಿ,

ಂದಿರಾ-ಚಂದ್ರಾವತಿಯರೂ, ದಾಸದಾಸಿಯರೂ ದುಃಖವನ್ನು ಡೆಯಲಾರದೆ ಬಿದ್ದು ಬಿದ್ದು ಅಳತೊಡಗಿದರು. ದೈವ ಂಕಲ್ಪವನ್ನು ಬಲ್ಲವರಾರು? ಯಾವಕ್ಷಣದಲ್ಲಿ ಏನಾಗುವು ಂಬುದನ್ನು ಮುಂದಾಗಿ ತಿಳಿಯಲಾರಿಗೆ ಸಾಧ್ಯವು? ಒಂದ ಗಳಿಗೆ ಮೊದಲು ಜಯಲಾಭದಿಂದ ನಲಿಯುತ್ತಿದ್ದ ಪರಿವಾರ ಲ್ಲವೂ-ಈಗ ಶೋಕದಿಂದ ಕಣ್ಣೀರು ಸುರಿಸುತ್ತ ನಿಸ್ತೇಜ ಾಗಿ ಹೋಯಿತು! ಗರ್ಭವತಿಯಾಗಿದ್ದ ಚಂದ್ರಾವತಿಯ ಂಕಟವನ್ನಂತೂ ಹೇಳಲು ಅಳವಲ್ಲದಂತಾಯಿತು.

ಅಬ್ಬಾ! ಔರಂಗಜೇಬನ ಕ್ರೌರ್ಯವೆಂತಹದು? ಪೃಥ್ವೀ ಂಗನನ್ನು ನೋಡಬೇಕೆಂದು ಕರೆಯಿಸಿ, ನೆರೆದ ಸಭೆಯಲ್ಲಿ ತನನ್ನು ಪ್ರೀತಿಸಿದಂತೆ ನಟಿಸಿ ಅಷ್ಟುಮಾತ್ರದಿಂದಲೇ ಆತಗೆ ರಾಜಪೃಷ್ಟಿಯು ತಗಲಿ ಸತ್ತುಹೋದನೆಂದು, ಆ ಪಾಪಾತ್ಮ ಾದ ಔರಂಗಜೇಬನು ಯಶವಂತಸಿಂಹನಿಗೆ ಕಾಗದ ನ್ನು ಬರೆದನು! ಎಷ್ಟು ಸಾಹಸವು! ಕುಮಾರನ ಮರಣ ಾರ್ತೆಯು ಶೂಲದಂತೆ ಆತನ ಹೃದಯದಲ್ಲಿ ನಾಟಿ, ಅದೇ ೃದ್ರೋಗವೇ ಇವನ ಆರೋಗ್ಯವನ್ನು ತಪ್ಪಿಸಿತು. ಯಶ ಂತಸಿಂಹನು ಬರುಬರುತ್ತ ನಿದ್ರಾಹಾರಗಳನ್ನು ತೊರೆದು ೃಶನಾಗುತ್ತ ಬಂದನು. ರುಗ್ಣಶಯ್ಯಾಗತನಾಗಿದ್ದ ಆತನಿಗೆ ಂತ್ಯದಿನವೂ ಬಂದು, ಆತನ ಸ್ಮೃತಿಯನ್ನು ತಪ್ಪಿಸಿತು. ಾಸಿಗೆಯ ಸುತ್ತಲೂ ದುರ್ಗಾದಾಸನೇ ಮೊದಲಾದವರು ುತ್ತುವರಿದು ಕುಳಿತು ಕಣ್ಣೀರು ಸುರಿಸುತ್ತಿದ್ದರು. “ಉಗುರು ುತ್ತಿನ ಮೇಲೆ ಒನಕೆಯು ಏಟು ಬಿದ್ದಂತೆ” ಮೊದಲೇ ಪುತ್ರ ೋಕ ಸಂತಪ್ತೆಯಾಗಿದ್ದ ಚಂದ್ರಾವತಿಗೆ ಪತಿವಿಯೋಗದುಃಖ

ಮನಸ್ಸು ಹೇಗಾಗಿರಬಹುದನ್ನು ವಿವರಿಸುವುದು ಅಸಾಧ್ಯ ವಿಚಾರವು.

ಹೀಗೆ ಪರಿವಾರವೆಲ್ಲವೂ ದುಃಖಿಸುತ್ತಿದ್ದ ವೇಳೆಯಲ್ಲಿ ಒಬ್ಬ ಮುಹಮ್ಮದೀಯ ಸೇವಕನು ದುರ್ಗಾದಾಸನನ್ನು ಸಮೀಪಿಸಿ ಆತನ ಕೈಯಲ್ಲಿ ಒಂದು ಕಾಗದವನ್ನು ಕೊಟ್ಟನು. ಆತ ಸದನ್ನು ನೋಡಿ, ಔರಂಗಜೇಬನು ಪೃಥಿವೀಸಿಂಗನಿಗೆ ಮೋಸದಿಂದ ವಿಷವಸ್ತ್ರಗಳನ್ನು ತೊಡಿಸಿ, ಕೊಲ್ಲಿಸಿದನೆಂದು ತಿಳಿದು, ಈ ಸಮಾಚಾರವನ್ನು ಯಶವಂತಸಿಗೆ ತಿಳಿಸಿದನು. ಪೃಥಿವೀಸಿಂಗನ ಮರಣ ವೃತ್ತಾಂತವನ್ನು ರಾಜಪುತ್ರರಾರಾದರೂ ಲಿಖಿತಮುಖದಿಂದ ಯಶವಂತನಿಗೆ ತಿಳಿಸುವರೆಂಬ ಭೀತಿಯಿಂದ, ಔರಂಗಜೇಬನು ಕಾಬೂಲಿಗೆ ಯಾರನ್ನೂ ಹೋಗಗೊಡದಂತೆ ಕಟ್ಟುಮಾಡಿ, ದೆಹಲಿಯಿಂದ ಯಾರೂ ಹೋಗದಂತೆ ನಿರ್ಬಂಧವನ್ನುಂಟುಮಾಡಿದ್ದನು. ಈ ಕಾರಣದಿಂದಲೇ ಈ ಪತ್ರವು ಇಷ್ಟು ಕಾಲಾನಂತರದ ಮೇಲೆ ಹೇಗೋ ತಪ್ಪಿಸಿಕೊಂಡು ದುರ್ಗಾದಾಸನ ಕೈಸೇರಿತು.

ಯಶವಂತಸಿಂಹನು ತನ್ನ ಅವಸಾನಕಾಲದಲ್ಲಿ ದುರ್ಗಾದಾಸನನ್ನು ಬಳಿಗೆ ಕರೆದು ಕೈಹಿಡಿದು, ಆಪ್ತಮಿತ್ರ, ದುರ್ಗಾದಾಸ! ನಾನು ಪರಲೋಕಯಾತ್ರೆಗೆ ಹೊರಡುತ್ತಿರುವೆನು. ಜೋಧಪುರವಂಶವು ಇಲ್ಲಿಗೆ ಮುಕ್ತಾಯವಾದೀತೆಂದು ಭಯಪಡುತ್ತಿರುವೆನು. ಚಂದ್ರಾವತಿಯು ನವಮಾಸಗರ್ಭಿಣಿಯಾಗಿರುವುದರಿಂದ ನನ್ನೊಡನೆ ಸಹಗಮನ ಮಾಡದಂತೆ ಹೇಳು. ಆಕೆಯನ್ನು ಶತ್ರುಗಳ ಕೈಯ್ಗೆ ಸಿಕ್ಕದಂತೆ, ಜೋಧಪುರಕ್ಕೆ ಕರೆದುಕೊಂಡು ಹೋಗಿ ನನ್ನ ವಂಶವನ್ನು ಅಭಿವೃದ್ಧಿಪಡಿ

ನಲು ಸಹಾಯಮಾಡುವೆನೆಂದು ನೀನು ವಾಗ್ದಾನಮಾಡಿದೆಯಾದರೆ ನಿರ್ವಿಚಾರವಾಗಿ ಪ್ರಾಣಬಿಡುವೆನು.' ಎಂದು ದೈನ್ಯವಾಣಿಯಿಂದ ಕೇಳಿಕೊಂಡನು.

ದುರ್ಗಾದಾಸನು ಕಣ್ಣೀರು ಸುರಿಸುತ್ತಾ ಯಶವಂತನ ಪಾದಗಳನ್ನು ತನ್ನೆರಡು ಕೈಗಳಿಂದಲೂ ಹಿಡಿದು ಗದ್ಗದಸ್ವರದಿಂದ—"ದೇವ! ಎಷ್ಟು ಕಷ್ಟಗಳನ್ನಾದರೂ ಸಹಿಸಿ, ಈ ನಿಮ್ಮ ಜೋಧ್ಪುರ ವಂಶವನ್ನು ಕಾಪಾಡುವೆನು." ಎಂದು ಪ್ರಮಾಣ ಮಾಡಿದನು. ಶಿವಸಿಂಗನೇ ಮೊದಲಾದ ಆತನ ಪರಿವಾರದವರೆಲ್ಲರೂ ಅದೇರೀತಿ ವಾಗ್ದಾನಮಾಡಿದರು. ಆ ಬಳಿಕ ಯಶವಂತಸಿಂಹನು ೧೬೭೮ನೆಯ ಡಿಸಂಬರ್ ತಿಂಗಳ ೮ನೆಯ ತಾರೀಖಿನ ದಿವಸ ಕೀರ್ತಿಶೇಷನಾದನು.

---

|| ಶ್ರೀಃ ||

## ಐದನೆಯ ಪ್ರಕರಣ.

---

### (ಔರಂಗಜೇಬನ ಪ್ರತಿಜ್ಞೆ)

ಔರಂಗಜೇಬನ ಪಟ್ಟಮಹಿಷಿಯಾದ ಉದಯಪುರಿಯ ಅಂತರ್ಗೃಹದಲ್ಲಿ ಅಲ್ಲಕಲ್ಲೋಲವಾಗಿದ್ದಿತು. ಪರಿಚಾರಕರೆಲ್ಲರೂ ಗಡಗಡನೆ ನಡುಗುತ್ತ ಭೀತಚಿತ್ತರಾಗಿದ್ದರು. ಉದಯಪುರೀ ಮಹಾರಾಣಿಯು ಬಾರಿಬಾರಿಗೂ ತನ್ನ ಕೈಯಲ್ಲಿದ್ದ ಪತ್ರವನ್ನು ನೋಡುತ್ತ ಕೆಂಗಣ್ಣುಗಳಿಂದ ದಾಸದಾಸೀಜನಗಳನ್ನು ಹೊರಗೆ ಹೋಗಿರೆಂದು ಗದರಿಸುತ್ತಿದ್ದಳು. ರಾಣಿಯು ಕವಾಚೀ ಮಂಚದ ಮೇಲೆ ಮಲಗಿಕೊಂಡು ಪತ್ರವನ್ನೋದುತ್ತ ಅದರಲ್ಲಿದ್ದ ವಿಷಯಗಳನ್ನು ಕುರಿತು ಕೆರಳಿ, ಅದನ್ನು ಒಗೆದು

ಬಿಸಾಡುತ್ತಲೂ, ಒಂದೆರಡು ನಿಮಿಷದಲ್ಲಿ ಮತ್ತೆ ಅದನ್ನು ಕೈಕೊಂಡು ಓದುತ್ತಲೂ, ಹೀಗೆ ತನ್ನ ಆಗ್ರಹವನ್ನು ಹೆಚ್ಚಿಸಿಕೊಂಡು, ಭಯಂಕರವಾದ ಮುಖಮುದ್ರೆಯನ್ನು ತಾಳಿ, ಪರಿಜನಗಳಾರೂ ಸಮೀಪಕ್ಕೆ ಬಾರದಂತೆ ತೋರುತ್ತಿದ್ದಳು. ಇವಳ ಈ ಬಗೆಯ ರೋಷಾವೇಶಕ್ಕೆ ಕಾರಣವೇನೆಂಬುವನ್ನು ಅವರಾರೂ ತಿಳಿಯಲಾರದೆ ಪರಸ್ಪರ ಪ್ರಶ್ನೆಮಾಡುತ್ತಿದ್ದರು.

ಈಕೆಗೆ "ಉದಯಪುರಿ" ಯೆಂದು ಹೆಸರು ಬರಲು ಕಾರಣವೇನಂದರೆ, — ಉದಯಪುರದಲ್ಲಿರುವ ರಾಜಪುತ್ರಸ್ತ್ರೀಯರಲ್ಲಿ ಯಾರನ್ನಾದರೂ ಮದುವೆ ಮಾಡಿಕೊಳ್ಳಬೇಕೆಂಬ ಆಶೆಯು ಔರಂಗಜೇಬನಿಗೆ ಬಹುಕಾಲದಿಂದಿದ್ದಿತು. ಆದರೆ, ಉದಯಪುರದಲ್ಲಿದ್ದ ರಾಜಪುತ್ರರು ನಿರುಪಮ ಪರಾಕ್ರಮಶಾಲಿಗಳಾಗಿದ್ದುದರಿಂದ ಆ ಕಾರ್ಯವು ಬಹುಕಾಲದವರೆಗೆ ಸಾಧ್ಯವಾಗಲಿಲ್ಲ. ಕಡೆಗೆ ಆತನು ತನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳಬೇಕೆಂದು, ಅಲ್ಲಿದ್ದ ಒಬ್ಬ ಬಡ ರಜಪೂತನಿಗೆ ಲಂಚವನ್ನು ಕೊಟ್ಟು ಆತನ ಮಗಳನ್ನು ಮದುವೆ ಮಾಡಿಕೊಂಡು ಆಕೆಗೆ "ಉದಯಪುರಿ" ಎಂದು ಹೆಸರನ್ನಿಟ್ಟು ತನ್ನ ಪಟ್ಟದ ರಾಣಿಯನ್ನಾಗಿ ಮಾಡಿಕೊಂಡನು.

ಉದಯಪುರಿಯು ಅತ್ಯಂತ ಚತುರೆ! — ತನ್ನ ಮಾತುಗಳಿಂದಲೇ ಔರಂಗಜೇಬನನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಂಡು, ಆತನನ್ನು ತಾನು ಹೇಳಿದಂತೆ ನಡೆಯುವ ಹಾಗೆ ಮಾಡಿದ್ದಳು. ತನಗೆ ದುಃಖವಿಲ್ಲದಿದ್ದರೂ ಅಧಿಕ ದುಃಖಾಕ್ರಾಂತೆಯಾದಂತೆ ನಟಿಸುವುದರಲ್ಲಿ ಈಕೆಗೆ ಸಮಾನರಾರೂ ಇಲ್ಲವೆನ್ನಬಹುದು. ಹೀಗೆ ಚತುರೆಯಾದ ಉದಯಪುರಿಯು ರೋಷಾವೇಶದಿಂದ ಮಲಗಿಕೊಂಡಿರಲು, ಔರಂಗಜೇಬನು ಇವಳ ಮಹ

ಲನ್ನು ಪ್ರವೇಶಿಸಿ, ಮೂಲೆಮೂಲೆಯಲ್ಲಿ ಗುರಗುಟ್ಟುತ್ತ ಭೀತಚಿತ್ತರಾಗಿದ್ದ ಸೇವಕರನ್ನು ನೋಡಿ, ಆಶ್ಚರ್ಯದಿಂದ ಕಾರಣವೇನಿರಬಹುದೆಂದು ಯೋಚಿಸತೊಡಗಿದನು. ಬಾದಷಹನನ್ನು ಕಂಡಕೂಡಲೇ ಸೇವಕರೆಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ಉದ್ಯುಕ್ತರಾದರು. ಕ್ರಮಕ್ರಮವಾಗಿ ಔರಂಗಜೇಬನು ಉದಯಪುರಿಯ ಅಂತಃಪುರವನ್ನು ಪ್ರವೇಶಿಸಿ, ದೀರ್ಘಾಲೋಚನೆಯಲ್ಲಿ ಮುಳುಗಿದ್ದ ಉದಯಪುರಿಯನ್ನು ಕಂಡು ಆಕೆಯ ಸಮೀಪದಲ್ಲಿ ಸ್ವಲ್ಪಹೊತ್ತು ನಿಂತುಕೊಂಡನು. ತಾನು ಮಹಲನ್ನು ಪ್ರವೇಶಿಸಿದ ಕೂಡಲೇ ರಾಣಿಯು ಇದಿರ್ಗೊಂಡು ಬಂದು ಹಸ್ತಲಾಘವವನ್ನಿತ್ತು ಕರೆದುಕೊಂಡು ಬಂದು ಆಸನದಮೇಲೆ ಕುಳ್ಳಿರಿಸಿ, ಮೃದುಮಧುರ ಭಾಷಣಗಳಿಂದ ಸಂತೋಷವನ್ನುಂಟುಮಾಡುತ್ತಿದ್ದ ಉದಯಪುರಿಯು ಈ ದಿನ ತನ್ನ ಸಮೀಪಕ್ಕೂ ಬಾರದಿದ್ದುದರಿಂದ ಆವುದೋ ಒಂದು ಕಾರಣವಿರಬಹುದೆಂದು ತಿಳಿದು ಆತನು ಆಕೆಯ ಇದಿರಿಗೆ ಹೋಗಿ ನಿಂತನು. ತತ್ಕ್ಷಣವೇ ಉದಯಪುರಿಯು ಪತಿಯನ್ನು ಕಂಡು ಮೇಲಕ್ಕೆದ್ದು ಆತನನ್ನು ಉಚಿತಾಸನದ ಮೇಲೆ ಕುಳ್ಳಿರಿಸಿ, ತಾನೂ ಬಳಿಯಲ್ಲಿ ಕುಳಿತು ಕೊಂಡಳು. ಔರಂಗಜೇಬನು ಆಕೆಯ ಮುಖಭಾವವನ್ನು ನೋಡಿ ಕೌತುಕದಿಂದ ಹೀಗೆ ಕೇಳಿದನು:-

“ಸುಂದರಿ! ಈದಿನ ನೀನು ಇಷ್ಟು ಚಿಂತಾಕ್ರಾಂತೆಯಾಗಿರಲು ಕಾರಣವೇನು? ನಾನು ಕಳುಹಿದ ಕಾಗದಗಳನ್ನು ಓದಿದೆಯಾ?”

ಉದಯಪುರಿ:—ಮುಖವನ್ನು ತಗ್ಗಿಸಿ, ಕಣ್ಣುಗಳಲ್ಲಿ ನೀರು ಸುರಿಸುತ್ತ “ಮಹಾರಾಜ! ಎಲ್ಲವನ್ನೂ ಓದಿದೆನು.” ಎಂದು ಹೇಳಿದ್ದಳು.

ಔರಂಗ:—ಪ್ಯಾರೀ! ಕಾರಣವನ್ನೇಕೆ ಹೇಳದಿರುವೆ? ನಾನಿರುವಾಗ ನಿನಗಾವ ಕೊರತೆಯುಂಟಾಗಿರುವುದು?

ಉದಯ:—ತಿಳಿಸುವದೇನಿರುವುದು? ಮೊಗಲಾಯಿ ಸಾರ್ವಭೌಮನಾದ ನಿನ್ನನ್ನು ವರಿಸುವುದರಿಂದ ಮಗಳು ಸಕಲ ಸೌಖ್ಯವನ್ನೂ ಹೊಂದುವಳೆಂದು ತಿಳಿದು ನನ್ನ ತಂದೆಯು ನನ್ನನ್ನು ನಿನಗೆ ಕೊಟ್ಟಿರುವನು. ಆದರೆ, ಅಪನಿಂದೆಯು ಬರುವುದೆಂಬುದನ್ನು ಯೋಚಿಸದೆ ಹೋದನು!

ಔರಂಗ:—ಹಾ! ಹಾಗೆಂದರೆ! ಮೊಗಲ್ ಸಮ್ರಾಟನ ಮುದ್ದಿನ ಮಡದಿಯಾದ ನಿನ್ನನ್ನು ನಿಂದಿಸಿದವರಾರು?

ಉದಯ:—ಮಹಾರಾಜ! ನಿಮ್ಮ ಕೈಹಿಡಿದ ನಾನು ಈವರೆಗೆ ಎಲ್ಲಾ ಸೌಖ್ಯವನ್ನೂ ಅನುಭವಿಸುತ್ತ ಶಚೀದೇವಿಯಂತಿದ್ದೆನು. ಆದರೆ ಈದಿನ ನನಗೂ ತಮಗೂ ಋಣವು ತೀರಿತೆಂದು ಹೇಳಬೇಕಾಗಿ ಬಂದಿರುವುದು!

ಔರಂಗ:—ಏಕೆ? ಹೇಳೆಂದರೆ ಸುಮ್ಮನೇಕೆ ಸಾವಕಾಶ ಮಾಡುವೆ? ನಿನ್ನನ್ನು ಯಾರೇನೆಂದಿದ್ದರೂ ಅವರನ್ನು ನಿನ್ನೆದಿರಿಗೆ ಕರೆಯಿಸಿ ಕಠಿಣ ಶಿಕ್ಷೆಯನ್ನು ವಿಧಿಸುವೆನು. ತಡಮಾಡದೆ ಬೇಗ ಹೇಳು.

ಉದಯ:—ಗದ್ಗದಸ್ವರದಿಂದ—"ನಾಥ! ನಾನಿನ್ನು ಈ ಅಪನಿಂದೆಯನ್ನು ಸಹಿಸಲಾರೆನು. ಭಾವಿಯಲ್ಲಿ ಬಿದ್ದಾದರೂ ಪ್ರಾಣಬಿಡುವೆನು. ಈ ಅಪಮಾನವನ್ನು ಹೊಂದಿ ಜೀವಿಸಿರುವುದಕ್ಕಿಂತ ಸತ್ತು ಸ್ವರ್ಗವನ್ನು ಸೇರುವುದು ಉತ್ತಮ. ನಾನು ಸತ್ತು ಹೋದಮಾತ್ರದಿಂದ ನಿಮಗಾವ ಲೋಪವೂ ಸಂಭವಿಸದು. ನಿಮಗೆ ನನ್ನಂತಹ ಹೆಂಡತಿಯರನೇಕರಿರುವರು. ಮೊಟ್ಟೆಯು ಒಂದು ಮರಿಯನ್ನು ಧಿಕ್ಕರಿಸಿದಂತೆ ಈ

ದುಷ್ಟಾತ್ಮಳು ನನ್ನನ್ನು ದೂಷಿಸಿರುವಳು. ಮಹಾರಾಜ! ನನಗೆ ಅಪ್ಪಣೆಯನ್ನು ಕೊಡಿರಿ.

ಔರಂಗ:—ಪ್ಯಾರಿ! ನಾನು ಎಷ್ಟು ಬೇಡಿದರೂ ಸ್ಪಷ್ಟ ವಾಗಿ ಹೇಳದಿರುವೆಯೇಕೆ? ಯಾವ ದುಷ್ಟಾತ್ಮಳು ನಿನ್ನನ್ನು ದೂಷಿಸಿರುವಳು? ಆ ಕಾಗದದಲ್ಲಿರುವ ಸಂಗತಿಯೇನು? ಆ ದುಷ್ಟಾತ್ಮಳು ಅವಳೇ ಆಗಿದ್ದರೂ, ಅವಳನ್ನು ನಿನ್ನ ಇದಿರಿಗೆ ಶೂಲಕ್ಕೇರಿಸುವೆನು ಇನ್ನು ತಡೆಯದೆ ಬೇಗಹೇಳು.

ಔರಂಗಜೇಬನು ಹಲವು ಬಗೆಯಾಗಿ ಧೈರ್ಯವನ್ನು ಹೇಳಿ ಪ್ರಾರ್ಥಿಸಿಕೊಳ್ಳಲು ಉದಯಪುರಿಯು ಕೈಯ್ಯಲ್ಲಿದ್ದ ಕಾಗ ದವನ್ನು ಬಿಚ್ಚಿ ತನ್ನ ದುಃಖವನ್ನು ಶಮನವಮಾಡಿಕೊಂಡು ಔರಂಗ ಜೇಬನಿಗೆ ಮೆಲ್ಲ ಮೆಲ್ಲನೆ ಓದಲಾರಂಭಿಸಿದಳು.

“ ಮಹಾಲಕ್ಷ್ಮೀಸಮಾನಳಾದ ನನ್ನ ಚಿಕ್ಕಮ್ಮ ಚಂದ್ರಾ ವತೀ ಮಹಾರಾಣಿಯವರ ದಿವ್ಯಸಮ್ಮುಖಕ್ಕೆ—ರೂಪನಗ ರಾಧೀಶನಾದ ವಿಜಯಸಿಂಹ ಮಹಾರಾಜನ ಮಗಳಾದ ವಿಮ ಲಾದೇವಿಯು ಬರೆದುಕೊಂಡ ವಿಜ್ಞಾಪನಪತ್ರಿಕೆ ಏನೆಂದರೆ,—

ಶ್ರೀ ಯಶವಂತಸಿಂಹ ಮಹಾರಾಜಾಜಿಯವರೊಡನೆ ನೀವು ಕೂಡ ಕಾಬೂಲದೇಶಕ್ಕೆ ಹೋಗಿರುವಿರೆಂದು ಕೇಳಿ ದಂದಿನಿಂದ ನನ್ನ ಮನಸ್ಸಿನಲ್ಲಿ ಒಂದು ವಿಧವಾದ ಅನುಮಾನವು ಜನಿಸಿ ಬಾಧಿಸುತ್ತಿದ್ದಿತು. ಅದಕ್ಕೆ ಸರಿಯಾಗಿ ಔರಂಗಜೇ ಬನು ನಮ್ಮ ವಂಶವೃಕ್ಷವನ್ನು ಬೇರಳಿನಿಂದ ಕಿತ್ತುಹಾಕಲು ಪ್ರಯತ್ನಿಸಿರುವನು. ಆ ಮಾಯಾವಿಯಾದ ಬಾದಶಹನು ನಮ್ಮ ಪೃಥ್ವಿಸಿಂಗನನ್ನು ತನ್ನ ಸಭೆಗೆ ಕರಿಸಿ, ಹಲವು ಕುಟಿಲ ನಟನೆಯ ಮರ್ಯಾದೆಗಳಿಂದ ಗೌರವಿಸಿ, ಕಡೆಗೆ ವಿಷವಸ್ತ್ರ ಗಳನ್ನು ತೊಡಿಸಿ ಕೊಲ್ಲಿಸಿರುವನು. ಭೀತಚಿತ್ತರಾದ ಕೆಲವುಜನ

ರಾಜಪುತ್ರರು ಆ ನೀಚನಿಗೆ ವಿಧೇಯರಾಗಿರುವುದರಿಂದಲ್ಲವೆ, ನಮಗಿಷ್ಟು ಕಷ್ಟನಷ್ಟಗಳುಂಟಾಗಿರುವುವು? ನಮ್ಮ ಕ್ಷತ್ರಿಯ ವಂಶದಲ್ಲಿ ಐಕಮತ್ಯವಿಲ್ಲದಿರುವುದೇ ಇಷ್ಟು ಅನರ್ಥಕ್ಕೆ ಕಾರಣವಲ್ಲವೇ? ಸಮಯ ಸಿಕ್ಕಿದರೆ ರಾಜಕನ್ನಿಕೆಯರೆಲ್ಲರನ್ನೂ ಒಟ್ಟಿಗೆ ಮದುವೆ ಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ಔರಂಗಜೇಬನಿಗಿರುವುದು. ಉತ್ತಮ ರಾಜಪುತ್ರ ಸ್ತ್ರೀಯು ಪ್ರಾಣವನ್ನಾದರೂ ತ್ಯಜಿಸುವಳಲ್ಲದೆ ಇಂತಹ ಅಕೃತ್ಯವನ್ನು ಎಂದಿಗೂ ಮಾಡಲಾರಳು. ಆ ಉದಯಪುರಿಯೊಬ್ಬಳು ಮಾತ್ರ ಈ ನಮ್ಮ ವಂಶಕ್ಕೆ ಅಪಕೀರ್ತಿಯನ್ನು ತಂದಿರುವಳು. ಯವನನ ಕೈಹಿಡಿಯಲು ಆ ಮೂರ್ಖಳು ಹೇಗೆ ಸಹಿಸಿದಳೋ ತಿಳಿಯದು! ಇಂತಹ ನೀಚಸ್ತ್ರೀಯರು ಭೂಮಿಗೆ ಭಾರವೇ ಹೊರತು ಇವರಿಂದ ಪ್ರಯೋಜನವೇನಿರುವುದು? ಔರಂಗಜೇಬನು ನಡೆಯಿಸುವ ಈ ಘೋರ ಕೃತ್ಯವು ರಾಜಪುತ್ರಸ್ಥಾನದಲ್ಲೆಲ್ಲ ಈ ವರೆಗೆ ವ್ಯಾಪಿಸಿಯೇ ಇರುವುದು. ಈ ನಿರ್ಭಾಗ್ಯದೇವತೆಯು ಎಷ್ಟರವರೆಗಿರುವಳೋ ಅಷ್ಟರವರೆಗೂ ನಾವು ಕಷ್ಟವನ್ನು ಅನುಭವಿಸಲೇಬೇಕು. ಶರೀರವು ಕ್ಷಣಭಂಗುರವೆಂದು ತಿಳಿದು ನೀವು ದುಃಖವನ್ನು ಸಹಿಸಿ, ಮಹಾರಾಣಾಯವರನ್ನು ಸಮಾಧಾನಪಡಿಸಬೇಕು.

"ವಿಮಲಾದೇವಿ."

ಉದಯಪುರಿಯು ಓದಿದುದೆಲ್ಲವನ್ನೂ ಕೇಳಿ ಔರಂಗಜೇಬನು ದುರಾಗ್ರಹಪರವಶನಾಗಿ— "ಪ್ರಿಯೆ! ನೀನಿನ್ನು ವಿಚಾರಮಾಡಬೇಡ. ಪ್ರಚಂಡವಾದ ನನ್ನ ಸೇನಾಸಮೂಹವನ್ನು ರೂಪನಗರದ ಮೇಲೆ ಕಳುಹಿಸಿ, ಆ ಪುರವನ್ನು ಧ್ವಂಸ

ಮಾಡಿಸಿ, ವಿಮಲೆಯನ್ನು ಹಿಡಿದು ತರಿಸಿ ನಿನಗೆ ದಾಸಿಯನ್ನಾಗಿ ಮಾಡುವೆನು. ಇದಕ್ಕೆ ತಪ್ಪಿದರೆ ನಾನು ಮುಹಮ್ಮದೀಯ ವಂಶದಲ್ಲಿ ಹುಟ್ಟಿದವನಲ್ಲ. ಈ ಮಾತು ಎಂದಿಗೂ ಸುಳ್ಳಾಗುವುದಿಲ್ಲ. ಹಿಂದುಮುಂದನ್ನು ಕಾಣದೆ ಹೀಗೆ ನಮ್ಮಿಬ್ಬರನ್ನೂ ಹಿಂಬಿಸಿದ ಮದೋನ್ಮತ್ತಳಾದ ಆ ವಿಮಲೆಯನ್ನು ನಮ್ಮ ಮಸಾವನಿಗೆ ಮದುವೆಮಾಡಿ ಅಪಮಾನಪಡಿಸುವೆನು. ನೀನಿನ್ನು ವಿಚಾರ ಮಾಡದಿರು. ಇದು ಅಲಂಘೀರ್ ಬಾದಷಹನ ಪ್ರತಿಜ್ಞೆ! ಎಂದು ಹೇಳಿ, ಅಲ್ಲಿಂದಲ್ಲಿಯೇ-ಆಗಲೆ—"ಇನ್ನು ಮೂರು ದಿನಗಳೊಳಗಾಗಿ ನಾಲ್ವತ್ತುಸಾವಿರ ಸೇನೆಯನ್ನು ಸೇರಿಸಿಕೊಂಡು ರೂಪನಗರದ ಮೇಲೆ ದಂಡೆತ್ತಿ, ಪಟ್ಟಣವನ್ನೆಲ್ಲಾ ಹಾಳುಮಾಡಿ ವಿಮಲೆಯನ್ನು ಹಿಡಿದು ತರಬೇಕು." ಎಂಬ ನಿರೂಪವನ್ನು ಸಾದತ್‌ಖಾನನ ಹೆಸರಿಗೆ ಬರೆದು ಉದಯಪುರಿಗೆ ತೋರಿಸಿದನು. ಅದನ್ನು ನೋಡಿ ಉದಯಪುರಿಯು ಅಮಂದಾನಂದತುಂದಿಲಸ್ವಾಂತಳಾಗಿ ತನ್ನ ಪತಿಯನ್ನು ಹೊಗಳಲಾರಂಭಿಸಿದಳು. ಬಾದಷಹನು ರಾಣಿಯು ಸಂತೋಷಪಟ್ಟುದನ್ನು ನೋಡಿ ಸಮಾಧಾನ ಹೊಂದಿ, ಹೊರಗೆ ನಿಂತಿದ್ದ ಮಸಾವದನೆಂಬ ಕಾವಲುಗಾರನನ್ನು ಕರೆದು ಆತನ ಕೈಯಲ್ಲಿ ಆಜ್ಞಾಪತ್ರವನಿತ್ತು ತತ್‌ಕ್ಷಣವೇ ಸಾದತ್‌ಖಾನನಿಗೆ ಮುಟ್ಟಿಸಬೇಕೆಂದು ಕಟ್ಟುಮಾಡಿದನು. ಮಸಾವದನು ಉದಯಪುರಿಯ ಅಂತಃಪುರದ ಕಾವಲಿಗಾಗಿ ನಿಯಮಿತರಾಗಿದ್ದ ನಪುಂಸಕರ ಜಾತಿಗೆ ಸೇರಿದವನೂ, ಮತ್ತು ಅವರೆಲ್ಲರ ಮೇಲ್ವಿಚಾರಣಾಕರ್ತನೂ ಉದಯಪುರಿಯ ಅಸ್ಪೃಶ್ಯನೂ ಆಗಿದ್ದನು. ರೂಪದಲ್ಲಿಯೂ ಗುಣದಲ್ಲಿಯೂ ವರ್ಣದಲ್ಲಿಯೂ ಇವನು ಸಾಕ್ಷಾತ್ ಯಮದೂತನಂತೆಯೇ ಭಯಂಕರನಾಗಿ ತೋರುತ್ತಿದ್ದನು. ಇರಲಿ

ಉದಯಪುರಿಯು ಆಪ್ತಭೃತ್ಯನಾಗಿದ್ದ ಮುಸಾವದನು ಬಾದಷಹನು ಕೊಟ್ಟ ಆಜ್ಞಾಪತ್ರವನ್ನು ಕೈಕೊಂಡು, ಅಪ್ಪಣೆಯನ್ನು ಶಿರಸಾವಹಿಸಿ ನಯಭಯದಿಂದ ಕೈಮುಗಿದು ಹೊರಟು ಹೋದನು.

ಪೃಥಿವಿಸಿಂಗನ ಮರಣ ವೃತ್ತಾಂತವನ್ನು ಕಾಬೂಲಿನಲ್ಲಿರುವ ಯಶವಂತಸಿಂಗನಿಗೆ ಯಾರಾದರೂ ತಿಳಿಯಪಡಿಸಿ ತನ್ನ ರಹಸ್ಯವನ್ನು ಹೊರಪಡಿಸುವರೇನೋ ಎಂದು ಬಾದಷಹನು ತನ್ನ ಅಪ್ಪಣೆ ಚೀಟಿಯಿಲ್ಲದೆ ಕಾಬೂಲಿಗೆ ಹೋಗುವವರನ್ನು ತಡೆದು ಅವರ ಹತ್ತಿರ ಏನಾದರೂ ಕಾಗದಗಳಿದ್ದಲ್ಲಿ ಅವನ್ನು ತನ್ನ ಸಮೀಪಕ್ಕೆ ಕಳುಹಿಸಬೇಕೆಂದು ಅಪ್ಪಣೆಯಿತ್ತು ಕೆಲವು ಭಟರನ್ನು ಮಾರ್ಗಮಧ್ಯದಲ್ಲಿ ಕಾವಲಿಟ್ಟಿದ್ದನು. ಬಾದಷಹನ ಅಪ್ಪಣೆಯಂತೆ ಭಟರು ಮಾರ್ಗಸ್ಥರನ್ನು ಹಿಡಿದು ಬೆದರಿಸಿ, ಅವರಲ್ಲಿದ್ದ ಕಾಗದಗಳನ್ನು ತೆಗೆದುಕೊಂಡು ಔರಂಗಜೇಬನ ಹತ್ತಿರಕ್ಕೆ ಕಳುಹಿಸುತ್ತಿದ್ದರು. ಇಂಥ ಕಾಗದಗಳು ವಿಶೇಷವಾಗಿ ಮಾರ್ವಾಡ ಭಾಷೆಯಲ್ಲಿಯೇ ಬರೆಯಲ್ಪಡುತ್ತಿದ್ದುವು. ಔರಂಗಜೇಬನು, ಮಾರ್ವಾಡ ಭಾಷೆಯು ತನಗೆ ತಿಳಿಯದಿದ್ದುದರಿಂದ ಮಾರ್ವಾಡ ದೇಶಸ್ಥಳಾದ ಉದಯಪುರಿಗೆ ಆ ಭಾಷೆಯು ಬರಬಹುದೆಂದು ತಿಳಿದು, ಆ ಕಾಗದಗಳನ್ನು ಅವಳಲ್ಲಿಗೆ ಕಳುಹಿಸಿ, ಅವುಗಳ ವಿವರವನ್ನು ತಿಳಿಸಬೇಕೆಂದು ಹೇಳಿದ್ದನು. ಪತಿಯ ನಿಯಮಾನುಸಾರವಾಗಿ ಉದಯಪುರಿಯು ಈ ದಿನವೂ ತನ್ನಲ್ಲಿಗೆ ಕಳುಹಲ್ಪಟ್ಟ ಕಾಗದಗಳನ್ನು ಒಂದೊಂದನ್ನಾಗಿ ಓದಿ, ಕಡೆಗೆ ವಿಮಲಾದೇವಿಯು ಬರೆದಿದ್ದ ಕಾಗದವನ್ನೂ ತೆಗೆದುಕೊಂಡಳು. ಕಾಗದದಲ್ಲಿದ್ದ ಅಕ್ಷರಗಳು ಸ್ಪಷ್ಟವಾಗಿದ್ದುದರಿಂದ ಅವಳೋ, ನಾರೀಮಣಿಯು

ಈ ಕಾಗದವನ್ನು ಬರೆದಿರುವಳೆಂದು ತಿಳಿದು ಅದನ್ನು ಅನುಲೋಮಾಗ್ರವಾಗಿ ಓದಿಕೊಂಡಳು. ಅದರಲ್ಲಿದ್ದ ಒಂದೊಂದು ಮಾತೂ ಒಂದೊಂದು ಶೂಲದಂತೆ ಅವಳ ಹೃದಯದಲ್ಲಿ ನಾಟಿ ಬಾಧಿಸತೊಡಗಿತು. ಕಡೆಗೆ ತನ್ನ ಹಗೆಯನ್ನು ತೀರಿಸಿಕೊಳ್ಳಲು ಬಾದಷಹನಿಂದ ಪ್ರತಿಜ್ಞೆಯನ್ನು ಮಾಡಿಸಿದರೂ ಅವಳ ಮನಸ್ಸಂತಾಪವು ಶಮನವಾಗಲಿಲ್ಲ. ಬಾದಷಹನು ರಾಣಿಯನ್ನು ಬಹುವಿಧವಾಗಿ ಸಂತೈಸಿ, ಉಳಿದ ಕಾಗದಗಳನ್ನೂ ಓದಿಸಿ, ಸಮಾಚಾರವನ್ನು ತಿಳಿದನು. ಅವುಗಳಲ್ಲಿ ಪ್ರತಿಯೊಂದೂ ಒಬ್ಬೊಬ್ಬ ರಾಜಪುತ್ರ ರಾಜರಿಂದ ಪೃಥ್ವೀಸಿಂಗನ ಮರಣವಾರ್ತೆಯನ್ನು ವಿವರಿಸುವಂತೆ ಬರೆದುದಾಗಿತ್ತು. ಈ ವರೆಗೆ ತನ್ನ ರಹಸ್ಯವು ಯಾರಿಗೂ ತಿಳಿಯದೆಂದು ಸಂತೋಷಚಿತ್ತನಾಗಿದ್ದ ಬಾದಷಹನು ಈ ಕಾಗದವನ್ನು ನೋಡಿ ಆಶ್ಚರ್ಯಾನ್ವಿತನಾಗಿ-"ಅಬ್ಬ! ರಾಜಪುತ್ರರಿಗೆ ದಿವ್ಯದೃಷ್ಟಿಯಿರುವುದೇನು? ನನ್ನ ರಹಸ್ಯವನ್ನೆಲ್ಲಾ ಎಷ್ಟುಬೇಗ ತಿಳಿದಿರುವರು" ಎಂದು ತನ್ನಲ್ಲಿ ತಾನೆ ವಿಚಾರಮಾಡಲಾರಂಭಿಸಿದನು. ಬೆಕ್ಕು ಮಡಿಕೆಯಲ್ಲಿದ್ದ ಹಾಲನ್ನು ಕಣ್ಣು ಮುಚ್ಚಿಕೊಂಡು ಕುಡಿಯುತ್ತಿದ್ದು, ತನ್ನ ಕಳ್ಳತನವನ್ನು ಯಾರೂ ನೋಡಲಿಲ್ಲವೆಂದು ಭಾವಿಸುವುದಿಲ್ಲವೆ? ಹಾಗೆಯೇ ಔರಂಗಜೇಬನು ಕೂಡ, ತಾನು ಮಾಡಿದಕಾರ್ಯವು ಯಾರಿಗೂ ತಿಳಿಯದೆಂದಿದ್ದನು.

ವಿಜಯಸಿಂಹನು ತನ್ನ ಮಗಳಿಂದ ಇಂತಹ ಕಾಗದವನ್ನು ಬರೆಯಿಸಲು ಸ್ವಲ್ಪ ಸಂದೇಹಪಟ್ಟನಾದರೂ ಒಡನೆಯೇ ಧೈರ್ಯವನ್ನು ತಂದುಕೊಂಡು—"ಆಗಲಿ ನೋಡು! ಒಂದುವೇಳೆ ಯಶವಂತಸಿಂಹನಿಗೆ, ಈ ಕಾಗದವು ಸೇರಿದರೆ ನಮ್ಮ ಮನೋಗತವು ಆತನಿಗೆ ತಿಳಿಯುವದು. ಹಾಗಲ್ಲದೆ ಬಾದಷ

ಹನಿಗೆ ಸಿಕ್ಕಿದರೆ ಅವನೊಡನೆ ಯುದ್ಧವಾದರೂ ಸಂಭವಿಸು ವುದು. ಆಗ ನನ್ನ ಪರಾಕ್ರಮವನ್ನು ತೋರಿಸಬಹುದು." ಹೀಗೆ ಯೋಚಿಸಿ ಕಾಗದವನ್ನು ಬರೆಯಿಸಿದನು.

---

೩೬೪.

## ಆರನೆಯ ಪ್ರಕರಣ.

---

(ಚಂದ್ರಾವತಿ.)

ಕುಮಾರನ ಮರಣವೂ, ತದನಂತರ ಪತಿಯ ಮರ ಣವೂ ಚಂದ್ರಾವತಿಯನ್ನು ದುಃಖಸಾಗರದಲ್ಲಿ ಮುಳುಗಿಸಿ ದುವು. ಸಹಜ ಧೈರ್ಯಾಲಂಕೃತೆಯಾದ ಇಂದಿರೆಯು ಆಕೆ ಯನ್ನು ಸಮಾಧಾನಪಡಿಸುತ್ತಿದ್ದರೂ, ದುಃಖವನ್ನು ಸಹಿಸಲಾ ರದೆ ಆಕೆ, ಪತಿಯೊಡನೆ ಸಹಗಮನ ಮಾಡಲುದ್ಯುಕ್ತಳಾದಳು. ಆದರೆ ಸೇನಾಧಿಪತಿಗಳಾದ ದುರ್ಗದಾಸ, ಶಿವಸಿಂಗ, ಮೊದ ಲಾದವರು ಜೋಧ್ಪುರ ವಂಶಾಭಿವೃದ್ಧಿಯಲ್ಲಿ ಕಂಕಣಬದ್ಧರಾ ಗಿದ್ದುದರಿಂದ ಆಕೆಯ ಧೈರ್ಯಕ್ಕೆ ಭಯಪಟ್ಟು, ಹೀಗೆ ಪ್ರಾರ್ಥಿ ಸಿಕೊಂಡರು. "ಮಾತೆ, ಚಂದ್ರಾವತಿ! ಇಂದಿಗೆ ಜೋಧ್ಪು ರವಂಶವು ನಾಶವಾಗಲಾರಂಭಿಸಿರುವುದು. ನೀನು ಗರ್ಭ ವತಿಯಾಗಿರುವುದರಿಂದ ಪ್ರಾಣತ್ಯಾಗ ಮಾಡಿದಲ್ಲಿ ನಿನಗೆ ಪಾಪವು ಸಂಭವಿಸುವುದು. ನಿನ್ನ ಗರ್ಭದಲ್ಲಿರುವ ಮಗುವನ್ನು ಸ್ಮರಿಸಿಕೊಂಡು ಅದರಿಂದ ಧೈರ್ಯಚಿತ್ತಳಾಗಿ ನಿನ್ನ ವಂಶವನ್ನು ಕಾಪಾಡಬೇಕೆಂದು ನಾವೆಲ್ಲರೂ ಕಂಕಣ ಬದ್ಧರಾಗಿರುವೆವು.

ಈ ನಮ್ಮ ಆಶೆಯನ್ನು ನಿರಾಶೆಯಾಗಿ ಮಾಡಬೇಡ. " ಎಂದು ಅನೇಕ ವಿಧವಾಗಿ ಪ್ರಾರ್ಥಿಸಲು, ಚಂದ್ರಾವತಿಯು ತನ್ನ ಸಾಹಸವನ್ನು ಬಿಟ್ಟು ಬಿಟ್ಟಳು. ದುಃಖಾತಿಶಯದಿಂದ ಸಹಗಮನವನ್ನು ಮಾಲು ಯತ್ನಿಸಿದಳೇ ಹೊರತು ಚಂದ್ರಾವತಿಯು ಅಷ್ಟು ಅವಿವೇಕಿನಿಯಲ್ಲ. ಅವಳನ್ನು ಸಾಮಾನ್ಯ ಸ್ತ್ರೀಯೆಂದು ಎಂದಿಗೂ ಹೇಳಕೂಡದು. ಚಂದ್ರಾವತಿಯ ಮೇಲೆ ಅಭಿಮಾನವೂ ಪೂಜ್ಯಭಾವವೂ ಇಲ್ಲದವರೊಬ್ಬರೂ ರಾಜಪುತ್ರಸ್ಥಾನದಲ್ಲಿ ಇಲ್ಲ. ರಾಜಪುತ್ರರು ಯಶವಂತ ರಾಜನನ್ನು ತಿರಸ್ಕರಿಸಿದರೂ ಚಂದ್ರಾವತಿಯನ್ನು ಕುಲದೇವತೆಯನ್ನಾಗಿ ಭಾವಿಸಿಕೊಂಡಿದ್ದರು. ಯಶವಂತಸಿಂಹನು ಷಹಜಹಾನನ ಹಿರಿಯ ಮಗನಾದ ದಾರಾನ ಪಕ್ಷವನ್ನು ವಹಿಸಿ ಬಾದಷಹನನ್ನು ಸೋಲಿಸಿ, ಆತನಿಗೆ ಶತ್ರುವಾಗಿ ಪುನಃ ಆತನ ಹತ್ತಿರದಲ್ಲಿಯೇ ಇದ್ದುದು ರಾಜಪುತ್ರರಿಗೆ ಸಮ್ಮತವಿರಲಿಲ್ಲ. ಆದುದರಿಂದ ಎಲ್ಲರೂ ಆತನಲ್ಲಿ ಅಸೂಯಾಪರರಾಗಿದ್ದರು. ಆದರೆ, ಚಂದ್ರಾವತಿಯ ಮೇಲೆ ರಾಜಪುತ್ರರಿಗೆ ಯಾವ ಅಸೂಯೆಯೂ ಇರಲಿಲ್ಲ. ಈಕೆ, ಉದಯಪುರ ರಾಜಪುತ್ರಿ. ವೀರಮಹಿಷಿಗೆ ಇರಬೇಕಾದ ಸದ್ಗುಣಗಳೆಲ್ಲವೂ ಈಕೆಯಲ್ಲಿದ್ದುವು. ಈಕೆಯ ವಿಷಯದಲ್ಲಿ ರಾಜಪುತ್ರರಿಗೆ ವಿಶೇಷವಾಗಿ ಪೂಜ್ಯಭಾವವಿರಲು ಒಂದು ಕಾರಣವಿರುವುದು.

ಕ್ರಿಸ್ತಶಕೆ ೧೬೫೮ ನೆಯ ವರ್ಷದಲ್ಲಿ ಔರಂಗಜೇಬನು ದಕ್ಷಿಣ ದೇಶದಿಂದ ಬಂದು ತಂದೆಯ ಮೇಲೆ ತಿರುಗಿಬಿದ್ದನು. ಯಶವಂತಸಿಂಹನು ಆತನನ್ನೆದುರಿಸಲು ಷಹಜಹಾನನ ಅಪ್ಪಣೆಯನ್ನು ಪಡೆದು ಹೊರಟನು. ಉಭಯ ಸೈನ್ಯಗಳಿಗೂ ಮಾಳವ ದೇಶದ 'ಉಜ್ಜಯಿನಿ' ಪಟ್ಟಣದ ಒಳಿಯಲ್ಲಿ ಘೋರವಾದ

ಯುದ್ಧವಾಯಿತು. ಇದರಲ್ಲಿ ಯಶವಂತಸಿಂಹನು ತನ್ನ ಬಾಹು ಪರಾಕ್ರಮವನ್ನು ಪೂರ್ಣವಾಗಿ ತೋರಿಸಿದನಾದರೂ, ತನ್ನ ಸೈನ್ಯವೆಲ್ಲವೂ ಯುದ್ಧದಲ್ಲಿ ವೀರಸ್ವರ್ಗವನ್ನು ಹೊಂದಲು ಆತನು ಉಳಿದ ಹತ್ತು ಜನ ಭಟರೊಡನೆ ತನ್ನ ರಾಜಧಾನಿಯನ್ನು ಕುರಿತು ಓಡಿಹೋದನು. ತನ್ನ ಪತಿಯು ಅಪಜಯವನ್ನು ಹೊಂದಿ, ಓಡಿಬರುತ್ತಿರುವನೆಂಬ ಸಮಾಚಾರವನ್ನು ಕೇಳಿದ ಕೂಡಲೇ ವೀರಮಹಿಷಿಯಾದ "ಚಂದ್ರಾವತಿ" ಯು ತನ್ನ ಪಟ್ಟಣದ ಕೋಟೆಯ ಬಾಗಿಲುಗಳೆಲ್ಲವನ್ನೂ ಮುಚ್ಚಿಸಿ, ತನ್ನ ಅಪ್ಪಣೆಯಿಲ್ಲದೆ ಯಾರನ್ನೂ ಒಳಕ್ಕೆ ಬಿಡಕೂಡದೆಂದು ದ್ವಾರ ಪಾಲಕರಿಗೆ ಕಠಿಣವಾಗಿ ಆಜ್ಞಾಪಿಸಿದಳು. ಚಂದ್ರಾವತಿಯು ಪರಮ ಪತಿವ್ರತೆಯಾದರೂ ಆಕೆಯಲ್ಲಿ ಪೌರುಷವೂ, ಶೂರತ್ವವೂ ಇದ್ದುದರಿಂದ ಇಂತಹ ಸಾಹಸಕಾರ್ಯಕ್ಕೆ ಪ್ರಯತ್ನಿಸಿ ದಳು. ಕ್ಷತ್ರಿಯನಾಗಿ ಹುಟ್ಟಿದ ಮೇಲೆ ಯುದ್ಧದಲ್ಲಿ ಜಯವ ನ್ನಾಗಲೀ ಇಲ್ಲವೆ ಮರಣವನ್ನಾಗಲೀ ಹೊಂದಬೇಕಲ್ಲದೆ ಶತ್ರು ಗಳಿಗೆ ಭಯಪಟ್ಟು ಓಡಿಬರಕೂಡದೆಂಬುದು ಈಕೆಯ ಪ್ರತಿ ಜ್ಞೆಯು; ಪತಿಯು ಶೂರವಂಶಜನೂ ಪರಾಕ್ರಮಶಾಲಿಯೂ ಆಗಿದ್ದರೂ ಯುದ್ಧದಲ್ಲಿ ಸೋತು ಓಡಿಬಂದಿದ್ದುದರಿಂದ ಕ್ಷತ್ರಿ ಯವಂಶಕ್ಕೆ ಕಳಂಕವು ಪ್ರಾಪ್ತವಾಯಿತೆಂದು ತಿಳಿದು ಯಶವಂ ತಸಿಂಹನು ಒಳಗೆ ಬರದಂತೆ ದ್ವಾರವೆಲ್ಲವನ್ನೂ ಮುಚ್ಚಿಸಿ, ಆತ ನನ್ನು ಮತ್ತೆ ಯುದ್ಧಕ್ಕೆ ಹೋಗುವಂತೆ ಮಾಡಬೇಕೆಂದು ನಿಶ್ಚಯಿಸಿದಳು.

ಯಶವಂತಸಿಂಹನು ಶತ್ರುಗಳ ಕೈಗೆ ಸಿಕ್ಕದೆ ವೇಷಧರ ನಾಗಿ ಹತ್ತುಜನ ಭಟರೊಡನೆ ತನ್ನ ರಾಜಧಾನಿಯಾದ ಜೋಧ ಪುರದ ಮಾರ್ಗವನ್ನು ಸಮೀಪಿಸಿದನು. ದ್ವಾರಗಳೆಲ್ಲವೂ

ಮುಚ್ಚಲ್ಪಟ್ಟಿದ್ದುದರಿಂದ ಒಳಗೆ ಹೋಗಲು ಅವಕಾಶವಿಲ್ಲವಾಯಿತು. ತಾನು ಜೋಧಪುರಾಧೀಶನಾದರೂ ತನ್ನ ರಾಜಧಾನಿಯನ್ನು ಪ್ರವೇಶಿಸಲು ಮಾರ್ಗತಿಳಿಯದೆ ಆಶ್ಚರ್ಯಪರನಾದನು. ದ್ವಾರಪಾಲಕರೆಲ್ಲರಿಗೂ ತನ್ನ ಹೆಸರನ್ನು ತಿಳಿಸಿ ನಯಭಯದಿಂದ ಬೋಧಿಸಿದರೂ ಅವರು ಮಹಾರಾಣಿಯವರ ಅಪ್ಪಣೆಯಿಲ್ಲದೆ ಬಾಗಿಲುಗಳನ್ನು ತೆರೆಯುವುದಿಲ್ಲವೆಂದು ಗಟ್ಟಿಯಾಗಿ ಹೇಳಿದರು. ಕೋಟೆಯ ಬುರುಜಿನ ಮೇಲೆ ಚಂದ್ರಾವತಿಯೂ ಪೃಥ್ವೀಸಿಂಗನೂ ತಮ್ಮನ್ನು ನೋಡುತ್ತಿರುವರೆಂದು ತಿಳಿದ ಕೂಡಲೇ ಯಶವಂತಸಿಂಹನು ಭಟರೊಡನೆ ಬುರುಜಿನ ಸಮೀಪಕ್ಕೆ ಬಂದನು. ನಾಚಿಕೆಯಿಂದ ಯಶವಂತಸಿಂಹನು ಚಂದ್ರಾವತಿಯನ್ನು ನೋಡಲಸಮರ್ಥನಾಗಿ ಬುರುಜಿನ ಕೆಳಗೆ ನಿಂತನು. ಆತನ ಭಟರಲ್ಲೊಬ್ಬನು ಚಂದ್ರಾವತಿಯನ್ನು ನೋಡಿ "ಅಮ್ಮಾ! ಮಹಾರಾಣಾ ಯಶವಂತಸಿಂಹ ಮಹಾರಾಜರವರು ಬಂದಿರುವರು. ದುರ್ಗದ್ವಾರಗಳನ್ನು ತೆರೆಯಿಸಿರಿ" ಎಂದು ಪ್ರಾರ್ಥಿಸಿದನು.

ಭಟನ ಮಾತನ್ನು ಕೇಳಿ ವೀರಮಹಿಷಿಯಾದ ಚಂದ್ರಾವತಿಯು ಆತನನ್ನು ನೋಡಿ—"ಅಯ್ಯಾ! ಉದಯಪುರ-ಜೋಧಪುರಗಳಲ್ಲಿರುವ ವೀರನಾರಿಯರಲ್ಲಿ ಜನಿಸಿದ ಪುರುಷರು ಹಗೆಗಳಿಗೆ ಬೆನ್ನು ಕೊಟ್ಟು ಎಂದಿಗೂ ಬರಲಾರರೆಂದು ನಾನು ದೃಢವಾಗಿ ನಂಬಿರುವೆನು. ನಾಚಿಕೆಯಿಲ್ಲದ ನೀವು ಮಾತ್ರ ಕಾಲಿಗೆ ಬುದ್ಧಿಹೇಳಿ ರಾಜಪುತ್ರರಿಗೆ ಅಪಕೀರ್ತಿಯನ್ನು ತಂದಿರುವಿರಿ. ಯುದ್ಧದಲ್ಲಿ ನನ್ನ ಪತಿಯು ವೀರಸ್ವರ್ಗವನ್ನು ಹೊಂದಿರುವನೆಂಬುದು ನಿಜವು. ಆತನೊಡನೆ ನೀವೂ ಪ್ರಾಣವನ್ನೊಪ್ಪಿಸದೆ ಬಂದಿರುವಿರಿ. ನಾಚಿಕೆಯಿಲ್ಲದೆ ಹೆಂಗಸರಂತ

ಬಳೆಗಳನ್ನು ತೊಟ್ಟುಕೊಂಡಿರೊ? ಮಹಾರಾಣಾರವರು ಬಂದಿರುವರೆಂದು ನನ್ನೊಡನೆ ಸುಳ್ಳನ್ನು ಹೇಳಲು ನಿಮಗೆ ನಾಲಿಗೆ ಹೇಗೆ ಬಂದಿತು? ಪೌರುಷವನ್ನು ಬಿಟ್ಟು ಎಂದಿಗಾದರೂ ನನ್ನ ಪತಿಯು ನಿಮ್ಮಂತೆ ಓಡಿಬರುವರೆ? ಹೊರಡಿರಿ-ಬೇಗ ಹೊರಡಿರಿ, ನೀವೆಲ್ಲರೂ ಪುನಃ ರಣಭೂಮಿಯಲ್ಲಿ ಪುರುಷರಂತೆ ಯುದ್ಧಮಾಡಿ ವೀರಸ್ವರ್ಗವನ್ನು ಹೊಂದಿರಿ" ಎಂದು ಮರುತ್ತರವಿತ್ತಳು.

ಚಂದ್ರಾವತಿಯ ಮಾತನ್ನು ಕೇಳಿ ಸೇವಕರು ಮರುನುಡಿ ನುಡಿಯದೆ, ಯಶವಂತಸಿಂಹನ ಮುಖವನ್ನು ನೋಡುತ್ತ ನಿಂತರು. ಬುರುಜಿನ ಕೆಳಗೆ ಅವಿತಿದ್ದ ಯಶವಂತಸಿಂಹನು ಏನುಮಾಡುವುದಕ್ಕೂ ತಿಳಿಯದೆ ನಾಚಿಕೆಯಿಂದ ಮೃತಪ್ರಾಯನಾಗಿ ಹೊರಗೆ ಬಂದು ಚಂದ್ರಾವತಿಯನ್ನು ನೋಡಿ-"ದೇವಿ! ನಾನು ನಿಜವಾಗಿಯೂ ಯಶವಂತಸಿಂಹನು. ಬಾಗಿಲನ್ನು ತೆರೆ" ಎಂದನು. ಚಂದ್ರಾವತಿಯು ಈ ಮಾತನ್ನು ಕೇಳಿದರೂ ಕೇಳದವಳಂತೆ ನಟಿಸಿ, ಕೆಳಗೆ ನಿಂತಿದ್ದ ಸರದಾರನನ್ನು ನೋಡಿ ಅತ್ಯಂತ ಕೋಪದಿಂದ—"ಇನ್ನೂ ಯುದ್ಧಭೂಮಿಗೆ ಹೋಗಲಿಲ್ಲವೊ? ನೀವು ಹೋಗದಿದ್ದರೆ ನನ್ನ ಸೈನ್ಯವನ್ನು ಕರೆದು, ರಣಭೂಮಿಯಲ್ಲಿ ನನ್ನ ಪತಿಯೊಬ್ಬನನ್ನೇ ಬಿಟ್ಟು ಬಂದುದರಿಂದ ನಿಮ್ಮ ತಲೆಗಳನ್ನೆಲ್ಲಾ ಭೂದೇವಿಗೆ ಅರ್ಪಿಸುವಂತೆ ಮಾಡುವೆನು" ಎಂದು ಕಠಿಣವಾಗಿ ಹೇಳಿದಳು. ಒಳಗೆ ಹೋಗಲು ಎಷ್ಟು ಪ್ರಯತ್ನಿಸಿದರೂ ಯಶವಂತಸಿಂಹನಿಗೆ ದಾರಿಯೇ ತೋರಲಿಲ್ಲ. ಕಡೆಗೆ ಚಂದ್ರಾವತಿಯನ್ನು ಒಮ್ಮೆ ಬೆದರಿಸಿದನು. ಚಂದ್ರಾವತಿಯು ಅದಕ್ಕೆ ಸ್ವಲ್ಪವೂ ಹೆದರದೆ...."ಶತ್ರುಗಳಿಗೆ ಸೋತು ಓಡಿಬಂದ

ಲಿಗೆ ಸ್ತ್ರೀಯರನ್ನು ಹೆದರಿಸುವುದಲ್ಲದೆ ಮತ್ತಾವ ಪೌರುಷವಿರುವುದು? ಶತ್ರುಗಳನ್ನು ನೋಡಿ ಬೆದರಿ ಬಂದವರಿಗೆ ಹೆಂಗಸರು ತಾನೆ ಏಕೆಭಯಪಡುವರು?" ಎಂದು ಪ್ರತ್ಯುತ್ತರವಿತ್ತಳು.

ಮುಂದೆ ಏನು ಮಾಡುವುದಕ್ಕೂ ತೋಚದ ಯಶವಂತಸಿಂಹನು ಭಟರೊಡಗೊಂಡು ಸಮೀಪದಲ್ಲಿದ್ದ ಒಂದು ದೇವಾಲಯವನ್ನು ಸೇರಿ ಅಲ್ಲಿ ನಿಂತನು. ಯುದ್ಧದಲ್ಲಿ ಹಲವು ಘಾಯಗಳು ತಗಲಿದ್ದುದರಿಂದಲೂ, ಪತ್ನಿಯಿಂದಾದ ಅಪಮಾನದಿಂದಲೂ ಆ ದಿನ ರಾತ್ರಿ ಅತನಿಗೆ ಜ್ವರವು ಪ್ರಾಪ್ತವಾಗಿ ೧೫ ದಿವಸಗಳವರೆಗೂ ಬಿಡದೆ ಕಾಡಿತು. ಕಡೆಗೆ ಈ ಸಮಾಚಾರವು ಅರಮನೆಯ ದಾಸೀಜನರಿಗೆ ತಿಳಿಯಲು ಅವರು ಮಹಾರಾಣಿಗೆ ಈ ವಿಷಯವನ್ನು ತಿಳಿಯಪಡಿಸಿದರು. ಈಕೆಯು ಆ ಮಾತನ್ನು ನಂಬದೆ ನಿಜಾಂಶವನ್ನು ತಿಳಿಯಬೇಕೆಂದು ತಾನು ದಾಸಿಯಂತೆ ವೇಷವನ್ನು ಧರಿಸಿ ದೇವಾಲಯವನ್ನು ಪ್ರವೇಶಿಸಿದಳು. ಅಲ್ಲಿ ಯಶವಂತಸಿಂಹನು ಜ್ವರದ ತಾಪದಿಂದ ನಿದ್ರಾಹಾರಗಳಿಲ್ಲದೆ ಕೃಶನಾಗಿ ಪ್ರಾಣಮಾತ್ರಾವಶಿಷ್ಟನಾಗಿದ್ದನು. ತನ್ನ ಪತಿಯನ್ನು ನೋಡಿದ ಕೂಡಲೇ ಚಂದ್ರಾವತಿಯು ತಾನು ಮಾಡಿದ ಸಾಹಸಕ್ಕೆ ಅತ್ಯಂತ ಪಶ್ಚಾತ್ತಾಪಪಟ್ಟು, ಆತನ ಪಾದಗಳ ಮೇಲೆಬಿದ್ದು ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸುತ್ತ ರೋಧಿಸತೊಡಗಿದಳು. ಯಶವಂತಸಿಂಹನು ಪತ್ನಿಯಮೇಲೆ ಅತ್ಯಂತ ಕ್ರೋಧವನ್ನು ತಾಳಿದ್ದರೂ ಕಡೆಗೆ ಆಕೆಯನ್ನು ಕ್ಷಮಿಸಿ ಸಮಾಧಾನಪಡಿಸಿದನು. ಸಾಧ್ವೀಮಣಿಯಾದ ಚಂದ್ರಾವತಿಯು ಕೆಲವು ದಿನಗಳವರೆಗೂ ಅಲ್ಲಿಯೇ ಪತಿಸೇವೆ ಮಾಡುತ್ತಿದ್ದು ಪತಿಗೆ ಜ್ವರವು ಶಮನವಾದ ಬಳಿಕ ಆತನನ್ನೂ ಜತೆಗೊಂಡು ಪಟ್ಟಣದೊಳಗೆ ಬಂದಳು.

ಹೀಗೆ ಈ ಸಾಧ್ವೀಮಣಿಯು ಮೊದಲು ತೋರಿಸಿದ ಶೂರತ್ವದಿಂದಲೂ ಅನಂತರ ತೋರಿಸಿದ ಪಾತಿವ್ರತ್ಯದಿಂದಲೂ ಈಕೆಯ ಕೀರ್ತಿಯು ರಾಜಪುತ್ರಸ್ಥಾನದಲ್ಲೆಲ್ಲ ವ್ಯಾಪಿಸಿ ಎಲ್ಲರೂ ಆಕೆಯನ್ನು ದೇವತೆಯನ್ನಾಗಿ ಭಾವಿಸುವಂತೆ ಮಾಡಿತು. ಔರಂಗಜೇಬನು ಮಾಡಿದ ಕುಟಿಲ ನಟನೆಗಳಿಂದ ಯಶವಂತ ಸಿಂಹನಿಗೆ ಉಂಟಾದ ಸಂಕಟಗಳಲ್ಲಿ ಚಂದ್ರಾವತೀದೇವಿಯು ತನ್ನ ಪತಿಭಕ್ತಿಯನ್ನೆಲ್ಲ ಪ್ರಕಾಶಪಡಿಸಿದಳು. ಕಾಬೂಲ್ ದೇಶಕ್ಕೆ ಹೋಗುವಾಗ ಕುಮಾರನಾದ ಪೃಥಿವೀಸಿಂಗನಿಗೆ ಪಟ್ಟ ವನ್ನು ಕಟ್ಟಿ—"ನೀನು ನಿನ್ನ ಕುಮಾರನೊಡನೆ ಇರು" ಎಂದು ಯಶವಂತಸಿಂಹನು ಎಷ್ಟು ಹೇಳಿದರೂ ಗರ್ಭವತಿ ಯಾಗಿದ್ದ ಚಂದ್ರಾವತಿಯು ಅದಕ್ಕೆ ಸಮ್ಮತಿಸದೆ, ಪುತ್ರವಾತ್ಸ ಲ್ಯವನ್ನು ಕೂಡ ಬಿಟ್ಟು ಸೀತಾದೇವಿಯಂತೆ ಭರ್ತಾರನೊಡನೆ ಹೊರಟಳು. ಅಲ್ಲಿಗೆ ಹೋದಮೇಲೆ, ಪುತ್ರನ ಮರಣವೂ ಪತಿವಿಯೋಗವೂ ಸಂಭವಿಸಿದುದರಿಂದ ಆ ಶೂರವನಿತೆಯು ತನ್ನ ಶೌರ್ಯ ಧೈರ್ಯಾದಿ ಪೌರುಷ ಲಕ್ಷಣಗಳೆಲ್ಲವನ್ನೂ ತನ್ನ ಪತಿಯ ಹಿಂದೆಯೇ ಕಳುಹಿ, ತಾನು ಓರ್ವ ಸಾಮಾನ್ಯ ಸ್ತ್ರೀಯಂತೆ ಅಬಲೆಯಾದಳು.

ಪತಿಯೊಡನೆ ಸಹಗಮನ ಮಾಡಲು ಯತ್ನಿಸಿದಳಾದರೂ ದುರ್ಗಾದಾಸನೇ ಮೊದಲಾದ ಸರದಾರರ ಪ್ರಾರ್ಥನೆಯನ್ನು ಮನ್ನಿಸಿ ತನ್ನ ಸಾಹಸವನ್ನು ನಿಲ್ಲಿಸಿದಳು. ಶತ್ರುಗಳ ಭಯ ವಿಲ್ಲದಂತೆ ದುರ್ಗಾದಾಸ ಮೊದಲಾದವರು ಆಕೆಯನ್ನು ಕಾಪಾ ಡುತ್ತಿದ್ದರು. ಕಾಲ-ದೇಶಜ್ಞಳಾದ ಇಂದಿರೆಯು ಪ್ರಸಿದ್ಧ ವಾದ ಪೂರ್ವಜರ ಕಥೆಗಳನ್ನು ಹೇಳುತ್ತ ಚಂದ್ರಾವತಿಗೆ ಸಮಾಧಾನವನ್ನು ಮಾಡುತ್ತಿದ್ದಳು. ಈಚೆ ತನ್ನ ಅಣ್ಣ

ನಾದ ದುರ್ಗಾದಾಸನಂತೆಯೇ ಚತುರೋಪಾಯಜ್ಞಳಾಗಿ, ಚಂದ್ರಾವತಿಗೆ ಪ್ರಾಣಸಖಿಯಾಗಿ ಆಕೆಯ ಸಂಪೂರ್ಣಾನು ಗ್ರಹಕ್ಕೆ ಪಾತ್ರಳಾಗಿದ್ದಳು. ಚಂದ್ರಾವತಿಯು ತನ್ನ ದುಸ್ಥಿತಿಯನ್ನು ಸ್ಮರಿಸಿ ಸ್ಮರಿಸಿ, ಇನ್ನೂ ಮುಂದೆ, ಎಷ್ಟೆಷ್ಟು ಕಷ್ಟಗಳು ಸಂಭವಿಸುವವೋ-ಎಂದು ತಲ್ಲಣಿಸುತ್ತಿದ್ದಳು.

ಹೀಗೆಯೇ ಎರಡು ದಿನಗಳು ಕಳೆದುಹೋದವು. ಮೂರನೆಯ ದಿನ ಪ್ರಾತಃಕಾಲ, ಶುಭಮುಹೂರ್ತದಲ್ಲಿ ಚಂದ್ರಾವತೀ ಮಹಾರಾಣಿಯು ಪುಂತ್ರನನ್ನು ಪಡೆದಳು. ಪುತ್ರೋತ್ಸವವಾದ ಶುಭವರ್ತಮಾನವನ್ನು ಕೇಳಿ, ಇಂದಿರಾ ಚಂದ್ರಾವತಿಯರೂ, ದಾಸ ದಾಸೀಜನಗಳೂ ಆನಂದ ಪರವಶರಾಗಿ ತಮ್ಮ ದುಃಖವನ್ನು ಮರೆತರು. ಆದರೆ ಈ ಸಂತೋಷವು ಬಹುಕಾಲ ನಿಲ್ಲಲಿಲ್ಲ. ಯಶವಂತಸಿಂಹನ ಮರಣವನ್ನೂ ಚಂದ್ರಾವತಿಯ ಕುಮಾರನಾದ ಅಜಿತಸಿಂಹನ ಜನನವನ್ನೂ ಔರಂಗಜೇಬನು ತಿಳಿದುದೇ ಆದರೆ ತಮಗೆ ಎಂತಹ ಮೋಸವು ಪ್ರಾಪ್ತವಾಗುವದೋ—ಎಂದು ದುರ್ಗಾದಾಸನು ಸದಾ ವಿಚಾರ ಪರನಾಗಿದ್ದನು. ಆದರೆ ಧೈರ್ಯಶಾಲಿಗಳಾದ ದುರ್ಗಾದಾಸ, ಶಿವಸಿಂಗರು ಎಂತಹ ಕಷ್ಟಗಳನ್ನಾದರೂ ಸಹಿಸಿಕೊಂಡು, ಜೋಧ್ಪುರ ವಂಶವನ್ನು ಕಾಪಾಡುವೆವೆಂದು ಕಂಕಣ ಬದ್ಧರಾಗಿದ್ದುದರಿಂದ ಔರಂಗಜೇಬನಿಗೆ ಭಯಪಡುತ್ತಿರಲಿಲ್ಲ. ಆ ಕಾಲದ ರಾಜಪುತ್ರ ವೀರರಲ್ಲಿ ಇವರಿಬ್ಬರೂ ಹೆಸರ್ಗೊಂಡವರಾಗಿದ್ದರು. ದೇಶಾಭಿಮಾನವನ್ನೂ, ರಾಜಕಾರ್ಯನಿರ್ವಹಣ ಚಾತುರ್ಯವನ್ನೂ ಇತರರು ಇವರಿಂದ ಕಲಿಯಬೇಕೆನ್ನುವಂತಿದ್ದುವು. ದುರ್ಗಾದಾಸನ ತಂಗಿಯಾದ ಇಂದಿರೆಯು ಕೂಡ ಸದ್ಗುಣಗಳಲ್ಲಿ ತನ್ನ ಅಣ್ಣನಿಗೆ ಸರಿ

ಯೆನ್ನಿಸುತ್ತಿದ್ದಳು. ಆಕೆಯಲ್ಲಿದ್ದ ಶೌರ್ಯ, ಧೈರ್ಯ, ಗಾಂಭೀರ್ಯಾದಿ ಗುಣಗಳನ್ನು ಎಷ್ಟು ವರ್ಣಿಸಿದರೂ ಸಾಲದು. ಜೋಧ್ಪುರ ವಂಶಾಭಿವೃದ್ಧಿಯಲ್ಲಿ ಕಂಕಣಬದ್ಧರಾಗಿರುವ ಈ ಮೂವರ ಸದ್ವರ್ತನಗಳನ್ನೂ ವಾಚಕರು ಮುಂದೆ ಮುಂದೆ ತಿಳಿಯಬಹುದು. ಎರಡು ದಿನಗಳು ಕಳೆದಬಳಿಕ ಕಾಬೂಲ್ ದೇಶದಿಂದ ಚಂದ್ರಾವತಿಯನ್ನೂ ಅಜಿತಸಿಂಹನನ್ನೂ ಹೇಗಾದರೂ ಮಾಡಿ ತಪ್ಪಿಸಿ, ಜೋಧ್ಪುರವನ್ನು ಸೌಖ್ಯವಾಗಿ ಸೇರಿಸಬೇಕೆಂದು ಮೂವರೂ ಆಲೋಚಿಸುತ್ತಲೇ ಇದ್ದರು. ಹೀಗೆ ಇವರ ಪ್ರಯತ್ನವು ಕೊನೆಸಾಗುವದಕ್ಕೆ ಮೊದಲೇ ಒಂದು ದಿನ ಮಧ್ಯಾಹ್ನ ಒಬ್ಬ ಮುಹಮ್ಮದೀಯನು ದುರ್ಗಾದಾಸನ ಬಿಡಾರವನ್ನು ಸಮೀಪಿಸಿ, ದ್ವಾರಪಾಲಕನನ್ನು ಕೇಳಿದ ಕೂಡಲೆ ಒಳಗಿದ್ದ ದುರ್ಗಾದಾಸನು ಹೊರಗೆ ಬಂದು ನಿಲ್ಲಲು ಮುಹಮ್ಮದೀಯನು ಆತನ ಕೈಗೆ ಒಂದು ಕಾಗದವನ್ನು ಕೊಟ್ಟನು. ತಕ್ಷಣವೇ ದುರ್ಗಾದಾಸನು ಅತ್ಯಾತುರದಿಂದ ಕಾಗದವನ್ನು ಬಿಚ್ಚಿ ಹೀಗೆ ಓದಲಾರಂಭಿಸಿದನು.

“. ಯಶವಂತಸಿಂಹಮಹಾರಾಜರ ಸೇನಾಧಿಪತಿಯಾದ ದುರ್ಗಾದಾಸನಿಗೆ—ದಿಲ್ಲೀನಗರಾಧಿಪನಾದ ಔರಂಗಜೇಬ ಬಾದಷಹನು ಬರೆದ ಸಂಗತಿಯೇನೆಂದರೆ—

ಪುತ್ರಶೋಕದಿಂದ ಯಶವಂತಸಿಂಹನು ಪರಲೋಕಗತನಾದನೆಂದು ಕೇಳಿದಂದಿನಿಂದಲೂ ನನ್ನ ಮನಸ್ಸು ದುಃಖಸಾಗರದಲ್ಲಿ ಮುಳುಗಿರುವುದು. ದೂರದೇಶವಾದ ಕಾಬೂಲಿನಲ್ಲಿರುವುದರಿಂದ ಚಂದ್ರಾವತಿಗೆ ಯಾವುದಾದರೂ ಕಷ್ಟವು ಸಂಭ

ಏನುವದೋ—ಏನೋ ಎಂಬ ಸಂದೇಹದಿಂದ ಆಕೆಗೆ ಸಹಾಯವಾಗಿ ನನ್ನ ಸೇನಾನಾಯಕನಾದ ನಯನಪಾಲನನ್ನು ಸೇನಾಸಮೇತವಾಗಿ ಕಳುಹಿರುವೆನು. ಆದುದರಿಂದ ನೀನು ಚಂದ್ರಾವತಿಯನ್ನು ಕರೆದುಕೊಂಡು ನಯನಪಾಲನ ಸಹಾಯವನ್ನು ಪಡೆದು ದಿಲ್ಲೀನಗರಕ್ಕೆ ಬರಬೇಕು.

"ಔರಂಗಜೇಬ"

ಕಾಗದವನ್ನು ಓದಿದ ಕೂಡಲೆ ದುರ್ಗಾದಾಸನು ಅತ್ಯಂತ ಭಯಾಕ್ರಾಂತನಾಗಿ ಶಿವಸಿಂಗನನ್ನು ಕರೆದು ಆತನಿಗದನ್ನು ತೋರಿಸಿ, ಆತನೊಡನೆ ಬಿಡಾರದಿಂದ ಸ್ವಲ್ಪ ದೂರ ಹೋಗಿ ನಿಂತನು. ಆಗ ಆತನಿಗೆ ದೂರದಲ್ಲಿ ಕೆಲವು ಸೈನ್ಯಗಳು ಬರುತ್ತಿದ್ದಂತೆ ಗೋಚರವಾಯಿತು. ಚಿಂತಾಕ್ರಾಂತರಾಗಿದ್ದ ಅವರಿಬ್ಬರೂ ಆಶ್ಚರ್ಯಾನ್ವಿತರಾಗಿ ಸ್ವಲ್ಪಹೊತ್ತು ಆಕಡೆಯೇ ತಮ್ಮ ದೃಷ್ಟಿಯನ್ನು ಪ್ರಸರಿಸಿ ನಿಂತಿರಲು ಸ್ವಲ್ಪಹೊತ್ತಿಗೆ ಭೀಕರಾಕಾರನಾದ ಅಶ್ವಾರೋಹಿಯೊಬ್ಬನು ಬಂದು ದುರ್ಗಾದಾಸನ ಮುಂದೆ ನಿಂತನು.

ದುರ್ಗಾದಾಸ:—ಓಹೋ! ನಯನಪಾಲಾ! ಎಲ್ಲಿಗೆ ಹೋಗುತ್ತಿರುವೆ?

ನಯನ:—ಅಯ್ಯಾ! ನಿನ್ನ ಸಹಾಯಾರ್ಥವಾಗಿಯೇ ಬಂದಿರುವೆನು. ಪುತ್ರಶೋಕದಿಂದ ಯಶವಂತಸಿಂಹನು ಪರಲೋಕಗತನಾದನೆಂಬ ವಾರ್ತೆಯನ್ನು ಕೇಳಿ ಆಲಂಫೀರ್ ಬಾದಷಹನು ಚಂದ್ರಾವತಿಗೆ ಯಾವ ಕೊರತೆಯನ್ನೂ ಬರಗೊಡಿಸಕೂಡದೆಂದು ಆಜ್ಞೆಮಾಡಿ ಆಕೆಯನ್ನು ಕರೆತರಲು ನನ್ನನ್ನು ಕಳುಹಿಸಿರುವನು. ಯಶವಂತಸಿಂಹನಿಗೆ ಶತ್ರುಗಳಾದ ದಾಯಾದಿ

ಗಳು ಅನೇಕರಿರುವುದರಿಂದ ತನ್ನ ಸೈನ್ಯವನ್ನು ನನ್ನೊಡನೆ ಕಳುಹಿರುವನು. ಎಲ್ಲಿ? ಚಂದ್ರಾವತಿ ಎಲ್ಲಿರುವಳು? ಆಕೆ ಯನ್ನು ಜಾಗ್ರತೆಯಾಗಿ ದಿಲ್ಲೀ ನಗರಕ್ಕೆ ಪ್ರಯಾಣಗೊಳಿಸು.

ನಯನಪಾಲನ ಮಾತುಗಳನ್ನು ಕೇಳಿ ದುರ್ಗಾದಾಸನ ಹೃದಯದಲ್ಲಿ ಕಂಪನವುಂಟಾಯಿತು ದೈವವು ಯಾವ ಕ್ಷಣದಲ್ಲಿ ಎಂತಹ ಆಪತ್ತನ್ನುಂಟು ಮಾಡುವುದೋ ತಿಳಿಯದಲ್ಲವೆ? ಕರ್ತ ವ್ಯಪರಾಯಣನಾದ ದುರ್ಗಾದಾಸನು, ಹೇಗಾದರೂ ಮಾಡಿ ಚಂದ್ರಾವತಿಯನ್ನು ಜೋಡ್ಪುರಕ್ಕೆ ಸೇರಿಸಬೇಕೆಂದು ಪ್ರಯ ತ್ನಿಸುತ್ತಾ ತನ್ನ ಅಭಿಪ್ರಾಯವನ್ನು ಹೊರಪಡಿಸದೆ, ನಯನ ಪಾಲನೊಡನೆ ಅತ್ಯಂತ ಸಂತೋಷದಿಂದಿರುವಂತೆ ನಟಿಸುತ್ತಾ ನಯನಪಾಲನನ್ನು ನೋಡಿ, ಹೀಗೆ ಹೇಳಿದನು:—

"ಅಯ್ಯಾ, ಇದಕ್ಕಿಂತಲೂ ನಮಗೇನು ಬೇಕು? ಆಲಂ ಘೀರ್ ಬಾದಷಹರೇ ನಮ್ಮ ಚಂದ್ರಾವತೀದೇವಿಯ ಮೇಲೆ ಪೂರ್ಣಾನುಗ್ರಹವನ್ನಿಟ್ಟಿರಲು ಆಕೆಗೆ ಎಂತಹ ಅಪತ್ತಾದರೂ ಒದಗುವುದೇ? ಆದರೆ ನಾನು ಒಂದು ವಿಷಯಕ್ಕೆ ಮಾತ್ರ ಹಿಂತೆ ಗೆಯುವೆನು. ಆಕೆಯು ಮೊನ್ನೆಯ ದಿನವೇ ಸ್ನಾನಮಾಡಿರು ವಳು. ಆಕೆಯ ಶರೀರವು ಬಹಳ ಕೃಶವಾಗಿರುವುದು. ಇಷ್ಟೇ ಅಲ್ಲದೆ ಯಶವಂತಸಿಂಹನ ಉತ್ತರ ಕ್ರಿಯೆಗಳನ್ನು ಮಾಡ ಬೇಕು. ಈ ಹನ್ನೊಂದು ದಿನಗಳು ಮುಗಿಯದೆ ಇಲ್ಲಿಂದ ಹೊರ ಡಕೂಡದು. ನೀವು ಕೂಡ ರಾಜಪುತ್ರರಲ್ಲವೆ? ನಮ್ಮ ಕುಲಾ ಚಾರಗಳು ನಿಮಗೆ ತಿಳಿಯದೆ? ಆದುದರಿಂದ ಇದಕ್ಕೆ ನೀವು ಸಮ್ಮತಿಸಿ ನನ್ನ ಕೋರಿಕೆಯನ್ನು ನೆರವೇರಿಸಬೇಕು ಅನಂ ತರ ನಿಮ್ಮ ಅಪ್ಪಣೆಯಂತೆ ನಡೆಯಲು ಸಿದ್ಧನಾಗಿರುವೆನು."

ಎಂದು ಹೇಳಲು ನಯನಪಾಲನು ಆನಂದಭರಿತನಾಗಿ ದುರ್ಗಾದಾಸನು ತನ್ನ ಮೋಸಕ್ಕೆ ಸಿಕ್ಕಿಬಿದ್ದಿರುವನೆಂದು ನಿಶ್ಚಯಿಸಿ ಹೇಳಿದನು—

"ಅಯ್ಯಾ! ಆಕೆಯ ಇಷ್ಟಾನುಸಾರವಾಗಿ ಯಾವ ಕೊರತೆಯೂ ಇಲ್ಲದಂತೆ ಕರೆದುಕೊಂಡು ಬರಬೇಕೆಂದು ಬಾದಷಹರ ಅಪ್ಪಣೆಯಾಗಿದೆ. ಇನ್ನು ನಾಲ್ಕು ದಿನಗಳು ಇಲ್ಲಿಯೇ ಇದ್ದು, ಆಕೆಯನ್ನು ಕರೆದುಕೊಂಡು ಹೋಗೋಣ."

ನಯನಪಾಲನ ಮಾತಿಗೆ ದುರ್ಗಾದಾಸನು ಸಮ್ಮತಿಸಿದಂತೆ ನಟಿಸಿದನು. ನಯನಪಾಲನು ದುರ್ಗಾದಾಸನ ಗುಡಾರದ ಬಳಿಯಲ್ಲಿಯೇ ತನ್ನ ಗುಡಾರವನ್ನು ಹಾಕಿಸಿ, ಚಂದ್ರಾವತಿಯ ಗುಡಾರದ ಸುತ್ತಲೂ ತನ್ನ ಸೈನಿಕರನ್ನು ಕಾವಲಿರಿಸಿ, ಜಾಗರೂಕರಾಗಿರುವಂತೆ ಆಜ್ಞಾಪಿಸಿದನು. ದುರ್ಗಾದಾಸನೂ, ತನ್ನ ಮಾಯೆಯಲ್ಲಿ ನಯನಪಾಲನು ಸಿಕ್ಕಿಬಿದ್ದಿರುವನೆಂದು ಸಂತೋಷಪಡುತ್ತಾ ಚಂದ್ರಾವತಿಯನ್ನೂ, ಅಜಿತಸಿಂಹನನ್ನೂ ಹೇಗಾದರೂ ಮಾಡಿ ತಪ್ಪಿಸಬೇಕೆಂದು ಉಪಾಯಗಳನ್ನು ಯೋಚಿಸುತ್ತಿದ್ದನು. ಆದರೇನು? ಪ್ರಬಲವಾದ ಶತ್ರುಸೈನ್ಯವು ತನನ್ನು ಸುತ್ತಿಮುತ್ತಿದ್ದುದರಿಂದ ಆತನ ಉಪಾಯಗಳೆಲ್ಲವೂ ನಿರರ್ಥಕಗಳಾದುವು. ಜೋಧಪುರವಂಶಕ್ಕೆ ಎಂತಹ ಆಪತ್ತು ಒಂದರೂ ಅದನ್ನು ತೊಲಗಿಸುವ ಭಾರವು ದುರ್ಗಾದಾಸನ ಮೇಲೆ ಇದ್ದುದರಿಂದ ಆತನ ಮನಸ್ಸು ಬಗೆಬಗೆಯಾಗಿ ಚಿಂತಿಸುತ್ತಿದ್ದಿತು. ನಯನಪಾಲನು ತನ್ನ ಸೈನ್ಯವನ್ನೆಲ್ಲಾ ಗುಡಾರದ ಸುತ್ತಲೂ ಕಾವಲಿರಿಸಿ ದುರ್ಗಾದಾಸ, ಇಂದಿರೆ, ಇವರು ಹೊರತು ಮತ್ತಾರೂ ಹೊ

ರಕ್ಕೆ ಬರಲಾಗದೆಂದು ಕಟ್ಟುಮಾಡಿದನು. ದುರ್ಗಾದಾಸನು ಆದಿನ ರಾತ್ರಿ ತನ್ನ ತಂಗಿಯಾದ ಇಂದಿರೆಯೊಡನೆ ಉಪಾಯಗಳನ್ನು ಕುರಿತು ಆಲೋಚಿಸತೊಡಗಿದನು.

ದುರ್ಗಾ:—ಇಂದಿರಾ! ಮಾಡಬೇಕಾದ ಕಾರ್ಯಗಳು ಬಹುವಾಗಿದ್ದರೂ ಉಪಾಯವೇನನ್ನೂ ತಿಳುಹದೆ ಸುಮ್ಮನಿರುವೆಯಲ್ಲ!

ಇಂದಿರಾ:—ಅಣ್ಣಯ್ಯ! ದೈವಘಟನೆ ಹೇಗಿರುವುದೋ ಹೇಳುವವರಾರು? ಕುಮಾರನೊಡನೆ ಚಂದ್ರಾವತಿಯನ್ನು ಶತ್ರುಗಳ ಮುತ್ತಿಗೆಯಿಂದ ತಪ್ಪಿಸುವುದು ತಿಳಿಯದೆ ಚಿಂತಿಸಬೇಕಾಗಿದೆ. ನಾವು ಯಶವಂತನು ಹಾರಾಣಾಜಿಯವರ ಋಣವನ್ನು ಹೇಗೆ ತೀರಿಸಬೇಕು?

ದುರ್ಗಾ:—ನಾನೂ ಇದಕ್ಕಾಗಿಯೇ ಯೋಚಿಸುತ್ತಿರುವೆನು. ನೀನು ಇಂತಹ ಸಂದಿಗ್ಧ ಸಮಯಗಳಲ್ಲಿ ತಕ್ಕ ಉಪಾಯಗಳನ್ನು ತಿಳುಹಬಲ್ಲೆಯೆಂದು ನಿನ್ನಲ್ಲಿ ಆಲೋಚಿಸಲು ಬಂದಿರುವೆನು. ಈ ನಯನಪಾಲನು ನಮ್ಮನ್ನು ಮೋಸಪಡಿಸುವುದಕ್ಕಾಗಿಯೇ ಬಂದಿರುವನು. ಅವನನ್ನು ಹೇಗಾದರೂಮಾಡಿ ಮೋಸಪಡಿಸಬೇಕೆಂಬುದು ನನ್ನ ಅಭಿಲಾಷೆ.

ಇಂದಿರಾ:—ಅಣ್ಣಯ್ಯ! ನಯನಪಾಲನ ಸೈನ್ಯವನ್ನು ಜಯಿಸಬೇಕೆಂದರೆ ನಮಗಿರುವ ಸೈನ್ಯವು ಅತ್ಯಲ್ಪವು. ಇದರಲ್ಲಿಯೂ ಅರ್ಥವೆಲ್ಲ ಮೊಗಲರೆ—

ದುರ್ಗಾ:—ಇಂದಿರಾ! ಈಗ ಅದು ನಮಗೆ ಅನುಕೂಲವಾದ ಕಾರ್ಯವಲ್ಲ. ಹಾಗೆ ಮಾಡಿದರೆ ನಮಗೆ ಖಂಡಿತವಾಗಿಯೂ ಮೋಸವು ಸಂಭವಿಸುವುದು. ನಯನಪಾಲ

ನೊಡನೆ ಸ್ನೇಹದಿಂದಲೇ ಇದ್ದು ಒಳಸಂಚಿನಿಂದ ಕಾರ್ಯವನ್ನು ಸಾಧಿಸಬೇಕು. ಅವನು ಸಾಮಾನ್ಯನಲ್ಲ. ಅವನಿಗೆ ತಿಳಿದಿರುವಷ್ಟು ಮಾಯೆಗಳು ಮತ್ತಾರಿಗೂ ತಿಳಿಯವು. ಇಂತಹವನನ್ನು ಪ್ರತಿಭಟಿಸಿ ಗೆಲ್ಲುವದು ಪ್ರಯಾಸವು. ಉಪಾಯದಿಂದಲೇ ಗೆಲ್ಲಬೇಕು. ಬುದ್ಧಿಶಾಲಿನಿಯಾದ ನೀನು ತಕ್ಕ ಉಪಾಯದಿಂದ ಜೋಧ್ಪುರ ವಂಶವನ್ನು ರಕ್ಷಿಸು. ನನ್ನ ಬುದ್ಧಿ, ಚಾತುರ್ಯ ಬಲಗಳೆಲ್ಲವೂ ಯಶವಂತನೊಡನೆಯೇ ಹೋಗಿರುವುವು. ಆದರೂ ನನಗೆ ಒಂದು ಉಪಾಯವು ತೋರುತ್ತಿರುವುದು. ಅದು ನಿನಗೆ ಸಮ್ಮತವಾಗುವುದೇ-ತಿಳಿದು ಹೇಳು—ಎಂದು ಇಂದಿರೆಯ ಕಿವಿಯಲ್ಲಿ ಏನನ್ನೋ ಹೇಳಿ ಆ ಬಳಿಕ—"ಇಂದಿರಾ! ಈ ಉಪಾಯಕ್ಕೆ ನೀನು ಅಂಗೀಕರಿಸದಿದ್ದರೆ ಕಾರ್ಯಸಾಧನೆಯಾಗುವುದಿಲ್ಲ." ಎಂದು ಹೇಳಿದನು.

ಇಂದಿರಾ—"ಅಣ್ಣಾ! ನಾನು ನಿನಗೆ ಪ್ರತಿಯಾಡತಕ್ಕವಳಲ್ಲ. ಈ ವಿಚಾರದಲ್ಲಿ ನಿನಗೆ ಸಂದೇಹವೇ ಬೇಡ. ಈವರೆಗೆ ನಮ್ಮನ್ನು ರಕ್ಷಿಸಿದ ಆ ಯಶವಂತಸಿಂಹನಿಗೆ ನಮ್ಮ ರಾಜಭಕ್ತಿಯನ್ನು ತೋರಿಸುವುದು ನಮ್ಮ ಕರ್ತವ್ಯವು. ಶರೀರವು ಸ್ಥಿರವಲ್ಲ. ರಾಜವಂಶ ಸಂರಕ್ಷಣೆಗಾಗಿ ನನ್ನ ಪ್ರಾಣವನ್ನೊಪ್ಪಿಸಬೇಕಾಗಿ ಬಂದರೂ ಹಿಂದೆಗೆಯದೆ ನಾನದನ್ನು ನಿರ್ವಹಿಸುವೆನು. ಆಪತ್ತುಗಳು ಸತ್ಪುರುಷರಿಗೆ ಶಾಶ್ವತವಾಗಿರುವವಲ್ಲ. ನಿನ್ನಿಂದ ನಿಯೋಜಿಸಲ್ಪಟ್ಟ ನಾನು ಈ ಕಾರ್ಯವನ್ನು ಇನ್ನು ನಾಲ್ಕಯ್ದು ದಿನಗಳಲ್ಲಿಯೇ ಸಾಧಿಸುವೆನು. ನೀನಿನ್ನು ನಿರಾತಂಕದಿಂದ ಹೋಗಿ ನಿದ್ರಿಸಬ

ಹುದು." ಎಂದು ಹೇಳಿ ಇಂದಿರೆಯು ಅಣ್ಣನನ್ನು ಮಲಗು ವುದಕ್ಕೆ ಕಳುಹಿದಳು.

ಇಂದಿರೆಯು ಸಾಹಸದಲ್ಲಿಯೂ ಪೌರುಷದಲ್ಲಿಯೂ ಚಂದ್ರಾವತಿಗೆ ಸಮಾನಳಾಗಿದ್ದಳು. ಯುದ್ಧದಲ್ಲಿ ಸೋತು ಓಡಿಬಂದ ಯಶವಂತಸಿಂಹನನ್ನು ಚಂದ್ರಾವತಿಯು ತಿರಸ್ಕ ರಿಸಿ ಪಟ್ಟಣಕ್ಕೆ ಬರದಂತೆ ಮಾಡಿದಾಗ ಇಂದಿರೆಯೂ ಆಕೆಯ ಹತ್ತಿರದಲ್ಲಿದ್ದಳು. ಯುದ್ಧದಲ್ಲಿ ಸೋತು ಓಡಿಬಂದವ ರಲ್ಲಿ ಇಂದಿರೆಯ ಪ್ರಾಣಪ್ರಿಯನೂ ಇದ್ದನು. ಇವಳು ಕೂಡ ಯುದ್ಧದಲ್ಲಿ ಸೋತುಬಂದ ತನ್ನ ಪ್ರಾಣವಲ್ಲಭನನ್ನು ತಿರಸ್ಕರಿಸಲು ಆತನು ಯಶವಂತಸಿಂಹನೊಡನೆ ನಿಲ್ಲದೆ— "ರಣರಂಗದಲ್ಲಿ ಶತ್ರುಗಳನ್ನೋಡಿಸಿ ತನ್ನ ಪರಾಕ್ರಮವ ನ್ನೆಲ್ಲ ಪ್ರಕಟಿಸಿದ ಹೊರತು ತನ್ನ ಪತ್ನಿಗೆ ಮುಖವನ್ನು ತೋರುವುದಿಲ್ಲ." ಎಂದು ಶಪಥಮಾಡಿ ಹೊರಟು ಹೋದನು. ಇಂದಿರೆಯು ಚಂದ್ರಾವತಿಯಂತೆಯೇ ಕಡೆಗೆ ಪಶ್ಚಾತ್ತಾಪ ಪಟ್ಟು ತನ್ನ ಪತಿಯನ್ನು ದೇಶದೇಶಗಳಲ್ಲಿಯೂ ಹುಡುಕಿ ಸಿದಳು. ಆದರೆ ಆತನು ಸಿಕ್ಕಲಿಲ್ಲ. ಯಶವಂತಸಿಂಹನೂ ಇಂದಿರೆಯ ಪತಿಯನ್ನು ಹುಡುಕಿಸಿದನು. ಆದರೇನು? ರಾಜ ಪುತ್ರನ ಪ್ರತಿಜ್ಞೆಯು ಎಂದಿಗಾದರೂ ತಪ್ಪುವುದೆ? ಇಂದಿ ರೆಯು ಅಂದಿನಿಂದ ಸೌಖ್ಯಗಳ ಮೇಲಿನ ಆಶೆಯನ್ನು ತೊರೆದು, ಚಂದ್ರಾವತಿಯ ಸೇವೆಯನ್ನು ಮಾಡುತ್ತ ಅವಳ ಪೂರ್ಣಾದರಕ್ಕೆ ಪಾತ್ರಳಾಗಿದ್ದಳು. ಕಾಬೂಲ್ ದೇಶಕ್ಕೂ ಆಕೆಯೊಡನೆ ಬಂದು ಆಕೆಯ ಕಷ್ಟ-ದುಃಖಗಳಲ್ಲಿ ತಾನೂ ಸಮಭಾಗಿನಿಯಾಗಿ ನಿಂತು, ಸಮಯೋಚಿತ ವಚನಗಳಿಂದ

ೀಕೆಗೆ ಸಮಾಧಾನವನ್ನುಂಟು ಮಾಡುತ್ತಿದ್ದಳು. ಈಕೆ, ಅಪರಿಮಿತ ಬುದ್ಧಿ ಚಾತುರ್ಯವುಳ್ಳವಳಾಗಿದ್ದುದರಿಂದ ದುರ್ಗಾದಾಸನು ಕೂಡ ಕಾರ್ಯೋಪಾಯಗಳನ್ನು ಯೋಚಿಸುವುದರಲ್ಲಿ ತಂಗಿಯ ಸಹಾಯವನ್ನು ಅಪೇಕ್ಷಿಸುತ್ತಿದ್ದನು. ಅದರಂತೆಯೇ ಇಂದಿರೆಯು ಅಣ್ಣನಿಗೆ ಭರವಸೆಯನ್ನಿತ್ತು ಕಳುಹಿ ತಾನೂ ಆರಾತ್ರಿ ಸುಖವಾಗಿ ನಿದ್ರಿಸಿದಳು. ಇತ್ತ ನಯನಪಾಲನು ದುರ್ಗಾದಾಸನೇ ಮೊದಲಾದವರನ್ನು ಮೋಸಪಡಿಸಿ ಚಂದ್ರಾವತಿಯನ್ನು ಬಾದಷಹನಿಗೊಪ್ಪಿಸಿ, ಆತನಿಂದ ದೊಡ್ಡ ಬಹುಮಾನ ಹೊಂದಬೇಕೆಂಬ ದುರಾಶೆಯಿಂದ ತನ್ನ ಗುಡಾರದಲ್ಲಿ ಹಾಸಿಗೆಯ ಮೇಲೆ ಮಲಗಿ ಆಲೋಚಿಸುತ್ತಿದ್ದನು.

ಇಂದಿರೆ, ಮರುದಿನ ಬೆಳಗಾದ ಕೂಡಲೆ ಎದ್ದು ಪ್ರಾತಃಕೃತ್ಯಗಳನ್ನು ನೆರವೇರಿಸಿಕೊಂಡು ಚಂದ್ರಾವತಿಯಿದ್ದ ಗುಡಾರಕ್ಕೆ ಬಂದು ತಾನು ಮಾಡಬೇಕೆಂದಿರುವ ಉಪಾಯವನ್ನು ರಹಸ್ಯವಾಗಿ ಚಂದ್ರಾವತಿಗೆ ತಿಳಿಸಿದಳು. ಚಂದ್ರಾವತಿಯು ಅದಕ್ಕೆ ಸಮ್ಮತಿಸದೆ ನಿಟ್ಟುಸಿರಿಟ್ಟು "ಇಂದಿರಾ! ನಿನ್ನನ್ನು ಇಂತಹ ಕಷ್ಟಕ್ಕೆ ಗುರಿಮಾಡಿ ನಾನು ಹೇಗೆ ಹೋಗಲಿ! ದುರ್ಮಾರ್ಗನಾದ ನಯನಪಾಲನು ನಿನಗಾವ ಮೋಸವನ್ನು ಮಾಡುವನೋ ತಿಳಿಯದು. ಇಂದಿನವರೆಗೂ ನಿನ್ನನ್ನು ಕಾಪಾಡಿ, ಈಗ ನಿನ್ನನ್ನು ಕಷ್ಟಕ್ಕೆ ಗುರಿಮಾಡಲಾರೆನು. ನನ್ನ ಪ್ರಾಣವು ಹೋದರೂ ಸರಿಯೆ, ನಿನ್ನನ್ನು ಬಿಟ್ಟು ನಾನು ಅರಗಳಿಗೆಯಾದರೂ ಇರಲಾರೆನು. ಮೊದಲೇ ಪತಿ ಪುತ್ರವಿಯೋಗ ದುಃಖದಿಂದ ಪ್ರಾಣಬಿಡಲು ಸಿದ್ಧ

ಳಾಗಿರುವೆನು. ಇದರಮೇಲೆ ನಿನ್ನ ಕಷ್ಟಗಳನ್ನು ನೋಡಿ ನಾನು ಹೇಗೆ ಸಹಿಸಬಲ್ಲೆನು ? ನಿನಗೆ ಸಮ್ಮತವಾದರೆ, ಕುಮಾರ ಅಜಿತಸಿಂಗನನ್ನು ಕರೆದುಕೊಂಡು ಹೋಗಿ ಆತನಿಗೆ ಜೋಧ್ಪುರದ ಪಟ್ಟವನ್ನು ಕಟ್ಟು. ಇನ್ನು ಮುಂದೆ ನೀನೇ ಅವನಿಗೆ ತಾಯಿ ಯಾಗಿರು. ತಮ್ಮ ಪ್ರಾಣವನ್ನು ಬಿಟ್ಟಾದರೂ ತಮ್ಮನ್ನು ಆಶ್ರಯಿಸಿದವನನ್ನು ಕಾಪಾಡುವುದು ರಾಜಮಾರ್ಗವಾಗಿರು ವುದು. ಆದುದರಿಂದ ನೀನು ಸುಖವಾಗಿ ನಿನ್ನ ಪ್ರಾಣವ ನ್ನುಳಿಸಿಕೊಂಡು ಅಜಿತಸಿಂಗನನ್ನು ಹೇಗಾದರೂ ಕಾ ಪಾಡು. ಆತನು ದೊಡ್ಡವನಾದ ಮೇಲೆ ನಿನ್ನ ಋಣ ವನ್ನು ತೀರಿಸಿಕೊಳ್ಳುವನು.” ಎಂದಳು.

ಇಂದಿರೆ—ಚಂದ್ರಾವತಿಯ ಮುಖವನ್ನು ನೋಡುತ್ತ ತಲೆದೂಗಿ ಉತ್ತೇಜಿತ ಸ್ವರದಿಂದ ‘ಏನಿದು ! ಅಕ್ಕಾ, ಚಂದ್ರಾ ವತಿ ! ನಿನಗೆ ಹುಚ್ಚು ಹಿಡಿಯಿತೋ ? ನಿನ್ನ ಪತಿಯು ತನ್ನ ಮರಣಕಾಲದಲ್ಲಿ ಹೇಳಿದ ಮಾತುಗಳನ್ನು ಮರೆತು ಬಿಟ್ಟೆಯೋ ? ಎಲ್ಲವನ್ನೂ ತಿಳಿದಿರುವ ನಿನಗೆ ನಾನೇನು ಹೇಳಲಿ ? ನೀನು ಈ ಉಪಾಯಕ್ಕೆ ಸಮ್ಮತಿಸದಿದ್ದರೆ, “ಜೋಧ್ಪುರ ವಂಶನಾಶಕ್ಕೆ ಚಂದ್ರಾವತಿಯೇ ಕಾರಣ” ಳೆಂದು ನಾವೆಲ್ಲರೂ ನಿನ್ನನ್ನು ತಿರಸ್ಕರಿಸದೆ ಇರಲಾರೆವು. ಹೇಗಾದರೂ ನೀನು ನನ್ನ ಮಾತನ್ನು ಅಂಗೀಕರಿಸಬೇಕು. ನೀನು ಗತಿಸಿದ ಬಳಿಕ ನಾವು ಇದ್ದು ಪ್ರಯೋಜನವೇನು ? ನಿನಗೆ ಹಾಗೆ ಬದುಕಿರಲು ಇಷ್ಟವಿಲ್ಲದಿದ್ದರೆ ಎಲ್ಲರೂ ಒಂದೇ ಬಾರಿಗೆ ವೀರಸ್ವರ್ಗವನ್ನು ಹೊಂದುವ—ಬಾ ; ಹಾಗಿಲ್ಲವೆ ಅಜಿತಸಿಂಗನು ಬದುಕಿರಬೇಕೆಂಬ ಆಶೆಯಿದ್ದರೆ ಈ ಉಪಾ ಯಕ್ಕೆ ಸಮ್ಮತಿಸು.

ಚಂದ್ರಾವತಿಯು ಇಂದಿರೆಯ ಯುಕ್ತಿ ಯುಕ್ತವಾದ ಹಿತಬೋಧೆಯನ್ನು ತಿರಸ್ಕರಿಸಲಾರದೆ ಸಮ್ಮತಿಸಿದಳು. ಇಂದಿರೆಯು ಚಂದ್ರಾವತಿಯು ಸಮ್ಮತಿಸಿದಳೆಂದೂ ಇನ್ನು ತಮ್ಮ ಕಾರ್ಯವು ಸಿದ್ಧಿಹೊಂದುವುದೆಂದೂ ತಿಳಿದು ಸಂತೋಷದಿಂದಿದ್ದಳು. ದುರ್ಗಾದಾಸನು ಕಾರ್ಯಸಾಧನೆಗಾಗಿ ನಯನಪಾಲನೊಡನೆ ಅತಿಯಾದ ಸ್ನೇಹವನ್ನು ಬೆಳಿಸುವಂತೆ ನಟಿಸುತ್ತ ಬಂದನು. ಈ ಇಬ್ಬರೂ ದಿನದಿನಕ್ಕೆ ಒಬ್ಬರನ್ನೊಬ್ಬರು ಬಿಟ್ಟಿರದೆ ಸಂಚರಿಸತೊಡಗಿದರು. ಚಂದ್ರಾವತಿಯಿದ್ದ ಗುಡಾರಕ್ಕೆ ದುರ್ಗಾದಾಸ ಇಂದಿರೆ ಇವರಿಬ್ಬರಲ್ಲದೆ ಮತ್ತಾರೂ ಹೋಗಕೂಡದೆಂದು ನಯನಪಾಲನು ಕಟ್ಟು ಮಾಡಿದ್ದನು. ಇಂದಿರೆಯು ಮಾತ್ರ ಎಷ್ಟು ಬಾರಿ ಅತ್ತಿತ್ತ ತಿರುಗಾಡುತ್ತಿದ್ದರೂ ಆಕೆಯನ್ನು ಅಡ್ಡಿಪಡಿಸುತ್ತಿರಲಿಲ್ಲ. ಹೀಗೆ ಗುಡಾರದೊಳಕ್ಕೆ ಹೋಗವುದು, ಹೊರಗೆ ಬರುವದು ಅತ್ತಿತ್ತ ಹೋಗುವುದು—ಇದೇ ದಿನವೆಲ್ಲಾ ಇಂದಿರೆಯು ಮಾಡುವ ಕೆಲಸವಾಗಿತ್ತು. ಎಷ್ಟೋ ಸಾರಿ ತಿರುಗುತ್ತಿದ್ದರೂ ಅವಕುಂಠನವನ್ನು ಧರಿಸಿಯೇ ತಿರುಗುತ್ತಿದ್ದುದರಿಂದ ಕಾವಲಿದ್ದ ಭಟರಿಗೆ ಇಂದಿರೆಯ ಮುಖವು ಹೇಗಿರುವುದೆಂಬುದನ್ನು ತಿಳಿಯುವುದಕ್ಕೂ ಅವಕಾಶವಿಲ್ಲದೆ ಹೋಯಿತು.

---

## ಏಳನೆಯ ಪ್ರಕರಣ.

---

ಚಂದ್ರಾವತಿ ಮತ್ತು ಪರಿವಾರಗಳು ಇಳಿದಿದ್ದ ಗುಡಾರಗಳಿಗೆ ಸಮೀಪದಲ್ಲಿ ಒಂದು ಗೊಲ್ಲರ ಹಳ್ಳಿಯಿದ್ದಿತು. ಈ ಹಳ್ಳಿಯಲ್ಲಿ ತೆಂಗಿನಗರಿಗಳಿಂದಲೂ ಹುಲ್ಲಿನಿಂದಲೂ ಕಟ್ಟಲ್ಪ

ಟ್ಟ ನಾಲ್ಕಯ್ದು ಸಾವಿರ ಮನೆಗಳು ಮಾತ್ರ ಇದ್ದುವು. ಸುತ್ತಲೂ ಇದ್ದ ದೊಡ್ಡ ದೊಡ್ಡ ಊರುಗಳಿಗೆಲ್ಲಾ ಈ ಗೊಲ್ಲರೇ ಹಾಲು, ಮೊಸರು-ಮೊದಲಾದುವುಗಳನ್ನು ಕೊಡುತ್ತಿದ್ದರು. ಆ ಹಳ್ಳಿಯಲ್ಲಿ ಎತ್ತ ನೋಡಿದರೂ ಹುಲ್ಲಿನ ರೊಪ್ಪಗಳೂ ಪಶುಶಾಲೆಗಳೂ ಕಾಣಬರುತ್ತಿದ್ದುವು. ಅಕ್ಬರ್ ಚಕ್ರವರ್ತಿಯು ತನ್ನ ಸೇನಾನಾಯಕನಾದ ಮಾನಸಿಂಗನೊಡನೆ ೪೦,೦೦೦ ಸೇನೆಯನ್ನು ತೆಗೆದುಕೊಂಡು ಕಾಬೂಲಿನ ಮೇಲೆ ಯುದ್ಧಕ್ಕೆ ಹೊರಟಾಗ ಆ ಸೈನಿಕರಲ್ಲಿ ಕೆಲವರು ಹಿಂದುಗಳು ಯುದ್ಧವು ಮುಗಿದಮೇಲೆ ಗೊಲ್ಲರ ಹಳ್ಳಿಯಲ್ಲಿಯೇ ಕುಟುಂಬ ಸಮೇತರಾಗಿ ನಿಂತುಬಿಟ್ಟರು. ಇದಕ್ಕೆ ಮೊದಲು ಈ ಹಳ್ಳಿಯಲ್ಲಿ ಕೆಲವರು ಮುಹಮ್ಮದೀಯರು ಮಾತ್ರ ವಾಸವಾಗಿದ್ದರು. ಈ ಮುಹಮ್ಮದೀಯರ ಸಹವಾಸದಿಂದ ಇಲ್ಲಿಗೆ ಬಂದಿದ್ದವರೆಲ್ಲರೂ ಸ್ವಲ್ಪ ದಿವಸಗಳೊಳಗಾಗಿ ಮುಹಮ್ಮದೀಯರಾಗಬೇಕಾಯಿತು. ಹೀಗೆ ಅವರು ಮುಹಮ್ಮದೀಯರಾದರೂ ತಮ್ಮ ಪೂರ್ವದ ಹಿಂದೂಮತವನ್ನು ದೂಷಿಸದೆ, ಯಾವ ಹಿಂದೂ ಅಥಿತಿಯಾಗಲೀ ತಮ್ಮ ಗ್ರಾಮಕ್ಕೆ ಬಂದರೆ ಅಂತಹನನ್ನು ಗೌರವಿಸಿ, ಆದರಿಸಿ, ಅವರಿಗೆ ಬೇಕಾದ ಸಾಮಗ್ರಿಗಳನ್ನು ಕೊಟ್ಟು ಉಪಚರಿಸುತ್ತಿದ್ದರು. ಹೀಗೆ ಅವರು ಹೆಸರಿಗೆ ಮಾತ್ರ ಮುಹಮ್ಮದೀಯರಾಗಿದ್ದರೂ ಅವರ ಆಚಾರ ನಡೆನುಡಿಗಳೆಲ್ಲ ಹಿಂದುಗಳಂತೆಯೇ ಇದ್ದು, ಹಿಂದುಗಳೊಡನೆ ತಮ್ಮ ಪ್ರಾಣವನ್ನಾದರೂ ಒಪ್ಪಿಸಲು ಸಿದ್ಧರಾಗಿದ್ದರು.

ಪ್ರಾತಃಕಾಲ, ಗೊಲ್ಲರು ತಮ್ಮ ಪಶುಗಳನ್ನು ಕರೆದುಕೊಂಡು ಬಂದು ಸಮೀಪದಲ್ಲಿಯ ಮೈದಾನದಲ್ಲಿ ಹುಲ್ಲು

ನೋಯಿಸುತ್ತ ನಿಂತರು. ಪಶುಸಮೂಹದಲ್ಲಿ ಕರು–ಕುರುಗಳೂ, ಗೂಳಿಗಳೂ ಇದ್ದವು. ಇವರು ಮನೆಯಲ್ಲಿ ಹಾಲು ಕರೆಯುತ್ತಿರಲಿಲ್ಲ. ಈ ಮೈದಾನದಲ್ಲಿ ಹಸುಗಳನ್ನು ಕರೆತಂದು ನಿಲ್ಲಿಸಿ ಇಲ್ಲಿಯೇ ಕರೆದು, ಸುತ್ತಲೂ ಇರುವ ಊರುಗಳಿಗೆ ಕಳುಹುತ್ತಿದ್ದರು. ಎಂದಿನಂತೆ ಈ ದಿನವೂ ಹಾಲು ಮೊಸರು ಮಾರಲು ಹೊರಟ ಗೊಲ್ಲತಿಯರಲ್ಲಿ ಒಬ್ಬ ಗೊಲ್ಲತಿಯು ಮಾತ್ರ ಚಂದ್ರಾವತಿಯು ಗುಡಾರದ ಕಡೆಗೆ ಬರುತ್ತಿದ್ದಳು. ಹೀಗೆ ಬಂದ ಗೊಲ್ಲತಿ ಗುಡಾರದೊಳಕ್ಕೆ ಹೋಗುತ್ತಿದ್ದರೂ ಕಾವಲಿದ್ದ ಮಹಮ್ಮದೀಯ ಭಟರು ಇವಳು ಚಂದ್ರಾವತಿಯ ಮಗುವಿಗೆ ಹಾಲನ್ನು ಕೊಡುವುದಕ್ಕಾಗಿ ಬಂದಿರಬಹುದೆಂದು ತಿಳಿದು ಆಕೆಯನ್ನು ಯಾರೂ ಅಡ್ಡಿಮಾಡದೆ ಬಿಟ್ಟರು. ಅಲ್ಲದೆ ಆ ಗೊಲ್ಲತಿಯ ಸೌಂದರ್ಯ, ಧೈರ್ಯ–ಶೌರ್ಯ–ಗಾಂಭೀರ್ಯಾದಿಗಳನ್ನು ನೋಡಿ ಬೆರಗಾಗಿ ತಮ್ಮಲ್ಲಿಯೇ ಹೀಗೆ ಮಾತಾಡಿಕೊಂಡರು—

"ಅರೆ, ಬಾಯಿ! ಈಕೆ ದಿನವೂ ಬರುತ್ತಿದ್ದ ಗೊಲ್ಲತಿಯಲ್ಲ. ಆಕೆ ಮುದುಕಿ, ಈಕೆ ಇನ್ನೂ ಚಿಕ್ಕವಳು. ಗೊಲ್ಲತಿಯಾದರೂ ಎಷ್ಟು ಚೆಲುವೆಯಾಗಿದ್ದಾಳೆ? ಇವಳ ಮುಖದ ಅಂದವೂ–ಈ ನಡಗೆಯ ಬೆಡಗೂ ಎಷ್ಟು ಸೊಗಸಾಗಿವೆ ನೋಡು."

ದ್ವಾರಪಾಲಕರು ಹೀಗೆ ಪರವಶರಾಗಿ ಸ್ತುತಿಸುತ್ತ ಕುಳಿತಿದ್ದಂತೆಯೇ ಗೊಲ್ಲತಿಯು ಗುಡಾರದ ಒಳಹೊಕ್ಕು ಚಂದ್ರಾವತಿಯ ದಾಸಿಯರ ಮುಂದೆ ನಿಂತಳು. ಆ ದಾಸಿಯರು ಇವಳನ್ನು ನೋಡಿ ಕೃತಕಕೋಪದಿಂದ ಘರ್ಜಿಸಿ—

“ ಎಲೆ-ಸೋಮಾರಿ ಹೆಂಗಸೆ ? ಎಷ್ಟು ಹೊತ್ತಿಗೆ ಹಾಲನ್ನು ತರುತ್ತೀಯೆ ? ಇಷ್ಟು ಹೊತ್ತಾದರೂ ಬಾರದಿದ್ದುದರಿಂದ ಮಗುವು ಅತ್ತು ಅತ್ತು ಮಲಗಿತು. ನೋಡು ? ನಿನಗೆ ಇಷ್ಟವಿಲ್ಲದಿದ್ದರೆ ಮತ್ತಾರಾದರೂ ಕೊಡುವರು. ಇಷ್ಟಲ್ಲದೆ ಈ ದಿನ ರಾಣಾಯವರ ಹನ್ನೊಂದನೆಯ ದಿನವಾದುದರಿಂದ ದಿನಕ್ಕಿಂತ ಹೆಚ್ಚಿನ ಹಾಲನ್ನು ತೆಗೆದುಕೊಂಡು ಕಾಲಕ್ಕೆ ಸರಿಯಾಗಿ ಬಾ ಎಂದು ಹೇಳಿರಲಿಲ್ಲವೆ ?.....................” ಎಂದು ಹಲವು ಬಗೆಯಾಗಿ ಗೊಲ್ಲತಿಯನ್ನು ನಿಂದಿಸುತ್ತ ಚಾಂದ್ರಾವತಿಯು ಬಳಿಗೆ ಗೊಲ್ಲತಿಯನ್ನು ಕರೆದೊಯ್ದರು.

ಅದೇ ವೇಳೆಯಲ್ಲಿಯೇ ದುರ್ಗಾದಾಸನು ನಯನಪಾಲನೊಡನೆ ಮಾತಾಡುತ್ತ ಅವನನ್ನು ಮೋಸಗೊಳಿಸುವುದಕ್ಕಾಗಿ ತನ್ನ ವಾಕ್ಚಾತುರ್ಯವನ್ನೆಲ್ಲಾ ಪ್ರಯೋಗಿಸಿ, ಮತ್ತೆಯೂ ಪ್ರಯೋಗಿಸುತ್ತಿದ್ದನು. ನಯನಪಾಲನು ದುರ್ಗಾದಾಸನ ಸದ್ಗುಣ-ಪರಾಕ್ರಮಗಳನ್ನು ನಿಜವಾಗಿ ತಿಳಿದಿದ್ದುದರಿಂದ ಆತನೊಡನೆ ಅತ್ಯಂತ ಸ್ನೇಹಿತನಂತೆ ನಟಿಸಿ, ತನ್ನ ಕೋರಿಕೆಯನ್ನು ಈಡೇರಿಸಿಕೊಳ್ಳುವುದಕ್ಕೆ ಸಮಯ ನಿರೀಕ್ಷೆಯಲ್ಲಿದ್ದನು. ಹೀಗೆ ಇಬ್ಬರೂ ಸ್ವಾರ್ಥದೃಷ್ಟಿಯಿಂದ ಒಬ್ಬರನ್ನೊಬ್ಬರು ಸ್ಪರ್ಧಿಸುತ್ತ ಹೀಗೆ ಮಾತನಾಡಲಾರಂಭಿಸಿದರು:—

ದುರ್ಗಾ:—ನಯನಪಾಲಮಹಾರಾಜ ! ಚಿಕ್ಕಂದಿನಿಂದ ಕಾಪಾಡಿದ ಆ ನಮ್ಮ ಯಶವಂತಸಿಂಹ ಮಹಾರಾಣಾಯವರಿಗೂ ನನಗೂ ಈದಿನ ಋಣಾನುಬಂಧವು ತೀರಿಹೋಯಿತು. ನನಗೆ ಇನ್ನು ಯಾರೂ ದಿಕ್ಕೇ ಇಲ್ಲ. ಔರಂಜೇಬ ಬಾದಷಹರೊಡನೆ ನನ್ನ ವಿಷಯವನ್ನು ಹೇಳಿ ನನಗೆ ಒಂದು ಉದ್ಯೋಗವನ್ನು ಕೊಡಿಸಿಕೊಡಲಾರಿರೇ ?

ನಯನ:—ನೀನೇಕೆ ವಿಚಾರಮಾಡುವೆ, ದುರ್ಗಾದಾಸ! ಇನ್ನು ಕೆಲವು ದಿನಗಳಲ್ಲಿಯೇ ನಾನು ಒಂದು ದೇಶಕ್ಕೆ ರಾಜನಾಗುವೆನು. ಆಗ ನಿನಗೆ ದೊಡ್ಡ ಉದ್ಯೋಗವನ್ನು ಕೊಡುವೆನು—ಚಿಂತಿಸಬೇಡ.

ದುರ್ಗಾ:—ಇದಕ್ಕೂ ಹೆಚ್ಚಾಗಿ ನನಗೇನು ಬೇಕು! ಹಾಗೆ ತಾವು ಮಾಡುವುದು ಖಂಡಿತವಾದರೆ ಇಂದಿನಿಂದಲೇ ತಮಗೆ ನಾನು ಸೇವಕನಾಗಿರುವೆನು.

ನಯನ:—ಹಾಗೆ ನೀನು ನಮ್ಮಲ್ಲಿರಲು ಸಮ್ಮತಿಪಟ್ಟು ನಮ್ಮ ವಿಷಯದಲ್ಲಿ ಭರವಸೆಯಿಟ್ಟು, ಆಜ್ಞಾಬದ್ಧನಾಗಿ ನಡೆ ದೆಯಾದರೆ, ನೀನು ಉನ್ನತಸ್ಥಿತಿಗೆ ಬರುವುದರಲ್ಲಿ ಸಂದೇಹ ವೇ ಇಲ್ಲ.

ದುರ್ಗಾ:—ಸ್ವಾಮಿ! ತಮ್ಮಂತಹರ ಕಟಾಕ್ಷವು ಬಿ ದ್ದರೆ ಎಷ್ಟು ಹೊತ್ತು ಬೇಕು! ನನಗೆ ನೀವು ಪ್ರಭುಗಳಾಗುವ ಪಕ್ಷದಲ್ಲಿ ಯಶವಂತಸಿಂಹನು ಗತಿಸಿದ ಚಿಂತೆಯೇ ಉಳಿ ಯುವುದಿಲ್ಲ.

ನಯನ:—ಓಹೋ! ದುರ್ಗಾದಾಸ! ಎಚ್ಚರಿಕೆ! ಆ ಯಶವಂತನನ್ನು ನನ್ನ ಯೋಗ್ಯತೆಗೆ ಸರಿದೂಗುತ್ತಿರುವೆ! ಮುಖ್ಯವಾಗಿ ಚಂಪ್ರಾವತಿಯ ಅದೃಷ್ಟವು ಚನ್ನಾಗಿರುತ್ತದೆ. ಇನ್ನು ಸ್ವಲ್ಪ ಕಾಲದೊಳಗಾಗಿ ಆಕೆ ಬಾದಷಹರಿಗೆ............

"ಬಾದಷಹರಿಗೆ" ಎಂದು ನಯನಪಾಲನು ಉಚ್ಚರಿಸಿ ದಷ್ಟರಲ್ಲಿ ಎಚ್ಚತ್ತು ಸುಮ್ಮನಾದನು. ಆತನ ಕಡೆಯ ಮಾತನ್ನು ಕೇಳಿದ ಕ್ಷಣವೇ ದುರ್ಗಾದಾಸನ ಖಡ್ಗದ ಹಿಡಿ ಮೇಲಕ್ಕೆದ್ದಿತು. ಮುಂದೆ ನಡೆಯಬೇಕಾಗಿರುವ ಕಾರ್ಯ

ಗಳನ್ನು ನೆನೆದು ಅಷ್ಟರಲ್ಲಿ ಶಾಂತನಾಗಿ ನಯನಪಾಲನ ದುಷ್ಟಾಲಾಪಗಳನ್ನು ಕೇಳಿಯೂ ಸುಮ್ಮನಿದ್ದನು.

ಇಷ್ಟರಲ್ಲಿ ಗುಡಾರದೊಳಕ್ಕೆ ಹೋಗಿದ್ದ ಗೊಲ್ಲಿತಿಯು ಮೊದಲಿನಂತೆ ಹಾಲಿನ ಮಡಕೆಯನ್ನಿರಿಸಿದ್ದ ಗೂಡೆಯನ್ನು ತಲೆಯ ಮೇಲಿಟ್ಟುಕೊಂಡು ಹೊರಗೆ ಬಂದು ತನ್ನ ಹಳ್ಳಿಗೆ ಹೋಗುತ್ತಿದ್ದಳು. ದ್ವಾರರಕ್ಷಕರಾಗಿದ್ದ ಆ ಸಿಪಾಯಿಗಳಿಬ್ಬರೂ ಗೊಲ್ಲಿತಿಯ ಸೌಂದರ್ಯಕ್ಕೆ ಮೋಹಿತರಾಗಿ ತಮ್ಮ ಕೈಯಲ್ಲಿದ್ದ ಬಂದೂಕುಗಳನ್ನು ಕೆಳಗೆ ಹಾಕಿ ಅವಳ ಹಿಂದೆಯೇ ಹೊರಟರು. ಸ್ವಲ್ಪದೂರದವರೆಗೆ ಗೊಲ್ಲಿತಿಯು ಅತ್ತಿತ್ತ ನೋಡದೆ ತನ್ನ ದಾರಿಯನ್ನೇ ಹಿಡಿದು ಆ ಬಳಿಕ ಹಿಂದೆ ಬರುವ ಸಿಪಾಯಿಗಳ ಮನೋಭಾವವನ್ನು ತಿಳಿದವಳಾಗಿ ಸ್ವಲ್ಪಹೊತ್ತು ಯೋಚಿಸಿ, ತಲೆತೂಗುತ್ತಾ ಅತ್ತಿತ್ತ ನೋಡ್ತಿ ಹಿಂತಿರುಗಿ ಆ ಇಬ್ಬರ ಮುಖವನ್ನೂ ನೋಡಿ ಕಿರುನಗೆಯಿಂದ ಮೆಲ್ಲನೆ ಕಣ್ಣುಸನ್ನೆ ಮಾಡಿ ಬೇಗ ನಡೆಯತೊಡಗಿದಳು. ಆ ಭ್ರಾಂತರಾದ ಭಟರು ಗೊಲ್ಲಿತಿಯು ಮಾಡಿದ ಸನ್ನೆಯನ್ನು ನೋಡಿ, ತನ್ನನ್ನು ಬರಹೇಳಿದಳೆಂದು ಒಬ್ಬನೂ ನಿನ್ನನ್ನಲ್ಲ—ನನ್ನನ್ನು ಬರಹೇಳಿದಳೆಂದು ಮತ್ತೊಬ್ಬನೂ ವಾದಿಸುತ್ತ ಕಡೆಗೆ ಮುಷ್ಟಿಯುದ್ಧ ಮಾಡಲು ಆರಂಭಿಸಿದರು. ಇವರ ದ್ವಂದ್ವಯುದ್ಧವನ್ನು ನೋಡಿ ಗೊಲ್ಲಿತಿ ಇದೇ ಸಮಯವೆಂದು ಶೀಘ್ರವಾಗಿ ನಡೆಯುತ್ತ ಅವರ ಕೈಯ್ಗೆ ಸಿಕ್ಕದೆ ತನ್ನ ಹಳ್ಳಿಗೆ ಹೋಗಿ ಸೇರಿದಳು.

ಇತ್ತ ನಯನಪಾಲನು ದುರ್ಗಾದಾಸನನ್ನು ತನ್ನ ಬಲೆಯಲ್ಲಿ ಸಿಕ್ಕಿಸಿಕೊಳ್ಳಬೇಕೆಂದು ಅನೇಕ ವಿಧವಾದ ಸರಸ

ಸಲ್ಲಾಪಗಳನ್ನು ಬೆಳೆಯಿಸುತ್ತಾ ಕುಳಿತಿದ್ದನು. ನಯನಪಾಲನ ಸೈನಿಕರು ಆತನ ಅಪ್ಪಣೆಯಂತೆ ಚಂದ್ರಾವತಿಯ ಗುಡಾರದೊಳಕ್ಕೆ ಇಂದಿರಾ, ದುರ್ಗಾದಾಸ ಇವರಿಬ್ಬರು ಹೊರತು ಮತ್ತಾರನ್ನೂ ಬಿಡುತ್ತಿರಲಿಲ್ಲ. ಈ ದಿನ ಪ್ರಾತಃಕಾಲ ಇಂದಿರೆಯು ಎಲ್ಲಿಗೋ ಹೋಗಿದ್ದವಳು ಸೂರ್ಯೋದಯವಾದ ಎರಡು ಘಳಿಗೆಯಮೇಲೆ ಚಂದ್ರಾವತಿಯ ಗುಡಾರದೊಳಕ್ಕೆ ಹೋದಳು. ಸಿಪಾಯಿಗಳು ಎಂದಿನಂತೆ ಗುಡಾರದ ಸುತ್ತಲೂ ಕಾದಿದ್ದರು. ಸ್ವಲ್ಪಹೊತ್ತಾದ ಮೇಲೆ ಇಂದಿರೆಯು ಗುಡಾರದಿಂದ ಹೊರಗೆ ಹೊರಟು ಹೋದಳು.

ದುರ್ಗಾದಾಸನೂ ನಯನಪಾಲನೂ ಪರಸ್ಪರ ಸಂಭಾಷಿಸುತ್ತ ಸಂತೋಷಮಗ್ನರಾಗಿದ್ದರು. ಅವರಿಬ್ಬರೂ ಒಂದು ರಹಸ್ಯ ಪ್ರದೇಶದಲ್ಲಿ ನಿಂತು ಮಾತನಾಡುತ್ತಿದ್ದುದರಿಂದಲೂ, ರಾಜಪರಿವಾರವೆಲ್ಲವೂ ಯಶವಂತಸಿಂಹನ ಪರಲೋಕ ಕ್ರಿಯೆಯನ್ನು ಮಾಡುವ ಕೆಲಸದಲ್ಲಿದ್ದುದರಿಂದಲೂ ಇವರ ಸಂಭಾಷಣೆಯು ಯಾರಿಗೂ ತಿಳಿಯದೆ ಹೋಯಿತು. ಹೀಗೆ ಅವರಿಬ್ಬರೂ ಪ್ರಸಂಗ ಮಾಡುತ್ತಿದ್ದಾಗಲೇ ಚಂದ್ರಾವತಿಯ ಗುಡಾರದೊಳಗೆ—

“ಹಾ, ಅಯ್ಯೋ! ಅಜಿತಸಿಂಗಾ—ನಮಗಿನ್ನಾರು ದಿಕ್ಕೋ ಅಪ್ಪ—” ಎಂದೀಬಗೆಯಾಗಿ ಸ್ತ್ರೀಯರೆಲ್ಲರೂ ಬಲವಾಗಿ ರೋಧಿಸುವದಕ್ಕಾರಂಭಿಸಿದರು. ನಯನಪಾಲನದನ್ನು ಕೇಳಿ ಗಾಬರಿಯಿಂದ ದುರ್ಗಾದಾಸನನ್ನು ನೋಡಿ “ಅಯ್ಯಾ ದುರ್ಗಾದಾಸ! ಈ ರೋದನವೇಕೆ? ಯಾವ ಉಪದ್ರವು ಸಂಭವಿಸಿದೆಯೋ—ಜಾಗ್ರತೆಯಾಗಿ ತಿಳಿದು

ಬಾ'" ಎಂದು ಹೇಳಿ ಆತನನ್ನು ಕಳುಹಿಸಿದನು. ದುರ್ಗಾದಾಸನು ಅತ್ಯಾತುರದಿಂದ ಗುಡಾರದೊಳಕ್ಕೆ ಹೋಗಿ ಸ್ವಲ್ಪ ಹೊತ್ತಿಗೆ ಹಿಂತಿರುಗಿ ಬಂದು ದುಗುಡದಿಂದ— 'ನಯನಪಾಲಮಹಾರಾಜಾ! ನಮಗಿನ್ನೇನು ಗತಿ? ಕುಮಾರ ಅಜಿತಸಿಂಗನು ಪರಲೋಕಗತನಾದನು. ನಮ್ಮ ಅದೃಷ್ಟವು ಹೀಗಿರುವದೇ?—' ಎಂದು ಕಣ್ಣೀರು ಸುರಿಸಿದನು. ನಯನಪಾಲನು ತನ್ನ ಮನಸ್ಸಿಗುಂಟಾದ ಆನಂದವನ್ನು ಹೊರಪಡಿಸದೆ ತಡೆದು ಕುಟಿಲಶೋಕದಿಂದ ಮುಖವನ್ನು ತಗ್ಗಿಸಿ—'ಅಯ್ಯಾ! ವಿವೇಕಿಗಳಾದ ನಿಮಗೆ ನಾನು ಹೇಳುವದೇನಿದೆ? ವಿಚಾರವೇನೋ ಶೋಚನೀಯವೇ ಸರಿ; ಆದರೂ ದೈವೇಚ್ಛೆಯಲ್ಲಿದ್ದದು ಆಗಿಹೋಯಿತು. ಇನ್ನು ಅತ್ತು ಫಲವಿಲ್ಲ. ಎಲ್ಲರನ್ನೂ ಸಮಾಧಾನಪಡಿಸಿ —ಶವವನ್ನು ಸಾಗಿಸುವ ಪ್ರಯತ್ನಮಾಡು" ಎಂದನು. ದುರ್ಗಾದಾಸನು — ನಿಟ್ಟುಸಿರಿಟ್ಟು — ಅದನ್ನು ಕೇಳಿ ಬಂದೆನು. ಚಂದ್ರಾವತೀದೇವಿಯು, ತನ್ನ ಮಗನನ್ನು ತನ್ನ ಹೊರತು ಮತ್ತಾರೂ ಮುಟ್ಟಲಾಗದೆಂದು ಹಟ ತೊಟ್ಟು ಕೂತಿರುವಳು" ಎಂದು ಹೇಳಿದನು. ನಯನಪಾಲನು ಆಕೆಯ ಇಷ್ಟದಂತೆಯೇ ಇತ್ಯರ್ಥಮಾಡಿ ಬರುವಂತೆ ಹೇಳಿ, ಅಜಿತಸಿಂಗನ ಮರಣವಾರ್ತೆಯಿಂದ ತನ್ನಲ್ಲಿ ತಾನೇ ನಲಿದಾಡುತ್ತಿದ್ದನು.

---

*

ಶ್ರೀಃ

# ಎಂಟನೆಯ ಪ್ರಕರಣ.

## (ಅನುರಾಗಾಂಕುರವು)

"ಅರೆ, ಭಾಯಿ! ಹತ್ತು ದಿನಗಳಾದರೂ ನಮಗೆ ಒಬ್ಬರೂ ಸಿಕ್ಕಲಿಲ್ಲ......ಅದೇನು ಕಾರಣವು?"

"ಕಾರಣವೇನು........ನಮ್ಮ ಕಣ್ಣಿಗೆ ಬಿದ್ದರೆ ಪ್ರಾಣವುಳಿಯುವದಿಲ್ಲವೆಂಬ ಭಯದಿಂದ ತಪ್ಪಿಸಿಕೊಂಡು ತಿರುಗುತ್ತಿರುವರು."

"ಹೇಗಾದರೂ ಇರಲಿ, ಈ ವಿಷಯವನ್ನು ಬಾದಷಹರು ತಿಳಿದುದೇ ಆದರೆ ನಮಗೆ ಶಿಕ್ಷೆ ತಪ್ಪುವುದಿಲ್ಲ. ಆದುದರಿಂದ ಈ ದಿನ ಜಾಗರೂಕರಾಗಿದ್ದು, ಬೇಟೆಗಾಗಿ ಬಂದ ಯಾವ ರಾಜಪುತ್ರನನ್ನಾದರೂ ಸರಿಯೆ ಹಿಡಿಯಲೇಬೇಕು."

"ನಿಜ, ಹಾಗೆಯೇ ಮಾಡಬೇಕು. ನಾವೆಲ್ಲರೂ ಒಂದೇ ಕಡೆಯಿದ್ದರೆ ಪ್ರಯೋಜನವಿಲ್ಲ. ನಾಲ್ಕು ದಿಕ್ಕುಗಳಲ್ಲಿಯೂ ಸುತ್ತುತ್ತಿರಬೇಕು. ಹಾಗಾದರೆ ಕಡೆಗೆ ಒಬ್ಬನಾದರೂ ಸಿಕ್ಕದಿರಲಾರನು."

'ಆರಾವಲಿ' ಪರ್ವತಪ್ರಾಂತ್ಯದ ಕಾಡಿನಲ್ಲಿ ಭಯಂಕರಾಕಾರಿಗಳಾಗಿದ್ದ ಮುಹಮ್ಮದೀಯ ಭಟರಿಬ್ಬರು ಖಡ್ಗಪಾಣಿಗಳಾಗಿ ಅಶ್ವಾರೂಢರಾಗಿ ಸಹಚರರಾದ ಮತ್ತೊ

ಇಪ್ಪತ್ತು ಭಟರೊಡನೆ ಬರುತ್ತಾ ಮೇಲೆ ಹೇಳಿದಂತೆ ಪರಸ್ಪರ ಮಾತನಾಡಿಕೊಳ್ಳುತ್ತ ತಿರುಗುತ್ತಿದ್ದರು. ಆ ಅರಣ್ಯಪ್ರಾಂತ್ಯವು ಕ್ರೂರಮೃಗ ಸಂಕೀರ್ಣವಾಗಿ ನೋಡುವುದಕ್ಕೆ ಬಹು ಭಯಂಕರವಾಗಿದ್ದಿತು. ರಾಜಪುತ್ರಸ್ಥಾನದಲ್ಲಿದ್ದ ಅನೇಕ ರಾಜರು ಆ ಅರಣ್ಯವನ್ನು ತಮ್ಮ ಸ್ವಾಧೀನ ಮಾಡಿಕೊಳ್ಳಬೇಕೆಂದು ಪರಸ್ಪರ ಜಗಳವಾಡುತ್ತಿದ್ದರೂ ಆ ಕಾನನವು ಜೋಡ್ಪುರ ರಾಜ್ಯದಲ್ಲಿ ಸೇರಿದ್ದುದರಿಂದ ತತ್ಪುರಾಧಿಪನು ಆ ಅರಣ್ಯವು ತನಗೇ ಸೇರತಕ್ಕುದೆಂದು ವಾದಿಸುತ್ತಿದ್ದನು. ಕಟ್ಟಕಡೆಗೆ ಆ ಅಡವಿಯಲ್ಲಿ ಪ್ರತಿಯೊಬ್ಬ ರಾಜನೂ ತನ್ನ ಇಷ್ಟಬಂದಾಗ ಬೇಟೆಯಾಡಬಹುದೆಂದೂ, ಆದರೆ ಅಲ್ಲಿರುವ ವೃಕ್ಷವೊಪಲಾದವುಗಳು ಜೋಡ್ಪುರ ರಾಜನಿಗೆ ಸೇರತಕ್ಕುದೆಂದೂ ಅವರೇ ತೀರ್ಮಾನ ಮಾಡಿಕೊಂಡರು. ಅಂದಿನಿಂದ ರಾಜಪುತ್ರರು ಪ್ರತಿವರ್ಷವೂ ಮೃಗಯಾ ವಿನೋದಾರ್ಥವಾಗಿ ಆ ಅರಣ್ಯಕ್ಕೆ ಬರುತ್ತಿದ್ದರು. ಈ ಸಮಾಚಾರವನ್ನು ತಿಳಿದಿದ್ದ ಬಾದಷಹನು ರಾಜಪುತ್ರರನ್ನು ಹಿಡಿಯುವದಕ್ಕೆ ತನಗೆ ಅನುಕೂಲವಾಯಿತೆಂದು ಯೋಚಿಸಿ, ಯಾವ ರಾಜಪುತ್ರನೇ ಆಗಲಿ ಒಂಟಿಯಾಗಿ ಅರಣ್ಯದಲ್ಲಿ ಸುತ್ತುತ್ತಿರುವಾಗ ಹಿಡಿದು ತರಬೇಕೆಂದು ತನ್ನ ಭಟರಲ್ಲಿ ಕೆಲವರನ್ನು ರಹಸ್ಯವಾಗಿ ಕಾವಲಿರಿಸಿದ್ದನು.

ಆ ದಿನ ಮುಹಮ್ಮದೀಯ ಭಟರು ಅಶ್ವಾರೂಢರಾಗಿ ಅಡವಿಯಲ್ಲಿ ತಿರುಗುತ್ತಿರುವಾಗ ಕುರಂಗದೋಪಾದಿಯಲ್ಲಿ ತನ್ನ ಕಿವಿಗಳನ್ನು ಮುಂದಕ್ಕೆ ಚಾಚಿ ಅತಿ ಚಮ

ತ್ಕಾರದಿಂದ ಓಡಿಬರುತ್ತಿರುವ "ಪಂಚಕಲ್ಯಾಣಿ" ಎಂಬ ತನ್ನ ಕುದುರೆಯನ್ನೇರಿ ಒಬ್ಬ ನವಯೌವನ ಸಂಪನ್ನನಾದ ರಾಜಕುಮಾರನು ಆ ದಾರಿಯಲ್ಲಿಯೇ ಬರುತ್ತಿದ್ದನು. ಆತನ ಬಲಗೈಯಲ್ಲಿದ್ದ ಮಹಾದೇವನ ತ್ರಿಶೂಲ ಸದೃಶವಾದ ಭಲ್ಯವೂ ಎಡಗಡೆಯ ಸೊಂಟಕ್ಕೆ ಕಟ್ಟಿದ್ದ ಭಯಂಕರವಾದ ಖಡ್ಗವೂ ಆತನ ಮುಖ ಕಾಂತಿಯೂ ಆತನನ್ನು ಒಬ್ಬ ವೀರಪುರುಷನೆಂದೇ ತಿಳಿಸುತ್ತಿದ್ದುವು. ಅಷ್ಟೇ ಅಲ್ಲ—ಆಜಾನುಬಾಹುಮಾತ್ರವಲ್ಲದೆ — ಗಂಭೀರ ಮುದ್ರೆಯನ್ನು ತಳೆದಿದ್ದ ಆತನ ಮುಖದರ್ಶನಮಾತ್ರದಿಂದ ಎಂತಹ ಶತ್ರುವೀರರಿಗೂ ಭಯವುಂಟಾಗುವಂತಿದ್ದುದರಿಂದ ಆತನನ್ನು ಜಗದೇಕವೀರನೆಂದೇ ಹೇಳಬಹುದು. ಹೀಗೆ ಆ ರಾಜಕುಮಾರ ಕಂಠೀರವನು ತನ್ನ ಅಶ್ವಾರೋಹಣ ಕೌಶಲವನ್ನು ಪ್ರಕಾಶಪಡಿಸುತ್ತ ಆ ಅರಣ್ಯಮಾರ್ಗದಲ್ಲಿ ಬರುತ್ತಿದ್ದನು. ಬಾದಷಹನ ಆಜ್ಞೆಯಂತೆ ಗುಹೆಗಳಲ್ಲಿ ಅಡಗಿ ಹೊಂಚಿ ನೋಡುತ್ತಿದ್ದ ಮಹಮ್ಮದೀಯ ಭಟರು ತಮ್ಮ ಕುದುರೆಗಳನ್ನು ಹತ್ತಿ ಕ್ಷಣಮಾತ್ರದಲ್ಲಿ ರಾಜಪುತ್ರನನ್ನು ನಾಲ್ಕು ಕಡೆಯಿಂದಲೂ ಮುತ್ತಿದರು. ಮುಂದಾಳಾಗಿದ್ದ ಮಹಮ್ಮದೀಯ ಭಟನೊಬ್ಬನು ರಾಜಪುತ್ರನ ಇದಿರಾಗಿ ಬಂದು—"ಅರೇ, ಬಚ್ಚಾ! ಮದುವೆ ಗಂಡಿನಂತಿರುವೆ? ಕುದುರೆಯಿಂದಿಳಿ—ಬೇಗ ಇಳಿ!!" ಎಂದು ಗದರಿಸಿದನು. ಆಗ ಕ್ಷತ್ರಿಯವೀರನು ಒಂದು ಬಾರಿ ಶತ್ರುಪಕ್ಷದವರನ್ನು ನೋಡಿ ಕ್ಷಣಮಾತ್ರದಲ್ಲೇ ಒರೆಯಲ್ಲಿದ್ದ ಖಡ್ಗವನ್ನೆತ್ತಿ ಅದನ್ನು

ಒಂದು ಕೈಯಲ್ಲಿಯೂ ಭಲ್ಲೆಯನ್ನು ಮತ್ತೊಂದು ಕೈಯಲ್ಲಿಯೂ ಹಿಡಿದು ಗಿರಗಿರನೆ ತಿರುಗಿಸುತ್ತಾ ರೋಷಾವೇಶದಿಂದ ಭೀಷಣಾಕಾರನಾದ ಕಾಲಾಂತಕನಂತೆ ಅಟ್ಟಹಾಸದಿಂದ ಮೆರೆದನು. ಮಹಮ್ಮದೀಯ ಭಟರು ಆತನ ಸಾಹಸಕ್ಕೆ ಭಯಪಟ್ಟರೂ ಹಿಂತೆಗೆಯದೆ ಆತನ ಮೇಲೆ ಖಡ್ಗಗಳನ್ನೂ ಬಾಣಗಳನ್ನೂ ಪ್ರಯೋಗಿಸಲಾರಂಭಿಸಿದರು. ವೀರಕುಮಾರನು ನಿಜಕರಾಳವನ್ನು ತಿರುಗಿಸುತ್ತಾ ತನ್ನ ಮೇಲೆ ಪ್ರಯೋಗಿಸಿದ ಶತ್ರುಗಳ ಬಾಣಗಳನ್ನೂ—ಖಡ್ಗ ಪ್ರಹಾರಗಳನ್ನೂ ನಿವಾರಿಸಿ ತನ್ನ ತುರಗವನ್ನು ಅವರ ಮೇಲೆ ಓಡಿಸುತ್ತ ಒಬ್ಬೊಬ್ಬನನ್ನಾಗಿ ಭೂದೇವಿಗೆ ಬಲಿಕೊಡುತ್ತ ಬಂದನು.

ಹೀಗೆ ಆ ಭಟರಲ್ಲಿ ಹತ್ತುಮಂದಿ ಮೃತ್ಯುದೇವತೆಗೆ ಬಲಿಯಾಗಲು ಉಳಿದವರು ರೋಷಕಷಾಯಿತ ನೇತ್ರರಾಗಿ ತಮ್ಮ ಪ್ರಾಣದಮೇಲಿನ ಆಶೆಯನ್ನು ಬಿಟ್ಟು ಒಟ್ಟಿಗೆ ರಾಜಪುತ್ರನ ಮೇಲೆ ಬಿದ್ದರು. ರಾಜಕುಮಾರನು ಬಿಸಿಲಿನ ತಾಪದಿಂದಲೂ ಈವರೆಗೆ ಮಾಡಿದ ಯುದ್ಧದಿಂದಲೂ ಸಘರ್ಮ ಶರೀರನಾಗಿ ಮಿತಿಮೀರಿದ ಆಯಾಸದಿಂದ ಕೂಡಿ ಉಳಿದವರನ್ನೂ ಉಪಾಯದಿಂದ ಕೊಲ್ಲಬೇಕೆಂದು ಯೋಚಿಸುತ್ತಿರುವಲ್ಲಿ ತರುಣ ವಯಸ್ಕನಾದ ರಾಜಕುಮಾರನೊಬ್ಬನು ತನ್ನ ಮಿತ್ರನೊಡನೆ ಕುದುರೆಗಳನ್ನೇರಿ ವಾಯುವೇಗದಿಂದ ರಾಜಪುತ್ರನ ಸಹಾಯಾರ್ಥವಾಗಿ ಬಂದು ಕ್ಷಣಮಾತ್ರದಲ್ಲಿ ಕೆಲವು ಮಹಮ್ಮದೀಯ ಭಟರನ್ನು ಭೂದೇವಿಗೆ ಬಲಿಯಾಗಿ ಒಪ್ಪಿಸಿದನು. ಉಳಿದ ಮಹಮ್ಮದೀ

ಯುಭಟರು ಆ ರಾಜಪುತ್ರರ ಕತ್ತಿಯ ಏಟುಗಳನ್ನು ತಡೆಯಲಾರದೆ ಚದರಿಹೋದರು. ನಮ್ಮ ಕ್ಷತ್ರಿಯವೀರನು ತನ್ನ ಸಹಾಯಕ್ಕಾಗಿ ಬಂದ ಆ ಆಗಂತುಕರಿಬ್ಬರ ಸಾಹಸಕ್ಕೂ ಶೌರ್ಯಾತಿಶಯಕ್ಕೂ ಆಶ್ಚರ್ಯಪಟ್ಟು ಅವರ ಸಮಾಚಾರವನ್ನು ತಿಳಿಯುವ ಕುತೂಹಲದಿಂದ ಹೀಗೆ ಪ್ರಸಂಗಮಾಡತೊಡಗಿದನು:—

ಕ್ಷತ್ರಿಯವೀರ:—ಅಯ್ಯಾ! ನೀವು ಯಾರು? ನಿಮ್ಮ ವಾಸವೆಲ್ಲಿ?

ರಾಜಕುಮಾರ:—ನಮ್ಮ ಪುರವು 'ಜಯಪುರ.'

ಕ್ಷತ್ರಿಯವೀರ:—ಜಯಪುರದಲ್ಲಿ ನಿಮ್ಮ ಉದ್ಯೋಗವೇನು?

ರಾಜಕುಮಾರ:—ಉದ್ಯೋಗವು ಮತ್ತೇನೂ ಇಲ್ಲ. ಜಯಪುರದ ರಾಜನ ಸೈನ್ಯದಲ್ಲಿ ನಾವಿಬ್ಬರೂ ರಣವಿದ್ಯೆಯನ್ನು ಕಲಿಯುತ್ತಿದ್ದೇವೆ.

ಕ್ಷತ್ರಿಯವೀರ:—ಆಹಾ! ನನ್ನ ಪ್ರಾಣಗಳನ್ನುಳುಹಿದ ನಿಮ್ಮಿಬ್ಬರನ್ನೂ ನಾನೆಷ್ಟು ಹೊಗಳಲಿ? ಈಗಲೇ ನಿಮ್ಮ ಪರಾಕ್ರಮವು ವರ್ಣನಾತೀತವಾಗಿರುವದು! ನಿಮ್ಮಿಬ್ಬರನ್ನೂ ನಮ್ಮ ನಗರಕ್ಕೆ ಕರದೊಯ್ದು ಸತ್ಕರಿಸಬೇಕೆಂದು ಮನಸ್ಸು ಆಶಿಸುತ್ತಿರುವುದು.

ರಾಜಪುತ್ರ:—ನಿಮ್ಮ ನಗರವಾವುದು?

ಕ್ಷತ್ರಿಯಕುಮಾರ:—ಉದಯಪುರ.

ರಾಜಕುಮಾರನು ಒಂದು ಬಾರಿ ಕುತೂಹಲದಿಂದ ಕ್ಷತ್ರಿಯ ವೀರನನ್ನು ಆಪಾದ ಮಸ್ತಕಪರ್ಯಂತ ನೋಡ ತೊಡಗಿದನು. ನೋಡುತ್ತಿದ್ದಂತೆಯೇ ರಾಜಕುಮಾರನ ಮುಖಲಕ್ಷಣವು ಬದಲಾಯಿಸಿತು. ಕ್ಷತ್ರಿಯವೀರನು ತನ್ನ ಕಡೆಗೆ ನೋಡಿದಾಗಲೆಲ್ಲಾ ರಾಜಕುಮಾರನು ಮುಖವನ್ನು ತಗ್ಗಿಸಿಕೊಂಡು ಕಿರುನಗೆಯಿಂದ ಮಾತನಾಡುತ್ತ ತನ್ನ ಮಿತ್ರನ ಹಿಂದಕ್ಕೆ ಹೋಗಿ ನಿಲ್ಲುತ್ತಿದ್ದನು. ಆತನ ಮಿತ್ರನು ಕುಮಾರನ ಲಕ್ಷಣಗಳನ್ನು ನೋಡಿ ನೋಡಿ ಕಿರುನಗೆಯಿಂದ ಏನೋ ಸಂಜ್ಞೆ ಮಾಡಿದನು. ಹೀಗೆ ಅವರಿಬ್ಬರೂ ತಮ್ಮೊಳಗೇ ಪರಸ್ಪರ ಸಂಜ್ಞಾಪ್ರಕರಣ ದಿಂದ ಮಾತನಾಡಿಕೊಳ್ಳುತ್ತಿದ್ದರೂ ಕ್ಷತ್ರಿಯವೀರನು ಇದೊಂದನ್ನೂ ತಿಳಿಯದವನಾಗಿ ಸುಮ್ಮನೆ ನಿಂತಿದ್ದನು. ಆಗ ಮಿತ್ರನು ಕ್ಷತ್ರಿಯವೀರನನ್ನು ನೋಡಿ ಹೇಳಿದನು —"ಅಯ್ಯಾ! ಹೊತ್ತಾಯಿತು. ಈ ದಿನ ನಿಮ್ಮ ನಗರಕ್ಕೆ ಬರಲಾಗುವುದಿಲ್ಲ ಕ್ಷಮಿಸಬೇಕು!"

ಕ್ಷತ್ರಿಯ—ಅಯ್ಯಾ, ನೀವು ಬರಲಾಗದಿದ್ದರೂ ನಿಮ್ಮನ್ನು ನಾನೆಂದಿಗೂ ಮರೆಯಲಾರೆನು.

ಮಿತ್ರ:—ನಿಮ್ಮ ಸ್ನೇಹವನ್ನು ನಾವೂ ಮರೆಯಲಾರೆವು. ನಮಗೂ ನಿಮಗೂ ನಿಜವಾದ—ಅಭೇದ್ಯವಾದ ಮೈತ್ರಿಯು ಬೆಳದಿರುವುದು. ಇದರಲ್ಲಿ ಸಂದೇಹವಿಲ್ಲ.

ಕ್ಷತ್ರಿಯ:—ಅಯ್ಯಾ! ನಿನ್ನ ಮಿತ್ರನಾದ ಈ ಕುಮಾರನ ಪರಾಕ್ರಮವು ನನಗೆ ಅತ್ಯಂತ ಕೌತುಕವನ್ನುಂಟುಮಾಡಿತು. ಈಗಲೇ ಇಷ್ಟು ಪರಾಕ್ರಮಿ

ಯಾಗಿರುವ ಈತನನ್ನು ನೋಡಿ ನನಗೆ ಈತನಲ್ಲಿ ಅತ್ಯಂತ ಆದಾರಭಾವವುಂಟಾಗಿರುವುದು ಆದುದರಿಂದ ಈತನಿಗೆ ಈ ನನ್ನ ಕೃತಜ್ಞತೆಯ ಕುರುಹೆಂದು ನನ್ನ ಉಂಗುರವನ್ನಿತ್ತು ಬಹುಮಾನಿಸಲು ನನ್ನ ಮನಸ್ಸು ಆಶಿಸುತ್ತಿರುವುದು, ತಿರಸ್ಕರಿಸಬಾರದು" ಎಂದುಹೇಳಿ, ಕೂಡಲೆ ಕೈಯ್ಯಲ್ಲಿದ್ದ ಉಂಗುರವನ್ನು ತೆಗೆದು ರಾಜಕುಮಾರನ ಕೈಗೆ ಕೊಟ್ಟನು. ಕುಮಾರನು ಲಜ್ಜಾವನತ ಭಾವದಿಂದ ಉಂಗುರವನ್ನು ತೆಗೆದು ಬೆರಳಿನಲ್ಲಿಟ್ಟುಕೊಂಡು ಕ್ಷತ್ರಿಯವೀರನ ಅಪ್ಪಣೆಯನ್ನು ಪಡೆದು, ಮಿತ್ರನೊಡನೆ ಮುಂದೆ ಹೊರಟನು.

ತರುಣರಿಬ್ಬರೂ ಎಂದಿನಂತೆ ಖಡ್ಗಗಳನ್ನು ಬರೆಯೊಳಗಿಟ್ಟು, ಸಂತೋಷಚಿತ್ತರಾಗಿ ಕುದುರೆಗಳನ್ನು ಓಡಿಸುತ್ತಾ ಹೋಗುತ್ತಿದ್ದರು. ಮಿತ್ರನು ನಡುವೆ ಕುಮಾರನನ್ನು ನೋಡಿ ನೋಡಿ ಪರಿಹಾಸದಿಂದ ನಗುತ್ತಿದ್ದನು. ಆದರೂ ಕುಮಾರನು ಮಿತ್ರನ ಪರಿಹಾಸದ ಕಡೆಗೆ ಗಮನವಿಲ್ಲದೆ ತನ್ನ ಬೆರಳಿನಲ್ಲಿದ್ದ ಉಂಗುರವನ್ನು ಬಾರಿಬಾರಿಗೂ ನೋಡುತ್ತ ಆನಂದಿಸುತ್ತಿದ್ದನು. ಮಿತ್ರನು ಅವನ ವ್ಯಾಪಾರವನ್ನು ನೋಡಿ ಪರಿಹಾಸದಿಂದ ಹೀಗೆ ಕೇಳಿದನು —

ಮಿತ್ರ:—ಸಖಿ! ನಿನ್ನಲ್ಲಿಯೇ ಅದೇನನ್ನು ಹೇಳನಗುತ್ತಿರುವೆ? ನನಗೂ ಹೇಳಬಾರದೇ?

ಉತ್ತರ:—ನಾನಾವಾಗ ನಗುತ್ತಿದ್ದೆ? ಏನು ಹೇಳುತ್ತಿದ್ದೆ?"

"ಅಬ್ಬ! ಎಷ್ಟೊಂದು ಕೌಶಲ? ನನಲ್ಲಿಯೂ ರಹಸ್ಯವನ್ನು ಬಯಿತ್ತಿಡಬೇಕೆನ್ನುವೆಯಾ? —ಆಗಲಿ—ಆಗಲಿ!"

"ಹುಚ್ಚಿ! ರಹಸ್ಯವೇನು ಬಂತು; ಆತನು ಕೊಟ್ಟ ಉಂಗುರವನ್ನು ನೋಡಿ ನಗುತ್ತಿದ್ದೆನು. ಅಷ್ಟೆ! ಇದಕ್ಕಿಷ್ಟೊಂದು ಆಕ್ಷೇಪವೇಕೆ?"

"ನನಗೆಲ್ಲಾ ಗೊತ್ತಿದೆ, ವಿಮಲಾ! ಇನ್ನೂ ರಹಸ್ಯವನ್ನೇಕೆ ಬಯಿತ್ತಿಡುವೆ? ನೀನು ಹೇಳದಿದ್ದರೂ ನಾನು ತಿಳಿಯ ಬಲ್ಲೆನು. ಆ ರಾಜಕುಮಾರನಿದಿರಲ್ಲಿದ್ದಾಗ ನಿನ್ನ ಮುಖಲಕ್ಷಣಗಳನ್ನು ಚೆನ್ನಾಗಿ ಕಂಡು ಹಿಡಿದೆನು. ಇನ್ನೇಕೆ........"

"ಸಾಕು, ಪದ್ಮಾ! ಇನ್ನು ಹೆಚ್ಚು ಪರಿಹಾಸವು ಬೇಡ ಆ ರಾಜ ಪುತ್ರನು ಯಾರೆಂಬುದನ್ನು ನೀನು ಬಲ್ಲೆಯಾ?"

"ನನಗೆ ಗೊತ್ತೇ? ಆತನೇ ಹೇಳಿದನಷ್ಟೆ—ಉದಯಪುರದವನೆಂದು! ನನಗೆಬೇರೆ ಆತನನ್ನು ನೋಡಿದ್ದು ನೆನಪಿಲ್ಲ"

"ಪದ್ಮಾ! ನಾವು ನೋಡಿದ್ದ ಮಾತ್ರಕ್ಕೆ ಆತನೇನೂ ಹೊಸಬನಲ್ಲ. ಈವರೆಗೆ ನಾವು ಯಾವ ವೀರನ ನಾಮಸ್ಮರಣೆ ಮಾಡುತ್ತಿದ್ದೆವೋ ಆ ಅಸಹಾಯಶೂರನಾದ 'ರಾಜಸಿಂಹನೇ' ಆತನು!"

"ಏನು ..ಏನು! ವಿಮಲಾ! ಆತನೇ ರಾಜಸಿಂಹನೇ? ನೀನು ಹೇಗೆ ಗುರುತಿಸಿದೆ? ನನಗೆ ಆಗಲೇ ಏಕೆಹೇಳಲಿಲ್ಲ?

"ನನಗೆ ಈ ಉಂಗುರದಲ್ಲಿರುವ ಹೆಸರನ್ನು ನೋಡಿದಮೇಲೆ ತಿಳಿದು ಬಂದಿತು."

"ಹಾಗಿದ್ದರೆ ನೀನು ಭಾಗ್ಯವತಿಯೇ ಸರಿ! ಇದಕ್ಕಾಗಿ ನಾನು ತುಂಬಾ ಸಂತೋಷಪಡುವೆನು. ಇರಲಿ; ನಿಮ್ಮ ತಂದೆ ನಿನ್ನನ್ನು ಒಬ್ಬ ರಾಜಕುಮಾರನಿಗೆ ಕೊಟ್ಟು ಮದುವೆಮಾಡಿ ಅಳಿಯನನ್ನು ಮನೆಯಲ್ಲಿಯೇ ಇರಿಸಕೊಳ್ಳುವನಂತೆ! ನಿನಗೀ ವಿಷಯವು ತಿಳಿದಿದೆಯೆ?"

"ಅದೆಲ್ಲಿಯ ಮಾತು ಪದ್ಮಾ! ನನ್ನ ಹೃದಯದಲ್ಲಿ ನಿಶ್ಚಿತನಾಗಿರುವ ಪುರುಷನನ್ನು ಬಿಟ್ಟು ಮತ್ತೊಬ್ಬನನ್ನು ಮದುವೆಯಾಗುವೆನೆ? ಅದೆಂದಿಗೂ ಆಗದು. ಇನ್ನು ಮುಂದೆ ರೂಪನಗರಕ್ಕೆ ರಾಣಿಯು ನೀನಲ್ಲದೆ ನಾನಾಗುವೆನೆಂಬ ಭಾವನೆಯನ್ನು ಬಿಟ್ಟುಬಿಡು!"

"ಅಸಾಧ್ಯವಾದ ಮಾತನ್ನೇಕೆ ಹೇಳುವೆ ವಿಮಲಾ!"

"ಪದ್ಮಾ! ಇದು ಸುಸಾಧ್ಯವಲ್ಲದೆ ಅಸಾಧ್ಯವೇನೂ ಅಲ್ಲ. ನಮ್ಮ ತಂದೆಯು ಕೋಪದಿಂದ 'ಮಗನು ಈ ವಿಧವಾವ ಶಿಕ್ಷೆಯಿಂದಲಾದರೂ ಬುದ್ಧಿ ಕಲಿತುಕೊಳ್ಳಲೆಂದು' ನಮ್ಮ ಅಣ್ಣನನ್ನು ರಾಜಧಾನಿಯಿಂದ ಹೊರಡಿಸಿರುವನೇ ಹೊರತು ಮನಃಪೂರ್ವಕವಾಗಿ ಆತನನ್ನು ಬಿಟ್ಟಿರುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಮತ್ತೆ ಆತನನ್ನು ಕರೆಯಿಸಿ ನಿನ್ನನ್ನೇ ಆತನಿಗೆ ಕೊಟ್ಟು ಮದುವೆ ಮಾಡುವನೆಂದು ಖಚಿತವಾಗಿ ತಿಳಿದಿರು. ಸುಳ್ಳಲ್ಲ."

ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಾ ಆ ಈರ್ವರೂ ತಮ್ಮ ನಗರವನ್ನು ಕುರಿತು ಹೊರಟುಹೋದರು.

---

## ಶ್ರೀ

# ಒಂಭತ್ತನೆಯ ಪ್ರಕರಣ

---

## (ಪದ್ಮೆಯ ಸಾಹಸವು)

ಭಯಂಕರಾಕಾರಿಗಳಾದ ಭಿಲ್ಲರು ಒಂದು ಪಲ್ಲಕ್ಕಿಯನ್ನು ಹೊತ್ತುಕೊಂಡು ಅದರ ಸುತ್ತಲೂ ಮುತ್ತಿ ಬರುತ್ತಿರಲು. ಮಿತ್ರಪರಿವಾರದೊಡನೆ ಪಲ್ಲಕ್ಕಿಯ ಮುಂದೆ ಒಬ್ಬ ರಾಜಪುತ್ರವೀರನು ಮಹಾರಣ್ಯ ಮಧ್ಯದಲ್ಲಿ ಬರುತ್ತಿದ್ದನು. ಪಲ್ಲಕ್ಕಿಯಲ್ಲಿ ಓರ್ವ ಸ್ತ್ರೀಯು ತನ್ನ ಕುಮಾರನೊಡನೆ ಕುಳಿತುಕೊಂಡಿದ್ದಳು. ರಾಜಪುತ್ರನಾರೋ—ಎಲ್ಲಿಗೆ ಹೋಗುತ್ತಿದ್ದನೋ—ಹೇಳಲಾರೆವು. ಕರದಲ್ಲಿ ಖಡ್ಗವನ್ನು ಧರಿಸಿ ತನ್ನ ಪರಿವಾರವನ್ನೂ ಭಿಲ್ಲರನ್ನೂ "ಜಾಗ್ರತೆಯಾಗಿ ನಡೆಯಿರಿ, ಜಾಗ್ರತೆಯಾಗಿ ನಡೆಯಿರಿ" ಎಂದು ತ್ವರೆಗೊಳಿಸುತ್ತ ಅತಿತ್ವರಿತಗಮನದಿಂದ ಹೋಗುತ್ತಿದ್ದನು. ಎತ್ತಿದ ಸವಾರಿಯನ್ನಿಳುಕದೆ ಆ ಭಿಲ್ಲರೂ ಏಕರೀತಿಯಾಗಿ ಓಡಲಾರಂಭಿಸಿದರು ಸರಿಯಾದ ಮಾರ್ಗವಿದ್ದರೂ ಬಿಟ್ಟು ಬೆಟ್ಟಗುಡ್ಡಗಳ ಮಾರ್ಗವಾಗಿಯೂ, ಅರಣ್ಯಮಾರ್ಗದಲ್ಲಿಯೂ ಹೋಗುತ್ತಿದ್ದರು. ಅಂತಹ ಬೆಟ್ಟಗುಡ್ಡಗಳಲ್ಲಿಯೂ, ಪರ್ವತ ಗುಹೆಗಳ ಕಂಟಕಪ್ರದೇಶಗಳಲ್ಲಿಯೂ ನಡೆಯಲು ಭಿಲ್ಲರಿಗೆ ಸಾಧ್ಯವೆನಿಸಿತ್ತೇ ವಿನಾ ಮತ್ತಾರಿಗೂ ಸಾಧ್ಯವಿಲ್ಲ. ಅವರು ಹೋಗುತ್ತಿದ್ದ ಗಹನಮಾರ್ಗವನ್ನೂ ಅವಸರವನ್ನೂ ನೋಡಿದರೆ ಯಾವುದೋ ಮಹಾಕಷ್ಟದಿಂದ ತಪ್ಪಿಸಿಕೊಂಡು ಬಂದವರಂ

ತೆಯೇ ಕಾಣುವುದು. ರಜಪೂತವೀರನು ಅಡಿಗಡಿಗೆ ಪಲ್ಲಕ್ಕಿಯನ್ನು ಸಮೀಪಿಸಿ, ಒಳಗಿದ್ದ ಸ್ತ್ರೀಯನ್ನು ಕುರಿತು—“ಇನ್ನು ನಮಗೆ ಭಯವಿಲ್ಲ; ಭಿಲ್ಲರು ತ್ವರೆಯಾಗಿ ನಡೆಯುತ್ತಿರುವರು; ಕೈಬರ್ ಕಣಿವೆ ಹಿಂದೆ ನಿಂತಿತು; ಅಟಕ್ ನದಿಯನ್ನೂ ದಾಟಿದೆವು; ಅರಾವಲೀಪರ್ವತಗಳು ಸಮೀಪದಲ್ಲಿರುವುವು; ಗಂಡವು ಕಳೆದುಹೋಯಿತು; ದೈವಾನುಗ್ರಹದಿಂದ ಸ್ವಲ್ಪದಿನಗಳಲ್ಲಿಯೇ ರಾಜಧಾನಿಯನ್ನು ಸೇರಬಹುದು; ನಮ್ಮ ಭಿಲ್ಲರು ರಹಸ್ಯ ಮಾರ್ಗದಲ್ಲಿಯೇ ಹೋಗುತ್ತಿರುವುದರಿಂದ ಯಾರೂ ನಮ್ಮನ್ನು ಗುರ್ತಿಸಲಾರರು;” ಎಂದು ಹೇಳುತ್ತಾ ಮುಂದೆ ಹೋಗುತ್ತಿದ್ದನು. ಭಿಲ್ಲರು ಅಷ್ಟುವೇಗವಾಗಿ ಹೋಗುತ್ತಿದ್ದರೂ ರಾಜಪುತ್ರವೀರನು ‘ಜಾಗ್ರತೆ! ಜಾಗ್ರತೆ!!’ ಎಂದು ಹೇಳುತ್ತ ಸ್ವಲ್ಪವೂ ವಿಶ್ರಾಂತಿಯನ್ನು ಕೊಡದೆ ಇದ್ದನು.

ಹೀಗೆ ಇವರು ಹೋಗುತ್ತಿದ್ದ ಅರಣ್ಯಮಾರ್ಗವು ನೋಡುವುದಕ್ಕೆ ಅತಿ ಭಯಂಕರವಾಗಿದ್ದಿತು. ಎತ್ತನೋಡಿದರೂ ಗಗನವನ್ನು ಸಮೀಪಿಸಿದ ತಾಳೆಯ ಗಿಡಗಳೇ! ಎತ್ತನೋಡಿದರೂ ಭಯಂಕರವಾದ ಹುತ್ತಗಳೇ! ಯಾವಕಡೆ ನೋಡಿದರೂ ಭೀಕರವಾದ ಮರಗಳೇ! ಎತ್ತನೋಡಿದರೂ ಕಾಲಿಡಲು ಸಾಧ್ಯವಲ್ಲದ ಕಂಟಕಮಯವಾದ ಪೊದರುಗಳೇ!!! ಇಷ್ಟೇ ಅಲ್ಲ; ಇಕ್ಕೆಡೆಗಳಲ್ಲಿಯೂ ಇದ್ದ ಪರ್ವತಶ್ರೇಣಿಗಳೂ ಪರ್ವತಗುಹೆಗಳೂ ಮತ್ತಷ್ಟು ಭಯಂಕರವಾಗಿದ್ದವು.

ಇಂತಹ ಅರಣ್ಯಮಾರ್ಗದಲ್ಲಿ ನರಹತ್ಯೆಗೆ ಗಣನೆಯುಂಟೆ? ರಾಜಪುತ್ರನು ನಿಜಪರಿವಾರದೊಡನೆ ಹೋಗುತ್ತಿರುವಲ್ಲಿ ಒಂದು ಕಡೆಯಿಂದ—

“ಹಾ—ರಕ್ಷಿಸು ! ರಕ್ಷಿಸು !!” ಎಂದು ಒಂದು ಸ್ತ್ರೀ ಕಂಠಧ್ವನಿ ಕೇಳಿಸಿತು. ರಜಪುತ್ರವೀರನು ಆ ಆರ್ತಧ್ವನಿಯನ್ನು ಕೇಳಿದರೂ ಅತ್ತ ಗಮನಿಸದೆ ಮುಂದೆ ಹೊರಟನು. ಆದರೆ ಪಾಲ್ಕಿಯಲ್ಲಿದ್ದ ಸ್ತ್ರೀಯು ಆ ಧ್ವನಿಯನ್ನು ಕೇಳಿದ ಕೂಡಲೆ ‘ನಿಲ್ಲಿರಿ, ಭಿಲ್ಲರೆ ! ಸ್ವಲ್ಪ ನಿಲ್ಲಿರಿ; ಆವಳೋ ಹೆಂಗಸು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಿದ್ದಳು.” ಎಂದು ಆಜ್ಞಾಪಿಸಿದಳು. ರಜಪುತ್ರವೀರನು ಪಲ್ಲಕ್ಕಿಯ ಬಳಿಗೆ ಬಂದು ಹೇಳಿದನು.

‘ತಾಯೀ ! ಯಾರಾದರೇನು ? ಇಲ್ಲಿ ನಾವು ಕಾಲವನ್ನು ಕಳೆದರೆ ಶತ್ರುಗಳ ಕೈಯ್ಗೆ ಖಂಡಿತವಾಗಿ ಸಿಕ್ಕುವೆವು.’

‘ಅಯ್ಯಾ ! ದೀನರನ್ನು ಕಾಪಾಡುವದೇ ಕ್ಷತ್ರಿಯ ಧರ್ಮವು. ನನಗೆಷ್ಟು ಕಷ್ಟ ಬಂದರೂ ‘ಶರಣು’ ಎಂದವರನ್ನು ಬಿಡಲಾರೆನು. ಪರರ ಕಷ್ಟಗಳು ತನ್ನವೆಂದು ಭಾವಿಸಿ ಅದನ್ನು ನಿವಾರಿಸಲು ಯತ್ನಿಸುವವನೇ ಕ್ಷತ್ರಿಯನು. ಆದುದರಿಂದ ಸ್ವಲ್ಪಹೊತ್ತು ಇಲ್ಲಿನಿಂತು ದೀನಳನ್ನು ರಕ್ಷಿಸೋಣ.’

“ಎಲ್ಲವನ್ನೂ ತಿಳಿದಿರುವ ನಿನಗೆ ನಾನೇನನ್ನು ಹೇಳಲಿ ? ನಮ್ಮ ಪ್ರಾಣಗಳನ್ನೇ ನಾವು ಕಾಪಾಡಿಕೊಳ್ಳಲು ಕಷ್ಟವಾಗಿರುವಲ್ಲಿ ಪರರನ್ನು ರಕ್ಷಿಸಲಾಗುವುದೆ, ನಾನು ಮಾತ್ರ ಕ್ಷತ್ರಿಯನಲ್ಲವೇ ? ಕ್ಷತ್ರಿಯಧರ್ಮವು ನನಗೆ ತಿಳಿಯದೆ? ಸಮಯವರಿತು ನಡೆಯಬೇಕೆಂಬುದನ್ನು ತಿಳಿಯಬೇಡವೆ? ತಾಯೀ ! ಅಸಮಾಧಾನಗೊಳ್ಳಬೇಡಿ, ನಾನೇ ಹೋಗಿ ಆಕೆಯನ್ನು ಬಿಡಿಸುವೆನು. ನೀವು ಇಲ್ಲಿ

ನಿಲ್ಲದೆ ಮುಂದೆ ಹೊರಟು ಹೋಗಿರಿ.'' ಹೀಗೆ ಹೇಳಿ ರಜಪುತ್ರವೀರನು ಭಿಲ್ಲರನ್ನೂ ಪಲ್ಲಕ್ಕಿಯಲ್ಲಿದ್ದ ಸ್ತ್ರೀಯನ್ನೂ ತ್ವರೆಗೊಳಿಸಿ ಕಳುಹಿಬಿಟ್ಟು ಖಡ್ಗಪಾಣಿಯಾಗಿ ಮಹಾರಣ್ಯಮಧ್ಯದಲ್ಲಿ ನಡೆದು ಕಾಂತಾಮಣಿಯ ರೋಧನವು ಕೇಳಿ ಬರುತ್ತಿದ್ದ ಕಡೆಗೆ ಓಡಿಬಂದು ನೋಡಿದನು. ಒಂದು ಮರದ ಕೆಳಗೆ ಇಬ್ಬರು ಮಹಮ್ಮದೀಯರೂ ಒಬ್ಬ ಭಿಲ್ಲನೂ ಹೋರಾ ಹೋರಿಯಿಂದ ಹೋರಾಡುತ್ತಿದ್ದುದನ್ನೂ ಅವರ ಹಿಂದೆ ಒಬ್ಬ ರಾಜಕನ್ನಿಕೆಯು ಭಯದಿಂದ ಗಡಗಡನೆ ನಡುಗುತ್ತಾ ಕಣ್ಣೀರು ಸುರಿಸುತ್ತಾ ನಿಂತಿದ್ದುದನ್ನೂ ದೂರದಿಂದಲೇ ಕಂಡನು. ಮಹಮ್ಮದೀಯರ ಕತ್ತಿಯ ಹೊಡೆತಗಳಿಂದ ಶರೀರವೆಲ್ಲ ರಕ್ತಮಯವಾಗಿದ್ದರೂ ಭಿಲ್ಲನು ಹಿಂಜರಿಯದೆ ಹೋರಾಡುತ್ತಿದ್ದನು. ಈ ಘೋರಕೃತ್ಯವನ್ನು ಕಂಡೊಡನೆಯೇ ರಜಪುತ್ರನು ಕ್ಷಣಮಾತ್ರದಲ್ಲಿ ಹಾರಿಬಂದು ಮಹಮ್ಮದೀಯರಿಬ್ಬರನ್ನೂ ಖಡ್ಗಹತಿಯಿಂದ ಭೂದೇವಿಗೆ ಬಲಿಯಾಗಿ ಒಪ್ಪಿಸಿದನು. ರಾಜಪುತ್ರನ ದರ್ಶನಮಾತ್ರದಿಂದಲೇ ಆ ರಾಜಕನ್ಯೆಯ ದುಃಖವೆಲ್ಲ ಶಾಂತವಾಗಿ ತತ್ಕ್ಷಣವೇ ನಾಚಿಕೆಯುಂಟಾಗಲು ಮುಖವನ್ನು ತಗ್ಗಿಸಿಕೊಂಡು ನೆಲವನ್ನು ನೋಡುತ್ತಾ ನಿಂತಳು. ರಜಪುತ್ರವೀರನು ಮೊದಲು ಯುದ್ಧದ ದೆಸೆಯಿಂದಾದ ಘಾಯದಿಂದ ಮೂರ್ಛಿತನಾಗಿ ಬಿದ್ದಿದ್ದ ಭಿಲ್ಲನನ್ನು ಮೆಲ್ಲಗೆ ಎಬ್ಬಿಸಿ, 'ಎಲೈ-ಭಟನೆ ! ನಿನಗೆ ಸಮಸ್ತ ವನೌಷಧಿಗಳೂ ತಿಳಿದಿರುವವು. ಈಗ ನಾನು ಏನುಮಾಡಬೇಕೆಂದು ತಿಳಿಸಿದರೆ ನನ್ನ ಶಕ್ತ್ಯಂ

ಚನೆಯಿಲ್ಲದೆ ನಿನ್ನನ್ನು ಉಪಚರಿಸುವೆನು" ಎಂದು ಹೇಳಿದನು

ಭಟನು:—'ಶಿವಸಿಂಗ್ ಮಹಾರಾಜಾ ! ತಮ್ಮ ಅನುಗ್ರಹದಿಂದ ಈ ದಿನ ನನ್ನ ಪ್ರಾಣವುಳಿಯಿತು. ತಾವು ಇನ್ನು ಸ್ವಲ್ಪ ಹೊತ್ತು ಇಲ್ಲಿಗೆ ಬಾರದಿದ್ದ ಪಕ್ಷದಲ್ಲಿ ನಮ್ಮಿಬ್ಬರ ಗತಿಯೇನಾಗುತ್ತಿದ್ದಿತೋ ದೇವರೇ ಬಲ್ಲನು ! ಈಗ ನಾವು ಯಾವ ಗಿಡದ ಕೆಳಗಿರುವೆವೊ—ಅದೇ ಗಿಡದ ಎಲೆಗಳ ರಸವನ್ನು ಹಿಂಡಿ ಗಾಯಕ್ಕೆ ಸವರಿದರೆ ಸ್ವಲ್ಪಹೊತ್ತಿನೊಳಗಾಗಿ ಗುಣವಾಗುವುದು' ಎಂದನು. ರಾಜಪುತ್ರನು ತತ್‌ಕ್ಷಣವೇ ಕೆಲವು ಎಲೆಗಳನ್ನು ಕಿತ್ತು ರಸವನ್ನು ಹಿಂಡಿ ಭಿಲ್ಲನ ಶರೀರಕ್ಕೆಲ್ಲ ಸವರಿದನು. ಆ ಬಳಿಕ ತಲೆಬಾಗಿ ದೂರದಲ್ಲಿ ನಿಂತಿದ್ದ ಕೋಮಲಾಂಗಿಯನ್ನು ನೋಡಿ ಆದರದಿಂದ ಕೇಳಿದನು. 'ಪದ್ಮಾ! ನೀನು ಇಲ್ಲಿಗೇಕೆ ಬಂದೆ ?'

ಪದ್ಮಾ:—ಮಹಾರಾಜಾ ! ವಿಮಲಾದೇವಿಯು ಪೃಥಿವೀಸಿಂಗನ ಮರಣಾನಂತರದಲ್ಲಿ ಚಂದ್ರಾವತೀ ದೇವಿಗೆ ಒಂದು ಪತ್ರವನ್ನು ಬರೆದಿದ್ದಳು. ಅದು ಆಕೆಗೆ ಮುಟ್ಟಿತೋ ಇಲ್ಲವೋ ತಿಳಿಯದು. ಅಷ್ಟರಲ್ಲಿ ಯಶವಂತಸಿಂಹ ರಾಣಾರವರ ಮರಣವಾರ್ತೆಯನ್ನು ಕೇಳಿದುದರಿಂದ ಚಂದ್ರಾವತೀದೇವಿಯನ್ನು ನೋಡಿಬರಬೇಕೆಂದು ನನಗೆ ಆಜ್ಞಾಪಿಸಿ ಈ ಭಿಲ್ಲನನ್ನು ನನ್ನ ಸಹಾಯಕ್ಕಾಗಿ ಕಳುಹಿದಳು. ಈ ಮಾರ್ಗಮಧ್ಯದಲ್ಲಿ ಈ ದುಷ್ಟರು ನಮ್ಮನ್ನು ಬಾಧಿಸತೊಡಗಿದರು. ಈ ಸಮಯದಲ್ಲಿ ನೀವು ಬಾರದೆ ಹೋಗಿದ್ದರೆ ನಮ್ಮ ನಿಮ್ಮ ಋಣಾನುಬಂಧವಿಂದಿಗೆ ತೀರಿ ಹೋಗುತ್ತಿದ್ದಿತು. ದೇವರೇ ನಿಮ್ಮನ್ನು ಇಲ್ಲಿಗೆ ಕಳುಹಿದನೆಂದು ನನಗೆ ತೋರುತ್ತಿದೆ.'

ರಾಜಪುತ್ರ:—ಮಂದಹಾಸದಿಂದ 'ಹಾಗಾದರೆ, ಚಂದ್ರಾವತಿಯನ್ನು ನೋಡುವುದಕ್ಕೆ ಮಾತ್ರ ಬಂದೆ ! ಕುಮಾರನನ್ನೂ ನೋಡಬೇಕಾದ ಅಗತ್ಯವಿಲ್ಲ—ಅಹುದಷ್ಟೆ ?'

ಶಿವಸಿಂಗನ ಪರಿಹಾಸವಾಕ್ಯಕ್ಕೆ ಪದ್ಮೆಯು ಉತ್ತರವನ್ನು ಕೊಡಲಾರದೆ ಲಜ್ಜೆಯಿಂದ ಆರಕ್ತವಾಗಿದ್ದ ಮುಖಕಮಲವನ್ನು ಬಾಗಿಸಿಕೊಂಡಳು. ಶಿವಸಿಂಗನು ರಕ್ತತೆಯಿಂದ ಸುಮನೋಹರವಾಗಿದ್ದ ಪದ್ಮೆಯ ಮುಖಮುದ್ರೆಯನ್ನು ಏಕದೃಷ್ಟಿಯಿಂದ ದಿಟ್ಟಿಸಿನೋಡಿ ಆನಂದೋದ್ರೇಕದಿಂದ ಲಾಘವದಲ್ಲಿ ಪದ್ಮೆಯ ಮುಂದೆ ನಿಂತು ಆವಳ ಮುಖಕಮಲದ ಸುವಾಸನೆಯನ್ನು ಸ್ವೀಕರಿಸಿ, ಗಾಢಾಲಿಂಗನದಿಂದ ತನ್ನ ಅನುರಾಗವನ್ನು ಹೊರಚೆಲ್ಲಿದನು. ಪದ್ಮೆಯು ಪ್ರಾಣವಲ್ಲಭನ ಮುಖವನ್ನು ನೋಡಿ ಪ್ರೀತಿಯಿಂದ—"ನೀವು ಈ ಅರಣ್ಯದಲ್ಲಿ ಎಲ್ಲಿಗೆ ಹೋಗುತ್ತಿರುವಿರಿ ?" ಎಂದಳು.

ಶಿವಸಿಂಗ್:—ಪದ್ಮಾ ! ದುರ್ಗಾದಾಸನು ಶತ್ರುಗಳ ಮಧ್ಯದಲ್ಲಿ ಸಿಕ್ಕಿದ್ದ ಚಂದ್ರಾವತಿಯನ್ನು ಕುಮಾರನೊಡನೆ ಉಪಾಯದಿಂದ ಬಿಡುಗಡೆಮಾಡಿ ಅವರಿಬ್ಬರನ್ನೂ ಜೋಧಪುರಕ್ಕೆ ಸಾಗಿಸಬೇಕೆಂದು ನನ್ನ ಹಿಂದೆ ಕಳುಹಿಸಿರುವನು. ನಾವು ಈ ಅರಣ್ಯ ಮಾರ್ಗವಾಗಿ ಹೋಗುತ್ತಿರುವಾಗ ರಕ್ಷಿಸು ! ರಕ್ಷಿಸು ! ಎಂಬ ಆರ್ತಸ್ವರವನ್ನು ಕೇಳಿ ಚಂದ್ರಾವತಿಯು ನನ್ನನ್ನು ಇಲ್ಲಿಗೆ ಕಳುಹಿದಳು. ಇಷ್ಟು ಹೊತ್ತಿಗೆ ಚಂದ್ರಾವತಿಯು ಬಹುದೂರ ಹೋಗಿರಬಹುದು ಎಂದನು.

ಈ ಮಾತುಗಳೆಲ್ಲವನ್ನೂ ಕೇಳುತ್ತಿದ್ದ ಭಿಲ್ಲನು—'ಸ್ವಾಮಿ ! ತಾವು ಈ ತಾಯಿಯನ್ನು ಕರೆದೊಯ್ದರೆ ನಾನು

ಮೆಲ್ಲನೆ ಹಿಂದೆ ಬರುವೆನು ' ಎಂದು ಹೇಳಲು ಶಿವಸಿಂಗನು ಹಾಗೆಯೇ ಆಗಲೆಂದು ಒಪ್ಪಿ, ಪದ್ಮೆಯನ್ನು ಒಡಗೊಂಡು ಹೊರಟನು.

ಶಿವಸಿಂಗ:—ಪದ್ಮೆಯರಿಗೆ ನಡೆದ ಸಂಭಾಷಣೆಯಿಂದ ಪಲ್ಲಕ್ಕಿಯಲ್ಲಿದ್ದ ಸ್ತ್ರೀಯೇ ಚಂದ್ರಾವತಿಯೆಂದೂ, ಕುಮಾರನೇ ಅಜಿತಸಿಂಗನೆಂದೂ ವಾಚಕರು ತಿಳಿದಿರುವರು. ಆದರೆ ಶತ್ರುಗಳ ಮಧ್ಯದಲ್ಲಿ ಸಿಕ್ಕಿದವರು ಹೇಗೆ ತಪ್ಪಿಸಿಕೊಂಡು ಬಂದರೆಂಬುದನ್ನು ತಿಳಿಯಲು ವಾಚಕರು ಅತಿ ಕುತೂಹಲರಾಗಿರಬಹುದು. ದುರ್ಗಾದಾಸನೂ ಆತನ ತಂಗಿಯಾದ ಇಂದಿರಾದೇವಿಯೂ ಚಂದ್ರಾವತಿಯ ವಿಷಯವಾಗಿ ತಕ್ಕ ಪ್ರಯತ್ನಗಳನ್ನು ಮಾಡುತ್ತಲೇ ಇದ್ದರು. ಆ ದಿನವು ಯಶವಂತಸಿಂಹನ ೧೧ನೆಯ ದಿನವಾದುದರಿಂದ ಮಂತ್ರಪಠನವೂ ಬ್ರಾಹ್ಮಣಸಮಾರಾಧನವೂ ವಿಶೇಷವಾಗಿ ನಡೆಯುತ್ತಿದ್ದುದರಿಂದ ಗುಡಾರದಲ್ಲೆಲ್ಲಾ ಅಲ್ಲಕಲ್ಲೋಲವಾಗಿದ್ದಿತು.

ಆ ದಿನ ಪ್ರಾತಃಕಾಲ ಇಂದಿರೆಯು ತನ್ನ ಮೇಲು ಹೊದಿಕೆಯನ್ನು ಧರಿಸಿ, ಮುಖವನ್ನು ಒಬ್ಬರಿಗೂ ತೋರಿಸದಂತೆ ಗುಡಾರದಿಂದ ಹೊರಹೊರಟಳು. ಎಷ್ಟು ಬಾರಿ ತಿರುಗಿದರೂ ಅತಂಕವಿಲ್ಲದುದರಿಂದ ಇಂದಿರೆಯು ಉಪಾಯದಿಂದ ಸಮೀಪದಲ್ಲಿದ್ದ ಗೊಲ್ಲರ ಹಟ್ಟಿಗೆ ಹೋಗಿ ಒಬ್ಬ ಗೊಲ್ಲರವಳಿಗೆ ಲಂಚವನ್ನು ಕೊಟ್ಟು ಗೊಲ್ಲರ ಉಡುಪನ್ನು ತಾನು ಧರಿಸಿ, ತಲೆಯ ಮೇಲೆ ಮೊಸರಿನ ಗೂಡೆಯನ್ನು ಹೊತ್ತುಕೊಂಡು ಪುನಃ ಗುಡಾರಕ್ಕೆ ಹೊರಟು ಬಂದಳು. ಅಲ್ಲಿದ್ದ ಸಿಪಾಯಿಗಳು ನಿತ್ಯದಂತೆಯೇ ಅಜಿತಸಿಂಗನಿಗೆ ಹಾಲನ್ನು ತಂದು ಕೊಡುವ ಗೊಲ್ಲತಿಯೆಂದು ತಿಳಿದು ಆಕೆಯನ್ನು ಯಾರೂ ತಡೆಯಲಿಲ್ಲ.

ಹಾಗೆ ಇಂದಿರೆಯು ವೇಷವನ್ನು ಧರಿಸಿ ಒಳಹೊಕ್ಕು ಆ ಅಜಿತ ಸಿಂಗನನ್ನು ಗೂಡೆಯೊಳಗಡೆ ಅಡಿಯಲ್ಲಿ ಮಲಗಿಸಿ ಸ್ವಲ್ಪವೂ ಅಪಾಯವಾಗದಂತೆ ಕುಮಾರನ ಮೇಲೆ ಒಂದು ಸಣ್ಣ ಮಡಕೆಯನ್ನಿಟ್ಟು ಗುಡಾರದಿಂದ ಹೊರಟು ಗೊಲ್ಲರ ಹಟ್ಟಿಗೆ ಹೋಗಿ ಒಬ್ಬ ಗೊಲ್ಲತಿಯು ವಶಕ್ಕೆ ಮಗುವನ್ನೊಪ್ಪಿಸಿ, ತಾನು ಎಂದಿನಂತೆ ಉಡುಪನ್ನು ಧರಿಸಿ ಗುಡಾರದೊಳಕ್ಕೆ ಬಂದಳು. ಈ ಹತ್ತು ದಿನಗಳಲ್ಲಿ ಇಂದಿರೆಯು ಎಷ್ಟೋಸಲ ಅತ್ತಿತ್ತ ತಿರುಗಾಡಿದ್ದರೂ ಆಕೆಯ ಮುಖಕಮಲವು ಹೇಗಿತ್ತೆಂಬುದನ್ನು ಒಬ್ಬರೂ ತಿಳಿಯದಿದ್ದರು. ಆ ದಿನ ಊಟವಾದ ಮೇಲೆ ಇಂದಿರೆಯು ತನ್ನ ಮೇಲುಮುಸುಕನ್ನು ಚಂದ್ರಾವತಿಗೆ ಹೊದಿಸಿ, ಆಕೆಯನ್ನು ಉಪಾಯದಿಂದ ಗೊಲ್ಲರಹಟ್ಟಿಗೆ ಕುಮಾರನಿದ್ದ ಸ್ಥಳಕ್ಕೆ ಕಳುಹಿಬಿಟ್ಟಳು. ಆ ದಿನವೇ ದುರ್ಗಾದಾಸನ ಅಪ್ಪಣೆಯ ಮೇಲೆ ಶಿವಸಿಂಗನು ಕೆಲವು ಜನ ಭಿಲ್ಲರನ್ನು ಕರೆದುಕೊಂಡು ಗೊಲ್ಲರಹಟ್ಟಿಯನ್ನು ಸೇರಿ ಚಂದ್ರಾವತಿಯನ್ನೂ ಅಜಿತಸಿಂಗನನ್ನೂ ಒಂದು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕರೆದುಕೊಂಡು ಹೋದನು. ಇತ್ತ ಇಂದಿರೆಯು ಚಂದ್ರಾವತಿಯ ವೇಷವನ್ನು ಧರಿಸಿ ಹೊರಗೆ ಪುತ್ರನ ಮರಣವನ್ನು ರೋದನ ರೂಪದಿಂದ ತೋರಿಸುತ್ತ ಅಂತರಂಗದಲ್ಲಿ ಸುಖವಾಗಿದ್ದಳು.

ಇತ್ತ ಶಿವಸಿಂಗನೂ ಪದ್ಮೆಯೂ ಅರಣ್ಯಮಧ್ಯದಲ್ಲಿ ಹೊರಟು ಎರಡು ದಿನಗಳಲ್ಲಿ ಚಂದ್ರಾವತಿಯನ್ನು ಸೇರಿಕೊಂಡರು. ಚಂದ್ರಾವತಿಯೂ ಪದ್ಮೆಯೂ ಪರಸ್ಪರಾಲಿಂಗನ ಮಾಡಿಕೊಂಡು ಕುಶಲ ವೃತ್ತಾಂತವನ್ನು ವಿಚಾರಮಾಡಿ ಆನಂದವನ್ನು ವ್ಯಕ್ತಪಡಿಸಿದರು. ಶಿವಸಿಂಗನು ಪದ್ಮೆಯನ್ನು ಚಂದ್ರಾವತಿಯೊಡನೆ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪರಿವಾರದೊಡನೆ ಮುಂದೆ ಪ್ರಯಾಣಮಾಡಿದನು.

---

॥ ಶ್ರೀ ॥

# ಹತ್ತನೆಯ ಪ್ರಕರಣ.

---

## (ರಾಜಸಿಂಹ.)

ಒಂದು ದಿನ ಪ್ರಾತಃಕಾಲ, ಅಚಲೇಶ್ವರಾಲಯದಲ್ಲಿ ವೈಕುಂಠಯೋಗಿಯು ಜಪವನ್ನು ಮಾಡುತ್ತಿದ್ದನು. ಭಸ್ಮಪೂರಿತವಾದ ಶರೀರವೂ, ಕಂಠದಲ್ಲಿದ್ದ ರುದ್ರಾಕ್ಷದ ಮಾಲೆಯೂ ಬಿಳಿಲನ್ನು ಹೋಲುತ್ತಿದ್ದ ಜಡೆಯೂ ಆತನನ್ನು ಸಾಕ್ಷಾತ್ ಶಂಕರನೆಂದೇ ತಿಳಿಸುತ್ತಿದ್ದಿತು. ಅಚಲೇಶ್ವರನ ಸಹವಾಸದಿಂದಲೋ ಎಂಬಂತೆ ಆ ಯೋಗಿಪುಂಗವನು ಕೂಡ ಅಚಲನಾಗಿಯೇ ಎಷ್ಟು ಹೊತ್ತಾದರೂ ಧ್ಯಾನದಲ್ಲಿಯೇ ಇದ್ದನು. ಆ ದೇವಾಲಯದಲ್ಲಿ ಒಂದು ಕಡೆ ಆತನ ಶಿಷ್ಯನೊಬ್ಬನು ಕೈಗಳನ್ನು ಜೋಡಿಸಿಕೊಂಡು ಯೋಗಿಯ ಕಟಾಕ್ಷವನ್ನೇ ಎದುರು ನೋಡುತ್ತಿದ್ದನು. ಸ್ವಲ್ಪ ಹೊತ್ತಿಗೆ ವೈಕುಂಠಯೋಗಿಯು ಜಪವನ್ನು ಮುಗಿಯಿಸಿ ಕಣ್ಣುಗಳನ್ನು ತೆರೆದು ತನ್ನೆದುರಿಗೆ ನಿಂತಿದ್ದ ಶಿಷ್ಯನನ್ನು ನೋಡಿ "ಏನೈ ವತ್ಸನೆ, ವಿಶೇಷವೇನು ?" ಎಂದು ಕೇಳಿದನು, ಆ ಶಿಷ್ಯನು ವಿನೀತನಾಗಿ 'ಸ್ವಾಮಿ, ತಮ್ಮ ಅಪ್ಪಣೆಯ ಮೇರಿಗೆ ಡಿಲ್ಲಿ ಮೊದಲಾದ ಪಟ್ಟಣಗಳಿಗೆ ಹೋಗಿ ವಿಶೇಷಾಂಶಗಳನ್ನೆಲ್ಲಾ ತಿಳಿದುಕೊಂಡೆನು.' ಎಂದು ಹೇಳಿ, ಪೃಥ್ವೀಸಿಂಗನ ಮರಣ ವಿಚಾರದಿಂದ ಮೊದಲ್ಗೊಂಡು ನಯನಪಾಲನು ಚಂದ್ರಾವ

ತಿಯನ್ನು ಕರೆದುಕೊಂಡು ಹೋಗಲು ಬಂದಿರುವವರೆಗೂ ತಿಳಿಸಿದನು. ಈ ಸಮಾಚಾರವನ್ನೆಲ್ಲಾ ಕೇಳಿದ ಮೇಲೆ ಯೋಗಿಯು ಸ್ವಲ್ಪಹೊತ್ತು ಸುಮ್ಮನಿದ್ದು ಆ ಬಳಿಕ ಆಲಯದಿಂದ ಹೊರಗೆ ಹೋಗುತ್ತಿದ್ದನು. ಇಷ್ಟರಲ್ಲಿ ಯೋಗಿಯ ದರ್ಶನಾರ್ಥವಾಗಿ ಬಂದಿದ್ದ ರಾಜಸಿಂಹನು ಆತನಿಗಿದಿರಾಗಿ ಬಂದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ನಿಂತನು. ಯೋಗಿಯು ಆತನಿಗೆ ಆಶೀರ್ವದಿಸಿ ತನ್ನ ಹಿಂದೆ ಬರುತ್ತಿದ್ದ ಶಿಷ್ಯನನ್ನು ಹಿಂದಕ್ಕೆ ಕಳುಹಿದನು

ಉದಯಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಸಿಂಹನು ಮೇವಾಡ ದೇಶವನ್ನೆಲ್ಲ ಪಾಲಿಸುತ್ತಿದ್ದನು. ಈತನು ತನ್ನ ಪ್ರಜೆಗಳನ್ನು ಮಕ್ಕಳಂತೆ ಪ್ರೀತಿಸುತ್ತ ಸದಾಚಾರಸಂಪನ್ನನಾಗಿ ಕ್ಷತ್ರಿಯ ಧರ್ಮಕ್ಕೆ ಕಳೆಯೇರುವಂತೆ ಬೆಳಗುತ್ತಿದ್ದನು. ಈತನ ಕೀರ್ತಿಯು ದಿಗಂತಗಳಲ್ಲಿಯೂ ವ್ಯಾಪಿಸಿರುವದು. ಈತನ ಸದ್ಗುಣ ಪರಾಕ್ರಮಾತಿಶಯಗಳನ್ನು ಕೇಳಿ, ರಾಜಪುತ್ರಸ್ಥಾನದಲ್ಲಿನ ರಜಪುತ್ರರನೇಕರು ಈತನ ಸ್ನೇಹವನ್ನು ಬೆಳಸಿದರು. ಮಹಮ್ಮದೀಯರನ್ನು ಈ ದೇಶದಿಂದಲೇ ಓಡಿಸಿ, ನಿಷ್ಕಂಟಕವಾಗಿ ಏಕಚ್ಛತ್ರಾಧಿಕಾರ ಮಾಡಬೇಕೆಂಬುದೇ ಈತನ ಅಭಿಮತವಾಗಿದ್ದಿತು. ತನ್ನ ಅಭಿಮತಾನುಸಾರವಾಗಿ ತಕ್ಕ ಪ್ರಯತ್ನಗಳನ್ನು ಮಾಡುತ್ತ ಸಮಯವನ್ನು ನಿರೀಕ್ಷಿಸುತ್ತಿದ್ದನು ಜೋಧಪುರ, ಜಯಪುರ ಮೊದಲಾದ ರಾಜ್ಯಾಧಿಪರು ಬಾದಶಹನಿಗೆ ವಶವಾಗಿದ್ದರೂ ಈತನು ವಶವಾಗುವ ಮಾತು ಹಾಗಿರಲಿ, ಈತನ ಹೆಸರನ್ನು ಕೇಳಿದರೂ ನಿರಾಕರಿಸುತ್ತಿದ್ದನು ಈ ಕಾರಣದಿಂದಲೇ ಔರಂಗಜೇಬನಿಗೆ ರಾಜ

ಸಿಂಹನ ಮೇಲೆ ಮಹದಾಗ್ರಹವು ಹುಟ್ಟಿ ಈತನನ್ನು ಹೇಗಾದರೂ ಉಪಾಯದಿಂದ ತನ್ನ ಸ್ವಾಧೀನ ಮಾಡಿಕೊಳ್ಳಬೇಕೆಂದು ಆಲೋಚಿಸುತ್ತಿದ್ದನು.

ಆ ಕಾಲದಲ್ಲಿ ವೈಕುಂಠಯೋಗಿಯ ಹೆಸರು ರಜಪುತ್ರಸ್ಥಾನದಲ್ಲೆಲ್ಲಾ ಪ್ರಸಿದ್ಧವಾಗಿದ್ದಿತು ರಜಪುತ್ರರೆಲ್ಲರೂ ಆತನನ್ನು ದೇವರ ಅವತಾರವೆಂದು ಪೂಜಿಸುತ್ತಿದ್ದರು. ರಾಜಸಿಂಹನು ಆತನನ್ನು ತ್ರಿಕಾಲಜ್ಞನೆಂದು ತಿಳಿದು ಆಗಾಗ್ಗೆ ಈತನ ದರ್ಶನವನ್ನು ಪಡೆಯುತ್ತಿದ್ದನು. ಆವ ಕೆಲಸವನ್ನು ಮಾಡಬೇಕಾದರೂ ವೈಕುಂಠಯೋಗಿಗೆ ನಿವೇದಿಸಿ, ಆತನ ಅನುಮತಿಯನ್ನು ಪಡೆದೇ ಮಾಡುತ್ತಿದ್ದನು. ಮತ್ತು ಯೋಗಿಯು ಎಂತಹ ಕಾರ್ಯವನ್ನು ಆಜ್ಞಾಪಿಸಿದರೂ ಅದನ್ನು ಶಿರಸಾವಹಿಸಿ ಅತ್ಯಂತ ಭಕ್ತಿಭಾವದಿಂದ ಮಾಡುತ್ತಿದ್ದನು. ಇವನ ಈರೀತಿ ಅಕೃತ್ರಿಮ ಭಕ್ತಿಭಾವನೆಗೆ ತಕ್ಕಂತೆಯೇ ಯೋಗಿಯು ಕೂಡ ಈತನಲ್ಲಿ ಅತ್ಯಂತ ವಿಶ್ವಾಸವುಳ್ಳವನಾಗಿದ್ದನು.

ರಾಜಸಿಂಹನ ರೂಪಲಾವಣ್ಯಾತಿಶಯಗಳನ್ನೂ ಧೈರ್ಯ ಶೌರ್ಯಾದಿ ಗುಣಗಳನ್ನೂ ಯೋಗಿಯು ತಿಳಿದುಕೊಂಡು ನಿರಂತರವೂ ಪರಮಾನಂದ ಭರಿತನಾಗಿದ್ದನು ಎಷ್ಟು ಕೆಲಸಗಳಿದ್ದರೂ ಬಿಟ್ಟು ತಿಂಗಳಿಗೆ ಎರಡು ಮೂರು ಸಲ ತನ್ನ ದರ್ಶನಕ್ಕೆ ಬರಬೇಕೆಂದು ಯೋಗಿಯು ಆಜ್ಞಾಪಿಸಿದ್ದನು; ರಾಜಸಿಂಹನು ಕೂಡ ಗುರ್ವಾಜ್ಞೆಯಂತೆಯೇ ಮಾಡುತ್ತಿದ್ದನು ರಾಜಸಿಂಹನ ಈ ಅಪ್ರತಿಮ ಸಾಹಸೌದಾರ್ಯಾದಿ ಗುಣಗಳನ್ನು ನೋಡಿ ವೈಕುಂಠಯೋಗಿಯು ಎಂತಹ ಕಷ್ಟಗಳನ್ನಾದರೂ ಸಹಿಸಿ ಮಹನ್ಮುದಿಯರನ್ನು ಈ ದೇಶದಿಂದ

ಹೊರಡಿಸಿ ದೇಶವನ್ನು ಉದ್ಧಾರಮಾಡುವ ಪರಾಕ್ರಮಶಾಲಿಯು ರಜಪುತ್ರ ವಂಶದಲ್ಲೆಲ್ಲಾ ಈ ರಾಜಸಿಂಹನೊಬ್ಬನೇ ಸರಿಯೆಂದು ನಂಬಿದ್ದನು.

ಇಂದು ವೈಕುಂಠಯೋಗಿಯು ತನ್ನ ದರ್ಶನಕ್ಕೆ ಬಂದ ರಾಜಸಿಂಹನನ್ನು ಒಂದು ಉಪವನಕ್ಕೆ ಕರೆದುಕೊಂಡು ಹೋಗಿ ಆತನೊಡನೆ ರಹಸ್ಯವಾಗಿ ಸಂಭಾಷಿಸಲು ಉಪಕ್ರಮಿಸಿದನು.

'ವತ್ಸಾ ! ನಿನ್ನ ರಾಜ್ಯವೆಲ್ಲವೂ ಸುಕ್ಷೇಮವೆ ? ನೀನಿಲ್ಲಿಗೆ ಬಂದುದರಲ್ಲಿ ವಿಶೇಷವೇನಾದರೂ ಉಂಟೋ?'

ರಾಜ.—ಸ್ವಾಮಿ, ತಮ್ಮ ಸಂದರ್ಶನಾಭಿಲಾಷೆಯೊಂದಲ್ಲದೆ ವಿಶೇಷವು ಮತ್ತೇನೂ ಕಾಣಲಿಲ್ಲ ! ತಮ್ಮ ಆಶೀರ್ವಾದದಿಂದ ಎಲ್ಲವೂ ಕ್ಷೇಮವು.

ಯೋಗಿ.—ಯಶವಂತಸಿಂಹನ ವೃತ್ತಾಂತವನ್ನು ನೀನೇನಾದರೂ ಬಲ್ಲೆಯಾ ?

ರಾಜ.—ಮೊನ್ನೆಯೇ ಅವನು ಕಾಬೂಲು ದೇಶಕ್ಕೆ ಹೋಗಿರುವನೆಂದು ಕೇಳಿದೆನು. ಪಾಪ ! ಆತನ ಕುಮಾರ ಪೃಥ್ವೀಸಿಂಗನನ್ನು ಔರಂಗಜೇಬನು ಮೋಸದಿಂದ ಕೊಲ್ಲಿಸಿದನಂತೆ ! ಇದಕ್ಕೂ ವಿಶೇಷ ಸಮಾಚಾರವು ನನಗಿನ್ನೂ ತಿಳಿದುದಿಲ್ಲ.

ಯೋಗಿ.—ಯಶವಂತಸಿಂಹನು ಈಗ ಕಾಬೂಲಿನಲ್ಲಿಲ್ಲ !

ರಾಜ.—ಮತ್ತೆಲ್ಲಿರುವನು ? ಯುದ್ಧವನ್ನು ಇಷ್ಟು ಬೇಗ ಮುಗಿಸಿದನೆ ?

ಯೋಗಿ.—ಯುದ್ಧವನ್ನೂ ಮುಗಿಸಿದನು ; ಜಯವನ್ನೂ ಪಡೆದನು. ಆದರೂ ಆತನು ಮಾತ್ರ ಜೋಧಪುರಕ್ಕೆ ಹೋಗಲಿಲ್ಲ ; ಇಹಲೋಕ ವ್ಯಾಪಾರದಲ್ಲಿ ವಿರಕ್ತನಾಗಿ ಪರಲೋಕಕ್ಕೆ ತೆರಳಿದನು.

ರಾಜ.—ಏನು ? ಏನು ? ಯಶವಂತಸಿಂಹನು ಮೃತಪಟ್ಟನೆ ? ಇನ್ನು ಚಂದ್ರಾವತೀದೇವಿಯ ಗತಿಯೇನು ? ಈಗ ಆಕೆ ಎಲ್ಲಿರುವಳು ?

ಯೋಗಿ.—ಔರಂಗಜೇಬನಿರುವಲ್ಲಿ ಆಕೆಗೆ ಭಯವೇನು? ಯಶವಂತನು ಸತ್ತುಹೋದನೆ ಆ ಕೊರತೆಯನ್ನುಂಟು ಮಾಡದಂತೆ ಔರಂಗಜೇಬನು ಆಕೆಯನ್ನು ತನ್ನ ಪಟ್ಟಮಹಿಷಿಯನ್ನಾಗಿ ಮಾಡಿಕೊಳ್ಳುವನಂತೆ !

ರಾಜ.—ಹರಿ ! ಹರಿ ! ಕೇಳಲಾರೆನು ! ಸ್ವಾಮಿ ! ಪತಿವ್ರತಾ ಶಿರೋಮಣಿಯಾದ ಚಂದ್ರಾವತೀ ದೇವಿಯನ್ನೇ ಸ್ವಾಧೀನ ಮಾಡಿಕೊಳ್ಳಬೇಕೆಂದು ಆ ಮೋಸಗಾರನು ಅಪೇಕ್ಷಿಸಿರುವನೆ ! ಜೋಧಪುರವು ಇಂದಿಗೆ ಅರಾಜಕವಾಯಿತೆ ?

ಯೋಗಿ.—ಕುಮಾರ ! ನಯನಪಾಲನು ಇರುವಾಗ ಜೋಧಪುರವು ಅರಾಜಕವೆಂತಾಗುವುದು ? ಆತನು ಈಗಲೇ ಅಲ್ಲ ಬಹುಕಾಲದಿಂದಲೂ ಆ ರಾಜ್ಯದ ಮೇಲೆ ಗೃಧ್ರದೃಷ್ಟಿಯನ್ನಿಟ್ಟೇ ಇರುವನು.

ರಾಜ.—ಜೋಧಪುರವನ್ನು ಅಪಹರಿಸಲು ಆ ದ್ರೋಹಿಯು ಎಳಸಿರುವನೆ ! ಮಹಾತ್ಮಾ ! ತಮಗೆ ತಿಳಿದಿರುವ ವೃತ್ತಾಂತವೆಲ್ಲವನ್ನೂ ದಯೆಯಿಟ್ಟು ಸವಿಸ್ತರವಾಗಿ ಹೇಳಬೇಕು.

ರಾಜಸಿಂಹನು ಹೀಗೆ ಬೇಡಿಕೊಳ್ಳಲು ವೈಕುಂಠಯೋಗಿಯು ಯಶವಂತಸಿಂಹನ ಮರಣ ವೃತ್ತಾಂತವನ್ನೂ ಅಜಿತಸಿಂಗನ ಜನನವನ್ನೂ ಔರಂಗಜೇಬನು ಕಪಟದಿಂದ ಆಕೆಯನ್ನು ಕರತರಲು ನಯನಪಾಲನನ್ನು ಕಳುಹಿದ ವಿಚಾರವನ್ನೂ ಸಾಂಗವಾಗಿ ಹೇಳಿದನು. ಅದನ್ನು ಕೇಳಿ ರಾಜಸಿಂಹನ ಮನಸ್ಸಿನಲ್ಲಿ ಭಯ ಶೋಕ, ರೋಷ, ಧೈರ್ಯ, ಸಾಹಸಗಳು ಏಕಕಾಲದಲ್ಲಿ ಉಂಟಾದುವು. ರಾಜಸಿಂಹನು ಕ್ಷಣ ಹೊತ್ತು ಸುಮ್ಮನಿದ್ದು ಕಡೆಗೆ ಯೋಗಿಯ ಕಡೆಗೆ ತಿರುಗಿ ಹೇಳಲಾರಂಭಿಸಿದನು:—

"ನಿರೂಪಿಸಬೇಕು, ತಪೋಧನರೆ! ಇಂತಹ ಘೋರ ಕೃತ್ಯವನ್ನು ಮಾಡಿದ ಆ ಔರಂಗಜೇಬನನ್ನು ಏನು ಮಾಡಲಿ? ಸುಕುಮಾರನಾದ ಪೃಥ್ವೀಸಿಂಗನನ್ನು ಕೊಲ್ಲಲು ಆತನ ಮನಸ್ಸು ಹೇಗೆ ಒಪ್ಪಿತು? ನಿರ್ಮಲಚಿತ್ತನಾದ ಯಶವಂತಸಿಂಹನು ಆತನಿಗೆ ಮಾಡಿದ ಅಪರಾಧವೇನು? ಯಶವಂತಸಿಂಹನ ಪರಾಕ್ರಮದಿಂದಲ್ಲವೇ ಆ ದುರಾತ್ಮನು ಇಷ್ಟು ಪ್ರಾಬಲ್ಯಕ್ಕೆ ಬಂದುದು? ಇಷ್ಟಾದರೂ ವಿಶ್ವಾಸವು ಬೇಡವೆ? ಕೃತಜ್ಞತೆಯಾದರೂ ಇರಬೇಡವೆ? ಛೀ! ಮೃತನಾದ ಆತನ ಪತ್ನಿಯನ್ನು ಕೂಡ ಪಡೆಯಲು ಯೋಚಿಸಿದನೇ! ಇದೆಂತಹ ನೀಚಕೃತ್ಯವು? ರಾಜಪುತ್ರಸ್ಥಾನವು ನಿರ್ವೀರ್ಯವಾಯಿತೆಂದೆಣಿಸಿ ಹೀಗೆ ಮಾಡಿರುವನೊ? ತನ್ನ ಅಭಿಮತಕ್ಕೆ ಯಾರೂ ಅಡ್ಡ ಬರಲಾರರೆಂದು ಮದಿಸಿ ಹೀಗೆ ಆಚರಿಸುತ್ತಿರುವನೋ?....................".

ವೈಕುಂಠಯೋಗಿ.—ರಾಜಸಿಂಹ ! ಸ್ಥಿರನಾಗು. ಆಗಬೇಕಾದುದೆಲ್ಲವೂ ಆಗಿಯೇ ಹೋದುವು. ವೃಥಾಲಾಪದಿಂದೇನೂ ಫಲವಾಗುವಂತಿಲ್ಲ. ಚಂದ್ರಾವತೀದೇವಿಯು ಈಗ ಶತ್ರುಗಳ ಮಧ್ಯದಲ್ಲಿ ಸಿಕ್ಕಿ ಬಿದ್ದಿರುವಳು. ಬಾಲಕನು ಕ್ಷೇಮವಾಗಿರುವನು. ನಯನಪಾಲನು ಇವರನ್ನು ಹೇಗಾದರೂ ಮೋಸಪಡಿಸುವ ಪ್ರಯತ್ನದಲ್ಲಿರುವನು. ಶಿವಸಿಂಗನೂ ದುರ್ಗಾದಾಸನೂ ವಿಚಾರಗ್ರಸ್ತರಾಗಿ ಮುಂದೇನು ಮಾಡುವುದಕ್ಕೂ ತಿಳಿಯದೆ ತಲ್ಲಣಿಸುತ್ತಿರುವರು. ಇನ್ನು ನೀನು ಇಲ್ಲಿ ಸಾವಕಾಶಮಾಡದೆ, ನಿನ್ನ ರಾಜಧಾನಿಗೆ ಹೋಗಿ ಸ್ವಲ್ಪ ಸೈನ್ಯವನ್ನು ಅವರ ಸಹಾಯಕ್ಕಾಗಿ ಕಳುಹು. ಅನಂತರ ದೈವಗತಿ ಹೇಗಿರುವುದೋ ಹಾಗಾಗಲಿ. ನಯನಪಾಲನು ಚಂದ್ರಾವತಿಯನ್ನು ಬಾದಶಹನಿಗೆ ಒಪ್ಪಿಸಿ ಜೋಧಪುರ ರಾಜ್ಯವನ್ನು ಸಂಪಾದಿಸಲು ಹವಣಿಸುತ್ತಿರುವನು. ಆಶಾಪಿಶಾಚಗ್ರಸ್ತನಾಗಿರುವ ಆ ದುರ್ಮಾರ್ಗಿಯು ಎಂತಹ ನೀಚಕಾರ್ಯವನ್ನಾದರೂ ಮಾಡಲು ಹಿಂತೆಗೆಯನು. ಸಾವಕಾಶಮಾಡಿದ್ದಲ್ಲಿ ಕೆಲಸವು ಮೀರಿ ಹೋಗಬಹುದು. ನೀನೀಗಲೇ ನಿನ್ನ ರಾಜಧಾನಿಗೆ ಹೋಗಿ ಸ್ವಲ್ಪ ಸೈನ್ಯವನ್ನು ಕಳುಹಿಸು. ಸೈನ್ಯಸಹಾಯವು ದೊರೆತರೆ ದುರ್ಗಾದಾಸನೂ ಶಿವಸಿಂಗನೂ ನಯನಪಾಲನನ್ನು ಓಡಿಸಬಲ್ಲರು.”

ವೈಕುಂಠಯೋಗಿಯ ವಾಕ್ಯವನ್ನು ಕೇಳಿ ರಾಜಸಿಂಹನು ಸಮಾಧಾನಪಟ್ಟು, ಯೋಗಿಗೆ ನಮಸ್ಕರಿಸಿ, ಆತನ ಅಪ್ಪಣೆಯನ್ನು ಪಡೆದು ನಿಜಪರಿವಾರದೊಡನೆ ಉದಯಪುರವನ್ನು ಕುರಿತು ಹೊರಟು ಹೋದನು.

---

# ಶ್ರೀ
# ಹನ್ನೊಂದನೆಯ ಪ್ರಕರಣ.

---

(ನಯನಪಾಲ.)

ನಯನಪಾಲನು ಔರಂಗಜೇಬನ ಸೇನಾನಾಯಕರಲ್ಲೊಬ್ಬನು. ಈತನು ರಾಜಪುತ್ರ ವಂಶಜನು. ಯಶವಂತಸಿಂಹನ ತಂದೆಯೂ, ಈತನ ತಂದೆಯೂ ಅಣ್ಣತಮ್ಮಂದಿರು. ನಯನಪಾಲನ ತಂದೆಯು ದುರಾಚಾರನೂ ಕ್ರೂರಾತ್ಮನೂ ಆಗಿದ್ದುದರಿಂದ ಆತನ ತಂದೆಯು ಕಿರಿಯ ಮಗನಾದ ಯಶವಂತಸಿಂಹನ ತಂದೆಗೆ ಪಟ್ಟವನ್ನು ಕಟ್ಟಿದನು. ಈ ಕಾರಣದಿಂದ ಯಶವಂತಸಿಂಹನ ಮೇಲೆ ಅಸೂಯೆಯು ಬಹುಕಾಲದಿಂದಲೂ ನಯನಪಾಲನಿಗಿದ್ದಿತು. ಇಷ್ಟೇ ಅಲ್ಲ; ಸಮಯಸಿಕ್ಕಿದಾಗ ಯಶವಂತಸಿಂಹನನ್ನು ಮೋಸಪಡಿಸಿ ಜೋಧಪುರ ರಾಜ್ಯವನ್ನು ತನ್ನ ವಶಮಾಡಿಕೊಳ್ಳಬೇಕೆಂದು ನಿರೀಕ್ಷಿಸುತ್ತಿದ್ದನು. ಔರಂಗಜೇಬನ ಅನುಗ್ರಹವನ್ನು ಪಡೆದರೆ ತನ್ನ ಕಾರ್ಯವು ನೆರವೇರುವುದೆಂದು ತಿಳಿದು ಆತನಲ್ಲಿ ಅತ್ಯಂತ ವಿಧೇಯನಾಗಿದ್ದು ಆತನನ್ನೇ ಅನುವರ್ತಿಸಿಕೊಂಡಿದ್ದನು. ಯಶವಂತಸಿಂಹನ ಮರಣವು ಆತನ ಕಿವಿಯಲ್ಲಿ ಬಿದ್ದೊಡನೆಯೇ ಆತನಿಗುಂಟಾದ ಸಂತೋಷಕ್ಕೆ ಪಾರವಿಲ್ಲದುದಾಯಿತು ಈ ಸಮಾಚಾರವನ್ನು ಔರಂಗಜೇಬನು ತಿಳಿದು ಯಶವಂತಸಿಂಹನ ಮರಣಾನಂತರ

ಚಂದ್ರಾವತಿಯನ್ನು ಹಿಡಿದು ತರಲು ಈತನನ್ನೇ ಕಳುಹಿದರೆ ತನ್ನ ಕಾರ್ಯವು ನೆರವೇರುವುದೆಂದು ತಿಳಿದು ಈತನನ್ನೇ ಕಳುಹಿದನು. ನಯನಪಾಲನು ಕೂಡ ಚಂದ್ರಾವತಿಯನ್ನು ಹೇಗಾದರೂ ಮಾಡಿಹಿಡಿದು ತಂದು ಬಾದಶಹನಿಗೆ ಒಪ್ಪಿಸಿ, ಜೋಧಪುರವನ್ನು ಸ್ವಾಧೀನವಮಾಡಿಕೊಳ್ಳಬೇಕೆಂದು ನಿಶ್ಚಯಿಸಿದನು ಔರಂಗಜೇಬನೂ ಸಹ ಯಶವಂತಸಿಂಹನನ್ನು ಮೋಸಪಡಿಸಿ ಅಥವಾ ಕೊಲ್ಲಿಸಿಯಾದರೂ ಜೋಧಪುರವನ್ನು ಸಂಪಾದಿಸಿ, ನಯನಪಾಲನಿಗಾಗಲಿ ಅಥವಾ ಆತನ ಬಂಧುಗಳಿಗಾಗಲಿ ಕೊಡಬೇಕೆಂದು ಯೋಚಿಸುತ್ತಿದ್ದನು. ಆದರೆ, ಯಶವಂತಸಿಂಹನು ಪಿರುಪಮಾನ ಪರಾಕ್ರಮಶಾಲಿಯಾಗಿದ್ದುದರಿಂದ ಇದಕ್ಕೆ ಸಮಯವು ಒದಗಲಿಲ್ಲ.

ಯಶವಂತಸಿಂಹನ ಮರಣಾನಂತರ ನಯನಪಾಲನು ಇನ್ನು ಜೋಧಪುರಕ್ಕೆ ತಾನೇ ಅಧಿಪತಿಯೆಂದು ಸಂತೋಷಪಟ್ಟು ಚಂದ್ರಾವತಿಯನ್ನು ಹಿಡಿದುತಂದು ಬಾದಷಹನಿಗೆ ಒಪ್ಪಿಸುವ ಕಾರ್ಯದಲ್ಲಿ ಉದ್ಯುಕ್ತನಾಗಿ ಹೊರಟನು. ಜೋಧಪುರಕ್ಕೆ ಉತ್ತರಾಧಿಕಾರಿಯಾಗಿದ್ದ ಅಜಿತಸಿಂಗನೂ ಮೃತನಾದುದರಿಂದ ಆ ರಾಜ್ಯವು ತನಗೇ ಸಿಕ್ಕುವುದೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು. ಆದರೇನು ! ತಾನೊಂದು ನೆನಸಿದರೆ ದೈವವೊಂದನ್ನು ಮಾಡುವುದೆಂಬುದು ನಿಜವಾಯಿತು. ಸಕಲ ಸೇನಾಸಮೇತನಾಗಿ ಆತನು ಕಾಬೂಲನ್ನು ಪ್ರವೇಶಿಸಿ, ದುರ್ಗಾದಾಸನನ್ನು ಹೇಗಾದರೂ ಉಪಾಯದಿಂದ ಮೋಸಪಡಿಸಬೇಕೆಂದು ಪ್ರಯತ್ನಿಸಿದನು

ದರೂ ಕಡೆಗೆ ಆತನೇ ಮೋಸಹೋದನು. ದುರ್ಗಾದಾಸನು ಚಂದ್ರಾವತಿಯನ್ನೂ ಅಜಿತಸಿಂಗನನ್ನೂ ಶತ್ರುಗಳಿಂದ ತಪ್ಪಿಸಿದ ಮೇಲೆ ನಯನಪಾಲನೊಡನೆ ಮತ್ತಷ್ಟು ಸ್ನೇಹವುಳ್ಳವನಂತೆ ನಟಿಸುತ್ತಿದ್ದನು. ದಿನೇ ದಿನೇ ಆತನ ಮುಖವು ಕಳೆಯೇರಿತು. ನಯನಪಾಲನು ಆಗಾಗ ದುರ್ಗಾದಾಸನೊಡನೆ 'ಚಂದ್ರಾವತಿಯು ಇನ್ನಾದರೂ ಪ್ರಯಾಣ ಮಾಡುವಳೋ ಇಲ್ಲವೋ ? ನಾವು ಡಿಲ್ಲೀನಗರವನ್ನು ಬಿಟ್ಟು ಬಹಳ ದಿನಗಳಾದವು.' ಎಂದು ಕೇಳುತ್ತಿದ್ದನು. ಅದಕ್ಕಾದುರ್ಗಾದಾಸನು ತಕ್ಷಣವೇ ಒಳಗೆ ಹೋಗಿ ಪುನಃ ಬಂದು 'ಸ್ವಾಮೀ, ಆಕೆಯ ಶರೀರಾರೋಗ್ಯವು ಸ್ವಲ್ಪ ಸ್ವಲ್ಪ ಏರುತ್ತಿದೆ. ಇನ್ನು ೨-೩ ದಿನಗಳು ಮಾತ್ರ ತಾವು ದಯೆಯಿಟ್ಟು ನಿಂತರೆ ಆಮೇಲೆ ಹೊರಡಬಹುದು.' ಎಂದು ಹೇಳುತ್ತಿದ್ದನು. ಈ ಮಾತುಗಳನ್ನು ಕೇಳಿ ನಯನಪಾಲನು ಹಾಗೆಯೇ ಆಗಲಿ, ಅವತೊಂದರೆಯೂ ಇಲ್ಲದಂತೆ ಚಂದ್ರಾವತಿಯನ್ನು ಕರೆದುಕೊಂಡು ಬರಬೇಕೆಂದು ಬಾದಶಹರ ಅಪ್ಪಣೆಯಾಗಿದೆಯಾದುದರಿಂದ ಆಕೆಯ ಇಷ್ಟದಂತೆಯೇ ನಡೆಯುವೆನು." ಎಂದು ಪ್ರತ್ಯುತ್ತರವನ್ನು ಕೊಡಲು, ದುರ್ಗಾದಾಸನು ಒಳಗೊಳಗೆ ಸಂತೋಷಪಡುತ್ತಿದ್ದನು.

ಒಂದು ದಿನ ಸಾಯಂಕಾಲ ನಯನಪಾಲನು ತನ್ನ ಗುಡಾರದ ಸುತ್ತಲೂ ಸಂಚರಿಸುತ್ತಾ ಸೈನಿಕರು ಜಾಗರೂಕರಾಗಿರುವರೋ ಇಲ್ಲವೋ— ಎಂದು ಪರೀಕ್ಷಿಸುತ್ತಿದ್ದನು. ಆತನ ಮುಖಲಕ್ಷಣವನ್ನು ನೋಡಿದರೆ ಮನಸ್ಸಿನಲ್ಲಿ ದೀರ್ಘಾಲೋಚನೆಯನ್ನು ಮಾಡುತ್ತಿದ್ದಂತೆ ಕಾಣು

ತ್ತಿದ್ದಿತು. ತನ್ನಲ್ಲಿ ತಾನೇ ಏನನ್ನೋ ಹೇಳಿಕೊಳ್ಳು ತ್ತಲೂ ಮೀಸೆಯನ್ನು ತಿದ್ದಿಕೊಳ್ಳುತ್ತಲೂ ಅತ್ತಿತ್ತ ತಿರು ಗಾಡುತಲಿದ್ದನು. ಅಷ್ಟರಲ್ಲಿ ಒಬ್ಬ ಸಿಪಾಯಿಯು ಓಡಿ ಬಂದು ಸಲಾಂ ಮಾಡಿ, ' ಮಹಾಸ್ವಾಮಿ, ದುರ್ಗಾದಾಸನ ಮುಖಲಕ್ಷಣಗಳನ್ನು ನೋಡಿದರೆ, ಆತನು ನಮಗೇನೋ ಮೋಸಪಡಿಸಲು ಯತ್ನಿಸಿರುವಂತೆ ನನಗೆ ತೋರುತ್ತದೆ. ಹೀಗೆ ಉಪೇಕ್ಷೆಯಿಂದಿರುವುದು ಸರಿಯಲ್ಲ. ಕೆಲಸವು ಮೀರಿಹೋದಮೇಲೆ ನಾವು ಮಾಡುವುದೇನಿರುವದು ? ಆದುದರಿಂದ ತಾವು ತಕ್ಕಮಟ್ಟಿಗೂ ಜಾಗರೂಕರಾಗಿರು ವುದೇ ಮೇಲು ' ಎಂದನು.

ಈ ಮಾತನ್ನು ಕೇಳಿ ನಯನಪಾಲನು ಆಶ್ಚರ್ಯಾನ್ವಿ ತನಾಗಿ ' ಏನು, ದುರ್ಗಾದಾಸನು ನಮ್ಮನ್ನು ಮೋಸಪಡಿಸ ಬೇಕೆಂದಿರುವನೆ ? ನನ್ನಲ್ಲಿ ಎಷ್ಟೋ ಭಕ್ತಿವಿಶ್ವಾಸದಿಂ ದಿದ್ದವನು ನನಗೆ ದ್ರೋಹಮಾಡಲೆಣಿಸಿರುವನೆ ? ಈ ಗುಡಾರಗಳ ಸುತ್ತಲೂ ನಮ್ಮ ಸೇನಾಸಮೂಹವು ಕಾದು ಕೊಂಡಿರಲು ಅವನಿಂದೇನಾಗುವುದು ? ನಮ್ಮೊಡನೆ ಹೋ ರಾಡುವುದಕ್ಕೂ ಅಸಮರ್ಥನಾಗಿರುವನಲ್ಲ ! ಇರಲಿ ; ಇನ್ನು ಮೇಲೆ, ದುರ್ಗಾದಾಸನನ್ನೂ ಇಂದಿರೆಯನ್ನೂ ಗುಡಾರದಿಂದ ಅತ್ತಿತ್ತ ಬಿಡಕೂಡದೆಂದು ಸಿಪಾಯಿಗಳಿಗೆ ಹೇಳಿರಿ ' ಎಂದು ಅಪ್ಪಣೆಮಾಡಿದನು. ಆದರೂ ಆತನ ಮನಸ್ಸಿನಲ್ಲಿ ಸಂಶಯವುಂಟಾಯಿತು. ದುರ್ಗಾದಾಸನು ಮಾಡಿದ ಮೋಸವನ್ನು ನಯನಪಾಲನು ತಿಳಿಯದವನಾಗಿ ದ್ದುದರಿಂದ ಈ ವರೆಗೂ ದುರ್ಗಾದಾಸನಲ್ಲಿ ನಂಬಿಕೆಯನ್ನಿ

ಟ್ಟಿದ್ದನು. ಇನ್ನು ಮೇಲೆ ನಯನಪಾಲನು ಎಷ್ಟು ಆಜ್ಞೆಗಳನ್ನು ಕೊಟ್ಟರೂ ದುರ್ಗಾದಾಸನಿಗೆ ಚಂದ್ರಾವತಿಯ ವಿಷಯದಲ್ಲಿಯಾಗಲಿ, ಆಕೆಯ ಕುಮಾರನ ವಿಷಯದಲ್ಲಿಯಾಗಲೀ ಭಯವಿಲ್ಲವಲ್ಲವೇ? ದುರ್ಗಾದಾಸನ ಮೇಲೆ ತನಗೆ ಅನುಮಾನ ಹುಟ್ಟಿದುದರಿಂದ, ಚಂದ್ರಾವತಿಯನ್ನು ಕರೆದುಕೊಂಡು ಹೋಗಿ ಬಾದಶಹನಿಗೊಪ್ಪಿಸಿ, ಅತನಿಂದ ಬಹುಮಾನವನ್ನು ಪಡೆಯಬೇಕೆಂದು ನಯನಪಾಲನು ನಾಳೆಯ ದಿನವೇ ಪ್ರಯಾಣಕ್ಕೆ ಎಲ್ಲರೂ ಸಿದ್ಧರಾಗಬೇಕೆಂದು ತನ್ನ ಸೈನಿಕರಿಗೆಲ್ಲ ಆಜ್ಞಾಪಿಸಿದನು. ಪರಿವಾರವೆಲ್ಲವೂ ಪ್ರಯಾಣಕ್ಕೆ ಸಿದ್ಧವಾಯಿತು.

ಹೀಗೆ ಪರಿವಾರವೆಲ್ಲವೂ ಹೊರಟು ಬೆಟ್ಟ ಗುಡ್ಡಗಳನ್ನು ದಾಟಿ, ೨—೩ ದಿನಗಳಲ್ಲಿ ಜಲಾಲಾಬಾದ್ ದುರ್ಗವನ್ನು ಸೇರಿತು. ಅಲ್ಲಿ ಎಂದಿನಂತೆ ಗುಡಾರವನ್ನು ಹಾಕಿಸಿ ಪರಿವಾರಕ್ಕೆಲ್ಲ ಅನುಕೂಲಪಡಿಸಿದನು. ಆದರೆ, ಆವ ಕಾರಣದಿಂದಲೋ ತನ್ನ ಗುಡಾರವನ್ನು ಚಂದ್ರಾವತಿಯ ಗುಡಾರದ ಬಳಿಯಲ್ಲಿಯೇ ಹಾಕಿಸಿ, ದುರ್ಗಾದಾಸನೂ ಇಂದಿರೆಯೂ ಅತ್ತಿತ್ತ ತಿರುಗಾಡಕೂಡದೆಂದು ಆಜ್ಞಾಪಿಸಿದನು. ಆ ದಿನ ಆತನು ಮಾತುಮಾತಿಗೂ ಅತ್ತಿತ್ತ ನೋಡುತ್ತಲೂ ತಿರುಗಾಡುತ್ತಲೂ ತನ್ನಲ್ಲಿ ತಾನೆ ಮಾತನಾಡಿಕೊಳ್ಳುತ್ತಲೂ ಇದ್ದನು. ಆತನ ಸೈನಿಕರು ಮೊದಲಿನಂತೆಯೇ ಗುಡಾರದ ಸುತ್ತಲೂ ಕಾವಲಿದ್ದರು. ಈ ಸಮಯದಲ್ಲಿ ನಯನಪಾಲನ ಮನಸ್ಸಿನಲ್ಲಿ ಯಾವ ಯೋಚನೆಯುಂಟಾಗಿದ್ದಿತೆಂದು ತಿಳಿಯುವಂತಿ

ರಲಿಲ್ಲವಾದರೂ ಆತನು ಆಗಾಗ ಈ ಮುಂದೆ ಹೇಳುವಂತೆ ಅಸ್ಫುಟವಾಗಿ ಹೇಳುತ್ತಿದ್ದನು :—

'ಅವರೆ, ನಾನುಮಾತ್ರ ಏಕೆ ಸುಮ್ಮನಿರಬೇಕು? .... ಚಿಕ್ಕಂದಿನಲ್ಲಿ ನೋಡಿದ್ದೆನಾದುದರಿಂದ ಈಗ ಚೆನ್ನಾಗಿ ಜ್ಞಾಪಕವಿಲ್ಲ;....... ......ಇಷ್ಟು ಪ್ರಯಾಸಪಟ್ಟು ಬಾದ ಶಪಸಿಗೇಕೆ ಒಪ್ಪಿಸಬೇಕು?..........ಆ.........ನನ್ನನ್ನು ಏನು ಮಾಡಬಲ್ಲನು? ತಪ್ಪಿಸಿಕೊಂಡು ಹೋದಳೆಂದರೆ... .......ಆಗಲಿ; ಒಂದುಸಲ ನೋಡಿ ಆಮೇಲೆ ಇದನ್ನೆಲ್ಲ ಯೋಚಿಸುವೆನು!'

ಹೀಗೆ ಕೆಲವು ಮಾತುಗಳನ್ನು ಸ್ಪಷ್ಟವಾಗಿಯೂ ಕೆಲವನ್ನು ಅಸ್ಫುಟವಾಗಿಯೂ ಉಚ್ಚರಿಸುತ್ತ ಆತನು ತನ್ನ ಗುಡಾರದಿಂದ ಹೊರಗೆ ಬಂದು ಅತ್ತಿತ್ತ ನೋಡುತ್ತ ಒಬ್ಬ ಪರಿಚಾರಿಕೆಯನ್ನು ಕರೆದು "ತಾನು ಒಳಗೆ ಬರುತ್ತಿರುವೆನೆಂದು ಚಂದ್ರಾವತಿಗೆ ತಿಳಿಸು" ಎಂಬುದಾಗಿ ಹೇಳಿದನು. ದಾದಿಯು ಒಳಗೆ ಹೋಗಿ ಸಮಾಚಾರವನ್ನು ಹೇಳಿ ಬರುವುದರೊಳಗಾಗಿಯೇ ತಾನೂ ಚಂದ್ರಾವತಿಯ ಬಿಡಾರವನ್ನು ಪ್ರವೇಶಿಸಿದನು. ಆತನು ಯಾವಾಗ ಯಾವ ಸಂಗತಿಯನ್ನು ತಿಳಿಸುವನೋ ಎಂದು ದುರ್ಗಾದಾಸನು ಯಾವಾಗಲೂ ನಯನಪಾಲನೊಡನೆ ತಿರುಗಾಡುತ್ತಿದ್ದು ಆತನೊಡನೆ ತಾನೂ ಬಿಡಾರದೊಳಕ್ಕೆ ಹೋದನು. ಇಂದಿರೆಯು ನಯನಪಾಲನು ಬರುವ ವರ್ತಮಾನವನ್ನು ತಿಳಿಯದಿದ್ದುದರಿಂದ, ತನ್ನ ಮೇಲುಮುಸುಕನ್ನು ತೆಗೆದುಹಾಕಿ ಆವುದೋ ಕಾರ್ಯದಲ್ಲಿದ್ದಳು. ಅಲ್ಲಲ್ಲಿ ಕೆಲವರು ದಾದಿಯರು ಮಾತ್ರ ಕಾಳಿ

ತಿದ್ದರು. ನಯನಪಾಲನು ಇಷ್ಟರಲ್ಲಿ ಒಳಹೊಕ್ಕು ಅತ್ತಿತ್ತ ನೋಡಲಾರಂಭಿಸಿದನು. ದುರ್ಗಾದಾಸನೂ ನಯನಪಾಲನ ಹಿಂದೆಯೇ ನಿಂತುಕೊಂಡಿದ್ದನು. ಚಂದ್ರಾವತಿಯನ್ನು ಚಿಕ್ಕಂದಿನಲ್ಲಿ ನೋಡಿದ್ದನಾದುದರಿಂದ ಆಕೆಯ ಗುರುತನ್ನು ಚನ್ನಾಗಿ ತಿಳಿಯಲಾರದೆ ಕುಳಿತಿದ್ದ ಇಂದಿರೆಯನ್ನು ನೋಡಿ "ಈಕೆಯೋ ಚಂದ್ರಾವತಿಯೋ ?" ಎಂದು ಅಲ್ಲಿ ನಿಂತಿದ್ದ ದಾಸಿಯನ್ನು ಕೇಳಿದನು. ದಾಸಿಯು, ವೃತ್ತಾಂತವನ್ನೆಲ್ಲ ಈತನು ಅರಿತಿರುವನೆಂದೂ, ತಾನು ಸುಳ್ಳು ಹೇಳಿದರೆ ದಂಡನೆಗೆ ಗುರಿಯಾಗುವೆನೆಂದೂ ತಿಳಿದು ಭಯದಿಂದ ನಡುಗುತ್ತ ತೊದಲು ನಾಲಿಗೆಯಿಂದ "ಅ.........ಲ್ಲ........ಅಲ್ಲ ; ಚಂದ್ರಾವತಿ...ಯಲ್ಲ...ಇ......ಇ.......ಇಂದಿರೆ... ..." ಎಂದು ಹೇಳಿದಳು. ಆ ಮಾತುಗಳನ್ನು ಕೇಳಿ ನಯನಪಾಲನು ಕಾಲಾಗ್ನಿಯಂತೆ ಕೆರಳಿ ಗುಡಿಗುಡಿಸುತ್ತ "ಎಲೆ, ಮೂರ್ಖಳೆ ! ಚಂದ್ರಾವತಿಯೇನಾದಳೆಂಬುದನ್ನು ಹೇಳುವೆಯೋ...ಇಲ್ಲವೋ........" ಎಂದು ಕೇಳಿದನು. ತಕ್ಷಣವೇ ಆ ದಾಸಿಯು ಶಿಕ್ಷೆಗೆ ಭಯಪಟ್ಟು, ಎಲ್ಲ ವೃತ್ತಾಂತವನ್ನೂ ಸಮಗ್ರವಾಗಿ ಹೇಳಿದಳು. ಆ ಮಾತನ್ನು ಕೇಳಿದ ನಯನಪಾಲನು ರೋಷಹುಟ್ಟಿದ ನಾಗರಹಾವಿನಂತೆ ಬುಸುಗುಟ್ಟುತ್ತ ದುರ್ಗಾದಾಸನನ್ನು ನೋಡಿ, ಹೀಗೆ ಗರ್ಜಿಸಿದನು :—

'ದುಷ್ಟಾತ್ಮಾ, ಈ ಮೋಸಕಾರ್ಯವು ನಿನ್ನಿಂದಲೇ ನಡೆದಿರುವುದು ! ನೀನು ಹೀಗೆ ಮೋಸಮಾಡುವೆಯೆಂದು ನಾನು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ ! ಚಂದ್ರಾವತಿಯನ್ನು ಎಲ್ಲಿಗೆ ಸಾಗಿಸಿದೆಯೆಂಬುದನ್ನು ಹೇಳುವೆಯೋ ಇಲ್ಲವೋ ?' ಎಂದು

ತನ್ನ ಸೊಂಟದಲ್ಲಿದ್ದ ಕತ್ತಿಯನ್ನು ಒರೆಯಿಂದ ಹಿರಿದು ಕೊಂಡನು.

ದುರ್ಗಾದಾಸನು ಆತನ ಮಾತಿಗೆ ಪ್ರತ್ಯುತ್ತರವನ್ನು ಕೊಡದೆ ಕಿರುನಗೆಯಿಂದ ಒಮ್ಮೆ ನೋಡಿದನು. ನಯನಪಾಲನು ಇಂದಿರೆಯ ಕಡೆಗೆ ತಿರುಗಿ "ಎಲೆ, ಧೂರ್ತೆ! ಚಂದ್ರಾವತಿಯ ಸಮಾಚಾರವನ್ನು ಹೇಳುವೆಯೋ ಇಲ್ಲವೋ? ಇನ್ನು ಸಾವಕಾಶಮಾಡಿದರೆ ಖಂಡಿತವಾಗಿಯೂ ನನ್ನ ಕರವಾಳಕ್ಕೆ ಬಲಿಯಾಗುವೆ. ಪ್ರಾಣದ ಮೇಲೆ ಆಶೆಯಿದ್ದರೆ ಬೇಗ ಹೇಳು." ಎಂದು ಕೇಳಿದನು. ಆದರೇನು? ದುರ್ಗಾದಾಸನು ಯಾವ ಪ್ರತ್ಯುತ್ತರವನ್ನು ಕೊಟ್ಟನೋ ಅದನ್ನೇ ಇಂದಿರೆಯೂ ಉತ್ತರವಾಗಿತ್ತಳು. ನಯನಪಾಲನು ಎಷ್ಟು ಸಲ ತನ್ನನ್ನು ಕೇಳಿದರೂ ಭಯಪಡಿಸಿದರೂ ದುರ್ಗಾದಾಸನು ಕಿರುನಗೆಯನ್ನು ಹೊರತು ಮತ್ತಾವ ಪ್ರತ್ಯುತ್ತರವನ್ನೂ ಕೊಡಲೇ ಇಲ್ಲ.

ಇತ್ತ ನಯನಪಾಲನು ತನ್ನ ಆಶೆಯೆಲ್ಲವೂ ನಿರಾಶೆಯಾಯಿತಲ್ಲಾ ಎಂದು ಯೋಚಿಸುತ್ತ ಅತ್ಯಂತ ದುಃಖಾಕ್ರಾಂತನಾದನು. ಚಂದ್ರಾವತಿಯನ್ನು ಬಾದಶಹನಿಗೊಪ್ಪಿಸಿ ಜೋಧಪುರ ರಾಜ್ಯವನ್ನು ಸಂಪಾದಿಸಬೇಕೆಂದಿದ್ದ ಆತನ ಮಹತ್ತರವಾದ ಆಶೆಯು ಭಸ್ಮೀಕೃತವಾಯಿತು. ಡಿಲ್ಲೀ ನಗರಕ್ಕೆ ಹೋಗಿ ಬಾದಶಹನಿಗೆ ತನ್ನ ಮುಖವನ್ನು ಹೇಗೆ ತೋರಿಸಲಿ— ಎಂದು ನಿರಂತರವೂ ಚಿಂತಾಕ್ರಾಂತನಾದನು. ಇಂದಿರಾ ದುರ್ಗಾದಾಸನನ್ನು ಚತುರ್ವಿಧೋಪಾಯದಿಂದ ಕೇಳಿದನಾದರೂ ಯಾವ ಪ್ರಯೋಜನವೂ ಇಲ್ಲದೆ ಹೋಯಿತು. ಇನ್ನು ಎಷ್ಟು ಯೋಚಿಸಿದರೂ ಫಲವಿಲ್ಲವೆಂದು ನಿಶ್ಚಯಿಸಿ ಚಂದ್ರಾವತಿ

ಯನ್ನು ಹುಡುಕುವುದಕ್ಕಾಗಿ ನಾಲ್ಕು ಕಡೆಗೂ ತನ್ನ ಸೈನ್ಯವನ್ನು ಕಳುಹಿಸಿ, ಇಂದಿರೆ ದುರ್ಗಾದಾಸರನ್ನು ಸೆರೆಯಾಗಿ ಹಿಡಿದುಕೊಂಡು, ಉಳಿದ ಸೈನ್ಯದೊಡನೆ ತಾನೂ ಬಂದು ಮಾರ್ಗವನ್ನು ಹಿಡಿದು ಹುಡುಕುತ್ತ ಹೊರಟನು.

---

॥ ಶ್ರೀಃ ॥

## ಹನ್ನೆರಡನೆಯ ಪ್ರಕರಣ.

---

(ಆಶಾಭಂಗವು.)

ಜಲಾಲಾಬಾದ್ ದುರ್ಗವನ್ನು ಬಿಟ್ಟಮೇಲೆ ನಯನಪಾಲನು ತನ್ನ ಸೈನ್ಯದೊಡನೆ ಕೂಡಿ, ಚಂದ್ರಾವತಿಯನ್ನು ಹುಡುಕುತ್ತ ಹೊರಟನು. ಮಾರ್ಗದಲ್ಲಿದ್ದ ಪ್ರತಿಯೊಂದು ದುರ್ಗ-ಗ್ರಾಮಗಳನ್ನೂ ಶೋಧಿಸುತ್ತ ಬರುತ್ತಿರಲು, ಒಂದು ಹಳ್ಳಿಯ ಸಮೀಪದಲ್ಲಿ ಕೆಲವರು ಭಿಲ್ಲರು ಒಂದು ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋಗುತ್ತಿದ್ದಂತೆ ತಿಳಿಯಿತು. ತಕ್ಷಣವೇ ನಯನಪಾಲನು ತನ್ನ ಸೈನ್ಯವನ್ನು ಕರೆದುಕೊಂಡು ಪಲ್ಲಕ್ಕಿಯನ್ನು ಸಮೀಪಿಸಿ ಪರಿವಾರಸಮೇತರಾಗಿ ಹೋಗುತ್ತಿದ್ದ ಭಿಲ್ಲರನ್ನು ತಡೆದು ನಿಲ್ಲಿಸಿದನು. ಆಗ ಭಿಲ್ಲರು ಮಹಮ್ಮದೀಯರನ್ನು ಪಲ್ಲಕ್ಕಿಯ ಸಮೀಪಕ್ಕೆ ಬರಗೊಡಿಸದಂತೆ ಸುತ್ತಲೂ ಅಡ್ಡಗಟ್ಟಿ ಅವರೊಡನೆ ಹೋರಾಡಲಾರಂಭಿಸಿದರು. ನಯನ

ಪಾಲನು ಚಂದ್ರಾವತಿಯು ತನಗೆ ಸಿಕ್ಕಿದಳೆಂದು ಅಮಂದಾನಂದವನ್ನು ಹೊಂದಿದನು. ಇಂದಿರಾ ದುರ್ಗಾದಾಸರು ತಮ್ಮ ಪ್ರಯತ್ನವೆಲ್ಲವೂ ವ್ಯರ್ಥವಾಯಿತೆಂದು ಚಿಂತಿಸುತ್ತಾ ನಿಂತರು. ಜೋಧಪುರವಂಶವನ್ನು ಉದ್ಧಾರಮಾಡುವೆನೆಂದು ಯಶವಂತಸಿಂಹನೊಡನೆ ತಾನು ಮಾಡಿದ ಪ್ರತಿಜ್ಞೆಯನ್ನು ಸ್ಮರಿಸಿಕೊಂಡು ದುರ್ಗಾದಾಸನು ವಿಷಾದಮಗ್ನನಾದನು. ಪಲ್ಲಕ್ಕಿಯಲ್ಲಿರುವ ಚಂದ್ರಾವತಿಯನ್ನೂ ಅಜಿತಸಿಂಗನನ್ನೂ ನೋಡಿದ ಕೂಡಲೇ ನಯನಪಾಲನು ಅವರಿಬ್ಬರಿಗೂ ಗತಿ ಮುಟ್ಟಿಸುವನೆಂದು ಇಂದಿರೆಯು ನಿಶ್ಚಯಿಸಿಕೊಂಡಳು. ಆದರೆ ಸಹಜ ಧೈರ್ಯಶಾಲಿಯಾದ ದುರ್ಗಾದಾಸನು, ಪ್ರಾಣ ಹೋದರೂ ಸರಿಯೆ, ನಯನಪಾಲನೊಡನೆ ಹೋರಾಡಿ ಚಂದ್ರಾವತಿಯನ್ನು ಹೇಗಾದರೂ ಮಾಡಿ ಕಾಪಾಡುವೆನೆಂದು ನಿಶ್ಚಯಿಸಿಕೊಂಡನು.

ಭಿಲ್ಲರೂ ರಾಜಪುತ್ರರೂ ಸೇರಿ ಪಲ್ಲಕ್ಕಿಯ ಬಳಿಗೆ ಒಬ್ಬರನ್ನೂ ಬರಗೊಡಿಸದೆ ಮಹಮ್ಮದೀಯರೊಡನೆ ಹೋರಾಡುತ್ತಿದ್ದರು. ಆದರೇನು? ಮಹಮ್ಮದೀಯರ ಸೈನ್ಯವು ತಮಗಿಂತಲೂ ಅಧಿಕವಾಗಿದ್ದುದರಿಂದ ರಾಜಪುತ್ರರಿಗೆ ಅವರೊಡನೆ ಹೋರಾಡುವುದು ಅತ್ಯಂತ ಕಷ್ಟವಾಯಿತು. ಪರಿವಾರದಲ್ಲಿ ಕೆಲವರು ಹತರಾದರು; ಅಷ್ಟರಲ್ಲಿ ನಯನಪಾಲನು ತನ್ನ ಖಡ್ಗವನ್ನು ಗಿರಗಿರನೆ ತಿರುಗಿಸುತ್ತ ಪಲ್ಲಕ್ಕಿಯನ್ನು ಸಮೀಪಿಸಿದನು. ಪರಿವಾರವೆಲ್ಲವೂ ಶತ್ರುಗಳೊಡನೆ ಹೋರಾಡುತ್ತಿದ್ದುದರಿಂದ ಈತನನ್ನು ಒಬ್ಬರೂ ಅಡ್ಡಿಪಡಿಸಲಿಲ್ಲ. ನಯನಪಾಲನು ಮೆಲ್ಲಮೆಲ್ಲನೆ ಪಲ್ಲಕ್ಕಿಯನ್ನು ಸಮೀಪಿಸಿ, ಬಾಗಿಲನ್ನು ತೆರೆದು, ಒಳಗೆ ಹೋಗಲು ತನ್ನ ತಲೆಯನ್ನು ಒಳಗೆ

ಇಟ್ಟನು. ತಕ್ಷಣವೇ ಒಳಗಿನಿಂದ ಒಂದು ಕತ್ತಿಯು ಏಟು ಆತನ ಭುಜವನ್ನು ತಾಕಿತು. ಆ ಏಟನ್ನು ಸಹಿಸಲಾರದೆ ಆತನು ಆಕ್ಷಣವೇ ಮೂರ್ಛಿತನಾಗಿ ಬಿದ್ದು ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚೆತ್ತು ದುರಾಗ್ರಹದಿಂದ ಪಲ್ಲಕ್ಕಿಯೊಳಗಿದ್ದ ಚಂದ್ರಾವತಿಯನ್ನು ಎಳೆದುತರುವಂತೆ ತನ್ನ ಭಟನೊಬ್ಬನಿಗೆ ಆಜ್ಞಾಪಿಸಿದನು. ಭಟನು ಪಲ್ಲಕ್ಕಿಯನ್ನು ಸಮೀಪಿಸಿದ ಕೂಡಲೆ ಒಬ್ಬ ರಜಪುತ್ರವೀರನು ಖಡ್ಗಪಾಣಿಯಾಗಿ ಹೊರಗೆ ಬಂದು ನಿಂತು ಮಹಮ್ಮದೀಯರೊಡನೆ ಹೋರಾಡಲಾರಂಭಿಸಿದನು. ಈ ಚಿತ್ರವನ್ನು ನೋಡಿದ ಕೂಡಲೇ ನಯನಪಾಲನು ಹತಾಶನಾದನು. ಈ ವರೆಗೂ ಚಂದ್ರಾವತಿಗೆ ಒದಗಿದ್ದ ದುರ್ಗತಿಯ ವಿಷಯವಾಗಿ ಸಂತಾಪಪಡುತ್ತಿದ್ದ ಇಂದಿರಾ ದುರ್ಗಾದಾಸರು ನಿಶ್ಚಿಂತರಾಗಿ ಆ ಚಮತ್ಕಾರವನ್ನು ನೋಡುತ್ತ ನಿಂತರು. ಚಂದ್ರಾವತಿಯು ತನಗೆ ಸಿಕ್ಕುವುದು ದುರ್ಲಭವೆಂದು ನಯನಪಾಲನು ತಿಳಿದುಕೊಂಡನು. ಪಾಪ ! ಆತನು ಎಷ್ಟು ಪಾಡುಪಟ್ಟರೂ ಲೇಶಮಾತ್ರವೂ ಪ್ರಯೋಜನವಿಲ್ಲದೆ ಹೋಯಿತು ; ಎಷ್ಟು ದೀರ್ಘಾಲೋಚನೆಯನ್ನು ಮಾಡಿದರೂ ತಕ್ಕ ಉಪಾಯವು ಆತನಿಗೆ ತಿಳಿಯಲೇ ಇಲ್ಲ. ಆದರೆ, ಆತನ ಹೃದಯದಲ್ಲಿ ನಾಟಿದ್ದವು ಆಶಾಬೀಜ ಸ್ವಲ್ಪ ಅಂಕುರಿಸಿದ್ದುದರಿಂದ ಆತನು ಮತ್ತೊಂದು ಬಾರಿ ದುರ್ಗಾದಾಸನನ್ನು ಭಯಪಡಿಸಿದರೆ ಚಂದ್ರಾವತಿಯ ವೃತ್ತಾಂತವನ್ನು ತಿಳಿಸುವನೇನೋ ಎಂಬ ಶಂಕೆಯಿಂದ ಆತನನ್ನು ಕರೆದು "ಎಲೈ, ಮೂರ್ಖಚಿತ್ತನೆ ! ಈಗಲಾದರೂ ಚಂದ್ರಾವತಿಯ ವೃತ್ತಾಂತವನ್ನು ತಿಳಿಸುವೆಯೋ ಇಲ್ಲವೋ ? ನಿನಗೆ ಪ್ರಾಣದ ಮೇಲೆ ಆಶೆಯಿದ್ದಲ್ಲಿ ನಮ್ಮನ್ನು ಮೋಸಪಡಿಸದೆ ನಮ್ಮ ಅನುಗ್ರಹ

ವನ್ನು ಸಂಪಾದಿಸಿ ಸುಖದಿಂದ ಜೀವಿಸು. ಔರಂಗಜೇಬ ಬಾದಶಹನೊಡನೆ ನಿನ್ನ ವಿಷಯವನ್ನು ಹೇಳಿ, ನಿನಗೆ ಬಹು ಮಾನ ಕೊಡಿಸುವೆನು. ಈಗ ನೀನು ನನ್ನ ಮಾತನ್ನು ಕೇಳ ದಿದ್ದಲ್ಲಿ ನಿನ್ನ ತಂಗಿಯಾದ ಇಂದಿರೆಯನ್ನು ನಿನ್ನೆದುರೆ ನಿಲ್ಲಿಸಿ, ಅವಮಾನಪಡಿಸಿ ಈ ನನ್ನ ಖಡ್ಗಕ್ಕೆ ಬಲಿಕೊಡುವೆನು; ಕಡೆಗೆ ನಿನ್ನ ಗತಿಯಾದರೂ ಹೀಗೆಯೇ! ಅದೀತೆಂದು ತಿಳಿದು, ಬೇಗ ಹೇಳು!" ಎಂದು ಗದರಿಸಿದನು.

ಎಷ್ಟು ವಿಧವಾಗಿ ಭಯಪಡಿಸಿದರೂ ದುರ್ಗಾದಾಸನು ಆತನಿಗೆ ಪ್ರತ್ಯುತ್ತರವನ್ನೇ ಕೊಡಲಿಲ್ಲ. ಆತನ ಅಲಕ್ಷ್ಯಭಾವ ವನ್ನು ಕಂಡು ನಯನಪಾಲನು ಇಂದಿರೆಯನ್ನು ನೋಡಿ,— "ಎಲೆ, ದುರಹಂಕಾರಿ! ಚಕ್ರವರ್ತಿಯಾದ ಅಲಂಘೀರ್ ಬಾದ ಶಹನಿಗೇ ದ್ರೋಹಮಾಡಿದ ನಿನ್ನನ್ನು ಪ್ರಾಣದೊಡನೆ ಉಳಿ ಸಲೇ ಬಾರದು; ನಿನ್ನ ಚರಿತ್ರೆಯನ್ನು ಕೇಳಿದರೆ ನೀನು ಹೆಂಗ ಸಾಗಿದ್ದರೂ ಎಷ್ಟೋಜನ ವೀರಪುರುಷರನ್ನು ಬಲಿತೆಗೆದು ಕೊಂಡು ಹುಟ್ಟಿದಂತೆ ಕಾಣುವುದು. ಪ್ರಾಣದಮೇಲೆ ಆಶೆ ಯಿದ್ದಲ್ಲಿ ಚಂದ್ರಾವತಿಯೆಲ್ಲಿರುವಳೆಂಬುದನ್ನು ತಿಳಿಸಿ ನನ್ನ ಅನುಗ್ರಹಕ್ಕೆ ಪಾತ್ರಳಾಗು ; ಇಲ್ಲವಾದರೆ ನಿನ್ನೆದುರಿಗೇ ನಿಮ್ಮಣ್ಣನಾದ ದುರ್ಗಾದಾಸನನ್ನು ಖಂಡಖಂಡವಾಗಿ ಖಂಡಿಸಿ ಹದ್ದುಗಳಿಗೆ ಹಾಕಿಸುವೆನು. ಅಷ್ಟೇ ಅಲ್ಲ; ನಿನ್ನನ್ನು ಇಷ್ಟು ಜನಗಳ ಮುಂದೆ ಅವಮಾನಪಡಿಸಿ ಜಾತಿಭ್ರಷ್ಟಳ ನ್ನಾಗಿಮಾಡಿ, ಕಡೆಗೆ ಒಬ್ಬ ಸಿದ್ಧಿಯುವನಿಗೆ ನಿನ್ನನ್ನು ಮದುವೆ ಮಾಡಿ ನಿನ್ನ ಜನ್ಮವನ್ನೆಲ್ಲ ದುಃಖಭಾಜನವನ್ನಾಗಿ ಮಾಡು ವೆನು." ಎಂದು ಅನೇಕವಿಧವಾಗಿ ನಯಭಯುಗಳಿಂದ ಬೋ ಧಿಸಿದರೂ ಸಹಜ ಧೈರ್ಯಾಲಂಕೃತಳಾದ ಇಂದಿರೆಯು

ಸ್ವಲ್ಪವೂ ಭಯಪಡದೆ ಪೌರುಷವನ್ನು ವಹಿಸಿ, ರೋಷಾರುಣ ನೇತ್ರಳಾಗಿ ನಯನಪಾಲನನ್ನು ಕುರಿತು ಹೇಳಿದಳು.

'ಎಲೈ, ಕ್ರೂರಾತ್ಮನೆ; ತರಗೆಲೆಯ ಶಬ್ದಕ್ಕೆ ಹುಲಿಯು ಭಯಪಡುವುದೆಂದು ತಿಳಿದಿರುವೆಯಾ? ಮಾತುಮಾತಿಗೂ ನಮ್ಮನ್ನೇಕೆ ಬೆದರಿಸುವೆ? ಪ್ರಾಣಗಳಮೇಲೆ ಆಶೆಯನ್ನಿಟ್ಟು ನಾವು, ಇಂತಹ ಕಾರ್ಯವನ್ನು ಮಾಡಿರುವೆವೆಂದು ತಿಳಿದಿರುವೆಯಾ? ಜೋಧಪುರವಂಶೋದ್ಧಾರ ಮಾಡುವುದಕ್ಕಿಂತಲೂ ನಮ್ಮ ಪ್ರಾಣಗಳು ನಮಗೆ ಅಧಿಕವಲ್ಲವು. ಇಂದಿನವರೆಗೂ ಅಕೆಯ ಅನ್ನವನ್ನೇ ತಿನ್ನುತ್ತಿರುವುದರಿಂದ ಚಂದ್ರಾವತಿಯನ್ನು ಕಾಪಾಡುವುದು ನಮ್ಮ ಮುಖ್ಯ ಕರ್ತವ್ಯವು. ಇದಕ್ಕಾಗಿ ನಾವು ಮಾಡಬೇಕಾದ ಕಾರ್ಯಗಳನ್ನೆಲ್ಲ ಮುಂಚೆಯೇ ಮಾಡಿರುವೆವು; ಇನ್ನು ಮೇಲೆ ನೀನು ನಮ್ಮಿಬ್ಬರನ್ನೂ ಏನುಮಾಡಿದರೂ ಭಯವಿಲ್ಲ; ಅಸ್ಥಿರವಾದ ಈ ಪ್ರಾಣಗಳಮೇಲೆ ನಿನಗಿರುವಂತೆ ಆಶೆಯು ಎಲ್ಲರಿಗೂ ಇರುವುದೆಂದು ತಿಳಿದಿರುವೆಯಾ?

ನಯನ — ಎಲೆ, ಗಯ್ಯಾಳಿ, ಸಕಲ ಮಹಮ್ಮದೀಯ ಸಾಮ್ರಾಜ್ಯಲಕ್ಷ್ಮೀಧುರಂಧರನಾದ ಅಲಂಘೀರ್ ಬಾದಶಹನನ್ನು ತೃಣಪ್ರಾಯನನ್ನಾಗಿ ಎಣಿಸಿ ನಿರುಪಮಾನ ಬಲಾನ್ವಿತನಾದ ನಯನಪಾಲನನ್ನು ಧಿಕ್ಕರಿಸಿ, ನೀನು ಆಡಿದ ಮಾತುಗಳಿಗೆ ನಿನ್ನನ್ನು ಈಗಲೇ ಕೊನೆಗಾಣಿಸಬಹುದು. ಆದರೆ, ಸದಯಹೃದಯನಾದ ನಾನು ಇನ್ನುಮೇಲೆಯಾದರೂ ನೀನು ಚಂದ್ರಾವತಿಯು ಎಲ್ಲಿರುವಳೆಂಬುದನ್ನು ತಿಳಿಸುವೆಯೆಂದು ಹೆಚ್ಚಿನ ಸಾಹಸವನ್ನು ನಿಲ್ಲಿಸಿರುವೆನು. ಆದುದರಿಂದ ನನ್ನ

ಮಾತಿನಲ್ಲಿ ಲಕ್ಷ್ಯವಿಟ್ಟು ಚಂದ್ರಾವತಿಯ ವಿಷಯವನ್ನು ಹೇಳು. ನಿಜವನ್ನು ಹೇಳಿದುದೇ ಆದರೆ ನಿಮ್ಮಿಬ್ಬರನ್ನೂ ಭಂಗಾರದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪಟ್ಟಣಕ್ಕೆ ಕಳುಹು ವೆನು.

ಇಂದಿರಾ — 'ಎಲೈ, ದುರಾಶಾಪಿಶಾಚಗ್ರಸ್ತನಾದ ನಯನ ಪಾಲನೆ ! ಭಂಗಾರದ ಪಲ್ಲಕ್ಕಿಯೆಂದು, ಆಶೆಯನ್ನು ಹುಟ ಸಿದ ಮಾತ್ರಕ್ಕೆ ನಮ್ಮ ಪ್ರತಿಜ್ಞೆಯನ್ನು ಬಿಡುವೆನೆಂದು ತಿಳಿದಿ ರುವೆಯಾ ? ನಿನ್ನಂತೆ ಸಿರ್ಗತಿಕನಾಗಿ, ಹೊಟ್ಟೆಯನ್ನು ಹೊರೆ ಯಲು ಪವಿತ್ರವಾದ ಕ್ಷತ್ರಿಯ ಧರ್ಮವನ್ನು ಬಿಟ್ಟು ನೀಚರ ಆಶ್ರಯವನ್ನು ಮಾಡುವ ಇಚ್ಛೆಯು ನಮಗೆ ಕನಸಿನಲ್ಲಿಯೂ ಉಂಟಾಗಲಾರದು. ನಮ್ಮ ಕ್ಷತ್ರಿಯ ಧರ್ಮಕ್ಕೆ ಮೂರು ಲೋಕದ ಆಧಿಪತ್ಯವೂ ಕೂಡ ಸರಿತೂಗಲಾರದೆಂದು ನಾವು ತಿಳಿದಿರುವೆವು. ಮಾಡಿದ ಪ್ರತಿಜ್ಞೆಯನ್ನು ನಾವೆಂದೂ ತಪ್ಪು ವವರಲ್ಲ. ಇನ್ನು ನಿನ್ನ ದುರಾಶೆಯನ್ನು ಬಿಟ್ಟು, ನಮ್ಮನ್ನು ಏನುಮಾಡಬೇಕೆಂದಿರುವೆಯೋ ಜಾಗ್ರತೆಯಲ್ಲಿ ಮಾಡಿ ನಿನ್ನ ಪಟ್ಟಣಕ್ಕೆ ಹೋಗು. ಚಂದ್ರಾವತೀರಾಣಿಯೂ ಅಜಿತಸಿಂ ಗನೂ ಸುಖವಾಗಿರುವರು. ಇನ್ನು ಅವರನ್ನು ಹಿಡಿಯಲು ನಿನ್ನಿಂದ ಆಗಲಾರದು.

ನಯನ— ಏನು ? ಏನು ? ಅಜಿತಸಿಂಗನು ಜೀವದಿಂದಿ ರುವನೆ ? ಆ ದಿನ ಆತನು ಮೃತಿಹೊಂದಲಿಲ್ಲವೆ !

ಇಂದಿರಾ —ಆಹಾ ! ನಿನ್ನ ಚಾತುರ್ಯವನ್ನು ಏನೆನ್ನ ಬೇಕು ! ನಿನ್ನಂತ ಹರಿಗೆ ಸೈನ್ಯಾಧಿಕಾರವನ್ನು ಕೊಟ್ಟ ಔರಂಗ ಜೇಬನನ್ನೇನೆನ್ನಬೇಕು ?

ಇಂದಿರೆಯ ಈ ವಿಧವಾದ ಪೌರುಷವಾಕ್ಯದಿಂದ ನಯನಪಾಲನಿಗೆ ಆಶ್ಚರ್ಯವೂ ಅಜಿತಸಿಂಗನು ಬದುಕಿರುವನೆಂಬ ವಾರ್ತೆಯನ್ನು ಕೇಳಿ ಜೋಧಪುರದ ಮೇಲಿನ ಆಶೆಯುಹೋಗಿ ವಿರಕ್ತಿಯೂ ಉಂಟಾದುವು. ಇಂದಿರೆಯ ಸಾಹಸಕ್ಕೆ ಕೌತುಕಗೊಂಡು ಮಾತನಾಡದೆ ಆಕೆಯನ್ನೇ ಆಪಾದಮಸ್ತಕವಾಗಿ ನೋಡುತ್ತ ಆಕೆಯ ಸಹಜ ಸೌಂದರ್ಯಕ್ಕೆ ಮೆಚ್ಚಿ, ಸ್ವಲ್ಪ ಹೊತ್ತಿನಲ್ಲಿಯೇ ಮೋಹಪರವಶನಾದನು.

ಪಲ್ಲಕ್ಕಿಯಲ್ಲಿದ್ದ ಚಂದ್ರಾವತಿಯೂ ಅಜಿತಸಿಂಗನೂ ಪದ್ಮೆಯೂ ಏನಾದರೆಂಬುದು ವಾಚಕರಿಗೆ ತಿಳಿಯದಿರಬಹುದಲ್ಲವೆ? ಮೂವರೂ ಪಾಲ್ಕಿಯಲ್ಲಿ ಕುಳಿತು ಸಪರಿವಾರನಾದ ಶಿವಸಿಂಗನೊಡನೆ ಬರುತ್ತ ಸ್ವಲ್ಪದೂರ ನಡೆವುದರಲ್ಲಿ ಒಬ್ಬ ಭಿಲ್ಲನು, ನಯನಪಾಲನು ಇವರನ್ನೇ ಹಿಡಿಯಲು ಬರುವನೆಂಬುದನ್ನು ತಿಳಿದು ಓಡಿಬಂದು ಶಿವಸಿಂಗನಿಗೆ ವರ್ತಮಾನವನ್ನು ಮುಟ್ಟಿಸಿದನು. ಅದನ್ನು ಕೇಳಿದಾಕ್ಷಣವೇ ಶಿವಸಿಂಗನು ಭಯದಿಂದ ಕಂಪಿತನಾಗಿ ಯೋಚನೆಗೆ ಗುರಿಯಾದನು. ಪಾಲ್ಕಿಯಲ್ಲಿದ್ದ ಚಂದ್ರಾವತಿ-ಪದ್ಮೆಯರು— "ಈ ಗಂಡವು ಹೇಗೆ ಕಳೆವುದೋ" ಎಂದು ಭಯಪಡುತ್ತಿದ್ದರು. ಶಿವಸಿಂಗನು ಸ್ವಲ್ಪಹೊತ್ತು ಯೋಚಿಸಿ, ಪಕ್ಕದಲ್ಲಿದ್ದ ಹಳ್ಳಿಯಬಳಿ ಪರಿವಾರದೊಡನೆ ನಿಂತನು. ನಯನಪಾಲನ ಆಗಮನ ಸಮಯವು ಸಮೀಪಿಸಿದುದರಿಂದ ಉಪಾಯಗಾಣದೆ, ಶಿವಸಿಂಗನೂ ರಜಪುತ್ರರೂ ಭಿಲ್ಲರೂ ಚಂದ್ರಾವತೀ ಅಜಿತಸಿಂಗರನ್ನು ಹೇಗೆ ರಕ್ಷಿಸಬೇಕೆಂದು ಚಿಂತಿಸತೊಡಗಿದರು. ಇಷ್ಟರಲ್ಲಿ ಕಾರ್ಯಾನುಕೂಲ-ಚತುರೋಪಾಯಗಳನ್ನರಿತ ಪದ್ಮೆಯು ಒಂದು ಒಳ್ಳೆಯ ಉಪಾಯವನ್ನು ಯೋಚಿಸಿ, ಎಲ್ಲರಿಗೂ ಉಪಾಯವನ್ನು ತಿಳಿಸಿದಳು. ಈ ಉಪಾಯವನ್ನು ಕೇಳಿ ಎಲ್ಲರೂ ಧೈರ್ಯವನ್ನುಹೊಂದಿ ಪದ್ಮೆಯ ಬುದ್ಧಿ ಚಾತುರ್ಯವನ್ನು ಹೊಗಳಲಾರಂಭಿಸಿದರು.

ತತ್ಕ್ಷಣವೇ ಪದ್ಮೆಯು ಅಜಿತಸಿಂಗನನ್ನೆತ್ತಿಕೊಂಡು ಪಕ್ಕದಲ್ಲಿದ್ದ ಆರಾವಲೀ ಪರ್ವತಭಾಗವನ್ನೇರಿ ಅಚಲೇಶ್ವರಮಂದಿರವನ್ನು ಪ್ರವೇಶಿಸಿ,

ವೈಕುಂಠಯೋಗಿಯ ದರ್ಶನವನ್ನು ಮಾಡಿ—"ಸ್ವಾಮಿ, ನಯನಪಾಲನು ಚಂದ್ರಾವತಿಯನ್ನು ಹುಡುಕಿಕೊಂಡು ಸೈನ್ಯದೊಡನೆ ಬರುತ್ತಿರುವನು. ಇದು ವರೆಗೆ ಎಷ್ಟೋಗಂಡಗಳನ್ನು ದಾಟಿಬಂದೆವಾದರೂ ದೇವರು ಇನ್ನೂ ತೊಂದರೆಯನ್ನೇ ಉಂಟುಮಾಡುತ್ತಿರುವನು. ತಾವು ಈ ಬಾಲಕನನ್ನು ಸ್ವಲ್ಪಕಾಲ ಹತ್ತಿರದಲ್ಲಿರಿಸಿಕೊಂಡು ರಕ್ಷಿಸಬೇಕು." ಎಂದು ಹೇಳಲು, ವೈಕುಂಠಯೋಗಿಯು ಹಾಗೆಯೇ ಆಗಲೆಂದು ಒಪ್ಪಿ, ಆ ಬಾಲಕನನ್ನು ಒಬ್ಬ ಭಿಲ್ಲಾಂಗನೆಗೆ ಒಪ್ಪಿಸಿ ಸೌಖ್ಯವಾಗಿರಿಸಿದ್ದನು. ಇತ್ತ ಶಿವಸಿಂಗನು ಚಂದ್ರಾವತಿಯನ್ನು ಪಕ್ಕದಲ್ಲಿದ್ದ ಹಳ್ಳಿಗೆ ಕರೆದುಕೊಂಡು ಹೋಗಿ, ಒಬ್ಬ ಭಿಲ್ಲನ ಮನೆಯಲ್ಲಿ ಆಕೆಯನ್ನು ರಹಸ್ಯವಾಗಿಟ್ಟು ತಾನು ಹೊರಟುಬಂದನು. ರಜಪುತ್ರರೂ ಭಿಲ್ಲರೂ ಮತ್ತಷ್ಟು ಧೈರ್ಯವನ್ನು ವಹಿಸಿ, ಪದ್ಮೆಯು ಹೇಳಿದಂತೆ ಒಬ್ಬ ರಜಪುತ್ರವೀರನನ್ನು ಪಾಲ್ಕಿಯಲ್ಲಿ ಕುಳ್ಳಿರಿಸಿದ್ದರೂ ನಯನಪಾಲನು ಪಾಲ್ಕಿಯಲ್ಲಿ ಚಂದ್ರಾವತಿಯಿರುವಳೆಂದು ಅತ್ಯಂತ ಸಂತೋಷಪಟ್ಟನು. ಆದರೆ, ಚಂದ್ರಾವತಿಗೆ ಪ್ರತಿಯಾಗಿ ಒಬ್ಬ ರಜಪುತ್ರವೀರನು ಪಾಲ್ಕಿಯಿಂದ ಹೊರಗೆ ಬಂದು ಶತ್ರುಸೈನ್ಯವನ್ನು ಚಂಡಾಡತೊಡಗಿದನು.

ಇನ್ನು ಇಂದಿರಾ ದುರ್ಗಾದಾಸರಿಂದ ತನಗಾವ ಪ್ರಯೋಜನವೂ ಇಲ್ಲವೆಂದು ತಿಳಿದು ನಯನಪಾಲನು ರಾಜಪುತ್ರರನ್ನೂ ಭಿಲ್ಲರನ್ನೂ ನಿರ್ಮೂಲಮಾಡುವಂತೆ ತನ್ನ ಸೈನಿಕರಿಗೆ ಆಜ್ಞಾಪಿಸಿದನು. ಮಹಮ್ಮದೀಯರು ಆತನ ಅಪ್ಪಣೆಯಮೇರೆಗೆ ಘೋರವಾದ ಯುದ್ಧ ಮಾಡತೊಡಗಿದರು. ಜೋಧಪುರ ವಂಶರಕ್ಷಣಾರ್ಥವಾಗಿ ರಾಜಪುತ್ರರೂ ಕೂಡ ತಮ್ಮ ಪ್ರಾಣಗಳ ಮೇಲಿನ ಆಶೆಯನ್ನುಬಿಟ್ಟು ಹೋರಾಡಲಾರಂಭಿಸಿದರು. ತಮ್ಮ ಕಡೆಯವರಿಗಾದ ದುರ್ಗತಿಯನ್ನು ನೋಡುತ್ತ ಇಂದಿರಾ ದುರ್ಗಾದಾಸರು ಬಲೆಯಲ್ಲಿ ಸಿಕ್ಕಿಬಿದ್ದ ಸಿಂಹಗಳಂತೆ ಅತ್ಯಂತ ದುಃಖಾಕ್ರಾಂತರಾಗಿ ಭಗವಂತನ ಧ್ಯಾನ ಮಾಡತೊಡಗಿದರು. ಇಷ್ಟರಲ್ಲಿಯೇ ಸ್ವಲ್ಪದೂರದಲ್ಲಿ ಯಾವುದೋ ಒಂದು ದೊಡ್ಡ ಸೈನ್ಯವು ಬರುತ್ತಿರುವುದನ್ನು ತಿಳಿದು ತನ್ನ ಸೈನಿಕರಲ್ಲಿ ಕೆಲವರಿಗೆ

ಇಂದಿರೆಯನ್ನು ಡಿಲ್ಲೀನಗರಕ್ಕೆ ಕರೆದುಕೊಂಡು ಹೋಗಿರೆಂದು ಆಜ್ಞಾಪಿ
ಕಳುಹಿದನು.

ಕ್ರಮಕ್ರಮವಾಗಿ ಆ ಸೈನ್ಯವು ಸಮೀಪಿಸಿ ರಜಪೂತರೊಡನೆ ಸೇ
ಮಹಮ್ಮದೀಯರೊಡನೆ ಘೋರಂಘೋರಿಯಿಂದ ಹೊಡೆದಾಡತೊಡಗಿತು
ನಯನಪಾಲನು ರಾಜಪುತ್ರರ ಸೈನ್ಯವನ್ನು ಸುತ್ತಲೂ ಆವರಿಸಿ ಯುದ್ಧಮಾ
ದನಾದರೂ ಅದರಿಂದ ಪ್ರಯೋಜನವಿಲ್ಲದೆ ಹೋಯಿತು. ಬಂದಿಯಾಗಿದ್ದ
ದುರ್ಗಾದಾಸನು ಇದೇ ಸಮಯವೆಂದು ಯೋಚಿಸಿ ಉಪಾಯದಿಂದ ತಪ್ಪಿ
ಕೊಂಡುಬಂದು ಗಜಪೂತರೊಡನೆ ಸೇರಿ ನಯನಪಾಲನೊಡನೆ ಯುದ್ಧಕ್ಕೆ
ನಿಂತನು. ರಾಜಪುತ್ರರ ಕೋಪಾಗ್ನಿಯನ್ನೂ ಅವರ ಶಕ್ತಿಯ ಏಟುಗಳನ್ನೂ
ಸಹಿಸಲಾರದೆ ಯವನ ಸೈನ್ಯವು ಸ್ವಲ್ಪಹೊತ್ತಿಗೆ ದಿಕ್ಕಾಪಾಲಾಗಿ ಚದರಿ ಓಡಿ
ಹೋಯಿತು. ನಯನಪಾಲನು ಕೂಡ ಸ್ವಕೀಯ ಪ್ರಾಣಸಂರಕ್ಷಣಾರ್ಥ
ವಾಗಿ ತನ್ನ ಸೈನಿಕರನ್ನೇ ಅನುಸರಿಸಿದನು. ಆದರೂ ದುರ್ಗಾದಾಸನು ಬಂಧ
ವಿಮುಕ್ತವಾದ ಸಿಂಹದಂತೆ ನಯನಪಾಲನನ್ನು ಸ್ವಲ್ಪದೂರ ಹಿಮ್ಮೆಟ್ಟಿ
ಅನೇಕ ಸೈನಿಕರನ್ನು ಕೊಂದು ಹಿಂತಿರುಗಿ ಬಂದನು.

ರಾಜಸಿಂಹನು ವೈಕುಂಠಯೋಗಿಯೊಡನೆ ಚಂದ್ರಾವತಿಯ ರಕ್ಷಣಾ
ರ್ಥವಾಗಿ ಸೈನ್ಯವನ್ನು ಕಳುಹುವೆನೆಂದುಹೇಳಿ ಹೋದುದು ವಾಚಕರಿಗೆ
ಜ್ಞಾಪಕವಿರಬಹುದು. ಶಿವಸಿಂಗನ ಸಹಾಯಕ್ಕಾಗಿ ಬಂದು ಆತನೊಡನೆ
ಸೇರಿ ಯುದ್ಧಮಾಡಿದ ಸೈನ್ಯವೇ ಈತನು ಕಳುಹಿದ ಸೈನ್ಯವು.

ಅನಂತರ ಶಿವಸಿಂಗನೂ ದುರ್ಗಾದಾಸನೂ ರಾಜಸಿಂಹನ ಸೈನ್ಯವನ್ನು
ತಮ್ಮ ಜೊತೆಯಲ್ಲಿಯೇ ಕರೆದುಕೊಂಡು ಪರಿವಾರ ಸಮೇತರಾಗಿ ಚಂದ್ರಾವತಿ
ಯನ್ನು ನೋಡಲು ಹೊರಟರು.

# ಹದಿಮೂರನೆಯ ಪ್ರಕರಣ.

(ತಾನೊಂದೆಣಿಸಿದರೆ ದೈವವೊಂದನ್ನು ನೆನೆಯುವುದು.)

ನಯನಪಾಲನು ಸೋತಮೇಲೆ ಡಿಲ್ಲೀನಗರವನ್ನು ಕುರಿತು ಓಡಿಹೋದನು. ಅದಕ್ಕೆ ಮೊದಲೇ ಇಂದಿರೆಯನ್ನು ಕೆಲವುಮಂದಿ ಭಟರೊಡನೆ ಡಿಲ್ಲೀನಗರಕ್ಕೆ ಕಳುಹಿದನಷ್ಟೆ! ಆದರೆ ಡಿಲ್ಲೀನಗರವನ್ನು ಕುರಿತು ಓಡಿಹೋಗುತ್ತ ಮಾರ್ಗಮಧ್ಯದಲ್ಲಿಯೇ ಇಂದಿರೆಯ ಕಾವಲಿನ ಸೈನ್ಯದೊಡನೆ ಕಲೆತನು. ಡಿಲ್ಲೀನಗರವನ್ನು ಪ್ರವೇಶಿಸಿದ ಮೇಲೆ ಇಂದಿರೆಯನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡನು. ಈತನು ಆವ ಮುಹೂರ್ತದಲ್ಲಿ ಡಿಲ್ಲಿಯನ್ನು ಬಿಟ್ಟು ಹೊರಟನೋ ಅಂದಿನಿಂದ ಈತನ ಪ್ರಯತ್ನಗಳೆಲ್ಲವೂ ಭಂಗವಾಗುತ್ತಲೇ ಬಂದವು; ಆಶೆಯೆಲ್ಲವೂ ನಿರಾಶೆಯಾಯಿತು. ಚಂದ್ರಾವತಿಯನ್ನು ಬಾದಶಹನಿಗೊಪ್ಪಿಸುವುದರಿಂದ ತನಗೆ ಅತ್ಯಂತ ಬಹುಮಾನವು ದೊರೆವುದೆಂದು ನಂಬಿದ್ದನು. ಈಗ ಅದಕ್ಕೆ ಬದಲಾಗಿ ಯಾವಶಿಕ್ಷೆಯನ್ನು ವಿಧಿಸುವನೋ ಎಂದು ಭಯಪಡುವಂತಾದನು. ಅಷ್ಟೇಅಲ್ಲ, ತನ್ನ ಸಮಾಚಾರನೆಲ್ಲವನ್ನೂ ಔರಂಗಜೇಬನು ಗೂಢಚಾರರ ಮೂಲಕ ತಿಳಿದಿರಬಹುದೇನೆಂಬ ಶಂಕೆಯೂ ಉಂಟಾಯಿತು. ಇದಕ್ಕೆ ಸರಿಯಾಗಿ ಔರಂಗಜೇಬನು ಚಂದ್ರಾವತಿಯನ್ನೂ ಅವಳ ಕುಮಾರನನ್ನೂ ದುರ್ಗಾದಾಸನು ಉಪಾಯದಿಂದ ಸಾಗಿಸಿದುದನ್ನೂ, ನಯನಪಾಲನು ಆಕೆಯನ್ನು ಹುಡುಕುತ್ತ ಹೊರಟುದನ್ನೂ ತಿಳಿದಿದ್ದನು. ಪೃಥಿವೀಸಿಂಗನ ಮರಣಾನಂತರ ತನ್ನ ಕಾರ್ಯಗಳೆಲ್ಲವೂ ನೆರವೇರುವುವೆಂದು ಈ ಬಾದಶಹನು ನಂಬಿದ್ದನು. ಯಶವಂತಸಿಂಗನನ್ನು ಕೂಡ ಮೋಸದಿಂದ ಕೊಲ್ಲಿಸಬೇಕೆಂದು ಇವನು ಅಭಿಪ್ರಾಯಪಟ್ಟಿದ್ದರೂ ಸಮಯವು ಸಿಕ್ಕದೇ ಹೋಯಿತು. ಬಾದಶಹನ ಮನೋಗತವನ್ನು ತಾನು ಈಡೇರಿಸಲಿಲ್ಲವಾದು

ದರಿಂದ ತನಗಾಗುವ ಶಿಕ್ಷೆಯನ್ನು ಹೇಗೆ ತಪ್ಪಿಸಿಕೊಳ್ಳಬೇಕೆಂದು ನಯನಪಾಲನು ಡಿಲ್ಲೀನಗರಕ್ಕೆ ಬಂದುದು ಮೊದಲು ಚಿಂತಿಸುತ್ತಲೇ ಇದ್ದನು. ಕಡೆಗೆ ಆತನು ಇಂದಿರೆಯನ್ನೇ ಚಂದ್ರಾವತಿಯೆಂದು ಹೇಳಿ ಬಾದಶಹನಿಗೊಪ್ಪಿಸಲು ಯೋಚಿಸಿದನು. ಆದರೆ, ತನಗೆ ಆಕೆಯ ಮೇಲಿದ್ದ ಮೋಹವು ಆತನನ್ನು ಹಾಗೆ ಮಾಡಗೊಡಿಸಲಿಲ್ಲ; ಬಾದಶಹನಿಗೆ ಮೋಸಮಾಡಿ ಇಂದಿರೆಯನ್ನು ತಾನೇ ವಿವಾಹ ಮಾಡಿಕೊಳ್ಳಬೇಕೆಂದು ಆತನಿಗೆ ಆಶೆ ಹುಟ್ಟಿತು. ಈ ಕಾರಣದಿಂದಲೇ ಈತನು ಡಿಲ್ಲಿಗೆ ಬಂದು ನಾಲ್ಕು ದಿನಗಳಾದರೂ ಚಕ್ರವರ್ತಿಯ ದರ್ಶನಕ್ಕೆ ಹೋಗಲಿಲ್ಲ. ಬಾದಶಹನು ತನ್ನನ್ನು ನೋಡಿದ ಕೂಡಲೇ "ನಯನಪಾಲಾ, ಚಂದ್ರಾವತಿಯನ್ನು ಜೋಪಾನವಾಗಿ ಕರೆದುತಂದೆಯಾ?" ಎಂದು ಕೇಳಿದರೆ, ಉತ್ತರವೇನು ಕೊಡಬೇಕು,—ನಿಜಾಂಶವನ್ನು ತಿಳಿಸಿದರೆ ಆವಶಿಕ್ಷೆಗೆ ಗುರಿಯಾಗಬೇಕೋ—ಎಂಬ ವಿಚಾರವೇ ಇವನ ಮನಸ್ಸನ್ನು ಆಕ್ರಮಿಸಿದ್ದಿತು. ಒಂದುವೇಳೆ, "ಇಂದಿರೆಯನ್ನು ತಾನು ಕರೆದು ತಂದಿರುವೆನೆಂದು ಬಾದಶಹನಿಗೆ ತಿಳಿಸಿದರೆ, ಆತನು ಇಂದಿರೆಯನ್ನು ಖಂಡಿತವಾಗಿಯೂ ಬಿಡಲಾರನು!" ಹೀಗೆಯೇ ಎಷ್ಟೋ ವಿಧವಾಗಿ ಚಿಂತಿಸಿದನಾದರೂ ಉಪಾಯವಾವುದೂ ತೋರದೇ ಹೋದುದರಿಂದ ಮನೆಯಲ್ಲಿಯೇ ನಿಲ್ಲಬೇಕಾಯಿತು. ಹೀಗೆ ನಾಲ್ಕು ದಿನಗಳು ಕಳೆದ ಬಳಿಕ ಸಿಪಾಯಿಗಳಿಬ್ಬರು ನಯನಪಾಲನ ಮನೆಗೆ ಹೋಗಿ, 'ಬಾಗಿಲನ್ನು ತೆರೆ' ಎಂದು ಕೂಗಿದರು. ನಯನಪಾಲನು ಗಾಬರಿಯಿಂದ 'ಯಾರವರು?' ಎಂದು ಕೇಳಲು, "ನಾವು ಅಲಂಘೀರ್ ಬಾದಶಹನ ರಾಜಭಟರು. ತಮ್ಮನ್ನು ಕರೆತರುವಂತೆ ಅಪ್ಪಣೆಯಾಗಿದೆ. ಉಟ್ಟಬಟ್ಟೆಯಲ್ಲಿಯೇ ಹೊರಡಬೇಕು. ಸಾವಕಾಶ ಮಾಡಕೂಡದು" ಎಂದು ಆ ಮುಹಮ್ಮದೀಯ ಭಟರಿಬ್ಬರೂ ಗಂಭೀರವಾಗಿ ಉತ್ತರ ಕೊಟ್ಟರು.

ಈ ಮಾತನ್ನು ಕೇಳಿದಾಕ್ಷಣವೇ ನಯನಪಾಲನ ಎದೆಯು ಒಡೆದು ಹೋಯಿತು. ಮೈಯೆಲ್ಲ ಬೆವತು ಗಡಗಡನೆ ನಡುಗಲಾರಂಭಿಸಿತು.

ಉಟ್ಟಿದ್ದ ಒಟ್ಟೆಯಲ್ಲಿಯೇ ಬಂದು ಬಾಗಿಲನ್ನು ತೆರೆದು ಭಟರೊಡನೆ ದರ್ಬಾರಿಗೆ ಹೊರಟನು. ತನ್ನ ಗುಟ್ಟನ್ನು ಈ ಭಟರು ತಿಳಿದಿರುವರೇನೆಂಬ ಶಂಕೆಯಿಂದ ದಾರಿಯಲ್ಲಿ ನಡೆಯುತ್ತ ಹೀಗೆ ಮಾತನಾಡತೊಡಗಿದನು.

"ಏನಯ್ಯ! ಅಲಂಘೀರ್ ಬಾದಶಹರು ಏನು ಮಾಡುತ್ತಿರುವರು?"

ಭಟರು :—ಅವರು ನಿಮ್ಮ ಆಗಮನ ನಿರೀಕ್ಷೆಯಲ್ಲಿಯೇ ಇರುವರು.

ನಯನ :—ನನ್ನನ್ನು ಕರೆಯಿಸಿದ ಕಾರಣವು ತಿಳಿದಿರುವುದೇ?

ಭಟರು :—ತಿಳಿಯದೇನು? ಪಟ್ಟಣದಲ್ಲಿದ್ದೂ ನೀವು ದರ್ಬಾರಿಗೆ ಬಾರದಿದ್ದುದರಿಂದ ಆಗ್ರಹಗೊಂಡು ಕರೆತರುವಂತೆ ನಮ್ಮನ್ನು ಕಳುಹಿಸಿರುವರು.

ಮೊದಲೇ ಭೀತಚಿತ್ತನಾಗಿದ್ದ ನಯನಪಾಲನು ಭಟರ ಮಾತುಗಳನ್ನು ಕೇಳಿ ಮತ್ತಷ್ಟು ಭಯಪಟ್ಟು ಬಾದಶಹನಿಗೆ ಯಾವ ಸಮಾಧಾನವನ್ನು ಹೇಳಬೇಕೆಂದು ಯೋಚಿಸುತ್ತ ಬಲಿಗಾಗಿ ಒಪ್ಪಿಸಲ್ಪಡುವ ಕುರಿಯು ಕಟುಕರೊಡನೆ ಕಾಳಿಕಾಲಯಕ್ಕೆ ಹೋಗುವಂತೆಯೇ ನಯನಪಾಲನು ಆ ಭಟರಿಬ್ಬರೊಡನೆ ಭಯಗ್ರಸ್ತನಾಗಿ ಹೋಗುತ್ತಿದ್ದನು.

"ಉತ್ತಮ ಕ್ಷತ್ರಿಯವಂಶ ಸಂಭವನಾಗಿದ್ದರೂ ಈ ನನ್ನ ಅವಿವೇಕದಿಂದಲ್ಲವೇ ಈ ದುರವಸ್ಥೆಯು ಪ್ರಾಪ್ತವಾಯಿತು." ಎಂದು ಪಶ್ಚಾತ್ತಾಪಪಡುತ್ತ ಕಡೆಗೆ "ಹುಂ, ಆಗಲಿ; ವಿಚಾರಪಟ್ಟು ಫಲವಿಲ್ಲ. ಸಮಯೋಚಿತವಾಗಿ ಹೇಳಿ, ಅವನು ನಂಬುವಂತೆ ಮಾಡುವೆನು." ಎಂದು ತನ್ನಲ್ಲಿ ತಾನೇ ಧೈರ್ಯವನ್ನು ತಳೆದು, ಮಾರ್ಗವೆಲ್ಲವನ್ನೂ ಅತಿಕ್ರಮಿಸಿಬಂದು ಬಾದಶಹನ ಹತ್ತಿರ ನಮ್ರಭಾವದಿಂದ ಕೈಮುಗಿದು ಇದಿರಿಗೆ ನಿಂತನು. ಬಾದಶಹನು ನಯನಪಾಲನನ್ನು ಉಚಿತಾಸನದಲ್ಲಿ ಕುಳ್ಳಿರಿಸಿದ ಬಳಿಕ ಹೀಗೆ ಕೇಳಿದನು—

"ನಯನಪಾಲಾ! ಕ್ಷೇಮವೋ?

ನಯನ :—ಪ್ರಭುವೆ! ನಗರವನ್ನು ಬಿಟ್ಟು ಹೊರಟುದು ಮೊದಲು ನನಗೆ ಪ್ರಾಪ್ತವಾದ ಕಷ್ಟಗಳನ್ನು ದೇವರೇ ಬಲ್ಲ! ಆದರೂ ಅಲಂಘೀರ್

ಬಾದಶಹರ ದರ್ಶನವು ಲಭಿಸಿದ ತತ್‌ಕ್ಷಣವೇ ನನ್ನ ಆಯಾಸವೆಲ್ಲವೂ ಪರಿ ಹಾರವಾದಂತಾಯಿತು.

ಬಾದಶಹ :—ಅಯ್ಯೋಪಾಪ! ನೀನು ನನಗಾಗಿ ಎಷ್ಟೋ ಶ್ರಮ ಪಟ್ಟು ಕಡೆಗೆ ಜಯಶೀಲನಾಗಿ ನನ್ನ ಮನಸ್ಸಂತೋಷ ಪಡಿಸಿದುದಕ್ಕಾಗಿ ನಿನ್ನ ಋಣವನ್ನು ನಾನೆಂದಿಗೆ ತೀರಿಸಬಲ್ಲೆನು? ಶಹಬ್ಬಾಸ್! ಸೇನಾಧಿಪತಿ ಯೆಂದರೆ ನೀನೇ ಸೇನಾಧಿಪತಿ! ಸರಿಯೆ, ನಯನಪಾಲಾ! ಚಂದ್ರಾವತೀ ರಾಣಿಯನ್ನು ನಮ್ಮ ಜನಾನಾದೊಳಕ್ಕೆ ಕಳುಹಿಡೆಯೋ, ನಿನ್ನ ಬಳಿಯಲ್ಲಿಯೇ ಇಟ್ಟುಕೊಂಡಿರುವೆಯೋ?

ನಯನ :—ಅಪ್ರಿಯವನ್ನು ಹೇಗೆ ಹೇಳಲಿ?

ಬಾದಶಹ :—ಅಪ್ರಿಯವೆಂತಹದು? ಒಂದು ವೇಳೆ ನಿನ್ನ ಮನೆಯ ಲ್ಲಿಟ್ಟುಕೊಂಡಿದ್ದರೂ ತಪ್ಪೇನು? ಜೋಧಪುರಕ್ಕೆ ರಾಜನಾದ ನಿನ್ನ ಮನೆ ಯಲ್ಲಿ ಚಂದ್ರಾವತಿಯನ್ನಿರಿಸುವುದು ನನಗೆ ಸಮ್ಮತವೇ ಸರಿ! ಇಷ್ಟುಮಾ ತ್ರಕ್ಕೆ ಭಯವೇಕೆ?

ನಯನ :—(ಕಂಪಿತಸ್ವರದಿಂದ) ಕ್ಷಮಿಸಬೇಕು, ನನಗೀ ಕಾರ್ಯವು ಸಾಧ್ಯವಾದುದಲ್ಲ.

ಬಾದ :—ಏನು? ಆಕೆಯನ್ನು ಜನಾನಾದೊಳಕ್ಕೆ ಕಳುಹುವುದು ಸಾಧ್ಯವಲ್ಲವೆ? ಆಕೆ, ಬರುವುದಿಲ್ಲವೆಂದಳೇನು? ಅಹುದು, ನಿಜ;—ಔರಂ ಗಜೇಬ ಬಾದಶಹನೆಂದರೆ ದೇಶವೆಲ್ಲವೂ ಭಯಪಡುತ್ತಿರುವಾಗ ಚಂದ್ರಾವ ತಿಯು ಭಯಪಡುವುದು ಆಶ್ಚರ್ಯವಲ್ಲ; ಅವ ಶಿಕ್ಷೆಗೆ ಗುರಿಯಾಗು ವೆನೋ—ಎಂದು ಆಕೆ ಭಯಪಟ್ಟಿರಬಹುದೇ ಹೊರತು, ನಾನೇ ಕರಸಿರುವೆ ನೆಂದು ಹೇಳಿದ್ದರೆ ಬರುತ್ತಿದ್ದಳು. ಹೋಗಲಿ, ಈಗಲೂ,—ನಯನಪಾಲ! ನನ್ನ ಉದ್ದೇಶವನ್ನು ನೀನೇ ಆಕೆಗೆ ತಿಳಿಸಿ, ಆಕೆಯ ಭಯವನ್ನು ಹೋಗಲಾ ಡಿಸಬಹುದಷ್ಟೆ?

ನಯನ :—ಬಾದಶಹರ ಭಾವನೆಯು ತಪ್ಪು, ಚಂದ್ರಾವತಿಯು ನನಗೆ ಸಿಕ್ಕಲಿಲ್ಲ.

ಬಾದ :—ಏನು ? ಚಂದ್ರಾವತಿಯು ಸಿಕ್ಕಲಿಲ್ಲವೆ ? ಹಾಗಾದರೆ, ನೀನುಹೋಗಿ ಸಾಧಿಸಿಕೊಂಡು ಬಂದ ಕಾರ್ಯವೇನು ?

ನಯನಪಾಲ :—ನನ್ನ ಪ್ರಯತ್ನದಲ್ಲಿ ಕೊರತೆಯಿರಲಿಲ್ಲ. ದುರ್ಗಾದಾಸನ ತಂಗಿಯಾದ ಇಂದಿರೆಯು ಮಹಾ ಚತುರಾಚತುರೆ! ನಾನು ಸುತ್ತಲೂ ಸೈನ್ಯವನ್ನು ಕಾವಲಿರಿಸಿದ್ದರೂ ಚಂದ್ರಾವತಿಯನ್ನು ಹೇಗೆಯೋ ಮೋಸದಿಂದ ತಪ್ಪಿಸಿರುವಳು.

ಬಾದ :—ನಯನಪಾಲಾ ! ಹೆಂಗಸರ ಚಮತ್ಕಾರಗಳನ್ನು ತಿಳಿದು ಕೊಳ್ಳದೆ ಹೋದೆಯಾ ?

ನಯನ :—ಆಕೆ ಸಾಮಾನ್ಯ ಸ್ತ್ರೀಯೆಂದು ಭಾವಿಸಬಾರದು. ಅವಳಾವ ಕೆಚ್ಚೆದೆಯ ವೀರಪುರುಷರಿಗೂ ಕಡಮೆಯಾದವಳಲ್ಲ. ಅವಳಿಂದಲೇ ನಾನು ಅನೇಕ ಕಷ್ಟಗಳನ್ನು ಅನುಭವಿಸಿದೆನು.

ಬಾದ :—ಹೋಗಲಿ, ಕೈಗೆ ಸಿಕ್ಕಿದ್ದ ಇಂದಿರೆಯನ್ನಾದರೂ ಹಿಡಿದುಕೊಂಡು ಬಂದೆಯಾ ?

ನಯನ :—ಆಕೆಯನ್ನು ಹಿಡಿದುಕೊಂಡು ಬರುತ್ತಿರುವಾಗ ಮಾರ್ಗ ಮಧ್ಯದಲ್ಲಿ ರಾಜಸಿಂಹನ ಸೈನ್ಯವು ನನ್ನನ್ನು ಸೋಲಿಸಿ ಓಡಿಸಿತು. ಇಷ್ಟಕ್ಕೂ ಚಂದ್ರಾವತಿಯನ್ನು ಹಿಡಿದು ತರುವುದಕ್ಕೆ ನನಗೆ ಸನ್ನಿಧಿಯಿಂದ ಸರ್ವಾಧಿಕಾರವು ಕೊಡಲ್ಪಟ್ಟಿರಲಿಲ್ಲ. ಅದೇ ಈ ಅಪಜಯಕ್ಕೆ ಕಾರಣವಾಯಿತು. ಇಲ್ಲದಿದ್ದರೆ ಚಂದ್ರಾವತಿಯನ್ನು ನಾಯಿಯಂತೆ ಹಿಂದೆ ಕರೆದುಕೊಂಡು ಬರುತ್ತಿದ್ದೆನು.

ಬಾದ :—ಎಲೈ, ನರಪಶುವೆ ! ಇಷ್ಟು ಕಾರ್ಯಗಳನ್ನೂ ಹಾಳು ಮಾಡೀ ಕಡೆಗೆ ನನ್ನ ಮೇಲೆಯೇ ತಪ್ಪನ್ನು ಹೊರೆಯಿಸುವೆಯಾ ? ನಿನ್ನನ್ನು

ಖಂಡಖಂಡವಾಗಿ ತುಂಡಿಸಿದರೂ ಪಾಪವಿಲ್ಲವು! ನಮ್ಮ ಮಹಮ್ಮದೀಯ ವಂಶಕ್ಕೇ ನೀನು ಅಪಕೀರ್ತಿಯನ್ನು ತಂದೆಯಲ್ಲಾ ? ಅಲಂಘೀರ್ ಬಾದಶಹನು ಈ ವರೆಗೆ ನೆನೆದ ಕಾರ್ಯಗಳೊಂದೂ ಭಂಗವಾಗಿರಲಿಲ್ಲ ; ಈ ದಿನ ನಿನ್ನಂತಹ ಅಪ್ರಯೋಜಕನು ಲಭಿಸಿದುದರಿಂದ ಇಂತಹ ಅಪಜಯವನ್ನು ಕೇಳಬೇಕಾಗಿದೆ. ಪಾಪಿ, ನೀನು ಹೊರಡುವಾಗ ಹೇಳಿದ ಜಂಭಗಳನ್ನು ಸ್ಮರಿಸು ! ನಿನ್ನ ಯಾವದ್ವೃತ್ತಾಂತವನ್ನೂ ಗೂಢಚಾರರಿಂದ ಕೇಳಿ ತಿಳಿದಿರುವೆನು. ಚೋರನಾದ ನಿನ್ನನ್ನು ಬಿಡಲಾರೆನು !

ಹೀಗೆ ಹೇಳಿದ ಬಳಿಕ ಔರಂಗಜೇಬನು, ನಯನಪಾಲನ ಮನೆಯಲ್ಲಿ ಆವಳಾದರೂ ರಜಪೂತ ಸ್ತ್ರೀಯಿದ್ದರೆ ಕರೆತರಬೇಕೆಂದು ತನ್ನ ಭಟರಿಗೆ ಆಜ್ಞಾಪಿಸಿದನು. ತತ್ಕ್ಷಣವೇ ಸೇವಕರಿಬ್ಬರು ನಯನಪಾಲನ ಮನೆಗೆ ಹೋಗಿ ಅಲ್ಲಿದ್ದ ರಜಪೂತ ಸ್ತ್ರೀಯನ್ನು ಕರೆದುಕೊಂಡು ಬಂದು ಆತನ ಮುಂದೆ ನಿಲ್ಲಿಸಿದರು. ಬಾದಶಹನು ಕಾಲರುದ್ರನಂತೆ ರೋಷತಾಮ್ರಾಕ್ಷನಾಗಿ ನಯನಪಾಲನನ್ನು ನೋಡಿದನು. ನಯನಪಾಲನು ತನ್ನ ಪ್ರಾಣದ ಮೇಲಿನ ಆಶೆಯನ್ನು ಬಿಟ್ಟು ತಲೆಯನ್ನು ತಗ್ಗಿಸಿಕೊಂಡನು. ತತ್ಕ್ಷಣವೇ ಬಾದಶಹನು ನಯನಪಾಲನನ್ನು ಕಾರಾಗೃಹಕ್ಕೆ ಕಳುಹಿಸಿಬಿಟ್ಟನು.

ಔರಂಗಜೇಬನು ಮಹಾತಂತ್ರಿ ! ನಯನಪಾಲನ ಚರಿತ್ರೆಯೆಲ್ಲವನ್ನೂ ಗೂಢಚಾರರಿಂದ ತಿಳಿದಿದ್ದರೂ ತಿಳಿಯದವನಂತೆ ನಟಿಸುತ್ತ ಇದ್ದನು. ಸಹಜ ಧೈರ್ಯಾಲಂಕೃತೆಯಾದ ಇಂದಿರೆಯು ತನ್ನ ಮುಂದೆ ನಿಲ್ಲಲು ಬಾದಶಹನು ಆಕೆಯ ಸೌಂದರ್ಯಕ್ಕೂ ಆಶ್ಚರ್ಯಮಗ್ನನಾಗಿ ಹೀಗೆ ಪ್ರಶ್ನೋತ್ತರಗಳನ್ನು ಬೆಳಸಿದನು.—

" ಎಲೆ ಧೂರ್ತೆ ! ಚಂದ್ರಾವತಿಯನ್ನು ಎಲ್ಲಿಗೆ ಕಳುಹಿರುವೆ ? ನಿಜವನ್ನು ಹೇಳು ! "

ಇಂದಿರಾ—ಈ ಮಾತುಗಳಿಗೆ ಭಯಪಡುವಳಾಗಿದ್ದರೆ ಅಂತಹ ಸಾಹಸಕಾರ್ಯವನ್ನು ನಾನು ಮಾಡುತ್ತಿರಲಿಲ್ಲ.

ಬಾದ—ಛೀ, ದುಷ್ಟೆ! ನನಗೆ ದ್ರೋಹಮಾಡಿದ ನಿನ್ನನ್ನು ಶೂಲಕ್ಕೆ ಹಾಕಿಸಿದರೂ ಪಾಪವಿಲ್ಲವು.

ಇಂದಿರಾ—ಪ್ರಾಣದ ಮೇಲಿನ ಆಶೆಯನ್ನು ಬಿಟ್ಟೇ ಈ ಕೆಲಸಕ್ಕೆ ಕೈಹಾಕಿದೆನು. ಇನ್ನು ಏನು ಮಾಡಿದರೂ ಭಯವಿಲ್ಲ.

ಇಂದಿರೆಯು ಈ ರೀತಿಯಾಗಿ ಧೈರ್ಯ-ಸ್ಥೈರ್ಯ-ಗಾಂಭೀರ್ಯಗಳಿಂದ ಕೊಟ್ಟ ಉತ್ತರವನ್ನು ಕೇಳಿ ಔರಂಗಜೇಬನು ಆಕೆಯ ಬುದ್ಧಿಚಾತುರ್ಯ-ಸಾಹಸ-ಪ್ರತಿಭಾಶಕ್ತಿಗಳಿಗೆ ಮೆಚ್ಚಿ, ಹತ್ತಿರದಲ್ಲಿದ್ದ ಸೇವಕರನ್ನು ಕರೆದು-"ಇವಳನ್ನು ಕರೆದೊಯ್ದು ದಾಸಿಯನ್ನಾಗಿ ಇಟ್ಟುಕೊಳ್ಳಬೇಕೆಂದು ಉದಯಪುರಿಗೆ ಹೇಳು." ಎಂದು ಕಟ್ಟುಮಾಡಿದನು. ಸೇವಕನು ಇಂದಿರೆಯನ್ನು ಕರೆದುಕೊಂಡು ಉದಯಪುರಿಯ ಅಂತಃಪುರವನ್ನು ಕುರಿತು ಹೊರಟುಹೋದನು.

---

## ಹದಿನಾಲ್ಕನೆಯ ಪ್ರಕರಣ.

(ಇಂದಿರಾ)

ಔರಂಗಜೇಬನ ಪಟ್ಟಮಹಿಷಿಯಾದ ಉದಯಪುರಿಯು ವಿಶೇಷ ಸದ್ಗುಣಗಳಿಂದ ಕೂಡಿದವಳಲ್ಲವಾದರೂ ಕೇವಲ ಕ್ರೂರಾತ್ಮಳೆಂದು ಹೇಳಲಾಗದು. ತಾನು ಚಿಕ್ಕಂದಿನಿಂದಲೂ ರಾಜನ ಪಟ್ಟಮಹಿಷಿಯಾಗಬೇಕೆಂದು ಬಯಸುತ್ತಿದ್ದು ಕಡೆಗೆ ಔರಂಗಜೇಬನನ್ನು ಸೇರಿ ತನ್ನ ಕೋರಿಕೆಯನ್ನು ನೆರವೇರಿಸಿಕೊಂಡಳು. ತನ್ನ ಮಾಯಾಜಾಲಗಳಿಂದ ಬಾದಶಹನು ತನ್ನ ಮಾತಿನಂತೆಯೇ ನಡೆಯುವ ರೀತಿಯಲ್ಲಿ ಆತನನ್ನು ವಶಪಡಿಸಿಕೊಂಡಿದ್ದಳು. ಜನಾನಾದಲ್ಲಿದ್ದ ಸೇವಕರೆಲ್ಲರೂ ಈಕೆಯಲ್ಲಿ ವಿಧೇಯರಾಗಿದ್ದರು.

ಉದಯಪುರಿಯು, ಔರಂಗಜೇಬನು ತನ್ನ ಅಂತಃಪುರಕ್ಕೆ ಪ್ರವೇಶಿಸಿದ ಕೂಡಲೆ ಆತನು ಇತರ ವಿಷಯಗಳಿಂದ ಚಿಂತಾಕ್ರಾಂತನಾಗಿರುವನೆಂದು ತೋರಿದುದೇ ಆದರೆ, ತನ್ನ ಮೃದುಮಧುರೋಕ್ತಿಗಳಿಂದ ಆತನ ಸಂತಾಪವನ್ನು ಹೋಗಲಾಡಿಸಿ, ಆತನಿಗೆ ಅತ್ಯಾನಂದವನ್ನುಂಟು ಮಾಡುತ್ತಿದ್ದಳು. ಈ ಕಾರಣದಿಂದ ಬಾದಶಹನಿಗೆ ಈಕೆಯಲ್ಲಿ ವಿಶೇಷವಾದ ಅನುರಾಗವಿದ್ದಿತು. ಉದಯಪುರಿಯು ಹಿಂದೂ ಸ್ತ್ರೀಯಾದುದರಿಂದ ತನ್ನ ಪತಿಯ ವಿಷಯದಲ್ಲಿ ತಾನು ಹೇಗೆ ವರ್ತಿಸಬೇಕೆಂಬುದನ್ನು ಆಕೆ ಚನ್ನಾಗಿಯೂ ತಿಳಿದುಕೊಂಡಿದ್ದಳು. ಆದರೇನು ? ಮಹಮದೀಯರೊಡನೆ ಸೇರಿದಮೇಲೆ ಅವರ ಗಾಳಿಯು ಸೋಂಕದಿರುವುದೆ ? ವಿಮಲಾದೇವಿಯು ತನಗೆ ಬರೆದ ಕಾಗದವನ್ನು ನೋಡಿದಂದಿನಿಂದಲೂ ಆಕೆಯಮೇಲೆ ದ್ವೇಷವನ್ನು ಕಾರುತ್ತಿದ್ದಳು. ಮಾಯೆಯನ್ನು ಚನ್ನಾಗಿಬಲ್ಲ ಇವಳು, ವಿಮಲೆಯನ್ನು ತಾನು ದ್ವೇಷಿಸುವುದಕ್ಕೆ ಆರಂಭವಾದುದು ಮೊದಲು, ತನ್ನ ಪತಿಯಲ್ಲಿ ಒಂದು ವಿಧವಾಗಿ ನಡೆದುಕೊಳ್ಳುತ್ತಿದ್ದಳು.

ಔರಂಗಜೇಬನು ತನ್ನ ಮಹಲನ್ನು ಪ್ರವೇಶಿಸಿದ ಕೂಡಲೆ ವಿಚಾರಮಗ್ನಳಾಗಿರುವಂತೆ ನಟಿಸುತ್ತಾ ಕೈಯಲ್ಲಿ ಆ ಕಾಗದವನ್ನು ಹಿಡಿದುಕೊಂಡು ದೈನ್ಯವನ್ನು ತೋರ್ಪಡಿಸುತ್ತ ಯೋಚನೆ ಮಾಡುತ್ತಿದ್ದಳು. ಬಾದಶಹನು ಒಳಗೆ ಪ್ರವೇಶಿಸಿ ಆಕೆಯನ್ನು ನೋಡಿ, ಹೀಗೆ ಯೋಚಿಸಲು ಕಾರಣವೇನೆಂದು ಕೇಳಲು, ಅವ ಪ್ರತ್ಯುತ್ತರವನ್ನೂ ಕೊಡದೆ ಆತನ ಇದಿರಿಗೆ ಕಣ್ಣೀರು ಸುರಿಸುತ್ತಿದ್ದಳು. ಈ ರೀತಿಯಾಗಿ ಉದಯಪುರಿಯು ರೂಪನಗರದ ಮೇಲೆ ಔರಂಗಜೇಬನ ದ್ವೇಷವು ಹೆಚ್ಚುವಂತೆ ಮಾಡುತ್ತಿದ್ದಳು. "ತಾನು ಮುಳುಗಿದುದೇ ಗಂಗೆ, ತಾನು ಮೆಚ್ಚಿದವಳೇ ರಂಭೆ" ಎಂಬಂತೆ, ಮೊಗಲ್ ಚಕ್ರವರ್ತಿಯನ್ನು ಸೇರಿದ ತನ್ನ ಭಾಗ್ಯವೇ ಭಾಗ್ಯವೆಂದೂ, ತಾನೇ ರಜಪೂತ ರಾಣಿಯರಿಗೆಲ್ಲ ಮಹಾರಾಣಿಯೆಂದೂ ಗರ್ವಪಡುತ್ತಿದ್ದಳು. ಅಷ್ಟೇ ಅಲ್ಲ ; ರಜಪೂತ ಕನ್ನಿಕೆಯರೆಲ್ಲರೂ ತನ್ನಂತೆಯೇ ಮಹಮ್ಮದೀಯ ರಾಜರನ್ನು ಮದುವೆ ಮಾಡಿಕೊಳ್ಳಬೇಕೆಂದೂ ಅವಳು ಕೋರುತ್ತಿದ್ದಳು.

ಹೀಗಿರಲು, ಮಸಾವದನು ಬಾದಶಹನ ಅಪ್ಪಣೆಯಂತೆ ಇಂದಿರೆಯನ್ನು ಕರೆದುಕೊಂಡು ಬಂದು ಉದಯಪುರಿಯ ಇದಿರಿಗೆ ನಿಲ್ಲಿಸಿದನು. ಆಗ ಉದಯಪುರಿಯು ಕವಾಚೀ ಮಂಚದಮೇಲೆ ಶಯನಿಸಿ ತನ್ನೊಳಗೇ ಯೋಚಿಸುತ್ತಿದ್ದಳು. ಆಕೆ ಧರಿಸಿದ್ದ ವಸ್ತ್ರವು ಎಲೆಹಸರು ಬಣ್ಣವುಳ್ಳದಾಗಿಯೂ ಜರತಾರಿಯ ಪುಷ್ಪಗಳಿಂದ ಕೂಡಿದುದಾಗಿಯೂ ಇದ್ದಿತು. ಮಲಗಿದ್ದ ಮಕಮಲ್ ಹಾಸಿಗೆಯೂ ಹಸರುಬಣ್ಣವುಳ್ಳದಾಗಿ ವಿವಿಧ ಪುಷ್ಪಗಳಿಂದ ಅಲಂಕೃತವಾಗಿದ್ದಿತು. ಉದಯಪುರಿಯು ವಿಲಾಸಾರ್ಥವಾಗಿ ಪ್ರತಿದಿನವೂ ಒಂದೊಂದು ವಿಧವಾದ ಉಡುಪುಗಳನ್ನೂ ಒಡವೆಗಳನ್ನೂ ಧರಿಸುತ್ತಿದ್ದಳು. ಆ ದಿನ ಉದಯಪುರಿಯು ಎಲೆಹಸರು ಬಣ್ಣದ ಉಡಪುಗಳನ್ನೂ ಪಚ್ಚೆಗಳಿಂದ ಖಚಿತವಾದ ಆಭರಣಗಳನ್ನೂ ಧರಿಸಿದ್ದಳು. ಇಂದಿರೆಯು ಆಕೆಯನ್ನು ನೋಡಿದ ಕೂಡಲೆ ‘ ರಾಜಪುತ್ರಸ್ತ್ರೀಯಾಗಿ ಹುಟ್ಟಿ, ಧನಲೋಭದಿಂದ ಮಹಮ್ಮದೀಯನನ್ನು ಮದುವೆಯಾಗಿರುವಳಲ್ಲಾ ’ ಎಂಬ ಕೋಪದಿಂದ ಆಕೆಯನ್ನು ತಿರಸ್ಕಾರಭಾವದಿಂದ ನೋಡುತ್ತಿದ್ದಳು. ಉದಯಪುರಿಯು ಕೂಡ ಇಂದಿರೆಯನ್ನು ನೋಡುತ್ತಿದ್ದರೂ ತನ್ನ ದೃಷ್ಟಿಯು ಆಕೆಯ ಮೇಲೆ ಇಲ್ಲದವಳಂತೆ ನಟಿಸುತ್ತಿದ್ದಳು. ಆವಾಗಲೂ ಮದೋನ್ಮತ್ತರಾಗಿ ಮಲಗಿರುವುದೇ ಮೊಗಲ್ ಸ್ತ್ರೀಯರಿಗೆ ಔದಾರ್ಯ ಸೂಚಕವಾದುದಂತೆ ! ಇಂದಿರಾದೇವಿಯು ಎಷ್ಟು ಹೊತ್ತು ನಿಂತಿದ್ದರೂ ಆಕೆಯನ್ನು ಆರೂ ಮಾತಾಡಿಸಲೇ ಇಲ್ಲ. ದಾಸದಾಸೀ ಜನಗಳೂ ಉದಯಪುರಿಯನ್ನು ನೋಡಿದ ಕೂಡಲೆ ದೂರದಿಂದಲೇ ಸಲಾಂ ಮಾಡುತ್ತ ಬರುವುದು ವಾಡಿಕೆಯಾಗಿದ್ದಿತು. ಆದರೆ, ಇಂದಿರೆಯು ಮಾತ್ರ ಹಾಗೆ ಮಾಡದೆ ಆಕೆಯನ್ನು ತಿರಸ್ಕಾರದಿಂದ ನೋಡುತ್ತ ಇದ್ದುದನ್ನು ಉದಯಪುರಿಯು ತಿಳಿಯದೆ ಇರಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಉದಯಪುರಿಯು ಮೇಲಕ್ಕೆದ್ದು ಇದಿರಿಗಿದ್ದ ಮಸಾವದನನ್ನು ಕಂಡು “ ಈಕೆ ಯಾರು ? ” ಎಂದು ಕೇಳಿದಳು. ಅದಕ್ಕೆ ಮಸಾವದನು “ ಬೇಗಂ ಸಾಹೇಬಾ, ತಮ್ಮ ಹತ್ತಿರ ದಾಸಿಯಾಗಿಟ್ಟುಕೊಳ್ಳಬೇ

ಕೆಂದು ಈಕೆಯನ್ನು ಬಾದಶಹಾರವರು ನನ್ನೊಡನೆ ಕಳುಹಿರುವರು.” ಎಂದು ಉತ್ತರವಿತ್ತನು. ಇಂದಿರೆಯ ಸೌಂದರ್ಯಾತಿಶಯವನ್ನು ನೋಡಿ ಉದಯ ಪುರಿಯು ಒಳಗೊಳಗೆ ಸಂತೋಷಪಡುತ್ತಾ ಕುತೂಹಲದಿಂದ ಅವಳೊಡನೆ ಉತ್ತರ ಪ್ರತ್ಯುತ್ತರಕ್ಕೆ ಮೊದಲು ಮಾಡಿದಳು.

ಉದಯಪುರಿ—ಎಲೆ, ನೀನುಯಾರು ? ಬಾದಶಹರಿಗೆ ನೀನು ಹೇಗೆ ಸಿಕ್ಕಿದೆ ?

ಇಂದಿರಾ—ಅಮ್ಮಾ ! ನಾನು ಯಾರಾದರೇನು ;—ಹೇಗೆ ಬಂದ ರೇನು ;—ನನ್ನ ವಿಧಿಯೇ ನನ್ನನ್ನು ಇಲ್ಲಿಗೆ ಕರೆತಂದಿರುವುದು.

ಉದಯ—ಓಹೋ ! ನೀನು ಸರ್ವಜ್ಞೆಯಂತೆ ಕಾಣುತ್ತಿರುವೆ ಯಲ್ಲಾ ! ಹಾಗಾದರೆ, ನೀನು ನಮ್ಮ ಬಳಿಯಲ್ಲಿ ಸರಿಯಾಗಿರುವೆಯಲ್ಲವೆ ? ಬಾದಶಹರಿಗೆ ನೀನಾವ ದ್ರೋಹವನ್ನು ಮಾಡಿದೆಯೋ ಹೇಳಬಾರದೇ ?

ಇಂದಿರಾ—ಅಮ್ಮಾ ! ಸಮಾಚಾರಗಳೆಲ್ಲವನ್ನೂ ತಿಳಿದಿದ್ದರೂ ನನ್ನನ್ನು ಹೀಗೆ ಕೇಳುವುದರಿಂದ ಪ್ರಯೋಜನವೇನು ? ಎಲ್ಲ ರಾಜಪುತ್ರ ಸುಂದರಿಯರು ಕಾಣಿಸಲಿ, ಬಾದಶಹಾರವರು ಅವರನ್ನು ಆ ಕ್ಷಣವೇ ತಮ್ಮ ಜನಾನಾದೊಳಕ್ಕೆ ಹಿಡಿದುಕೊಂಡು ಬರುವರಲ್ಲವೆ ?

ಉದಯ—ಸರಿಯೆ, ನೀನಾವ ಜಾತಿ ?

ಇಂದಿರಾ—ತುರುಷ್ಕರ ಸೇವೆಮಾಡಬೇಕಾಗಿ ಬಂದಾಗ ಆವ ಜಾತಿ ಯವಳಾದರೇನು ಲಾಭವು ?

ಉದಯ—ಓಹೋ ! ನಿನಗೆ ಬರುತಬರುತ್ತ ಗರ್ವವು ಮೇರೆಮೀರು ತ್ತಿದೆಯಲ್ಲಾ ! ನಿನ್ನ ಮಾತುಗಳನ್ನು ಕೇಳಿದರೆ ನೀನು ರಜಪುತ್ರ ಸ್ತ್ರೀಯ ರಂತೆ ತೋರುವುದು.

ಹೀಗೆ ನಡೆದ ಪರಸ್ಪರ ಸಂಭಾಷಣೆಯಿಂದ, ಇಂದಿರೆಯನ್ನು ಮದುವೆ ಯಾಗಬೇಕೆಂಬ ಅಪೇಕ್ಷೆಯಿಂದ ಔರಂಗಜೇಬನು ಈಕೆಯನ್ನು ತನ್ನ ಜನಾ

ನಾಕ್ಕೆ ಕಳುಹಿರುವನೆಂಬ ಸಂಶಯವು ಉದಯಪುರಿಯ ಮನಸ್ಸಿನಲ್ಲಿ ಹುಟ್ಟಿತು. ಬಾದಶಹನು ಇಂದಿರೆಯನ್ನು ಮದುವೆಯಾದರೆ, ತನಗಿರುವ ಸ್ವಾತಂತ್ರ್ಯವು ಕಡಿಮೆಯಾಗುವುದಲ್ಲಾ — ಎಂಬ ವ್ಯಸನದಿಂದ ಆಕೆಯನ್ನು ಜನಾನಾದಿಂದ ಹೇಗಾದರೂ ಮಾಡಿ ಹೊರಡಿಸಬೇಕೆಂದು ನಿಶ್ಚಯಮಾಡಿದಳು. ಆದರೆ, ರಾಜಕೀಯ ವ್ಯವಹಾರ ನಿಮಿತ್ತವಾಗಿ ಇಂದಿರೆಯನ್ನು ಕರೆಯಿಸಿರುವನೇನೋ ಎಂದು ಸಂದೇಹ ಪಟ್ಟಳು. ಅನನ್ಯ ಸಾಧಾರಣ ಸೌಂದರ್ಯಾತಿಶಯವುಳ್ಳ ಇಂದಿರೆಯಲ್ಲಿ ಬಾದಶಹನು ಮೋಹಪಾಶಬದ್ಧನಾಗಿ ಯಾವ ಕ್ಷಣದಲ್ಲಿ ಇಂದಿರೆಯನ್ನು ಮದುವೆಮಾಡಿಕೊಳ್ಳುವನೋ ಎಂಬ ಶಂಕೆಯಲ್ಲಿಯೇ ಇದ್ದಳು.

ಆಹ! ನಮ್ಮ ಇಂದಿರೆಯು ಎಂತಹ ಮಾಯವನ್ನು ತಿಳಿದಿರುವಳು! ತನ್ನ ವಾಕ್ಚಾತುರ್ಯದಿಂದ ಉದಯಪುರಿಗೆ ದೊಡ್ಡ ಅನುಮಾನವನ್ನು ಹುಟ್ಟಿಸಿ, ತಾನು ಹೇಗಾದರೂ ಮಾಡಿ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸಿದಳು. ಇಂದಿರೆಯು ನೋಡುವುದಕ್ಕೆ ಸಾಮಾನ್ಯ ಸ್ತ್ರೀಯಂತೆ ಇದ್ದರೂ ದೀರ್ಘಾಲೋಚನೆಯನ್ನು ಮಾಡಿ ಕಾರ್ಯೋಪಾಯಗಳನ್ನು ಯೋಚಿಸುವುದರಲ್ಲಿ ಅಸಮಾನಳಾಗಿದ್ದಳು. ಆಕೆಯ ಸಾಹಸವನ್ನೂ ರಾಜಭಕ್ತಿಯನ್ನೂ ಔರಂಗಜೇಬನು ಚನ್ನಾಗಿ ತಿಳಿದಿದ್ದನು. ಮಾಯಾಜಾಲಗಳಿಂದ ಶತ್ರುಗಳನ್ನು ಮೋಸಪಡಿಸುವುದೆಂದರೆ ಅವಳಿಗೆ ಅದೊಂದು ಮಕ್ಕಳಾಟಿಕೆಯಂತಾಗಿದ್ದಿತು. ಇದಕ್ಕೆ ಚಂದ್ರಾವತಿಯ ಸಂರಕ್ಷಣವೇ ವಾಚಕರಿಗೆ ನಿದರ್ಶನವಾಗಿರುವುದು. ಆದರೆ, ಭಗವಂತನು ಆಕೆಯ ಮೇಲೆ ಸ್ವಲ್ಪವಾದರೂ ವಿಶ್ವಾಸವಿಡದೆ ಅನೇಕ ವಿಧವಾದ ಕಷ್ಟಗಳಿಗೆ ಗುರಿಮಾಡಿದನು.

ಇಂದಿರೆಯನ್ನು ಹೇಗೆ ಹೊರಡಿಸಬೇಕೆಂದು ಉದಯಪುರಿಯು ಸ್ವಲ್ಪ ಯೋಚಿಸಿದಳಾದರೂ ಆಕೆಯನ್ನು ಹೊರಡಿಸುವುದು ದುಸ್ತರವೆಂದು ಸುಮ್ಮನಾದಳು. ಆ ಸುಂದರೀಮಣಿಯು ಬಾದಶಹನ ಕಣ್ಣಿಗೆ ಬಿದ್ದುದೇ ಆದರೆ, ಎಂದಾದರೂ ಆತನು ಮದುವೆ ಮಾಡಿಕೊಳ್ಳದಿರಲಾರನೆಂದು ತಿಳಿದು ಬಾದಶ

ಹಸಿಗೆ ಕಾಣಿಸದಂತೆ ಆಕೆಯನ್ನು ಜನಾನಾದಿಂದ ಹೊರಕ್ಕೆ ಬರಗೊಡಿಸದೆ ಆಕೆಗೆ ಸುಲಭವಾದ ಕೆಲಸಗಳನ್ನೇ ನೇಮಿಸುತ್ತ ತನ್ನ ಅಂತಃಪುರದಲ್ಲಿ ಒಂದು ಕಿರುಮನೆಯನ್ನು ಕೊಟ್ಟು ಆಕೆಯನ್ನು ಅಲ್ಲಿಯೇ ಇರಿಸಿಕೊಂಡಿದ್ದಳು. ಅಂದಿನಿಂದಲೂ ಇಂದಿರೆಯು ಅಂತಃಪುರದ ಒಳಭಾಗದಲ್ಲಿ ಸಂಚರಿಸಬೇಕಾಯಿತೇ ಹೊರತು, ಹೊರಗೆ ಬರಲು ಸ್ವಲ್ಪವಾದರೂ ಅವಕಾಶವಿಲ್ಲದೆ ಹೋಯಿತು. ಹೀಗೆ ಆವಾಗಲೂ ಅಂತಃಪುರದಲ್ಲಿಯೇ ಇದ್ದರೂ ಉದಯಪುರಿಯು ಮುಟ್ಟಿದ ಪದಾರ್ಥಗಳನ್ನು ಇಂದಿರೆಯು ಮುಟ್ಟುತ್ತಿರಲಿಲ್ಲ. ಉದಯಪುರಿಗೆ ಸೇವೆಮಾಡಿದ ಮೇಲೆ ತನ್ನ ಕಿರುಮನೆಗೆ ಹೋಗಿ ಸ್ನಾನಮಾಡಿಯೇ ಊಟಮಾಡುತ್ತಿದ್ದಳು. ಈ ಕಾರಣದಿಂದ ಉದಯಪುರಿಯು ಒಂದು ದಿನ ಇಂದಿರೆಯನ್ನು ಕುರಿತು,—"ಏನೆ, ನಾನು ಮುಟ್ಟಿದುದನ್ನು ನೀನು ತಿನ್ನುವುದಿಲ್ಲವಂತೆ; ಏಕೆ? ನಾನಷ್ಟು ನೀಚಳೋ ?"

ಇಂದಿರೆ.—ಅಮ್ಮಾ! ಉತ್ತಮ ರಜಪೂತ ಸ್ತ್ರೀಯರು, ಅಪ್ರತ್ಯಕ್ಷವಾಗಿ, ಜಾತಿಭ್ರಷ್ಟರ ಸಂಸರ್ಗವನ್ನು ಮಾಡಿದವರು ಮುಟ್ಟಿದುದನ್ನು ಕೂಡ ಮುಟ್ಟುವುದಿಲ್ಲ.

ಉದಯ —. ಎಲೆ, ಇನ್ನು ಕೆಲವು ದಿನಗಳಲ್ಲಿಯೇ ನಿನ್ನನ್ನು ಜಾತಿಗೆಡಿಸಿ ಒಬ್ಬ ತುರುಕ ಸೇವಕನಿಗೆ ಮದುವೆಮಾಡಿ ನಿನ್ನ ಅಹಂಕಾರವನ್ನು ಮುರಿಯದಿದ್ದರೆ ನಾನು ಉದಯಪುರಿಯೇ ಅಲ್ಲ! ಪವಿತ್ರವಾದ ಮಹಮ್ಮದೀಯ ವಂಶವನ್ನು ನಿಂದಿಸಿದ ನಿನಗೆ ಇದೇ ಶಿಕ್ಷೆ' ಯೆಂದು ಹೇಳಿ, ಮಸಾವದನ ಕಡೆಗೆ ತಿರುಗಿ ನೋಡಿ, "ಎಲೋ, ಮಸಾವದಾ! ಈ ಇಂದಿರೆಯನ್ನು ಮದುವೆ ಮಾಡಿಕೊಳ್ಳುವೆಯಾ ?" ಎಂದು ನಗುತ್ತ ಪರಿಹಾಸ ಮಾಡಿದಳು. ಈ ಮಾತನ್ನು ಕೇಳಿ, ಮಸಾವದನು ತಲೆಬಗ್ಗಿಸಿಕೊಂಡು ಸುಮ್ಮನೆ ನಿಂತನು. ಅಂದಿನಿಂದಲೂ ಆತನು ಇಂದಿರೆಯನ್ನು ತನಗೆ ನಿಶ್ಚಯವಾಗಿ ಮದುವೆಮಾಡುವಳೆಂದು ಆಶೆಯನ್ನಿಟ್ಟುಕೊಂಡು ಉದಯಪುರಿಯಲ್ಲಿ ಮತ್ತಷ್ಟು ಭಕ್ತಿವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದನು.

ಹೀಗೆ ಮೋಹಪಿಶಾಚವು ಆವೇಶಿಸಿದಂದಿನಿಂದಲೂ ಮಸಾವದನು ಉದಯಪುರಿಗೆ ಮುಖ್ಯಸೇವಕನಾಗಿ ಇಂದಿರೆಯನ್ನು ಎಡೆಬಿಡದೆ ಅನುವರ್ತಿಸುತ್ತಿದ್ದನು. ಆವಾಗಲಾದರೂ ಮಾರ್ಗಮಧ್ಯದಲ್ಲಿ ಇಂದಿರೆಯು ಕಣ್ಣಿಗೆ ಬಿದ್ದರೆ ಅವಳ ಸೌಂದರ್ಯವನ್ನು ರೆಪ್ಪೆಬಡಿಯದೆ ನೋಡುತ್ತ ತನಗೆ ಇಂತಹ ಸೌಂದರ್ಯವತಿಯಾದ ಹೆಂಡತಿ ದೊರೆಯುವಳೆಂದು ತುಂಬ ಸಂತೋಷಪಡುತ್ತಿದ್ದನು.

ಉದಯಪುರಿಯು ಇಂದಿರೆಯನ್ನು ಸರ್ವದಾ ದ್ವೇಷಿಸುತ್ತ ಆಕೆಯನ್ನು ಹೊರಡಿಸುವ ಪ್ರಯತ್ನದಲ್ಲಿದ್ದರೂ ಆಗಾಗ ಆಕೆಯನ್ನು ಕರೆಯಿಸಿ ಆಕೆಯೊಡನೆ ಸಂಭಾಷಿಸುತ್ತ ಕಾಲವನ್ನು ಕಳೆಯುತ್ತಿದ್ದಳು. ಆ ಸಮಯದಲ್ಲಿ ಇಂದಿರೆಯು ಸಂದರ್ಭಾನುಸಾರವಾಗಿ ಪೂರ್ವರಾಜರ ಚಿತ್ರ ಚರಿತ್ರಗಳನ್ನೂ ಶತ್ರುಗಳ ಮುತ್ತಿಗೆಯಿಂದ ತಾನು ಚಂದ್ರಾವತಿಯನ್ನು ತಪ್ಪಿಸಿದ ಅದ್ಭುತ ವಿಷಯವನ್ನೂ ಹೇಳುತ್ತ ಆಕೆಗೆ ಆಶ್ಚರ್ಯವನ್ನುಂಟು ಮಾಡುತ್ತಿದ್ದಳು. ಈಕೆಯ ಅದ್ಭುತಕಾರ್ಯಗಳನ್ನೂ ಬುದ್ಧಿಚಾತುರ್ಯಗಳನ್ನೂ ತಿಳಿದುದು ಮೊದಲು ಉದಯಪುರಿಯು ಇಂದಿರೆಯಲ್ಲಿ ಸ್ವಲ್ಪ ಅಭಿಮಾನವನ್ನಿಟ್ಟು ಸ್ನೇಹದಿಂದಿದ್ದಳು. ಈ ರೀತಿಯಾದ ಸಂಭಾಷಣೆಗಳಿಂದ ಕಾಲವನ್ನು ಕಳೆಯುತ್ತಿರಲು ಒಂದು ದಿನ ಉದಯಪುರಿಯು ಇಂದಿರೆಯೊಡನೆ ಮಾತನಾಡುತ್ತ— "ಇಂದಿರಾ! ರೂಪನಗರಾಧೀಶನಂತೆ! ಆತನ ಹೆಸರು ವಿಜಯಸಿಂಹನಂತೆ! ಆತನಿಗೆ ವಿಮಲಾದೇವಿಯೆಂಬ ಮಗಳಿರುವಳಂತೆ, ಆಕೆಯನ್ನು ನೀನು ನೋಡಿರುವೆಯಾ?" ಎಂದು ಕೇಳಿದಳು. ಆ ಮಾತಿಗೆ ಇಂದಿರೆಯು "ಓಹೋ! ವಿಮಲಾದೇವಿಯು ನನಗೆ ಗೊತ್ತಿಲ್ಲವೆ? ಸೌಂದರ್ಯ, ಸೌಕುಮಾರ್ಯ, ಗಾಂಭೀರ್ಯ, ವಿದ್ಯಾಬುದ್ಧಿ, ಜಾಣ್ಮೆ ಮೊದಲಾದುವುಗಳಲ್ಲಿ ಆಕೆಗೆ ಸಮಾನರನ್ನು ನಾನು ನೋಡಿಲ್ಲ." ಎಂದು ಉತ್ತರವನ್ನಿತ್ತಳು.

ಉದಯ—ಆಕೆ, ಅಷ್ಟು ಸುಂದರಿಯೆ? ಇಷ್ಟು ದಿನಗಳೂ ನನಗೆ ಹೇಳಲೇ ಇಲ್ಲವೇಕೆ?

ಇಂದಿರೆ.—ಅಮ್ಮಾ ! ಆಕೆಯ ವಿಚಾರವು ನಿಮಗೆ ಗೊತ್ತಿಲ್ಲ. ಆಕೆಯ ಸೌಂದರ್ಯವನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಆಕೆಯನ್ನು ನೋಡಿದುದೇ ಆದರೆ ನಿಮ್ಮ ಫಕೀರರೂ ಸಹ ಮೋಹಾಂಧರಾಗಿ ಪರಿತಪಿಸದಿರರು.

ಇಂದಿರೆಯ ಈ ಉತ್ತರವನ್ನು ಕೇಳಿ ಉದಯಪುರಿಯ ಮನಸ್ಸಿಗೆ ಮತ್ತೊಂದು ಹೊಸವಿಚಾರವು ಹೊಳೆಯಿತು. ಸಾದತ್‌ಖಾನನು ರೂಪನಗರವನ್ನು ಮುತ್ತಿ ವಿಮಲಾದೇವಿಯನ್ನು ಹಿಡಿದು ತಂದ ಕೂಡಲೆ ಅಂತಹ ಅನನ್ಯ ಸಾಮಾನ್ಯ ಲಾವಣ್ಯಾತಿಶಯದಿಂದ ಪ್ರಕಾಶಿಸುತ್ತಿರುವ ವಿಮಲಾದೇವಿಯನ್ನು ಆತನು ಮದುವೆಯಾಗದೆ ಬಿಡನೆಂದೂ ಸಾಮಾನ್ಯಸುಂದರಿಯರು ಆತನಕೈಯಲ್ಲಿ ಸಿಕ್ಕಿದರೂ ಆತನು ಬಿಡಲಾರನೆಂದಮೇಲೆ ಅನನ್ಯ ಸುಂದರಿಯಾದ ರಾಜಕನ್ಯೆಯು ಸಿಕ್ಕಿದುದೇ ಆದರೆ ಬಾದಶಹನು ಬಿಡುವನೆ ! ಎಂದೂ ಹೀಗೆ ಉದಯಪುರಿಯ ಮನಸ್ಸು ನಿರಂತರವೂ ಚಿಂತಾಕ್ರಾಂತವಾಗಿತ್ತು. ವಿಮಲೆಯು ಬರೆದ ಕಾಗದವೇ ತನ್ನ ಪ್ರಾಣವನ್ನು ತೆಗೆಯುವುದೆಂದೂ ಕಾಗದವನ್ನು ನೋಡಿದಮೇಲಾದರೂ ಸುಮ್ಮನಿರದೆ ಬಾದಶಹನಿಗೆ ಏಕೆ ತೋರಿಸಿದೆನೆಂದೂ ತಿಳಿಸಿದರೂ ನಾನೇಕೆ ರೋಷವನ್ನು ವಹಿಸಿದೆನೆಂದೂ ರೋಷವನ್ನು ವಹಿಸಿದರೂ ವಿಮಲೆಯನ್ನು ತರಲೇ ಬೇಕೆಂದು ಬಾದಶಹನಿಗೆ ನಾನೇಕೆ ಹೇಳಿದೆನೆಂದೂ ಉದಯಪುರಿಯು ತಾನು ಮಾಡಿದ ಅವಿವೇಕ ಕಾರ್ಯಗಳನ್ನು ಸ್ಮರಿಸಿಕೊಳ್ಳುತ್ತ ದುಃಖಿತೆಯಾದಳು. ಆದರೂ ವಿಮಲೆಯನ್ನು ತನ್ನ ಪರಿಚಾರಕನಾದ ಮಸಾವದನಿಗೆ ಮದುವೆಮಾಡಿ ಆಕೆಯನ್ನು ಅವಮಾನಪಡಿಸಬೇಕೆಂದು ಆಕೆಗೆ ಅಭಿಪ್ರಾಯವಿದ್ದುದರಿಂದ ಒಂದುವೇಳೆ ವಿಮಲೆಯು ಬಂದುದೇ ಆದರೆ ತತ್‌ಕ್ಷಣವೇ ಮಸಾವದನಿಗೆ ಆಕೆಯನ್ನು ಮದುವೆಮಾಡಿಬಿಟ್ಟರೆ ತನಗೆ ಆವ ಭಯವೂ ಉಂಟಾಗುವುದಿಲ್ಲ. ಹೀಗೆ ನಿರ್ಧರಿಸಿ, ತನ್ನ ಉಪಾಯಕ್ಕೆ ತಾನೇ ಸಂತೋಷಪಡುತ್ತ ಇಂದಿರೆಯೊಡನೆ ಮಾತನಾಡುತ್ತ ಕಾಲವನ್ನು ಕಳೆಯುತ್ತಿದ್ದಳು.

---

ಶ್ರೀ.

# ಹದಿನೈದನೆಯ ಪ್ರಕರಣ.

(ಡಿಲ್ಲೀನಗರ.)

ಡಿಲ್ಲೀನಗರವು ಪೂರ್ವದಲ್ಲಿ ಹಸ್ತಿನಾಪುರವೆಂದು ಕರೆಯಲ್ಪಡುತ್ತಿದ್ದಿತು. ಯುಧಿಷ್ಠಿರ ರಾಜನ ರಾಜ್ಯಾಭಿಷೇಕದಿಂದ ಮೊದಲ್ಗೊಂಡು ಮೊಗಲಾಯಿ ಪ್ರಭುತ್ವಾಂತ್ಯದ ವರೆಗೂ ಈ ನಗರವು ನಮ್ಮ ಹಿಂದೂದೇಶಕ್ಕೆಲ್ಲ ರಾಜಧಾನಿಯಾಗಿದ್ದಿತು. ಈ ನಗರದ ಚರಿತ್ರೆಯು ಹಿಂದೂ ದೇಶದ ಚರಿತ್ರೆಯೊಡನೆ ಹೆಚ್ಚು ಸಂಬಂಧವುಳ್ಳುದಾಗಿದೆ. ಆವ ಪ್ರಸಿದ್ಧನಗರವು ಮಹಾಪರಾಕ್ರಮಶಾಲಿಗಳಾದ ರಾಜಾಧಿರಾಜರಿಗೆ ರಾಜಧಾನಿಯಾಗಿದ್ದಿತೊ ಯಾವ ನಗರದಲ್ಲಿ ಜನರಿಗೆ ವಿಶೇಷ ಪ್ರೀತಿಯಿರುವುದೋ ಯಾವ ನಗರವು ಭಾಗ್ಯಲಕ್ಷ್ಮಿಗೆ ಆವಾಸಸ್ಥಾನವಾಗಿರುವುದೋ ಅಂತಹ ಪಟ್ಟಣದಲ್ಲಿಯೇ ಎಲ್ಲಾ ಉತ್ಸವಗಳನ್ನು ನಡೆಯಿಸಬೇಕೆಂದು ಪಾಶ್ಚಿಮಾತ್ಯರಾದ ಆಂಗ್ಲಪ್ರಭುಗಳು ೧೮೭೭ನೆ ವರ್ಷದಲ್ಲಿ "ಚಕ್ರವರ್ತಿನಿ" ಎಂಬ ಬಿರುದಾಂಕಿತೆಯರಾದ ಶ್ರೀಮದ್ವಿಕ್ಟೋರಿಯಾ ಮಹಾರಾಣಿಯವರ ಪಟ್ಟಾಭಿಷೇಕ ಮಹೋತ್ಸವವನ್ನೂ ೧೯೦೨ನೆ ಇಸವಿಯಲ್ಲಿ ಪ್ರಜಾಪರಿಪಾಲನಾನಿಪುಣರಾಗಿದ್ದ ಶ್ರೀ ಎಡ್ವರ್ಡ್ ಚಕ್ರವರ್ತಿಗಳವರ ಪಟ್ಟಾಭಿಷೇಕ ಮಹೋತ್ಸವವನ್ನೂ ಡಿಲ್ಲೀನಗರದಲ್ಲಿ ಅತ್ಯಂತ ಮಹೋತ್ಸವದಿಂದ ನಡೆಯಿಸಿದರು. ಮೊಗಲಾಯಿ ಪ್ರಭುತ್ವಾಂತ್ಯದಿಂದ ಮೊದಲು ೧೯೧೨ನೆಯ ಇಸವಿಯ ವರೆಗೂ ಈ ನಗರವು ನಮ್ಮ ಹಿಂದೂದೇಶಕ್ಕೆ ರಾಜಧಾನಿಯಾಗಿರಲಿಲ್ಲ. ಈಗ ನಮ್ಮನ್ನು ಪಾಲಿಸುತ್ತಿರುವ ಶ್ರೀ ಜಾರ್ಜ್‌ಮಹಾಚಕ್ರವರ್ತಿಗಳವರ ಪಟ್ಟಾಭಿಷೇಕ ಮಹೋತ್ಸವವು ೧೯೧೨ನೆ ಡಿಶೆಂಬರ್ ೧೨ನೆ ತಾರೀಖಿನಲ್ಲಿ ಡಿಲ್ಲೀನಗರದಲ್ಲಿ ನಡೆಯಿಸ

ಲ್ಪಟ್ಟು ಅಂದಿನಿಂದಲೂ ಈ ಮಹಾನಗರವು ನಮ್ಮ ಹಿಂದೂದೇಶಕ್ಕೆಲ್ಲ ರಾಜಧಾನಿಯಾಗಿ ಮಾಡಲ್ಪಟ್ಟಿತು.

ಈ ಡಿಲ್ಲೀನಗರವು ಸಮಸ್ತ ವಿದ್ಯೆಗಳಿಗೂ ನಿವಾಸಸ್ಥಾನವೆಂದು ಹೇಳಬಹುದು. ಅಲ್ಲಿಯ ಕೈಕೆಲಸಗಳನ್ನೂ ಚಿತ್ರಗಾರರ ಚಾತುರ್ಯವನ್ನೂ ವರ್ಣಿಸಲು ಅಸಾಧ್ಯವು. ಎಂತಹ ದರಿದ್ರನಾದರೂ ಆವುದಾದರೊಂದು ವಿದ್ಯೆಯನ್ನು ಕಲಿತು ಡಿಲ್ಲಿನಗರವನ್ನು ಸೇರಿ ಅಲ್ಲಿ ಕೆಲವು ದಿನಗಳು ವಾಸಮಾಡಿದರೆ, ಆತನ ದಾರಿದ್ರ್ಯವು ಇಂಗಿ ಹೋಗುವುದರಲ್ಲಿ ಸಂದೇಹವಿಲ್ಲ. ಈ ನಗರದ ರಾಜಬೀದಿಗಳು ಅತಿ ದೀರ್ಘವಾಗಿಯೂ ತಕ್ಕಷ್ಟು ವಿಶಾಲವಾಗಿಯೂ ನಾನಾವಿಧವಾಗಿ ಪ್ರತಿಮೆಗಳಿಂದ ಚಿತ್ರಿಸಲ್ಪಟ್ಟು ಹಲವು ಬಣ್ಣಗಳಿಂದ ಶೃಂಗರಿಸಲ್ಪಟ್ಟ ಸೌಧಗಳುಳ್ಳದಾಗಿ ನೋಟಕರಿಗೆ ನೇತ್ರಾನಂದಕರವಾಗಿಯೂ ಇರುವುವು. ಸಕಲ ಜೀವರಾಶಿಗಳನ್ನೂ ತಮ್ಮ ಗಾನವಿದ್ಯೆಯಿಂದ ಆನಂದಪಡಿಸುವ ಗಾನವಿದ್ಯಾವಿಶಾರದರಿಂದ ಈ ನಗರವು ಅಲಂಕರಿಸಲ್ಪಟ್ಟು ಗಂಧರ್ವಲೋಕವನ್ನು ಕೂಡ ತಿರಸ್ಕರಿಸುವಂತಿರುವುದು. ಔರಂಗಜೇಬನ ಕಾಲದಲ್ಲಿ ಈ ನಗರವು ಮತ್ತೂ ವಿಶೇಷ ಶೃಂಗಾರದಿಂದಲೂ ಔದಾರ್ಯದಿಂದಲೂ ಕೂಡಿ ನೋಟಕಾರರಿಗೆ ಆನಂದದಾಯಕವಾಗಿ ಎಷ್ಟು ಸುತ್ತಿದರೂ ಸ್ವಲ್ಪವಾದರೂ ಆಯಾಸವನ್ನುಂಟುಮಾಡದೆ ಆಶ್ಚರ್ಯ-ಕೌತುಕ-ಉತ್ಸಾಹಗಳನ್ನು ಹೆಚ್ಚುಮಾಡುತ್ತಿದ್ದಿತು.

ಒಂದುದಿನ ಸಾಯಂಕಾಲ ೪ ಘಂಟೆ ಸಮಯದಲ್ಲಿ ಒಬ್ಬ ಮಾರ್ಗಸ್ಥನು ಡಿಲ್ಲೀನಗರದ ಒಂದಾನೊಂದು ರಾಜವೀಧಿಯಲ್ಲಿ ಹೋಗುತಿದ್ದನು. ಆತನು ಯಾರೋ, ಎಲ್ಲಿಂದ ಬಂದನೋ, ತಿಳಿದವರೊಬ್ಬರೂ ಇಲ್ಲವಾದರೂ ಹರಿದುಹೋಗಿದ್ದ ವಸ್ತ್ರಗಳನ್ನುಟ್ಟುಕೊಂಡಿದ್ದುದರಿಂದ ಆತನನ್ನು ಬಡವನೆಂದು ಹೇಳಬಹುದಾಗಿತ್ತು. ಶರೀರವೆಲ್ಲ ಬೆವತು ಉಟ್ಟಿದ್ದ ಬಟ್ಟೆಗಳು ನೆನೆದುಹೋಗಿದ್ದುದರಿಂದ ಆತನು ಬಹುದೂರದಿಂದ ಬಂದಿರುವನೆಂಬದಾಗಿ ಗ್ರಹಿಸಬಹುದಾಗಿತ್ತು. ಆ ಪಟ್ಟಣದ ಆವ ಚಿತ್ರವನ್ನೂ ನೋಡದೆ ತಲೆಯನ್ನು ಬಗ್ಗಿಸಿಕೊಂಡು

ತನ್ನ ದಾರಿಯಲ್ಲಿಯೇ ಹೋಗುತ್ತಿದ್ದುದರಿಂದ ಆತನು ಡಿಲ್ಲೀನಗರಕ್ಕೆ ಹೊಸಬನಲ್ಲವೆಂದೂ ಚಿರಪರಿಚಿತನೆಂದೂ ಹೇಳಬಹುದು. ಆವಕಾರಣದಿಂದಲೋ ಆ ಪಾಂಥನು ಮಾರ್ಗದಲ್ಲಿ ಹೋಗುವವರೊಬ್ಬರನ್ನೂ ನೋಡದೆ, ಒಬ್ಬರನ್ನೂ ಮಾತನಾಡಿಸದೆ ತನ್ನ ದಾರಿಯನ್ನೇ ಹಿಡಿದು ಸ್ವಲ್ಪ ವೇಗವಾಗಿಯೇ ಹೋಗುತ್ತಿದ್ದನು. ಆತನ ಮುಖಲಕ್ಷಣಗಳನ್ನು ನೋಡಿದವರು ಆತನು ಮಾರವಾಡ ದೇಶಸ್ಥನೆಂದು ತಿಳಿದುಕೊಂಡರೂ ಆತನು ಧರಿಸಿದ್ದ ವಸ್ತ್ರಗಳು ಮಾತ್ರ ಸ್ವಲ್ಪ ಸಂದೇಹವನ್ನುಂಟುಮಾಡುತ್ತಿದ್ದವು. ಕ್ರಮಕ್ರಮವಾಗಿ ಆತನು ರಾಜಾವೀಧಿಗಳೆಲ್ಲವನ್ನೂ ದಾಟಿ, ಸಣ್ಣಬೀದಿಗಳಲ್ಲಿ ಹೋಗುತ್ತಿದ್ದನು. ಆತನು ಯಾರ ಮನೆಗೆ ಹೋಗಬೇಕೆಂದಿದ್ದನೆಂಬುದು ಒಬ್ಬರಿಗೂ ತಿಳಿಯದು. ಐಯ್ದು ಘಂಟೆಯ ವರೆಗೂ ಆ ಪಾಂಥನು ನಡೆಯುತ್ತಲೇ ಇದ್ದನು. ಆರನ್ನೂ ದಾರಿಕೇಳದೆ ಹೋಗುತ್ತಿದ್ದುದರಿಂದ ತಾನು ಸೇರಬೇಕಾದ ಸ್ಥಳದ ಮಾರ್ಗವನ್ನು ತಪ್ಪಿ ಸುಮ್ಮನೆ ತಿರುಗುತ್ತಿದ್ದನೆಂದು ನಾವು ಊಹಿಸಬಹುದು. ಹೀಗೆ ಹೋಗುತ್ತಿದ್ದ ಪಾಂಥನು ಡಿಲ್ಲೀನಗರಕ್ಕೆ ಕಟ್ಟಕಡೆಯಲ್ಲಿದ್ದ ಒಂದು ಸಣ್ಣ ಕೇರಿಯನ್ನು ಪ್ರವೇಶಿಸಿದನು.

ಆವಕಾರಣದಿಂದಲೋ ಆ ನಗರವಾಸಿಗಳು ಆ ಕೇರಿಯೊಳಕ್ಕೆ ವಿಶೇಷ ಹೋಗುತ್ತಿರಲಿಲ್ಲ. ಕೆಲವರು ಬಡವರು ಮಾತ್ರ ಆ ಕೇರಿಯ ೧ ೨ ಮನೆಗಳಲ್ಲಿ ವಾಸಮಾಡಿಕೊಂಡಿದ್ದರು. ಉಳಿದ ಮನೆಗಳು ಜನಸಂಚಾರವಿಲ್ಲದೆ ಅತ್ಯಂತ ಶಿಥಿಲವಾಗಿ ಕ್ರೂರ ಸರ್ಪಗಳಿಗೂ ಗಬ್ಬಿಲಗಳಿಗೂ ವಾಸಸ್ಥಾನವಾಗಿದ್ದವು. ಸೂರ್ಯಚಂದ್ರರು ಪಕ್ಷಪಾತವಿಲ್ಲದೆ ತಾಂಡವವಾಡುತ್ತಿದ್ದರು. ಮೇಘರಾಜನು ಕೂಡ, ಆ ಮನೆಗಳ ಮೇಲೆ ಅಧಿಕ ಅನುರಾಗವನ್ನಿಟ್ಟು ತನ್ನ ವರ್ಷಧಾರೆಗಳನ್ನು ಸುರಿಸುತ್ತಿದ್ದನು.

ನಮ್ಮ ಪಾಂಥನು ಬರುತ ಬರುತ್ತಾ ಆ ಕೇರಿಯ ಕೊನೆಯ ಭಾಗದಲ್ಲಿದ್ದ ಮನೆಯಮುಂದೆ ಬಂದು ನಿಂತನು. ಮನೆಬಾಗಿಲು ಮುಚ್ಚಲ್ಪಟ್ಟಿದ್ದುದರಿಂದ ಒಂದು ಸಲ ತಟ್ಟಿದನು. ಸ್ವಲ್ಪ ಹೊತ್ತಿಗೆ ಒಳಗಿನಿಂದ "ಯಾರ

ವರು ?'' ಎಂಬ ವೃದ್ಧ ಸ್ತ್ರೀಕಂಠಧ್ವನಿಯು ಕೇಳಿಸಿತು. ಪಾಂಥನು ಯಾವ ಕಾರಣದಿಂದಲೋ ತಾನಾರೆಂಬುದನ್ನು ಹೇಳದೆ ಬಾಗಿಲನ್ನು ಮಾತ್ರ ಸುಮ್ಮನೆ ತಟ್ಟುತ್ತಿದ್ದನು. ಇಷ್ಟರಲ್ಲಿ ಒಬ್ಬ ವೃದ್ಧ ಸ್ತ್ರೀಯು ಬಾಗಿಲುಗಳನ್ನು ತೆರೆದು ಸ್ವಲ್ಪಹೊತ್ತು ಆತನ ಮುಖವನ್ನು ನೋಡುತ್ತಿದ್ದು ಆಬಳಿಕ, ''ಎಷ್ಟುದಿವಸಗಳಿಗೆ ಒಂದೆಯಪ್ಪಾ ? ಇದೇಕೆ ಇಷ್ಟು ಕೃಶನಾಗಿರುವೆ ? ಒಂದು ಒಳ್ಳೆಯ ಬಟ್ಟೆಯೂ ಇಲ್ಲದೆ ಹೋಯಿತೆ ? ನಮ್ಮ ಹುಡುಗನ ಸಮಾಚಾರವೇನಾದರೂ ಗೊತ್ತಿದೆಯೋ ? ನಮ್ಮ ಹುಡುಗಿಯು ಕ್ಷೇಮವಾಗಿರುವಳೋ ? ಎಂಬುದಾಗಿ ನಗುತ್ತ ಅಭಿಮಾನ ಪೂರ್ವಕವಾಗಿ ಪ್ರಸಂಗಮಾಡಲಾರಂಭಿಸಿದಳು.'' ಅದಕ್ಕಾತನು ''ಅಮ್ಮಾ ! ನನ್ನ ಹೆಸರನ್ನು ಹಿಡಿದು ಕರೆಯಬೇಡ. ನಾನು ಈ ಪಟ್ಟಣಕ್ಕೆ ಬಂದಿರುವುದನ್ನು ಬಾದಶಹನು ತಿಳಿದುದಾದರೆ ಮೋಸವಾಗುವುದು. ಎಲ್ಲಾ ಸಂಗತಿಗಳನ್ನೂ ಆಮೇಲೆ ತಿಳಿಸುವೆನು. ಇಂದಿನಿಂದಲೂ ನನ್ನನ್ನು ಭೋಟುಸಿಂಗನೆಂದು ಕರೆಯುತ್ತಿರಬೇಕು.'' ಎಂದು ಹೇಳಿ ಮತ್ತೆ ''ಜ್ಯೇಷ್ಠಮಲ್ಲನು ಎಲ್ಲಿರುವನು ?'' ಎಂದು ಕೇಳಿದನು. ಅದಕ್ಕಾ ಮುದುಕಿಯು ''ಬಾಬೂ ! ಈಗ ತಾನೆ ಪಟ್ಟಣದೊಳಕ್ಕೆ ಹೋದನು. ನೀನು ಎದ್ದು ಸ್ನಾನಮಾಡು, ಅಡಿಗೆಯಾಗಿದೆ. ಆತನಿಗಾಗಿ ನೀನು ನಿರೀಕ್ಷಿಸಬೇಡ. ಅಯ್ಯೋ ಪಾಪ ! ಎಷ್ಟುದೂರದಿಂದ ನಡೆದುಬಂದಿರುವೆಯೋ ತಿಳಿಯದು. ಏಳು, ಏಳು'' ಎಂದು ತ್ವರೆಪಡಿಸಿದಳು.

ಸಾಧಾರಣವಾಗಿ ಲೋಕದಲ್ಲಿ ಸ್ತ್ರೀಯರ ಹೃದಯದಲ್ಲಿ ಎಂತಹ ರಹಸ್ಯವೂ ನಿಲ್ಲಲಾರದೆಂಬುದನ್ನು ನಮ್ಮ ಭೋಟುಸಿಂಗನು ತಿಳಿದಿದ್ದುದರಿಂದ ತನ್ನ ಅಜ್ಜಿಯೊಡನೆ ಯಾವ ರಹಸ್ಯವನ್ನೂ ಹೇಳದೆ ತನ್ನ ಮೂಟೆಯಲ್ಲಿದ್ದ ಅಂಗವಸ್ತ್ರವನ್ನು ತೆಗೆದುಕೊಂಡು ಸ್ನಾನಮಾಡಲು ಹೋದನು. ಅಷ್ಟರಲ್ಲಿ ಅಜ್ಜಿಯು ಅಡಿಗೆಯ ಮನೆಯಲ್ಲೊಂದು ಕಡೆ ಆತನಿಗೆ ಎಲೆ ಹಾಕಿ ಎಲ್ಲವನ್ನೂ ಬಡಿಸಿ ತುಪ್ಪದ ದೊನ್ನೆಯನ್ನು ಹಿಡಿದುಕೊಂಡು ಸಿದ್ಧವಾಗಿದ್ದಳು.

ಭೋಟುಸಿಂಗನು ಸ್ನಾನಾಹ್ನಿಕಗಳನ್ನು ಪೂರೈಸಿಕೊಂಡು ಬಡಿಸಿದ್ದ ಎಲೆಯ ಮುಂದೆ ಕುಳಿತು ಊಟಮಾಡಲು ತೊಡಗಿದನು. ಮಾರ್ಗಾಯಾಸದಿಂದ ಬಳಲಿದ್ದ ನಮ್ಮ ಭೋಟುಸಿಂಗನಿಗೆ ಊಟವು ಮತ್ತಷ್ಟು ಪ್ರಯಾಸವಾಯಿತು. ಕನಿಕರಹೃದಯಳಾದ ಅಜ್ಜಿಯು ಬಾರಿಬಾರಿಗೂ ಉಪಚಾರದ ಮಾತುಗಳನ್ನಾಡುತ್ತ ಊಟ ಮಾಡೆಂದು ಹೇಳುತ್ತಿದ್ದಳು. ಬಹು ಪ್ರಯಾಸದಿಂದ ಊಟಮಾಡಿ ಚಾವಡಿಯಲ್ಲಿದ್ದ ಮಂಟಪದ ಮೇಲೆ ಕುಳಿತು ಮುದುಕಿಯನ್ನು ಕುರಿತು—"ಅಜ್ಜೀ ! ನಾನು ಮಲಗುವೆನು, ಬೀದಿಯ ಬಾಗಿಲ ಕಡೆ ಸ್ವಲ್ಪ ದೃಷ್ಟಿಯಿರಲಿ ; ಜ್ಯೇಷ್ಠಮಲ್ಲನು ಬಂದೊಡನೆಯೇ ನನ್ನನ್ನು ಎಬ್ಬಿಸು" ಎಂಬುದಾಗಿ ಹೇಳಿ, ಆಯಾಸಪರಿಹಾರಕ್ಕಾಗಿ ಮಲಗಿದನು.

ರಾತ್ರಿ ಒಂಬತ್ತು ಘಂಟೆಗೆ ಜ್ಯೇಷ್ಠಮಲ್ಲನು ಮನೆಗೆ ಬಂದನು. ತಕ್ಷಣವೇ ಮಂಚದ ಮೇಲೆ ಮಲಗಿದ್ದ ಭೋಟುಸಿಂಗನನ್ನು ನೋಡಿ ಆನಂದಪಟ್ಟು—"ಈತನು ಆವಾಗ ಬಂದನು ?" ಎಂದು ಹತ್ತಿರದಲ್ಲಿದ್ದ ಮುದುಕಿಯನ್ನು ಕೇಳಿದನು. ಅದಕ್ಕಾಕೆ—"ಅಪ್ಪಾ ! ಈತನು ಬಂದು ಎರಡು ಘಳಿಗೆಯಾಗಿರಬಹುದು ; ಈಗ ತಾನೆ ಊಟಮಾಡಿ ಮಲಗಿರುವನು. ಪಾಪ ! ಸ್ವಲ್ಪ ಮಲಗಿರಲಿ, ಈಗಲೇ ಎಬ್ಬಿಸಬೇಡ ; ಬೆಳಗಾದಮೇಲೆ ಮಾತನಾಡಿಕೊಳ್ಳಿರಿ" ಎಂದು ಹೇಳಿ ಜ್ಯೇಷ್ಠಮಲ್ಲನಿಗೆ ಊಟಕ್ಕೆ ಬಡಿಸಿ ತಾನೂ ಸ್ವಲ್ಪ ಫಲಾಹಾರವನ್ನು ಮಾಡಿದಳು. ಭೋಜನಾನಂತರ ಇಬ್ಬರೂ ಭೋಟುಸಿಂಗನ ಹತ್ತಿರ ಕುಳಿತುಕೊಂಡು ಆತನ ವಿಷಯವಾಗಿ ಮಾತನಾಡಿಕೊಳ್ಳುತ್ತಿದ್ದರು. ಅಷ್ಟರಲ್ಲಿಯೇ ಭೋಟುಸಿಂಗನೂ ಎಚ್ಚತ್ತು ಹತ್ತಿರದಲ್ಲಿದ್ದ ಜ್ಯೇಷ್ಠಮಲ್ಲನನ್ನು ನೋಡಿ ಕ್ಷೇಮಸಮಾಚಾರವನ್ನು ಕೇಳಿದನು. ಜ್ಯೇಷ್ಠಮಲ್ಲನು ಕೂಡ ಆತನ ಆಗಮನಕ್ಕೆ ಸಂತೋಷಪಟ್ಟು, ಅಭಿಮಾನಪೂರ್ವಕವಾಗಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಆ ಬಳಿಕ ರಹಸ್ಯವಿಷಯಗಳನ್ನು ತಿಳಿಸಲು ಇಬ್ಬರೂ ಅಲ್ಲಿಂದ ಹೊರಟು, ಪಟ್ಟಣವನ್ನು ಬಿಟ್ಟು ನಿಶಾಸಮಯದಲ್ಲಿ ನಿರ್ಜನವಾಗಿದ್ದ ಒಂದು ದೇವಾಲಯವನ್ನು ಸೇರಿ, ಅಲ್ಲಿ ಆಡಬೇಕಾಗಿದ್ದ ಮಾತುಗಳನ್ನಾಡಿ ಮನೆಗೆ ಬಂದು ಮಲಗಿದರು.

ಬೆಳಗಾದ ಮೇಲೆ ಇಬ್ಬರೂ ಎದ್ದು ಪ್ರಾತಃಕೃತ್ಯಗಳನ್ನು ಮುಗಿಸಿಕೊಂಡು ಹೊಸ ಉಡುಪನ್ನು ಧರಿಸಿ ಯಾವುದೋ ಅಗತ್ಯದ ಕೆಲಸದ ಮೇಲೆ ಹೋಗಿ ಬೇಗ ಬರುವೆವೆಂದು ಹೇಳಿ ಹೊರಟುಹೋದರು.

ಜ್ಯೇಷ್ಠಮಲ್ಲನು ತನಗೆ ಮಿತ್ರನಾದ ಒಬ್ಬ ಚಿತ್ರಗಾರನ ಅಂಗಡಿಗೆ ಹೋಗಿ ತನ್ನ ಬಳಿಯಲ್ಲಿದ್ದ ಭೋಟುಸಿಂಗನನ್ನು ತೋರಿಸಿ,—"ಅಯ್ಯಾ! ಈತನು ಚಿತ್ರಬರೆಯುವುದರಲ್ಲಿಯೂ ಬಣ್ಣಹಾಕುವುದರಲ್ಲಿಯೂ ನಿರುಪಮಾನ ಪಾಂಡಿತ್ಯವುಳ್ಳವನಾಗಿರುವನು. ಬೇಕಾದರೆ ನೀನು ಈತನನ್ನು ನಿನ್ನ ಹತ್ತಿರ ಕೆಲಸಕ್ಕೆ ಇರಿಸಿಕೊಳ್ಳಬಹುದು." ಎಂದನು. ಚಿತ್ರಗಾರನು ಈ ಮಾತನ್ನು ಕೇಳಿ ಈತನನ್ನು ಪರೀಕ್ಷಿಸಬೇಕೆಂದು ಯೋಚಿಸಿ, ತಾನು ಅಂಗಡಿಯಲ್ಲಿ ಕುಳಿತುಕೊಂಡಿರುವಂತೆ ಒಂದು ಚಿತ್ರವನ್ನು ಬರೆ ಎಂದು ಭೋಟುಸಿಂಗನಿಗೆ ಹೇಳಿದನು. ಕೂಡಲೇ ಭೋಟುಸಿಂಗನು ತನ್ನ ಚಮತ್ಕಾರವೆಲ್ಲವನ್ನೂ ತೋರಿಸಿ, ಒಂದು ಕಾಗದದ ಮೇಲೆ ಚಿತ್ರಗಾರನನ್ನೂ ಆತನ ಅಂಗಡಿಯನ್ನೂ ಬರೆದು ಬಣ್ಣವನ್ನು ಹಾಕಿ ವರ್ತಕನಿಗೆ ಕೊಟ್ಟನು. ಚಿತ್ರಗಾರನು ಆ ಚಿತ್ರವನ್ನು ನೋಡಿ ಆಶ್ಚರ್ಯಸ್ವಾಂತನಾಗಿ—"ನಿಜ, ಈತನ ಸಾಮರ್ಥ್ಯವು ಶ್ಲಾಘ್ಯವೇ ಸರಿ!" ಎಂದು ತನ್ನೊಳಗೇ ಹೇಳಿಕೊಳ್ಳುತ್ತ ತನ್ನ ಉತ್ಸಾಹವನ್ನು ಹೊರಪಡಿಸಿದರೆ ಹೆಚ್ಚು ಸಂಬಳವನ್ನು ಕೇಳುವನೆಂದು ಭಾವಿಸಿ, ಜ್ಯೇಷ್ಠಮಲ್ಲನ ಕಡೆ ನೋಡಿ,—ಅಯ್ಯಾ! ಪ್ರತಿಮೆಗಳನ್ನು ಬರೆವುದರಲ್ಲಿ ಈತನಿಗೆ ಇನ್ನೂ ಅಭ್ಯಾಸವಿಲ್ಲದಿದ್ದರೂ ಇನ್ನು ಸ್ವಲ್ಪ ದಿನಗಳಲ್ಲಿಯೇ ಚೆನ್ನಾಗಿ ಕಲಿತುಕೊಳ್ಳುವನು. ಅಷ್ಟರವರೆಗೂ ಈತನಿಗೆ ತಿಂಗಳಿಗೆ ಒಂದು ರೂಪಾಯಿಯಂತೆ ಸಂಬಳವನ್ನು ಕೊಡುವೆನು. ನಿಮಗೆ ಇಷ್ಟವಿದ್ದರೆ ಈತನನ್ನು ನನ್ನ ಬಳಿಯಲ್ಲಿ ಬಿಡಬಹುದು ಎಂದನು. ಯಾವಕಾರಣದಿಂದಲೋ ಭೋಟುಸಿಂಗನು ಅತ್ಯಲ್ಪವಾದ ಸಂಬಳಕ್ಕೇ ಒಪ್ಪಿ ಆತನ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದನು.

ಆ ಅಂಗಡಿಯ ಯಜಮಾನನು ತಾನು ಬರೆದ ಚಿತ್ರಗಳನ್ನು ಅರಮನೆಗೆ ಕಳುಹಿಸಿ ಅಲ್ಲಿ ಆಗಾಗ ಬಹುಮಾನವನ್ನು ಹೊಂದುತ್ತಿದ್ದನು. ಜನಾನಾದಲ್ಲಿದ್ದವರು ತಮಗೆ ಬೇಕಾದ ಪ್ರತಿಮೆಗಳನ್ನು ಚಿತ್ರಿಸಬೇಕೆಂದು ಸೇವಕರೊಡನೆ ಹೇಳಿಕಳುಹುತ್ತ ಈತನು ಬರೆದ ಚಿತ್ರಪ್ರತಿಮೆಗಳನ್ನು ಕ್ರಯಕ್ಕೆ ತೆಗೆದುಕೊಂಡು ಬಹುಮಾನವನ್ನೂ ಕೊಡುತ್ತಿದ್ದರು. ಈ ಕಾರಣದಿಂದ ಚಿತ್ರಗಾರನಿಗೂ ಬಾದಶಹನ ಜನಾನಾದಲ್ಲಿದ್ದವರಿಗೂ ಸ್ವಲ್ಪ ಪರಿಚಯವುಂಟಾಗಿದ್ದಿತು. ಈತನು ಘೋಟುಸಿಂಗನ ಚಿತ್ರಕೌಶಲವನ್ನು ಚೆನ್ನಾಗಿ ತಿಳಿದು, ಅಂದಿನಿಂದಲೂ ದೊಡ್ಡದೊಡ್ಡ ಪ್ರತಿಮೆಗಳನ್ನೂ ಜನಾನಾಕ್ಕೆ ಸೇರಿದ ಪ್ರತಿಮೆಗಳನ್ನೂ ಆತನಿಂದಲೇ ಬರೆಯಿಸುತ್ತಿದ್ದನು. ಪಟ್ಟಣದಲ್ಲಿದ್ದ ಜನರೆಲ್ಲರೂ ಈತನ ಅಂಗಡಿಗೇ ಬಂದು ಚಿತ್ರಗಳನ್ನು ಬರೆಯಿಸಲು ಉಪಕ್ರಮಿಸಿದರು. ಕೆಲವು ದಿನಗಳಲ್ಲಿಯೇ ಈತನ ಹೆಸರು ಡಿಲ್ಲಿಯಲ್ಲೆಲ್ಲಾ ವ್ಯಾಪಿಸಿ, ಈತನ ವ್ಯಾಪಾರವು ಎಲ್ಲರಿಗೂ ಅಧಿಕವಾಯಿತು. ಡಿಲ್ಲೀನಗರದಲ್ಲಿದ್ದ ಚಿತ್ರಗಾರರೆಲ್ಲರೂ ತಮ್ಮ ಕುಲವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಅವಲಂಬಿಸಬೇಕಾಯಿತು.

ಘೋಟುಸಿಂಗನಿಗೆ ಕೊಡುತ್ತಿರುವ ಸಂಬಳವು ಅತ್ಯಲ್ಪವೆಂದು ಆಗಾಗ ವರ್ತಕನು ಯೋಚಿಸುತ್ತ ಇತರರು ಯಾರಾದರೂ ತನಗಿಂತಲೂ ಹೆಚ್ಚು ಸಂಬಳವನ್ನು ಕೊಡುವೆವೆಂದು ಹೇಳಿ ಘೋಟುಸಿಂಗನನ್ನು ಯಾವಾಗ ಕರೆದುಕೊಂಡು ಹೋಗುವರೋ ಎಂದು ಭಯಾಕುಲಚಿತ್ತನಾಗಿ ಒಂದುದಿನ ಘೋಟುಸಿಂಗನನ್ನು ಕುರಿತು ಹೀಗೆ ಹೇಳಿದನು :—

“ ಘೋಟುಸಿಂಗಾ ! ಪ್ರತಿಮೆಗಳನ್ನು ಬರೆವುದು ನಿನಗೆ ಅಭ್ಯಾಸವಾಯಿತು. ನನ್ನ ಅಂಗಡಿಯಲ್ಲಿಯೇ ನೀನು ಚೆನ್ನಾಗಿ ಕೆಲಸವನ್ನು ಕಲಿತುಕೊಂಡೆಯಾದುದರಿಂದ ಇನ್ನು ಹತ್ತು ವರ್ಷಗಳ ವರೆಗೂ ನನ್ನನ್ನು ಬಿಟ್ಟು ಮತ್ತೊಬ್ಬರ ಬಳಿಗೆ ಕೆಲಸಕ್ಕೆ ಹೋಗುವುದಿಲ್ಲವೆಂದು ಪತ್ರವನ್ನು ಬರೆದುಕೊಟ್ಟದ್ದೇ ಆದರೆ ನಿನಗೆ ಸಂಬಳವನ್ನು ಹೆಚ್ಚು ಮಾಡುವೆನು. ಈ ಅಂಗಡಿ

ಗೆಲ್ಲ ನಿನ್ನನ್ನೇ ಯಜಮಾನನನ್ನಾಗಿ ಮಾಡಿ ಕ್ರಮಕ್ರಮವಾಗಿ ಸಂಬಳವನ್ನು ಹೆಚ್ಚಿಸುವೆನು."

ಭೋಟುಸಿಂಗ್:—ಅಯ್ಯಾ ! ಹಾಗೆ ಪತ್ರವನ್ನು ಬರೆದುಕೊಡಲು। ಇದು ನನ್ನ ಸ್ವಂತಗ್ರಾಮವಲ್ಲ. ಕೆಲವು ಕಾರಣಗಳಿಂದ ನಾನು ಇಲ್ಲಿ ಬಂದಿರುವೆನು. ಇಲ್ಲಿ ನಾನು ಬಹಳ ದಿನಗಳೂ ಇರುವುದಿಲ್ಲ. ಆದರೆ, ನಾನು ಈ ಪಟ್ಟಣದಲ್ಲಿರುವವರೆಗೂ ನೀನು ಎಷ್ಟು ಸಂಬಳವನ್ನು ಕೊಟ್ಟರೂ ಸರಿಯೆ, ನಿನ್ನ ಅಂಗಡಿಯನ್ನು ಬಿಡುವವನಲ್ಲ. ನೀನು ಅನುಮಾನಿಸ ಬೇಡ."

ವರ್ತಕನು ಆತನ ಗಂಭೀರಭಾವ-ಸ್ಥಿರತೆ-ಉದಾರತನಗಳಿಗೂ ಆತನ ಕೃತಜ್ಞತೆಗೂ ತೃಪ್ತನಾಗಿ ತಿಂಗಳಿಗೆ ಎರಡು ರೂಪಾಯಿಯಂತೆ ಸಂಬಳ ವನ್ನು ಕೊಡುವೆನೆಂದು ಹೇಳಿದನು.

---

## ಹದಿನಾರನೆಯ ಪ್ರಕರಣ.

---

(ಮೊಗಲಾಯಿ ಜನಾನಾ)

ಪೂರ್ವದಲ್ಲಿ ಮೊಗಲಾಯಿ ಜನಾನಾ ಚಿತ್ರವಿಚಿತ್ರವಾಗಿದ್ದಿತು. ಘೋಷಾ ಹೆಂಗಸರಿಗೆ ಯಾವ ಕೊರತೆಯೂ ಇಲ್ಲದಂತೆ ಉದ್ಯಾನವನಗಳೂ ಸರಸ್ಸುಗಳೂ ಜನಾನಾದಲ್ಲಿಯೇ ಮನೋಹರವಾಗಿದ್ದುವು. ಉದಯಪುರಿಯ ಜನಾನಾದಲ್ಲಿಯೂ ರಮ್ಯವಾದ ಉದ್ಯಾನವನಗಳೂ ಸರಸ್ಸುಗಳೂ ಇದ್ದುವು. ಈಕೆಯ ಮಹಲಿನ ಉತ್ತರಕ್ಕೆ ಔರಂಗಜೇಬನ ತಂಗಿಯಾದ "ರೋಷನಾರಾ ಬೇಗಂ" ಎಂಬಾಕೆಯ ಜನಾನಾವಿದ್ದಿತು. ಸಾಮಾನ್ಯ

ವಾಗಿ ಜನಾನಾದಲ್ಲಿ ಪರಪುರುಷರ ಪ್ರವೇಶಕ್ಕೆ ಅವಕಾಶವೇ ಇರುವುದಿಲ್ಲ. ಉದಯಪುರಿಯ ಜನಾನಾಕ್ಕಿಂತಲೂ ರೋಷನಾರೆಯ ಜನಾನೆಯು ದುರ್ಗಮವೆನಿಸಿದ್ದಿತು.

ರೋಷನಾರೆಯು ಮಹಾಕ್ರೂರಸ್ವಭಾವದವಳು. ತಂದೆಯನ್ನೂ ಅಣ್ಣತಮ್ಮಂದಿರನ್ನೂ ಮೋಸಪಡಿಸಿ ರಾಜ್ಯವನ್ನು ಸಂಪಾದಿಸುವುದರಲ್ಲಿ ಔರಂಗಜೇಬನಿಗೆ ಬಹಳ ಸಹಾಯಮಾಡಿದಳು. ಈ ಕಾರಣದಿಂದ ಔರಂಗಜೇಬನು ಆಕೆಯ ಮೇಲೆ ತುಂಬ ಅಭಿಮಾನವಿಟ್ಟು, ಆಕೆಯ ಕೋರಿಕೆಗಳನ್ನೆಲ್ಲಾ ನೆರವೇರಿಸುತ್ತಿದ್ದನು. ಇಷ್ಟೇ ಅಲ್ಲ; ತಾನು ಕೂಡ ಆಕೆಯ ಅಪ್ಪಣೆಯಂತೆ ನಡೆದುಕೊಳ್ಳುತ್ತಿದ್ದನು. ಆದರೆ, ಔರಂಗಜೇಬನು ಉದಯಪುರಿಯನ್ನು ಮದುವೆಯಾದಂದಿನಿಂದಲೂ ರೋಷನಾರಳ ಅಧಿಕಾರವು ಸ್ವಲ್ಪ ತಗ್ಗಿತು. ಆದುದರಿಂದ ಉದಯಪುರಿಯ ಮೇಲೆ ಈಕೆಗೆ ದ್ವೇಷವುಂಟಾಯಿತು. ಕ್ರಮಕ್ರಮವಾಗಿ ಈ ದ್ವೇಷವು ಬಲಿತು ಉದಯಪುರಿಯನ್ನು ಹೇಗಾದರೂ ಮೋಸಪಡಿಸಬೇಕೆಂದು ಸಮಯವನ್ನು ನೋಡುತ್ತಿದ್ದಳು. ಈ ವಿಚಾರವು ಉದಯಪುರಿಗೆ ತಿಳಿದಮೇಲೆ ಆಕೆಯೂ ರೋಷನಾರಳ ಮೇಲೆ ದ್ವೇಷವನ್ನು ಬೆಳಸಿ ಸಮಯನಿರೀಕ್ಷೆಯಲ್ಲಿದ್ದಳು. ಹೀಗೆ ಪರಸ್ಪರ ದ್ವೇಷವು ಹೆಚ್ಚಿ, ಒಬ್ಬರ ಮಹಲನ್ನೊಬ್ಬರು ಪ್ರವೇಶಿಸಕೂಡದೆಂದೂ, ಹಾಗೆ ಯಾರಾದರೂ ಸೇವಕರು ತಿಳಿಯದೆ ಪ್ರವೇಶಿಸಿದರೆ ಕಠಿಣಶಿಕ್ಷೆಗೆ ಗುರಿಯಾಗುವಂತೆಯೂ ನಿರ್ಬಂಧವಾಯಿತು. ಒಂದೊಂದುಸಲ ಇವರ ವಿವಾದವನ್ನು ಔರಂಗಜೇಬನೇ ತೀರ್ಮಾನಮಾಡುತ್ತಿದ್ದನು. ಕಾರ್ಯೋಪಾಯಗಳನ್ನು ಚೆನ್ನಾಗಿ ಬಲ್ಲವನಾಗಿದ್ದುದರಿಂದ, ಈತನು ಯಾರ ಮೇಲೆಯೂ ತಪ್ಪನ್ನು ಹೊರಿಸದೆ ಸರಿಯಾಗಿ ತೀರ್ಮಾನಿಸುತ್ತಿದ್ದನು. ಉದಯಪುರಿಯು ತನ್ನ ಪಟ್ಟಮಹಿಷಿಯಾದುದರಿಂದಲೂ, ರೋಷನಾರಳು ತನ್ನ ತಂಗಿಯಾಗಿ ಅತ್ಯಂತ ಸಹಾಯಕಳಾಗಿದ್ದುದರಿಂದಲೂ ಇವರಿಬ್ಬರಲ್ಲಿ ಯಾರ ಪಕ್ಷವನ್ನೂ ವಹಿಸದೆ, ಉಪಾಯದಿಂದ ವಿವಾದವನ್ನು ಹೋಗಲಾಡಿಸುತ್ತಿದ್ದನು.

ಒಂದು ದಿನ ಭೋಟುಸಿಂಗನು ಉದಯಪುರಿಯ ಜನಾನಾವನ್ನು ಪ್ರವೇಶಿಸಬೇಕೆಂದು ನಿಶ್ಚಯಿಸಿಕೊಂಡನು. ವರ್ತಕನು ಸಂಬಳವನ್ನು ಹೆಚ್ಚು ಮಾಡಿದಂದಿನಿಂದಲೂ ಈತನು ಕೆಲಸಗಳನ್ನೂ ಹೆಚ್ಚಾಗಿ ಮಾಡುತ್ತಿದ್ದನು. ವರ್ತಕನು ಮೊದಲಿಗಿಂತಲೂ ಪ್ರತಿಮೆಗಳ ಬೆಲೆಯನ್ನು ಹೆಚ್ಚಿಸಿ, ವಿಕ್ರಯಿಸುತ್ತ ಕೆಲವು ಕಾಲದಲ್ಲಿಯೇ ದೊಡ್ಡ ಹಣಗಾರನೆನ್ನಿಸಿಕೊಳ್ಳುವಂತಾದನು. ತನ್ನ ಜೀವನವು ಭೋಟುಸಿಂಗನಿಂದಲೇ ನಡೆಯುತ್ತಿದ್ದುದರಿಂದ, ಈತನು ಯಾವಾಗ ಕೈಬಿಡುವನೋ ಎಂದು ವರ್ತಕನು ಭಯಪಡುತ್ತ, ಒಂದುವೇಳೆ ಈತನು ಕೇಳಿದಷ್ಟು ಸಂಬಳವನ್ನಾದರೂ ಕೊಟ್ಟು ತನ್ನ ಹತ್ತಿರದಲ್ಲಿಯೇ ಉಳಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದನು. ವರ್ತಕನ ಈ ವಿಧವಾದ ಅಭಿಪ್ರಾಯವನ್ನು ತಿಳಿದು ಭೋಟುಸಿಂಗನು ಒಂದು ದಿನ ವರ್ತಕನನ್ನು ಕುರಿತು—"ಅಯ್ಯಾ! ದಂತದ ಹಲಗೆಯ ಮೇಲೆ ಈ ರೀತಿ ಚಿಕ್ಕಚಿಕ್ಕ ಪ್ರತಿಮೆಗಳನ್ನು ಕೆತ್ತಿ ಎಷ್ಟು ಮಾರಿದರೂ ನಮಗೆ ಲಾಭವು ಬರುವುದಿಲ್ಲ. ನೀನು ಅಪ್ಪಣೆಕೊಟ್ಟಿಯಾದರೆ ನನ್ನ ಚಾತುರ್ಯವನ್ನೆಲ್ಲ ವೆಚ್ಚಮಾಡಿ ಒಂದು ಸೊಗಸಾದ ದಂತದ ಬೀಸಣಿಗೆಯನ್ನು ಮಾಡಿ, ಔರಂಗಜೇಬ ಬಾದಶಹರಿಗೆ ಒಪ್ಪಿಸಿ, ಅವರಿಂದ ಸಮೃದ್ಧಿಯಾಗಿ ಬಹುಮಾನವನ್ನು ತೆಗೆದುಕೊಂಡು ಬಂದು ನಿಮಗೆ ಕೊಡುವೆನು." ಎಂದು ಹೇಳಿದನು.

ವರ್ತಕನು—"ಅಯ್ಯಾ! ನಮ್ಮ ಬಾದಶಹರು ಇಂತಹ ಕೆಲಸಗಳಿಗೆಲ್ಲ ಸಂತೋಷಪಡುವವರಲ್ಲ. ಈಗ ಈ ಕೆಲಸವನ್ನು ಮಾಡಬೇಕೆಂದರೆ ಸಾವಿರಾರು ರೂಪಾಯಿಗಳ ಮೇಲೆ ವೆಚ್ಚವಾಗುವುದು. ಒಂದುವೇಳೆ ಖರ್ಚು ಮಾಡಿದರೂ ಸರಿಯಾದ ಬಹುಮಾನವು ಬರುವನೋ ಇಲ್ಲವೋ ಹೇಳುವಂತಿಲ್ಲ."

ಭೋಟು:—ಅಯ್ಯಾ! ನೀವು ಈ ವಿಷಯದಲ್ಲಿ ಸ್ವಲ್ಪವೂ ಸಂದೇಹಪಡಬಾರದು. ಬಾದಶಹನಿಗೆ ಇಷ್ಟವಿಲ್ಲದಿದ್ದರೆ ಜನಾನಾದೊಳಕ್ಕೆ ತೆಗೆದುಕೊಂಡು ಹೋಗುವೆನು.

ಹೀಗೆ ಎಷ್ಟೋ ಬಗೆಯಾಗಿ ಹೇಳಿ ಆ ಬಳಿಕ ವರ್ತಕನ ಸಮ್ಮತಿಯನ್ನು ಪಡೆದು, ಕೆಲವು ದಿನಗಳಲ್ಲಿಯೇ ದಂತದ ಬೀಸಣಿಗೆಯನ್ನು ತಯಾರಿಸಿ ಅದರ ಸುತ್ತಲೂ ಪುಷ್ಪಗಳಿಂದಲೂ ಗಿಣಿಗಳಿಂದಲೂ ಕೂಡಿದ ಲತೆಯೊಂದನ್ನು ಕೆತ್ತಿ ರೇಷ್ಮೆಯ ಜಾಲರಿಯನ್ನು ಬೀಸಣಿಗೆಯ ಸುತ್ತಲೂ ಕಟ್ಟಿ, ಬೀಸಣಿಗೆಯ ಮಧ್ಯಭಾಗದಲ್ಲಿ ಔರಂಗಜೇಬನನ್ನೂ, ಆತನ ಪಕ್ಕದಲ್ಲಿ ಆತನನ್ನು ಆಲಿಂಗಿಸಿಕೊಂಡಿರುವಂತೆ ಉದಯಪುರಿಯನ್ನೂ ಬಹುಚಮತ್ಕಾರವಾಗಿ ಕೆತ್ತಿದನು. ಮತ್ತು ಬೀಸಣಿಗೆಯ ಹಿಡಿಯನ್ನು ಕೆಂಪು ವಜ್ರಗಳಿಂದಲೂ ಒಳ್ಳೆಯ ಮುತ್ತುಗಳಿಂದಲೂ ಅಲಂಕರಿಸಿ, ಒಂದು ಒಳ್ಳೆಯ ಶ್ರೀಗಂಧದ ಪೆಟ್ಟಿಗೆಯಲ್ಲಿ ಅದನ್ನು ಇರಿಸಿಕೊಂಡು, ಕೆಲವು ಕಾಗದಗಳನ್ನೂ ಬಣ್ಣಗಳನ್ನೂ ಜೊತೆಯಲ್ಲಿ ತೆಗೆದುಕೊಂಡು ಹೊರಟು ಸ್ವಲ್ಪ ಹೊತ್ತಿಗೆ ಉದಯಪುರಿಯ ಜನಾನಾದ ಬಳಿಗೆ ಬಂದನು. ಅಲ್ಲಿದ್ದ ದ್ವಾರಪಾಲಕರು ಅಡ್ಡಿಪಡಿಸಲು ವರ್ತಕನಿಂದ ತಂದಿದ್ದ ಪತ್ರವನ್ನು ತೋರಿಸಿ, ಅಲ್ಲಿಂದ ಹೊರಟು ೨-೩ ಬಾಗಿಲುಗಳನ್ನು ದಾಟಿ ಹೋದನು. ಆದರೆ, ನಾಲ್ಕನೆಯ ಬಾಗಿಲಲ್ಲಿದ್ದ ಭಟರು ಇವನನ್ನು ಮುಂದಕ್ಕೆ ಬಿಡದೆಹೋದರು. ಭೋಟುಸಿಂಗನು ಅವರೊಡನೆ ಮೃದುವಾಗಿ ಮಾತನಾಡುತ್ತ ಸ್ನೇಹಮಾಡಿಕೊಂಡು ತನ್ನಲ್ಲಿದ್ದ ಕಾಗದಗಳಲ್ಲಿ ಅಲ್ಲಿದ್ದ ಭಟರನ್ನು ಸುಂದರವಾದ ಸ್ತ್ರೀಯರು ಆಲಿಂಗಿಸಿಕೊಂಡಿರುವಂತ ಚಿತ್ರವನ್ನು ಬರೆದು ದ್ವಾರಪಾಲಕರಿಗೆ ಬಹುಮಾನವಾಗಿ ಅದನ್ನು ಕೊಟ್ಟನು. ಆ ಚಿತ್ರಪಟವನ್ನು ನೋಡಿ ಭಟರು ಅಪರಿಮಿತಾನಂದವನ್ನು ಹೊಂದಿ,—“ಶಾಬಾಸ್ ! ಭಾಯಿಾ ! ಶಾಬಾಸ್ !!” ಎಂದು ಹೇಳಿ ಗಡ್ಡವನ್ನು ನವರಿಕೊಳ್ಳುತ್ತ ಆತನನ್ನು ನಿರಾತಂಕವಾಗಿ ಒಳಗೆ ಹೋಗಗೊಡಿಸಿದರು. ಈ ಪ್ರಕಾರ ಭೋಟುಸಿಂಗನು ದ್ವಾರಪಾಲಕರೆಲ್ಲರಿಗೂ ಚಿತ್ರಪಟಗಳನ್ನು ಬರೆದು ಕೊಟ್ಟು ದ್ವಾರಗಳನ್ನೆಲ್ಲ ದಾಟಿ ಉದಯಪುರಿಯ ಮಹಲನ್ನು ಪ್ರವೇಶಿಸಿದನು.

ಅಷ್ಟರಲ್ಲಿ ಮಸಾವದನು ಆವುದೋ ಕಾರ್ಯವಶಾತ್ ಆ ದಾರಿಯಲ್ಲಿಯೇ ಬರುತ್ತಿದ್ದು ಆತನನ್ನು ನೋಡಿ—“ಎಲೋ ಸೀನಾರು ? ಎಲ್ಲಿಗೆ

ಹೋಗುತ್ತಿರುವೆ ?" ಎಂದು ಕೇಳಲು, ಭೋಟುಸಿಂಗನು—"ಅಯ್ಯಾ ! ನಾನೊಬ್ಬ ಚಿತ್ರಗಾರನು. ಉದಯಪುರೀ ಬೇಗಮರವರ ಪ್ರತಿಮೆಯನ್ನು ಬರೆದು ಹೇಗಾದರೂ ನನ್ನ ದಾರಿದ್ರ್ಯವನ್ನು ಕಳೆದುಕೊಳ್ಳಬೇಕೆಂದು ಮಹಾ ರಾಣಿಯವರ ಸಮೀಪಕ್ಕೆ ಬರುತ್ತಿರುವೆನು. ಚಿತ್ರಪ್ರತಿಮೆಗಳನ್ನು ಬರೆ ಯುವುದರಲ್ಲಿ ನನಗೆ ಸಮಾನರಾರೂ ಇಲ್ಲ. ನನ್ನನ್ನು ಬೇಕಾದರೆ ಪರೀಕ್ಷಿ ಸಬಹುದು." ಹೀಗೆ ಹೇಳಿ ಒಡನೆಯೇ ಬಣ್ಣವನ್ನೂ ಕಾಗದವನ್ನೂ ತೆಗೆ ದುಕೊಂಡು, ಮಸಾವದನ ಇಕ್ಕೆಲಗಳಲ್ಲಿಯೂ ಸುಂದರ ಸ್ತ್ರೀಯರು ಚಾಮ ರವನ್ನು ಬೀಸುತ್ತಿರುವಂತೆಯೂ ಓರ್ವ ಸುಂದರಿಯು ಮಸಾವದನನ್ನು ಅಪ್ಪಿ ಕೊಂಡಿರುವಂತೆಯೂ ಬರೆದು ಆತನ ಕಯ್ಯಲ್ಲಿತ್ತನು. ಮಸಾವದನು ಆ ಚಿತ್ರವನ್ನು ನೋಡಿ, ಅಪರಿಮಿತ ಸಂತೋಷದಿಂದ ಆತನನ್ನು ತಪ್ಪಿಕೊಂಡು "ಅರೆ, ಭಾಯಿ ! ನಿನ್ನನ್ನು ನಮ್ಮ ಬೇಗಮ್ಮರವರ ಹತ್ತಿರಕ್ಕೆ ಖಂಡಿತವಾಗಿ ಕರೆದುಕೊಂಡು ಹೋಗುವೆನು. ಎಲ್ಲಿ, ನಿನ್ನ ಬಳಿಯಲ್ಲಿ ಮತ್ತಾವ ಚಿತ್ರಗಳಿ ವೆಯೋ ತೋರಿಸು ?" ಎಂದನು. ಭೋಟುಸಿಂಗನು ತನ್ನ ಬಳಿಯಲ್ಲಿದ್ದ ಪ್ರತಿಮೆಗಳನ್ನೂ ಅಮೋಘವಾದ ಬೀಸಣಿಗೆಯನ್ನೂ ಆತನಿಗೆ ಒಂದೊಂದಾಗಿ ತೆಗೆದು ತೋರಿಸಿದನು. ಅದೇ ಸಮಯದಲ್ಲಿ ಅದೇ ಮಾರ್ಗವಾಗಿ ಹೋಗು ತ್ತಿದ್ದ ದಾಸದಾಸೀಜನರು ಆತನನ್ನು ಸಮೀಪಿಸಿ, ಸುತ್ತಲೂ ಗುಂಪುಕಟ್ಟಿ ಕೊಂಡು ನಿಂತು ಆತನು ತೋರಿಸುತ್ತಿದ್ದ ಪ್ರತಿಮೆಗಳನ್ನು ನೋಡಿ ಆಶ್ಚರ್ಯ ಗೊಂಡು—"ಅಯ್ಯಾ ! ನನ್ನ ಪ್ರತಿಮೆಯನ್ನು ಚಿತ್ರಿಸು ; ತನ್ನ ಚಿತ್ರವನ್ನು ಬರೆ," ಎಂಬುದಾಗಿ ಆತನನ್ನು ನಿರ್ಬಂಧಪಡಿಸಿದರು. ಭೋಟುಸಿಂಗನು ಅವರೆಲ್ಲರಿಗೂ ಪ್ರತಿಮೆಗಳನ್ನು ಬರೆದುಕೊಟ್ಟು ಸಮಾಧಾನಪಡಿಸಿ, ಅವರೊ ಡನೆ ಸ್ನೇಹವನ್ನು ಬೆಳಸಿದನು. ಅಷ್ಟರಲ್ಲಿ ಮಸಾವದನು ಭೋಟುಸಿಂಗನನ್ನು ನೋಡಿ,—"ಅಯ್ಯಾ ! ನಿನ್ನ ಸಮಾಚಾರವನ್ನು ನಮ್ಮ ಬೇಗಂಯವರಿಗೆ ತಿಳಿಸಿ, ಪುನಃ ನಿನ್ನನ್ನು ಕರೆದುಕೊಂಡು ಹೋಗಲು ಬರುವೆನು. ಆ ವರೆಗೂ ನೀನು ಇಲ್ಲಿಯೇ ಇರು" ಎಂದು ಹೇಳಿ ಅಂತಃಪುರಕ್ಕೆ ಹೊರಟುಹೋದನು.

ಸ್ವಲ್ಪ ಹೊತ್ತಿನಮೇಲೆ ರೋಷನಾರಾಬೇಗಮಿನ ಮುಖ್ಯಸೇವಕನಾದ ಫರುಕಾಸ್ಖೈರನು ಕೈಯಲ್ಲಿ ಒಂದು ವೀಣೆಯನ್ನು ಹಿಡಿದುಕೊಂಡು ಅದೇ ದಾರಿಯಲ್ಲಿ ಬರುತ್ತ ಆ ಜನಸಮೂಹವನ್ನು ನೋಡಿ ತಾನೂ ಅಲ್ಲಿಗೆ ಬಂದು ನಿಂತನು. ಕೂಡಲೆ ಛೋಟುಸಿಂಗನು ಆತನಿಗೆ ಸಲಾಂಮಾಡಿ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡು ಆತನಿಗೂ ಚಿತ್ರವನ್ನು ಬರೆದು ಕೊಟ್ಟನು. ಅದನ್ನು ನೋಡಿ ಫರುಕಾಸ್ಖೈರನು ಸಂತೋಷಪಟ್ಟು,—"ಅಯ್ಯಾ ! ನಿನ್ನನ್ನು ನಮ್ಮ ಬೇಗಮರವರ ಬಳಿಗೆ ಕರೆದೊಯ್ದು ನಿನಗೆ ದೊಡ್ಡ ಬಹುಮಾನವನ್ನು ಕೊಡಿಸುವೆನು." ಎಂದು ಪ್ರತಿಜ್ಞೆ ಮಾಡಿದನು. ಅದಕ್ಕೆ ಛೋಟುಸಿಂಗನು ಸಂತೋಷಿಸಿ—"ಅಯ್ಯಾ ! ನಿಮ್ಮ ಅನುಗ್ರಹವಿದ್ದರೆ ನನಗೇನು ಕಡಿಮೆ ? ನಿಮ್ಮಂತವರ ದರ್ಶನಮಾಡಬೇಕೆಂದೇ ನಾನು ಇಲ್ಲಿಗೆ ಬಂದೆನು. ಇರಲಿ, ಅದಿರಲಿ, ಈ ವೀಣೆಯನ್ನು ಎಲ್ಲಿಗೆ ತೆಗೆದುಕೊಂಡು ಹೋಗುವಿರಿ ?" ಎಂದು ಕೇಳಲು, ಫರುಕಾಸ್ಖೈರನು—"ಅಯ್ಯಾ ! ಇದು ನಮ್ಮ ಬೇಗಮರವರ ವೀಣೆ ; ಸ್ವಲ್ಪ ಕೆಟ್ಟು ಹೋಗಿರುವುದು. ಸರಿಮಾಡಿಸುವುದಕ್ಕೆ ತೆಗೆದುಕೊಂಡು ಹೋಗುತ್ತಿರುವೆನು. ಈಗಲೇ ಹಿಂತಿರುಗಿ ಬಂದು ನಿನ್ನನ್ನು ಕರೆದೊಯ್ಯುವೆನು. ಆ ವರೆಗೂ ನೀನು ಇಲ್ಲಿಯೇ ಇರು." ಎಂದು ಹೇಳಿ ಹೊರಡಲು ಸಿದ್ಧನಾದನು.

ಎಂತಹ ದುರ್ಮಾರ್ಗಿಗಳಿಗಾದರೂ ಒಂದೊಂದು ಸುಗುಣವಿದ್ದೇ ಇರುವುದು. ರೋಷನಾರಳು ಅತ್ಯಂತ ಕ್ರೂರಿಯಾಗಿದ್ದರೂ ಸಂಗೀತದಲ್ಲಿ ಆಸಕ್ತಿಯುಳ್ಳವಳಾಗಿದ್ದಳು. ದೇಶದೇಶದಿಂದಲೂ ಗಾಯಕರನ್ನು ಕರೆಯಿಸಿ ತನ್ನ ಮನೆಯಲ್ಲಿರಿಸಿಕೊಂಡಿದ್ದಳು. ಆಗಾಗ ಡಿಲ್ಲೀನಗರದಲ್ಲಿರುವ ಗಾಯಕರೆಲ್ಲರನ್ನೂ ಅರಮನೆಗೆ ಕರೆಯಿಸಿ ಅವರನ್ನು ಪರೀಕ್ಷಿಸಿ ತಕ್ಕಬಹುಮಾನವಿತ್ತು ಕಳುಹುತ್ತಿದ್ದಳು. ಈಕೆಯ ಅಣ್ಣನಾದ ಔರಂಗಜೇಬನಿಗೆ ಸಂಗೀತವೆಂದರೆ ಆಗದು. ದೈವವಶಾತ್ ರೋಷನಾರಳಿಗೆ ಸಂಗೀತದಲ್ಲಿ ಆಶೆಯಿದ್ದುದರಿಂದಲೇ ಡಿಲ್ಲೀನಗರದಲ್ಲಿ ಅನೇಕ ಜನರು ಗಾಯಕರಿದ್ದರು ; ಹಾಗಿಲ್ಲದಿದ್ದರೆ ಅವರೆಲ್ಲರೂ ಕಾರಾಗಾರದಲ್ಲಿರಬೇಕಾಗುತ್ತಿದ್ದಿತು.

ಫರುಕ್‌ಷೈರನ ಮಾತನ್ನು ಕೇಳಿ ಭೋಟುಸಿಂಗನು—"ಅಯ್ಯಾ! ನನಗೂ ಗಾನವಿದ್ಯೆಯಲ್ಲಿ ಸ್ವಲ್ಪ ಪರಿಚಯವುಂಟು. ನಾನೇ ವೀಣೆಯನ್ನು ಸರಿಮಾಡಿಕೊಡುವೆನು." ಎಂದು ಹೇಳಲು, ಫರುಕಾಷೈರನು—"ಅಯ್ಯಾ! ಇದು ಬಲುಬೆಲೆಯುಳ್ಳದು. ಇದನ್ನು ಕೆಡಿಸಿದುದೇ ಆದರೆ ಬೇಗಮರವರು ಸುಮ್ಮನೆ ಬಿಡಲಾರರು. ಎಚ್ಚರಿಕೆ!" ಎಂದು ಹೇಳಿ, ಚಿತ್ರವಿಚಿತ್ರವಾದ ಲತೆಗಳಿಂದ ಕೆತ್ತಲ್ಪಟ್ಟು ವಜ್ರವೈಢೂರ್ಯ ನಿರ್ಮಿತವಾದ ವೀಣೆಯನ್ನು ಚೀಲದಿಂದ ತೆಗೆದು ಆತನ ಕೈಯ್ಗೆ ಕೊಟ್ಟನು. ಭೋಟುಸಿಂಗನು ಆ ವೀಣೆಯನ್ನು ತೆಗೆದುಕೊಂಡು ಒಂದು ಸಲ ತಂತಿಯನ್ನು ಉದ್ದಕ್ಕೂ ಸವರಿ ಒಂದೆರಡುಸಲ ತಂತಿಗಳನ್ನು ಮೀಟಿ ಪುನಃ ಆತನ ಕೈಯ್ಗೆ ಕೊಟ್ಟುಬಿಟ್ಟನು ಅಲ್ಲಿ ಸುತ್ತುಗಟ್ಟಿದ್ದವರೆಲ್ಲರೂ ಆತನ ಚಾತುರ್ಯಕ್ಕೆ ಆಶ್ಚರ್ಯಪಟ್ಟು ಒಬ್ಬರಿಗೊಬ್ಬರು ಮಾತನಾಡಲಾರಂಭಿಸಿದರು. ಫರುಕ್‌ಷೈರನೂ ಆನಂದಪಟ್ಟು ವೀಣೆಯನ್ನು ಚೀಲದಲ್ಲಿರಿಸಿ, ಹೋಗಿಬರುವೆನೆಂದು ಹೇಳಿ ರೋಷನಾರಾಬೇಗಮಳ ಮಹಲಿನ ಕಡೆಗೆ ನಡೆದನು.

ಸ್ವಲ್ಪ ಹೊತ್ತಾದ ಒಳಿಕ ಮಸಾವದನು ಉದಯಪುರಿಯಿಂದ ಆಜ್ಞಾಪಿಸಲ್ಪಟ್ಟವನಾಗಿ ಭೋಟುಸಿಂಗನ ಹತ್ತಿರಕ್ಕೆ ಬಂದು ಆತನನ್ನು ಕರೆದುಕೊಂಡು ಜನಾನಾದೊಳಕ್ಕೆ ಹೋಗುತ್ತಿದ್ದನು. ನಮ್ಮ ಭೋಟುಸಿಂಗನು ಆತನ ಹಿಂದೆ ಹೋಗುತ್ತ ಅಂತಃಪುರವನ್ನು ಪ್ರವೇಶಿಸಿದ ಕೂಡಲೆ, ಸುತ್ತಲೂ ಗೋಡೆಗಳಲ್ಲಿ ಹಾಕಿದ್ದ ಚಿತ್ರಗಳನ್ನು ನೋಡುತ್ತ ಒಂದು ಉದಯಪುರಿಯ ಸಮ್ಮುಖವನ್ನೈದಿದನು. ಮಸಾವದನು ಭೋಟುಸಿಂಗನ ಸಾಮರ್ಥ್ಯವನ್ನು ಉದಯಪುರಿಯೊಡನೆ ಹೇಳಿ, ಬೇಕಾದರೆ ನೀವೂ ಪರೀಕ್ಷಿಸಬಹುದೆಂದು ಹೇಳಿ ತನ್ನ ಹಿಂದೆ ನಿಂತಿದ್ದ ಭೋಟುಸಿಂಗನನ್ನು ತೋರಿಸಿದನು. ಉದಯಪುರಿಯು ಆತನನ್ನು ನೋಡಿ,—"ಎಲೆ, ನೀನು ಬರೆದಿರುವ ಚಿತ್ರಗಳನ್ನೆಲ್ಲ ತೋರಿಸು." ಎಂದು ಹೇಳಲು, ಭೋಟುಸಿಂಗನು ತನ್ನಲ್ಲಿದ್ದ ಚಿತ್ರಪಟಗಳನ್ನೆಲ್ಲ ತೋರಿಸಿ, ಪೆಟ್ಟಿಗೆಯ ಬೀಗವನ್ನು ತೆಗೆದು ಬೇಗಮಳ ಕೈಯ್ಗೆ

ಕೊಟ್ಟನು. ಆಕೆ, ಪೆಟ್ಟಿಗೆಯನ್ನು ತೆರೆದು ಬೀಸಣಿಗೆಯನ್ನು ಮೇಲಕ್ಕೆ ತೆಗೆದು ಚೆನ್ನಾಗಿನೋಡಿ ಆತನ ಕೌಶಲ್ಯಕ್ಕೆ ತಲೆದೂಗಿ ಅದರ ಮಧ್ಯಭಾಗದಲ್ಲಿದ್ದ ತನ್ನ ಮತ್ತು ಬಾದಶಹನ ಚಿತ್ರಗಳನ್ನು ನೋಡಿ ಮಿತಿಮೀರಿದ ಆನಂದದಿಂದ ಬೀಸಣಿಗೆಯನ್ನು ಅತ್ತಿತ್ತ ತಿರುಗಿಸಿ ನೋಡುತ್ತ ಅದರ ಕಸೂತಿಕೆಲಸಕ್ಕೂ ಹಿಡಿಯಲ್ಲಿದ್ದ ರತ್ನದ ಕೆಲಸಕ್ಕೂ ಆಶ್ಚರ್ಯಪಡುತ್ತಿರಲು ಛೋಟು ಸಿಂಗನು ತನ್ನ ಸಾಮರ್ಥ್ಯವನ್ನು ತೋರಿಸಲು, ಉದಯಪುರಿಯು ಕವಾಚೀ ಮಂಚದಮೇಲೆ ಕುಳಿತು ದಂತದ ಬೀಸಣಿಗೆಯನ್ನು ನೋಡುತ್ತಿರುವಂತೆ ಚಿತ್ರವನ್ನು ಬರೆದು ಆಕೆಗೆ ಕೊಟ್ಟನು. ಅದನ್ನು ನೋಡಿದ ಬಳಿಕಲಂತು, ಉದಯಪುರಿಯು ಅತ್ಯಾಶ್ಚರ್ಯಗೊಂಡು ಮಸಾವದನ ಕಡೆಗೆ ತಿರುಗಿ— "ಅಯ್ಯಾ ! ನೀನು ನಮ್ಮ ಮಸಾವದನ ಪಠವನ್ನು ಬರೆದಿರುವೆಯಾ ?" ಎಂದು ಮಸಾವದನನ್ನು ಪರಿಹಾಸಮಾಡಿದಳು.

ಸ್ವಲ್ಪ ಹೊತ್ತಾದ ಮೇಲೆ ಇಂದಿರೆಯು ಉದಯಪುರಿಯ ಬಳಿಗೆ ಬಂದು ನಿಂತಳು. ಇಂದಿರೆಯನ್ನು ನೋಡಿದ ಕೂಡಲೆ ಛೋಟುಸಿಂಗನ ಮುಖಲಕ್ಷಣವು ಬದಲಾಯಿಸಿತು. ಆತನು ಸ್ವಲ್ಪ ಹೊತ್ತು ಆಕೆಯನ್ನೇ ನೋಡುತ್ತಿದ್ದು, ತಲೆಯನ್ನು ತಗ್ಗಿಸಿ ನಿಂತುಕೊಂಡನು. ಉದಯಪುರಿಯು ಮಸಾವದನನ್ನು ಕುರಿತು—"ಮಸಾವದ್ ! ನೀನು ಇಂದಿರೆಯ ಪಕ್ಕದಲ್ಲಿ ನಿಲ್ಲು. ನಿಮ್ಮಿಬ್ಬರ ಚಿತ್ರವನ್ನೂ ಬರೆಯಿಸುವೆನು." ಎಂದು ಹೇಳಲು, ಮಸಾವದನು ಉಬ್ಬಸಿಂದ ಬಂದು ಇಂದಿರೆಯ ಪಕ್ಕದಲ್ಲಿ ನಿಲ್ಲಲು ಪ್ರಯತ್ನಪಟ್ಟನು. ಅಷ್ಟರಲ್ಲಿ ಛೋಟುಸಿಂಗನು ಆತನ ಕೈಯನ್ನು ಹಿಡಿದು,— "ಅಯ್ಯಾ ! ಮಸಾವದ್ ! ನನಗೆ ಜ್ಯೋತಿಷ್ಯವು ಬರುವುದು. ಆಗಲೇ ನಿನ್ನೊಡನೆ ಹೇಳುವುದಕ್ಕೆ ಮರೆತು ಹೋದೆನು. ನೀನು ಈಕೆಯನ್ನು ಮದುವೆಯಾಗಬೇಕೆಂದಿರಬಹುದು ! ಆದರೆ, ಇವಳ ಜಾತಕವನ್ನು ನೋಡಿಸಿರುವೆಯಾ ? ಸರಿಯಾಗಿರುವುದೊ ? ಬೇಕಾದರೆ ಈಗಲೇ ನಾನು ನೋಡಿ ಹೇಳುವೆನು," ಎಂದು ಹೇಳಿ ಕಾಗದದ ಮೇಲೆ ನಾಲ್ಕು ಗೆರೆಗಳನ್ನು ಎಳೆದು

ಸ್ವಲ್ಪಹೊತ್ತು ಆಲೋಚಿಸುತ್ತಿದ್ದು ಆಮೇಲೆ, “ಅಜ್ಜಾ ! ಇದೆಂತಹ ಜಾತಕವಪ್ಪ ! ಈಕೆಯ ಅನುಮತಿಯಿಲ್ಲದೆ ಬಲಾತ್ಕಾರದಿಂದ ಮದುವೆಯಾಗುವವರು ಹತ್ತುದಿನಗಳೊಳಗಾಗಿಯೇ ಸಾಯುವರು. ಇಂತಹವಳನ್ನು ಮದುವೆಯಾಗಬೇಕೆಂದಿರುವೆಯಲ್ಲಾ ! ಈಕೆ ಇರುವ ಕಡೆಯಲ್ಲೆಲ್ಲಾ ಜನರಿಗೆ ತೊಂದರೆಯುಂಟಾಗುವುದೇ ಹೊರತು, ಸ್ವಲ್ಪವೂ ಒಳ್ಳೆಯದಾಗುವುದಿಲ್ಲ; ಖಂಡಿತವಾಗಿಯೂ ಇವಳನ್ನು ಇಲ್ಲಿಂದ ಓಡಿಸಿ ಬಿಡಿರಿ.” ಎಂದನು. ಈ ಮಾತನ್ನು ಕೇಳಿ ಉದಯಪುರಿಯು “ಮಹಾವಡ್ ! ಹೋಗಲಿ, ನೀನು ಇವಳನ್ನು ಮದುವೆಮಾಡಿಕೊಳ್ಳಬೇಡ. ಇನ್ನು ಸ್ವಲ್ಪ ದಿನಗಳಿಗೆ ರೂಪನಗರದಿಂದ ಒಬ್ಬ ರಾಜಕನ್ಯೆ ಬರುವಳು. ಅವಳನ್ನು ಖಂಡಿತವಾಗಿಯೂ ಮದುವೆಮಾಡಿಕೊಡುವೆನು.” ಎಂದು ಹೇಳಿದಳು.

ಇಷ್ಟರಲ್ಲಿ ಜಾದೂಗಾರನು ಬರುವನೆಂಬ ವರ್ತಮಾನವನ್ನು ಕೇಳಿ ಉದಯಪುರಿಯು “ಅಯ್ಯಾ, ಘೋಟುಸಿಂಗ್ ! ನೀನು ನಾಳೆಯದಿನ ಇಲ್ಲಿಗೆ ಬಂದರೆ ನಿನಗೆ ತಕ್ಕ ಬಹುಮಾನವನ್ನು ಕೊಡುವೆನು.” ಎಂದು ಹೇಳಿ, ಆತನಿಗೆ ಹೊರಡಲು ಅಪ್ಪಣೆಯನ್ನಿತ್ತಳು. ಅನಂತರ ಘೋಟುಸಿಂಗನು ಅಲ್ಲಿಂದ ಹೊರಟುಬರುತ್ತ ನೆಲದಮೇಲೆ ಹಾಸಿದ್ದ ರತ್ನಗಂಬಳಿಯನ್ನು ನೋಡುತ್ತ ಅದರಮೇಲೆ ಮುಗ್ಗುರಿಸಿ ಬಿದ್ದವನಂತೆ ನಟಿಸಿ, ಮೆಲ್ಲಗೆ ಜೇಬಿನಲ್ಲಿದ್ದ ಕಾಗದವನ್ನು ರತ್ನಗಂಬಳಿಯ ಕೆಳಗಡೆಯಲ್ಲಿಟ್ಟನು. ಕಿಟಕಿಯಲ್ಲಿ ಇದನ್ನು ನೋಡುತ್ತಿದ್ದ ಇಂಬಿರೆಯು ಘೋಟುಸಿಂಗನು ಕೆಳಗೆ ಬಿದ್ದ ತಕ್ಷಣವೇ ಓಡಿಬಂದು ರಹಸ್ಯವನ್ನಾರೂ ತಿಳಿಯದಿರಬೇಕೆಂದು ಆತನನ್ನು ಕುರಿತು,—ಅಯ್ಯಾ ! ನಿನಗೆ ರಾಜಾಂತಃಪುರದಲ್ಲಿ ತಿರುಗಿ ಅಭ್ಯಾಸವಿಲ್ಲವೋ ? ಹಾಸಿದ್ದ ರತ್ನಗಂಬಳಿಯನ್ನು ತುಳಿದು ಹಾಳುಮಾಡಿದೆ. ಸಾಕು, ಸಾಕು, ಮೇಲಕ್ಕೇಳು. ಎಂದು ಗದರಿಸುತ್ತ ರತ್ನಗಂಬಳಿಯನ್ನು ಸರಿಮಾಡುವಹಾಗೆ ನಟಿಸುತ್ತ ಅದರ ಕೆಳಗಿದ್ದ ಕಾಗದವನ್ನು ತೆಗೆದುಕೊಂಡು

ಹೊರಟುಹೋದಳು. ಅಷ್ಟರಲ್ಲಿ ಮಸಾವದನು ಓಡಿಬಂದು—"ಅಯ್ಯಾ! ಬಾದಶಹರು ದಯಮಾಡುತ್ತಿರುವರು, ಅವರು ಒಳಗೆ ಹೋಗುವವರೆಗೂ ನೀನು ಈ ಕಿರುಮನೆಯಲ್ಲಿರು; ಎಂದುಹೇಳಿ ಭೋಟುಸಿಂಗನನ್ನು ಒಂದು ಕಿರುಮನೆಯಲ್ಲಿ ಕೂಡಿ ತಾನು ಬಾಗಿಲನ್ನು ಹಾಕಿಕೊಂಡು ಬಾದಶಹನನ್ನು ಎದಿರ್ಗೊಳ್ಳಲು ಹೋದನು. ಇಂದಿರೆಯು ತೆಗೆದುಕೊಂಡ ಕಾಗದದಲ್ಲಿ ಸಮಾಚಾರವೇನಿತ್ತೆಂಬುದು ನಮಗೆ ತಿಳಿಯದಿದ್ದರೂ ಅದನ್ನು ನೋಡಿದ ಮೇಲೆ ಆಕೆಯು ಸಂತೋಷದಿಂದ ಉಬ್ಬಿದಳೆಂದು ಮಾತ್ರ ಹೇಳಬಲ್ಲೆವು.

ಇತ್ತ ಮಸಾವದನು ಭೋಟುಸಿಂಗನನ್ನು ಕಿರುಮನೆಯಲ್ಲಿ ಕೂಡಿ ಹೋದವನು ಮತ್ತೆ ಬಾಗಿಲನ್ನು ತೆರೆಯಲು ಮರೆತನು. ಕ್ರಮಕ್ರಮವಾಗಿ ಸಾಯಂಕಾಲವಾಗಿ ರಾತ್ರಿ ಎಂಟು ಘಂಟೆಯಾದರೂ ಒಬ್ಬರೂ ಬಾಗಿಲನ್ನು ತೆರೆಯಲಿಲ್ಲವಾದುದರಿಂದ ಭೋಟುಸಿಂಗನು ತನಗಾವ ವಿಪತ್ತುಂಟಾಗುವುದೋ ಎಂದು ವಿಚಾರಪಡುತ್ತಿದ್ದನು. ರಾತ್ರಿ ಎಂಟು ಘಂಟೆಯ ಮೇಲೆ ಇಬ್ಬರು ಮಹಮ್ಮದೀಯ ಭಟರು ಬಂದು ರಹಸ್ಯವಾಗಿ ಬಾಗಿಲನ್ನು ತೆರೆದು ಒಳಗಿದ್ದ ಭೋಟುಸಿಂಗನನ್ನು ಹಿಡಿದು ಬಾಯಿಗೆ ಬಟ್ಟೆಯನ್ನು ತುರುಕಿ ಅತನನ್ನು ಕರೆದುಕೊಂಡುಹೋಗಿ ಕಾರಾಗೃಹದಲ್ಲಿಟ್ಟುಬಿಟ್ಟರು.

---

## ಹದಿನೇಳನೆಯ ಪ್ರಕರಣ.

---

(ರೂ ಪ ನ ಗ ರ ದ ಮು ತ್ತಿ ಗೆ.)

ಔರಂಗಜೇಬನು ಉದಯಪುರಿಯೊಡನೆ ಮಾಡಿದ ಪ್ರತಿಜ್ಞೆಯೇನಾಯಿತೆಂದು ವಿಚಾರಮಾಡಬೇಕಲ್ಲವೆ? ಸೈನ್ಯಸಮೇತನಾಗಿ ರೂಪನಗರವನ್ನು

ಮುತ್ತಿ ವಿಮಲೆಯನ್ನು ಕರೆತರಬೇಕೆಂದು ಬಾದಶಹನು ಒಂದು ಕಾಗದವನ್ನು ಬರೆದು ಮಸಾವದನ ಮೂಲಕ ಸಾದತ್‌ಖಾನನ ಕೈಯಲ್ಲಿ ಕೊಡುವಂತೆ ಹೇಳಿಕಳುಹಿದುದು ನಮ್ಮ ವಾಚಕರಿಗೆ ನೆನಪಿರಬಹುದು. ಸಾದತ್‌ಖಾನನು ಮಸಾವದನು ಕೊಟ್ಟ ಪತ್ರವನ್ನು ನೋಡಿಕೊಂಡು, ಸ್ವಾಮಿಯ ಆಜ್ಞೆಯನ್ನು ಉಲ್ಲಂಘಿಸುವುದು ಯುಕ್ತವಲ್ಲೆಂದು ತಿಳಿದಿದ್ದರೂ ಅಕಾರಣ ಕಲಹವೇಕೆಂದು ಬಾದಶಹನನ್ನು ಸಮೀಪಿಸಿ, ಆತನ ಕೋಪವನ್ನು ನಿವಾರಿಸತೊಡಗಿದನು. ಆದರೆ, ಔರಂಗಜೇಬನು ಆತನ ಮಾತುಗಳನ್ನು ಲಕ್ಷಿಸದೆ,— "ಈ ವಿಚಾರವೆಲ್ಲಾ ನಿನಗೇಕೆ ? ತ್ವರೆಯಾಗಿ ನನ್ನ ಆಜ್ಞೆಯನ್ನು ನಿರ್ವಹಿಸು. ನಾನು ಬರೆದುಕೊಡುವ ಪತ್ರವನ್ನು ವಿಜಯಸಿಂಹನಿಗೆ ತೋರಿಸು." ಎಂದು ಹೇಳಿ ಆಗಲೆ, ವಿಜಯಸಿಂಹನಿಗೆ ಕೆಲವು ಬುದ್ಧಿವಾದಗಳನ್ನು ಬರೆದು— "ನಿನ್ನ ಮಗಳಾದ ವಿಮಲೆಯನ್ನು ಸಾದತ್‌ಖಾನನೊಡನೆ ಕಳುಹಬೇಕೆಂದೂ, ಇಲ್ಲವಾದರೆ ರಾಜಧಾನಿಯನ್ನು ಧ್ವಂಸಮಾಡಿ ನಿನ್ನ ಮಗಳನ್ನು ಕರೆದೊಯ್ಯುವೆನೆಂದೂ "ಸ್ಪಷ್ಟವಾಗಿ ಬರೆದು, ಪತ್ರವನ್ನು ಸಾದತ್‌ಖಾನನ ಕೈಗೆ ಕೊಟ್ಟನು.

ರಾಜ್ಯಾಂಗ ವಿಷಯಗಳನ್ನು ಕುರಿತು ಬರೆಯುವ ಕಾಗದ ಪತ್ರಗಳೆಲ್ಲವನ್ನೂ ಔರಂಗಜೇಬನೇ ಬರೆಯುತ್ತಿದ್ದನು. ಆತನ ಅಕ್ಷರಗಳು ಮುತ್ತುಗಳಂತೆ ಆನಂದದಾಯಕಗಳಾಗಿದ್ದುವು. ಅವನು ಎಷ್ಟು ಕಾರ್ಯಚತುರನಾಗಿದ್ದನೋ ಆತನ ಬರೆವಣಿಗೆಯೂ ಅಂತಹುದೇ ಆಗಿದ್ದಿತು.

ಸಾದತ್‌ಖಾನನು ಬಾದಶಹನು ಕೊಟ್ಟ ಉತ್ತರವನ್ನು ತೆಗೆದುಕೊಂಡು ಆತನ ಆಜ್ಞೆಯನ್ನು ಶಿರಸಾವಹಿಸಿ ಹೊರಟನು. ಈತನು ಬಾದಶಹನ ಸೇನಾನಾಯಕರಲ್ಲಿ ಒಬ್ಬನಾಗಿದ್ದನಷ್ಟೇ ಹೊರತು, ದುರಾಗ್ರಹಿಯೂ ಅಕಾರಣ ಕಲಹವನ್ನು ಹರಡುವವನೂ ಆಗದೆ ಸನ್ಮಾರ್ಗಗಾಮಿಯಾಗಿದ್ದನು. ಆದರೂ ಬಾದಶಹನ ಅಪ್ಪಣೆಯನ್ನು ನಿರ್ವಹಿಸದಿರುವುದು ಅಯುಕ್ತವೆಂದು ತಿಳಿದು, ಆತನ ಕಾರ್ಯವನ್ನು ನಿರ್ವಹಿಸಲು ಪ್ರಯತ್ನಿಸಿ, ರೂಪನಗರವು ಒಂದು

ಚಿಕ್ಕರಾಜ್ಯವೆಂದು ಗ್ರಹಿಸಿ, ಸ್ವಲ್ಪ ಸೈನ್ಯವನ್ನೇ ತೆಗೆದುಕೊಂಡು ಹೊರಟು, ರೂಪನಗರವನ್ನು ಮುತ್ತಿದನು. ಅನಂತರ ಸಾದತ್‌ಖಾನನು ಬಾದಶಹನು ಕೊಟ್ಟ ಕಾಗದವನ್ನು ವಿಜಯಸಿಂಹನಿಗೆ ಕಳುಹಲು, ಆತನು ಅದನ್ನು ನೋಡಿ ಅತ್ಯಾಗ್ರಹದಿಂದ ಅದನ್ನು ತನ್ನ ಕಾಲುಗಳಿಂದ ತುಳಿದು ಹರಿದುಹಾಕಿ ಆ ಸೇವಕನ ಮುಖದಮೇಲೆ ಒಗೆದು,—"ಇದೇ ನಿನ್ನ ಉತ್ತರಕ್ಕೆ ಪ್ರತ್ಯುತ್ತರವೆಂದು ನಿಮ್ಮ ಬಾದಶಹನಿಗೆ ತೋರಿಸು." ಎಂದು ಹೇಳಿ ಅವನನ್ನು ಕಳುಹಿಬಿಟ್ಟನು.

ಈ ಪರಾಭವವನ್ನು ತಿಳಿದ ಕೂಡಲೆ, ಸಾದತ್‌ಖಾನನು ತನ್ನ ಸೈನ್ಯವನ್ನು ಪಟ್ಟಣದ ಸುತ್ತಲೂ ನಿಲ್ಲಿಸಿ, ಒಳಗಿನವರು ಹೊರಗೆ ಬರದಂತೆ ಮಾಡಿದನು. ರೂಪನಗರವು ಎಷ್ಟು ಚಿಕ್ಕ ಸಂಸ್ಥಾನವಾದರೂ ಅದನ್ನು ಸಾಧಿಸುವುದು ಶತ್ರುವರ್ಗಕ್ಕೆ ದುಸ್ಸಾಧ್ಯವೇ ಹೊರತು ಸುಲಭಸಾಧ್ಯವಲ್ಲ. ಆ ನಗರವು ಬೆಟ್ಟಗಳ ಮಧ್ಯೆ ಕಟ್ಟಲ್ಪಟ್ಟಿದುದರಿಂದ ತತ್ಪ್ರಕಾರ ಕಕ್ಷ್ಯವು ಪರ್ವತಗಳಿಂದಲೇ ಕೂಡಿದ್ದಿತು. ಒಳಭಾಗದಲ್ಲಿ ಇದನ್ನು ಅನುಸರಿಸಿ ಮತ್ತೊಂದು ಗೋಡೆಯು ಎತ್ತರವಾಗಿಯೂ ನಾಲ್ಕು ಗಜ ಅಗಲವುಳ್ಳದ್ದಾಗಿಯೂ ಕಟ್ಟಲ್ಪಟ್ಟಿದ್ದಿತು. ಸಮರ ಸಮಯದಲ್ಲಿ ವಿಜಯಸಿಂಹನ ಸೈನಿಕರು ಈ ಗೋಡೆಯ ಮೇಲೆ ನಿಂತು ಯುದ್ಧಮಾಡುತ್ತಿದ್ದರು. ಆ ನಗರದ ಸುತ್ತಲೂ ಇರುವ ಬುರುಜುಗಳು ನಿರಂತರವೂ ವೀರಪುರುಷರಿಂದಲೂ ಯುದ್ಧಸಾಮಗ್ರಿಗಳಿಂದಲೂ ಸಿದ್ಧವಾಗಿಡಲ್ಪಟ್ಟಿದ್ದಿತು. ಮತ್ತು, ನಗರದ ಸುತ್ತಲೂ ಒಳಭಾಗದಲ್ಲಿ ಒಂದು ಕಂದಕವು ಕಟ್ಟಲ್ಪಟ್ಟಿದ್ದಿತು. ಆ ನಗರದ ಸಿಂಹದ್ವಾರವು ಕಬ್ಬಿಣದ ಬಾಗಿಲಾಗಿದ್ದುದರಿಂದ ಅದನ್ನು ಭೇದಿಸುವುದು ಪರರಿಗೆ ಕಷ್ಟವಾಗಿದ್ದಿತು. ಶತ್ರುಗಳು ಆಕಸ್ಮಿಕವಾಗಿ ಪ್ರವೇಶಿಸಿದರೂ ಆ ನಗರದ ಯ ಸೇನಾಸಮೂಹವು ಯಾವ ಲೋಪವೂ ಇಲ್ಲದೆ ತಕ್ಷಣವೇ ಯುದ್ಧಮಾಡುವಂತೆ ಸಿದ್ಧವಾಗಿದ್ದಿತು. ಮಹಮ್ಮದೀಯರು ಆವಾಗ ದಂಡೆತ್ತಿ ಬರುವರೋ— ಎಂದು ಸಂದೇಹದಿಂದ ವಿಜಯಸಿಂಹನು ಬೇಕಾದ ಯುದ್ಧ

ಸಾಮಗ್ರಿಗಳನ್ನೂ ಆಹಾರಪದಾರ್ಥಗಳನ್ನೂ ಸಮೃದ್ಧಿಯಾಗಿ ಇಟ್ಟಿದ್ದನು. ಎಂತಹ ಪ್ರಬಲಶತ್ರುವಾದರೂ ಬಂದು ೨-೩ ವರ್ಷಗಳ ವರೆಗೆ ನಗರವನ್ನು ಮುತ್ತಿದರೂ ಅಲ್ಲಿಯ ಪ್ರಜೆಗಳಿಗಾಗಲಿ ಸೈನಿಕರಿಗಾಗಲಿ ಆಹಾರ ವಿಷಯದಲ್ಲಲ್ಲದೆ ಮತ್ತಾವ ವಿಷಯದಲ್ಲಿಯೂ ಕೊರತೆಯಾಗುವಂತಿರಲಿಲ್ಲ.

ಶತ್ರುಗಳು ನಗರವನ್ನು ಮುತ್ತಿದರೂ ಸ್ವಲ್ಪವೂ ಭಯಪಡದೆ ವಿಜಯಸಿಂಹನು ತಕ್ಕ ಯುದ್ಧಸನ್ನಾಹಗಳನ್ನು ಮಾಡುತ್ತಲೇ ಇದ್ದನು. ತನ್ನ ಸೇನಾನಾಯಕರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಭಾಗವನ್ನು ಕೊಟ್ಟು ಪಟ್ಟಣದ ನಾಲ್ಕು ಕಡೆಯಲ್ಲಿಯೂ ಕಾವಲಿರಿಸಿದನು. ಅವರಲ್ಲಿ ಮದರಸಿಂಗಸೆಂಬವನು ೫೦,೦೦೦ ಸೈನ್ಯದಿಂದ ಕೂಡಿ ಉತ್ತರದಲ್ಲಿಯೂ ಜಯಸೇನನು ೩೦,೦೦೦ ಸೈನ್ಯದಿಂದ ಪೂರ್ವದಲ್ಲಿಯೂ ಉಳಿದವರು ಪಶ್ಚಿಮ ದಕ್ಷಿಣ ಭಾಗದಲ್ಲಿಯೂ ಕಾವಲಿದ್ದರು. ವಿಜಯಸಿಂಹನು, ಶತ್ರುಗಳು ಯಾರಾದರೂ ರಹಸ್ಯವಾಗಿ ಗೋಡೆಗಳನ್ನು ಹತ್ತಿ ಬರುವರೇಸೆಂಬ ಶಂಕೆಯಿಂದ ತಾನೂ ಸಹ ಬುರುಜುಗಳಮೇಲೆ ಹತ್ತಿ ಸುತ್ತಲೂ ನೋಡುತ್ತಿದ್ದನು ; ತನ್ನ ಆಜ್ಞಾನುಸಾರ ಸೈನಿಕರೆಲ್ಲರೂ ಜಾಗರೂಕರಾಗಿರುವರೋ ಇಲ್ಲವೋ ಎಂದು ಪ್ರತಿದಿನವೂ ಖಡ್ಗಪಾಣಿಯಾಗಿ ಹೊರಟು ಅರ್ಧರಾತ್ರಿಯಲ್ಲಿ ನಗರದಲ್ಲೆಲ್ಲ ಸಂಚರಿಸುತ್ತಿದ್ದನು. ವಿಜಯಸಿಂಹನು ತಾನೊಬ್ಬನೇ ಕುಳಿತು ಕಾರ್ಯೋಪಾಯವನ್ನು ಯೋಚಿಸುತ್ತಿದ್ದಾಗ ವಿಮಲೆಯು ತನ್ನ ತಂದೆಯ ಬಳಿಗೆ ಬಂದು ಆತನಿಗೆ ಧೈರ್ಯವನ್ನುಂಟುಮಾಡುತ್ತ—" ತಂದೆಯೇ ! ಇಷ್ಟುಮಾತ್ರಕ್ಕೆ ಭಯಪಡುವುದೇಕೆ ? ಎಂತಹ ಆಪತ್ತು ಸಂಭವಿಸಿದರೂ ನಮ್ಮ ಕ್ಷತ್ರಿಯ ಧರ್ಮವನ್ನು ಬಿಡದಿರುವುದೇ ನಮಗೆ ಜಯಪ್ರದವು. " ಎಂದಳು.

ವಿಜಯಸಿಂಹ.—" ಅಮ್ಮಾ ! ಚೆನ್ನಾಗಿ ಹೇಳಿದೆ. ನಮ್ಮ ಸೇವಕರೆಲ್ಲರೂ ಅತ್ಯಂತ ಜಾಗರೂಕರಾಗಿ ಪಟ್ಟಣದ ನಾಲ್ಕುಕಡೆಗಳಲ್ಲಿಯೂ ಕಾವಲಿರುವರು. ಇನ್ನು ಈ ಪಾದಶಾಹನು ನಮ್ಮನ್ನೇನು ಮಾಡಬಲ್ಲನು ?"

ಎಂದು ಮಗಳಿಗೆ ಧೈರ್ಯದಿಂದ ಉತ್ತರಕೊಟ್ಟನು. ವಿಜಯಸಿಂಹನು ಸಹ ಜಧೈರ್ಯಾಲಂಕೃತನಾಗಿದ್ದರೂ ತಾನೊಬ್ಬನೇ ಮಹಮ್ಮದೀಯರೊಡನೆ ಹೋರಾಡುವುದು ಕಷ್ಟವೆಂದು ತಿಳಿದು ರಾಜಪುತ್ರಸ್ಥಾನದಲ್ಲಿರುವ ರಾಜರೆಲ್ಲರಿಗೂ ತನಗೆ ಸಹಾಯಕ್ಕಾಗಿ ಬರಬೇಕೆಂದು ಪ್ರಾರ್ಥಿಸಿ ಹೀಗೆ ಕಾಗದಗಳನ್ನು ಬರೆದನು.—

"ವಿಶ್ವಸನೀಯರಾದ ರಜಪೂತರಿರಾ !

ನನ್ನ ಮಗಳಾದ ವಿಮಲಾದೇವಿಯನ್ನು ಕರೆದುಕೊಂಡು ಹೋಗಬೇಕೆಂದು ಬಾದಶಹನು ತನ್ನ ಸೈನ್ಯವನ್ನು ಕಳುಹಿಸಿ ನನ್ನ ಪಟ್ಟಣವನ್ನು ಮುತ್ತಿರುವನು. ಇದಕ್ಕಿಂತಲೂ ದಾರುಣಕೃತ್ಯವು ಮತ್ತಾವುದಿರುವುದು ? ರಜಪೂತರಕ್ತವು ನನ್ನ ಧಮನಿಗಳಲ್ಲಿ ಪ್ರವಹಿಸುತ್ತಿರುವ ವರೆಗೂ ನನ್ನ ಮಗಳನ್ನು ಯವನರಿಗೆ ಕೊಟ್ಟು ಮದುವೆ ಮಾಡಲು ಸಮ್ಮತಿಸುವೆನೆ ? ಬಾದಶಹನು ಇಂತಹ ಕಾರ್ಯವನ್ನು ಮಾಡಲು ಯತ್ನಿಸಿರುವುದು ನನಗೊಬ್ಬನಿಗೇ ಅಲ್ಲ,—ರಜಪೂತವಂಶಕ್ಕೇ ಪರಾಭವವೆನಿಸುವುದಲ್ಲವೆ ? ಆದುದರಿಂದ, ನೀವೆಲ್ಲರೂ ಈಗ ನನಗೆ ಸಹಾಯಕರಾಗಿ ಬರಬೇಕೆಂದು ನಾನು ಬರೆಯಬೇಕಾದುದೇ ಇಲ್ಲ. ಒಂದು ವೇಳೆ ಸಹಾಯಕ್ಕೆ ಬರದಿದ್ದರೂ ನಾನು ಇದಕ್ಕೆ ಸ್ವಲ್ಪವೂ ಭಯಪಡುವವನಲ್ಲ. ಆದರೂ ನೀವೆಲ್ಲರೂ ನನಗೆ ಸಹಾಯಮಾಡುವುದು ಯುಕ್ತವಾದುದರಿಂದ ಈ ವಿಷಯವನ್ನು ನಿಮಗೆ ತಿಳಿಯಪಡಿಸಿರುವೆನು.

ಇತಿ,— ವಿಜಯಸಿಂಹ."

ಹೀಗೆ ಬರೆದ ಕಾಗದಗಳನ್ನು ಮಾಯಾಮಾರ್ಗಗಳನ್ನು ಚೆನ್ನಾಗಿ ಬಲ್ಲ ಒಬ್ಬ ಸೇವಕನ ವಶಕ್ಕೊಪ್ಪಿಸಿ, ಶತ್ರುಗಳ ಕೈಯ್ಗೆ ಸಿಕ್ಕದಂತೆ ಮಾಯಾವೇಷವನ್ನು ಧರಿಸಿ ಈ ಕಾಗದವನ್ನು ತೆಗೆದುಕೊಂಡು ಹೋಗಿ ರಾಜಪುತ್ರರಾಜರೆಲ್ಲರಿಗೂ ತೋರಿಸೆಂದು ಹೇಳಿ ಕಳುಹಿದನು.

ಇತ್ತ ವಿಮಲಾದೇವಿಯು ಶತ್ರುಗಳು ಪಟ್ಟಣವನ್ನಾಕ್ರಮಿಸಲು ಯಾವ ಉಪಾಯವನ್ನಾಲೋಚಿಸಿರುವರೋ ಎಂದು ಸಂದೇಹದಿಂದ ರಹಸ್ಯವಾಗಿ ತನ್ನ ಸೇವಕರನ್ನು ಕಳುಹಿ, ಮಹಮ್ಮದೀಯರ ಯುದ್ಧಸನ್ನಾಹಗಳನ್ನು ತಿಳಿಯುತ್ತಿದ್ದಳು ಶತ್ರುಗಳು ಪಟ್ಟಣವನ್ನು ಮುತ್ತಿದಂದಿನಿಂದಲೂ ಆಕೆಗೆ ತನ್ನ ತಂದೆಯೊಡನೆ ಯುದ್ಧಸನ್ನಾಹದ ವಿಷಯವಾಗಿ ಆಲೋಚಿಸುವುದೇ ಕೆಲಸವಾಗಿದ್ದಿತು. ಅಷ್ಟೇ ಅಲ್ಲ ; ಆಗಾಗ ಪುರುಷವೇಷವನ್ನು ಧರಿಸಿ ನಗರದಲ್ಲಿ ಸಂಚರಿಸುತ್ತ ಸೈನಿಕರನ್ನೂ ಪರೀಕ್ಷಿಸುತ್ತಿದ್ದಳು. ತನ್ನ ತಂದೆಗೂ ಮಂತ್ರಿಗಳಿಗೂ ಸೈನಿಕರಿಗೂ ಕಾಲೋಚಿತವಾದ ಸಲಹೆಗಳನ್ನು ಕೊಡುತ್ತ ಯುದ್ಧಸನ್ನಾಹದಲ್ಲಿ ನಿರತಳಾಗಿದ್ದಳು.

ಒಂದುದಿನ ವಿಮಲಾದೇವಿಯು ತನ್ನ ಅಂತಃಪುರದಲ್ಲಿ ಕುಳಿತುಕೊಂಡು ಅತ್ಯಂತ ವ್ಯಸನಾಕ್ರಾಂತಳಾಗಿ ತನ್ನೋರ್ವಳಿಗಾಗಿ ಹೆತ್ತತಂದೆಯೂ ಸೈನಿಕರೂ ಪೌರರೂ ಮಂತ್ರಿಗಳೂ ಕೂಡ ಇಷ್ಟು ಕಷ್ಟಗಳನ್ನು ಅನುಭವಿಸಬೇಕಾಯಿತೆಂದು ಮನಸ್ಸಿನಲ್ಲಿ ನೊಂದು,—“ಅಯ್ಯೋ ! ನಿರ್ಭಾಗ್ಯೆಯಾದ ನನ್ನಿಂದಲೇ ಅಲ್ಲವೆ ನನ್ನ ತಂದೆಗೆ ಇಷ್ಟು ಕಷ್ಟಗಳು ಪ್ರಾಪ್ತವಾಗಿರುವುವು. ಇಷ್ಟಕ್ಕೂ ನನ್ನನ್ನು ಕರೆದುಕೊಂಡು ಹೋಗಬೇಕೆಂಬ ಬುದ್ಧಿಯು ಬಾದಶಹನಿಗೇಕೆ ಹುಟ್ಟಿತು ? ಆತನಿಗೆ ನಾನಾವ ದ್ರೋಹ ಮಾಡಿರುವೆನು ? ಹಗಲೂ ರಾತ್ರಿಯೂ ಆಹಾರನಿದ್ರೆಗಳಿಲ್ಲದೆ ಕಷ್ಟಪಡುತ್ತಿರುವ ನನ್ನ ತಂದೆಯ ಕಷ್ಟಗಳನ್ನು ನೋಡಿ ಹೇಗೆ ಸಹಿಸಲಿ ? ಅಥವಾ ಪ್ರಾಣಹಿಂಸೆಗೆ ಭೀತಳಾಗಿ ಪವಿತ್ರವಾದ ಕ್ಷತ್ರಿಯ ವಂಶಕ್ಕೇ ಲಾಂಛನವಾಗುವಂತೆ ಯವನನನ್ನು ಮದುವೆಯಾಗುವುದಾದರೂ ಹೇಗೆ ?........” ಹೀಗೆ ಕೆಲವು ಹೊತ್ತು ದುಃಖಿಸುತ್ತಿದ್ದು, ಆ ಬಳಿಕ ಧೈರ್ಯವನ್ನವಲಂಬಿಸಿ,—

“ಬ್ರಹ್ಮಾಂಡಭಾಂಡವು ತಲೆಕೆಳಗಾದರೂ ನಾನು ಪವಿತ್ರವಾದ ರಜಪೂತ ಧರ್ಮವನ್ನು ಬಿಡಲಾರೆನು. ಅಷ್ಟೇಕೆ ? ನನ್ನ ತಂದೆಯು ಬಳೆಯನ್ನು ತೊಡುವವನಾಗಿಲ್ಲ ; ಬಲಹೀನನಲ್ಲ , ಅಚ್ಚ ರಜಪೂತ ರಕ್ತವು

ಆತನ ಧಮಸಿಯಲ್ಲಿರುವವರೆಗೂ ನನ್ನ ಧರ್ಮಕ್ಕೆ ಹಾನಿ ತಟ್ಟುವುದಿಲ್ಲ. ಈಗಿನ ಯುದ್ಧದಲ್ಲಿ ಜಯವು ನಮಗೇ ಲಭಿಸುವುದೆಂದು ನನಗೆ ಭರವಸೆಯುಂಟು. ಈ ನಮ್ಮ ಸ್ಥಿತಿಯನ್ನು ತಿಳಿದು, ಉದಯಪುರಾಧಿನಾಥನಾದ ರಾಜಸಿಂಹರಾಜನು ಕೂಡ ಖಂಡಿತ ನಮಗೆ ಸಹಾಯಕನಾಗಿ ಬರುವನು. ಆ ದಿನ ಅರಣ್ಯದಲ್ಲಿ ನನಗೆ ಆತನು ತನ್ನ ಉಂಗುರವನ್ನು ತೆಗೆದುಕೊಟ್ಟಾಗಲೇ ಆ ಸುಂದರಾಕಾರನ ಸದಯಹೃದಯವನ್ನು ತಿಳಿದುಕೊಂಡಿರುವೆನು.''

ಎಂಬುದಾಗಿ ತನ್ನೊಳಗೆ ಆಲೋಚಿಸಿಕೊಳ್ಳುತ್ತಿರುವಷ್ಟರಲ್ಲಿಯೇ ಪದ್ಮೆಯು ಅಲ್ಲಿಗೆ ಬಂದು ಆಕೆಯನ್ನು ನೋಡಿ—"ಅಮ್ಮಾ! ವಿಮಲಾ! ಒಬ್ಬಳೇ ಕುಳಿತು ಏನನ್ನು ಆಲೋಚಿಸುತ್ತಿರುವೆ? ಮಹಡಿಯಮೇಲೇರಿ ಹೋಗುವ—ಬಾ.'' ಎಂದು ಆಕೆಯ ಕೈಹಿಡಿದು ಮೇಲಕ್ಕೆ ಹೋಗಿ ಅಲ್ಲಿದ್ದ ಒಂದು ಮಂಚದಮೇಲೆ ಕುಳಿತು, ಸುತ್ತಲೂ ಇದ್ದ ಶತ್ರುಸೈನ್ಯವನ್ನು ನೋಡುತ್ತ ಪರಸ್ಪರ ಮಾತನಾಡುತ್ತಿದ್ದರು. ಸ್ವಲ್ಪಹೊತ್ತಾದ ಮೇಲೆ ಹಂಸಪಕ್ಷಿಯಂತೆ ಶುಭ್ರವಾದ ಒಂದು ಪಾರಿವಾಳವು ಮಹಡಿಯಮೇಲೆ ಅವರಿಗಿದಿರಾಗಿ ಹಾರಾಡುತ್ತಾ ಬಂದು ಒಂದು ಕಿಟಕಿಯಮೇಲೆ ಕುಳಿತುಕೊಂಡಿತು. ಅವರಿಬ್ಬರೂ ಆನಂದಿತರಾಗಿ ಆ ಕಪೋತರಾಜನನ್ನು ಹಿಡಿಯಬೇಕೆಂದು ನಿಶ್ಚಯಿಸಿದರು. ಪದ್ಮೆಯು ಪಾರಿವಾಳವನ್ನು ಹಿಡಿಯಲು ಮುಂದಾದಳು. ಅಷ್ಟರಲ್ಲಿ ವಿಮಲೆಯನ್ನು ಅವಳ ತಂದೆಯು ಕೂಗಿದುದನ್ನು ಕೇಳಿ ವಿಮಲೆಯು, ಪಾರಿವಾಳವನ್ನು ಹಿಡಿದಿರಬೇಕೆಂದೂ ತಾನು ತಂದೆಯು ಕೂಗಿದುದೇಕೆಂದು ಕೇಳಿ ಬರುವೆನೆಂದೂ ಪದ್ಮೆಗೆ ಹೇಳಿ, ಕೆಳಕ್ಕಿಳಿದು ಹೊರಟುಹೋದಳು. ಪದ್ಮೆಯು ತನ್ನನ್ನು ಹಿಡಿಯಲು ಬರುವುದನ್ನು ನೋಡಿ ಪಾರಿವಾಳವು ಹಾರಿಹೋಗದೆ ಅಲ್ಲಿಯೇ ಇದ್ದಿತು. ಪದ್ಮೆಯು ಮೆಲ್ಲಗೆ ಬಂದು ಅದನ್ನು ಹಿಡಿದುಕೊಂಡು ತನ್ನ ಕೈಯ್ಯುಗಳಿಂದ ಅದನ್ನು ಸವರುತ್ತ ಪ್ರೀತಿಯಿಂದ ಮುದ್ದಿಸುತ್ತಿರಲು, ಅದರ ಕೊರಳಿಗೆ ಕಟ್ಟಿದ್ದ ಕಾಗದನ್ನು ಕಂಡು ಕೌತುಕಗೊಂಡು ಅದನ್ನು ಬಿಡಿಕೊಂಡಳು. ಆ ಕಾಗದವನ್ನು ನೋಡಿ,

ಪದ್ಮೆಯ ಮುಖವು ಪ್ರಫುಲ್ಲವಾಯಿತು; ಸಂತೋಷಾತಿಶಯದಿಂದ ಶರೀರವೆಲ್ಲ ರೋಮಾಂಚಿತವಾಯಿತು. ಕಿರುನಗೆ ನಗುತ್ತ, ಸ್ವಲ್ಪ ಹೊತ್ತು ಯೋಚಿಸಿ, ಆ ಕಾಗದದ ಮೇಲೆ ತನ್ನ ಉಗುರಿನಿಂದ—"ಸರಿಯೆ" ಎಂದು, ಮೂರು ಅಕ್ಷರಗಳನ್ನು ಕೆತ್ತಿ ಎಂದಿನಂತೆ ಪಾರಿವಾಳದ ಕೊರಳಿಗೆ ಕಟ್ಟಿ ಅದನ್ನು ಬಿಟ್ಟಳು. ತಕ್ಷಣವೇ ಪಾರಿವಾಳವು ಹೊರಟು ಹೋಯಿತು.

ಇಷ್ಟರಲ್ಲಿ ವಿಮಲೆಯು ಮೇಲಕ್ಕೆ ಬಂದು ಆತುರದಿಂದ—"ಪದ್ಮಾ! ಪಾರಿವಾಳವೆಲ್ಲಿ?" ಎಂದು ಕೇಳಿದಳು. ಪದ್ಮೆಯು ರಹಸ್ಯವನ್ನು ತಿಳಿಸಲು ಇಷ್ಟವಿಲ್ಲದೆ,—"ಅದು ನನಗೆ ಸಿಕ್ಕಲಿಲ್ಲ. ನಾನು ಹಿಡಿಯುವಷ್ಟರಲ್ಲಿ ಹಾರಿಹೋಯಿತು ನಾನೇನು ಮಾಡಲಿ?" ಎಂದು ಹೇಳಿದಳು. ಪಾರಿವಾಳವು ಸಿಕ್ಕದುದರಿಂದ ವಿಮಲೆಯು ಸ್ವಲ್ಪ ವ್ಯಸನಪಟ್ಟು ಪದ್ಮೆಯೊಡನೆ ಕೆಳಕ್ಕಿಳಿದು ಹೋದಳು. ಕಪೋತವನ್ನು ಬಿಟ್ಟಕ್ಷಣದಿಂದಲೂ ಪದ್ಮೆಯು ತನ್ನಲ್ಲಿ ಏನೇನೋ ಯೋಚಿಸತೊಡಗಿದಳು; ಬಾರಿಬಾರಿಗೂ ಎಷ್ಟು ಹೊತ್ತಿರುವುದೆಂದು ಆಕಾಶವನ್ನು ನೋಡುತ್ತ ಎಂದಿಗೆ ರಾತ್ರಿಯಾಗುವುದೆಂಬ ತವಕದಲ್ಲೇ ಇದ್ದಳು. ಅಂದು ರಾತ್ರಿ ಎಲ್ಲರೂ ಭೋಜನಾನಂತರದಲ್ಲಿ ಯಥಾಕ್ರಮವಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಮಲಗಿದರು. ಆದರೆ, ಪದ್ಮೆಗೆ ಮಾತ್ರ ಆ ರಾತ್ರಿ ನಿದ್ರೆಬರಲಿಲ್ಲ. ಸ್ವಲ್ಪಹೊತ್ತಿನವರೆಗೆ ಆಕೆಯು ಸುಮ್ಮನಿದ್ದು, ಆಮೇಲೆ ಮೆಲ್ಲನೆ ಮಹಡಿಯನ್ನು ಹತ್ತಿ ಬಾಗಿಲುಗಳನ್ನು ದಾಟಿ ಉತ್ತರದಿಕ್ಕಿನಲ್ಲಿದ್ದ ಕಿಟಕಿಯ ಬಳಿಗೆ ಬಂದು, ಕಿಟಕಿಯ ಸಲಾಕಿಗೆ ಒಂದು ಉದ್ದವೂ ಬಲವೂ ಆದ ಹಗ್ಗವನ್ನು ಕಟ್ಟಿ ಅದನ್ನು ಕೆಳಕ್ಕೆ ಇಳಿಬಿಟ್ಟಳು. ಬಾರಿಬಾರಿಗೂ ಕೆಳಗೆ ಬಗ್ಗಿನೋಡುತ್ತ ಪುನಃ ಹಿಂದೆ ಹೋಗುತ್ತ ಅಧಿಕ ಪ್ರಯಾಸದಿಂದ ರಾತ್ರಿ ೧೨ ಘಂಟೆಯ ವರೆಗೂ ಕಾಲವನ್ನು ಕಳೆದಳು. ಇಷ್ಟರಲ್ಲಿ ಒಬ್ಬ ರಾಜಪುತ್ರನು ಕಿಟಕಿಯಿಂದ ಜೋಲಾಡುತ್ತಿದ್ದ ಹಗ್ಗವನ್ನು ಹಿಡಿದುಕೊಂಡು ಮೇಲಕ್ಕೆ ಹತ್ತಿ ಮಹಡಿಯನ್ನು ಪ್ರವೇಶಿಸಿ ಕಿರುನಗೆಯಿಂದ

ನಗುತ್ತಿದ್ದ ಪದ್ಮೆಯನ್ನು ನೋಡಿ ಪ್ರೇಮದಿಂದ ಆಲಿಂಗಿಸಿಕೊಂಡನು. ಪದ್ಮೆಯು ಲಜ್ಜೆಯಿಂದ ತಲೆ ತಗ್ಗಿಸಿ ನಿಂತಳು. ರಾಜಪುತ್ರನು ತನ್ನ ಪ್ರಿಯೆಯ ಮುಖವನ್ನು ಮೇಲಕ್ಕೆತ್ತಿ ನೋಡುತ್ತ ಹೀಗೆ ಸಂಭಾಷಿಸಿದನು.—

ರಾಜಪುತ್ರ—ಪದ್ಮಾ ! ಪಾರಿವಾಳಕ್ಕೆ ಕಟ್ಟಿದ್ದ ಕಾಗದವನ್ನು ನೋಡಿಕೊಂಡಿಯಾ ?

ಪದ್ಮಾ—ನೋಡಿದೆನು. ಇಷ್ಟು ಹೊತ್ತಿನಲ್ಲಿ ಇಲ್ಲಿಗೆ ಬರಲು ಕಾರಣವೇನು ?

ರಾಜಪುತ್ರ—ಕಾರಣವೇನೆಂಬುದನ್ನು ನೀನು ತಿಳಿದೇ ಇಲ್ಲವೋ ? ನಿನಗಿಂತಲೂ ನನಗೆ ಮತ್ತಾವ ಕಾರಣವಿರುವುದು. ನಿನ್ನನ್ನು ನೋಡುವುದಕ್ಕಾಗಿಯೇ ಬಂದೆನು.

ಪದ್ಮ—ಯವನ ಸೈನ್ಯವು ನಗರವನ್ನು ಸುತ್ತಿರುವುದರಿಂದ ನಿಮ್ಮ ಕಾಗದವನ್ನು ನೋಡಿದುದು ಮೊದಲು ನನಗೆ ಭಯವಾಗುತ್ತಿದ್ದಿತು. ಅವರ ಕಣ್ಣಿಗೆ ಬಿದ್ದರೆ ಅಪಾಯವಾಗದೆ

ರಾಜಪುತ್ರ—ಪದ್ಮಾ ! ಇದಕ್ಕೇಕೆ ಇಷ್ಟು ಭಯಪಡುವೆ ? ಈ ದಾರಿಯು ನನಗೂ ನನ್ನ ಪರಿಚರರಾದ ಭಿಲ್ಲರಿಗೂ ಮಾತ್ರವೇ ತಿಳಿದಿರುವುದಲ್ಲದೆ ಮತ್ತಾರಿಗೂ ತಿಳಿಯದು.

ಪದ್ಮ—ನಮ್ಮ ರಾಜಧಾನಿಗೆ ಎಂತಹ ಅವಸ್ಥೆಯು ಪ್ರಾಪ್ತವಾಯಿತೋ ನೋಡಿದಿರಾ ?

ರಾಜಪುತ್ರ—ನೀನು ಆ ಸಮಾಚಾರವನ್ನು ಹೇಳಬೇಕಾದುದೇ ಇಲ್ಲ ; ನನಗೆ ಎಲ್ಲವೂ ಗೊತ್ತಾಗಿದೆ.

ಪದ್ಮ—ತಿಳಿದಿದ್ದರೂ ನೀವು ಹೀಗೆ ಸುಮ್ಮನಿರುವುದು ಸರಿಯಲ್ಲ.

ರಾಜಪುತ್ರ—(ನಗುತ್ತ) ಏನು ? ಸುಮ್ಮನಿರುವೆನೆಂದೇ ತಿಳಿದಿರುವೆಯೊ ? ಅದಕ್ಕೆ ಬೇಕಾದ ಪ್ರಯತ್ನವನ್ನೆಲ್ಲಾ ಮಾಡುತ್ತಲೇ ಇರುವೆನು.

ಆತುರಪಟ್ಟರೆ ಕಾರ್ಯವಾದೀತೆ ? ನಮ್ಮ ತಂದೆಯು ನನ್ನನ್ನು ಈ ಪಟ್ಟಣಕ್ಕೆ ಬರಗೊಡಿಸನಾದುದರಿಂದ ನಾನು ಯಾವ ಪ್ರಯತ್ನವನ್ನು ಮಾಡುವುದಕ್ಕೂ ಅನುಕೂಲವಿಲ್ಲದಿರುವುದು. ಆದರೂ ನಾನು ಸುಮ್ಮನೇ ಇಲ್ಲ.

ಪದ್ಮ—ಇಂತಹ ಸಮಯದಲ್ಲಿ ಆತುರಪಡದಿದ್ದರೆ ಹೇಗೆ ? ಕಾರ್ಯವು ಮಿಂಚಿಹೋದಮೇಲೆ ಮಾಡುವುದೇನು ?

ರಾಜಪುತ್ರ—ಪದ್ಮಾ ! ನೀನಿನ್ನೂ ಚಿಕ್ಕವಳು. ನಿನಗೆ ಚೆನ್ನಾಗಿ ಗೊತ್ತಿಲ್ಲ ; ಸುಮ್ಮನಿರು. ನಮ್ಮ ರಹಸ್ಯವು ಮತ್ತಾರಿಗಾದರೂ ತಿಳಿದರೆ ತೊಂದರೆಯುಂಟಾಗುವುದು. ಅರ್ಧರಾತ್ರಿಯಾಗಿ ಹೋಯಿತು. ಇನ್ನು ನಾನು ಹೊರಡುವೆನು. ಪ್ರತಿಶುಕ್ರವಾರವೂ ನಾನು ಇಲ್ಲಿಗೆ ನಿನ್ನನ್ನು ನೋಡಲು ಬರುವೆನು. ನಾನು ಬರುವ ಹೊತ್ತಿಗೆ ಸರಿಯಾಗಿ ನೀನು ಇಲ್ಲಿರಬೇಕು.

ಎಂದು ಹೇಳಿ ಕಿಟಕಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದುಕೊಂಡು ತನಗಾಗಿ ಕಾದುಕೊಂಡಿದ್ದ ಭಿಲ್ಲರೊಡನೆ ಕೂಡಿ ಪರ್ವತಮಾರ್ಗದಲ್ಲಿ ಹೊರಟುಹೋದನು. ಆನಂತರ ಪದ್ಮೆಯೂ ಮಹಡಿಯಿಂದ ಕೆಳಗಿಳಿದು ತನ್ನ ಕಿರುಮನೆಗೆ ಹೋಗಿ ಮಲಗಿಕೊಂಡಳು. ಆ ರಾಜಪುತ್ರನು ಶಿವಸಿಂಗನೆಂಬುದನ್ನು ನಾವು ನಮ್ಮ ವಾಚಕರಿಗೆ ಹೇಳಬೇಕಾದುದೇ ಇಲ್ಲ.

---

## ಹದಿನೆಂಟನೆಯ ಪ್ರಕರಣ

---

### (ರುಕ್ಮಿಣೀ ಕಲ್ಯಾಣ.)

ಮಹಮ್ಮದೀಯನು ರೂಪನಗರವನ್ನು ಮುತ್ತಿ ಆರು ತಿಂಗಳಾಗುತ್ತ ಬಂದಿತು. ವಿಜಯಸಿಂಹನು ಬರೆದು ಕಳುಹಿದ ಉತ್ತರ ಪತ್ರವನ್ನು ರಾಜಪು

ತ್ರರಾಜರೆಲ್ಲರೂ ನೋಡಿದರೂ ಒಬ್ಬರೂ ಆತನಿಗೆ ಸಹಾಯಕರಾಗಿ ಬರಲಿಲ್ಲ. ಪ್ರತಿದಿನವೂ ಯುದ್ಧ ಪ್ರಯತ್ನದಲ್ಲಿ ಜಾಗರೂಕರಾಗಿ ವಿಜಯಸಿಂಹನ ಮಂತ್ರಿವರ್ಗರೂ ಸೇನಾನಾಯಕರೂ ಪಟ್ಟಣವನ್ನು ಕಾಪಾಡುತ್ತಿದ್ದರು. ಮಹಮ್ಮದೀಯರು ರಜಪುತ್ರರೊಡನೆ ಹೋರಾಡುತ್ತಿದ್ದರೂ ಕಡೆಗೆ ಜಯಶಾಲಿಗಳಾಗಲಿಲ್ಲ. ನಮಗೆ ಬೇಕಾದ ಕಾರ್ಯಗಳನೇಕವಿರುವಾಗ ಕಲಹವು ಹೇಗೆ ತಾನೇ ನಿಲ್ಲುವುದು ? ಈ ಆರು ತಿಂಗಳುಗಳಿಂದಲೂ ತನ್ನ ತಂದೆಯೊಡನೆ ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದರೂ ಒಂದು ದಿನ ವಿಮಲಾದೇವಿಯು ಪುರಾಣ ಶ್ರವಣದಿಂದಲಾದರೂ ತನ್ನ ಆಯಾಸವನ್ನು ಹೋಗಲಾಡಿಸಿಕೊಳ್ಳುವೆನೆಂದು ನಿಶ್ಚಯಿಸಿ, ತಮ್ಮ ಪುರೋಹಿತನಾದ ಶ್ಯಾಮಲಪಂಡಿತನನ್ನು ಕರೆಯಿಸಿ ಭಾಗವತವನ್ನು ಓದಬೇಕೆಂದು ಕೇಳಿಕೊಂಡಳು.

ಶ್ಯಾಮಲಪಂಡಿತನು ವಿಜಯಸಿಂಹನ ಆಸ್ಥಾನದಲ್ಲಿದ್ದ ಒಬ್ಬ ಬ್ರಾಹ್ಮಣೋತ್ತಮನು. ಆತನು ವಿದ್ವಾಂಸನಾದರೂ ಹಾಸ್ಯದಲ್ಲಿ ಅತಿಚತುರನಾಗಿದ್ದನು. ಭಕ್ಷ್ಯಭೋಜ್ಯಾದಿಗಳಲ್ಲಂತೂ ಆತನೊಡನೆ ಸಮನಾಗಿ ಊಟ ಮಾಡುವವರೇ ಇಲ್ಲ. ಅನೇಕ ವಿಧವಾದ ಭಕ್ಷ್ಯಗಳನ್ನು ನಿತ್ಯವೂ ಪಟ್ಟಿ ಮಾಡುತ್ತ ತನಗೆ ಇಷ್ಟವಾದುದನ್ನು ಮನೆಯಲ್ಲಿ ಮಾಡಿಸುತ್ತ ಅದರ ವಿಷಯವಾಗಿ ಚಿತ್ರಕಲಾಪಗಳನ್ನು ನಡೆಸುತ್ತ ಎಲ್ಲರನ್ನೂ ನಗುವಂತೆ ಮಾಡುವುದೇ ಆತನ ಕೆಲಸವಾಗಿದ್ದಿತು. ಪುರಾಣವನ್ನು ಹೇಳುವುದರಲ್ಲಿ ಆತನಿಗೆ ಸಮಾನರೇ ಇಲ್ಲವೆಂದು ಹೇಳಬಹುದ .

ಆ ದಿನ ಪುರಾಣಶ್ರವಣಕ್ಕಾಗಿ ವಿಮಲೆಯ ಸಖಿಯರೂ ಬಂಧುಮಿತ್ರರೂ ಬಂದು ಸೇರಿದರು. ವಿಮಲೆಯು ಬಂದ ಸ್ತ್ರೀಜನರನ್ನು ಉಚಿತಾಸನದಲ್ಲಿ ಕುಳ್ಳಿರಿಸಿದಳು. ನಮ್ಮ ಶ್ಯಾಮಲಪಂಡಿತನು ತನ್ನ ಆಸನದ ಮೇಲೆ ಕುಳಿತುಕೊಂಡು ಪಂಚಾಂಗದ ಕಟ್ಟನ್ನು ಬಿಚ್ಚಿ ಅದರಲ್ಲಿದ್ದ ಸುಲೋ

ಜನವನ್ನು ತೆಗೆದುಕೊಂಡು ಕರವಸ್ತ್ರದಿಂದ ಅದನ್ನು ಒರಸಿ ಧರಿಸಿದನು. ಆದರೆ ಆತನು, ಭಾಗವತದಲ್ಲಿ ಈ ದಿನ ಯಾವ ಭಾಗವನ್ನು ಓದಬೇಕೆಂಬುದನ್ನು ನಿಶ್ಚಯಿಸಿರಲಿಲ್ಲ. ಅಲ್ಲದ್ದೆ ಸ್ತ್ರೀಯರಲ್ಲಿ ಕೆಲವರು ಶ್ಯಾಮಲಪಂಡಿತನನ್ನು ಕುರಿತು,—"ಪುರೋಹಿತರೆ, ಶ್ರೀಕೃಷ್ಣಾವತಾರದ ಕಥೆಯನ್ನು ಓದಿರಿ!" "ಶ್ರೀಕೃಷ್ಣಾವತಾರದ ಕಥೆಗಿಂತಲೂ ಪ್ರಹ್ಲಾದ ಚರಿತೆಯು ಅತ್ಯಂತ ಭಕ್ತಿರಸವಾಗಿರುವುದಲ್ಲವೆ?" ಆಗ ಮತ್ತೆ ಕೆಲವರು "ಸರಿ, ಪ್ರಹ್ಲಾದ ಚರಿತೆಯನ್ನು ನಾವು ಇದುವರೆಗೆ ಕೇಳಿಲ್ಲವೆ? ಸತ್ಯಭಾಮೆಯು ನರಕಾಸುರನನ್ನು ಕೊಂದಕಥೆಯು ಇನ್ನೂ ಸ್ವಾರಸ್ಯವಾಗಿರುವುದು," ಎಂದು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೊರಪಡಿಸಿದರು. "ಇವೆಲ್ಲಕ್ಕಿಂತಲೂ ಶ್ರೀಕೃಷ್ಣನು ಗೋಪಬಾಲರೊಡನೆ ಕೂಡಿ, ಉಪ್ಪಿನಕಾಯನ್ನು ತಿನ್ನುತ್ತ ಜೊಲ್ಲು ಸುರಿಸುತ್ತ ಆಟವಾಡಿದ ಕಥಾಭಾಗವನ್ನು ಓದುವುದರಲ್ಲಿ ನನಗೆ ತುಂಬಾ ಇಷ್ಟವು" ಎಂದು ನಮ್ಮ ಶ್ಯಾಮಲಪಂಡಿತನು ಕೂಡ ಹೇಳಿದನು. ಕಡೆಗೆ ವಿಮಲೆಯು ಅದಾವುದೂ ಬೇಡವೆಂದೂ ರುಕ್ಮಿಣೀ ಕಲ್ಯಾಣವನ್ನು ಓದಬೇಕೆಂದೂ ಹೇಳಲು, ಎಲ್ಲರೂ ಅದನ್ನೇ ಅನುಮೋದಿಸಿದರು.

ಶ್ಯಾಮಲಪಂಡಿತನು ರಾಗವನ್ನೆಳೆಯುತ್ತ ಗಣೇಶಸ್ತುತಿಯನ್ನು ಮಾಡಿ ಭಾಗವತಸಂ ಮಂತ್ರ ಪುಷ್ಪಾಕ್ಷತೆಗಳಿಂದರ್ಚಿಸಿ ಪುರಾಣಕ್ಕಾರಂಭಿಸಿದನು. ಪ್ರತಿಪದ್ಯವನ್ನೂ ಓದುತ್ತ ತಲೆಯನ್ನು ಆಗಾಗ ಮೇಲಕ್ಕೆತ್ತಿ ಎರಡು ಕೈಯ್ಗಳಿಂದಲೂ ಅಭಿನಯ ಮಾಡುತ್ತ ಎಲ್ಲರಿಗೂ ತಿಳಿಯುವಂತೆ ಅರ್ಥವನ್ನು ಹೇಳಲು ಮೊದಲು ಮಾಡಿದನು. ಪುರಾಣಿಕನು ಮಾಡಿದ ವಿಕಾರವಾದ ಚೇಷ್ಟೆಗಳನ್ನು ನೋಡಿ ಕೆಲವರು ಬಾಲೆಯರು ನಗಲಾರಂಭಿಸಿದರು. ಆದರೆ ಪಂಡಿತನಿಗೆ ಸಂಗೀತದಲ್ಲಿಯೂ ಸ್ವಲ್ಪಮಟ್ಟಿಗೆ ಜ್ಞಾನವಿದ್ದುದರಿಂದ ಪ್ರತಿಪದ್ಯವನ್ನೂ ರಾಗದಿಂದ ಓದುತ್ತಿದ್ದಾಗ ಸ್ತ್ರೀಯರೆಲ್ಲರೂ ಆನಂದದಿಂದ ಕೇಳುತ್ತಿದ್ದರು. ರುಕ್ಮಿಯು ತನ್ನ ತಂಗಿಯಾದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಬೇಕೆಂದು ಹಟ ಹಿಡಿದಿರುವುದು, ಆತನನ್ನು

ಮದುವೆಯಾಗಲು ಇಷ್ಟವಿಲ್ಲದೆ ರುಕ್ಮಿಣಿಯು ನಿರಂತರವೂ ಚಿಂತಿಸುತ್ತ ಶ್ರೀಕೃಷ್ಣನನ್ನೇ ವಿವಾಹವಾಗಬೇಕೆಂದು ನಿದ್ರಾಹಾರಗಳನ್ನೊಲ್ಲದೆ ಸಂತಪಿಸುತ್ತಿರುವುದು, ಇವೇ ಮೊದಲಾದ ಕಥಾ ಭಾಗಗಳ ಪದ್ಯಗಳನ್ನು ಓದಿ ಪಂಡಿತನು ಅರ್ಥವನ್ನು ವಿವರಿಸುತ್ತಿರುವಾಗ ಅಲ್ಲಿದ್ದ ಕಾಂತಾಮಣಿಯರೆಲ್ಲರೂ ಕಣ್ಣೀರು ಸುರಿಸುತ್ತ ರುಕ್ಮಿಣೀ ದೇವಿಗೆ ಸಂಭವಿಸಿದ ಆಪತ್ತನ್ನು ಕೇಳಿ ಕಳವಳಿಸುತ್ತಿದ್ದರು. ಕಡೆಗೆ ತನಗಾವ ಉಪಾಯವೂ ತಿಳಿಯದಿದ್ದುದರಿಂದ ರುಕ್ಮಿಣೀದೇವಿಯು ನಾಚಿಕೆಯನ್ನು ಬಿಟ್ಟು ಒಬ್ಬ ಬ್ರಾಹ್ಮಣನ ಸಂಗಡ ಶ್ರೀಕೃಷ್ಣನಿಗೆ ತನ್ನ ಸಮಾಚಾರವನ್ನು ಹೇಳಿ ಕಳುಹುವುದನ್ನೂ, ಆ ಬ್ರಾಹ್ಮಣನು ಶ್ರೀಕೃಷ್ಣನ ಬಳಿಗೆ ಹೋಗಿ ವಿಚಾರಕರವಾದ ರುಕ್ಮಿಣೀ ದೇವಿಯ ಸಂದೇಶವನ್ನು ಆತನಿಗೆ ತಿಳಿಸಿದುದನ್ನೂ ಕೇಳಿ ಅಲ್ಲಿದ್ದ ಕಾಂತೆಯರ ಸಹಜಕೋಮಲ ಹೃದಯಗಳು ಕರಗಿ ನೀರಾಗಿ ಹೋದವು. ಅನಂತರ ನಮ್ಮ ಶ್ಯಾಮಲ ಪಂಡಿತನು ಶಿಶುಪಾಲನು ರುಕ್ಮಿಣೀದೇವಿಯನ್ನು ಕೊಂಡೊಯ್ಯಬೇಕೆಂದು ಅಟ್ಟಹಾಸದಿಂದ ಸಕಲ ಸೇನಾಸಮೇತನಾಗಿ ಬರುವ ವಿಷಯ ವಿವರಣದಿಂದ ಕೂಡಿದ ಪದ್ಯವನ್ನು ಓದಿ,—"ಈ ಪ್ರಕಾರವಾಗಿ ಆ ರುಕ್ಮಿಣೀದೇವಿಯನ್ನು ಮದುವೆಮಾಡಿಕೊಳ್ಳಬೇಕೆಂಬುವಂಥ ಉದ್ದೇಶದಿಂದ ಕೂಡಿದಂಥವನಾಗಿ ಒಳ್ಳೆಯ ಶೂರರಾದ ಭಟರಿಂದಲೂ ದೊಡ್ಡ ದೊಡ್ಡ ರಥಗಳಿಂದಲೂ, ಗಾಳಿಯೋಪಾದಿಯಲ್ಲಿ ಓಡುವಂತಹ ಕುದುರೆಗಳಿಂದಲೂ ಕೂಡಿದಂಥವನಾಗಿ ತನ್ನ ಸಮಸ್ತವಾದ ಬಂಧುಮಿತ್ರರಿಂದ ಕೂಡಿದಂಥವನಾಗಿ ಮಿತಿಮೀರಿದ ಗರ್ವದೊಡನೆ ಆ ಶಿಶುಪಾಲನು ಕುಂಡಿನೀಪುರಕ್ಕೆ ಬಂದಂಥವನಾದನಂತೇ........ಏ....ಏ....ಏ...."

ಎಂದು ಕಡೆಯಲ್ಲಿ ದೀರ್ಘವಾಗಿ ರಾಗವನ್ನೆಳೆಯುತ್ತ, ಇದ್ದುದನ್ನು ಸ್ವಲ್ಪವೂ ಇಲ್ಲದುದನ್ನು ಸ್ವಲ್ಪವೂ ಸೇರಿಸಿ ಅರ್ಥವನ್ನು ಹೇಳಿದನು. ಹೀಗೆ ಹೇಳುತ್ತ ಕ್ರಮಕ್ರಮವಾಗಿ ಕೃಷ್ಣನ ಆಗಮನವನ್ನೂ ರುಕ್ಮಿಣಿಯ ವಿವಾಹವನ್ನೂ ಮುಗಿಸಿ ನಮ್ಮ ಶ್ಯಾಮಲಪಂಡಿತನು ಮಂಗಳ ಶ್ಲೋಕವನ್ನು ಹೇಳಿ

ಸುಮ್ಮನಾದನು. ವಿಮಲಾದೇವಿಯು ಮೇಲಕ್ಕೆದ್ದು ನಮಸ್ಕರಿಸಿ, ಮೊದಲು ಶ್ಯಾಮಲಪಂಡಿತನಿಗೆ ದಕ್ಷಿಣೆ ತಾಂಬೂಲಗಳನ್ನೊಪ್ಪಿಸಿ, ಆ ಬಳಿಕ ಅಲ್ಲಿದ್ದ ಕಾಂತಾಮಣಿಯರೆಲ್ಲರಿಗೂ ಪುಷ್ಪತಾಂಬೂಲಗಳನ್ನು ಕೊಟ್ಟು ಬೀಳ್ಕೊಟ್ಟಳು.

ಪುರಾಣ ಶ್ರವಣವಾದುದು ಮೊದಲು ವಿಮಲೆಯು ಏನೇನನ್ನೋ ಯೋಚಿಸುತ್ತಿದ್ದಳು. ಆಕೆಯ ಮುಖಲಕ್ಷಣವನ್ನು ನೋಡಿ ಸಖಿಯರು— "ಯೋಚಿಸುತ್ತಿರುವುದೇನೆಂದು" ಕೇಳಿದರೂ ಆಕೆ ಪ್ರತ್ಯುತ್ತರವನ್ನು ಕೊಡುತ್ತಿರಲಿಲ್ಲ. ಆಕೆ, ಬಾರಿಬಾರಿಗೂ ರುಕ್ಮಿಣೀ ದೇವಿಯು ಬ್ರಾಹ್ಮಣನೊಡನೆ ಶ್ರೀಕೃಷ್ಣನಿಗೆ ಹೇಳಿ ಕಳುಹಿದ ಸಮಾಚಾರವನ್ನು ಸ್ಮರಿಸಿಕೊಳ್ಳುವುದರಲ್ಲಿಯೇ ಆ ದಿನವನ್ನು ಕಳೆದಳು. ಆ ರಾತ್ರಿ ಭೋಜನಾನಂತರ ಶಯ್ಯಾಗೃಹವನ್ನು ಪ್ರವೇಶಿಸಿ ಮಲಗಿದಳು. ಆದರೇನು ? ಆವ ಕಾರಣದಿಂದಲೋ ನಿದ್ರೆ ಹತ್ತಲಿಲ್ಲ. ತನ್ನಲ್ಲಿ ತಾನೇ ದೀರ್ಘಾಲೋಚನೆ ಮಾಡುತ್ತ ಮಾತುಮಾತಿಗೂ ಹಾಸಿಗೆಯಿಂದೇಳುತ್ತ ಎರಡು ಜಾವಗಳ ವರೆಗೂ ಎಚ್ಚರವಾಗಿದ್ದು ಆ ಬಳಿಕ ನಿದ್ರೆಹೋದಳು. ಬೆಳಗಿನ ಜಾವದಲ್ಲಿ ಇನ್ನೂ ಕತ್ತಲೆಯಾಗಿರುವಾಗಲೇ ಎದ್ದು ಪ್ರಾತಃಕೃತ್ಯಗಳನ್ನು ಮಾಡಿಕೊಂಡು ತನ್ನ ಸಖಿಯಾದ ಪದ್ಮೆಯು ಮಲಗಿದ್ದ ಮನೆಗೆ ಬಂದು ಅವಳನ್ನೂ ಎಬ್ಬಿಸಿದಳು. ಪದ್ಮೆಯು ಗಾಬರಿಯಿಂದೆದ್ದು ವಿಮಲೆಯನ್ನು ನೋಡಿ—"ವಿಮಲಾ, ಇದೇನಿದು ! ಇಷ್ಟು ಬೇಗ ಎದ್ದು ಬಂದೆ ?"

ವಿಮಲಾ :—ಎಷ್ಟು ಹೊತ್ತಾಗಿದೆಯೋ ನೋಡಬಾರದೆ ? ಇನ್ನಾದರೂ ಏಳು ಪದ್ಮಾ !

ಪದ್ಮ :—ಹೊತ್ತೇನಾಗಿರುವುದು ? ಇನ್ನೂ ಕೋಳಿಯೂ ಕೂಗಿಲ್ಲ.

ವಿಮಲಾ :—ಹೇಗಾದರೂ ಆಗಲಿ, ಪದ್ಮಾ ! ನಿನ್ನೊಡನೆ ಕೆಲವು ಮಾತುಗಳನ್ನಾಡಬೇಕಾಗಿರುವುದು ; ಅತ್ಯಂತ ರಹಸ್ಯವಾದುದರಿಂದ ಮತ್ತಾರಾದರೂ ಕೇಳುವರೆಂದು ಶಂಕಿಸಿ ಈಗಲೇ ಬಂದೆನು.

ವಿಮಲೆಯ ಮಾತಿನಿಂದ ಪದ್ಮೆಯು ಕುತೂಹಲಗೊಂಡು ಥಟ್ಟನೆದ್ದು ಕುಳಿತು—"ವಿಮಲಾ! ಹಾಗಾದರೆ ರಹಸ್ಯವೇನಿರುವುದೋ ಹೇಳು; ಇದೇ ಸುಸಮಯವು.

ವಿಮಲಾ:—ಆದುದರಿಂದಲೇ ಈಗ ಬಂದುದು; ಇರಲಿ, ಪದ್ಮೆ! ನೀನ್ನೆ ರುಕ್ಮಿಣೀ ಕಲ್ಯಾಣ ವೃತ್ತಾಂತವನ್ನೆಲ್ಲ ಸಮಗ್ರವಾಗಿ ಕೇಳಿದೆಯಷ್ಟೆ!"

ಪದ್ಮೆ:—ಕೇಳಿದೆನು; ಈಗ ಅದರ ಮಾತೇಕೆ?

ವಿಮಲಾ:—ಏನೂ ಇಲ್ಲ, ರುಕ್ಮಿಣಿಯು ಕನ್ಯೆಯಾಗಿದ್ದು ತನಗೆ ಎಂತಹ ಆಪತ್ತು ಸಂಭವಿಸಿದರೂ ಪರಪುರುಷನಿಗೆ ಹಾಗೆ ಓಲೆಯನ್ನು ಬರೆದು ಕಳುಹಬಹುದೆ?

ಪದ್ಮೆ:—ಇದೇ ಒಂದು ದೊಡ್ಡ ರಹಸ್ಯವೊ? ರಹಸ್ಯವೆಂದರೆ, ತುಂಬಾ ಕುತೂಹಲಗೊಂಡಿದ್ದೆನು. ಚೆನ್ನಾಯ್ತು. ಇಷ್ಟಕ್ಕೇ........

ವಿಮಲೆ:—ಪದ್ಮೆ! ಅಷ್ಟರಲ್ಲೇ ಆತುರಪಡುವೆಯೇಕೆ? ಸಮಗ್ರವಾಗಿ ಕೇಳಬಾರದೇ?

ಪದ್ಮೆ:—ಹಾಗೂ ಆಗಲಿ, ಹೇಳು; ರುಕ್ಮಿಣಿಯು ಕೃಷ್ಣನಿಗೆ ಸಂದೇಶವನ್ನು ಕಳುಹಿದುದರಲ್ಲ ತಪ್ಪೇನಿದೆ?

ವಿಮಲಾ:—ತಪ್ಪೆಂದು ಹೇಳಲಿಲ್ಲ. ಸ್ವಲ್ಪವೂ ನಾಚಿಕೆಯಿಲ್ಲದೆ, ಶತ್ರುಗಳನ್ನೋಡಿಸಿ, ತನ್ನನ್ನು ಮದುವೆ ಮಾಡಿಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿಕಳುಹುವುದಕ್ಕೆ ಆಕೆ ಹೆಂಗಸಲ್ಲವೆ?

ಪದ್ಮೆ:—ಅದರಲ್ಲಿ ಬಾಧಕವೇನು? ತನ್ನ ಹೃದಯವು ಯಾರನ್ನು ಲಗ್ನವಾಗಿರುವುದೋ ಆತನೇ ತನಗೆ ನಾಥನಲ್ಲವೇ? ನಾಥನಿದಿರಿಗೆ ತನ್ನ ಕಷ್ಟವನ್ನು ಹೇಳಿ ತನ್ನನ್ನು ಕಾಪಾಡಬೇಕೆಂದು ಪ್ರಾರ್ಥಿಸದೆ ಮತ್ತೇನು ಮಾಡಬೇಕು? ಧರ್ಮಕ್ಕೆ ಹಾನಿಯುಂಟು ಮಾಡಿಕೊಳ್ಳಬೇಕೇ? ರುಕ್ಮಿಣಿಯೊಬ್ಬಳೇ ಹಾಗೆ ಮಾಡಲಿಲ್ಲ. ಪೂರ್ವದಲ್ಲಿ ಇನ್ನೂ ಎಷ್ಟೋ ಮಂದಿ

ಕನ್ಯಕೆಯರು ತಾವು ವರಿಸಿದ ಪುರುಷರಿಗೆ ರಹಸ್ಯವಾಗಿ ಬರೆದಿರುವಂತೆ ನಮ್ಮ ಪುರಾಣಗಳಲ್ಲಿ ಎಷ್ಟೋ ಕಥೆಗಳಿವೆ. ಆದುದರಿಂದ ಇದು ಪೂರ್ವಾಚಾರವೇ ಹೊರತು ಹೊಸದಾಗಿ ಬಂದುದಲ್ಲ. ಇದು ಎಷ್ಟುಮಾತ್ರಕ್ಕೂ ದೋಷವೆನಿಸುವುದಿಲ್ಲ.

ಈ ಮಾತನ್ನು ಕೇಳಿ ವಿಮಲೆಯು ಪ್ರತಿಮಾತನಾಡದೆ ಅವನತಮುಖಿಯಾಗಿ ಏನನ್ನೋ ಯೋಚಿಸುತ್ತಿದ್ದಳು. ಪದ್ಮೆಯು ಇವಳ ಮನೋಗತವನ್ನು ಊಹಿಸಿ ತನ್ನಲ್ಲಿಯೇ ನಗುತ್ತ—"ವಿಮಲಾ! ಏನನ್ನು ಚಿಂತಿಸುವೆ? ಹೇಳಬಾರದೆ"

ವಿಮಲಾ:—ಸಖಿ! ಚಿಂತಿಸುತ್ತಿರುವ ಕಾರ್ಯವು ನಿನ್ನಿಂದಲೇ ಆಗಬೇಕಾಗಿರುವಾಗ ನಿನಗೆ ಹೇಳದಿರಲಾದೀತೆ?

ಪದ್ಮೆ:—ಅದೇನು? ನನ್ನಿಂದ ಆಗುವಂತಹ ರಹಸ್ಯ ಕಾರ್ಯವು? ಆದರೂ ಹೇಳು ಕೇಳುವ!

ವಿಮಲಾ:—ಸಖಿ! ಇದೇಕೆ ಹೀಗೆ ಹೇಳುವೆ! ಈವರೆಗೆ ನಾನು ಯಾವ ಕಾರ್ಯವನ್ನು ಹೇಳಿದರೂ ತಪ್ಪದೆ ಮಾಡುತ್ತಿದ್ದೆ! ಇಂದು ಹೀಗೆ ಉತ್ತರವಿತ್ತರೆ ನಾನೇನು ಹೇಳಲಿ? ಚಂದ್ರಾವತೀದೇವಿ...."

ಪದ್ಮೆ:—ಸಾಕು, ಸಾಕು. ಪ್ರಿಯಸಖಿ! ಆ ಸ್ತುತಿವಚನವು ಈಗ ಬೇಕಾಗಿಲ್ಲ. ಹಿಂದಿನ-ಅಥವಾ-ಎಂದಿನ ಪದ್ಮೆಯೇ ನಾನಾಗಿರುವೆನೆಂದೂ ಇಂದೇನೂ ಬದಲಾಯಿಸಿಲ್ಲವೆಂದೂ ನಂಬಿ ಆವ ರಹಸ್ಯವನ್ನಾದರೂ ಹೇಳು. ನಿರ್ವಂಚನೆಯಿಂದ ನಡೆಯಿಸುವೆನು.

ವಿಮಲಾ:—ಪದ್ಮೆ! ನಾನೊಂದು ಕಾಗದವನ್ನು ಬರೆದು ಕೊಡುವೆನು. ಅದನ್ನು ನೀನು ಆತನಿಗೆ ಮುಟ್ಟಿಸಬೇಕು.

ಪದ್ಮೆ:—ಆತನೆಂದರೆ ಯಾರು?

ವಿಮಲಾ:—ಈವರೆಗೆ ನಾವು ಯಾವಾತನ ವಿಷಯವಾಗಿ ಮಾತನಾಡುತ್ತಿದ್ದೆವೋ ಆತನೇ.

ಪದ್ಮೆ :—(ನಕ್ಕು) ನನಗೆ ಅರ್ಥವಾಗಲಿಲ್ಲ. ಸ್ಪಷ್ಟವಾಗಿ ಹೇಳು.

ವಿಮಲಾ :—ಯಾವ ರಾಜಪುಂಗವನ ಹೆಸರನ್ನು ಹೇಳಿ ನೀನು ನನ್ನನ್ನು ಪರಿಹಾಸ ಮಾಡುತ್ತಿರುವೆಯೋ ಆ ರಾಜ ಪುಂಗವನು—ಈಗಲಾದರೂ ಅರ್ಥವಾಯಿತೇ ?

ಪದ್ಮೆ :—ನನಗೆ ಅರ್ಥಬೋಧೆಯಾಗಲಿಲ್ಲ. ಹೆಸರನ್ನು ಮರೆತಿರುವೆನು. ನಿನಗೆ ನೆನಪಿದ್ದರೆ ಹೇಳು.

ವಿಮಲಾ :—ಆತನ ಹೆಸರನ್ನು ನಾನು ಹೇಳಲಾರೆನು. ? ಆದರೆ ಇಷ್ಟು ಹೇಳಿ ಬಲ್ಲೆ ?

ಪದ್ಮೆ :—ಎಷ್ಟು ?

ವಿಮಲಾ :—ಉದಯ ಪುರಾಧೀಶನೆಂದು ಮಾತ್ರ.

ಪದ್ಮೆ :—ಭಲೆ ! ವಿಮಲಾ ? ಈಗಲೇ ನಿನಗಿಷ್ಟು ಲಜ್ಜೆಯೇ. ಹೆಸರು ಹೇಳಿದ ಮಾತ್ರಕ್ಕೆ ಆಗುವುದೇನು ? ಉದಯಪುರಾಧೀಶನಾದ ರಾಜಸಿಂಹನು ನಿನ್ನನ್ನು ಈಗಲೇ ಮದುವೆಯಾದನೇನು ?

ವಿಮಲಾ :—(ಲಜ್ಜೆಯಿಂದ ಕೆಂಪೇರಿದ ಮುಖವನ್ನು ತಗ್ಗಿಸಿ) ಪದ್ಮೆ ! ಸಾಕು, ಪರಿಹಾಸವನ್ನು ನಿಲ್ಲಿಸು. ನನ್ನ ಮಾತಿಗೆ ನಗುವ ಹಾಗಿದ್ದರೆ ಆಚೆಗೆ ಹೊರಟು ಹೋಗು.

ಪದ್ಮೆ :—(ಮತ್ತಷ್ಟು ನಕ್ಕು) ವಿಮಲಾ ! ನಿನ್ನ ಕೋಪದ ತಳವೆಷ್ಟೆಂಬುದನ್ನು ನಾನೂ ಬಲ್ಲೆ. ನಿಜವಾಗಿಯೂ ರಾಜಸಿಂಹನೇ ಬಂದು ನಿನ್ನ ಕೈಹಿಡಿದಾಗ ನಾನು ಹೇಗಾದರೂ ಹೊರಗೆ ಹೋಗಲೇ ಬೇಕು. ಈಗಲೇ ಹೋಗೆನ್ನುವಿಯೇಕೆ ?

ವಿಮಲಾ :—ಪದ್ಮೆ ! ದಯೆಯಿಟ್ಟು ಇನ್ನು ಹಾಸ್ಯವನ್ನು ನಿಲ್ಲಿಸಿ ನನ್ನ ಮಾತಿಗೆ ಉತ್ತರವನ್ನು ಕೊಡು.

ಪದ್ಮೆ :—ಕೋಪಗೊಳ್ಳಬೇಡ, ಹೇಳು. ಹಾಸ್ಯವನ್ನು ಬಿಟ್ಟೆನು.

ವಿಮಲಾ :—ಪದ್ಮಾ, ಇನ್ನು ಬಚ್ಚಿಡುವುದೇಕೆ ? ಆ ದಿನ ಅರಣ್ಯದಲ್ಲಿ ಆತನನ್ನು ನೋಡಿದುದು ಮೊದಲು ನನ್ನ ಹೃದಯವು ಆತನನ್ನೇ ಸೇರಿ ಹೋಗಿರುವುದು. ಆ ನರಪುಂಗವನನ್ನು ಹೊರತು ಇತರರನ್ನು ಕೈ ಹಿಡಿಯುವುದಿಲ್ಲವೆಂದು ಅಂದೇ ನಾನು ನಿಶ್ಚಯಿಸಿರುವೆನು. ನಮ್ಮ ವೃತ್ತಾಂತವನ್ನು ಆತನು ತಿಳಿದರೆ ತಪ್ಪದೆ ನಮ್ಮ ತಂದೆಗೆ ಸಹಾಯಕನಾಗಿ ಬಂದು ಶತ್ರುಗಳನ್ನು ಓಡಿಸಿ ನಮ್ಮನ್ನು ಸಂರಕ್ಷಿಸುವನು. ಇದಕ್ಕೆ ನೀನೇನು ಹೇಳುವೆ ?

ಪದ್ಮಾ :—ಹೇಳುವುದೇನು? ಬರೆಯುವುದೇನಿದ್ದರೂ ಬರೆ ! ಹೇಗಾದರೂ ನಾನದನ್ನು ರಾಜಸಿಂಹನಿಗೆ ತಲಪಿಸುವೆನು.

ವಿಮಲಾ .—ತಲಪಿಸುವೆನೆಂದು ಸುಮ್ಮನೆ ಹೇಳಿದರಾಗದು, ಶತ್ರುಗಳು ನಮ್ಮ ಪಟ್ಟಣವನ್ನು ಮುತ್ತಿರುವರು. ಆದುದರಿಂದ ನಮ್ಮ ಕಾಗದವು ಅವರಿಗೆ ಸಿಕ್ಕದಂತಿರಬೇಕು.

ಪದ್ಮಾ :—ಆ ಶಂಕೆ ನಿನಗೆ ಬೇಡ ; ಸುಮ್ಮನೆ ಬರೆ ! ಉಳಿದುದನ್ನು ನಾನು ನೋಡಿಕೊಳ್ಳುವೆನು.

ಇಬ್ಬರೂ ಹೀಗೆ ಸಂಭಾಷಿಸುತ್ತಿರಲು, ವಿಮಲಾದೇವಿಯ ಸಖಿಯರಲ್ಲಿ ಒಬ್ಬಳಾದ ಕುಂದೆಯೆಂಬವಳು ಅಲ್ಲಿಗೆ ಬಂದಳು. ಆಕೆಯಲ್ಲಿ ಎಂತಹ ರಹಸ್ಯವೂ ನಿಲ್ಲಲಾರದು. ತನಗೆ ತಿಳಿದ ಸಮಾಚಾರವನ್ನು ಎಲ್ಲರಿಗೂ ತಿಳಿಸಿದ ಹೊರತು ಆಕೆಗೆ ನಿದ್ರೆಯೇ ಬರುತ್ತಿರಲಿಲ್ಲ. ಪುರಾಣಗಳಲ್ಲಿ ಪಸಿದ್ಧನಾದ ನಾರದ ಮಹರ್ಷಿಗೆ ಆಕೆ ಶಿಷ್ಯಳೆಂದು ಹೇಳಲು ಸ್ವಲ್ಪವೂ ಸಂದೇಹಪಡಬೇಕಾಗಿಲ್ಲ. ಈ ಕಾರಣದಿಂದಲೇ ವಿಮಲೆಯೂ ಪದ್ಮೆಯೂ ಅವಳೊಡನೆ ಆವ ರಹಸ್ಯವನ್ನೂ ಹೇಳುತ್ತಿರಲಿಲ್ಲ. ಕುಂದೆಯು ಅಲ್ಲಿಗೆ ಬಂದ ಕೂಡಲೆ ಸ್ವೇಚ್ಛೆಯಾಗಿ ಮಾತನಾಡುತ್ತಿದ್ದ ಅವರಿಬ್ಬರೂ ತಕ್ಷಣವೇ ಸುಮ್ಮನಾದರು. ಆಗ ಕುಂದೆಯು ಕೋಪಗೊಂಡು,—“ ವಿಮಲಾ ! ನನ್ನೊಡನೆ ರಹಸ್ಯಗಳನ್ನು ಹೇಳಬೇಡಮ್ಮ ; ನಿನ್ನೊಡನೆ ಸ್ನೇಹ

ಮಾಡಿದುದಕ್ಕೆ ಚನ್ನಾಗಿ ಆದರಿಸಿದೆ. ಅದೇನು ? ನಾನು ಬಂದ ಕೂಡಲೆ, ಮಾತನ್ನು ನಿಲ್ಲಿಸಬೇಕೋ ? ಸಾಕು-ಸಾಕು ?" ಎಂದು ಹೇಳಿ ಹೊರಟು ಹೋದಳು. ಕುಂದೆ ಹೊರಟುಹೋದ ಮೇಲೆ ವಿಮಲೆ ಪದ್ಮೆಯರೂ ಹೊರಟು ಹೋದರು.

ಆದಿನ ಮಧ್ಯಾಹ್ನ ಪದ್ಮೆಯು ಕಾಗದವನ್ನು ಬರೆಯುವಂತೆ ವಿಮಲೆಗೆ ಹೇಳಿದ್ದಳು. ವಿಮಲೆಯು ಕಾಗದವನ್ನೂ ಕಡ್ಡಿಯನ್ನೂ ಮಸಿಯನ್ನೂ ತೆಗೆದುಕೊಂಡು ಬರೆಯಲು ಉಪಕ್ರಮಿಸಿದಳು. ಯಾವ ರೀತಿಯಿಂದ ಬರೆಯಬೇಕೆಂದು ನಿರ್ಧರಿಸಲಾರದೆ ಆಗಾಗ ಬರೆದ ಕಾಗದಗಳನ್ನು ಹರಿದು ಹಾಕುತ್ತ, ಪರಪುರುಷನಿಗೆ ಕಾಗದವನ್ನು ಹೇಗೆ ಬರೆಯಲಿ ? ಎಂದು ಸ್ವಲ್ಪ ಹೊತ್ತು ಶಂಕಿಸುತ್ತ ಕಡೆಗೆ ಧೃಢನಿಶ್ಚಯಳಾಗಿ ಈ ವಿಧವಾಗಿ ಬರೆದಳು—

" ಶ್ರೀಮನ್ಮಹಾರಾಜಾಧಿರಾಜಶ್ರೀ ಉದಯಪುರಾಧೀಶ ರಾಜಸಿಂಹ ಮಹಾರಾಜರವರ ಸನ್ನಿಧಿಯಲ್ಲಿ. ಅನಂತ ಪ್ರಣಾಮಪೂರ್ವಕ ವಿಜ್ಞಾಪನೆಗಳು.

ಪರಮತ ದ್ವೇಷಿಯಾದ ಔರಂಗಜೇಬನು ನನ್ನನ್ನು ಕರದೊಯ್ಯಲು ತನ್ನ ಸೈನ್ಯವನ್ನು ಕಳುಹಿರುವನು. ವಿಧರ್ಮಿಗಳಾದ ಯವನರು ನಮ್ಮ ರಾಜಧಾನಿಯನ್ನು ಮುತ್ತಿರುವರು. ಕ್ಷತ್ರಿಯರಾಜರನ್ನೆಲ್ಲಾ ಗೆದ್ದು ತನ್ನ ಸೇವಕರನ್ನಾಗಿ ಮಾಡಿ ಬಲಾತ್ಕಾರದಿಂದ ನನ್ನನ್ನು ಡಿಲ್ಲಿಗೆ ಕರೆದುಕೊಂಡು ಹೋಗುವಂತೆ ನಮ್ಮ ತಂದೆಗೆ ಆತನು ಬರೆದಿರುವನು. ಹಾ, ರಾಜಮಾರ್ತಾಂಡ ! ಪವಿತ್ರರಜಪೂತ ವಂಶದಲ್ಲಿ ಹುಟ್ಟಿದ ವಿಮಲೆಯು ವಿಧರ್ಮಿ ಯವನನನ್ನು ಮದುವೆಯಾಗಬೇಕೆಂದರೆ, ಇದಕ್ಕೂ ಹೆಚ್ಚಿದ ಅಪಮಾನ-ಕ್ಲೇಶಗಳೂ ಇರುವುವೆ ? ರಜಪುತ್ರಸ್ಥಾನದಲ್ಲಿ ಇಷ್ಟು ಮಂದಿ ವೀರಕ್ಷತ್ರಿಯರೆಂದು ಹೆಸರ್ಗೊಂಡವರಿದ್ದರೂ ಯವನನ ಬಾಧೆಯಿಂದ ಅಬಲೆಯನ್ನು ಉದ್ಧರಿಸುವವರೇ ಒಬ್ಬರೂ ಇರಲಾರರೇ ?

ರಾಜಾಧಿರಾಜ! ಹೀಗೆ ಹೇಳಿದೆನೆಂದು ಆಗ್ರಹಿಸಬಾರದು. ವಿ
ನಲ್ಲಿ ಸಿಕ್ಕಿ ದುಃಖಾತಿಶಯದಿಂದ ಸ್ವಲ್ಪ ಕಠಿನವಾಗಿ ಬರೆದಿರುವೆನು.
ತಮಗೆ ಅನ್ವಯಿಸತಕ್ಕುದಲ್ಲ. ಸನ್ನಿಧಾನದಲ್ಲಿ ಈ ಅಬಲೆಯು ಪ್ರಾ
ಸುವುದಿಷ್ಟೇ? ಅನನ್ಯಗತಿಕಳಾಗಿ ಶರಣು ಹೊಕ್ಕ ನಾರಿಯನ್ನು ಉ
ಸಲು ಸಕಾಲದಲ್ಲಿ ಸೈನ್ಯಸಮೇತನಾಗಿ ಬಂದು, ರಾಜರಾಜೇಶ್ವರನಾದ
ಕೃಷ್ಣದೇವನು ರುಕ್ಮಿಣೀದೇವಿಯ ಆಪತ್ತನ್ನು ಪರಿಹರಿಸಿ ಉದ್ಧರಿಸಿ
ರಾಜಾಧಿರಾಜರಾದ ತಾವೂ ಈ ರೂಪನಗರದ ರಾಜಕನ್ಯೆಯ ಕಷ್ಟ
ಪರಿಹರಿಸಿ ಉದ್ಧರಿಸಬೇಕು ಇಲ್ಲವಾದರೆ, ರಜಪೂತಮಾತೆಯ ಸಂತಾ
ನಿರ್ವೀರ್ಯವಾಯಿತೆಂದೂ ನಾರೀ ಧರ್ಮವನ್ನು ಕಾಪಾಡಬಲ್ಲ ಧೀರ
ರಾರೂ ಇಲ್ಲವೆಂದೂ ಭಾವಿಸಿ ನಮ್ಮ ಅಂತಿಮಧ್ಯೇಯನಾದ ಅಗ್ನಿ
ನನ್ನೇ ಆಶ್ರಯಿಸಿ ನನ್ನ ಧರ್ಮವನ್ನು ಕಾಪಾಡಿಕೊಳ್ಳುವೆನು. ಇದ
ಹೆಚ್ಚಿಗೆ ಬರೆಯಲಾರೆನು.

ಇತಿ ವಿಮಲಾ"

ಹೀಗೆ ಬರೆದ ಪತ್ರಿಕೆಯನ್ನು ಪದ್ಮೆಯ ಕೈಗೆ ಕೊಟ್ಟಳು.

ಕುಂದೆಯು, ಪದ್ಮೆಯನ್ನೂ ವಿಮಲೆಯನ್ನೂ ಬಿಟ್ಟು ತನಗೆ ರ
ವಾವುದೂ ತಿಳಿಯುವುದಿಲ್ಲವೆಂದು ಭಾವಿಸಿ, ಅಲ್ಲಿ ನಿಲ್ಲದೆ ಉಪ್ಪರಿ
ಮೇಲೇರಿ ಒಂದು ಮಂಚದ ಮೇಲೆ ಕುಳಿತುಕೊಂಡು ಶತ್ರು ಸೈನ್ಯ
ನೋಡುತ್ತಿದ್ದಳು. ಆಗ ಎಂದಿನಂತೆ ಪಾರಿವಾಳವು ಕಿಟಿಕೆಯಲ್ಲಿ ಕು
ಕೊಂಡಿತು. ಕುಂದೆಯು ಪಾರಿವಾಳವನ್ನು ನೋಡಿದ ಕೂಡಲೆ ಅ
ಹಿಡಿದುಕೊಂಡು ಅದರ ಕೊರಳಿಗೆ ಕಟ್ಟಿದ್ದ ಕಾಗದವನ್ನು ಬಿಚ್ಚಿ
ಕೊಂಡು ಅದರಲ್ಲಿದ್ದ ರಹಸ್ಯವನ್ನೆಲ್ಲ ಗ್ರಹಿಸಿ, ಪದ್ಮೆಯನ್ನು ಮೋಸ
ಬೇಕೆಂದು ನಿಶ್ಚಯಿಸಿ ಆ ಕಾಗದದಲ್ಲಿದ್ದ ವಿಷಯಗಳಿಗೆಲ್ಲಾ ಪ್ರತಿಕ
ವಾಗಿ ಉತ್ತರವನ್ನು ಬರೆದು ಪುನಃ ಪಾರಿವಾಳವನ್ನು ಬಿಟ್ಟು ಬಿಟ್ಟಳು.
ಅಭ್ಯಾಸದಂತೆ ಆ ಪಾರಿವಾಳವು ಗಗನಮಾರ್ಗದಲ್ಲಿ ಹಾರಿಹೋಯಿ

ಕುಂದೆಯು ಮಹಡಿಯಿಂದ ಕೆಳಕ್ಕಿಳಿದು ಬಂದು ಪದ್ಮೆಯ ಮುಂದೆ ನಿಂತು, ತಲೆಯನ್ನು ಕೊಂಕಿಸುತ್ತ "ನೀವು ಹೇಳದಿದ್ದರೂ ನಿಮ್ಮ ರಹಸ್ಯಗಳೆಲ್ಲವೂ ತನಗೆ ತಾನೆ ನನಗೆ ತಿಳಿದುವು. ಈಗ ಏನು ಮಾಡುವಿರಿ ? ಎಂದಳು. ಅದಕ್ಕೆ ಪದ್ಮೆಯು ಆದರದಿಂದ, "ಕುಂದಾ ! ನೀನು ಪ್ರಕಾರಾಂತರವಾಗಿ ಭಾವಿಸಬಾರದು. ನಿನ್ನ ಮೇಲೆ ನಮಗೆ ಸಂಶಯವೆಳ್ಳಷ್ಟೂ ಇಲ್ಲ. ಈಗಲೇ ಹೇಳಿದರೆ ರಹಸ್ಯಗಳು ಭೇದಿಸಲ್ಪಡುವವೆಂದು ಹೇಳಲಿಲ್ಲ. ಕಾರ್ಯವು ಫಲಿಸಿದ ಮೇಲೆ ಎಲ್ಲವನ್ನೂ ನೀನೇ ತಿಳಿಯುವೆ. ಇಷ್ಟರಲ್ಲಿ ಅವಸರ ವೇನು ? ಎಂದು ಹೇಳಿ ಹೊರಗೆ ಹೋದಳು.

ಆ ದಿನ ರಾತ್ರಿ ಮೂವರೂ ಎಂದಿನಂತೆ ಭೋಜನವನ್ನು ಮಾಡಿ ಶಯನಿಸಿದರು. ಇದರೆ ಕುಂದೆಯು ಮಾತ್ರ ನಿದ್ರೆ ಮಾಡುವವಳಂತೆ ನಟಿಸುತ್ತ ಸಮಾಚಾರವೇನಾದರೂ ತಿಳಿಯುವುದೇನೋ ಎಂದು ಎಚ್ಚರವಾಗಿದ್ದಳು ಪದ್ಮೆಯು ಸಹ ಎಚ್ಚರವಾಗಿದ್ದು ಆ ದಿನ ಶುಕ್ರವಾರವಾದುದರಿಂದ ಶಿವ ಸಿಂಗನು ಬರುವನೆಂದು ಮೆಲ್ಲಗೆ ಮೇಲಕ್ಕೆದ್ದು ಕುಂದೆಗೆ ತಿಳಿಯದಂತೆ ಮಹಡಿಯ ಮೇಲಕ್ಕೆ ಹೋದಳು. ಅನಂತರ ಕುಂದೆಯು, ಪದ್ಮೆಯು ಅಲ್ಲಿ ಇಲ್ಲದಿದ್ದುದನ್ನು ನೋಡಿ, ತಾನೂ ಮಹಡಿಯನ್ನೇರಿ ರಹಸ್ಯವಾಗಿ ಒಂದು ಮೂಲೆಯಲ್ಲಿ ಕುಳಿತುಕೊಂಡಳು. ಅನಂತರ ಶಿವಸಿಂಗನು ಎಂದಿನಂತೆ ಬಂದು ಹಗ್ಗದಿಂದ ಮೇಲಕ್ಕೇರಿ ಹತ್ತಿರದಲ್ಲಿ ಕುಳಿತಿದ್ದ ಪದ್ಮೆಯ ಕೈಹಿಡಿದುಕೊಂಡನು. ಪದ್ಮೆಯು ಆತನನ್ನಾದರಿಸಿ ಆತನೊಡನೆ ಮಾತನಾಡಲು ಉಪಕ್ರಮಿಸಿದಳು. ಶಿವಸಿಂಗನು ಆಕೆಯನ್ನು ಕುರಿತು ಹೀಗೆ ಪ್ರಶ್ನೆ ಮಾಡಿದನು—

"ಪದ್ಮಾ ! ಪಾರಿವಾಳವನ್ನು ನೋಡಿದೆಯಾ ?"

ಪದ್ಮೆ :—ಹಾಗೆಂದರೇನು ? ಪಾರಿವಾಳವು ಬರಲೇ ಇಲ್ಲವಲ್ಲ.

ಶಿವಸಿಂಗ :—ಇದೇನು, ಹೀಗೆನ್ನುವೆ ? ಈ ದಿನ ಬರಲಾಗುವುದಿಲ್ಲವೆಂದೂ ಮುಂದಿನ ಶುಕ್ರವಾರ ಬರುವೆನೆಂದೂ ನನಗೋಸ್ಕರ ಕಾದಿರ

ಬೇಡವೆಂದೂ ಕಾಗದವನ್ನು ಬರೆದು ಪಾರಿವಾಳದೊಡನೆ ಕಳುಹಿದೆನು. ಆದರೆ ಎಷ್ಟು ಹೊತ್ತು ಕಾದಿದ್ದರೂ ಪಾರಿವಾಳವು ಬರಲಿಲ್ಲವಾದುದರಿಂದ ಕಾಗದವು ನಿನಗೆ ಸೇರಿತೋ ಇಲ್ಲವೋ ಎಂದು ಸಂದೇಹದಿಂದ ಹೊರಟು ಬಂದೆನು."

ಪದ್ಮೆ :—ಅಯ್ಯೋ ಪಾಪ! ಆ ಪಾರಿವಾಳವು ಎಲ್ಲಿ ಹೋಯಿತೋ ತಿಳಿಯುವುದೆಂತು ?

ಶಿವಸಿಂಗ :—ಚಿಕ್ಕಂದಿನಿಂದಲೂ ಅತಿ ಪ್ರೀತಿಯಿಂದ ಸಾಕಿದ ಪಾರಿವಾಳವು ಹೋದುದು ನನ್ನ ಪ್ರಾಣವೇ ಹೋದಂತಿರುವುದು.

ಪದ್ಮೆ :—ಎಲ್ಲಿಯಾದರೂ ಹುಡುಕಿಸಿದರೆ ಸಿಕ್ಕುವುದು. ಇದೆಲ್ಲಾ ಹಾಗಿರಲಿ, ನೀವು ನನಗೊಂದು ಉಪಕಾರವನ್ನು ಮಾಡಬೇಕಲ್ಲಾ ?

ಶಿವ :—ಪದ್ಮಾ ! ಅದೇನೋ ಹೇಳು. ತಪ್ಪದೆ ಮಾಡುವೆನು.

ಪದ್ಮೆ :—ನಾನೊಂದು ಕಾಗದವನ್ನು ನಿನ್ನೊಡನೆ ಒಬ್ಬ ಬ್ರಾಹ್ಮಣನ ಕಯ್ಯಲ್ಲಿ ಕೊಟ್ಟು ಕಳುಹುವೆನು. ಆತನನ್ನು ಉದಯಪುರಕ್ಕೆ ಕರೆದುಕೊಂಡು ಹೋಗಿ ರಾಜಸಿಂಹನಿಗೆ ಒಪ್ಪಿಸಬೇಕು.

ಶಿವ :—ಹಾಗೆಯೇ ಆಗಲಿ. ಆದರೆ, ಪದ್ಮೆ ! ಆ ಕಾಗದದ ಸಮಾಚಾರವನ್ನು ನನಗೆ ತಿಳಿಸಬಹುದೋ ?

ಪದ್ಮೆ :—ಈಗ ನಾನು ಹೇಳಬೇಕೆ? ಕ್ರಮವಾಗಿ ನೀವೇ ತಿಳಿಯುವಿರಿ. ನೀವು ತಪ್ಪದೆ ನಾಳೆಯ ರಾತ್ರಿಯೂ ಬರಬೇಕು.

ಈ ಪ್ರಸಂಗವೆಲ್ಲವನ್ನೂ ಕೇಳುತ್ತಿರುವ ಕಮಲೆಯು ತನಗೇ ಪರಾಭವವಾಯಿತೆಂದು ತಿಳಿದು ಮೆಲ್ಲನೆ ಕೆಳಕ್ಕಿಳಿದು ಹೋಗಿ ಮಲಗಿಕೊಂಡಳು. ಶಿವಸಿಂಗನು ಮಾತನಾಡುತ್ತಿದ್ದಾಗಲೇ "ಯಾರಲ್ಲಿ" ಎಂಬ ಶಬ್ದವು ಕೇಳಿಬರಲು ಪದ್ಮೆಯು ತತ್ತರಿಸುತ್ತ—"ಮಾವನವರು ಬರುತ್ತಿರುವರು. ನೀವು ಇಲ್ಲಿ ಇನ್ನು ನಿಲ್ಲಬಾರದು. ನಾಳೆಯ ದಿನ ತಪ್ಪದೆ ಬರಬೇಕು. ಮರೆಯಬಾರದು." ಎಂದು ಕೇಳಿಕೊಂಡಳು. ತಕ್ಷಣವೇ ಶಿವಸಿಂಗನು ಕಿಟಿಕಿಯಿಂದಿಳಿದು ಹೊರಟು ಹೋದನು. ವಿಜಯಸಿಂಹನು ಪದ್ಮೆಯ ಬಳಿಗೆ

ಂದು "ಯಾರವರು?" ಎಂದು ಕೇಳಿದ ಕೂಡಲೇ ಪದ್ಮೆಯನ್ನು ಗುರು
ು ಚಕಿತನಾಗಿ ಹೀಗೆ ಕೇಳಿದನು.

"ಏಕೆ, ಪದ್ಮಾ! ಇಷ್ಟು ಹೊತ್ತಿನಲ್ಲಿ ಒಂಟಿಯಾಗಿ ಇಲ್ಲಿ ಏನು ಮಾಡುತ್ತಿರುವೆ?"

ಪದ್ಮೆ :—ನಿದ್ರೆಬಾರದೆ ಬೇಸರಿಕೆಯಾಗಿದ್ದಿತು. ಹಾಗೆಯೇ ತಿರು ಗಾಡುತ್ತ ಇಲ್ಲಿ ನಿಂತಿದ್ದೆನು.

ವಿಜಯ:—ನಿಜ; ಹೃದಯವು ಸ್ಥಿಮಿತವಾಗಿಲ್ಲದಿರುವಾಗ ನಿದ್ರೆ ಬರುವುದು ಹೇಗೆ?

ಪದ್ಮೆ :—ಮಹಾರಾಜೇ! ಈ ರಾಜಪುತ್ರಸ್ಥಾನದಲ್ಲಿ ಸ್ವಧರ್ಮವನ್ನು ಕಾಪಾಡುವವರು ಯಾರೂ ಇಲ್ಲವೆ? ಒಬ್ಬರಾದರೂ ಸಹಾಯಕ್ಕೆ ಬರ ಲಿಲ್ಲವಲ್ಲಾ.

ವಿಜಯ :—ತಾಯಿ! ನಮ್ಮ ರಾಜಪುತ್ರಸ್ಥಾನದಲ್ಲಿ ಅಂತಹ ಪರೋ ಪಕಾರ ಬುದ್ಧಿಯು ಎಂದೋ ನಶಿಸಿಹೋಗಿರುವುದು. ನನ್ನ ಬಾಹುಬಲ ದಿಂದಲೇ ನಾನು ಜಯವನ್ನು ಸಂಪಾದಿಸಬೇಕಲ್ಲದೆ ಪರರ ಸಹಾಯವನ್ನು ಅಪೇಕ್ಷಿಸುವಂತಿಲ್ಲ.

ಹೀಗೆ ಸ್ವಾಭಿಮಾನದಿಂದ ಹೇಳಿದ ವಿಜಯಸಿಂಹನ ಮಾತನ್ನು ಕೇಳಿ ಪದ್ಮೆಯು ತನ್ನ ಅನುಮಾನವನ್ನು ಬಿಟ್ಟು ತನ್ನ ರಹಸ್ಯವು ತಿಳಿಯಲಿಲ್ಲವೆಂಬ ಸಂತೋಷದಿಂದ ಸುಮ್ಮನಾದಳು. ವಿಜಯಸಿಂಹನು ಪದ್ಮೆಯನ್ನು ಹೋಗಿ ಮಲಗುವಂತೆ ಹೇಳಿ ಕಳುಹಿಬಿಟ್ಟು, ತನ್ನ ಪದ್ಧತಿಯಂತೆ ಪಟ್ಟಣದ ಎಲ್ಲ ಕಡೆಯನ್ನೂ ನೋಡಿ ಕಾವಲುಗಾರರಿಗೆ ಜಾಗ್ರತೆಯನ್ನು ಕೊಟ್ಟು ಹೋಗಿ ಮಲಗಿದನು. ಶತ್ರುಗಳು ರಹಸ್ಯವಾಗಿ ಅರ್ಧರಾತ್ರಿಯಲ್ಲಿ ಕೋಟೆ ಯನ್ನು ಹತ್ತಿ ಪಟ್ಟಣವನ್ನು ಪ್ರವೇಶಿಸುವರೆಂಬ ಭಯದಿಂದ ಆತನು ಪ್ರತಿದಿನವೂ ಹೀಗೆ ಜಾಗರೂಕನಾಗಿ ಪರೀಕ್ಷಿಸುತ್ತಿದ್ದನು.

ಆ ಮರುದಿನ ವಿಮಲೆಯು ಬರೆದ ಕಾಗದವನ್ನು ಶ್ಯಾಮಲಪಂಡಿ

ತನ ಮೂಲಕ ರಾಜಸಿಂಹನಿಗೆ ತಿಳಿಸಬೇಕೆಂದು ಪದ್ಮೆಯು ತಕ್ಕ ಪ್ರಯತ್ನ ಮಾಡಿ, ರಹಸ್ಯವಾಗಿ ಪಂಡಿತನನ್ನು ಕಂಡು ಆತನೊಡನೆ ಮಾತನಾಡಿ ಸ್ವಲ್ಪ ಧನವನ್ನು ಕೊಟ್ಟು ಆತನನ್ನು ಒಡಂಬಡಿಸಿ ವಿಮಲೆಯು ಬರೆದುಕೊಟ್ಟಿದ್ದ ಪ್ರಾರ್ಥನಾಪತ್ರಿಕೆಯನ್ನು ಪಂಡಿತನ ಕೈಗೆ ಕೊಟ್ಟು ಜಾಗ್ರತೆಯಾಗಿರೆಂದು ಹೇಳಿ ಆದಿನ ರಾತ್ರಿ ಆತನನ್ನು ಮಹಡಿಯ ಮೇಲಕ್ಕೆ ಕರೆದುಕೊಂಡು ಹೋದಳು. ಅಷ್ಟರಲ್ಲಿ ಪೂರ್ವದಂತೆ ಶಿವಸಿಂಗನು ಬಂದು ಪದ್ಮೆಯನ್ನು ಕಂಡು ಜಾಗ್ರತೆಯಾಗಿ ಬ್ರಾಹ್ಮಣನನ್ನು ಕಳುಹಿಸು" ಎಂದನು. ಪದ್ಮೆಯು ಬ್ರಾಹ್ಮಣನನ್ನು ಶಿವಸಿಂಗನ ವಶಕ್ಕೊಪ್ಪಿಸಿ "ವಿಪ್ರೋತ್ತಮ, ಜಾಗ್ರತೆ! ಜಾಗ್ರತೆ!! ಕಾಗದವನ್ನು ಎಲ್ಲಿಯೂ ಹಾಕಬೇಡ. ನೀನು ಮತ್ತೆ ಇಲ್ಲಿಗೆ ಬರಬೇಕಾದ ನಿರ್ಬಂಧವಿಲ್ಲ. ಹಾಗೆ ಹೊರಟುಬಂದರೆ ಶತ್ರುಗಳ ಕೈಗೆ ಸಿಕ್ಕುವೆ. ನಾವು ಹೇಳಿ ಕಳುಹುವವರೆಗೂ ಉದಯಪುರದಲ್ಲಿಯೇ ಇರಬೇಕು." ಎಂದು ಹೇಳಿದಳು. ಶ್ಯಾಮಲಪಂಡಿತನು, ಹಾಸ್ಯದಿಂದ— ಏನಮ್ಮ! ನಿನಗೇನಾದರೂ ಭ್ರಾಂತಿಯೊ? ಹಿಂದೆ ರುಕ್ಮಿಣೀದೇವಿಯ ಸಂದೇಶವನ್ನು ಕೃಷ್ಣದೇವನಲ್ಲಿಗೆ ತೆಗೆದುಕೊಂಡುಹೋದಾಗ ಯಾವ ಪದ್ಮೆಯು ಬಂದು ನನಗೆ ಬುದ್ಧಿ ಹೇಳಿದಳು?" ಎಂದು ಕೇಳಿದನು. ಪದ್ಮೆಯು ಆತನನ್ನು ಅಷ್ಟಕ್ಕೇ ಸಮಾಧಾನಪಡಿಸಿ, "ಪಂಡಿತೋತ್ತಮನೇ! ಗಟ್ಟಿಯಾಗಿ ಮಾತನಾಡಬೇಡ. ನನ್ನಿಂದ ತಪ್ಪಾಯಿತು; ಕ್ಷಮಿಸು! ಈಗ ನೀನು ಶಬ್ದಮಾಡಿದರೆ ಮೋಸವು ಸಂಭವಿಸುವುದು." ಎಂದು ಪ್ರಾರ್ಥಿಸಿಕೊಂಡಳು. ಶಿವಸಿಂಗನು ಸಾವಕಾಶ ಮಾಡದೆ ಬ್ರಾಹ್ಮಣನೊಡನೆ ಕಿಟಕಿಯ ಬಳಿಗೆ ಬಂದನು. ಪದ್ಮೆಯು ಮಲಗಲು ಹೊರಟುಹೋದಳು.

---

ಬಂದು "ಯಾರವರು ?" ಎಂದು ಕೇಳಿದ ಕೂಡಲೇ ಪದ್ಮೆಯನ್ನು ಗುರು ತಿಸಿ ಚಕಿತನಾಗಿ ಹೀಗೆ ಕೇಳಿದನು.

"ಏಕೆ, ಪದ್ಮಾ ! ಇಷ್ಟು ಹೊತ್ತಿನಲ್ಲಿ ಒಂಟಿಯಾಗಿ ಇಲ್ಲಿ ಏನು ಮಾಡುತ್ತಿರುವೆ ? "

ಪದ್ಮೆ :—ನಿದ್ರೆಬಾರದೆ ಬೇಸರಿಕೆಯಾಗಿದ್ದಿತು. ಹಾಗೆಯೇ ತಿರು ಗಾಡುತ್ತ ಇಲ್ಲಿ ನಿಂತಿದ್ದೆನು.

ವಿಜಯ:—ನಿಜ ; ಹೃದಯವು ಸ್ಥಿಮಿತವಾಗಿಲ್ಲದಿರುವಾಗ ನಿದ್ರೆ ಬರುವುದು ಹೇಗೆ ?

ಪದ್ಮೆ :—ಮಹಾರಾಜರೇ ! ಈ ರಾಜಪುತ್ರಸ್ಥಾನದಲ್ಲಿ ಸ್ವಧರ್ಮವನ್ನು ಕಾಪಾಡುವವರು ಯಾರೂ ಇಲ್ಲವೆ ? ಒಬ್ಬರಾದರೂ ಸಹಾಯಕ್ಕೆ ಬರ ಲಿಲ್ಲವಲ್ಲಾ.

ವಿಜಯ :—ತಾಯಿ ! ನಮ್ಮ ರಾಜಪುತ್ರಸ್ಥಾನದಲ್ಲಿ ಅಂತಹ ಪರೋ ಪಕಾರ ಬುದ್ಧಿಯು ಎಂದೋ ನಶಿಸಿಹೋಗಿರುವುದು. ನನ್ನ ಬಾಹುಬಲ ದಿಂದಲೇ ನಾನು ಜಯವನ್ನು ಸಂಪಾದಿಸಬೇಕಲ್ಲದೆ ಪರರ ಸಹಾಯವನ್ನು ನಿರೀಕ್ಷಿಸುವಂತಿಲ್ಲ.

ಹೀಗೆ ಸ್ವಾಭಿಮಾನದಿಂದ ಹೇಳಿದ ವಿಜಯಸಿಂಹನ ಮಾತನ್ನು ಕೇಳಿ ಪದ್ಮೆಯು ತನ್ನ ಅನುಮಾನವನ್ನು ಬಿಟ್ಟು ತನ್ನ ರಹಸ್ಯವು ತಿಳಿಯಲಿಲ್ಲವೆಂಬ ಸಂತೋಷದಿಂದ ಸುಮ್ಮನಾದಳು. ವಿಜಯಸಿಂಹನು ಪದ್ಮೆಯನ್ನು ಹೋಗಿ ಮಲಗುವಂತೆ ಹೇಳಿ ಕಳುಹಿಬಿಟ್ಟು, ತನ್ನ ಪದ್ಧತಿಯಂತೆ ಪಟ್ಟಣದ ನಾಲ್ಕುಕಡೆಯನ್ನೂ ನೋಡಿ ಕಾವಲುಗಾರರಿಗೆ ಜಾಗ್ರತೆಯನ್ನು ಕೊಟ್ಟು ಹೋಗಿ ಮಲಗಿದನು. ಶತ್ರುಗಳು ರಹಸ್ಯವಾಗಿ ಅರ್ಧರಾತ್ರಿಯಲ್ಲಿ ಕೋ ಟೆಯನ್ನು ಹತ್ತಿ ಪಟ್ಟಣವನ್ನು ಪ್ರವೇಶಿಸುವರೆಂಬ ಭಯದಿಂದ ಅತನು ಪ್ರತಿದಿನವೂ ಹೀಗೆ ಜಾಗರೂಕನಾಗಿ ಪರೀಕ್ಷಿಸುತ್ತಿದ್ದನು.

ಆ ಮರುದಿನ ವಿಮಲೆಯು ಬರೆದ ಕಾಗದವನ್ನು ಶ್ಯಾಮಲಪಂಡಿ

ತನ ಮೂಲಕ ರಾಜಸಿಂಹನಿಗೆ ತಲಪಿಸಬೇಕೆಂದು ಪದ್ಮೆಯು ತಕ್ಕ ಪ್ರಯ
ಮಾಡಿ, ರಹಸ್ಯವಾಗಿ ಪಂಡಿತನನ್ನು ಕಂಡು ಆತನೊಡನೆ ಮಾತನಾಡಿ ಸ್ವ
ಧನವನ್ನು ಕೊಟ್ಟು ಆತನನ್ನು ಒಡಂಬಡಿಸಿ ವಿಮಲೆಯು ಬರೆದುಕೊಟ್ಟ
ಪ್ರಾರ್ಥನಾಪತ್ರಿಕೆಯನ್ನು ಪಂಡಿತನ ಕೈಗೆ ಕೊಟ್ಟು ಜಾಗ್ರತೆಯಾಗಿರೆಂ
ಹೇಳಿ ಆದಿನ ರಾತ್ರಿ ಆತನನ್ನು ಮಹಡಿಯ ಮೇಲಕ್ಕೆ ಕರೆದುಕೊಂಡು ಹ
ದಳು. ಅಷ್ಟರಲ್ಲಿ ಪೂರ್ವದಂತೆ ಶಿವಸಿಂಗನು ಬಂದು ಪದ್ಮೆಯನ್ನು ಕಂ
ಜಾಗ್ರತೆಯಾಗಿ ಬ್ರಾಹ್ಮಣನನ್ನು ಕಳುಹಿಸು" ಎಂದನು. ಪದ್ಮೆಯ
ಬ್ರಾಹ್ಮಣನನ್ನು ಶಿವಸಿಂಗನ ವಶಕ್ಕೊಪ್ಪಿಸಿ "ವಿಪ್ರೋತ್ತಮ, ಜಾಗ್ರ
ಜಾಗ್ರತೆ!! ಕಾಗದವನ್ನು ಎಲ್ಲಿಯೂ ಹಾಕಬೇಡ. ನೀನು ಮತ್ತೆ ಇಲ್ಲ
ಬರಬೇಕಾದ ನಿರ್ಬಂಧವಿಲ್ಲ. ಹಾಗೆ ಹೊರಟುಬಂದರೆ ಶತ್ರುಗಳ ಕೈ
ಸಿಕ್ಕುವೆ. ನಾವು ಹೇಳಿ ಕಳುಹುವವರೆಗೂ ಉದಯಪುರದಲ್ಲಿಯೇ ಇ
ಬೇಕು." ಎಂದು ಹೇಳಿದಳು. ಶ್ಯಾಮಲಪಂಡಿತನು, ಹಾಸ್ಯದಿಂದ—
ಏನಮ್ಮ! ನಿನಗೇನಾದರೂ ಭ್ರಾಂತಿಯೊ? ಹಿಂದೆ ರುಕ್ಮಿಣೀದೇವಿ
ಸಂದೇಶವನ್ನು ಕೃಷ್ಣದೇವನಲ್ಲಿಗೆ ತೆಗೆದುಕೊಂಡುಹೋದಾಗ ಯಾವ ಪ
ಯು ಬಂದು ನನಗೆ ಬುದ್ಧಿ ಹೇಳಿದಳು?" ಎಂದು ಕೇಳಿದನು. ಪದ್ಮೆಯ
ಆತನನ್ನು ಅಷ್ಟಕ್ಕೇ ಸಮಾಧಾನಪಡಿಸಿ, "ಪಂಡಿತೋತ್ತಮನೇ! ಗ
ಯಾಗಿ ಮಾತನಾಡಬೇಡ. ನನ್ನಿಂದ ತಪ್ಪಾಯಿತು; ಕ್ಷಮಿಸು! ಈ
ನೀನು ಶಬ್ದಮಾಡಿದರೆ ಮೋಸವು ಸಂಭವಿಸುವುದು." ಎಂದು ಪ್ರಾರ್ಥಿ
ಕೊಂಡಳು. ಶಿವಸಿಂಗನು ಸಾವಕಾಶ ಮಾಡದೆ ಬ್ರಾಹ್ಮಣನೊಡನೆ ಕೋ
ಯ ಒಳಗೆ ಬಂದನು. ಪದ್ಮೆಯು ಮಲಗಲು ಹೊರಟುಹೋದಳು.

## ಹತ್ತೊಂಬತ್ತನೆಯ ಪ್ರಕರಣ.

ಶಿವಸಿಂಗನು ಶ್ಯಾಮಲಪಂಡಿತನ ಕೈಯನ್ನು ಹಿಡಿದುಕೊಂಡು ಮೆಲ್ಲನೆ ಕಿಟಕಿಯನ್ನು ದಾಟಿ ಕೆಳಗೆ ಜೋಲಾಡುತ್ತಿದ್ದ ಹಗ್ಗವನ್ನು ಆತನಿಗೆ ತೋರಿಸಿ, ಮೊದಲು ತಾನು ಕೆಳಕ್ಕಿಳಿದನು. ಪಂಡಿತನು ಮಾತುಮಾತಿಗೂ ಗೊಣಗುಟ್ಟುತ್ತ ಮೆಲ್ಲಗೆ ಧ್ವನಿಮಾಡುತ್ತಿದ್ದುದರಿಂದ ಇತರರು ಯಾರಾದರೂ ಈ ಮಾತುಗಳನ್ನು ಕೇಳಿದರೆ ತೊಂದರೆಯಾಗುವುದೆಂದು ಭಯಪಟ್ಟು ಶಿವಸಿಂಗನು ಬಾರಿಬಾರಿಗೂ ಆತನನ್ನು ಮಾತನಾಡದಿರುವಂತೆ ಬೇಡಿಕೊಳ್ಳುತ್ತಿದ್ದನು. ಆದರೂ ಆ ವಿದೂಷಕನು ಆತನ ಮಾತನ್ನು ಲಕ್ಷ್ಯಮಾಡದೆ ಮೆಲ್ಲನೆ ರಾಗವನ್ನೆಳೆಯಲಾರಂಭಿಸಿದನು. ಎಷ್ಟುಸಲ ಹೇಳಿದರೂ ಕೇಳದಿದ್ದುದರಿಂದ ಕಡೆಗೆ ಶಿವಸಿಂಗನು ಕೋಪಗೊಂಡು "ಎಲೊ, ಹುಚ್ಚು ಬ್ರಾಹ್ಮಣ! ನನ್ನ ಮಾತನ್ನು ಕೇಳುವೆಯೋ ಇಲ್ಲವೊ? ಬರುತಬರುತ್ತ ನಿನ್ನ ರಾಗಗಳು ಮಿತಿಮೀರುತ್ತಿವೆ. ಇತರರಾರಾದರೂ ನಮ್ಮ ರಹಸ್ಯವನ್ನು ತಿಳಿದುಕೊಂಡರೆ ನಿನ್ನ ಒಬ್ಬನಿಂದ ಎಲ್ಲರಿಗೂ ಕಷ್ಟವುಂಟಾಗುವದು. ಎಚ್ಚರಿಕೆ! ಎಚ್ಚರಿಕೆ!! ಎಂದನು. ಅದಕ್ಕೆ ಶ್ಯಾಮಲಪಂಡಿತನು "ಶಿವಸಿಂಗ್! ಪೂರ್ವದಲ್ಲಿ ರುಕ್ಮಿಣಿ ದೇವಿಯ ಓಲೆಯನ್ನು ತೆಗೆದುಕೊಂಡು ಹೋಗುತ್ತಿರುವಾಗ ನನ್ನನ್ನು ಯಾರೂ ಶಿಕ್ಷಿಸಲಿಲ್ಲ. ದ್ವಾರಕಾಪಟ್ಟಣಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ನನ್ನ ಇಷ್ಟಬಂದಂತೆ ರಾಗಗಳನ್ನೂ ಹಾಡುಗಳನ್ನೂ ಹೇಳುತ್ತಿದ್ದೆನು. ಎಂದು ಹೇಳಲು ಶಿವಸಿಂಗನು ಆತನ ಮೂರ್ಖತನಕ್ಕೆ ಕೋಪಗೊಂಡು "ಎಲೊ, ಛಾಂದಸನೆ! ನಿನಗಿನ್ನೂ ಹುಚ್ಚು ಹೋಗಲಿಲ್ಲ. ನನ್ನ ಮಾತಿನಂತೆ ಶಬ್ದಮಾಡದೆ ಈ ಹಗ್ಗದಿಂದ ಕೆಳಕ್ಕೆ ಇಳಿ, ನನ್ನ ರಹಸ್ಯಗಳನ್ನು ಶತ್ರುಗಳು ಕಂಡುಹಿಡಿದರೆ ನನ್ನ ಕಾರ್ಯಗಳೆಲ್ಲ ಭಂಗವಾಗುವುವು. ನನ್ನ ಕಣ್ಣಿಗೆ ನೀನು ಯಮದೂತನಂತಿರುವೆ. ಪದ್ಮೆಯು ಹುಡುಕಿಹುಡುಕಿ

ನಿನ್ನನ್ನು ಕಳುಹಿರುವಳು ಎಂದನು. ಶ್ಯಾಮಲಪಂಡಿತನು ಏನೋಪ್ರತ್ಯು ತ್ತರವನ್ನು ಕೊಡಲುದ್ಯುಕ್ತನಾಗಲು ಶಿವಸಿಂಗನು ಪುನಃ "ಬಾಯ್ಬಿಡಬೇಡ; ನಾನು ಹೇಳುವವರೆಗೂ ಮಾತನಾಡಬೇಡ ನನ್ನ ಮಾತನ್ನು ಕೇಳದಿದ್ದರೆ ಇಕೋ ಈ ಹಗ್ಗವನ್ನು ಕತ್ತರಿಸಿ ನಿನ್ನನ್ನು ಕೆಳಕ್ಕೆ ಕೆಡಹುವೆನು; ಎಚ್ಚರಿಕೆ! ಎಂದು ಮೆಲ್ಲನೆ ಹೇಳಲು ಶ್ಯಾಮಲಪಂಡಿತನು ಭಯದಿಂದ ಪ್ರತಿಮಾತನಾಡದೆ ಶಿವಸಿಂಗನ ಹಿಂದೆ ತಾನೂ ಕೆಳಗೆ ಇಳಿಯುತ್ತಿದ್ದನು. ಹೀಗೆ ಸ್ವಲ್ಪದೂರ ಇಳಿದ ಮೇಲೆ ಶ್ಯಾಮಲಪಂಡಿತನು ಶಿವಸಿಂಗ್! ಶಿವಸಿಂಗ್!! ಜಾಗ್ರತೆಯಾಗಿ ಬಾ." ಎಂದು ಕರೆದನು. ಪಾಪ! ಬ್ರಾಹ್ಮಣನಿಗೆ ಯಾವ ಅಪಾಯವುಂಟಾಯಿತೋ ಎಂದು ಶಿವಸಿಂಗನು ಓಡಿಬಂದು ಏನೆಂದು ಕೇಳಲು ಶ್ಯಾಮಲಪಂಡಿತನು ರಹಸ್ಯವಾಗಿ—"ಅಯ್ಯಾ! ನನಗೆ ಆವ ವಿಪತ್ತೂ ಬರಲಿಲ್ಲ. ಇನ್ನುಮೇಲೆಯಾದರೂ ಮಾತನಾಡಬಹುದೇನೆಂದು ಕೇಳಲು ಕರೆದೆ" ನೆಂದನು. ಹೀಗೆಯೇ ಪದೇಪದೇ ಕೇಳುತ್ತ ಸ್ವಲ್ಪಹೊತ್ತಿಗೆ ಕೆಳಗಿಳಿದನು. ಶಿವಸಿಂಗನು ಬ್ರಾಹ್ಮಣನನ್ನು ಜೊತೆಯಲ್ಲಿ ಕರೆದುಕೊಂಡು ತನಗಾಗಿ ಕಾದಿದ್ದ ಭಿಲ್ಲರೊಡನೆ ಕೂಡಿ ಕೋಟೆ ಕೊತ್ತಲಗಳನ್ನು ದಾಟಿ ಅರಣ್ಯಮಾರ್ಗದಲ್ಲಿ ಹೊರಟನು. ಆಗ ಶ್ಯಾಮಲಪಂಡಿತನು—"ಈಗಲಾದರೂ ಬಾಯ್ದೆರೆಯಬಹುದೇ" ಎಂದು ಕೇಳಿದನು. ತಾನು ಹೇಳುವ ವರೆಗೂ ಬಾಯ್ದೆರೆಯ ಕೂಡದೆಂದು ಶಿವಸಿಂಗನು ಪುನಃ ಪ್ರತ್ಯುತ್ತರವಿತ್ತನು. ಪರ್ವತಪ್ರಾಂತ್ಯದ ಅರಣ್ಯದಲ್ಲಿ ಆ ಅರ್ಧರಾತ್ರಿಯ ಸಮಯದಲ್ಲಿ ಪಯಣಮಾಡುತ್ತ ಶಿವಸಿಂಗನು ಜಾಗ್ರತೆ ನಡೆಯಿರೆಂದು ಭಿಲ್ಲರಿಗೆ ಅಜ್ಞಾಪಿಸುತ್ತ ಸ್ವಲ್ಪ ದೂರ ನಡೆದಮೇಲೆ ಶ್ಯಾಮಲಪಂಡಿತನನ್ನು ನೋಡಿ—'ಪಂಡಿತಜೀ! ಇನ್ನು ನಿಮ್ಮ ಇಷ್ಟಬಂದಂತೆ ಮಾಡಿಕೊಳ್ಳಬಹುದು. ಪಟ್ಟಣವನ್ನು ದಾಟಿ ಬಂದುದು ಒಂದು ಗಂಡವನ್ನು ಕಳೆದಂತಾಯಿತು.' ಎಂದು ಹೇಳಿದನು. ಪಂಡಿತನಿಗೆ ನಿರ್ಬಂಧವು ತಪ್ಪಿದಂತಾಗಲು ಶಕ್ತ್ಯುತ್ಸಾಹಗಳುಂಟಾದವು. ತನ್ನ ಜೊತೆಯಲ್ಲಿ ಬರುತ್ತಿದ್ದವರನ್ನು ಹಿಂದೆ

ಬಿಟ್ಟು ತಾನು ಸ್ವೇಚ್ಛೆಯಿಂದ ನಡೆಯುತ್ತ ತನಗೆ ತಾನೇ "ವಾಹವ್ವಾ ! ಇಷ್ಟು ದಿನಗಳಿಗೆ ನನ್ನ ಅದೃಷ್ಟವು ಫಲಿಸಿದಂತಾಯಿತು. ವಿಮಲಾದೇವಿಯ ಅನುಗ್ರಹದಿಂದ ರಾಜಸಿಂಹನ ಬಳಿಯಲ್ಲಿ ಬೇಕಾದಷ್ಟು ದ್ರವ್ಯವನ್ನು ಸಂಪಾದಿಸುವೆನು. ಆತನು ನನ್ನನ್ನು ನೋಡಿದ ಕೂಡಲೆ ನನ್ನನ್ನಾದರಿಸಿ ಕ್ಷೇಮ ಸಮಾಚಾರವನ್ನು ವಿಚಾರಿಸುವನು. ಆಗ ನನ್ನ ವಾಕ್ಚಾತುರ್ಯವನ್ನೆಲ್ಲ ತೋರಿಸಿ ವಿಮಲಾದೇವಿಯ ಸ್ಥಿತಿಯನ್ನು ವಿವರಿಸಿದೆನೆಂದರೆ, ರಾಜಸಿಂಹನು ಮೆಚ್ಚಿ ನನಗೆ ತಕ್ಕ ಬಹುಮಾನವನ್ನು ಮಾಡುವನು. ಅಷ್ಟೇ ಅಲ್ಲ ; ರಾಜಸಿಂಹರಾಜನ ಸನ್ನಿಧಿಯಲ್ಲಿ ನನಗೆ ಸಪಭೋಜನವೂ ಯಥೇಷ್ಟವಾಗಿ ಲಭಿಸುವುದು. ಆಗಳಲ್ಲವೇ, ಭೋಜನದಲ್ಲಿ ನನ್ನ ಪ್ರತಾಪವು ಎಷ್ಟಿರುವುದೆಂಬುದು ಗೊತ್ತಾಗುವುದು ? ಅಹಹಾ ! ಈಗಲೇ ನಾಲಿಗೆಯಲ್ಲಿ ನೀರೂರುತ್ತಿರುವುದು........"

ಪಂಡಿತನ ಮಾತಿಗೆ ಎಲ್ಲರೂ ನಗುತ್ತಿದ್ದರು. ಸ್ವಲ್ಪದೂರ ನಡೆದ ಮೇಲೆ ಪಂಡಿತನು ಆಯಾಸದಿಂದ ನಡೆಯಲಾರದೆ ಹೋದನು. ಆಗ ಶಿವಸಿಂಗನು ಅವನನ್ನು ನೋಡಿ—"ಪಂಡಿತಜೀ ! ನೀವು ಆಯಾಸಪಟ್ಟಂತೆ ಕಾಣುವಿರಿ. ಇನ್ನು ನಡೆಯಲಾಗುವುದಿಲ್ಲವೊ ? ಇಲ್ಲಿಗೆ ಸಮೀಪದಲ್ಲಿಯೇ ಒಂದು ಸರೋವರವಿರುವುದು. ಅಲ್ಲಿ ಈ ದಿನ ವಿಶ್ರಮಿಸಿಕೊಳ್ಳುವ. ಈಗ ನೀವು ಈ ಭಿಲ್ಲರಲ್ಲಿ ಯಾರ ಭುಜದ ಮೇಲಾದರೂ ಕುಳಿತುಕೊಳ್ಳಿರಿ. ಆಯಾಸವು ಕಡಿಮೆಯಾದೀತು " ಎಂದು ಹೇಳಲು,—

ಬ್ರಾಹ್ಮಣನು:—"ಏನಯ್ಯಾ ! ನನ್ನ ಮೇಲಿನ ಕೋಪವನ್ನು ತೀರಿಸಿಕೊಳ್ಳಲು ನನ್ನನ್ನು ಹೊತ್ತುಕೊಂಡು ಹೋಗಿ ಸರೋವರದಲ್ಲಿ ಎತ್ತಿಹಾಕಬೇಕೆಂದೋ—ಇಷ್ಟೆಲ್ಲ ಪ್ರಯತ್ನವು ? ಹಾಗೆ ಮಾತ್ರ ಮಾಡಬೇಡ ಕಂಡೆಯಾ ? ನನ್ನ ತಾಯಿಗೆ ನಾನು ಒಬ್ಬನೇ ಮಗನು. ನನ್ನ ಪತ್ನಿಯು ಹೊಸ್ತೆ ತಾನೇ ಮನೆಗೆ ಬಂದಳು. ಇವರೆಲ್ಲರನ್ನೂ ಬಿಟ್ಟು ನಾನು ಹೇಗೆ

ನಿಮ್ಮ ಮಾತಿಗೆ ಒಪ್ಪುವೆನು? ನನಗೆ ನಿಮ್ಮ ಉಪಾಯಗಳೆಲ್ಲವೂ ದಿವ್ಯ ದೃಷ್ಟಿಯಿಂದ ತಿಳಿದುಬಂದಿವೆ. ನಾನಾರೆಂದು ತಿಳಿದಿರುವಿ ? ಪಿಶಾಚಿಕೆ!" ಎಂದು ಗದರಿಸಿದನು.

ಪಂಡಿತನ ಮಾತಿಗೆ ಶಿವಸಿಂಗನು ನಕ್ಕು ಆತನೊಡನೆ ಪರಿಹಾಸಕ್ಕಾಗಿ ಹೀಗೆ ಮಾತಾಡಿದನು.—

"ಪಂಡಿತರೇ! ನಿಮಗೆ ದಿವ್ಯದೃಷ್ಟಿಯಿದೆಯೆಂಬಿರಷ್ಟೆ ? ಮುಂದೆ ಏನು ನಡೆಯುವುದೋ ಸ್ವಲ್ಪ ತಿಳಿಸುವಿರಾ ?"

ಪಂಡಿತ:—ಓಹೋ, ಹೇಳದೆ ಏನು ? ಇನ್ನು ಕೆಲವು ದಿನಗಳಲ್ಲಿಯೇ ಆ ರಾಜಸಿಂಹನು ರೂಪನಗರಕ್ಕೆ ಬಂದು ದುರ್ಮಾರ್ಗಿಯಾದ ಔರಂಗಜೇಬನನ್ನು ನಿಗ್ರಹಿಸಿ, ವಿಮಲಾದೇವಿಯನ್ನು ಕರೆದುಕೊಂಡೇ ಹೋಗುವನು. ಇದು ನಿಜವಾದ ಮಾತು !

ಶಿವಸಿಂಗ:—ಭಲೆ! ನಿಜವಾದ ಸಂಗತಿಯನ್ನೇ ಹೇಳಿದಿರಿ. ಸರಿಯೆ, ವಿಮಲಾದೇವಿಯ ವಿವಾಹಕ್ಕೆ ನೀವೇ ಪುರೋಹಿತರಾಗುವಿರೋ ? ಅಥವಾ.....

ಶ್ಯಾಮಲ;—ಅದಕ್ಕೆ ಸಂದೇಹವೇನು ? ಪೂರ್ವದಲ್ಲಿ ಕೃಷ್ಣನಿಗೆ ಹೇಗೆ ವಿವಾಹ ಮಾಡಿದೆನೋ ರಾಜಸಿಂಹನಿಗೂ ಹಾಗೆಯೇ ಮಾಡುವೆನು.

ಶಿವ:—ರಾಜಸಿಂಹನು ನಿಮಗೇನು ಬಹುಮಾನವನ್ನು ಕೊಡುವನು ?

ಶ್ಯಾಮಲ:—ಸಮಸ್ತವೂ ನನ್ನ ಕೈಯ್ಯಲ್ಲಿಯೇ ಇರುವಾಗ ನನಗೆ ಬಹುಮಾನವನ್ನು ಕೊಡುವವರು ಬೇರೆ ಏಕೆ ಬೇಕು ? ನಾನು ಕೈಹಾಕಿ ತೆಗೆದು ಕೊಂಡುದನ್ನು ಅಡ್ಡಿಮಾಡುವವರಾರು ?

ಹೀಗೆ ಮಾತನಾಡುತ್ತ ಎಲ್ಲರೂ ನಿಶಾಸಮಯದಲ್ಲಿ ಆಸರೋವರದ ಬಳಿಗೆ ಬಂದರು. ಶಿವಸಿಂಗನು ಆ ದಿನವೆಲ್ಲ ಅಲ್ಲಿಯೇ ಇದ್ದು, ಮುಂದೆ ಹೊರಡಬೇಕೆಂದು ಭಿಲ್ಲರಿಗೆ ತಿಳಿಸಿದನು. ಆಯಾಸಪರಿಹಾರಾರ್ಥವಾಗಿ ಭಿಲ್ಲರೆಲ್ಲರೂ ಸರಸ್ಸಿನಲ್ಲಿ ಸ್ನಾನಮಾಡಿ ವಿಶ್ರಮಿಸಿಕೊಂಡರು.

ಸೂರ್ಯೋದಯವಾಯಿತು. ಬ್ರಾಹ್ಮಣನು ಪ್ರಾತಃಕೃತ್ಯಗಳನ್ನು ನಡೆಯಿಸಿಕೊಂಡು ತಾನು ತಂದಿದ್ದ ಬುತ್ತಿಯನ್ನು ಬಿಚ್ಚಿ, ಸ್ವಲ್ಪ ಆಹಾರವನ್ನು ಸ್ವೀಕರಿಸಿ, ಉಳಿದುದನ್ನು ಶಿವಸಿಂಗನಿಗೂ ಕೊಟ್ಟನು. ಅಷ್ಟರಲ್ಲಿ ಭಿಲ್ಲರೂ ತಮ್ಮ ತಮ್ಮ ಬುತ್ತಿಯನ್ನು ಬಿಚ್ಚಿ ಊಟಮಾಡಿ ಎಲ್ಲರೂ ಮರದ ನೆರಳಿನಲ್ಲಿ ಸ್ವಲ್ಪಹೊತ್ತು ಮಲಗಿದ್ದು ಆಬಳಿಕ ಪುನಃ ಪ್ರಯಾಣಮಾಡಿದರು.

ಇವರೆಲ್ಲರೂ ದಾರಿನಡೆಯುತ್ತಿರುವಾಗ ಮಾರ್ಗಮಧ್ಯದಲ್ಲಿ ಒಬ್ಬ ಪುರುಷನು ಮುಲುಗುತ್ತ ಕೈಕಾಲುಗಳನ್ನು ಮುದುರಿಕೊಂಡು ಮಲಗಿದ್ದನು. ಶಿವಸಿಂಗನು ಆತನನ್ನು ನೋಡಿ ಕನಿಕರದಿಂದ—"ಅಯ್ಯಾ ! ನೀನಾರು ? ಈ ಮರದ ಕೆಳಗೆ ಮಲಗಿರುವುದೇಕೆ ?" ಎಂದು ಕೇಳಲು, ಆತನು—"ಅಯ್ಯಾ ! ನೀವೇ ನನ್ನ ಪಾಲಿಗೆ ದೈವಸ್ವರೂಪರಾಗಿ ಬಂದಿರಿ ! ನಾನು ಪಕ್ಕದಲ್ಲಿರುವ ಹಳ್ಳಿಗೆ ಹೋಗಿ ಪುನಃ ನನ್ನ ಗ್ರಾಮಕ್ಕೆ ಬರುತ್ತ ದಾರಿಯಲ್ಲಿ ಒಂದು ಕಲ್ಲುಸ್ಡೆಡವಿ ಕೆಳಕ್ಕೆ ಬಿದ್ದೆನು. ಮೊಣಕಾಲಿಗೆ ಕುಂಬಿ ಪೆಟ್ಟು ಬಿದ್ದಿದೆ. ನಡೆಯಲಾರೆ. ರಾತ್ರಿಯಿಂದಲೂ ಆಹಾರವಿಲ್ಲದೆ ನರಳುತ್ತ ಬಿದ್ದಿರುವೆನು. ಸ್ವಲ್ಪ ಆಹಾರವನ್ನಿತ್ತು ಸ್ವಲ್ಪ ದೂರ ಕರೆದುಕೊಂಡು ಹೋದರೆ ನಿಮ್ಮ ಉಪಕಾರವನ್ನು ಎಂದಿಗೂ ಮರೆಯಲಾರೆನು." ಎಂದು ಪ್ರಾರ್ಥಿಸಲು, ಶಿವಸಿಂಗನು ಆತನ ಮೇಲೆ ಪೂರ್ಣಾನುಗ್ರಹವನ್ನು ತೋರಿಸಿ, ತನ್ನ ಬಳಿಯಲ್ಲಿದ್ದ ಭಿಲ್ಲರಲ್ಲೊಬ್ಬನನ್ನು ಕರೆದು ಆತನನ್ನು ಹೊತ್ತುಕೊಂಡು ಬರುವಂತೆ ಆಜ್ಞಾಪಿಸಿದನು. ತಕ್ಷಣವೇ ಒಬ್ಬ ಭಿಲ್ಲನು ಆತನನ್ನು ಭುಜದಮೇಲೆ ಹೊತ್ತುಕೊಂಡು ಹೊರಟನು.

ಆ ಪುರುಷನು ಎಷ್ಟು ಬಾಧೆಯನ್ನು ಅನುಭವಿಸುತ್ತಿದ್ದನೊ ನಮಗೆ ತಿಳಿಯದಾದರೂ ಆತನ ಮುಲುಗುವಶಬ್ದವು ಮಾತ್ರ ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದಿತು, ಆದರೆ ಶಿವಸಿಂಗ ಮೊದಲಾದವರು ಯಾರಾದರೂ ಮಾತನಾಡು

ತ್ತಿರುವಾಗ ಮಾತ್ರ ಆತನು ಮುಲುಗುವಿಕೆಯನ್ನು ನಿಲ್ಲಿಸುತ್ತಿದ್ದನು. ಅವ
ಸುಮ್ಮನಿರುವಾಗ ಹೆಚ್ಚು ಮುಲುಗುತ್ತಿದ್ದನು. ಆದರೆ, ಈ ರಹಸ್ಯವನ
ಭಿಲ್ಲರಲ್ಲೊಬ್ಬನೂ ತಿಳಿದುಕೊಳ್ಳಲಿಲ್ಲ. ಶಿವಸಿಂಗನು ಮೊದಲಾದವ
ಯಾವ ವಿಷಯವನ್ನು ಮಾತನಾಡುತ್ತಿರುವಿರೋ ತಿಳಿಯಬೇಕೆಂದೇ ಆತ
ತನ್ನ ಶಬ್ದವನ್ನು ಆಗಾಗ ಕಡಿಮೆ ಮಾಡುತ್ತಿದ್ದನು. ಆದರೆ ಶ್ಯಾಮ
ಪಂಡಿತನ ಪ್ರಲಾಪಗಳಿಂದ ಆತನಿಗೆ ಯಾವ ಸಂಗತಿಯೂ ಸರಿಯಾಗಿ ತಿಳಿ
ಲಿಲ್ಲ. ಮಾತನಾಡದೆ ಒಂದು ಕ್ಷಣವಿರಬೇಕೆಂದರೆ ನಮ್ಮ ಶ್ಯಾಮಲಪಂ
ತನಿಗೆ ಒಂದು ಯುಗವನ್ನು ಕಳೆಯುವಷ್ಟು ಕಷ್ಟವಾಗುತ್ತಿದ್ದಿತು. ರೋ
ಯು, ಬ್ರಾಹ್ಮಣನನ್ನು ಮಾತನಾಡದೆ ಇರುವಂತೆ ಹೇಳಬೇಕೆಂಬುದಾಗಿಯ
ತನಗೆ ತಲೆಶೂಲೆ ಹೆಚ್ಚುತ್ತಿರುವುದೆಂಬುದಾಗಿಯೂ ಶಿವಸಿಂಗನನ್ನು ಪ್ರಾರ್ಥಿ
ದನು, ಶಿವಸಿಂಗನು ಅದನ್ನೇ ಬ್ರಾಹ್ಮಣನಿಗೆ ಹೇಳಲು, ಅದಕ್ಕಾ ಬ್ರಾ
ಣನು—ತನ್ನಿಂದ ಸುಮ್ಮನಿರಲಾಗುವುದಿಲ್ಲವೆಂದೂ ಮಾತನಾಡದಿದ್ದ
ತನಗೂ ಸಹ ತಲೆ ನೋಯುವದೆಂದೂ ಹೇಳಿ ತನ್ನ ಇಷ್ಟಬಂದಂತೆ ಮಾ
ನಾಡುತ್ತಿದ್ದನು. ಹೀಗೆಯೇ ನಡೆದ ಮೇಲೆ ರಾತ್ರಿಯಾಗಲು ಆ ಅರ
ದಲ್ಲಿ ಒಂದು ಮರದ ಕೆಳಗೆ ಸ್ವಲ್ಪ ವಿಶ್ರಮಿಸಿಕೊಂಡರು. ಭಿಲ್ಲನು ತ
ಭುಜದಮೇಲಿದ್ದ ರೋಗಿಯನ್ನು ಇಳಿಸಿ, ಆತನನ್ನು ಒಂದು ಕಡೆ ಮಲಗಿ
ದನು. ಅನಂತರ ಶಿವಸಿಂಗನೂ ಭಿಲ್ಲರೂ ನಮ್ಮ ಪಂಡಿತನೂ ಕಲೆತು ತ
ಉಪಾಯಗಳನ್ನು ಮಾಡಿಕೊಂಡು ಅಲ್ಲಿಯೇ ನಿದ್ರೆ ಹೋದರು.

ಸೂರ್ಯೋದಯವಾಗುತ್ತಲೆ ರೋಗಿಯು ಎಲ್ಲರಿಗಿಂತಲೂ ಮೊದ
ಎದ್ದು ಕುಂಟುತ್ತ ಅತ್ತಿತ್ತ ನಡೆಯುತ್ತಿದ್ದನು. ಆಗ ಎಚ್ಚರದಲ್ಲಿ
ಕೆಲವರು ಭಿಲ್ಲರು ಆತನನ್ನು ನೋಡಿ ಈತನಾರೆಂದು ತಮ್ಮೊಳಗೆ ತಾ
ಮಾತನಾಡಿಕೊಳ್ಳುತ್ತಿದ್ದರು. ಇಷ್ಟರಲ್ಲಿ ಶಿವಸಿಂಗನೂ ಎದ್ದು ಪಯಣ
ಸಿದ್ಧನಾದನು. ಆತನನ್ನು ನೋಡಿ ರೋಗಿಯು—"ಅಯ್ಯೋ! ನನ್ನ ದೇಹ

ಸ್ವಲ್ಪ ದಾರಿಗೆ ಬಂದಿದೆ. ಆಯಾಸವೆಲ್ಲಾ ಹೋಯಿತು. ಸ್ವಲ್ಪ ನಡೆಯುವಂತಾಗಿದೆ. ಇನ್ನು ನಾನೇ ಮೆಲ್ಲಗೆ ಹೋಗುವೆನು. ನಿಮಗೆ ಹೆಚ್ಚು ತೊಂದರೆ ಕೊಡಲಾರೆನು." ಎಂದನು. ಶಿವಸಿಂಗನು ಹಾಗೆಯೇ ಆಗಲೆಂದು ತನ್ನ ಪರಿವಾರದೊಡನೆ ಹೊರಟು ತನ್ನ ದಾರಿಯನ್ನು ಹಿಡಿದನು. ಅವರು ಸ್ವಲ್ಪ ದೂರ ಹೋದಮೇಲೆ ರೋಗಿಯು ಯಾರಿಗೂ ತಿಳಿಯದಂತೆ ಎದ್ದು ಓಡಿಹೋದನು.

---

## ಇಪ್ಪತ್ತನೆಯ ಪ್ರಕರಣ.

(ಪಾರಿವಾಳವೆಲ್ಲಿಗೆ ಹೋಯಿತು?)

ಪದ್ಮೆಯನ್ನು ಮೋಸಪಡಿಸಬೇಕೆಂದು ಕುಂಡೆಯು ಪಾರಿವಾಳದ ಕೊರಳಲ್ಲಿದ್ದ ಕಾಗದವನ್ನು ಓದಿಕೊಂಡು ಅದಕ್ಕೆ ವ್ಯತಿರೇಕವಾಗಿ ಉತ್ತರವನ್ನು ಬರೆದು ಪಾರಿವಾಳದ ಕೊರಳಿಗೆ ಕಟ್ಟಿ ಕಳುಹಿದುದು ಸರಿಯಷ್ಟೆ? ಪಾರಿವಾಳವು ಅಂತರಿಕ್ಷದಲ್ಲಿ ಹಾರಿಬರುತ್ತಿರುವಾಗ, ಮಧ್ಯಮಾರ್ಗದಲ್ಲಿಯೇ ಬಿಡಾರವನ್ನು ಹೊಡಿಸಿ ವಿಶ್ರಾಂತಿಗಾಗಿ ಬಿಡಾರದ ಹೊರಗೆ ಕುಳಿತು ಹುಕ್ಕಾ ಸೇದುತ್ತ ಮೇಲೆಯೇ ನೋಡುತ್ತಿದ್ದ ಸಾದತ್‌ಖಾನನು ಅಂತರಿಕ್ಷದಲ್ಲಿ ಹಾರಿಬರುತ್ತಿದ್ದ ಪಾರಿವಾಳವನ್ನು ಕಂಡನು; ತತ್‌ಕ್ಷಣವೇ ತನ್ನ ಕೈಗುರಿಯನ್ನು ಪರೀಕ್ಷಿಸಲು ಬಳಿಯಲ್ಲಿಯೇ ಇದ್ದ ತುಪಾಕಿಯನ್ನು ತೆಗೆದುಕೊಂಡು ಪಾರಿವಾಳಕ್ಕೆ ಗುರಿಯಿಟ್ಟು ಹೊಡೆದು ಅದನ್ನು ಕೆಳಕ್ಕೆ ಕೆಡಹಿದನು.

ಪಾರಿವಾಳವು ನೆಲದ ಮೇಲೆ ಬಿದ್ದೊಡನೆಯೇ ಅದರ ಕಂಠದಲ್ಲಿದ್ದ ಕಾಗದವನ್ನು ಕಂಡು, ಕುತೂಹಲಗೊಂಡು, ಅದನ್ನು ಆತುರದಿಂದ ಬಿಚ್ಚಿ ತೆಗೆದು ಒಬ್ಬ ಹಿಂದೂಭಟನ ವಶಕ್ಕೊಪ್ಪಿಸಿ ಓದಿಸಿದನು. ಅದರಲ್ಲಿ—

"ನೀವು ಈಗ ಬರುವ ಅಗತ್ಯವಿಲ್ಲ. ಬರಬೇಕಾದ ಸಮಯಬಂದಾಗ ನಾನೇ ನಿಮಗೆ ತಿಳಿಸುವೆನು. ಈಗ ನೀವು ಬರಲು ಸಿದ್ಧರಾಗಿರಬೇಕು" ಎಂದು ಬರೆದಿದ್ದಿತು. ಆ ಸಮಾಚಾರವನ್ನು ಕೇಳಿದ ತತಾಕ್ಷಣವೇ ಸಾದತ್ ಖಾನನಿಗೆ ಅನೇಕ ಸಂದೇಹಗಳುಂಟಾದವು. ಕೋಟೆಯೊಳಗೆ ವಿಜಯ ಸಿಂಹನು ಯುದ್ಧಪ್ರಯತ್ನದಲ್ಲಿರುವನೆಂದೂ ಹೀಗೆ ಎಷ್ಟೋ ದಿನಗಳಿಂದ ಉತ್ತರಪ್ರತ್ಯುತ್ತರಗಳನ್ನು ನಡೆಯಿಸುತ್ತಿರುವನೆಂದೂ ಯೋಚಿಸಿ ಆತನು ಭೀತಚಿತ್ತನಾದನು. ಮತ್ತು "ಈಗ ಬರುವ ಅಗತ್ಯವಿಲ್ಲ" ಎಂಬ ವಾಕ್ಯದಿಂದ ವಿಜಯಸಿಂಹನು ಮೊದಲು ರಜಪೂತರ ಸಹಾಯವನ್ನು ಅಪೇಕ್ಷಿಸದೆಯೇ ತನ್ನನ್ನು ಓಡಿಸುವ ಸನ್ನಾಹದಲ್ಲಿರಬಹುದೆಂದೂ ರಜಪೂತರೂ ಆತನ ಸಹಾಯಕ್ಕೆ ಬಂದರೆ ತನಗೆ ಜಯವು ದುರ್ಘಟವೆಂದೂ ಭಾವಿಸಿ ಹಲವು ಬಗೆಯಾಗಿ ಉಪಾಯಗಳನ್ನು ಕುರಿತು ಆಲೋಚಿಸಿದನು; ರಾಜಪುತ್ರರು ಸಹಾಯಾರ್ಥವಾಗಿ ಬರುತ್ತಿರುವರೇನೆಂಬ ವಿಚಾರವನ್ನು ತಿಳಿಯಲು ನಾಲ್ಕು ಕಡೆಗಳಿಗೂ ಚಾರರನ್ನು ಅಟ್ಟಿ, ಬಹು ಜಾಗರೂಕತೆಯಿಂದಿದ್ದನು.

ಶತ್ರುಗಳ ವರ್ತಮಾನವನ್ನು ತಿಳಿದು ಬರಲು ಹೋಗಿದ್ದವರಲ್ಲಿ ಒಬ್ಬ ಚಾರನು ಹಿಂತಿರುಗಿ ಬಂದು ಸಾದತ್‌ಖಾನನಿಗೆ ಸಲಾಮುಗಳನ್ನು ಮಾಡಿ ಹೀಗೆ ಹೇಳಿದನು.

"ಆಜ್ಞಾನುಸಾರ ನಾನು ಹೋಗುತ್ತಿದ್ದಾಗ ಒಬ್ಬ ರಜಪುತ್ರವೀರನು ಒಬ್ಬ ಬ್ರಾಹ್ಮಣನನ್ನು ಕರೆದುಕೊಂಡು ಕೆಲವರು ಭಿಲ್ಲರೊಡನೆ ಹೋಗುತ್ತಿದ್ದನು. ಆತನು ಉದಯ ಪುರಕ್ಕೆ ಹೋಗುತ್ತಿದ್ದಂತೆ ತಿಳಿದು ಬಂದಿತು."

ಸಾದತ್:—ಭಲೆ! ಇಷ್ಟು ಮಂದಿ ಭಟರಲ್ಲಿ ನೀನೇ ಸಮರ್ಥನು. ಸಮಾಚಾರವೇನು? ಎಲ್ಲಿಗೆ—ಏತಕ್ಕಾಗಿ ಹೋಗುತ್ತಿದ್ದರು? ಯಾರ ಕಡೆಯವರು?

ಭಟ:—ಸ್ವಾಮೀ! ನಾನು ಮಾರ್ಗಮಧ್ಯದಲ್ಲಿ ಯೋಗಿಯಂತೆ

ಮುಲುಗುತ್ತ ಮಲಗಿದ್ದು ಅವರು ನನ್ನನ್ನು ಸಮೀಪಿಸಿದ ಕೂಡಲೆ ಅವರನ್ನು ಕುರಿತು ನಾನು ನಡೆಯಲಾರೆನೆಂದೂ ಮೊಣಕಾಲಿಗೆ ಏಟುಬಿದ್ದಿದೆಯೆಂದೂ ಸುಳ್ಳುಹೇಳಿ ಅವರ ಸಹಾಯವನ್ನು ಬೇಡಿದೆನು. ರಜಪೂತನು ಕನಿಕರ ದಿಂದ ನನಗೆ ಉಪಚಾರಮಾಡಿ ಸ್ವಲ್ಪ ದೂರ ತನ್ನ ಸೇವಕನೊಬ್ಬನಿಗೆ ನನ್ನನ್ನು ಎತ್ತಿಕೊಂಡು ಬರುವಂತೆ ಕಟ್ಟುಮಾಡಿದನು; ಸೇವಕನು ಹಾಗೆಯೇ ಮಾಡಿದನು. ಅವರ ಪರಸ್ಪರ ಸಂಭಾಷಣೆಯು ನನಗೆ ಕೇಳಿಸಬಾರದೆಂದು ಅವರ ಹಿಂದೆ ಇದ್ದ ಬ್ರಾಹ್ಮಣನು ಗಲಭೆ ಮಾಡುತ್ತಿದ್ದನು. ಆದರೂ, ವಿಜಯಸಿಂಹನು ಆ ರಾಜಪುತ್ರನ ಮೂಲಕ ರಾಜಸಿಂಹನಿಗೆ ಆವುದೋ ರಹಸ್ಯವನ್ನು ಹೇಳಿ ಕಳುಹಿರುವನೆಂಬುದು ಮಾತ್ರ ತಿಳಿದು ಸನ್ನಿಧಿಗೆ ವಿಜ್ಞಾಪಿಸಲು ಬಂದೆನು.

ಚಾರನ ಮಾತಿನಿಂದ ಸಾದತ್‌ಖಾನನು ಮತ್ತೂ ಭಯಪಟ್ಟವನಾಗಿ ಆಗಲೇ ಎರಡುಸಾವಿರ ಸೈನ್ಯವನ್ನು ಕರೆಯಿಸಿ ಅರಣ್ಯಮಾರ್ಗದಲ್ಲಿ ಹೋಗುತ್ತಿದ್ದ ರಾಜಪುತ್ರನನ್ನೂ ಭಿಲ್ಲರನ್ನೂ ಹಿಡಿದುತರಬೇಕೆಂದು ಆಜ್ಞಾಪಿಸಿ ಕಳುಹಿದನಲ್ಲದೆ, ಎರಡು ಕಡೆಗಳಿಂದಲೂ ರಾಜಪುತ್ರರು ತಮ್ಮ ಮೇಲೆ ಯುದ್ಧಕ್ಕೆ ಬರುತ್ತಿರುವರೆಂದೂ ತತ್‌ಕ್ಷಣವೇ ೪೦೦೦ ಸೈನ್ಯವನ್ನು ಸಹಾಯಕ್ಕಾಗಿ ಕಳುಹಬೇಕೆಂದೂ ಬಾದಷಹನಿಗೆ ಬರೆದು ಕಳುಹಿದನು.

ಸಾದತ್‌ಖಾನನು ಕಳುಹಿದ ಸೈನಿಕರು ಉದಯಪುರ ಮಾರ್ಗವಾಗಿ ಹೋಗುತ್ತಿದ್ದರು. ಶ್ಯಾಮಲಪಂಡಿತನೂ ಶಿವಸಿಂಗನೇ ಮೊದಲಾದವರೂ ಉದಯಪುರವನ್ನು ಸಮೀಪಿಸಿದ್ದರು. ಶ್ಯಾಮಲಪಂಡಿತನು ಶಿವಸಿಂಗನನ್ನು ನೋಡಿ—"ಅಯ್ಯಾ! ಇನ್ನು ನೀವು ಹೋಗಬಹುದು; ನಾನು ಉದಯಪುರವನ್ನು ಸೇರುವೆನು. ಇನ್ನು ನನಗಾವ ಭಯವೂ ಇಲ್ಲ." ಎಂದನು. ಅದಕ್ಕೆ ಶಿವಸಿಂಗನು ನಗುತ್ತಾ—

"ಪಂಡಿತಜೀ! ಮಾರ್ಗದಲ್ಲಿ ನಿಮ್ಮನ್ನು ಯಾರಾದರೂ ಪೀಡಿಸಿದರೊ?" ಎಂದು ಕೇಳಲು,

ಶ್ಯಾಮಲ:—(ಆಗ್ರಹದಿಂದ) "ಓಹೋ ! ನಾನು ಅಷ್ಟು ಪರಾಕ್ರಮಹೀನನೋ ? ನನ್ನ ಪರಾಕ್ರಮವನ್ನು ನೀನೇನು ಬಲ್ಲೆ ? ನೂರು ಹದ್ದುಗಳನ್ನೂ ನಾಲ್ಕು ಸಾವಿರ ಮೂಷಕಗಳನ್ನೂ ಆರುಸಾವಿರ ಗ್ರಾಮಸಿಂಹಗಳನ್ನೂ ಯಮಲೋಕಕ್ಕೆ ಕಳುಹಿದ ಜಗದೇಕವೀರನಾರೆಂದು ಬಲ್ಲೆ ?" ಎಂದು ತನ್ನ ಪರಾಕ್ರಮವನ್ನು ಕೊಚ್ಚಿಕೊಂಡನು. ಶಿವಸಿಂಗನೂ ಭಿಲ್ಲರೂ ಆತನ ಪರಾಕ್ರಮಕ್ಕೆ ನಗುತ್ತಿದ್ದರು. ಇಷ್ಟರಲ್ಲಿ ಸಾದತ್‌ಖಾನನ ಸೈನ್ಯವು ರಾಜಪುತ್ರನನ್ನು ಸಮೀಪಿಸಿತು. ಶಿವಸಿಂಗನೂ ಭಿಲ್ಲರೂ ಶತ್ರುಗಳೊಡನೆ ಹೋರಾಹೋರಿಯಿಂದ ಯುದ್ಧಮಾಡತೊಡಗಿದರು. ಶ್ಯಾಮಲಪಂಡಿತನು ಇವರ ಹೊಡೆದಾಟವನ್ನು ನೋಡಿ ಗಡಗಡನೆ ನಡುಗಲಾರಂಭಿಸಿದನು. ಶಿವಸಿಂಗನು ತನ್ನ ಪರಾಕ್ರಮವನ್ನೆಲ್ಲಾ ತೋರಿಸಿ, ಬಹಳ ಹೊತ್ತು ಯುದ್ಧಮಾಡಿ ಸಾದತ್‌ಖಾನನ ಸೈನ್ಯವನ್ನು ಸೋಲಿಸಿ ಓಡಿಸಿದನು.

ಶತ್ರುಸೈನ್ಯವನ್ನು ಸೋಲಿಸಿದ ಬಳಿಕ ಶಿವಸಿಂಗನು ತನ್ನಬಳಿಯಲ್ಲಿ ಶ್ಯಾಮಲಪಂಡಿತನು ಇಲ್ಲದಿದ್ದುದನ್ನು ನೋಡಿ ಶಂಕೆಗೊಂಡು ಭಿಲ್ಲರೊಡನೆ ಅತ್ತಿತ್ತ ಹುಡುಕಿ, ಒಂದು ಮರದ ಹಿಂದೆ ನಡುಗುತ್ತ ನಿಂತಿದ್ದ ಪಂಡಿತನನ್ನು ಕಂಡು ಆತನನ್ನು ಹಿಡಿದುಕೊಂಡು ನಗುತ್ತ—

"ಪಂಡಿತಜೀ, ನೀವು ತುಂಬಾ ಪರಾಕ್ರಮಿಗಳೇ ಸರಿ ! ನಿಮ್ಮ ಪ್ರತಾಪವು ಈಗಲೀಗ ನಿದರ್ಶನಕ್ಕೆ ಬಂದಿತು" ಎಂದನು. ಪಂಡಿತನು ನಾಚಿಕೆಯಿಂದ ತಲೆಬಾಗಿ ನಿಂತನು. ಶಿವಸಿಂಗನು ಪಂಡಿತನನ್ನು ಇನ್ನು ಹೆಚ್ಚು ಹಾಸ್ಯಮಾಡಬಾರದೆಂದು ಭಾವಿಸಿ, ಇನ್ನು ಮುಂದೆ ಭಯವೇನೂ ಇಲ್ಲವೆಂದು ಧೈರ್ಯವನ್ನು ಹೇಳಿ ಕೆಲವರು ಭಿಲ್ಲರನ್ನು ಜೊತೆಗೊಳಿಸಿ ಉದಯಪುರಕ್ಕೆ ಹೊರಡಲು ಹೇಳಿ ತಾನು ತನ್ನ ದಾರಿಯನ್ನು ಹಿಡಿದನು. ಭಿಲ್ಲರು ಶ್ಯಾಮಲಪಂಡಿತನನ್ನು ಉದಯಪುರಕ್ಕೆ ಕರೆದುಕೊಂಡು ಹೋಗಿ ರಾಜಸಿಂಹನಿಗೊಪ್ಪಿಸಿ ಹಿಂತಿರುಗಿದರು. ರಾಜಸಿಂಹನು ಪಂಡಿತನನ್ನು ಆದರಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ, ಕ್ಷೇಮಸಮಾಚಾರವನ್ನು ಕೇಳಿ

ದನು. ಶ್ಯಾಮಲಪಂಡಿತನು ಸಮಾಚಾರವೆಲ್ಲವನ್ನೂ ಆತನಿಗೆ ತಿಳುಹಿ ತನ್ನಲ್ಲಿದ್ದ ವಿಮಲಾದೇವಿಯ ಪತ್ರವನ್ನು ತೆಗೆದುಕೊಟ್ಟನು. ರಾಜಸಿಂಹನು ಆ ಪತ್ರವನ್ನು ಆಮೂಲಾಗ್ರವಾಗಿ ಸಾವಧಾನದಿಂದ ನೋಡಿಕೊಂಡು ಗಂಭೀರಭಾವದಿಂದ—

"ಆಗಲಿ, ಅಷ್ಟು ಸಾಹಸವಿದ್ದರೆ ಪ್ರಯತ್ನಮಾಡಿ ನೋಡಲಿ! ರಾಜಪುತ್ರರು ತಟಸ್ಥವೃತ್ತಿಯಲ್ಲಿರುವುದರಿಂದಲ್ಲವೆ, ತನ್ನ ಅತ್ಯಾಚಾರವನ್ನು ತಡೆಯುವರೇ ರಜಪುತ್ರಸ್ಥಾನದಲ್ಲಿಲ್ಲವೆಂಬ ಅಹಂಕಾರವು ಬಾದಶಹನಿ ಗುಂಟಾಗಿದೆ? ಆಗಲಿ, ಔರಂಗಜೇಬನ ಸಾಹಸವನ್ನು ಈ ಸಲ ಚೆನ್ನಾಗಿ ನೋಡುವೆನು; ರಜಪುತ್ರಸ್ಥಾನವು ಇನ್ನೂ ದುರ್ಬಲವಾಗಿಲ್ಲವೆಂಬುದನ್ನೂ ರಾಜಪುತ್ರರು ಬಳೆತೊಟ್ಟು ಹೆಂಡಿರುಮಕ್ಕಳನ್ನು ಯವನರ ಪಾಲುಮಾಡಿ ನೋಡುವಷ್ಟು ಹೇಡಿಗಳಾಗಿಲ್ಲವೆಂಬುದನ್ನೂ ಔರಂಗಜೇಬನಿಗೆ ಗೊತ್ತು ಮಾಡುವೆನು." ಎಂದು ಹೇಳಿ, ಮತ್ತೆ ಪತ್ರವನ್ನು ಸಮಗ್ರವಾಗಿ ಸಮಾಲೋಚಿಸಿ, ನಕ್ಕು, "ಎಲೆ ಭೀರು, ರಾಜಪುತ್ರಿ! ಈ ರಾಜಸಿಂಹನು ಜೀವಿಸಿರುವ ವರೆಗೂ ನಿನ್ನ ಮಾನ-ಪ್ರಾಣಗಳಿಗೆ ಬಾಧಕವಾಗದು. ಔರಂಗಜೇಬನಿಗೆ ಈ ಬಾರಿ ಚೆನ್ನಾಗಿ ಬುದ್ಧಿಗಲಿಸಿ ಮತ್ತೊಮ್ಮೆ ನಿನ್ನ ಮಾತೆತ್ತದಂತೆ ಮಾಡಿ ಕಳುಹುವೆನು." ಎಂದು ಹೇಳಿಕೊಳ್ಳುತ್ತಿದ್ದನು. ಶ್ಯಾಮಲ ಪಂಡಿತನು ರಾಜಸಿಂಹನನ್ನು ನೋಡಿ—'ಮಹಾರಾಜ! ರಾಜಪುತ್ರಿಯನ್ನು ಉದ್ಧಾರ ಮಾಡುವ ಮನಸ್ಸಿದ್ದರೆ ಸಾವಕಾಶಮಾಡಲಾಗದು. ಜಾಗ್ರತೆಯಾಗಿ ಸೈನ್ಯವನ್ನು ಸಿದ್ಧಗೊಳಿಸುವ ಪ್ರಯತ್ನಮಾಡಬೇಕು" ಎಂದನು. ರಾಜಸಿಂಹನು ಪಂಡಿತನಿಗೆ ಧೈರ್ಯವನ್ನು ಹೇಳಿ, ಯುದ್ಧಸನ್ನಾಹಮಾಡಲು ಗಮನಿಸಿದನು.

---

# ಇಪ್ಪತ್ತೊಂದನೆಯ ಪ್ರಕರಣ.

## (ಮೋಹಪ್ರಭಾವವು)

ಮರುದಿನ ಛೋಟುಸಿಂಗನು ಬರುವನೇನೋ ಎಂದು ಇಂದಿರೆಯು ಮಾರ್ಗಪರೀಕ್ಷೆ ಮಾಡಿಮಾಡಿ ಬೇಸತ್ತಳು. ಆದರೂ ಆತನು ಬರಲೇ ಇಲ್ಲ. ಕಾರಣವೇನೆಂಬುದನ್ನು ತಿಳಿಯಲು ಎಷ್ಟು ಪ್ರಯಾಸಪಟ್ಟರೂ ಫಲವಾಗಲಿಲ್ಲ. ಇಂದಿರೆಗೆ ಛೋಟುಸಿಂಗನ ವಿಷಯವಾಗಿ ಅನುಮಾನವೂ ಭಯವೂ ಉಂಟಾಯಿತು. ನಿದ್ರಾಹಾರಗಳನ್ನು ಬಿಟ್ಟು ಆತನ ಗುಣ ಕೌಶಲ-ಮುಂದಾಲೋಚನೆ ಮೊದಲಾದುವುಗಳನ್ನು ನೆನೆನೆನೆದು ದುಃಖಿಸುತ್ತಿದ್ದಳು.

ಎಷ್ಟು ವಿಧವಾಗಿ ಚಿಂತಿಸಿದರೂ ಇಂದಿರೆಗೆ ಸಮಾಧಾನವಾಗಲಿಲ್ಲ. ಕಡೆಗೆ ಮುಸಾವದನಿಂದಲೇ ತನ್ನ ಸಂಶಯನಿರಸನಮಾಡಿಕೊಳ್ಳಬೇಕೆಂದು ನಿರ್ಧರಿಸಿದಳು. ಮುಸಾವದನು ಮೊದಲೇ ಉದಯಪುರಿಯ ಪ್ರೇರಣೆಯಿಂದ ಮೋಹಪಾಶ ಬದ್ಧನಾಗಿ ಇಂದಿರೆಯ ದಾಸಾನುದಾಸನಾಗಿದ್ದನು. ಇಂದಿರೆಯು ಸಮ್ಮತಿಸದೆ ಅವಳನ್ನು ಬಲವಂತದಿಂದ ಮದುವೆ ಮಾಡಿಕೊಳ್ಳುವವನು ಜ್ಯೋತಿಷಶಾಸ್ತ್ರಪ್ರಕಾರವಾಗಿ ಹತ್ತು ದಿನಗಳೊಳಗಾಗಿ ಸತ್ತುಹೋಗುವನೆಂದು ಅಂದು ಛೋಟು ಸಿಂಗನು ಹೇಳಿದ್ದುದರಿಂದ ಮುಸಾವದನು ಹೇಗಾದರೂ ಇಂದಿರೆಯ ಅನುಗ್ರಹವನ್ನು ಪಡೆದು ಅವಳನ್ನು ಮದುವೆಯಾಗಬೇಕೆಂದು ಅವಳು ಹೇಳಿದ ಕೆಲಸವನ್ನು ಎಷ್ಟು ಕಷ್ಟಪಟ್ಟಾದರೂ ಮಾಡುತ್ತಿದ್ದನು. ಕಾರ್ಯೋಪಾಯಜ್ಞಳಾದ ಇಂದಿರೆಯು, ಮುಸಾವದನ ಮೂರ್ಖತೆಯೇ ತನ್ನ ಕಾರ್ಯಸಾಧನೆಗೆ ಉಪಾಯವೆಂದು ಭಾವಿಸಿ ಸಮಯವನ್ನು ಸಾಧಿಸಿ, ತನ್ನ ಸಂದರ್ಶನಕ್ಕಾಗಿ ಬಂದ ಮುಸಾವದನನ್ನು ನೋಡಿ ನಗುತ್ತ—"ಯಾರು, ಮುಸಾವದ್! ನಿನ್ನ ದಾರಿಯನ್ನೇ ನೋಡುತ್ತಿದ್ದೆನು; ಮುಸಾವದ್........" ಎಂದಳು.

ಮಸಾವದ್:—(ಹಿಗ್ಗಿ ಹಿಗ್ಗಿ) ಹಿ—ಹಿ—ನಾನೇ ಮಸಾವದ್; ನಿಮ್ಮ ಅನುಗ್ರಹಕ್ಕೆ ಪಾತ್ರನಾದ ಮಸಾವದ್ ನಾನೇ. ಆಜ್ಞೆಮಾಡಿರಿ; ಏನು....ಎಂದು ಕೈ ನೀಡಿ ನಿಂತು ಪ್ರಾರ್ಥಿಸಿದನು.

ಇಂದಿರಾ:—ಈಗ ನೀನು ಎಲ್ಲಿಗೆ ಹೋಗುತ್ತಿರುವೆ ?

ಮಸಾ:—ಎಲ್ಲಿಗಾದರೂ ಹೋಗಲು ನನಗೇನು ಕೆಲಸ? ನಿಮ್ಮನ್ನು ನೋಡಲೋಸುಗನೇ ಬಂದೆನು.

ಇಂದಿರಾ:—ಸುಳ್ಳಾಡಬೇಡ, ನಿಜವನ್ನು ಹೇಳು.

ಮಸಾ:—ನಿಮ್ಮಲ್ಲಿಯೂ ಸುಳ್ಳಾಡುವೆನೆ ? ಉದಯಪುರ ಬೇಗಂ ಸಾಹೇಬರವರ ಅನುಗ್ರಹವಿದ್ದರೆ ನನ್ನ ಜೀವನವೆಲ್ಲಾ ನಿಮ್ಮ ಸೇವೆಯೇ ಆಗಿದೆಯಲ್ಲವೆ ?

ಇಂದಿರಾ:—ಮಸಾವದ್, ಈಗ ನನ್ನ ಹೃದಯದಲ್ಲಿ ಒಂದು ಚಿಂತೆ ಹುಟ್ಟಿ ಬಾಧಿಸುತ್ತಿರುವುದು ; ಏನುಮಾಡಲಿ ?

ಮಸಾ:—ಹಾಗಾದರೆ ನನಗೇಕೆ ಹೇಳಲಿಲ್ಲ? ನಾನಿರುವಾಗ ನಿಮಗೆ ಯಾವ ಕೊರತೆಯನ್ನಾಗಲಿ ಬರಗೊಡುವೆನೆ ? ಅಪ್ಪಣೆಯಾದರೆ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ನಿಮಿಷಮಾತ್ರದಲ್ಲಿ ನೆರವೇರಿಸುವೆನು.

ಇಂದಿರಾ:—ಅಂದು ನೀನು ಕರೆದುಕೊಂಡು ಬಂದಿದ್ದ ಛೋಟು ಸಿಂಗನೆಂಬ ಚಿತ್ರಗಾರನು ಮರುದಿನ ಬರುವುದಾಗಿ ಹೇಳಿಹೋದವನು ಬರಲಿಲ್ಲವೇಕೆ ?

ಮಸಾ:—ನಾನಿರುವಾಗ ಅವನಿಂದೇನು ?

ಇಂದಿರಾ:—ನೀನು ಬೇರೆಯಾಗಿ ಭಾವಿಸಬೇಡ. ಅವನೂ ನಾನೂ ಇಬ್ಬರೂ ಒಂದೇ ಗ್ರಾಮದಲ್ಲಿ ಬೆಳೆದವರು. ಚಿಕ್ಕಂದಿನಿಂದಲೂ ಆತನು ನನಗೆ ಪರಿಚಿತನು. ಆದುದರಿಂದ ಆತನಲ್ಲಿ ನಮ್ಮ ತಾಯಿತಂದೆಗಳ ಸಮಾಚಾರವನ್ನು ಕೇಳಿ ತಿಳಿಯಬೇಕೆಂದು ಆಶಿಸಿದ್ದೆನು. ಆದರೇನು, ಆತನು

ಪುನಃ ಬರಲೇ ಇಲ್ಲ. ಈ ಪಟ್ಟಣದಲ್ಲಿ ಧನಿಕನಾದ ಚಿತ್ರಗಾರನೊಬ್ಬನಿರುವನು. ಆತನ ಬಳಿಗೆ ಹೋಗಿ ಕೇಳಿದರೆ ಭೋಟುಸಿಂಗನ ವೃತ್ತಾಂತವು ತಿಳಿಯುವುದು. ನೀನು ಹೇಗಾದರೂ ಮಾಡಿ ಈ ಕಾರ್ಯವನ್ನು ನೆರವೇರಿಸಬೇಕು."

ಮುಸಾ:—ಸರಿ, ಈ ಕಾರ್ಯವು ನನಗೆ ದೊಡ್ಡದೊ ? ಆದರೆ ಭೋಟುಸಿಂಗನ ವೃತ್ತಾಂತವು ನನಗೂ ಆಶ್ಚರ್ಯವೇ ಆಗಿರುವುದು. ಅಂದು ಬಾದಶಹರವರು ಬರುತ್ತಿರುವರೆಂದೂ ಅವರು ಹೋಗುವವರೆಗೆ ರಹಸ್ಯವಾಗಿರೆಂದೂ ಹೇಳಿ ಒಂದು ಕಿರುಮನೆಯಲ್ಲಿ ಕೂಡಿ, ನಾನು ಆವುದೋ ಕೆಲಸದ ಮೇಲೆ ಹೊರಟುಹೋದೆನು. ಮತ್ತೆ ಮರೆತು ಹೋಯಿತು. ಬಹಳ ಹೊತ್ತು ಕಳೆದ ಬಳಿಕ ಜ್ಞಾಪಕವು ಬಂದು ಹೋಗಿ ನೋಡಲು ಆತನು ಅಲ್ಲಿರಲಿಲ್ಲ. ಒಂದುವೇಳೆ ತನಗಾವ ಆಪತ್ತುಗಳುಂಟಾಗುವುವೋ ಎಂಬ ಭಯದಿಂದ ಓಡಿಹೋಗಿರಬಹುದು! ಹೇಗಾದರೂ ಈಗಲೇ ನಾನು ಹೋಗಿ ವರ್ತಮಾನವನ್ನು ತಿಳಿದು ಬರುವೆನು." ಎಂದು ಹೇಳಿ, ಮಸಾವದನು ಭೋಟುಸಿಂಗನನ್ನು ಹುಡುಕಲು ಹೊರಟನು.

ಪಾಪ, ಆತನು ಡಿಲ್ಲೀನಗರದಲ್ಲೆಲ್ಲಾ ಹುಡುಕಿ ಹುಡುಕಿ ಪ್ರಯಾಸಪಟ್ಟರೂ ಫಲವಾಗಲಿಲ್ಲ. ಕಡೆಗೆ ಚಿತ್ರಗಾರನ ಮನೆಗೆ ಹೋಗಿ ಆತನ ವೃತ್ತಾಂತವನ್ನು ಪ್ರಸ್ತಾಪಿಸಲು ; ಚಿತ್ರಗಾರನು ದುಃಖದಿಂದ "ತಾನು ಬೇಡವೆಂದು ಹೇಳಿದರೂ ಕೇಳದೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ನನ್ನ ವ್ಯಾಪಾರವನ್ನು ಕೂಡ ಮುಳುಗುವಂತೆಮಾಡಿ, ಜನಾನಾದೊಳಕ್ಕೆ ಹೋಗಿ ಬರುವೆನೆಂದು ಹೋದವನು ಈ ವರೆಗೂ ಬರಲಿಲ್ಲವೆಂದು ಹೇಳಿದನು.

ವರ್ತಕನು ಕೊಟ್ಟ ಉತ್ತರದಿಂದ ಮಸಾವದನು ನಿರಾಶನಾಗಿ ಇಂದಿರೆಗೆ ಈ ಸಮಾಚಾರವನ್ನು ಹೇಗೆ ಹೇಳಬೇಕೆಂದು ಬಹಳ ಹೊತ್ತು ಯೋಚಿಸಿ, ಕಡೆಗೆ ಭೋಟುಸಿಂಗನ ವೃತ್ತಾಂತವೇ ತನಗೆ ತಿಳಿಯಲಿಲ್ಲ ಎಂದು

ೇಳಿದನು. ಇಂದಿರೆಯು ದೈವಸಂಕಲ್ಪವೆಂತಿರುವುದೋ ಎಂದು ಚಿಂತಿಸ ೊಡಗಿದಳು.

---

## ಇಪ್ಪತ್ತೆರಡನೆಯ ಪ್ರಕರಣ.

(ಔರಂಗಜೇಬನ ಕಾಯಿಲೆ.)

ಔರಂಗಜೇಬನ ತಂಗಿಯಾದ ರೋಷನಾರಳಿಗೂ ಉದಯಪುರಿಗೂ ನದಿನಕ್ಕೂ ದ್ವೇಷವಧಿಕವಾಗುತ್ತಿದ್ದಿತು. ಇವರಿಬ್ಬರ ವಿವಾದಗಳನ್ನು ಚಾರಿಸಲು ಬಾದಶಹನೊಬ್ಬನಲ್ಲದೆ ಮತ್ತಾರೂ ಇರಲಿಲ್ಲ. ಒಬ್ಬರ ಾಹಲನ್ನೊಬ್ಬರು ಪ್ರವೇಶಿಸಲೇ ಕೂಡದು. ಸಮಯವಾದಾಗ ದ್ವೇಷ ನ್ನು ತೀರಿಸಲು ಕ್ರೂರ ಸರ್ಪಗಳಂತೆ ಕಾದಿದ್ದರು.

ಹೀಗಿರಲು ಸ್ವಲ್ಪ ಕಾಲದೊಳಗಾಗಿ ಬಾದಶಹನು ಜ್ವರದಲ್ಲಿ ಮಲ ದನು. ಅಂದಿನಿಂದಲೂ ಆತನು ದರ್ಬಾರಿಗೆ ಹೋಗದೆ ರಾಜ್ಯಾಂಗ ಷಯವನ್ನೆಲ್ಲಾ ಮಂತ್ರಿಗಳಿಗೊಪ್ಪಿಸಿ ತಾನು ಔಷಧ ಸೇವನೆಯಲ್ಲಿದ್ದನು. ರಬರುತ್ತ ರೋಗವಧಿಕವಾಗುತ್ತ ಬಂದಿತು. ಉದಯಪುರಿಯು ಪ್ರಾಣ ್ರಿಯನ ಆರೋಗ್ಯವನ್ನು ಕೇಳಿ ಚಿಂತಾಕ್ರಾಂತಳಾಗಿ ನಿದ್ರಾಹಾರಗಳನ್ನು ಟ್ಟು ಪರಿತಪಿಸುತ್ತಿದ್ದಳು.

ರೋಷನಾರೆಯು ತನ್ನ ಕೋರಿಕೆಯನ್ನು ಈಡೇರಿಸಲು ಇದೇ ಮಯವೆಂದು ಯೋಚಿಸಿ ಬಾದಶಹನ ಮಂದಿರದ ಸುತ್ತಲೂ ತನ್ನವ ್ನು ಕಾವಲಿರಿಸಿದಳು. ವೈದ್ಯನು-ತಾನು, ಇಬ್ಬರ ಹೊರತು ಮತ್ತಾರೂ ಾದಶಹನನ್ನು ನೋಡಕೂಡದೆಂದು ಅಡ್ಡಿ ಮಾಡಿದಳು. ಮಂತ್ರಿಗಳೂ ಾದಾರರೂ ಸಾಮಂತರೂ ಬಾದಶಹನ ದರ್ಶನೋತ್ಸುಕರಾಗಿ ಹೊರಟು

ಬಂದು ನಿರಾಶರಾಗಿ ಹಿಂತಿರುಗುತ್ತಿದ್ದರು. ಪಾಪ! ಪಟ್ಟ ಮಹಿಷಿಯಾದ ಉದಯಪುರಿಗೆ ಕೂಡ ಆಸ್ಪದವಿಲ್ಲದೆ ಹೋಯಿತು. ಪತಿಯ ಅವಸ್ಥೆ ಹೇಗಿರುವುದೋ ಎಂದು ಯೋಚಿಸುತ್ತ ಅವಳು ದಿನದಿನಕ್ಕೂ ಕ್ಷೀಣವಾಗುತ್ತ ಬಂದಳು. ರೋಗಪೀಡಿತನಾದ ಬಾದಶಹನನ್ನು ನೋಡಬೇಕೆಂದು ಪಟ್ಟ ಪ್ರಯಾಸವು ಸಫಲವಾಗಲಿಲ್ಲ. ಬಾದಶಹನ ರೋಗವು ವೈದ್ಯರ ಚಿಕಿತ್ಸೆಗಳಿಗೂ ಔಷಧಕ್ಕೂ ಜಗ್ಗದೆ ಮೀರುತ್ತಿದ್ದಿತು. ಆತನ ದೇಹಸ್ಥಿತಿಯು ರೋಷನಾರೆಯೊಬ್ಬಳಿಗೆ ಹೊರತು ಮತ್ತಾರಿಗೂ ತಿಳಿಯುತ್ತಿರಲಿಲ್ಲ. ಇವಳು ಒಂದೊಂದು ಬಾರಿ ಒಂದೊಂದು ಬಗೆಯಾಗಿ ಹೇಳುತ್ತ ಸಂದೇಹವನ್ನು ಹೆಚ್ಚಿಸುತ್ತಿದ್ದಳು. ಉದಯಪುರಿಯ ಮನಃಸ್ಥಿತಿಯು ಹೇಳುವಂತೆಯೇ ಇರಲಿಲ್ಲ.

ಸ್ವಲ್ಪ ದಿನಗಳಲ್ಲಿಯೇ ಬಾದಶಹನು ಬದುಕುವುದು ದುರ್ಲಭವೆಂದು ತೋರಿತು. ರೋಷನಾರೆಗೆ ಅಣ್ಣನು ಸಾಯುವನೆಂದು ದುಃಖವಾಗುತ್ತಿದ್ದರೂ ರಾಜ್ಯಲೋಭವು ಇವಳನ್ನಾಕ್ರಮಿಸಿದುದರಿಂದ ರಾಜ್ಯವನ್ನು ತನ್ನ ಸ್ವಾಧೀನ ಮಾಡಿಕೊಳ್ಳಬೇಕೆಂಬ ದುರಾಶೆಯುಂಟಾಗಿ ಅದಕ್ಕಿದೇ ಕಾಲವೆಂದೆಣಿಸಿ ಸೇವಕರನ್ನೆಲ್ಲ ತನ್ನ ವಶಮಾಡಿಕೊಂಡಳು ಔರಂಗಜೇಬನು ಸತ್ತ ಮೇಲೆ ರಾಜ್ಯವು ತನಗೆ ಸುಸಾಧ್ಯವಾಗಬೇಕೆಂದು ಸಾಮಂತರಾಜರೆಲ್ಲರನ್ನೂ ತನ್ನ ವಶದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದಳು. ಜಯಪುರದ ಜಯಸಿಂಗನು ಈ ಕಾರ್ಯದಲ್ಲಿ ತನಗೆ ಸಹಾಯವಾದರೆ ತನ್ನ ಕೋರಿಕೆಯು ಸುಲಭವಾಗಿ ನೆರವೇರುವುದೆಂದು ತಿಳಿದು ಆತನಿಗೆ ಕಾಗದವನ್ನು ಬರೆದಳು. ಆದರೆ ಜಯಸಿಂಗನು ಬಾದಶಹನ ಮರಣವಾರ್ತೆಯನ್ನು ನಂಬದೆ ಅದಕ್ಕಾವ ಪ್ರತ್ಯುತ್ತರವನ್ನೂ ಕೊಡದೆ ಸುಮ್ಮನಿದ್ದನು. ಪಾಪ! ಬಾದಶಹನು ಇಹಲೋಕ ವ್ಯಾಪಾರ ಜ್ಞಾನವಿಲ್ಲದೆ ತನ್ನ ಮಂಚದ ಮೇಲೆ ಮಲಗಿರಲು ಇವಳು ಆತನ ಮುದ್ರೆಯುಂಗುರವನ್ನು ಅಪಹರಿಸಿ ಔರಂಗಜೇಬನೇ ಬರೆದಂತೆ ರಾಜಪುತ್ರರೆಲ್ಲರಿಗೂ ಹೀಗೆ ಪತ್ರಗಳನ್ನು ಬರೆದಳು.—

“ ವಿಶ್ವಾಸನೀಯರಾದ ರಾಜಪುತ್ರರೇ ! ಸರದಾರರೇ !!

ನಾನು ಇಹಲೋಕವನ್ನು ಬಿಡುತ್ತಿರುವೆನು. ನನಗಾಗಿ ವಿಚಾರಪಡಬೇಡಿರಿ! ಶರೀರವು ಕ್ಷಣಭಂಗುರುವೇ ಹೊರತು ಸ್ಥಿರವಾದುದಲ್ಲ. ಮುಂದೆ ನನ್ನ ದೊಡ್ಡಮಗನಾದ ಮುಅಜಮನು ಬಹು ಕ್ರೂರನಾದುದರಿಂದ ಅವನಿಗೆ ರಾಜ್ಯವನ್ನು ಕೊಡದೆ ನನ್ನ ಎರಡನೆಯ ಮಗನಾದ ಅಜೀಮನಿಗೆ ಪಟ್ಟವನ್ನು ಕಟ್ಟಿ ನನ್ನನ್ನು ಸೇವಿಸಿದಂತೆಯೇ ಆತನನ್ನೂ ಸೇವಿಸುತ್ತ ಬರಬೇಕು. ಇದಕ್ಕೆ ನೀವು ಸ್ವಲ್ಪವೂ ಸಂದೇಹಪಡುವುದಿಲ್ಲವೆಂದು ನಂಬಿರುವೆನು.

ಆಲಂಘೀರ್ ಬಾದಶಹ.”

ಹೀಗೆ ವಿಲಿಖಿತವಾದ ಪತ್ರಗಳಿಗೆ ಔರಂಗಜೇಬನ ಮುದ್ರೆಯುಂಗರದ ಮುದ್ರೆಯನ್ನೊತ್ತಿ ಕಳುಹಿದಳು. ಮುಅಜಮನು ವಯಸ್ಕನಾದುದರಿಂದ ಆತನಿಗೆ ರಾಜ್ಯವನ್ನು ಕೊಟ್ಟರೆ ತನ್ನ ಅಪ್ಪಣೆಯಂತೆ ನಡೆಯುವದಿಲ್ಲವೆಂದು ವಯಸ್ಸಿನಲ್ಲಿ ಚಿಕ್ಕವನೂ ರಾಜ್ಯಭಾರವೆಂದರೇನೆಂಬುದನ್ನರಿಯದವನೂ ಆದ ಅಜೀಮನಿಗೆ ಪಟ್ಟವನ್ನು ಕಟ್ಟಿದರೆ, ಆತನು ವಯಸ್ಕನಾಗುವವರೆಗೆ ತಾನೇ ರಾಜ್ಯವನ್ನಾಳಬಹುದೆಂದೂ ಯೋಚಿಸಿ, ರೋಷನಾರೆಯು ಈ ರೀತಿಯಾಗಿ ಬರೆದಳು.

ಸಾಮಂತರಾಜರೆಲ್ಲರೂ ಈ ಕಾಗದದಿಂದ ಅನುಮಾನಪಟ್ಟು ಆವ ಬಗೆಯಾಗಿಯೂ ಉತ್ತರವನ್ನೇ ಕೊಡದೆ ಸುಮ್ಮನಿದ್ದರು. ಸಾಮಂತರಾಜರಲ್ಲಿ ಕೆಲವರು ನಿಜಾಂಶವನ್ನರಿಯಲು ಡಿಲ್ಲಿಗೆ ಬಂದು ಅರಮನೆಯ ದ್ವಾರಪಾಲಕರಿಗೆ ಸಾವಿರಾರು ರೂಪಾಯಿಗಳ ಲಂಚವನ್ನು ಕೊಟ್ಟರೂ ನಿಜಾಂಶವು ತಿಳಿಯಲಿಲ್ಲ.

ಜೀವಸಹಿತನಾಗಿರುವಾಗ ಬಾದಶಹನ ದರ್ಶನಲಾಭವು ಒಂದು ಸಲವಾದರೂ ತನಗೆ ಲಭಿಸುವುದೋ ಇಲ್ಲವೋ ಎಂಬವಾಗಿ ಉದಯಪುರಿಯು ವಿಷಣ್ಣಹೃದಯಳಾಗಿ ಅನವರತವೂ ಪರಿತಪಿಸುತ್ತಿದ್ದಳು. ಇಂದಿರೆಯ ಮನವೊಲಿದಂತೆ ಮಾಡಿಕೊಂಡು ಅವಳಿಂದಲಾದರೂ ತನ್ನ ಅಭೀಷ್ಟವನ್ನು

ಹೊಂದಬೇಕೆಂದು ಭಾವಿಸಿ, ಅವಳನ್ನು ಆದರದಿಂದ ಬಳಿಗೆ ಕರೆದು— "ಇಂದಿರಾ! ಕಾರ್ಯೋಪಾಯಗಳನ್ನು ತಿಳಿದು ಸಾಧಿಸುವುದರಲ್ಲಿ ನಿನಗೆ ಸಮಾನರಾರೂ ಇಲ್ಲವೆಂದು ಸ್ವಯಂ ಬಾದಶಹರೇ ನನ್ನೊಡನೆ ಎಷ್ಟೋ ಸಲ ಹೇಳಿರುವರು. ಶತ್ರು ಸಮೂಹದಿಂದ ಚಂದ್ರಾವತಿಯನ್ನು ಎಷ್ಟೋ ಚಮತ್ಕಾರದಿಂದ ತಪ್ಪಿಸಿ ನಿನ್ನ ರಾಜಭಕ್ತಿಯನ್ನು ಲೋಕದಲ್ಲೆಲ್ಲ ಪ್ರಕಟಿಸಿದೆಯಂತೆ. ಆದುದರಿಂದ ಅಭಿಮಾನವತಿಯಾದ ನೀನು ನನಗೂ ಸಹಾಯ ಮಾಡಬೇಕೆಂದು ಕೋರುವೆನು. ಬಾದಶಹರು ರೋಗದಲ್ಲಿರುವುದು ನಿನಗೂ ತಿಳಿದೇ ಇರುವುದಷ್ಟೆ! ಪ್ರಾಣದಿಂದಿರುವಾಗ ಒಂದು ಸಲವಾದರೂ ಅವರನ್ನು ನೋಡಬೇಕೆಂದರೆ ರೋಷನಾರಳು ದೊಡ್ಡ ಹುಲಿಯಂತೆ ಅಡ್ಡಿಯಾಗಿರುವಳು. ನೀನು ಹೇಗಾದರೂ ಮಾಡಿ ನನ್ನನ್ನು ಅವರ ಸಮೀಪಕ್ಕೆ ಕರೆದುಕೊಂಡು ಹೋಗಬೇಕು. ನನಗೆ ಇದೊಂದು ಸಹಾಯ ಮಾಡಿದೆಯಾದರೆ ನಿನ್ನ ನಿರ್ಬಂಧವನ್ನು ತಪ್ಪಿಸಿ, ನಿನಗೆ ಬೇಕಾದಲ್ಲಿಗೆ ಹೋಗಲು ಅನುಕೂಲಪಡಿಸಿಕೊಡುವೆನು." ಎಂದು ಕಣ್ಣೀರು ಸುರಿಸಿದಳು.

ಸದಯಹೃದಯಳಾದ ಇಂದಿರೆಗೆ ಉದಯಪುರಿಯ ಈ ದೈನ್ಯಾವಸ್ಥೆಯು ತುಂಬ ಕನಿಕರವನ್ನುಂಟು ಮಾಡಿತು. ಕಾರ್ಯವನ್ನು ಸಾಧಿಸುವೆನೆಂದು ಅಭಯವಿತ್ತು ಉದಯಪುರಿಯಿಂದ ಸ್ವಲ್ಪ ದ್ರವ್ಯವನ್ನು ತೆಗೆದುಕೊಂಡು ಹೊರಟು ರೋಷನಾರೆಯ ಸೇವಕರನ್ನೆಲ್ಲ ಆ ದಿನವೇ ಧನಲೋಭದಿಂದ ವಶಪಡಿಸಿಕೊಂಡಳು. ಮರುದಿನದಲ್ಲಿ ಅವರಿಗೆ ಮತ್ತೂ ಲಂಚವನ್ನು ಕೊಟ್ಟು—"ಈ ದಿನ ರೋಷನಾರಾ ಬೇಗಂಯವರು ನಿದ್ರೆಹೋದ ಮೇಲೆ ಉದಯಪುರಿ-ಬೇಗಂಯವರಿಗೆ ಬಾದಶಹರ ದರ್ಶನವನ್ನು ಮಾಡಿಸಬೇಕು." ಎಂದು ಹೇಳಿದಳು. ದನಲೋಭದಿಂದವರು ಆಗಲೆಂದೊಪ್ಪಿಕೊಂಡರು. ಈ ಸಮಾಚಾರವನ್ನು ಉದಯಪುರಿಗೆ ತಿಳುಹಿ, ಆ ರಾತ್ರಿ ಅವಳನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಬಾದಶಹನ ಮಹಲಿನ ದ್ವಾರಪಾಲಕರಿಗೆಲ್ಲ ಮುತ್ತಿನ ಹಾರಗಳನ್ನು ಬಹುಮಾನಮಾಡಲು ಅವರೆಲ್ಲರೂ ಅತ್ಯಂತ ಸಂತೋ

ಷದಿಂದ ಇಬ್ಬರನ್ನೂ ಕರೆದುಕೊಂಡು ಹೋಗಿ ಬಾದಶಹನು ಮಲಗಿದ್ದ ಸ್ಥಳ ದಲ್ಲಿ ಬಿಟ್ಟಳು. ಉದಯಪುರಿಯು ಔರಂಗಜೇಬನ ಒಳಿಗೆ ಹೋಗಿ ಆತನ ಶರೀರವನ್ನು ಮುಟ್ಟಿನೋಡಿದಳು. ಆಹಾರವಿಲ್ಲದಿದ್ದುದರಿಂದ ಆತನ ಶರೀ ರವು ಶುಷ್ಕವಾಗಿ ನರಗಳು ಕಾಣುತ್ತಿದ್ದುವು. ಅವಳು ಸ್ವಲ್ಪಹೊತ್ತು ಅವನ ಪಾದಗಳ ಸಮೀಪದಲ್ಲಿ ಕುಳಿತು ತನ್ನ ವಸ್ತ್ರದಿಂದ ಪಾದಗಳನ್ನು ಮೆತ್ತಗೆ ಒತ್ತುತ್ತಿಲಿರಲು ಸ್ವಲ್ಪ ಹೊತ್ತಿಗೆ ಬಾದಶಹನು ಕಣ್ತೆರದು ಉದ ಯಪುರಿಯನ್ನು ನೋಡಿ ಕಣ್ಣೀರನ್ನು ಸುರಿಸುತ್ತ "ಈವರೆಗೆ ಏಕೆ ಬರ ಲಿಲ್ಲ ?" ಎಂದು ಸಂಜ್ಞೆಯಿಂದ ಕೇಳಿದನು. ಅದಕ್ಕೆ ಉದಯಪುರಿಯು "ಮಹಾರಾಜ! ನಾನೇನು ಮಾಡಲಿ? ರೋಷನಾರೆಯು ನಿಮ್ಮ ದರ್ಶನ ಕ್ಕೆ ಅಡ್ಡಿ ಮಾಡಿರುವಳು." ಎಂದು ದೈನ್ಯದಿಂದ ಹೇಳುತ್ತಿರುವಷ್ಟರ ಲ್ಲಿಯೇ ಪಕ್ಕದ ಕಿರುಮನೆಯಲ್ಲಿಯೇ ಮಲಗಿದ್ದ ರೋಷನಾರೆಗೆ ಅಕಸ್ಮಾತ್ ಉದಯಪುರಿಯ ಕಂಠಸ್ವರವು ಕೇಳಿ ಬರಲು, ಅಗಾಧ ಕಾರ್ಯಚಿಂತೆಯ ಲ್ಲಿದ್ದ ರೋಷನಾರೆಯು ಕೆಲಸ ಕೆಟ್ಟಿತೆಂದು ಕೆರಳಿ, ಥಟ್ಟನೆದ್ದುಬಂದು ಉದ ಯಪುರಿಯ ಸೆರಗನ್ನು ಹಿಡಿದೆಳೆದು ಮಂಚದಿಂದ ಕೆಳಕ್ಕೆ ಕೆಡಹಿದಳು. ತತ್ಕ್ಷಣವೇ ಭೀತಿಚಿತ್ತಳಾಗಿದ್ದ ಉದಯಪುರಿಯು ರೋಷದಿಂದ ತಾನೂ ರೋಷನಾರೆಯ ಸೆರಗನ್ನು ಹಿಡಿದು ಸ್ವಲ್ಪದೂರ ಎಳದುಕೊಂಡುಹೋದಳು. ಸ್ವಲ್ಪಹೊತ್ತಿನೊಳಗೆ ಇಬ್ಬರೂ ದುರಾಗ್ರಹಪರವಶರಾಗಿ ಮುಷ್ಟಿಯುದ್ಧಕ್ಕೂ ಮೊದಲುಮಾಡಿದರು. ಈ ವಿಷಯವನ್ನು ತಿಳಿದು ರೋಷನಾರೆಯು ಏನು ಮಾಡುವಳೋ ಎಂಬ ಭೀತಿಯಿಂದ ಸೇವಕರೆಲ್ಲರೂ ಅತ್ತಿತ್ತ ಓಡಿಹೋ ದರು. ಸುಕುಮಾರಿಯಾದ ಉದಯಪುರಿಯು ಅವಳ ಮುಷ್ಟಿಪ್ರಹಾರಗಳ ನ್ನು ತಡೆಯಲಾರದೆ ಸ್ವಲ್ಪ ಹೊತ್ತಿನ ಒಳಗಾಗಿ ಕೆಳಗೆ ಬಿದ್ದು ಮೂರ್ಛಿತೆ ಯಾದಳು. ಬಿದ್ದವಳನ್ನು ಆಗಲೇ ರೋಷನಾರೆಯು ಎಳೆದು ದ್ವಾರ ದಿಂದಾಚೆ ಹಾಕಿದಳು. ಪಾಪ! ಸ್ಮೃತಿಯಿಲ್ಲದೆ ಬಿದ್ದಿದ್ದ ಔರಂಗಜೇಬ ನಿಗೆ ಇದಾವುದೂ ತಿಳಿಯುವಂತಿರಲಿಲ್ಲ. ಇದೆಲ್ಲವನ್ನೂ ನೋಡಿದ ಇಂದಿ

ರೆಯು ಕನಿಕರಪಟ್ಟು ತತ್‌ಕ್ಷಣವೇ ಬಂದು ಉದಯಪುರಿಯನ್ನು ಉಪಚರಿಸಿ ಮೆಲ್ಲನೆ ಅಂತಃಪುರಕ್ಕೆ ಕರೆದೊಯ್ದಳು.

ಧನಲೋಭದಿಂದ ಉದಯಪುರಿಯನ್ನು ಒಳಗೆ ಬರಲು ಅವಕಾಶ ಕೊಟ್ಟ ಸೇವಕರು ರೋಷನಾರೆಯ ಘಾತುಕತನವನ್ನು ತಿಳಿದುದ್ದರಿಂದ ತಮಗಾವದಂಡನೆಯಾಗುವುದೋ ಎಂದು ನಡುಗುತ್ತಿದ್ದರು. ಆದರೆ, ಆವ ಕಾರಣದಿಂದಲೋ ರೋಷನಾರೆಯು ಆವ ಮಾತನ್ನೂ ಆಡದೆ ತಲೆ ಬಗ್ಗಿಸಿ ಕೊಂಡು ಪುನಃ ತನ್ನ ಕಿರುಮನೆಗೆ ಹೋಗಿ ಮಲಗಿಕೊಂಡಳು.

ಅಂದಿನಿಂದಲೂ ದೈವಾನುಗ್ರಹದಿಂದ ಬಾದಶಹನಿಗೆ ಗುಣವಾಗುತ್ತ ಬಂದಿತು. ಕ್ರಮಕ್ರಮವಾಗಿ ಆಹಾರ ನಿದ್ರೆಗಳಲ್ಲಿ ಅಭಿರುಚಿಯುಂಟಾಗಿ ಎರಡು ವಾರಗಳೊಳಗಾಗಿ ಅವನು ಹಾಸಿಗೆಯಿಂದೆದ್ದು ಅತ್ತಿತ್ತ ತಿರುಗಾಡ ಲಾರಂಭಿಸಿದನು. ಈ ಶುಭ ಸಮಾಚಾರವನ್ನು ತಿಳಿದ ಉದಯಪುರಿಯು ಅತ್ಯಾನಂದದಿಂದ ರೋಷನಾರೆಯು ತನಗೆ ಮಾಡಿದ ತೊಂದರೆಗಳಿಗಾಗಿ ಮುಯ್ಯನ್ನು ತೀರಿಸಿಕೊಳ್ಳುವೆನೆಂದು ಹಿಗ್ಗುತ್ತಿದ್ದಳು; ಮತ್ತು ಅಂದು ರಾತ್ರಿ ತನಗೆ ಮಾಡಿದ ಸಹಾಯಕ್ಕಾಗಿ ಇಂದಿರೆಯ ವಿಷಯದಲ್ಲಿ ಅತ್ಯಂತ ವಿಶ್ವಾಸವಿರಿಸಿ ಅಂದಿನಿಂದ ಅವಳನ್ನು ವಿಶೇಷವಾಗಿ ಗೌರವಿಸುತ್ತಿದ್ದಳು. ಕೆಲವು ದಿನಗಳಲ್ಲಿಯೇ ಇಂದಿರೆಯನ್ನು ಸಮೀಪಕ್ಕೆ ಕರೆದು "ಇಂದಿರಾ! ರಾಜಪುತ್ರಿಯಾದ ನೀನು ಸುಕುಮಾರಿಯು; ಕಷ್ಟಗಳನ್ನು ಸಹಿಸಲಾರೆಯಾ ದುದರಿಂದ ಇನ್ನು ಮುಂದೆ ನೀನಾವ ಕೆಲಸಗಳನ್ನೂ ಮಾಡದೆ ನನ್ನಲ್ಲಿ ಪೂರ್ಣ ವಿಶ್ವಾಸವಿರಿಸಿ, ನನ್ನ ಬಳಿಯಲ್ಲಿಯೇ ಇರು. ಇನ್ನು ನಿನಗೆ ಯಾವ ಲೋಪವನ್ನೂ ಉಂಟುಮಾಡುವುದಿಲ್ಲ. ಬಾದಶಹನಿಂದ ಇನ್ನು ನಿನಗಾವ ಭಯವೂ ಇಲ್ಲ" ಎಂದು ಅನೇಕ ವಿಧವಾಗಿ ಹೇಳಿ ತನಗಿರುವ ವಿಶ್ವಾಸ ವನ್ನು ಪ್ರಕಟಪಡಿಸಿದಳು.

ಔರಂಗಜೇಬನಿಗೆ ರೋಗವು ಸಂಪೂರ್ಣವಾಗಿ ಗುಣವಾಗಿ ಎಂದಿನಂತೆ ರಾಜ್ಯಕಾರ್ಯಗಳನ್ನೂ ಸ್ವತಃ ವಿಚಾರಿಸುವಷ್ಟರ ಶಕ್ತಿಯುಂಟಾಯಿತು.

ಕ್ರಮವಾಗಿ ಎಲ್ಲವನ್ನೂ ವಿಚಾರಿಸುತ್ತ ಬಂದನು. ರೋಷನಾರೆಯ ದುರಾಲೋಚನೆಗಳನ್ನೂ ಅವಳು ರಾಜಪುತ್ರರಿಗೆ ಬರೆದಿದ್ದ ಕಾಗದಗಳನ್ನೂ ಇನ್ನೂ ಅದಕ್ಕೆ ಸಂಬಂಧಪಟ್ಟ ಕುಹಕಗಳನ್ನೂ ಉದಯಪುರಿ ಮೊದಲಾದವರಿಂದ ತಿಳಿದು ಅವಳ ಮೇಲೆ ಮಹದಾಗ್ರಹವನ್ನು ಹೊಂದಿದನು. ಆದರೆ ತನ್ನ ತಂಗಿಯಾಗಿದ್ದುದರಿಂದಲೂ ಮೊದಲು ಅವಳಿಂದ ತನಗೆ ತುಂಬ ಸಹಾಯವಾಗಿದ್ದುದರಿಂದಲೂ ತನ್ನ ಕೋಪವನ್ನು ಅವಳ ಮುಂದೆ ತೋರ್ಪಡಿಸಲಿಲ್ಲವಾದರೂ ಅಂದಿನಿಂದ ಅವಳ ಮಹಲಿಗೆ ಹೋಗಿ ಅವಳನ್ನು ನೋಡಿ ಸಂಭಾಷಿಸುವುದನ್ನು ಮಾತ್ರ ಬಿಟ್ಟನು. ಈ ವೃತ್ತಾಂತವೆಲ್ಲವನ್ನೂ ಗೂಢಚಾರರಿಂದ ತಿಳಿದು ರೋಷನಾರೆಯು ಅಗಾಧವಾದ ಚಿಂತೆಯಲ್ಲಿ ಮುಳುಗುವಂತಾದಳು. ತನ್ನ ಪ್ರಯತ್ನಗಳೆಲ್ಲವೂ ಭಂಗವಾದುದರಿಂದ ಅವಳಿಗೆ ದುಃಖವೂ ಆಗ್ರಹವೂ ಒಟ್ಟಾಗಿ ಉಂಟಾಯಿತು. ಉದಯಪುರಿಯೂ ಅವಳ ಮೇಲೆ ಕತ್ತಿಯನ್ನು ಕಟ್ಟಿ, ಅವಳ ಕ್ರೂರ ಕೃತ್ಯಗಳಿಗೆ ಭಯಪಡುತ್ತಿದ್ದರೂ ಕಾರ್ಯೋಪಾಯ ಚತುರೆಯಾದ ಇಂದಿರೆಯು ತನಗೆ ಸಹಾಯಕಳಾಗಿರುವಳೆಂದು ಧೈರ್ಯಹೊಂದಿ ರೋಷನಾರೆಗೆ ಪ್ರತೀಕಾರ ಮಾಡುವ ಯೋಚನೆಯನ್ನು ಮಾಡುತ್ತಿದ್ದಳು.

---

## ಇಪ್ಪತ್ತಮೂರನೆಯ ಪ್ರಕರಣ.

(ಛೋಟುಸಿಂಗ್)

ಹಿಂದೆ ಛೋಟುಸಿಂಗನನ್ನು ಮಸಾದವನು ಜನಾನಾ ಮಹಲಿನ ಒಂದು ಕಿರುಮನೆಯಲ್ಲಿ ಕೂಡಿದ್ದನೆಂದೂ ಆ ಮೇಲೆ ಅವನು ಬಂದು ನೋಡಲು ಇರಲಿಲ್ಲವೆಂದೂ ಹೇಳಿದ್ದೆವಷ್ಟೆ? ಛೋಟುಸಿಂಗನು ಉದಯಪುರಿಯ ಜನಾನೆಯನ್ನು ಪ್ರವೇಶಿಸುತ್ತಿರುವಾಗ ರೋಷನಾರೆಯ ಮುಖ್ಯ ಸೇವಕನಾದ ಪರುಕ್‌ಷೈರನು ತನ್ನ ಕೈಯಲ್ಲಿ ವೀಣೆಯನ್ನು ಹಿಡಿದುಕೊಂಡು ಬಂದು ಆತನ ಬಳಿ

ಯನ್ನು ಸೇರಿ ಆತನು ಬರೆದ ಚಿತ್ರಪ್ರತಿಮೆಗಳನ್ನು ನೋಡಿ ಸಂತೋಷಪಟ್ಟು ತನ್ನಲ್ಲಿದ್ದ ವೀಣೆಯನ್ನು ಆತನಿಂದ ಸರಿಮಾಡಿಸಿ ಈಗಲೇ ಬರುವೆನೆಂದು ಹೋದನಲ್ಲವೆ? ಫರುಕ್ಷೈರನು ವೀಣೆಯನ್ನು ತೆಗೆದುಕೊಂಡು ಜನಾನೆಯನ್ನು ಪ್ರವೇಶಿಸಿದಕೂಡಲೇ ರೋಷನಾರೆಯು ನೋಡಿ ಆಶ್ಚರ್ಯದಿಂದ "ಇಷ್ಟು ಬೇಗ ಸರಿಮಾಡಿಸಿದೆಯಾ? ಇಷ್ಟು ಜಾಗ್ರತೆಯಾಗಿ ಈ ವೀಣೆಯನ್ನು ಇಷ್ಟು ಚೆನ್ನಾಗಿ ಸರಿಮಾಡಿರುವರಾರು?" ಎಂದು ಕೇಳಲು, ಅದಕ್ಕೆ ಫರುಕ್ಷೈರನು, "ಬೇಗಮ್ ಸಾಹೇಬಾ! ಭೋಟುಸಿಂಗನೆಂಬ ಚಿತ್ರಕಾರನೊಬ್ಬನು ಉದಯಪುರಿ ಬೇಗಮರ ಮಹಲಿಗೆ ಹೋಗುತ್ತಿದ್ದನು; ಆತನ ಸಮಾಚಾರವನ್ನು ವಿಚಾರಮಾಡಿದರೆ ಅವನೊಬ್ಬ ಅವತಾರಪುರುಷನಿರಬಹುದೆಂದು ತೋರುವುದು. ಚಿತ್ರಪ್ರತಿಮೆಗಳನ್ನು ಬರೆಯುವುದರಲ್ಲಿ ಆತನಿಗೆ ಸಮಾನರಾರೂ ಈವರೆಗೆ ಹುಟ್ಟಿರಲಾರರು! ಆತನು ಒಂದು ದಂತದ ಬೀಸಣಿಗೆಯನ್ನು ಕೆತ್ತಿ ಅದರ ಮೇಲೆ ಉದಯಪುರಿಯನ್ನೂ ಬಾದಶಹರನ್ನೂ ಕೆತ್ತಿರುವನು. ಆತನಿಗೆ ಸಂಗೀತಶಾಸ್ತ್ರದಲ್ಲಿಯೂ ಪರಿಶ್ರಮ ವಿರುವಂತೆ ತೋರುವುದು. ಆತನೇ ಈ ವೀಣೆಯನ್ನು ಸರಿಮಾಡಿಕೊಟ್ಟನು. ಅವನು ಉದಯಪುರೀ ಬೇಗಮರವರಿಗೆ ಆ ದಂತದ ಬೀಸಣಿಗೆಯನ್ನೊಪ್ಪಿಸಿ, ಅವರಿಂದ ಏನಾದರೂ ಬಹುಮಾನವನ್ನು ಪಡೆಯಬೇಕೆಂದಿರುವನು." ಎಂದನು. ಅದಕ್ಕಾ ರೋಷನಾರೆ,—"ಏನು! ಆ ಭೋಟುಸಿಂಗನಿಗೆ ಕಣ್ಣುಗಳು ನೆತ್ತಿಗೆ ಹತ್ತಿರುವುವೊ ಇಲ್ಲವೊ? ಮೊದಲು ನನ್ನ ದರ್ಶನವನ್ನು ಮಾಡಿ ನನ್ನಿಂದ ಬಹುಮಾನವನ್ನು ಹೊಂದದೆ ಅವಳ ಮಹಲಿಗೇಕೆ ಹೋದನು? ನನಗೆ ಇದು ಎಷ್ಟು ಅಪಮಾನಕರವು!" ಎಂದು ಆಗ್ರಹಮಾಡಿದಳು. ಫರುಕ್ಷೈರನು ಭೋಟುಸಿಂಗನಮೇಲಿನ ಅಭಿಮಾನದಿಂದ ರೋಷನಾರೆಯನ್ನು ಕುರಿತು,—"ಬೇಗಮ್ ಸಾಹೇಬಾ! ತಾವು ಇಷ್ಟು ಆಗ್ರಹಮಾಡುವ ಕಾರಣವಿಲ್ಲ. ಅವನು ತಮ್ಮ ದರ್ಶನದಲ್ಲಿ ಅತ್ಯಂತ ಕುತೂಹಲವುಳ್ಳವನಾಗಿರುವನಲ್ಲದೆ, ನನ್ನನ್ನು ಇಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಪ್ರಾರ್ಥಿಸಿದನು. ನಾನು

ತಮ್ಮ ಅಪ್ಪಣೆ ಪಡೆದು ಬರುವೆನೆಂದು ಹೇಳಿಬಂದೆನು. ಇನ್ನೂ ಅವನು ನನ್ನ ಮಾರ್ಗ ಪ್ರತೀಕ್ಷೆಯಲ್ಲಿಯೇ ಇರಬಹುದು ;" ಎಂದನು.

ಛೋಟುಸಿಂಗನನ್ನು ಕರೆತರುವಂತೆ ಆಜ್ಞೆಯಾಯಿತು. ಫರುಖ್ಷೈರನು ಬಂದು ನೋಡಿದನು. ಛೋಟುಸಿಂಗನು ಇರಲಿಲ್ಲ ; ಭಯದಿಂದ ಮೆಲ್ಲಮೆಲ್ಲನೆ ಹೋಗಿ ರೋಷನಾರೆಗೆ ಛೋಟುಸಿಂಗನು ಸಿಕ್ಕಲಿಲ್ಲವೆಂದು ಹೇಳಿದನು. ರೋಷನಾರೆ ರೋಷದಿಂದ ತನ್ನ ಕಡೆಯ ಭಟರಿಬ್ಬರನ್ನು ಕರೆದು ಉದಯಪುರಿಯ ಅಂತಃಪುರದ್ವಾರದಲ್ಲಿ ಹೊಂಚಿದ್ದು ಅವನು ಹೊರಗೆ ಕಾಲಿಟ್ಟೊಡನೆಯೇ ಕರೆತರಬೇಕೆಂದು ಆಜ್ಞಾಪಿಸಿ ಕಳುಹಿದಳು. ಸೇವಕರು ಕಾದಿದ್ದು ಮಸಾವದನು ಅವನನ್ನು ಕಿರುಮನೆಯಲ್ಲಿ ಕೂಡಿ ಹೋದುದನ್ನು ನೋಡಿ ಒಡನೆಯೇ ಬಂದು ಆತನ ಬಾಯ್ಗೆ ಬಟ್ಟೆಯನ್ನು ತುರುಕಿ, ಕೈಕಾಲುಗಳನ್ನು ಕಟ್ಟಿ ಹೊತ್ತುಕೊಂಡು ಹೋಗಿ ಕಾರಾಗೃಹದಲ್ಲಿಟ್ಟರು.

ಫರುಕ್‌ಷೈರನು ಆತನನ್ನು ಹೇಗಾದರೂ ಉಪಾಯವಾಗಿ ಕಾರಾಗೃಹದಿಂದ ತಪ್ಪಿಸಬೇಕೆಂದು ಯೋಚಿಸಿ ಪ್ರಯತ್ನಿಸಿದನಾದರೂ ಕಾರ್ಯಕಾರಿಯಾಗಲಿಲ್ಲ. ಆದರೂ ನಿರಾಶನಾಗದೆ ಛೋಟುಸಿಂಗನಿಗೆ ಅಡಿಗಡಿಗೆ ಧೈರ್ಯವನ್ನು ಹೇಳುತ್ತಲೂ ಆಹಾರ ಪದಾರ್ಥಗಳನ್ನು ಕೊಡುತ್ತಲೂ ತನ್ನ ಸ್ನೇಹವನ್ನು ವ್ಯಕ್ತಪಡಿಸುತ್ತಿದ್ದನು. ರೋಷನಾರೆಯ ಇತರ ಸೇವಕರೂ ಆತನಿಂದ ತಮಗೆ ಬೇಕಾದ ಚಿತ್ರಪ್ರತಿಮೆಗಳನ್ನು ಬರೆಯಿಸಿಕೊಂಡು ತಾವೂ ತಕ್ಕ ಉಪಕಾರವನ್ನು ಮಾಡುತ್ತಿದ್ದರು.

ಹೀಗೆಯೇ ಕೆಲವು ದಿನಗಳು ನಡೆದ ಮೇಲೆ ಒಂದು ದಿವಸ ರೋಷನಾರೆಯು ಛೋಟುಸಿಂಗನನ್ನು ಕಾರಾಗೃಹದಿಂದ ಕರೆಯಿಸಿಕೊಂಡು, ಆತನನ್ನು ಆಪಾದಮಸ್ತಕಪರ್ಯಂತ ನೋಡಿ, ಒಡನೆಯೇ ಆತನೊಬ್ಬ ರಾಜಪುತ್ರನಿರಬಹುದೆಂದೂ ಏನೋ ಕೆಲಸದಿಂದ ಹೀಗೆ ವೇಷಾಂತರವನ್ನು ತಳೆದು ಬಂದಿರುವನೆಂದೂ ಸಿರ್ಧರಿಸಿ ಕ್ರೋಧದಿಂದ ಅವನನ್ನು ಸುಟ್ಟು ಹಾಕುವವಳಂತೆ ನೋಡಿದಳು. ಬಳಿಕ ಈ ರೀತಿ ಉತ್ತರ ಪ್ರತ್ಯುತ್ತರವನ್ನು ಬೆಳಸಿದಳು:—

"ಎಲಾ. ನೀನಾರು ? ಉದಯಪುರಿಯ ಮಹಲನ್ನು ಕುರಿತು ನೀನೇಕೆ ಹೋಗಿದ್ದೆ ?"

ಭೋಟು:—ಅಮ್ಮಾ ! ನಾನೊಬ್ಬ ಚಿತ್ರಗಾರನು. ದಂತದ ಬೀಸಣಿಗೆ ಮೊದಲಾದುವುಗಳನ್ನು ಮಾಡಿ ನಿಮ್ಮಂಥವರಿಗೆ ಕೊಟ್ಟು ಬಹುಮಾನವನ್ನು ಪಡೆದು ಜೀವಿಸಬೇಕೆಂದು ಬಂದಿರುವೆನು.

ರೋಷ:—ಮೂರ್ಖ ! ಸುಳ್ಳಾಡಬೇಡ ! ಉದಯಪುರಿಯೊಡನೆ ನಿನಗೇನು ಸಂಬಂಧವಿರುವುದು ? ನಿಜವನ್ನು ಹೇಳು.

ಭೋಟು:—ಈಗ ಹೇಳಿದೆನಲ್ಲವೆ ? ಬೀಸಣಿಗೆಯನ್ನು ಬೇಗಮರಿಗೆ ಒಪ್ಪಿಸಿ, ಏನಾದರೂ ಬಹುಮಾನವನ್ನು ಪಡೆಯಲು ಹೋಗಿದ್ದೆನು. ಇದಕ್ಕಿಂತಲೂ ಇನ್ನು ನಿಜವನ್ನು ಹೇಳಲು ನನಗೆ ಶಕ್ತಿಸಾಲದು.

ರೋಷ:—ಎಲಾ, ದುರ್ಮಾರ್ಗನೆ ! ನಿನಗೆ ಪ್ರಾಣದ ಮೇಲೆ ಆಶೆಯಿದ್ದರೆ ನಿಜವನ್ನು ಹೇಳು. ನಿನ್ನ ವಿಚಾರವೆಲ್ಲವನ್ನೂ ಬಲ್ಲೆನು; ಹುಷಾರ್ !

ಭೋಟು:—ತಿಳಿದಿದ್ದರೂ ತಿಳಿಯದಿದ್ದರೂ ಇದೇ ನಿಜ. ನಾನೊಬ್ಬ ಚಿತ್ರಗಾರನೇ ನಿಜ.

ರೋಷ:—ಎಲೆ, ಮೂರ್ಖನೆ ! ಥಟ್ಟನೆ ನಿಜವನ್ನು ಹೇಳಿದ್ದರೆ ಶಿಕ್ಷೆಯನ್ನು ಕಡಮೆಮಾಡುತ್ತಿದ್ದೆನು. ಆದರೆ, ನಿನ್ನ ಅದೃಷ್ಟವು ಚೆನ್ನಾಗಿಲ್ಲವೆಂದು ತೋರುವುದು ; ಅನುಭವಿಸು.

ಒಡನೆಯೇ ಭೋಟುಸಿಂಗನನ್ನು ಕಾರಾಗೃಹದಲ್ಲಿಡುವಂತೆ ಅಪ್ಪಣೆಯಿತ್ತಳು, ಸೇವಕರು ಅವನನ್ನು ಕರೆದುಕೊಂಡು ಹೊರಟುಹೋದರು. ರೋಷನಾರೆಯು ಸ್ವಲ್ಪ ಹೊತ್ತು ಯೋಚಿಸುತ್ತಿದ್ದು, ಭೋಟುಸಿಂಗನನ್ನೇ ಆಧಾರವಾಗಿರಿಸಿಕೊಂಡು, ಔರಂಗಜೇಬನು ಉದಯಪುರಿಯನ್ನು ತಿರಸ್ಕರಿಸುವಂತೆ ಮಾಡುವೆನೆಂದು, ನಿರ್ಧರಿಸಿಕೊಂಡು ಒಡನೆಯೇ ಫರುಕ್ಖೈರನನ್ನು ಕರೆದು ಬಾದಶಹನನ್ನು ಈಗಲೇ ಕರೆತರಬೇಕೆಂದು ಹೇಳಿದಳು. ಫರುಕ್

ಸ್ಯೈರನು ತತ್‌ಕ್ಷಣವೇ ಹೋಗಿ ಸ್ವಲ್ಪಹೊತ್ತಿನೊಳಗಾಗಿ ಬಂದು—"ಬಾದಶಹರು ಉದಯಪುರಿಬೇಗಮರ ಮಹಲಿನಲ್ಲಿರುವರು" ಎಂದು ಹೇಳಿದನು. ರೋಷನಾರೆಯ ಕೋಪವಿಮ್ಮಡಿಯಾಯಿತು; ಸಿಂಹದಂತೆ ಗರ್ಜನೆಮಾಡಿ, ಬಾದಶಹರು ಬರುವವರೆಗೂ ಕಾದಿದ್ದು ಕರೆದುಕೊಂಡು ಬರುವಂತೆ ಹೇಳಿ ಮತ್ತೆ ಕಳುಹಿದಳು. ಫರುಕ್‌ಸ್ಯೈರನು ಪ್ರತಿಮಾತಾಡದೆ ಹೊರಟುಬಂದು ಉದಯಪುರಿಯ ಮಹಲಿನಲ್ಲಿಯೇ ಕಾದುಕೊಂಡಿದ್ದನು. ಆದಿನ ಔರಂಗಜೇಬನು ರಾತ್ರಿಯವರೆಗೂ ಹೊರಗೆ ಬರಲೇ ಇಲ್ಲ. ಫರುಕ್‌ಸ್ಯೈರನು ಆವರೆಗೆ ಅಲ್ಲಿಯೇ ಕಾದಿದ್ದು ಆತನು ಬಂದ ಕೂಡಲೆ ಸಲಾಮುಮಾಡಿ ರೋಷನಾರೆಯ ಅಪ್ಪಣೆಯನ್ನು ನಿವೇದಿಸಿದನು. ಔರಂಗಜೇಬನು ತನಗೆ ಈಗ ಬರಲಾಗುವುದಿಲ್ಲವೆಂದೂ ರಾತ್ರಿ ಎಂಟುಘಂಟೆಯಾದಮೇಲೆ ಬರುವೆನೆಂದೂ ಹೇಳಿ ಕಳುಹಿಸಿದನು. ಫರುಕ್‌ಸ್ಯೈರನು ರೋಷನಾರೆಗೆ ಈ ಸಂಗತಿಯನ್ನು ತಿಳುಹಲು, ಅವಳು ಆತ್ಯಾಗ್ರಹದಿಂದ ಅವನನ್ನು ಹೊರಗೆ ಕಳುಹಿಬಿಟ್ಟಳು.

---

## ಇಪ್ಪತ್ತನಾಲ್ಕನೆಯ ಪ್ರಕರಣ.

---

### (ತಲೆಗಂಡಾಯ)

ಔರಂಗಜೇಬನಿಗೆ ಸಂಪೂರ್ಣವಾಗಿ ಆರೋಗ್ಯಲಾಭವಾಯಿತು. ಮೊದಲಿನಂತೆಯೇ ತನ್ನ ಕೆಲಸಗಳನ್ನು ನಿರ್ವಹಿಸುವಂತಾದನು. ರೂಪನಗರಕ್ಕೆ ಸೈನ್ಯವನ್ನು ಕಳುಹಲು ನಿಶ್ಚಯಿಸಿದನು; ಚೆನ್ನಾಗಿ ಆರೋಗ್ಯಲಾಭವಾದಮೇಲೆ ವೈದ್ಯರಿಗೆ ಅನೇಕ ಬಹುಮಾನಗಳನ್ನು ಕೊಟ್ಟನಲ್ಲದೆ ಫಕೀರರಿಗೆ ಸಂತೃಪ್ತಿಯಾಗಿ ಅನ್ನವನ್ನು ಹಾಕಿಸಿ ಹೊಸ ಮಸೀದಿಗಳನ್ನು ಕಟ್ಟಿಸಿದನು. ಇವೆಲ್ಲಕ್ಕೂ ವಿಶೇಷ ದ್ರವ್ಯವಾಯಿತು. ಔರಂಗಜೇಬನು ತನಗೆ ಇಂತಹ

# ವಿಮಲಾದೇವಿ

ರೋಗವು ಹಿಂದುಗಳ ದೃಷ್ಟಿದೋಷದಿಂದಲೇ ಪ್ರಾಪ್ತವಾಯಿತೆಂದೂ ತಾನು ಈವರೆಗೆ ವ್ಯಯಮಾಡಿರುವ ದ್ರವ್ಯವನ್ನೆಲ್ಲ ಹಿಂದುಗಳಿಂದ ಕಿತ್ತುಕೊಳ್ಳಬೇಕೆಂದೂ ಯೋಚಿಸಿ, " **ಜಿಜಿಯಾ** " ಎಂಬ ತಲೆಗಂದಾಯವನ್ನು ಏರ್ಪಡಿಸಿದನು. ಪ್ರತಿಯೊಬ್ಬ ಹಿಂದುವೂ ಬಡವನಾಗಲಿ, ಹಣಗಾರನಾಗಲಿ, ತನಗೆ ಸ್ವಲ್ಪ ಹಣವನ್ನು ಈ ಕಂದಾಯದ ಮೂಲಕ ಕೊಡಬೇಕೆಂದು ಬಾದಶಹನು ಕಠಿಣವಾಗಿ ವಿಧಿಸಿದನು. ಕೆಲವರು ಬಡಹಿಂದುಗಳು ಕಂದಾಯವನ್ನು ಕೊಡಲು ಗತಿಯಿಲ್ಲದೆ ತಮ್ಮ ಮನೆ-ಮಠಗಳನ್ನು ಮಾರಿ ಬಾದಶಹನನ್ನು ತೃಪ್ತಿಪಡಿಸಿದರು. ತನ್ನ ಅಪ್ಪಣೆಯನ್ನು ಮೀರಿ ಕಂದಾಯವನ್ನು ಕೊಡದಿದ್ದವರ ಮನೆಗೆ ನುಗ್ಗಿ ಎಲ್ಲವನ್ನೂ ಸುಲಿದುಕೊಂಡು ಬರುವಂತೆ ತನ್ನ ಭಟರಿಗೆ ಆಜ್ಞಾಪಿಸಿ, ಹಿಂದುಗಳಿಗೆ ಅನೇಕ ವಿಧವಾಗಿ ಹಿಂಸೆಯನ್ನುಂಟುಮಾಡುತ್ತಿದ್ದನು. ಇಷ್ಟೇ ಅಲ್ಲದೆ, ಪ್ರತಿಗ್ರಾಮಗಳಿಗೂ ತನ್ನ ಭಟರನ್ನು ಕಳುಹಿಸಿ, ಹಿಂದುಗಳಿಂದ ತಲೆಗಂದಾಯವನ್ನು ತೆಗೆದುಕೊಳ್ಳುತ್ತಿದ್ದನು. ಡಿಲ್ಲೀನಗರದಲ್ಲಿ ಲಕ್ಷಾಂತರ ಹಿಂದುಗಳು ಇದು ಅನ್ಯಾಯವೆಂದು ಬಾದಶಹನಲ್ಲಿ ಮೊರೆಯಿಟ್ಟರು. ಪ್ರತಿಶುಕ್ರವಾರವೂ ಔರಂಗಜೇಬನು ಜುಮ್ಮಾಮಸೀದಿಗೆ ಹೋಗುವ ವಾಡಿಕೆಯಿದ್ದುದರಿಂದ ಆದಿನ ಹಿಂದುಗಳಲ್ಲಿ ಬ್ರಾಹ್ಮಣರು ಪಂಚಾಗದ ಕಟ್ಟುಗಳನ್ನು ಕಂಕುಳಲ್ಲಿಟ್ಟುಕೊಂಡು ಮಾರ್ಗದಲ್ಲಿ ಕಾದಿದ್ದು ಬಾದಶಹನು ಬಂದಕೂಡಲೆ 'ದುರ್ಭರವಾದ ತಲೆಗಂದಾಯವನ್ನು ತೆಗೆದುಹಾಕಿ ಬಡಕುಟುಂಬಗಳನ್ನು ಹೇಗಾದರೂಮಾಡಿ ಕಾಪಾಡಬೇಕೆಂ"ದು ಆತನನ್ನು ಕುರಿತು ಮೊರೆಯಿಟ್ಟರು ಬಾದಶಹನು ಅವರ ಮಾತುಗಳಿಂದ ಆಗ್ರಹವ್ಯಗ್ರನಾಗಿ ಅವರೆಲ್ಲರನ್ನೂ ಆನೆಯ ಕಾಲ್ಗಳಿಂದ ತುಳಿಸಿ ನಿರ್ಮೂಲ ಮಾಡಿಸಿದನು. ಈ ಕಾರಣದಿಂದ ಹಿಂದುಗಳಿಗೆಲ್ಲ ಅವನ ಮೇಲೆ ಮಹತ್ತರವಾದ ದ್ವೇಷವು ಅಂಕುರಿಸಿತು

ಜಿಜಿಯಾ ಕಂದಾಯವನ್ನು ಕೊಡದೆ ಔರಂಗಜೇಬನೊಡನೆ ಅಕಾರಣವಾದ ಕಲಹವನ್ನು ಮಾಡಬಾರದೆಂದು ತಿಳಿದು ಅಲ್ವಾರ್, ಭರತಪುರ್,

ಬುಂದಿ, ಜಯಪುರ ಮೊದಲಾದ ಸಂಸ್ಥಾನಾಧಿಪರು ಬಾದಶಹನಿಗೆ ಕಾಣಿಕೆಗಳನ್ನು ತಂದೊಪ್ಪಿಸಿದರು. ಆದರೆ, ಉದಯಪುರಾಧೀಶನಾದ ರಾಜಸಿಂಹನು ಮಾತ್ರ ಕಂದಾಯವನ್ನು ಕೇಳಲುಬಂದ ತುರಷ್ಕರನ್ನು ಹೆದರಿಸಿ ಓಡಿಸಿದನು. ಈ ಸಮಾಚಾರವನ್ನು ಕೇಳಿ ಔರಂಗಜೇಬನು ಕ್ರೋಧವನ್ನು ಹೊಂದಿದನಾದರೂ ರಾಜಸಿಂಹನಿಗೆ ಸ್ವಲ್ಪ ಹೆದರಿದವನಾಗಿ ಸುಮ್ಮನಿದ್ದನು.

ಆನೆಗಳಿಂದ ಬ್ರಾಹ್ಮಣರನ್ನು ತುಳಿಸಿದುದನ್ನೂ ಬಡ ಕುಟುಂಬಗಳಿಂದ ಕಂದಾಯವನ್ನು ತೆಗೆದುಕೊಂಡುದನ್ನೂ ಇನ್ನೂ ಅನೇಕ ವಿಧವಾದ ಕ್ರೂರ ಕೃತ್ಯಗಳನ್ನೂ ಕೇಳಿ ರಾಜಸಿಂಹನು ಮಹದಾಗ್ರಹದಿಂದ ಹಿಂದುಗಳ ದುರವಸ್ಥೆಗೆ ವ್ಯಥೆಪಟ್ಟು ಔರಂಗಜೇಬನಿಗೆ ಧರ್ಮಮಾರ್ಗವನ್ನು ಬೋಧಿಸುವ ಒಂದು ಸವಿಸ್ತರ ಪತ್ರವನ್ನು ಬರೆದರೆ, ಅದನ್ನು ನೋಡಿಯಾದರೂ ಅವನು ಸನ್ಮಾರ್ಗವರ್ತಿಯಾಗುವನೆಂದು ನಂಬಿ ಈ ರೀತಿಯಾಗಿ ಬರೆದು ಕಳುಹಿದನು:—

"......................ನಾನು ನಿಮ್ಮ ರಾಜಸಭೆಗೆ ಬರದಿದ್ದರೂ ರಾಜಭಕ್ತಿಯುಳ್ಳವನಾಗಿ ನಿಮಗೆ ಸಹಾಯಕರನಾಗಿರಬೇಕೆಂದಿರುವೆನು. ನಾನು ಮಾಡುವ ಸಹಾಯವು ಹಿಂದೂದೇಶದಲ್ಲಿರುವ ರಾಜಾಧಿರಾಜರಿಗೂ ಸರದಾರರಿಗೂ ಸಂಸ್ಥಾನಾಧಿಪತಿಗಳಿಗೂ ನವಾಬರಿಗೂ ಉಪಯೋಗಕರವಾಗಿ, ಊರ್ಜಿತಾವಸ್ಥೆಗೆ ಕಾರಣವಾಗಿರುವುದು ಇಷ್ಟೇ ಅಲ್ಲ ; ಈರಾಣ, ತುರಾಣ, ರೋಮ್, ಟರ್ಕಿ ಮೊದಲಾದ ಸಪ್ತದ್ವೀಪಗಳಿಗೂ ಜಲಸ್ಥಲಮಾರ್ಗಗಳಲ್ಲಿ ಪ್ರಯಾಣಮಾಡುವ ಮಾರ್ಗಸ್ಥರಿಗೂ ಉಪಯೋಗಕರವಾಗಬೇಕೆಂಬುದು ನನ್ನ ಆಶೆ. ನಿಮ್ಮ ಪೂರ್ವಜನಾದ ಮಹಮ್ಮದ ಜಲಾಲುದ್ದೀನನ ಕೀರ್ತಿ ಲೋಕದಲ್ಲೆಲ್ಲಾ ಪ್ರಖ್ಯಾತಿಹೊಂದಿರುವುದಕ್ಕೆ ಕಾರಣವೇನೆಂದರೆ, ಆತನು ಸರ್ವಜನರಲ್ಲಿಯೂ ಸಮದೃಷ್ಟಿಯನ್ನಿರಿಸಿ ಐವತ್ತೆರಡು ವರ್ಷಗಳಕಾಲ ರಾಜ್ಯಭಾರಮಾಡಿ ಅಕ್ಷಯವಾದ ಕೀರ್ತಿ ಸುಖಗಳಿಗೆ ಅಧಿಕಾರಿಯಾದನು. ಈತನು ಹಿಂದು, ಈತನು ಮಹಮ್ಮದೀಯನು, ಈತನು ಕ್ರೈಸ್ತ ಎಂಬೀ

ಭೇದವನ್ನಿಡದೆ ಸಕಲ ಮರ್ತ್ಯರಿಗೂ ಸೌಖ್ಯವನ್ನೀಯುತ್ತ ರಾಜ್ಯವನ್ನಾಳಿದನು. ಆತನಿಗೆ ಈ ಪಕ್ಷಪಾತಬುದ್ಧಿಯಿಲ್ಲದಿದ್ದುದರಿಂದಲೇ "ಜಗದ್ಗುರು" ಎಂಬ ಪದವಿಯು ಆತನಿಗೆ ಲಭಿಸಿತು......................

ನಿಮ್ಮ ರಾಜ್ಯವನ್ನು ನೋಡಿದರೆ, ನಿಮ್ಮ ಕ್ರೂರತನದಿಂದಲೇ ನಿಮ್ಮ ಪ್ರಜೆಗಳೂ ಮಿತ್ರರೂ ನಿಮಗೆ ಪ್ರತಿಕೂಲರಾಗಿರುವರು. ಎಲ್ಲಿ ನೋಡಿದರೂ ಕೊಳ್ಳೆ, ಕೊಲೆ ಇವೇ ಮೊದಲಾದವುಗಳು ಕಾಣಬರುತ್ತಿವೆ; ದಾರಿದ್ರ್ಯಲಕ್ಷ್ಮಿ ತಾಂಡವಾಡುತ್ತಿರುವಳು; ಪರಾಕ್ರಮವು ಶೂನ್ಯವಾಗಿರುವುದು, ಕಲಾಕೌಶಲ, ವ್ಯಾಪಾರ ಮೊದಲಾದವುಗಳನ್ನು ಕುರಿತು ಹೇಳಬೇಕಾದುದೇ ಇಲ್ಲ. ನೀವು ಯಾರ ವಿಷಯದಲ್ಲಿ ಅತ್ಯಭಿಮಾನದಿಂದಿರುವಿರೋ ಅಂತಹ ಮಹಮ್ಮದೀಯರೇ ನಿಮಗೆ ಪ್ರತಿಕೂಲರಾಗಿರುವರು.......... ...ನಿಮ್ಮ ರಾಜ್ಯದ ಪ್ರಜೆಗಳಾದ ಹಿಂದುಗಳಿಗೆ ನಿಮ್ಮಲ್ಲಿ ಪ್ರೀತಿಯೇ ಇಲ್ಲ. ಪ್ರಜಾಪೀಡನವಾದ ಇಂತಹ ಸ್ವೈರವರ್ತನದಿಂದ ನಿಮ್ಮ ರಾಜ್ಯವೂ ಸಾರ್ವಭೌಮಪದವಿಯೂ ಹೇಗೆತಾನೆ ನಿಲ್ಲುವುದು? ಬಡತನದಿಂದ ಹಲುಬುತ್ತಿರುವ ನಿಮ್ಮ ಪ್ರಜೆಗಳಿಂದಲೂ ಸನ್ಯಾಸಿಗಳು ಬೈರಾಗಿಗಳು ಇವರೆಲ್ಲರಿಂದಲೂ ಕಂದಾಯವನ್ನು ಸುಲಿದು ನಿಮ್ಮ ಕೋಶವನ್ನು ತುಂಬಿಕೊಳ್ಳುವುದಲ್ಲದೆ, ಅವರನ್ನು ನಾನಾವಿಧವಾದ ದುಃಖಗಳಿಗೆ ಗುರಿಮಾಡುತ್ತಿರುವಿರಿ.........

ನೀವು ಯಾವ ಗ್ರಂಥವನ್ನು ಈಶ್ವರದತ್ತವಾದ ಧರ್ಮಗ್ರಂಥವೆಂದು ತಿಳಿದಿರುವಿರೋ ಅಂತಹ ಪುಸ್ತಕದಲ್ಲಿ ಕೂಡ ಈಶ್ವರನು ಮಹಮ್ಮದೀಯರಿಗೆ ಮಾತ್ರವೇ ದೇವರಲ್ಲ, ಸಮಸ್ತ ಮಾನವಕೋಟಿಗೂ ಒಡೆಯನೆಂದೇ ಹೇಳಿದೆ. ಈಶ್ವರನಿಗೆ ಮಹಮ್ಮದೀಯರೂ ಇತರರೂ ಸಮಾನರಾಗಿಯೇ ಇರುವರು. ಮಾನವ ಶರೀರದ ವರ್ಣದಲ್ಲಿಯೂ ಸ್ವರೂಪದಲ್ಲಿಯೂ ಭೇದವಿರುವುದು ಈಶ್ವರನ ಸೃಷ್ಟಿ ನಿಯಮವು. ನಿಮ್ಮ ಶೂನ್ಯಮಂದಿರದಲ್ಲಿ ನೀವು ಮಾಡುವ ಪ್ರಾರ್ಥನೆಯನ್ನೂ ಆತನು ಕೇಳುವನು. ವಿಗ್ರಹಗಳುಳ್ಳ ದೇವಸ್ಥಾನಗಳಲ್ಲಿ ಘಂಟಾನಾದಯುಕ್ತಗಳಾದ ಪೂಜೆಗಳನ್ನೂ ಗ್ರಹಿಸುವನು.

ಇತರರ ಧರ್ಮ, ಆಚಾರ, ವ್ಯವಹಾರಗಳನ್ನು ಕುರಿತು ದುರಾಗ್ರಹವನ್ನು ಹೊಂದಿ ಅವರನ್ನು ಬಾಧಿಸುವುದು ಈಶ್ವರನಿಗೆ ಎಂದಿಗೂ ಸಮ್ಮತವಿಲ್ಲವು. ಚಿತ್ರಪಟಗಳನ್ನು ಬರೆದ ಚಿತ್ರಕಾರನ ಮುಂದೆ ಪಟಗಳನ್ನು ತುಳಿದು ಹರಿದು ಹಾಕಿದರೆ ಅವನಿಗೆ ಹೇಗೆ ಕೋಪವುಂಟಾಗುವುದೋ ಹಾಗೆಯೇ ಇತರ ಮತಗಳನ್ನು ದ್ವೇಷಿಸುವುದರಿಂದ ಈಶ್ವರನ ಮಹದಾಗ್ರಹಕ್ಕೆ ಕಾರಣವಾಗ ಬೇಕಾದೀತು! ಈಶ್ವರನು ಅದ್ವಿತೀಯನೂ ಅಪ್ರತಿಮನೂ ಅಪ್ರಮೇಯನೂ ಆದ ಒಬ್ಬ ಚಿತ್ರಗಾರನು. ಆತನು ಈ ಪ್ರಪಂಚವೆಂಬ ವಿಸ್ತೀರ್ಣ ಪಟದ ಮೇಲೆ, ನಾನಾ ಮತಾಚಾರಗಳನ್ನೂ ವಿವಿಧ ಮನುಷ್ಯಜಾತಿಗಳನ್ನೂ ಚಿತ್ರಿಸಿರುವನು. ಹೀಗಿರುವಾಗ ನೀವು ಹಿಂದೂ ಮತವನ್ನು ದ್ವೇಷಿಸುವುದು ಆ ಸೃಷ್ಟಿಕರ್ತನನ್ನು ದ್ವೇಷಿಸಿದಂತಾಗುವುದೆಂದು ಸ್ಪಷ್ಟವಾಗಿ ತಿಳಿದಿರುವುದು. ನ್ಯಾಯದೃಷ್ಟಿಯಿಂದ ನೋಡಿದರೆ, ನೀವು ಹಿಂದುಗಳ ಮೇಲೆ ಹಾಕಿರುವ ತಲೆಗಂದಾಯವು ಕೇವಲ ಅನ್ಯಾಯವೂ ಹೇಯವೂ ಆದುದೆಂದು ತಿಳಿಯುವುದು. ನಿಜವಾದ ರಾಜ್ಯಕರ್ತೃತ್ವವೂ ನೀತಿಯೂ ನಿಮ್ಮಲ್ಲಿಲ್ಲದಿರುವುದಕ್ಕೆ ಇದು ನಿದರ್ಶನವಾಗಿರುವುದು.... ... .. .. ......."

ಪತ್ರಸ್ಥ ವಿಚಾರಗಳನ್ನು ಆಮೂಲಾಗ್ರವಾಗಿ ಓದಿ ತಿಳಿದುಕೊಂಡ ಬಾದಷಹನು ರೋಷದಿಂದ ಹಲ್ಲುಗಳನ್ನು ಕಡಿಯುತ್ತ ತನ್ನ ಎಡಗಾಲಿನಿಂದ ಭೂಮಿಯನ್ನು ದಟ್ಟಿಸುತ್ತ ಕ್ರೋಧವನ್ನು ಪ್ರಕಟಿಸಿದನು. ರಾಜಸಿಂಹನು ಚಂಪ್ರಾವತೀರಾಣಿಯ ಸಂರಕ್ಷಣಾರ್ಥವಾಗಿ ಸೈನ್ಯವನ್ನು ಕಳುಹಿದುದೂ ವಿಜಯಸಿಂಹನ ಸಹಾಯಕ್ಕಾಗಿ ರೂಪನಗರಕ್ಕೆ ಬರಬೇಕೆಂದಿದ್ದುದೂ ಕಂದಾಯವನ್ನು ಕೊಡದೆ ತನ್ನ ದೂತರನ್ನು ಪರಾಭವಿಸಿದುದೂ ಇವೇ ಮೊದಲಾದ ವ್ಯಾಪಾರಗಳು ಇಂಧನಗಳಾಗಿ ಪರಿಣಮಿಸಿ, ಔರಂಗಜೇಬನ ರೋಷಾಗ್ನಿಯನ್ನು ನಾಲ್ಕು ಕಡೆಯಲ್ಲಿಯೂ ಪ್ರಜ್ವಲಿಸುವಂತೆ ಮಾಡಿದುವು. ರಾಜಸಿಂಹನ ಶೌರ್ಯವನ್ನು ಮುರಿಯದಿದ್ದರೆ ಮುಂದೆ ತಾನು ಮಾಡುವ ಕಾರ್ಯಗಳಿಗೆಲ್ಲ ವಿಘ್ನವನ್ನುಂಟುಮಾಡುವನೆಂದು ತಿಳಿದು ಬಾದಶಹನು ಅಂದಿನಿಂದ

ಲೂ ಅತ್ಯಂತ ಶ್ರದ್ಧೆಯಿಂದ ಸೈನ್ಯಗಳನ್ನು ಸಿದ್ಧಪಡಿಸುತ್ತಿದ್ದನು. ಆತ
ಸನ್ನಾಹವೆಲ್ಲವೂ ಮುಖ್ಯವಾಗಿ ರಾಜಸಿಂಹನ ಮೇಲೆ ಹೊರಡಲು ಮಾ
ಲ್ಪಟ್ಟಿದ್ದರೂ ತನ್ನ ಉದ್ದೇಶವನ್ನು ಮಾತ್ರ ಒಬ್ಬರಿಗೂ ತಿಳಿಸದೆ ರೂಪನ
ರದ ಮೇಲೆ ದಂಡೆತ್ತಬೇಕೆಂದು ಹೇಳುತ್ತಿದ್ದನು.

ಇತ್ತ ರಾಜಸಿಂಹನು ಕೂಡ, ಬಾದಶಹನ ಯುದ್ಧಸನ್ನಾಹಗಳನ್ನು
ಗೂಢಚಾರರಿಂದ ತಿಳಿದುಕೊಂಡು ತಾನೂ ಸೈನ್ಯವನ್ನು ಸಿದ್ಧಪ
ಸುತ್ತ ತನ್ನ ಸಹಾಯಕ್ಕಾಗಿ ಬರಬೇಕೆಂದು ರಾಜಪುತ್ರರೆಲ್ಲರಿಗ
ಬರೆದು ಕಳುಹಿದನು. ಆತನ ಗೌರವವನ್ನೂ ಪರಾಕ್ರಮವನ್ನೂ ತಿ
ಬದ್ಧ ರಾಜಪುತ್ರರೆಲ್ಲರೂ ಆತನಿಗೆ ಸಹಾಯಮಾಡಲೊಪ್ಪಿ ಸನ್ನದ್ಧರ
ಗತೊಡಗಿದರು.

---

## ಇಪ್ಪತ್ತೈದನೆಯ ಪ್ರಕರಣ.

(ಗೋಲಕೊಂಡ)

ಅರುಣೋದಯವಾಗಿ, ಪೂರ್ವದಿಕ್ಕಿನಲ್ಲಿ ಬೆಳುಪೇರುತ್ತಿದ್ದಿತು.
ಶುಕ ಪಿಕ ಸಾರಿಕಾದಿ ಪಕ್ಷಿಗಳೆಲ್ಲವೂ ಅಸ್ಪಷ್ಟ ಮಧುರವಾಗಿ ಗಾನಮ
ಡಲಾರಂಭಿಸಿದ್ದುವು. ಪೂರ್ವದಿಕ್ಕೂ ಚಿತ್ರವಿಚಿತ್ರ ವರ್ಣಗಳಿಂದ ಕೂ
ನೋಡುವವರಿಗೆ ಅಮಿತ ಆಹ್ಲಾದವನ್ನುಂಟುಮಾಡುತ್ತಿದ್ದಿತು. ಈ ನಿ
ಷಮಾತ್ರದಲ್ಲಿ ನೀಲಬಣ್ಣವೂ ಉತ್ತರಕ್ಷಣದಲ್ಲಿ ಕೆಂಪುಬಣ್ಣವೂ—ಹೀ
ನಾನಾ ವಿಧಗಳಾದ ಬಣ್ಣಗಳಿಂದ ಆಕಾಶವು ನೇತ್ರಾನಂದಕರವಾಗಿ ಕಾಣ
ತ್ತಿದ್ದಿತು. ಹಸುರಾದ ಗರಿಕೆಹುಲ್ಲಿನಮೇಲೆ ಮುತ್ತುಗಳು ಚೆಲ್ಲಲ್ಪಟ
ರುವುವೋ ಎಂಬಂತೆ ಹಿಮಬಿಂದುಗಳು ಥಳಥಳನೆ ಪ್ರಕಾಶಿಸುತ್ತಿದ್ದುವ
ತೆರೆಯಮರೆಯನ್ನು ಪ್ರವೇಶಿಸುವ ನಾಟಕ ಪಾತ್ರಗಳಂತೆ ಒಂದಾದಮೆ

ಲೊಂದು ನಕ್ಷತ್ರಗಳು ಮಾಯವಾಗುತಲಿದ್ದುವು. ರಾತ್ರಿಯೆಲ್ಲಾ ವಿಶ್ರಾಂತಿಯಿಲ್ಲದೆ ಕೆಲಸಮಾಡುವವರು ಆಯಾಸಪಡುವಂತೆ ಚಂದ್ರನು ಕಾಂತಿಹೀನನಾಗುತ್ತ ಕಣ್ಮರೆಯಾಗುತ್ತಿದ್ದನು. ಅಂಧಕಾರರಾಕ್ಷಸ ಸೈನ್ಯವು, ಲೋಕಬಾಂಧವನ ಆಗಮನವನ್ನು ಆತನ ಸಾರಥಿಯಾದ ವರುಣನಿಂದ ತಿಳಿದು ದಿಗಂತಗಳಿಗೆ ಓಡುತ್ತಿದ್ದುದರಿಂದ ಬೆಳಕು ಕ್ರಮೇಣ ಹೆಚ್ಚಾಗುತ್ತಿದ್ದಿತು. ತಂಪಾದ ಪೂರ್ವದಿಕ್ಕಿನ ಗಾಳಿಯು ಮೆಲ್ಲನೆ ಬೀಸುತ್ತ ಗಾಢನಿದ್ರೆಯಲ್ಲಿರುವವರನ್ನು ಎಬ್ಬಿಸುತ್ತಿದ್ದಿತು. ಹಿಂದೂ ದೇವಾಲಯಗಳಲ್ಲಿ ಘಂಟಾನಾದವೂ ಪ್ರಾಬೋಧಿಕ ಪ್ರಾರ್ಥನೆಗಳೂ ಮಹಮ್ಮದೀಯರ ಮಸೀದೆಗಳಲ್ಲಿ ನಮಾಜುಧ್ವನಿಯೂ ಕೇಳಬರುತ್ತಲಿದ್ದುವು.

ಇಂತಹ ಪ್ರಾತಃಕಾಲ ಸಮಯದಲ್ಲಿ ಗೋಲಕೊಂಡ ಪಟ್ಟಣಕ್ಕೆ ಮೈಲುದೂರದಲ್ಲಿದ್ದ ತೋಟದೊಳಗಿನ ಪುಷ್ಕರಣಿಯಲ್ಲಿ ಒಬ್ಬ ಬ್ರಾಹ್ಮಣನು "ಜಯ-ಶಂಕರ! ಜಯ-ಮಹಾದೇವ!!" ಎಂದು ಈಶ್ವರನಾಮಸ್ಮರಣೆ ಮಾಡುತ್ತ ಸ್ನಾನಮಾಡುತ್ತಿದ್ದನು. ಸ್ವಚ್ಛವಾದ ಚಂದ್ರಕಾಂತಶಿಲೆಗಳಿಂದ ಕಟ್ಟಲ್ಪಟ್ಟ ಸೋಪಾನದ ಮೇಲೆ ಕುಳಿತು ಯಥೇಚ್ಛವಾಗಿ ಅಘಮರ್ಷಣಸ್ನಾನವನ್ನು ಮಾಡಿ ಮೇಲಕ್ಕೆ ಬಂದ ಕೂಡಲೆ ದಡದಲ್ಲಿ ಕುಳಿತುಕೊಂಡಿದ್ದ ಆತನ ಶಿಷ್ಯನು ಗುರುವಿಗೆ ತನ್ನ ಬಳಿಯಲ್ಲಿದ್ದ ಮೂಟೆಯನ್ನು ಕೊಟ್ಟನು. ಆ ಬ್ರಾಹ್ಮಣನು ತನ್ನ ಮೈಯ್ಯನ್ನು ಒರಸಿಕೊಂಡು ಶುಭ್ರವಸ್ತ್ರವನ್ನು ಧರಿಸಿ, ತನ್ನ ಮುಖವನ್ನೂ ದೇಹವನ್ನೂ ಭಸ್ಮದಿಂದ ಅಲಂಕರಿಸಿ, ರುದ್ರಾಕ್ಷಮಾಲೆಯನ್ನು ಕಂಠದಲ್ಲಿ ಧರಿಸಿ, ಜರತಾರೀ ಶಾಲೊಂದನ್ನು ತಲೆಗೆ ಸುತ್ತಿಕೊಂಡನು. ಇಷ್ಟರಲ್ಲಿ ಆತನ ಶಿಷ್ಯನು ಸ್ನಾನಮಾಡಿ ಭಸ್ಮಧಾರಣೆಮಾಡಿ ಗುರುವಿನ ಹಿಂದೆ ನಿಂತಿದ್ದನು. ಆಗ ಬ್ರಾಹ್ಮಣನು ಹಿಂದುಸ್ಥಾನೀಭಾಷೆಯಲ್ಲಿ "ನಾವು ಸೂರ್ಯೋದಯಕ್ಕೆ ಸರಿಯಾಗಿ ಪಟ್ಟಣವನ್ನು ಸೇರಬೇಕು" ಎಂದು ಹೇಳಿದನು. ಕೂಡಲೆ ಶಿಷ್ಯನು ಗುರುವಿನ ಜಪಸಾಮಗ್ರಿಗಳನ್ನು ಮೊದಲಿನಂತೆ ಮೂಟೆಕಟ್ಟಿ ಭುಜಕ್ಕೆ ತಗಲಿಸಿ

ಕೊಂಡು ಗುರುವನ್ನು ಹಿಂಬಾಲಿಸಿದನು. ಸ್ವಲ್ಪಹೊತ್ತಿನಮೇಲೆ ಅಶ್ವದ ಸರದಿಂದ ಹೋಗುತ್ತಿದ್ದ ಗುರುಶಿಷ್ಯರಿಗೆ ಈ ರೀತಿ ಸಂಭಾಷಣೆಗೆ ಮೊದಲಾಯಿತು.—

ಶಿಷ್ಯ :—ಗುರೂಜಿ! ಇದು "ಕುತುಬ್‌ಶಾಹಿ" ಎಂಬ ತುರುಷ್ಕರ ರಾಜ್ಯವು. ಇಲ್ಲಿ ತಾವು ಶುದ್ಧಶ್ರೋತ್ರಿಯ ಬ್ರಾಹ್ಮಣರಂತೆ ತಿರುಗುತ್ತಿದ್ದರೆ ತೊಂದರೆಯಾದರೂ ಆಗಬಹುದು.

ಗುರು:—ಶಿಷ್ಯ! ಇಲ್ಲಿಯ ನವಾಬನಾದ "ತಾನಿಷಾ" ಎಂಬವನು ಮಹಮ್ಮದೀಯನಾದರೂ ಬ್ರಾಹ್ಮಣರಿಗೂ ಹೆಚ್ಚಾದ ಪವಿತ್ರಾಚರಣೆಯುಳ್ಳವನು. ಇವರು ಹಿಂದುಗಳು, ಇವರು ತುರುಷ್ಕರು ಎಂಬ ಭೇದಭಾವವಿವನಲ್ಲಿಲ್ಲ. ಪ್ರಜೆಗಳ ಕಷ್ಟವೇ ತನ್ನ ಕಷ್ಟವೆಂದೆಣಿಸಿ ಮೌಲ್ವಿಯರನ್ನೂ ಬ್ರಾಹ್ಮಣರನ್ನೂ ಫಕೀರರನ್ನೂ ಸನ್ಯಾಸಿಗಳನ್ನೂ ಸಮಾನಭಕ್ತಿಯಿಂದ ಆದರಿಸುತ್ತಿರುವ ಇಂತಹ ರಾಜನು ತುರುಷ್ಕನಾಗಿದ್ದರೇನು?

ಶಿಷ್ಯ:—ಮಹಮ್ಮದೀಯನಾಗಿದ್ದರೂ ಇವನಲ್ಲಿ ಇಂತಹ ಸತ್ವಗುಣಗಳಿರುವುದು ಆಶ್ಚರ್ಯ!

ಗುರು :—ಆಶ್ಚರ್ಯವೇನು? ಪೂರ್ವಪುಣ್ಯಸಂಚಯದ ಪ್ರಭಾವವು. ದೊಡ್ಡವರು ಇವನ ವಿಷಯದಲ್ಲಿ ಒಂದು ಕಥೆಯನ್ನು ಹೇಳುವರು:— ಇವನು ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು. ಸರ್ವೇಶ್ವರನಾದ ಶಿವನನ್ನು ಕುರಿತು ಹನ್ನೆರಡು ವರ್ಷಗಳವರೆಗೆ ತಪಸ್ಸನ್ನು ಮಾಡಿದನು. ಕಡೆಗೂ ಈಶ್ವರನು ಪ್ರತ್ಯಕ್ಷನಾಗಲಿಲ್ಲವಾದುದರಿಂದ ಕೋಪಗೊಂಡು ಒಂದು ದಿನ ಅಭಿಷೇಕಕ್ಕಾಗಿ ತಂದಿಟ್ಟ ಕುಂಭವನ್ನು ಲಿಂಗಮೂರ್ತಿಯ ಮೇಲೆ ಎತ್ತಿಹಾಕಿದನು. ಆಗ ಶಿವನು ಪ್ರತ್ಯಕ್ಷನಾಗಿ ನಿನಗೇನುಬೇಕೆಂದು ಕೇಳಲು ನನಗೆ ರಾಜ್ಯವು ಬೇಕು ಎಂದು ಕೇಳಿಕೊಂಡನು. ಆಗ ಪಾರ್ವತೀಶನು, ನೀನು ಇನ್ನು ಸ್ವಲ್ಪಕಾಲ ಶಾಂತಿಯನ್ನು ವಹಿಸಿ ನನ್ನನ್ನು ಆರಾಧಿಸಿದ್ದರೆ ನಿನಗೆ ನಾನು ಈಗಲೇ ಅಭೀಷ್ಟವನ್ನು ಸಲ್ಲಿಸುತ್ತಿದ್ದೆನು. ಸ್ವಲ್ಪದರಲ್ಲಿ ಅವಸರ

ಪಟ್ಟೆ. ಆದುದರಿಂದ ಈ ಜನ್ಮದಲ್ಲಿ ನಿನ್ನ ಕೋರಿಕೆ ನೆರವೇರುವುದಿಲ್ಲ. ಮುಂದಿನ ಜನ್ಮದಲ್ಲಿ ನೀನು ತರುಷ್ಕನಾಗಿ ಹುಟ್ಟಿ ರಾಜವೈಭವವನ್ನು ಅನುಭವಿಸುವೆ" ಎಂದು ಹೇಳಿ, ಅಂತರ್ಧಾನನಾದನು. ಆ ಬ್ರಾಹ್ಮಣನೇ ಈಗ "ತಾನೀಷಾ" ಸುಲ್ತಾನನಾಗಿರುವನು.

ಶಿಷ್ಯ :—(ಆಶ್ಚರ್ಯದಿಂದ) ಗುರುಜೀ! ಆ ಮಹಾನುಭಾವನನ್ನು ನೋಡುವುದಕ್ಕಲ್ಲವೇ ನಾವೀಗ ಹೋಗುತ್ತಿರುವುದು ?

ಗುರು :—ಅಲ್ಲ; ಆತನಲ್ಲಿ ನಮಗೆ ಕೆಲಸವೇನೂ ಇಲ್ಲ. ಆತನ ಮುಖ್ಯಮಂತ್ರಿಯೂ ಹಿಂದೂ ಮತಾಭಿಮಾನಿಯೂ ರಾಜಕಾರ್ಯಧುರಂಧರನೂ ಆದ "ಮಾದನ್ನಪಂತುಲು" ಎಂಬಾತನನ್ನು ನೋಡಲು ಹೋಗುತ್ತಿರುವೆವು. ಹೀಗೆ ನಾವು ಮಾತನಾಡುತ್ತ ಹೋದರೆ ನಮ್ಮ ಕೆಲಸವು ನೆರವೇರುವುದಿಲ್ಲ. ಸೂರ್ಯೋದಯದಿಂದ ಹಿಡಿದು ಒಂದು ಜಾವದವರೆಗೂ ಆತನು ಶಿವಪೂಜೆ, ಪಾರಾಯಣ, ಪುರಾಣಶ್ರವಣ ಮೊದಲಾದ ಮತವಿಷಯ ಕಾರ್ಯಗಳನ್ನು ಮಾಡುವನು. ಆ ಕಾಲದಲ್ಲಿ ಪಂಡಿತರೂ ವಿದ್ವಾಂಸರೂ ಗಾಯಕರೂ ನಿರಾತಂಕವಾಗಿ ಆತನ ಮನೆಗೆ ಹೋಗಬಹುದು; ಮತ್ತು ತಮ್ಮ ತಮ್ಮ ವಿದ್ಯಾಪ್ರಭಾವವನ್ನು ತೋರಿಸಿ ಬಹುಮಾನಗಳನ್ನು ಪಡೆಯಬಹುದು. ಆದುದರಿಂದ ಜಾಗ್ರತೆಯಾಗಿ ನಡೆ.

ಬ್ರಾಹ್ಮಣನು ತ್ವರೆಯಿಂದ ನಡೆಯಲಾರಂಭಿಸಿದನು; ಶಿಷ್ಯನು ಗುರುವಿನ ಜೊತೆಗೆ ನಡೆಯಲಾರದೆ ಆತನ ಹಿಂದೆಯೇ ಓಡಿ ಓಡಿ ಬರುತ್ತಿದ್ದನು ಸ್ವಲ್ಪಹೊತ್ತಿಗೆ ಪಟ್ಟಣವನ್ನು ಪ್ರವೇಶಿಸಿ ಬರುತ್ತಿರುವಲ್ಲಿ, ಅಗಾಧವಾದ ಕಲ್ಲುಕಟ್ಟಡದ ಎತ್ತರವಾದ ಆವರಣದ ಗೋಡೆಯಿಂದ ಸುತ್ತುವರಿಯಲ್ಪಟ್ಟುದಾಗಿಯೂ ಅಭೇದ್ಯವೂ ಎತ್ತರವೂ ಆದ ಹೆಬ್ಬಾಗಿಲಿನಿಂದ ಕೂಡಿದುದಾಗಿಯೂ ನಾನಾವಿಧದ ಬಣ್ಣಬಣ್ಣಗಳಿಂದ ಚಿತ್ರವಿಚಿತ್ರವಾಗಿ ಚಿತ್ರಿಸಲ್ಪಟ್ಟುದಾಗಿಯೂ ಇದ್ದ ಒಂದು ಭವ್ಯ ಭವನವು ಗೋಚರವಾಯಿತು. ಭವನದ ಹೆಬ್ಬಾಗಿಲು ಭಯಂಕರಾಕಾರಿಗಳಾದ ಸಿದ್ದೀಭಟರಿಂದ ಸುರಕ್ಷಿತವಾಗಿದ್ದಿತು.

ಅತ್ಯವಸರದಿಂದ ಹೋಗುತ್ತಿದ್ದ ನಮ್ಮ ಶ್ರೋತ್ರಿಯ ಬ್ರಾಹ್ಮಣನು ಆ ಭವ್ಯ ಮಂದಿರವನ್ನಾಗಲಿ ಆ ಯಮಭಟರಂತಿರುವ ಕಾವಲಿನವರನ್ನಾಗಲಿ ನೋಡದೆ ತನ್ನ ದಾರಿಯನ್ನೇ ನೋಡುತ್ತ ಹೋಗುತ್ತಿದ್ದನು. ಆಗ ಆ ಮಂದಿರದೊಳಗಿನಿಂದ ಹೀಗೆ ಗಾನವು ಕೇಳಬಂದಿತು: —

ಎಲ್ಲಾ ರಾಮಮಯಂ — ಜಗವೆಲ್ಲಾ ರಾಮಮಯಂ ||ಪ||
ಅಂತರಂಗದೊಳಗಾತ್ಮಾರಾಮನ —
ಸಂತರೂಪದೊಳಗಂದವತೋರಲು ||ಎಲ್ಲಾ|| ||೧||
ಸೋಮಸೂರ್ಯರುಂ ಸುರರುಭಂಗಳುಂ |
ಆಮಹಾಂಬುದಿಯವನೀಜಂಬುಗಳ್ ||೨||
ಅಂಡಾಂಡಂಗಳು — ಪಿಂಡಾಂಡಂಗಳು |
ಬ್ರಹ್ಮಾಂಡಂಗಳು ಬ್ರಹ್ಮನಾದಿಯಿಂದೆಲ್ಲಾ ||೩||
ನದೀ-ವನಂಗಳ್ ನಾನಾಮೃಗಂಗಳ್ |
ವಿದಿತ ಕರ್ಮಗಳ್ — ವೇದಶಾಸ್ತ್ರಂಗಳ್ ||೪||
ಅಷ್ಟದಿಕ್ಕುಗಳಾದಿಶೇಷನುಂ |
ಅಷ್ಟವಸುಗಳುಂ ಅರಿಷಡ್ವರ್ಗಮುಂ ||೫||

ಮೃದು ಮಧುರವಾಗಿಯೂ ಭಕ್ತಿರಸಭರಿತವಾಗಿಯೂ ಇರುವ ಈ ರಾಮನಾಮಸಂಕೀರ್ತನವು ಪಥಿಕನಾಗಿದ್ದ ಬ್ರಾಹ್ಮಣನ ಕಿವಿಯಲ್ಲಿ ಬಿದ್ದಿತು. ಬ್ರಾಹ್ಮಣನು ಕನ್ನಡದಲ್ಲಿ ಪರಿಶ್ರಮವಿಲ್ಲದವನಾದರೂ ಅದರಲ್ಲಿ ಸಂಸ್ಕೃತ ಬಾಹುಳ್ಯವಿದ್ದುದರಿಂದ ಅದರ ತಾತ್ಪರ್ಯವನ್ನು ಗ್ರಹಿಸಿ, ಭಕ್ತಾಗ್ರೇಸರನಾವನೋ ಒಳಗೆ ಕೀರ್ತಿಸುತ್ತಿರುವನೆಂದು ತಿಳಿದು ಭವನವನ್ನು ಸುತ್ತಲೂ ಚನ್ನಾಗಿ ನೋಡಿದನು; ಭವನದ ಲಕ್ಷಣಗಳಿಂದ ಅದೊಂದು ಕಾರಾಗ್ರಹವಿರಬಹುದೆಂದು ಊಹೆಯುಂಟಾಯಿತು. ಆವನೋ ಓರ್ವ ವಿಷ್ಣುಭಕ್ತನು ಅಲ್ಲಿ ಸಿಕ್ಕುಬಿದ್ದಿರುವನೆಂದೆಣಿಸಿ, ಸಮಾಚಾರವನ್ನು ಪೂರ್ಣವಾಗಿ ತಿಳಿಯಲು ಕಾವಲಿದ್ದ ಭಟರ ಬಳಿಗೆ ಬಂದು ಕಾರಾಗ್ರಹದೊಳಗಿರುವ

ವನಾರೆಂದು ಕೇಳಿದನು. ಭಟರು ನಮ್ಮ ಪಥಿಕ ಬ್ರಾಹ್ಮಣನನ್ನು ಬೆದರಿಸಿ ಓಡಿಸಿದರು; ಆದರೂ ವ್ಯವಹಾರಜ್ಞನಾದ ನಮ್ಮ ಬ್ರಾಹ್ಮಣನು ಕೂಡಲೆ ತನ್ನಲ್ಲಿದ್ದ ಒಂದು ರೂಪಾಯಿಯನ್ನು ತೆಗೆದು ಆ ಭಟರ ಕೈಗೆ ಕೊಟ್ಟನು. ಆ ಶ್ವೇತದೇವತೆ ಕೈಗೆ ಬಿದ್ದ ಕೂಡಲೆ ಭಟರ ಕೋಪ-ತಾಪಗಳೆಲ್ಲವೂ ಹಾರಿ ಹೋದುವು. ಅವರು ವಿನೀತರಾಗಿ—ಈಗ ಹಾಡುತ್ತಿರುವವನು "ಭದ್ರಾಚಲ ರಾಮದಾಸನು" ಎಂದು ಹೇಳಿ ಅವನು ಕಾರಾಗ್ರಹದಲ್ಲಿರಲು ಕಾರಣವನ್ನೂ ಸವಿಸ್ತರವಾಗಿ ತಿಳಿಸಿದರು. ರಾಮದಾಸನ ಜಗದ್ವಿಖ್ಯಾತವಾದ ಕೀರ್ತಿಯನ್ನು ಕೇಳಿದ್ದ ಪಥಿಕನು ಇಂತಹ ಮಹಾನುಭಾವನ ದರ್ಶನವನ್ನು ಮಾಡದೆ ಹೋಗುವುದು ಪಾಪಕರವೆಂದು ಅಲ್ಲಿದ್ದ ಭಟರಿಗೆ ಮತ್ತೊಂದು ಸುವರ್ಣಪುಷ್ಪವನ್ನೊಪ್ಪಿಸಿ ಕಾರಾಗ್ರಹವನ್ನು ಪ್ರವೇಶಿಸಿ, ಭಕ್ತಿಪರವಶನಾಗಿ ಗಾನ ಮಾಡುತ್ತಿದ್ದ ಗೋಪಣ್ಣನನ್ನು ನೋಡಿ ಭಕ್ತಿಯಿಂದ ನಮಸ್ಕರಿಸಿ, "ಮಹಾತ್ಮಾ! ನಿನ್ನಂತಹ ಭಗವದ್ಭಕ್ತನಿಗೂ ಸಹ ಕರ್ಮಫಲವನ್ನು ಅನುಭವಿಸದು ತಪ್ಪಲಿಲ್ಲವಲ್ಲಾ" ಎಂದು ವಿಷಣ್ಣಭಾವದಿಂದ ಹೇಳಿದನು. ಆದರೆ ರಾಮದಾಸನು ರಾಮಧ್ಯಾನದಲ್ಲಿಯೇ ನಿಮಗ್ನನಾಗಿದ್ದುದರಿಂದ ಈತನನ್ನು ನೋಡಲಿಲ್ಲ. ಕಡೆಗೆ ಬ್ರಾಹ್ಮಣನು ಸ್ವಲ್ಪ ಹೊತ್ತು ಆ ಭಕ್ತಶಿರೋಮಣಿಯನ್ನೇ ನೋಡುತ್ತಿದ್ದು ಬಳಿಕ ಅಲ್ಲಿಂದ ಹೊರಟು ಗೋಳಕೊಂಡ ಪಟ್ಟಣವನ್ನು ಪ್ರವೇಶಿಸಿದನು.

ಈ ಕಥಾಕಾಲದಲ್ಲಿ ಗೋಳಕೊಂಡ ಪಟ್ಟಣವೂ ಅಲ್ಲಿಯ ದುರ್ಗವೂ ಅತ್ಯಂತ ವೈಭವದೊಡನೆ ಕೂಡಿದ್ದಿತು. ಆ ಕಾಲದ ಆಂಧ್ರದೇಶಕ್ಕೆಲ್ಲ ಇದೇ ರಾಜಧಾನಿಯಾಗಿದ್ದಿತು. "ಪಟ್ಟಣ" ಎಂದರೆ ಗೋಳಕೊಂಡ ಪಟ್ಟಣವೆಂದೇ ಅರ್ಥವಾಗಿತ್ತೇ ಹೊರತು ಚೆನ್ನಪಟ್ಟಣವೆಂದು ಅರ್ಥವಾಗುತ್ತಿರಲಿಲ್ಲ. ಆ ಕಾಲದಲ್ಲಿ ಚೆನ್ನಪಟ್ಟಣ (ಮದ್ರಾಸು) ವು ಒಂದು ಬೆಸ್ತರ ಹಳ್ಳಿಯಾಗಿದ್ದಿತು. ನಮ್ಮ ಬ್ರಾಹ್ಮಣನು ಹೋಗುತ್ತಿದ್ದ ರಾಜಮಾರ್ಗದ ಇಕ್ಕೆಡೆಗಳಲ್ಲಿಯೂ ಆಕಾಶವನ್ನು ಮುಟ್ಟುತ್ತಿರುವಂತಹ ಅಸಂಖ್ಯಾಕ ಸೌಧ

ಗಳೂ ಛತ್ರಗಳೂ ಮಸೀದಿಗಳೂ ದೇವಸ್ಥಾನಗಳೂ ಅತ್ಯಂತ ಆಶ್ಚರ್ಯವನ್ನುಂಟು ಮಾಡುತ್ತಿದ್ದರೂ ನಮ್ಮ ಪಥಿಕನು ಅದಾವುದನ್ನೂ ಕಣ್ಣೆತ್ತಿ ನೋಡದೆ "ಮಾದನ್ನನವರ ಮಂದಿರವಾವುದು" ಎಂದು ಕೇಳುತ್ತ ತ್ವರೆಯಾಗಿ ಹೋಗುತ್ತಿದ್ದನು.

ಆ ಕಾಲದಲ್ಲಿ ಗೋಲಕೊಂಡ ಪಟ್ಟಣದಲ್ಲಿ ಮಾದನ್ನ ಪಂತುಲುಯವರು ಮುಖ್ಯ ಮಂತ್ರಿಯಾಗಿಯೂ ಆತನ ಅಣ್ಣನಾದ ಅಕ್ಕನ್ನ ಪಂತುಲುಯವರು ಮುಖ್ಯ ಸೇನಾಪತಿಯಾಗಿಯೂ ಇದ್ದರು. ಈ ಮಂತ್ರಿಪುಂಗವರ ಬುದ್ಧಿ ವೈಭವವನ್ನೂ ರಾಜಕಾರ್ಯಕೌಶಲವನ್ನೂ ಸ್ವಧರ್ಮಶ್ರದ್ಧೆಯನ್ನೂ ದಾನ ಶೀಲತೆಯನ್ನೂ ಈಗಲೂ ಜನಗಳು ಹೇಳಿಕೊಳ್ಳುತ್ತಿರುವರು. ಇಂತಹ ಮಹಾನುಭಾವರು ಅಧಿಕಾರಿಗಳಾಗಿದ್ದುದರಿಂದಲೇ ಆ ರಾಜ್ಯವು ರಾಮರಾಜ್ಯವಾಗಿದ್ದಿತು.

ಅಕ್ಕಣ್ಣನವರು ಅಣ್ಣನೆಂದೂ ಮಾದನ್ನನವರು ತಮ್ಮನೆಂದೂ ಸಾಮಾನ್ಯವಾಗಿ ಜನರು ಹೇಳಿಕೊಳ್ಳುವರು. ಆದರೆ ಅಕ್ಕಣ್ಣನವರು ನಿಜವಾಗಿ ಸಹೋದರರಲ್ಲವೆಂದು ಒಂದು ಕಥೆಯಿರುವುದು. ಮೊದಲು ಅಕ್ಕಣ್ಣನವರು ಒಬ್ಬ ಬಡ ಬ್ರಾಹ್ಮಣನಂತೆ. ಮಾದನ್ನನವರು ಗೋಲಕೊಂಡದಲ್ಲಿ ಮಂತ್ರಿತ್ವವನ್ನು ವಹಿಸಿದಾಗ ಒಂದು ದಿನ ಅವನ ಮನೆಗೆ ಬಂದರಂತೆ! ತನ್ನ ಭಾರ್ಯೆಯ ಬಂಧುವೆಂದು ಮಾದನ್ನನವರೂ ತನ್ನ ಭರ್ತನ ಬಂಧುವೆಂದು ಮಾದನ್ನನವರ ಭಾರ್ಯೆಯೂ ಇವರನ್ನು ಮರ್ಯಾದೆಯಿಂದ ಕಾಣುತ್ತಿದ್ದರು. ಅಕ್ಕಣ್ಣನವರು ವಯಸ್ಸಿನಲ್ಲಿ ದೊಡ್ಡವರಾಗಿದ್ದುದರಿಂದ ಅವರನ್ನು ಮಾದನ್ನನವರು ಅಣ್ಣನೆಂದು ಕರೆಯುತ್ತಿದ್ದರು. ಹೀಗೆ ಕೆಲವು ದಿನಗಳು ಕಳೆದ ತರುವಾಯ ಒಂದುದಿನ ಮಾದನ್ನನವರು ತಮ್ಮ ಭಾರ್ಯೆಯೊಡನೆ ಅಕ್ಕಣ್ಣನವರ ವಿಷಯವಾಗಿ ಮಾತನಾಡಲು ಆತನು ಆಕೆಯ ಬಂಧುವಲ್ಲವೆಂದು ತಿಳಿಯಿತು. ಅನಂತರ ಮಾದನ್ನನವರು ಅಕ್ಕಣ್ಣನವರನ್ನು ಕುರಿತು—"ನಮ್ಮಿಬ್ಬರಿಗೂ ಇರುವ ಬಂಧುತ್ವವ

ಸ್ನು ತಿಳಿಸಿರಿ" ಎಂದು ಕೇಳಲು ಅಕ್ಕಣ್ಣನವರು—"ಅಯ್ಯಾ ನಾನು ದೊಡ್ಡಮ್ಮನ ಮಗನು; ನೀನು ಚಿಕ್ಕಮ್ಮನ ಮಗನು. ಅಕ್ಕತಂಗಿಯರ ಮಕ್ಕಳಾದುದರಿಂದ ಅಣ್ಣತಮ್ಮಂದಿರು. ಈ ರಹಸ್ಯವನ್ನು ಮನಸ್ಸಿನಲ್ಲಿಟ್ಟುಕೋ. ನಾವು ಎಂದಿನಂತೆ ಅಣ್ಣತಮ್ಮಂದಿರಂತೆಯೇ ಇರೋಣ" ಎಂದರಂತೆ ! ಅಕ್ಕಣ್ಣನವರ ಬುದ್ಧಿ ಚಾತುರ್ಯಕ್ಕೆ ಮೆಚ್ಚಿ ಅಂದಿನಿಂದಲೂ ಮಾದಣ್ಣನವರು ಆತನಲ್ಲಿ ಅಣ್ಣನಂತೆಯೆ ವಿಶ್ವಾಸದಿಂದಿದ್ದರಂತೆ ! ಈ ಕಥೆಯ ಸತ್ಯಾಸತ್ಯಗಳನ್ನು ನಿರ್ಣಯಿಸಲಾಗದಿದ್ದರೂ ಈ ಕಥೆಯು ಕೇಳುವವರಿಗೆ ಇಂಪಾಗಿರುವುದು. ಇರಲಿ ! ಇನ್ನು ನಮ್ಮ ಬ್ರಾಹ್ಮಣನ ವಿಚಾರವೇನಾಯಿತೆಂದು ನೋಡುವ.

ಬ್ರಾಹ್ಮಣನು ಮಾದಣ್ಣನವರ ಮಂದಿರಕ್ಕೆ ದಾರಿಯನ್ನು ಕೇಳುತ್ತ ಹೋಗಿ ಸೂರ್ಯೋದಯವಾದ ಎರಡು ಗಳಿಗೆಯೊಳಗಾಗಿ ಮಂದಿರದ ಹೊರಬಾಗಿಲಿನ ಬಳಿಗೆ ಬಂದನು. ಮಂದಿರದ ಸುತ್ತಲೂ ಕೋಟೆಯು ಕಟ್ಟಲ್ಪಟ್ಟಿದ್ದಿತು. ಕೋಟೆಯೊಂದೇ ಆದರೂ ಮಂದಿರಕ್ಕೆ ಸೇರಬೇಕಾದಲ್ಲಿ ನಾಲ್ಕು ಬಾಗಿಲುಗಳನ್ನು ದಾಟಿ ಹೋಗಬೇಕು. ಪ್ರತಿಯೊಂದು ಬಾಗಿಲಿನಲ್ಲಿಯೂ ಆಯುಧಪಾಣಿಗಳಾಗಿದ್ದ ನಾಲ್ಕು ಮಂದಿ ಭಟರು ಕಾವಲಿದ್ದರು. ಇತರ ಸಮಯಗಳಲ್ಲಿ ಯಾರಿಗೂ ಪ್ರವೇಶವಿಲ್ಲದಿದ್ದರೂ ಪ್ರಾತಃಕಾಲದಲ್ಲಿ ಶಿವಪೂಜಾ ಸಮಯದಲ್ಲಿ ಮಾತ್ರ ಪಂಡಿತರಾದ ಬ್ರಾಹ್ಮಣೋತ್ತಮರಿಗೆ ಪ್ರವೇಶವಿತ್ತು. ಈ ಕಾರಣದಿಂದ ನಮ್ಮ ಶ್ರೋತಿಯ ಬ್ರಾಹ್ಮಣನೂ ಒಳಗೆ ಹೋಗಲು ಶ್ರಮವಾಗಲಿಲ್ಲ. ಬ್ರಾಹ್ಮಣವೇಷದಿಂದ ಮೋಸಗಾರರಾದ ಶತ್ರುಗಳು ಯಾರಾದರೂ ಒಳಗೆ ಪ್ರವೇಶಿಸುವರೇನೆಂಬ ಶಂಕೆಯಿಂದ ಅಲ್ಲಿಗೆ ಬಂದ ಬ್ರಾಹ್ಮಣರಿಗೆಲ್ಲಾ ಸಂಧ್ಯಾವಂದನಾದಿಗಳಲ್ಲಿ ಪರೀಕ್ಷೆಯು ನಡೆಯುತ್ತಿದ್ದಿತು. ಇದಕ್ಕಾಗಿ ಮಂದಿರದ ನಾಲ್ಕು ದ್ವಾರಗಳಲ್ಲಿಯೂ ನಾಲ್ವರೂ ಬ್ರಾಹ್ಮಣರು ಪರೀಕ್ಷಕರಾಗಿ ನೇಮಿಸಲ್ಪಟ್ಟಿದ್ದರು. ನಮ್ಮ ಶ್ರೋತ್ರಿಯ ಬ್ರಾಹ್ಮಣನೂ ಅವನ ಶಿಷ್ಯನೂ

ಮೊದಲನೆಯ ದ್ವಾರದಲ್ಲಿ ಸಂಧ್ಯಾವಂದನವನ್ನೂ ಎರಡನೆಯ ದ್ವಾರದಲ್ಲಿ ನಮಕ ಚಮಕಗಳನ್ನೂ ಮೂರನೆಯ ದ್ವಾರದಲ್ಲಿ ಬ್ರಹ್ಮಯಜ್ಞವನ್ನೂ ನಾಲ್ಕನೆಯ ದ್ವಾರದಲ್ಲಿ ಪಿತೃತರ್ಪಣ ಮಂತ್ರಗಳನ್ನೂ ಸುಸ್ವರವಾಗಿಯೂ ಘಂಟಾನಾದದಂತೆಯೂ ಹೇಳಿ ಒಳಗೆ ಪ್ರವೇಶಿಸಿದರು.

ಬ್ರಾಹ್ಮಣನು ಪೂಜಾಗೃಹವನ್ನು ಪ್ರವೇಶಿಸಿ, ಮರಕತಲಿಂಗವನ್ನು ಅಂಗೈಯಲ್ಲಿರಿಸಿಕೊಂಡು ಭಕ್ತಿ ಭಾವದಿಂದ ಪೂಜೆ, ಮಾಡುತ್ತಿದ್ದ ಮಾದನ್ನ ಪಂತುಲುಯವರನ್ನೂ ಅವರ ಸುತ್ತಲೂ ಉಚಿತಾಸನಾಸೀನರಾಗಿದ್ದ ವಿವಿಧ ವಿದ್ಯಾಪಾರೀಣರಾದ ಪಂಡಿತೋತ್ತಮರನ್ನೂ ನೋಡಿದನು. ಆ ಮಂತ್ರಿ ವರ್ಯನ ಒಂದುಭಾಗದಲ್ಲಿ ಜಟಾಪಾಠಿಗಳೂ ಸಾಮಗಾಯಕರೂ ಎಡಭಾಗ ದಲ್ಲಿ ವೈಣಿಕರೂ ಸಂಗೀತ ಪಾಠಕರೂ ಮುಂಭಾಗದಲ್ಲಿ ಪೂರ್ವೋತ್ತರ ಮೀಮಾಂಸಕರೂ ಮಂಡಿಸಿದ್ದರು. ಮಂತ್ರಿವರ್ಯರ ಶಿವ ಪೂಜಾವಿ ಧಿಯು ಮುಗಿಯುತ್ತ ಬಂದಾಗ ಅಲ್ಲಿದ್ದ ವೇದಪಾಠಕರು ಪರಸ್ಪರ "ನೀವು ಉಪಕ್ರಮಿಸಿ ನೀವು ಉಪಕ್ರಮಿಸಿ" ಎಂದು ಹೇಳಲಾರಂಭಿಸಿದರು. ಇದೇ ಸುಸಮಯವೆಂದು ನಮ್ಮ ಶ್ರೋತ್ರಿಯ ಬ್ರಾಹ್ಮಣನು ವೇದಪಾಠಕರ ಸಮೂಹವನ್ನು ಸೇರಿ, "ಸ್ವಾಮಿ, ನೀವು ಯಾರೂ ಉಪಕ್ರಮಿಸಬೇಡಿ. ನಾನು ಉಪಕ್ರಮಿಸುವೆನು." ಎಂದು ಸಂಸ್ಕೃತ ಭಾಷೆಯಲ್ಲಿ ಹೇಳಿ ಆಶೀರ್ವ ಚನಪೂರ್ವಕವಾದ ಒಂದು ಮಂತ್ರವನ್ನು ಸುಸ್ವರವಾದ ಗಂಭೀರ ಧ್ವನಿ ಯಿಂದ ಹೇಳಿ, ಆ ಮಂತ್ರಕ್ಕೆ ಜಟೆಯನ್ನೂ ಘನವನ್ನೂ ಹೇಳಿ ಅದಕ್ಕೆ ವಿದ್ಯಾರಣ್ಯಭಾಷ್ಯವನ್ನು ಅನುಸರಿಸಿ ಒಂದು ಅರ್ಥವನ್ನೂ ಮಹೀಧರನ ಭಾಷ್ಯವನ್ನು ಅನುಸರಿಸಿ ಒಂದು ಅರ್ಥವನ್ನೂ ಭಟ್ಟ ಭಾಸ್ಕರನ ಭಾಷ್ಯ ವನ್ನು ಅನುಸರಿಸಿ ಮೂರನೆಯ ಅರ್ಥವನ್ನೂ ಹೇಳಿ ಈ ಮೂರಕ್ಕೂ ಸಮ ನ್ವಯವನ್ನೂ ಹೇಳಿದನು. ಸಭಾಸದರೂ ಮಾದನ್ನ ಪಂತುಲುಯವರೂ ಆತನ ಪಾಂಡಿತ್ಯಕ್ಕೆ ಅತ್ಯಂತ ಸಂತೋಷಪಟ್ಟರು. ಅನಂತರ ಇತರ ಪಂಡಿ ತರೂ ತಮ್ಮ ತಮ್ಮ ವಿದ್ಯೆಗಳನ್ನು ತೋರ್ಪಡಿಸಿದರು. ಇಷ್ಟರಲ್ಲಿ ನಮ್ಮ

ಬ್ರಾಹ್ಮಣನು ಸಂಗೀತ ಪಾಠಕರ ಗುಂಪನ್ನು ಸೇರಿವೀಣೆಯನ್ನು ಹಿಡಿದು ಒಂದು ವರ್ಣವನ್ನೂ ಒಂದು ಕೃತಿಯನ್ನೂ ಹಾಡಿ, ಮನೋಹರವಾದ ಒಂದು ರಾಮಕೀರ್ತನೆಯನ್ನೂ ಸುಸ್ವರವಾಗಿ ಹಾಡಿದನು. ಇಂತಹ ಸಂಗೀತ ವಿದ್ಯಾವಿಶಾರದನಾರೆಂದು ಮಾದನ್ನವರು ತಿರುಗಿನೋಡಲು ಈತನನ್ನು ಕಂಡು ಆಶ್ಚರ್ಯಪಟ್ಟರು. ಮತ್ತೆ ನಮ್ಮ ಬ್ರಾಹ್ಮಣನು ವಿದ್ವತ್ಸಮೂಹದ ಮಧ್ಯ ಸೇರಿ, ಬ್ರಹ್ಮಸೂತ್ರದಲ್ಲಿ ಮೊದಲನೆಯದಾದ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬುದಕ್ಕೆ ಶಂಕರ, ರಾಮಾನುಜ, ಮಧ್ವಾಚಾರ್ಯರ ತ್ರಿವಿಧಭಾಷ್ಯಗಳನ್ನೂ ವಿವರಿಸಿ ತದನಂತರ ಎಲ್ಲವನ್ನೂ ಪೂರ್ವಪಕ್ಷಮಾಡಿ ಕಡೆಗೆ ಎಲ್ಲಕ್ಕೂ ಸಮನ್ವಯವನ್ನು ಮಾಡಿದನು. ಈ ರೀತಿಯಾಗಿ ಅಪಾರ ವಿದ್ಯಾಮಹಿಮೆಯನ್ನು ತೋರಿಸುತ್ತಿದ್ದ ಬ್ರಾಹ್ಮಣನನ್ನು ನೋಡಿ ಸಭಾಸದರೆಲ್ಲರೂ ಈತನನ್ನು ದ್ವಿತೀಯ ವೇದವ್ಯಾಸನೆಂದೇ ತಿಳಿದರು. ಮಾದನ್ನ ಪಂತುಲುಯವರು ಬ್ರಾಹ್ಮಣನ ಅಪಾರಪಾಂಡಿತ್ಯಕ್ಕೆ ಸಂತೋಷಪಟ್ಟು ಆತನಿಗೆ ಸಾವಿರ ರೂಪಾಯಿಗಳನ್ನು ನೂರು ಹದಿನಾರು ರೂಪಾಯಿ ಬೆಲೆಯುಳ್ಳ ಉತ್ತಮವಾದ ಶಾಲು ಜೋಡಿಯನ್ನೂ ಬಹುಮಾನವಾಗಿ ಕೊಡಹೋದರು.

ಆಗ ಬ್ರಾಹ್ಮಣನು " ಮಂತ್ರಿ ಪುಂಗವ! ನಾನು ಈ ಬಹುಮಾನಕ್ಕಾಗಿ ಬರಲಿಲ್ಲ. ಒಂದು ಲಘುಕಾರ್ಯಕ್ಕಾಗಿ ಬಂದಿರುವೆನು. ಅಪ್ಪಣೆಯಾದರೆ ಏಕಾಂತದಲ್ಲಿ ವಿಜ್ಞಾಪಿಸಿಕೊಳ್ಳುವೆನು. " ಎಂದು ಸಂಸ್ಕೃತ ಭಾಷೆಯಲ್ಲಿ ಹೇಳಿದನು. ಅದಕ್ಕೆ ಮಂತ್ರಿಗಳೂ ಸಮ್ಮತಿಸಿ ಬ್ರಾಹ್ಮಣನನ್ನು ತಮ್ಮ ಮನೆಯಲ್ಲಿಯೇ ನಿಲ್ಲಿಸಿಕೊಂಡು ಉಳಿದ ಬ್ರಾಹ್ಮಣರಿಗೆಲ್ಲ ಯಥೋಚಿತವಾದ ಬಹುಮಾನಗಳನ್ನಿತ್ತು ಸುಮಾರು ಒಂಭತ್ತು ಘಂಟೆಗೆ ವಿದ್ವತ್ಸಭೆಯ ಕೆಲಸವನ್ನು ಪೂರೈಸಿ ತೆರಳಿದರು.

ಭೋಜನಾನಂತರದಲ್ಲಿ ಅಕ್ಕಣ್ಣ ಮಾದನ್ನರಿಬ್ಬರೂ ಏಕಾಂತ ಸ್ಥಲದಲ್ಲಿ ಕುಳಿತುಕೊಂಡು ಶ್ರೋತ್ರಿಯ ಬ್ರಾಹ್ಮಣನನ್ನು ಕರೆಸಿದರು. ಅವರ ವಲಗ ಹೀಗೆ ಸಂಭಾಷಣೆಗಳು ನಡೆದುವು.

ಮಾದಣ್ಣ :— ಪಂಡಿತವರ್ಯ! ಏಕಾಂತದಲ್ಲಿ ಹೇಳಬೇಕೆಂದಿರುವ ಸಮಾಚಾರವಾವುದು.

ಬ್ರಾಹ್ಮಣ :— ಮಂತ್ರಿವರ್ಯ! ನಾನು ಬಹುಮಾನಕ್ಕಾಗಿ ಬರಲಿಲ್ಲ. ನಿಮಗೊಂದು ವರ್ತಮಾನವನ್ನು ತಿಳಿಸಲು ಬಂದಿರುವೆನು. ಹಿಂದುಗಳಿಗೆ ಶತ್ರುವಾದ ಔರಂಗಜೇಬನು ಡಿಲ್ಲೀ ಪಟ್ಟಣದಲ್ಲಿ ದೊಡ್ಡ ಸೈನ್ಯವನ್ನು ಕೂಡಿಸುತ್ತಿರುವನು. ಆತನು ಯಾರ ಮೇಲೆ ದಂಡೆತ್ತಿ ಹೊರಡುವನೋ ತಿಳಿಯದು. ಕೆಲವರು ರಾಜಪುತ್ರವೀರನಾದ ರಾಜಸಿಂಹನಮೇಲೆ ದಂಡೆತ್ತಿ ಬರುವನೆಂದೂ ಕೆಲವರು ಗೋಲಕೊಂಡದಮೇಲೆ ಹೊರಡುವನೆಂದೂ ಕೆಲವರು ಮಹಾರಾಷ್ಟ್ರದಮೇಲೆ ದಂಡೆತ್ತಿ ಹೊರಡುವನೆಂದೂ ಹೇಳುತ್ತಿರುವರು. ಹೇಗೂ ಆತನು ಆವುದೇ ಒಂದು ಹಿಂದೂ ರಾಜ್ಯವನ್ನು ನಿರ್ಮೂಲಮಾಡುವುದಕ್ಕಾಗಿಯೇ ಯತ್ನಿಸಿರುವನು. ನಾನು ಹಿಂದೂ ರಾಜರಿಗೆಲ್ಲ ಈ ವರ್ತಮಾನವನ್ನು ತಿಳಿಸಬೇಕೆಂದು ಹೊರಟು ರಾಜಪುತ್ರರಾಜರೆಲ್ಲರಿಗೂ ತಿಳಿಸಿ, ಬುಂದಲ್‌ಖಂಡದಲ್ಲಿರುವ ಛತ್ರಸಾಲ್ ಮಹಾರಾಜನಿಗೂ ಪನಹಾಳಾದುರ್ಗದಲ್ಲಿರುವ ಸಂಭಾಜೀ ಮಹಾರಾಜನಿಗೂ ತಿಳಿಸಿ ಇಲ್ಲಿಗೆ ಬಂದಿರುವೆನು. ಇಲ್ಲಿ ಬ್ರಾಹ್ಮಣರಾದ ನೀವು ಮಂತ್ರಿಗಳಾಗಿರುವುದರಿಂದಲೂ ನವಾಬನು ಯೋಗ್ಯವಾಗಿ ಹಿಂದುಗಳನ್ನೂ ಮಹಮ್ಮದೀಯರನ್ನೂ ಏಕರೀತಿಯಾಗಿ ನೋಡುತ್ತಿರುವುದರಿಂದಲೂ ಈ ರಾಜ್ಯವನ್ನು ಹಿಂದೂರಾಜ್ಯವೆಂಬದಾಗಿಯೇ ಭಾವಿಸಿ ಇಲ್ಲಿಗೆ ಬಂದಿರುವೆನು. ಸುಮ್ಮನೆ ನೋಡುವುದು ಅಸಾಧ್ಯವೆಂದು ತಿಳಿದು ನಿಮ್ಮ ಸಭೆಯಲ್ಲಿ ನನ್ನ ವಿದ್ಯಾಪ್ರತಾಪವನ್ನು ತೋರಿಸಿ ನಿಮ್ಮ ದೃಷ್ಟಿಯನ್ನು ಆಕರ್ಷಿಸಿದೆನು; ಇದಲ್ಲದೆ ಬೇರೆ ಕಾರ್ಯವಾವುದೂ ಇಲ್ಲ. ಎಂದನು.

ಮಂತ್ರಿಗಳಿಬ್ಬರೂ ಇದನ್ನು ಕೇಳಿ, ಈ ಬ್ರಾಹ್ಮಣನು ತಮ್ಮನ್ನು ಅನುಗ್ರಹಿಸುವುದಕ್ಕಾಗಿಯೇ ಬಂದಿರುವ ಸಮಾಚಾರವನ್ನು ತಿಳಿದು ಆಶ್ಚರ್ಯಾತಿರೇಕದಿಂದ ಸ್ವಲ್ಪಹೊತ್ತು ಆತನ ಮುಖವನ್ನೇ ನೋಡುತ್ತಿದ್ದು, ಆ ಬಳಿಕ ಹೀಗೆಂದರು :—

" ಬ್ರಾಹ್ಮಣೋತ್ತಮ ! ನೀವು ಮನುಷ್ಯಮಾತ್ರರಲ್ಲವೆಂದೂ ನಮಗೆ ಸಹಾಯಮಾಡಬೇಕೆಂದು ಬಂದಿರುವ ಸಾಕ್ಷಾತ್ ಸುರಗುರುವೆಂದೂ ಭಾವಿಸುವೆವು. ನಿಮ್ಮ ನಾಮಧೇಯವನ್ನೂ ಸ್ಥಳವನ್ನೂ ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥಿಸುವೆವು."

ಬ್ರಾಹ್ಮಣ :—ಮಂತ್ರಿಶ್ರೇಷ್ಠರೆ ! ನನ್ನ ಕುಲಗೋತ್ರಗಳಿಂದಲೂ ಗ್ರಾಮನಾಮಗಳಿಂದಲೂ ನಿಮಗಾವ ಪ್ರಯೋಜನವೂ ಇಲ್ಲ. ನಾನು ನಿಮಗೆ ತಿಳಿಸಿರುವ ಕಾರ್ಯದಲ್ಲಿ ನೀವು ತಕ್ಕ ಪ್ರಯತ್ನವನ್ನು ಕೈಕೊಳ್ಳಿರಿ. ನಾನು ಬಂದಕೆಲಸವಾಯಿತು. ಇನ್ನು ಹೊರಡುವೆನು.

ಮಂತ್ರಿಗಳ ಉತ್ತರವನ್ನು ನಿರೀಕ್ಷಿಸದೆ ಶಿಷ್ಯನೊಡನೆ ಹೊರಡುತ್ತಿರುವ ಬ್ರಾಹ್ಮಣನನ್ನು ನೋಡಿ ಅವರು ಎಷ್ಟೋ ಬಗೆಯಿಂದ ಒಂದು ದಿನವಾದರೂ ಇದ್ದು ತಮ್ಮ ಆತಿಥ್ಯವನ್ನು ಸ್ವೀಕರಿಸಿ ತೆರಳಬೇಕೆಂದು ಪ್ರಾರ್ಥಿಸಿದರೂ ಆತನು ನಿಲ್ಲದೆ ಹೊರಟುಹೋದನು. ಅನಂತರ ಮಂತ್ರಿಗಳಿಬ್ಬರೂ ಹೀಗೆ ಆಲೋಚಿಸಿದರು :—

ಮಾದಣ್ಣ :—ಅಣ್ಣಾ ! ಈ ಬ್ರಾಹ್ಮಣನ ಚರ್ಯೆಗಳು ಅತ್ಯದ್ಭುತವಾಗಿರುವುವು. ಹೆಸರನ್ನೂ ಹೇಳಲಾರನು, ಒಂದು ಕಾಸನ್ನೂ ಮುಟ್ಟಲಾರನು ; ಒಂದು ದಿನವಿರೆಂದರೂ ಇರನು. ಇದರಲ್ಲಿ ಮೋಸವೇನೂ ಇರಲಾರದಷ್ಟೆ ?

ಅಕ್ಕಣ್ಣ :—ನೀನು ಯಾವಾಗ ನೋಡಿದರೂ ಸಂಶಯಗ್ರಸ್ತನೇ ! ಈ ಬ್ರಾಹ್ಮಣನು ಹೇಳಿದ ಮಾತುಗಳಲ್ಲಿ ಸಂದೇಹಪಡುವ ಅಂಶವೇನೂ ಇಲ್ಲ. ಎಲ್ಲವೂ ನಮಗೆ ಶುಭಕರವೇ ಸರಿ.

ಮಾದಣ್ಣ :—ನನಗೂ ಹಾಗೆಯೇ ತೋರುವುದು. ಆದರೂ ರಾಜ್ಯಾಂಗವಿಚಾರಗಳನ್ನು ಕುರಿತು ಆಲೋಚಿಸುವಾಗ ಎಲ್ಲಾ ವಿಧವಾದ ವಿಕಲ್ಪಗಳನ್ನೂ ಚರ್ಚಿಸಬೇಕಲ್ಲವೆ ?

ಅಕ್ಕಣ್ಣ—ಇನ್ನು ಸಂಶಯವನ್ನು ಬಿಟ್ಟು ಆತನ ಸೂಚನೆಯಂತೆ ಸೈನ್ಯವನ್ನು ಸಿದ್ಧಪಡಿಸುವುದು ಯುಕ್ತವು.

ಮಾದನ್ನ—ಹಾಗಲ್ಲ ; ಗೋಲಕೊಂಡದ ಮೇಲೆ ಬಾದಶಹನು ದಂಡೆತ್ತಿಬರಲು ಕಾರಣವೇನೆಂಬುದನ್ನು ಯೋಚಿಸಬೇಕು !

ಅಕ್ಕಣ್ಣಾ—ಸರಿ ; ಈ ಕಾಲದಲ್ಲಿ ಕಾರಣವುಬೇರೆ ಬೇಕೆ ?

ಮಾದನ್ನ ;—ಈ ಬ್ರಾಹ್ಮಣನು ಬಂದು ಮುಖಾ ಆಪ್ತನಂತೆ ಹೇಳಿದ ಮಾತ್ರಕ್ಕೆ ನಂಬಿ ನಾವು ಸೈನ್ಯವನ್ನು ಕೂಡಿಸುವುದು ಸರಿಯಲ್ಲ. ಒಂದು ವೇಳೆ ಬ್ರಾಹ್ಮಣನು ಹೇಳಿದುದು ಸುಳ್ಳಾಗಿದ್ದರೆ ಯುದ್ಧಕ್ಕೆ ನಾವೇ ಮೊದಲು ಮಾಡಿದಂತಾಗುವುದಿಲ್ಲವೆ ?

ಅಕ್ಕಣ್ಣ :—ನಿನ್ನ ಊಹೆ ಒಂದುವೇಳೆ ನಿಜವಿರಬಹುದಾದರೂ ನಾವು ಯುದ್ಧಸನ್ನಾಹವನ್ನು ಮಾಡದಿರಕೂಡದು.

ಮಾದನ್ನ :—ಆಗಬಹುದು. ಆದರೆ, ಕೆಲವು ದಿನಗಳವರೆಗಾದರೂ ನಮ್ಮ ಸನ್ನಾಹವು ರಹಸ್ಯವಾಗಿರಬೇಕು. ಮತ್ತು ಈಗಲೇ ಒಬ್ಬ ಗೂಢಚಾರನನ್ನು ಅಲ್ಲಿಗೆ ಕಳುಹಿಸಿ, ಅಲ್ಲಿಯ ಸಮಾಚಾರವನ್ನು ತಿಳಿದು ಅನಂತರ ಸನ್ನಾಹವನ್ನು ಬಹಿರಂಗವಾಗಿ ಮಾಡಬಹುದು.

ಹೀಗೆ ಇವರು ಆಲೋಚಿಸಿ, ಡಿಲ್ಲೀನಗರಕ್ಕೆ ಕಳುಹಲು ತಕ್ಕ ಗೂಢಚಾರನನ್ನು ಹುಡುಕುತ್ತ ಕಡೆಗೆ ತಮ್ಮ ಬಳಿಯಲ್ಲಿ ಸರದಾರನಾಗಿದ್ದ ರೂಪಸಿಂಗನೆಂಬ ರಾಜಪುತ್ರನನ್ನು ಕಳುಹಲು ನಿಶ್ಚಯಿಸಿದರು.

ರೂಪಸಿಂಗನು ೩೨ ವರ್ಷಪ್ರಾಯದ ಒಬ್ಬ ರಜಪೂತವೀರನು. ೧೮-೧೨ ವರ್ಷಗಳ ಹಿಂದೆ ರಾಜಪುತ್ರಸಂಸ್ಥಾನದಿಂದ ಓಡಿಬಂದು ಗೋಲಕೊಂಡದುರ್ಗವನ್ನು ಸೇರಿ ಸೈನ್ಯದಲ್ಲ ಒಬ್ಬ ಸಿಪಾಯಿಯಾಗಿದ್ದು, ತನ್ನ ಅಪ್ರತಿಮ ಶೌರ್ಯಧೈರ್ಯಾತಿಶಯಗಳಿಂದ ಕ್ರಮಕ್ರಮವಾಗಿ ಅಭಿವೃದ್ಧಿಗೆ ಬಂದು ೪೦೦೦ ಸಿಪಾಯಿಗಳಿಗೂ ಸಾವಿರ ಕುದುರೆಗಳಿಗೂ ಅಧಿಪತಿಯಾದನು. ಅಷ್ಟೇ ಅಲ್ಲ : ಶತ್ರುಗಳಾದರೂ ತಮ್ಮ ನಗರಕ್ಕೆ ವೇಷಧಾರಿಗಳಾಗಿ ಬಂದಲ್ಲಿ ಅವರನ್ನು ಕಂಡುಹಿಡಿದು ಕಾರಾಗೃಹದಲ್ಲಿಡುತ್ತಿದ್ದನು. ಈ ಕಾರಣದಿಂದ ನವಾಬನಿಗೂ ಅಕ್ಕಣ್ಣ ಮಾದನ್ನರಿಗೂ ಈತನಲ್ಲಿ ಅತ್ಯಂತ

ಶ್ಯಾಸವಿತ್ತು. ರೂಪಸಿಂಗನು ದಿಲ್ಲೀನಗರದಲ್ಲಿಯೂ ಕೆಲವುಕಾಲ ಸರ ಾರಸಾಗಿ ಒಳಗುಟ್ಟುಗಳನ್ನೆಲ್ಲ ತಿಳಿದುಕೊಂಡಿದ್ದುದರಿಂದ ತಮ್ಮ ಉದ್ದೇಶವನ್ನು ನೆರವೇರಿಸಲು ಈತನೇ ಸಮರ್ಥನೆಂದು ಯೋಚಿಸಿ, ಅಕ್ಕಣ್ಣ ಾದನ್ನರಿಬ್ಬರೂ ಈತನನ್ನು ದಿಲ್ಲಿಗೆ ಕಳುಹಿಬಿಟ್ಟರು. ರೂಪಸಿಂಗನು ವರ ಅಪ್ಪಣೆಯನ್ನು ಹೊಂದಿ ಸಂತೋಷದಿಂದ ದಿಲ್ಲೀನಗರವನ್ನು ರಿತು ಹೊರಟನು.

---

## ಇಪ್ಪತ್ತೆರಡನೆಯ ಪ್ರಕರಣ.

(ಮೊಗಲರ ಕಾರಾಗ್ರಹ)

ಔರಂಗಜೇಬನು, ಅತ್ಯಲ್ಪವಾದ ತಪ್ಪುಮಾಡಿದವರನ್ನೂ ಕಾರಾ ್ರಹಕ್ಕೆ ಕಳುಹಿದ್ದನು; ಎಷ್ಟು ವರ್ಷಗಳಾದರೂ ಅವರಿಗೆ ಕಾರಾಗ್ರಹ ಮೋಚನೆಯಾಗುತ್ತಿರಲಿಲ್ಲ. ಇಂತಹ ಕಠಿನವಾದ ಕಾರಾಗ್ರಹದಲ್ಲಿರಿಸ ್ಪಟ್ಟ ನಯನಪಾಲನು, ತನ್ನ ತಪ್ಪನ್ನು ಕ್ಷಮಿಸಿ ತನ್ನನ್ನು ಎಂದಿಗಾದರೂ ಾದಶಹನು ಬಿಡುಗಡೆ ಮಾಡುವನೆಂದು ಅತ್ಯಾಶೆಯಿಂದ ನಿರೀಕ್ಷಿಸುತ್ತಿದ್ದನು. ದರೆ, ಎಷ್ಟು ದಿನಗಳು ಕಳೆದರೂ ವಿಮೋಚನವಾಗಲಿಲ್ಲ. ಕಡೆಗೆ ರಾಶೆಯಿಂದ ಆತನು ಬಾದಷಹನು ತನಗೆ ಮಾಡಿದ ಮೋಸವನ್ನು ಸ್ಮರಿಸಿ, ನ್ನ ಅವಿವೇಕವನ್ನು ನಿಂದಿಸುತ್ತ ಹೀಗೆ ಪಶ್ಚಾತ್ತಾಪಪಡುತ್ತಿದ್ದನು:—

“ ಅಯ್ಯೋ ! ನಾನೆಂತಹ ಬುದ್ಧಿಹೀನನಾದೆನು ? ಉತ್ತಮ ರಜಪೂ ವಂಶದಲ್ಲಿ ಜನ್ಮಿಸಿಯೂ ಸ್ವಧರ್ಮತ್ಯಾಗಿಯಾಗಿ ಮಹಮ್ಮದೀಯರೊ ನೆ ಸ್ನೇಹವನ್ನು ಬೆಳಸಿದುದರಿಂದಲ್ಲವೆ ನನಗೀ ಕಷ್ಟಗಳು ಪ್ರಾಪ್ತವಾ ವು ? ಎಷ್ಟೋ ಮಂದಿ ಸೇನಾನಾಯಕರಿದ್ದರೂ ಚಂದ್ರಾವತಿಯನ್ನು

ಕರೆತರಲು ಔರಂಗಜೇಬನು ನನ್ನನ್ನೇಕೆ ಕಳುಹಿದನು ? ನಾನೇಕೆ ಅದಕ್ಕೊಪ್ಪಿದೆನು ? ಸಾಧ್ವೀಮಣಿಯೂ ರಜಪೂತಕುಲಾಭಿಮಾನ ದೇವತೆಯೂ ಆದ ಆ ದೇವಿಯಲ್ಲಿ ದ್ರೋಹವನ್ನು ಚಿಂತಿಸಿದ ನನಗೆ ಇದು ತಕ್ಕ ಪ್ರಾಯಶ್ಚಿತ್ತವಲ್ಲವೆ ? ಆಹಾ ! ದುರ್ಗಾದಾಸನನ್ನು ವಂಚಿಸಲೆಣಿಸಿದ ನನ್ನ ಬುದ್ಧಿಗೇನೆನ್ನಬೇಕು ? ಆತನ ರಾಜಭಕ್ತಿಯನ್ನೂ ಪರಾಕ್ರಮವನ್ನೂ ಸ್ಮರಿಸಿದರೆ, ತೇಜಸ್ವಿಯಾದ ಆತನೇ ಪ್ರತ್ಯಕ್ಷನಾದಂತೆ ಕಾಣುತ್ತಿರುವುದು ! ಪುಣ್ಯಪುರುಷನಾದ ಸ್ವಾಮಿಕಾರ್ಯಧುರಂಧರನಾದ ದುರ್ಗಾದಾಸ ! ನಿನಗೆ ನಮಸ್ಕಾರವು, ಕ್ಷಮಿಸು, ನಿನ್ನ ಸಮಾನ ರಜಪೂತನಾಗಿದ್ದು ಈಗ ನಿನ್ನ ಉಗುರಿಗೂ ಸರಿಬಾರದ ಅಧಮಾಧಮನಾದ ನನ್ನನ್ನು ನೀನು ಕ್ಷಮಿಸು, ಉದ್ಧರಿಸು ! ಜಗನ್ಮೋಹಿನೀ, ಇಂದಿರಾದೇವಿ ! ಅಸಮಾನವಾದ ನಿನ್ನ ಬುದ್ಧಿಚಾತುರ್ಯ, ರಾಜಭಕ್ತಿ, ಸ್ವಕುಲಾಭಿಮಾನಗಳಲ್ಲಿ ಅಣ್ಣನಾದ ದುರ್ಗಾದಾಸನನ್ನೇ ಮೀರಿಸುತ್ತಿರುವೆಯಲ್ಲವೇ ! ನಿನ್ನೀ ದರ್ಪವನ್ನೂ ಅಭಿಮಾನವನ್ನೂ ನೋಡಿ ನನಗೇ ನಾಚಿಕೆಯಾಗುವುದಲ್ಲಾ ! ತಾಯಿ ! ಅನುಗ್ರಹಿಸು ; ಈ ಅಧಮನಿಗೆ ನಿನ್ನಲ್ಲಿರುವ ಸದ್ಗುಣಾತಿಶಯಂಗಳ ಲವಲೇಶವನ್ನಾದರೂ ಅನುಗ್ರಹಿಸಿ, ಇನ್ನು ಮುಂದೆಯಾದರೂ ಇವನು ತನ್ನ ಕರ್ತವ್ಯವನ್ನು ನೆರವೇರಿಸಿ ಕೃತಾರ್ಥನಾಗುವಂತೆ ಮಾಡು. ಆಹಾ ! ಯಾವ ಮೋಹಿನೀದೇವಿ, ಶತ್ರುಗಳು ಕಾವಲಿದ್ದರೂ ಲೀಲಾಜಾಲವಾಗಿ ಚಂದ್ರಾವತೀರಾಣಿಯನ್ನೂ ಅಜಿತಕುಮಾರನನ್ನೂ ಬಿಡಿಸಿದಳೋ ಅಂತಹ ಉಜ್ವಲಕ್ಷಾತ್ರತೇಜೋಮಯಮೂರ್ತಿಯನ್ನು ದುರಭಿಮಾನದಿಂದ ಕರೆತಂದು ಕ್ರೂರನಾದ ಔರಂಗಜೇಬನಿಗೆ ಒಪ್ಪಿಸಿದ ನನ್ನ ಪಾತಕಕ್ಕೆ ಎಣೆಯುಂಟೆ ? ನನ್ನಂತಹ ಅಧಮನು ಪ್ರಪಂಚದಲ್ಲಿ ಹುಟ್ಟುವನೆ ? ರಾಜಪುತ್ರಸ್ತ್ರೀಯರನ್ನು ಕರೆತಂದು ಮಹಮ್ಮದೀಯರಿಗೆ ಒಪ್ಪಿಸಿದ ಚಂಡಾಲನೆಂದು ಚರಿತ್ರಕಾರರು ನನ್ನನ್ನು ಎಷ್ಟು ತಿರಸ್ಕರಿಸಬಹುದು ? ಅಯ್ಯೋ ! ಆ ಸಾಧ್ವಿಗೆ ಆ ಕಾಮುಕನಾದ ಬಾದಷಹನು ಯಾವ ತೊಂದರೆಯನ್ನುಂಟುಮಾ

ಡಿರುವನೊ ?........ನನ್ನ ಈ ದುರ್ದಶೆಗೆ ಕಾರಣನಾದ ಔರಂಗಜೇಬನ ಮೇಲೆ ನನ್ನ ಹಗೆತನವನ್ನು ಹೇಗೆ ತೀರಿಸಲಿ ? ಸಪರಿವಾರನಾದ ಆ ಕ್ರೂರನಿಗೆ ಮಹಾಪರಾಭವವನ್ನುಂಟುಮಾಡಿದಲ್ಲದೆ ಕ್ಷಣಕ್ಷಣಕ್ಕೂ ಪ್ರಜ್ವಲಿಸುತ್ತಿರುವ ನನ್ನೀ ದ್ವೇಷಾಗ್ನಿ ತಣ್ಣಗಾಗಲಾರದು ! ಮೋಸಗಾರನಿಗೆ ಮೋಸದಿಂದಲೇಪರಾಭವವನ್ನುಂಟುಮಾಡಬೇಕು. ''

ಅಯ್ಯೋ ! ನಾನೆಂತಹ ಅವಿವೇಕಿ ? ಹಾವಿನ ಬಾಯಿಯಲ್ಲಿರುವ ಕಪ್ಪೆ ಇದಿರಿಗಿರುವ ಹುಳುವನ್ನು ತಿನ್ನಲು ಪ್ರಯತ್ನಿಸಿದಂತೆ, ಗಾಢಾಂಧಕಾರವಾದ ಈ ಕಾರಾಗೃಹದಲ್ಲಿ ಸಿಕ್ಕಿಬಿದ್ದು ದಿಕ್ಕಿಲ್ಲದೆ ಕೊಳಲುತ್ತಿರುವ ನಾನು ಆ ಪಾಪಿಯಾದ ಬಾದಶಹನಿಗೆ ಮೋಸಮಾಡಲೆಳಸಿರುವೆನಲ್ಲವೆ ? ದೈವಾನುಗ್ರಹವೇನಾದರೂ ಇದ್ದು ಇಲ್ಲಿಂದ ಮುಕ್ತನಾದಮೇಲಲ್ಲವೇ ನನ್ನ ಉದ್ದೇಶ ಸಿದ್ಧಿಯಾಗುವುದು ?............ .. ...... ...

ಹೀಗೆ ಪರಿತಪಿಸುತ್ತಿದ್ದು ಕಡೆಗೆ ಧೈರ್ಯವನ್ನು ಹೊಂದಿ, ಆಹಾ ! ಇಂದಿರಾದೇವಿಯ ಸ್ಮರಣಮಾತ್ರದಿಂದಲೇ ನನ್ನ ಅಜ್ಞಾನವು ನಿವಾರಣವಾಗಿ ಉಪಾಯವು ಸ್ಫೂರ್ತಿಯಾಯ್ತು ! ಕರ್ತವ್ಯತಾ ಮೂಢರಾದವರೆಲ್ಲರೂ ಇಂದಿರಾದೇವಿಯ ಸ್ಮರಣೆಯಿಂದ ಕರ್ತವ್ಯದಕ್ಷರಾಗುವುದರಲ್ಲಿ ಅಡ್ಡಿಯಿಲ್ಲ. ಇನ್ನು ನಾನು ಉಪಾಯದಿಂದ ಮುಕ್ತನಾಗಿ ಇಂದಿರೆಯನ್ನು ಬಾದಶಹನ ನಿರ್ಬಂಧದಿಂದ ಬಿಡಿಸಿ, ಅಣ್ಣನಾದ ದುರ್ಗಾದಾಸನಿಗೆ ಒಪ್ಪಿಸುವುದೇ ನನ್ನ ಅಪರಾಧಕ್ಕೆ ಪ್ರಾಯಶ್ಚಿತ್ತವು.''

ಹೀಗೆ ನಿರ್ಧರಿಸಿ, ನಯನಪಾಲನು ಕಾರಾಗಾರದ ಅಧಿಕಾರಿಯೊಡನೆ ಸ್ನೇಹವನ್ನು ಬೆಳಸುತ್ತ ಬಂದನು. ಕೆಲವು ದಿನಗಳೊಳಗಾಗಿಯೇ ಆತನನ್ನು ತನ್ನವನನ್ನಾಗಿ ಮಾಡಿಕೊಂಡು ಆತನಿಗೆ ತನ್ನ ಉದ್ದೇಶವನ್ನು ತಿಳಿಸಿ, ತನ್ನನ್ನು ಬಂಧನದಿಂದ ಬಿಟ್ಟುಬಿಟ್ಟರೆ ವಿಪುಲದ್ರವ್ಯವನ್ನು ಕೊಡುವುದಾಗಿ ವಾಗ್ದಾನ ಮಾಡಿದನು. ಅಧಿಕಾರಿಯು ಔರಂಗಜೇಬನ ಭಯದಿಂದ ನಯನಪಾಲನ ಮಾತನ್ನು ಒಪ್ಪಲಾರದೆಯೂ ವಿಪುಲದ್ರವ್ಯಲಾಭವಾಗುವುದನ್ನು ಬಿಟ್ಟು

ಬಿಡಲಾರದೆಯೂ ಉಭಯಸಂಕಟಕ್ಕೆ ಗುರಿಯಾಗಿ ತೊಳಲಾಡುತ್ತಿದ್ದು, ಕೆಲವು ದಿನಗಳ ಮೇಲೆ, ನಯನಪಾಲನನ್ನು ಕಾರಾಗೃಹದಲ್ಲಿರಿಸಿ ಆರು ತಿಂಗಳಾಗಿರುವುದರಿಂದ ಬಾದಶಹನಿಗೆ ಇವನ ಜ್ಞಾಪಕವಿರಲಾರದೆಂದೂ ಇವನನ್ನು ಬಿಟ್ಟುಬಿಟ್ಟರೆ ತನಗೆ ಯಾವ ತೊಂದರೆಯೂ ಉಂಟಾಗಲಾರದೆಂದೂ ಯಾವಚ್ಚೀವವೂ ಸುಖವಾಗಿರಬಹುದಾದ ಜೀವನವನ್ನು ಬಿಡುವುದೇಕೆಂದೂ ಯೋಚಿಸಿ, ನಯನಪಾಲನನ್ನು ಬಿಡುವಂತೆ ನಿಶ್ಚಯಿಸಿದನು. ಇಷ್ಟೇ ಅಲ್ಲ ; ಜೈಲಲೆಕ್ಕದಲ್ಲಿ ನಯನಪಾಲನು ಸತ್ತುಹೋಗಿರುವನೆಂದು ಬರೆದರೆ ತನಗಾವ ತೊಂದರೆಯೂ ಇಲ್ಲವೆಂದೂ ನೆನೆದು ತನ್ನ ಮನೋಗತವನ್ನು ನಯನಪಾಲನಿಗೆ ತಿಳಿಸಿದನು. ನಯನಪಾಲನು ಅದಕ್ಕೆ ಸಮ್ಮತಿಸಿ ನಗರದಲ್ಲಿದ್ದ ತನ್ನ ಆಪ್ತರಿಂದ ಕಾರಾಗೃಹಾಧಿಕಾರಿಗೆ ಸ್ವಲ್ಪ ದ್ರವ್ಯವನ್ನು ಕೊಡಿಸಿ, ಉಳಿದುದನ್ನು ತಾನು ಮುಕ್ತನಾದ ಮೇಲೆ ಕೊಡುವೆನೆಂದು ಹೇಳಿದನು.

ಅಧಿಕಾರಿಯು ಅತ್ಯಂತ ಸಂತೋಷದಿಂದ ಆತನನ್ನು ಜಾಗ್ರತೆಯಾಗಿ ಬಿಡುಗಡೆ ಮಾಡುವೆನೆಂದು ಹೇಳಿ ಸಮಯವನ್ನು ನಿರೀಕ್ಷಿಸುತ್ತಿದ್ದನು. ಒಂದು ದಿನರಾತ್ರಿ ವಿಶೇಷವಾಗಿ ಬಿರುಗಾಳಿ ಬೀಸುತ್ತ ಕೋಟೆಯೊಳಗಿದ್ದ ದೀಪವೆಲ್ಲವನ್ನೂ ಆರಿಸಲು, ಕಾರಾಗಾರದ ಕಾವಲುಗಾರರು ಗಾಢನಿದ್ರೆಯಲ್ಲಿದ್ದಾ ಸಮಯವನ್ನು ನೋಡಿ, ನಯನಪಾಲನನ್ನು ಬಿಡುಗಡೆಮಾಡಿದನು. ಅಷ್ಟರಲ್ಲಿಯೇ ನಯನಪಾಲನ ಅದೃಷ್ಟದೇವತೆಯ ಸಹಾನುಭೂತಿಯ ಫಲವೆಂಬಂತೆ ಜಡಿಮಳೆಯೂ ಸುರಿಯತೊಡಗಿತು. ನಯನಪಾಲನು ಬಹುಕಾಲ ಕೋಟೆಯಲ್ಲಿದ್ದು ಚೆನ್ನಾಗಿ ತಿಳಿದವನಾಗಿದ್ದುದರಿಂದ ಮಳೆ-ಗಾಳಿ-ಅಂಧಕಾರಗಳಾವುದನ್ನೂ ಲೆಕ್ಕಿಸದೆ, ಕರ್ತವ್ಯತತ್ಪರನಾಗಿ ತ್ವರೆಯಿಂದ ಹೊರಟು ತನ್ನ ಮನೆಗೆ ಬಂದುಸೇರಿ, ತನ್ನ ಹಿಂದೆಯೇ ಬಂದ ಅಧಿಕಾರಿಗೆ ವಾಗ್ದಾನಮಾಡಿದ್ದಂತೆ ದ್ರವ್ಯವನ್ನಿತ್ತು ಕಳುಹಿದನು.

ಇನ್ನು ನಯನಪಾಲನು ಪೂರ್ವದ ನಯನಪಾಲನಲ್ಲ ! ಕಾರಾಗೃಹದಿಂದ ಬಂದುದು ಮೊದಲು ಸ್ವಧರ್ಮಾಭಿಮಾನಿಯಾಗಿ ತಿರುಗಿದನು.

ಇಂದಿರೆಯ ಬಿಡುಗಡೆಯ ಯೋಜನೆಯೇ ಯೋಜನೆಯಾಗಿದ್ದುದರಿಂದ ಅದುಮೊದಲು ಆತನು ವೇಷಧಾರಿಯಾಗಿ ಔರಂಗಜೇಬನ ರಾಣಿವಾಸವನ್ನು ಪ್ರವೇಶಿಸಿ, ಅಲ್ಲಿಯ ಸಮಾಚಾರಗಳನ್ನು ತಿಳಿದುಕೊಳ್ಳುತ್ತ ಬಂದನು. ವೇಷಧಾರಿಯಾಗಿ ತಿರುಗುತ್ತಿದ್ದುದರಿಂದ ಆತನನ್ನು ನಗರದವರಾರೂ ಗುರ್ತಿಸಲಾರದೇ ಹೋದರು.

---

## ಇಪ್ಪತ್ತೇಳನೆಯ ಪ್ರಕರಣ.

(ಕಪಟ ನಾಟಕವು.)

ಔರಂಗಜೇಬನು ಹೇಳಿ ಕಳುಹಿಸಿದ ಉತ್ತರದಿಂದ ರೋಷನಾರೆಯ ಮಟ್ಟು ಮೀರಿತು. ಬರಹೇಳಿದುದೇ ತಡೆಯಾಗಿ ತನ್ನಡೆಗೆ ಓಡಿಬರುತ್ತಿದ್ದ ಬಾದಶಹನು, ಇಂದು ಹೀಗೆ ಹೇಳಿಕಳುಹಲು ಉದಯಪುರಿಯ ದುರ್ಬೋಧನೆಯೇ ಕಾರಣವೆಂದೆಣಿಸಿದಳು. ಉದಯಪುರಿಯ ಮೋಹಪಾಶಬದ್ಧನಾಗಿರುವುದರಿಂದಲೇ ತನ್ನ ಅಣ್ಣನು ತನ್ನನ್ನು ಉಪೇಕ್ಷಿಸಿದನೆಂದೂ ಅವನ ಮನಸ್ಸನ್ನು ಕೆಡಿಸಿದ ಉದಯಪುರಿಯ ಹೆಮ್ಮೆಯನ್ನು, ಬಾದಶಹನು ತನ್ನ ಆಜ್ಞಾಧಾರಕನೆಂದು ಬೀಗಿಹೋಗಿರುವ ಅವಳ ಹೆಮ್ಮೆಯನ್ನು, ಅವನಿಂದಲೇ ಮುರಿಸಬೇಕೆಂದೂ ಆಲೋಚಿಸಿದಳು. ತನ್ನ ಕಾರ್ಯಸಾಧನೆಗಾಗಿ ಬಾದಶಹನಿಗೆ ಉದಯಪುರಿಯ ಮೇಲೆ ಆಗ್ರಹವನ್ನುಂಟುಮಾಡಲು ಛೋಟುಸಿಂಗನನ್ನೇ ಆಧಾರವಾಗಿಟ್ಟು ಕಾರ್ಯಕ್ಕೆ ಪ್ರಯತ್ನಿಸಬೇಕೆಂದು ನಿರ್ಧರಿಸಿದಳು. ಇಷ್ಟೆಲ್ಲಕ್ಕೂ ತನ್ನೆಡೆಗೆ ತನ್ನ ಅಣ್ಣನು ಬರಬೇಕು. ಆದರೆ ಅವನನ್ನು ಬರಮಾಡಿಕೊಳ್ಳುವುದೆಂತು ?

ರೂಪನಾರೆಯು ಹೀಗೆ ಚಿಂತೆ ಮಾಡುತ್ತಿರುವಾಗಲೇ ಔರಂಗಜೇಬನು ಪ್ರಾತಃಕಾಲದ ಭೋಜನವನ್ನು ತೀರಿಸಿಕೊಂಡು ತಂಗಿಯನ್ನು ನೋಡಲುಬಂದವನು ತಾನೇ ಒಂದು ಆಸದ ಮೇಲೆ ಕುಳಿತು ಚಿಂತಿಸುತ್ತಿದ್ದವಳನ್ನು ಕುರಿತು ಹೀಗೆ ಕೇಳಿದನು:—

"ತಂಗಿ, ನಿನ್ನ ಮುಖವನ್ನು ನೋಡಿದರೆ ಏನೋ ವಿಚಾರಪರಳಾಗಿರುವಂತೆ ಕಾಣುವುದು. ಕಾರಣವೇನು ?

ರೋಷ:—ಕಾರಣವೇನಾದರೂ ಇರಲಿ, ಅಣ್ಣ, ಇನ್ನು ನಾನೀ ಡಿಲ್ಲೀನಗರದಲ್ಲಿರಲಾರೆ. ಮಕ್ಕಾಕ್ಕೆ ಹೊರಡಲು ಅನುಮತಿಯನ್ನು ಕೊಡು.

ಔರಂಗ:—ನಾನೂ ಬರುವೆನು. ಇಬ್ಬರೂ ಜೊತೆಯಾಗಿಯೇ ಹೊರಡುವ.

ರೋಷ:—ನೀನೇಕೆ ಈಗ ಬರಬೇಕು. ಬರುವುದಕ್ಕೆ ನಿನಗೆ ಅವಕಾಶವೆಲ್ಲಿ ?

ಔರಂಗ: —ಹೋಗಲಿ, ಈಗ ನೀನು ಹೊರಡಲು ಕಾರಣವೇನು ?

ರೋಷ: —ಅಸ್ವತಂತ್ರವಾಗಿ ಪಟ್ಟಣದಲ್ಲಿ ಜೀವಿಸುವುದಕ್ಕಿಂತಲೂ ಸ್ವತಂತ್ರವಾಗಿ ಅಡವಿಯಲ್ಲಿರುವುದು ಸೌಖ್ಯವು.

ಇಲ್ಲಿ ನಿನಗೆ ಸರ್ವತಂತ್ರಸ್ವಾತಂತ್ರ್ಯವಿದ್ದು, ಸ್ವಯಂ ಬಾದಶಹನಾದ ಅಣ್ಣನೇ ವಶವಾಗಿದ್ದೂ ಅಸ್ವತಂತ್ರವೆ ?

ರೋಷ: —ಸರ್ವಸ್ವಾತಂತ್ರ್ಯವಿದ್ದಮೇಲೆ ಅದಕ್ಕೆ ಆತಂಕವಿರದಂತಿರಬೇಕಲ್ಲವೆ ?

ಔರಂಗ:—ಆತಂಕಪಡಿಸಿದವರಾರು ? ಬೇಗ ಹೇಳು, ಅವರನ್ನು ತಕ್ಕಂತೆ ದಂಡಿಸುವೆನು.

ರೋಷ: —ಅವರನ್ನು ದಂಡಿಸುವುದು ಸುಳ್ಳು, ನಿಜವನ್ನು ಹೇಳಿದರೆ ನಾನೇ ದಂಡಿಸಲ್ಪಡುವೆನು.

ಔರಂಗ:—ಇಷ್ಟು ಮಾತುಗಳೇಕೆ, ತಂಗಿ, ನಡೆದ ಸಮಾಚಾರವನ್ನು ವಿವರಿಸಿ ಹೇಳು.

ರೋಷ:—ಅಣ್ಣಾ, ಹೇಳಿದರೆ ನಮ್ಮ ಮಹಮ್ಮದೀಯ ವಂಶಕ್ಕೇ ಅಪಕೀರ್ತಿ ಬರುವುದೆಂಬ ಚಿಂತೆ.

ಔರಂಗ್—ಏನು! ಪವಿತ್ರವಾದ ನಮ್ಮ ಮಹಮ್ಮದೀಯವಂಶಕ್ಕೇ ಅಪಕೀರ್ತಿ ತರುವಂತಹ ಕೃತ್ಯವಾರಿಂದಾಯಿತು?

ರೋಷ:—ಅದೆಲ್ಲಾ ನನಗೇಕೆ, ಬಿಡು, ಅಂತಃಪುರಕ್ಕೆ............ ..................ಹೋಗು, ನಾನು ಹೇಳಲಾರೆನು.

ಔರಂಗ:—ಸುಮ್ಮನೆ ಸಂಶಯದಲ್ಲಿ ನರಳಿಸಬೇಡ, ತಂಗಿ, ವೃತ್ತಾಂತವೇನು, ಬೇಗ ಹೇಳು.

ರೋಷ:—ಸಮಯವು ಸರಿಯಾಗಿಲ್ಲ. ರಾಜಪುತ್ರರು ವೇಷಾಂತರದಿಂದ ಅರಮನೆಯನ್ನು ಪ್ರವೇಶಿಸುತ್ತಿರುವರು.

ಔರಂಗ:—ಏನು? ರಾಜಪುತ್ರರು ಅಂತಃಪುರಕ್ಕೆ ಪ್ರವೇಶಿಸುವರೆ? ಅವರಿಗೆ ಅಂತ್ಯಕಾಲವೊದಗಿರಬೇಕು! ತಿಳಿದೂ ನೀನೇಕೆ ಸುಮ್ಮನಿದ್ದೆ?

ರೋಷ:—ಒಬ್ಬರಿಗೆ ಸಮ್ಮತವಾದ ಕಾರ್ಯವನ್ನು ಮತ್ತೊಬ್ಬರು ಹೋಗಲಾಡಿಸಲಾದೀತೇ?

ಔರಂಗ:—ಹಾಗಾದರೆ ಈ ಕೆಲಸವಾರಿಗೆ ಸಮ್ಮತವು?

ರೋಷ:—ಅಣ್ಣ! ನಿನಗೆ ಕೋಪವುಂಟಾದರೂ ಚಿಂತೆಯಿಲ್ಲ. ಉದಯಪುರಿಗೇ ಸಮ್ಮತ.

ಔರಂಗ:—ಉದಯಪುರಿಗೂ ರಾಜಪುತ್ರರಿಗೂ ಸಂಬಂಧವೇನಿರುವುದು?

ರೋಷ:—ಯಾವ ಸಂಬಂಧವಿರುವುದೋ ನೀನೇ ಗ್ರಹಿಸಬೇಕಲ್ಲದೆ ಹೆಂಗಸಾದ ನಾನು ಹೇಳಲಾಗದು. ಇದಕ್ಕೆ ನೀನೇ ಕಾರಣನಲ್ಲದೆ

ಅವಳಲ್ಲ. ಇಷ್ಟುಮಂದಿ ಮುಹಮ್ಮದೀಯ ಸ್ತ್ರೀಯರಿರುವಾಗ ನೀನೇಕೆ ರಜಪೂತ ಕನ್ಯೆಯನ್ನು ಮದುವೆ ಮಾಡಿಕೊಂಡೆ? ರಾಜಪುತ್ರ ಸ್ತ್ರೀಯಾ ದುದರಿಂದ ಸ್ವಜಾತ್ಯಭಿಮಾನವು ಸ್ವಲ್ಪವಾದರೂ ಇಲ್ಲದಿರುವುದೇ? ಇದಕ್ಕೆ ದೃಷ್ಟಾಂತವನ್ನು ತೋರಿಸುವೆನು, ನೋಡು.

ರೋಷನಾರೆಯ ಬೋಧನೆಯಿಂದ ಔರಂಗಜೇಬನು ಆಗಲೇ ಸಂಶ ಯಗ್ರಸ್ತನಾದನು. ಅಷ್ಟರಲ್ಲಿಯೇ ರೋಷನಾರೆಯು ಕಾರಾಗೃಹದಲ್ಲಿ ದ್ದ ಭೋಟುಸಿಂಗನನ್ನು ಅಲ್ಲಿಗೆ ಕರೆಸಿದಳು. ಔರಂಗಜೇಬ ಬಾದಶಹನು ಅವನನ್ನು ಚನ್ನಾಗಿ ನೋಡಿ ಅವನನ್ನು ಎಲ್ಲಿಯೋ ನೋಡಿದ್ದಂತೆ ಯೋ ಚಿಸಿ ಕ್ರೋಧದಿಂದ ಅವನನ್ನು ದುರದುರನೆ ನೋಡುತ್ತ ರೋಷನಾರೆಯನ್ನು ಕುರಿತು:—" ತಂಗೀ, ಈತನಾರು ? " ಎಂದು ಕೇಳಿದನು. ರೋಷನಾ ರೆಯು ದ್ವೇಷಸಾಧನೆಗೆ ಇದೀಗ ತಕ್ಕ ಸಮಯವಾಗಿ ತೋರಿತು. ಅವಳು, —" ಅಣ್ಣಾ ! ಇವನು ಉದಯಪುರಿಯ ಸ್ನೇಹಿತರಲ್ಲಿ ಒಬ್ಬನು. ವೇಷ ಧಾರಿಯಾದ ಈತನು ಉದಯಪುರಿಯ ಅಂತಃಪುರದಿಂದ ಬರುತ್ತಿರಲು ನಾನು ಈತನ ವೇಷವನ್ನು ತಿಳಿದು ಕಾರಾಗೃಹದಲ್ಲಿಟ್ಟಿರುವೆನು.......... ? " ಔರಂಗಜೇಬನು ಮುಂದೆ ಕೇಳುವ ತಾಳ್ಮೆಯಿಲ್ಲದವನಾಗಿ ಭೋಟುಸಿಂಗ ನನ್ನು ಹಿಂದೆ ಕರೆದುಕೊಂಡು ಉದಯಪುರಿಯ ಅಂತಃಪುರವನ್ನು ಪ್ರವೇ ಶಿಸಿದನು.

ಆಗ ಉದಯಪುರಿಯು ಇಂದಿರೆಯೊಡನೆ ಸಂಭಾಷಿಸುತ್ತಿದ್ದಳು. ಬಾದಶಹನನ್ನು ನೋಡಿದೊಡನೆಯೇ ಅವರಿಬ್ಬರೂ ಎದ್ದುನಿಂತರು. ಇಂದಿ ರೆಯು ಬಾಗಿಲ ಹಿಂದೆ ಹೋಗಿ ಭೋಟುಸಿಂಗನನ್ನೇ ನೋಡುತ್ತ ನಿಂತಳು. ಇಂದಿರೆಯನ್ನು ನೋಡಿ ಭೋಟುಸಿಂಗನು ಮುಖವನ್ನು ತಗ್ಗಿಸಿದನು. ಉದ ಯಪುರಿಯು ಎಂದಿನಂತೆ ಬಾದಶಹನಿಗೆ ಮರ್ಯಾದೆಯನ್ನುಮಾಡಿದಳು. ಆದರೆ ರೋಷನಾರೆಯ ದುರ್ಬೋಧನೆಯಿಂದ ಕಲುಷಿತವಾದ ಅವನ ಮನಸ್ಸು ಸರಲ ಹೃದಯದ ಉದಯಪುರಿಯ ಅಕುಟಿಲವಾದ ಆದರವನ್ನು

ಸಂಭಾವಿಸಲಿಲ್ಲ. ಸಂಶಯ ಕ್ರೋಧಗಳಿಂದ ಪರವಶನಾಗಿದ್ದ ಬಾದ ಶಹನು ಉದಯ ಪುರಿಯ ಉಪಚಾರಗಳನ್ನು ಅಪಚಾರದಂತೆ ತಿಳಿದು ಕ್ರೋಧದಿಂದ "ಎಲೆ, ನಿನ್ನೀ ಶುಷ್ರೂಷೋಪಚಾರಗಳನ್ನು ನಿಲ್ಲಿಸಿ, ಮೊದಲು ನನಗೆ ಸರಿಯಾದ ಉತ್ತರವನ್ನು ಕೊಡು." ಇವನಾರೆಂಬುದನ್ನು ಮೊದಲು ಹೇಳು ?

ಉದಯ:—ಯಾವನೋ ದಾರಿಹೋಕನನ್ನು ಕರೆದುಕೊಂಡು ಬಂದು, ಈತನಾರೆಂದರೆ ನಾನು ಏನು ಹೇಳಲಿ ?

ಬಾದ:—ನೀನು ಜಾಣೆಯೆಂದು ಬಲ್ಲೆನು. ಮಹಮ್ಮದೀಯ ವಂ ಶಕ್ಕೇ ಕಳಂಕಪ್ರದವಾಗಿ ನೀನು ಕೇಡುಂಟುಮಾಡಲು ಇಲ್ಲಿಗೆ ಬಂದೆಯಲ್ಲವೆ ?

ಉದಯ:—ಮಹಾರಾಜಾ ! ಈ ದಾಸಿಯು ಆವ ತಪ್ಪನ್ನೂ ಮಾಡಿಲ್ಲ. ಕಾರಣವಿಲ್ಲದೆ ಆಗ್ರಹಮಾಡಿದರೆ ನನಗಿನ್ನಾರು ದಿಕ್ಕು ?

ಬಾದ:—ಈ ಭೋಟುಸಿಂಗನು ನಿನ್ನ ಅಂತಃಪುರಕ್ಕೆ ಒರಲು ಕಾರಣವೇನು ?

ಉದಯ:—ಭೋಟುಸಿಂಗನೆಂಬುದರಿಂದ ಈಗ ಹೇಳಲಾಗುವುದು, ಕೇಳಬೇಕು. ಈತನು ತಾನೊಬ್ಬ ಚಿತ್ರಗಾರನೆಂದು ಹೇಳಿ ಒಂದು ದಂತದ ಬೀಸಣಿಗೆಯನ್ನು ಮಾಡಿ ನನಗೆ ತಂದುಕೊಟ್ಟಿರುವನು. ಮಾರನೆಯ ದಿನ ಬಂದರೆ ಬಹುಮಾನವನ್ನು ಕೊಡಿಸುವೆನೆಂದು ಹೇಳಿದೆನು. ಆದರೆ ಈತನು ಈ ವರೆಗೂ ಬಂದಿಲ್ಲ ತಮಗೆ ಆ ಬೀಸಣಿಗೆಯನ್ನು ತೋರಿಸಲು ಮರೆ ತುಹೋದೆನು ; ಕ್ಷಮಿಸಬೇಕು. ಎಂದು ಹೇಳಿ ಎದ್ದು ಹೋಗಿ ಬೀಸಣಿ ಗೆಯನ್ನು ತಂದು ಆತನಿಗೆ ತೋರಿಸಿದಳು ಅದರ ರಚನಾ ಕೌಶಲ್ಯಕ್ಕೂ ಚಿತ್ರಗಳ ಸೌಂದರ್ಯಕ್ಕೂ ಮೆಚ್ಚಿ ಬಾದಶಹನು ಆಶ್ಚರ್ಯಪಟ್ಟನಾದರೂ ಉತ್ತರಕ್ಷಣದಲ್ಲಿಯೇ ಬೀಸಣಿಗೆಯನ್ನು ಮಂಚದಮೇಲೆ ಹಾಕಿ, ಉದ ಯಪುರಿಯನ್ನು ಕುರಿತು,—"ಎಲೆ ದುಷ್ಟೆ ! ರಾಜಪುತ್ರರನ್ನು ವೇಷಧಾ

ಗಳನ್ನಾಗಿ ಮಾಡಿ ನಮ್ಮ ಪಟ್ಟಣಕ್ಕೆ ಕರೆಸುವೆಯಾ ? ನಿನ್ನಿಂದ ನವ
ಪವಿತ್ರವಾದ ಮಹಮ್ಮದೀಯ ವಂಶಕ್ಕೇ ಕಲಂಕವುಂಟಾಗಿದೆಯಲ್ಲಾ.

ಉದಯಪುರಿಗೆ ಬಾದಶಹನ ವಾಕ್ಯಗಳು ಶಲ್ಯದಂತೆ ಮರ್ಮಸ್ಪರ್ಶಿ ಗಳಾಗಿ ಬಾಧಿಸಿದವು. ಗಡಗಡನೆ ನಡುಗುತ್ತ "ಬಾದಶಹರ ಅನುಮಾನ ಈಗ ಗೊತ್ತಾಯಿತು. ಇಂತಹ ದುರ್ನೀತಿಯನ್ನುಂಟು ಮಾಡಿದವರಾ ಬುದು ನನಗೆ ತಿಳಿಯಿತು. ಇನ್ನು ವಿಳಂಬ ಮಾಡದೆ ಕರಖಡ್ಗದಿಂ ನನ್ನನ್ನು ಛೇದಿಸಿ ಅವಳ ಕೋರಿಕೆಯನ್ನು ಈಡೇರಿಸಬಹುದು. ಇಲ್ಲ ನ್ಯಾಯಾನ್ಯಾಯಗಳನ್ನು ಸರಿಯಾಗಿ ವಿಚಾರಿಸಿ, ಯುಕ್ತಾಯುಕ್ತಗಳನ ತಿಳಿಯಬೇಕು. ಇದಕ್ಕೂ ಹೆಚ್ಚಾಗಿ ನಾನು ಈ ಭೋಜಸಿಂಗನ ವಿಷ ವನ್ನು ತಿಳಿದವಳಾಗಿಲ್ಲ. ಇದರಲ್ಲಿಯೂ ಅನುಮಾನವಿದ್ದರೆ ಮನಾವ ನನ್ನು ಕೇಳಬಹುದು." ಎಂದು ಹೇಳಿ ಕಣ್ಣೀರು ಸುರಿಸುತ್ತ ಸುಮ್ಮ ದಳು. ಬಾದಷಹನು ಉದಯಪುರಿಯ ಮಾತನ್ನು ಕೇಳಲಿಲ್ಲ. ಕ್ರೋ ಪರವಶನಾಗಿ ಖಡ್ಗವನ್ನೆತ್ತಿ –"ನಿಲ್ಲು, ಬಾಯಿಗೆ ಬಂದಂತೆ ಮಾತನಾ ಜೇಡ. ನಾನಿನ್ನು ನಿನ್ನನ್ನು ಕ್ಷಮಿಸುವಂತಿಲ್ಲ." ಎಂದವಳ ಶಿರಚ್ಛೇ ದವನ್ನು ಮಾಡಲುದ್ಯುಕ್ತನಾದನು. ತತ್‌ಕ್ಷಣವೇ ಉದಯಪುರಿಯ ಬಾದಶಹನ ಭೀಕರಾಕಾರವನ್ನು ನೋಡಿ ಭಯಪಟ್ಟು ಮೂರ್ಛಿತೆಯಾ ನೆಲದ ಮೇಲೆ ಬಿದ್ದು ಬಿಟ್ಟಳು. ಈ ವರೆಗೂ ಬಾಗಿಲ ಮರೆಯಲ್ಲಿ ನಿಂ ನೋಡುತ್ತಿದ್ದ ಇಂದಿರೆಯು ನಿರ್ದೋಷಿಯಾದ ಉದಯಪುರಿಯು ಪುತ್ರವಾಗಿ ಅವಹೇಳನಕ್ಕೂ ಅಕಾಲಮರಣಕ್ಕೂ ಗುರಿಯಾಗುತ್ತಿರು ದನ್ನು ಸಹಿಸಲಾರದೆ, ಧೈರ್ಯವನ್ನು ತಾಳಿ ಮುಂದೆ ಬಂದು ಉದ ಪುರಿಗೆ ಮರೆಯಾಗಿ ನಿಂತು ಬಾದಶಹನನ್ನು ಕುರಿತು, "ಅಲಂಗೀರ ಬಾ ಶಹನು ಶಾಂತಿಯನ್ನು ವಹಿಸಬೇಕು. ನನ್ನ ವಾಕ್ಯವು ಮುಗಿವವ ಸಾವಧಾನದಿಂದಿದ್ದು, ಆಮೇಲೆ ಉಚಿತ ತೋರಿದಂತೆ ಮಾಡಬಹು ಯಾವ ವೀರನು ತನ್ನ ನಿರುಪಮಪರಾಕ್ರದಿಂದ ಶತ್ರುಭಯಂಕರನೆಂಬ ದನ್ನು ಪಡೆದಿರುವನೋ, ಯಾವ ಮಹಾತ್ಮನು ಮಹಾರಾಜಾ ಯಶ್ವ

ಸಿಂಹನ ವಂಶ ವೃಕ್ಷವನ್ನು ಕಾಪಾಡುವೆನೆಂದು ಕಂಕಣವನ್ನು ಕಟ್ಟಿಕೊಂಡಿರುವನೋ, ಯಾವ ಧೀರನು ಕಾಬೂಲ್ ದೇಶದಲ್ಲಿ ಸಮಸ್ತ ಶತ್ರುವರ್ಗವನ್ನೂ ನಿವಾರಿಸಿ ದುರ್ಧರವಾದ ಪ್ರಜಾಕಲಹವನ್ನು ನಿಲ್ಲಿಸಿದನೋ, ಯಾವ ರಾಜಪುತ್ರನು ತನ್ನನ್ನು ಮೋಸಪಡಿಸಲು ಬಂದ ನಯನಪಾಲನಿಗೆ ಪ್ರತಿಕ್ರಿಯೆಯನ್ನು ಮಾಡಿದನೋ, ಯಾವ ಪುರುಷಸಿಂಹನು ಆಬೂಪರ್ವತ ಪ್ರಾಂತ್ಯದಲ್ಲಿ ತನ್ನ ಸೈನ್ಯವನ್ನೆಲ್ಲಾ ಯಮಾಲಯಕ್ಕೆ ಕಳುಹಿದನೋ ಆ ಜಗದೇಕವೀರನಾದ ದುರ್ಗಾದಾಸನೇ ಈಗ ನಿಮ್ಮೆದುರಿಗಿರುವವನು ! ಇನ್ನು ಮರ್ಮವೇಕೆ ? ಇಲ್ಲಿಂದ ನನ್ನನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದೇ ನಮ್ಮ ಅಣ್ಣನು ಮಾರುವೇಷದಿಂದ ಛೋಟುಸಿಂಗನೆಂಬ ಹೆಸರನ್ನಿಟ್ಟುಕೊಂಡು ಬಂದಿರುವನು. ಉದಯಪುರಿಯು ನಿರ್ದೋಷಿ ! ಅನ್ಯಾಯವಾಗಿ ಅವಳು ಮರಣಹೊಂದುವಳೆಂದು ವ್ಯಥೆಪಟ್ಟು ನಮ್ಮ ರಹಸ್ಯವನ್ನೆಲ್ಲ ಹೇಳಿರುವೆನು. ನಾವು ಎಂತಹ ಕಷ್ಟಗಳನ್ನಾದರೂ ಸಹಿಸಬಲ್ಲೆವು ; ಆದರೆ ಅನ್ಯರಿಗಾಗುವ ತೊಂದರೆಗಳನ್ನು ಮಾತ್ರ ನೋಡಿ ಸಹಿಸಲಾರೆವು. ಇನ್ನು ಉದಯಪುರಿಯನ್ನು ಶಿಕ್ಷಿಸಬಾರದು. ನಾವಿಬ್ಬರೂ ಈಗ ನಿಮ್ಮ ಕೈಸೇರಿರುವೆವು. ಸೂಕ್ತ ತೋರಿದಂತೆ ಮಾಡಬಹುದು" ಎಂದು ಹೇಳಿದಳು.

ಬಾದಶಹನು ಬಂದಿರೆಯ ಧೈರ್ಯ, ಗಂಭೀರಯುಕ್ತವಾದ ವಾಕ್ಯಗಳಿಂದ ಸ್ತಬ್ಧನಾಗಿ ಸ್ವಲ್ಪಹೊತ್ತು ಅವಳನ್ನೇ ನೋಡಿ ಅವಳ ಅನಿಂದಿತವಾದ ತೇಜಸ್ಸಿನಿಂದ ಉದಯಪುರಿಯು ನಿಜವಾಗಿಯೂ ನಿರ್ದೋಷಿಯೆಂದು ನಿರ್ಧರಿಸಿ ಅವಳ ವಿಷಯದಲ್ಲಿ ತನಗಿದ್ದ ಅನುಮಾನವೆಲ್ಲವನ್ನೂ ಬಿಟ್ಟುಬಿಟ್ಟನು. ತನ್ನ ಎದುರಿಗಿದ್ದ ಛೋಟುಸಿಂಗನು ಮಾಯಾ ವೇಷಧಾರಿಯಾದ ದುರ್ಗಾದಾಸನೆಂದು ತಿಳಿದ ಕೂಡಲೆ, ಆತನ ಪರಾಕ್ರಮ ಶೌರ್ಯ ಧೈರ್ಯಾದಿಗಳನ್ನು ಹಿಂದೆ ತಾನು ಎಷ್ಟೋ ಬಾರಿ ಕೇಳಿದ್ದುದರಿಂದಲೂ ಅನೇಕ ಯುದ್ಧಗಳಲ್ಲಿ ಎಂದರೆ ಮುಖ್ಯವಾಗಿ ಕಾಬೂಲ್ ದೇಶದಲ್ಲಿ ಈತನು

ತೋರಿಸಿದ ಪರಾಕ್ರಮದಿಂದಲೂ ಬಾದಶಹನ ಶರೀರವು ಭಯದಿಂದ ನಡುಗಿತು; ಇಷ್ಟೇ ಅಲ್ಲ, ವೇಷಧಾರಿಯಾಗಿ ಜನಾನಾವನ್ನು ಪ್ರವೇಶಿಸಿ ತೋರಿಸಿದ ಪ್ರತ್ಯಕ್ಷ ಸಾಹಸ ಕೃತ್ಯವನ್ನು ನೋಡಿ ಆತನಿಗೆ ಶಂಕೆಯುಂಟಾಯಿತು. ಬಾದಶಹನು ಸೂಕ್ಷ್ಮಬುದ್ಧಿಯುಳ್ಳವನಾದುದರಿಂದಲೂ ಕಾರ್ಯಾಕಾರ್ಯ ಚತುರೋಪಾಯ ವಿಚಕ್ಷಣನಾದುದರಿಂದಲೂ ದುರ್ಗಾದಾಸನಿಗೆ ಯಾವ ಶಿಕ್ಷೆಯನ್ನೂ ವಿಧಿಸದ, ಅಂತಹ ಅಪ್ರತಿಮ ವೀರನು ತನ್ನ ಹತ್ತಿರದಲ್ಲಿದ್ದರೆ ತನ್ನ ಕೋರಿಕೆಗಳೆಲ್ಲವೂ ನಿಸ್ಸಂದೇಹವಾಗಿ ನೆರವೇರುವುದೆಂದು ಯೋಚಿಸಿ ದುರ್ಗಾದಾಸನನ್ನು ಕುರಿತು ಮೃದುವಾಕ್ಯಗಳಿಂದ "ಅಯ್ಯಾ, ದುರ್ಗಾದಾಸ! ನಿನ್ನ ಅಸಮಾನ ಪರಾಕ್ರಮವನ್ನೂ ಚಾತುರ್ಯವನ್ನೂ ನಾನು ಹಿಂದೆ ಎಷ್ಟೋ ಸಲ ಕೇಳಿದ್ದೇನೆ. ಇಷ್ಟೇ ಅಲ್ಲದೆ ಯಶವಂತಸಿಂಹನ ಸೈನ್ಯದಲ್ಲಿ ನಾನು ನಿನ್ನನ್ನು ನೋಡಿದಂತೆ ಜ್ಞಾಪಕವಿರುವುದು. ನನ್ನ ಸ್ನೇಹಿತನಾದ ಯಶವಂತಸಿಂಹನೊಡನೆ ಹೊರಟು ಅನೇಕ ಯುದ್ಧಗಳಲ್ಲಿ ಜಯಶಾಲಿಯಾಗಿ ನನಗೆ ಕೀರ್ತಿಯನ್ನೂ ತಂದಿರುವೆ. ನಿನ್ನ ರಾಜಭಕ್ತಿಯನ್ನೂ ನೋಡಿ ನಾನು ಬಹು ಸಂತೋಷಪಟ್ಟೆನು. ಇಂದಿನಿಂದಲೂ ನೀನು ನನ್ನ ಸಮ್ಮುಖದಲ್ಲಿ ಸುಖದಿಂದಿರಬಹುದು. ನಿನಗೆ ಎಷ್ಟು ಮಾತ್ರವೂ ಕೊರತೆಯಿಲ್ಲದಂತೆ "ಪಂಚ ಹಜಾರಿ ಮುನ್ಸಿಬ್‌ದಾರ್" ಪದವಿಯನ್ನು ಕೊಡುವೆನು" ಎಂದು ಹೇಳಲು, ದುರ್ಗಾದಾಸನು ಗಂಭೀರಭಾವದಿಂದ "ಕ್ಷಮಿಸಬೇಕು, ಯಶವಂತಸಿಂಹನು ಗತಿಸಿದ ಮೇಲೆ ನಾನು ಇತರರನ್ನು ಸೇವಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವೆನು. ಯಶವಂತಸಿಂಹನೊಡನೆ ದುರ್ಗಾಸಿಂಹನ ಪ್ರಾಣವು ಕೂಡ ಹೋಗಿರುವುದೆಂದು ತಿಳಿದು ಮನ್ನಿಸಬೇಕು." ಎಂದು ಉತ್ತರವಿತ್ತನು. ಅದಕ್ಕೆ ಬಾದಶಹನು ನಗುತ್ತ—ಸರಿಯೆ, ಅವಸರವೇನೂ ಇಲ್ಲ. ನೀನೂ ನಿನ್ನ ತಂಗಿಯೂ ಸೇರಿ ಈ ವಿಷಯದಲ್ಲಿ ಚನ್ನಾಗಿ ಆಲೋಚಿಸಿರಿ. ಯುಕ್ತಾಯುಕ್ತಗಳನ್ನು ಆಲೋಚಿಸಿ, ಆಬಳಿಕ ನಿಮ್ಮ ಅಭಿಪ್ರಾಯಗಳನ್ನು ನನಗೆ ತಿಳಿಸಿರಿ." ಎಂದು

ಹೇಳಿ ದುರ್ಗಾಸನನ್ನು ಪ್ರತ್ಯೇಕ ಬಿಡಾರದಲ್ಲಿರಿಸಿ, ಬಿಡಾರದ ಸುತ್ತಲೂ ತನ್ನ ಭಟರನ್ನು ಕಾವಲಿರಿಸಿದನು.

ರೋಷನಾರಾ ಮಾಡಿದ ಮೋಸವನ್ನು ತಿಳಿದ ಮೇಲೆ, ಉದಯಪುರಿಯ ವಿಷಯವಾಗಿ ತಾನು ಪಟ್ಟ ಅನುಮಾನವನ್ನೂ ದುಡುಕಿ ಅವಳಿಗೆ ತಾನು ಮಾಡಿದ ಅಪಮಾನವನ್ನೂ ಕುರಿತು, ಬಾದಶಹನು ಪಶ್ಚಾತ್ತಾಪಪಟ್ಟು, ಉದಯಪುರಿಯನ್ನು ಅನೇಕ ವಿಧವಾಗಿ ಸಮಾಧಾನಪಡಿಸಿ, ತನ್ನ ಅಪರಾಧವನ್ನು ಕ್ಷಮಿಸೆಂದು ಕೇಳಿಕೊಂಡನು. ಸರಳಹೃದಯದ ಉದಯಪುರಿಯು ಬಾದಶಹನ ವಾಕ್ಯಗಳಿಂದ ಸಮಾಧಾನ ಹೊಂದಿ ಮನಸ್ಸಿನ ಉದ್ವೇಗವನ್ನು ಬಿಟ್ಟಳು. ರೋಷನಾರೆಯು ಉದಯಪುರಿಯ ಜನಾನೆಯಲ್ಲಿ ತನಗಾದ ಪರಾಭವಕ್ಕೆ ಇಂದಿರೆಯೇ ಕಾರಣಳೆಂದೂ ತನ್ನ ಕಪಟವ್ಯೂಹವು ಇಂದಿರೆಯಿಂದಲೇ ಭೇದಿಸಲ್ಪಟ್ಟಿತೆಂದೂ ತಿಳಿದು ಇಂದಿರೆ ಉದಯಪುರಿ ಇವರಿಬ್ಬರ ಮೇಲೆಯೂ ದ್ವೇಷವನ್ನು ಸಾಧಿಸಲು ಸ್ಥಿರಸಂಕಲ್ಪಳಾದಳು.

---

## ಇಪ್ಪತ್ತೆಂಟನೆಯ ಪ್ರಕರಣ.

( ಫಕೀರನು )

ರೋಷನಾರೆಯು, ಇಂದಿರೆಯೇ ತನ್ನ ಕಪಟವ್ಯೂಹವನ್ನು ಭೇದಿಸಿದಳೆಂದು ತಿಳಿದುದುಮೊದಲು ಅವಳನ್ನು ಹೇಗಾದರೂ ಮಾಡಿ ಸಂಹರಿಸಿ ತನ್ನ ಮನೋಭೀಷ್ಟವನ್ನು ನೆರವೇರಿಸಿಕೊಳ್ಳಬೇಕೆಂದು ಸಂಕಲ್ಪಿಸಿ ಎಷ್ಟೋ ಉಪಾಯಗಳನ್ನು ಮಾಡಿದಳು; ಆದರೆ ಅದಾವುದೂ ಫಲಕಾರಿಯಾಗದೆ ಇವಳ ದುಃಖವನ್ನು ಮತ್ತಷ್ಟು ಹೆಚ್ಚಿಸುತ್ತ ಬಂದವು. ಹೀಗಿರಲು

ಒಂದುದಿನ ಒಬ್ಬ ಫಕೀರನು ಕೋಟೆಯೊಳಗೆ ಪ್ರವೇಶಿಸಿ ಜನಾನಾಕ್ಕೆ ಹೋಗುತ್ತಿದ್ದನು. ರಾಣೀವಾಸವನ್ನು ಪ್ರವೇಶಿಸಲು ಸರ್ವರಿಗೂ ಅನುಮತಿಯಿಲ್ಲವಾದರೂ ಸ್ವಮತಪ್ರಸಾರಕನಾದ ಔರಂಗಜೇಬನು ಫಕೀರರನ್ನು ಮಾತ್ರ ಒಳಗೆ ಬಿಡಬಹುದೆಂದು ಆಜ್ಞೆ ಮಾಡಿದ್ದನು. ಈ ಕಾರಣದಿಂದ ಪಟ್ಟಣದಲ್ಲಿದ್ದ ಫಕೀರರು ನಿರಾತಂಕವಾಗಿ ಅಂತಃಪುರಕ್ಕೆ ಹೋಗಿ ಬರುತ್ತಿದ್ದರು. ಹಾಗೆಯೇ ನಮ್ಮ ಫಕೀರನು ದ್ವಾರಪಾಲಕರ ಅಪ್ಪಣೆಯಿಲ್ಲದೆ ಸ್ವೇಚ್ಛೆಯಾಗಿ ಒಳಹೊಕ್ಕು ಜನಾನೆಯಲ್ಲಿ ತಿರುಗಾಡುತ್ತಿದ್ದನು. ಕಾಷಾಯಾಂಬರಧಾರಿಯಾಗಿ ಹಲವು ಬಣ್ಣದ ಹರಳುಗಳುಳ್ಳ ಹಾರವನ್ನು ಕಂಠದಲ್ಲಿ ಧರಿಸಿ ಸದಾ ಅಲ್ಲಾಧ್ಯಾನಪರನಾಗಿರುವಂತೆ ನಟಿಸುತ್ತಿದ್ದ ಆ ನಮ್ಮ ಫಕೀರನನ್ನು ನೋಡಿ ಅಲ್ಲಿದ್ದ ಮಹಮ್ಮದೀಯರು ಪ್ರತಿದಿನವೂ ಸ್ವಲ್ಪ ಅಕ್ಕಿಯನ್ನೂ ಕೆಲವು ಕಾಸುಗಳನ್ನೂ ಕೊಡುತ್ತಿದ್ದರು. ಆತನು ಆಗಾಗ ಅರಬ್ಬೀ ಫಾರಸೀ ಪದ್ಯಗಳನ್ನು ಹೇಳುತ್ತ, ಮಹಮ್ಮದೀಯರೆಲ್ಲರೂ ಪ್ರತಿದಿನವೂ ಕುರಾನನ್ನೋದಬೇಕೆಂದೂ ಸಾಯಂಕಾಲ ಅಲ್ಲಾ ಪ್ರಾರ್ಥನೆ ಮಾಡಬೇಕೆಂದೂ ಬಂದ ಫಕೀರರೆಲ್ಲರನ್ನೂ ಆದರಿಸಬೇಕೆಂದೂ ಉಪದೇಶಿಸುತ್ತಿದ್ದನು. ಈತನ ಉಪದೇಶವನ್ನು ಕೇಳಿದ ಮಹಮ್ಮದೀಯರೆಲ್ಲರೂ ಈತನು ಇತರ ಫಕೀರರಂತಲ್ಲದೆ ದಿವ್ಯಜ್ಞಾನವುಳ್ಳವನೆಂದು ತಿಳಿದು ಅತ್ಯಂತ ಗೌರವವನ್ನು ತೋರಿಸುತ್ತಿದ್ದರು. ಫಕೀರನು ಸ್ವಲ್ಪ ಹೊತ್ತು ಅತ್ತಿತ್ತ ತಿರುಗಾಡಿ ಕ್ರಮಕ್ರಮವಾಗಿ ಉದಯಪುರಿಯ ಜನಾನಾವನ್ನು ಸಮೀಪಿಸಿ ಅರಬ್ಬಿ, ಪಾರಸಿ ಪದ್ಯಗಳನ್ನು ಹಾಡತೊಡಗಿದನು. ಉಪ್ಪರಿಗೆಯಲ್ಲಿದ್ದ ಉದಯಪುರಿಯು ಇಂದಿರೆಯೊಡನೆ ಇಳಿದು ಬರುತ್ತ ಫಕೀರನ ಹಾಡುಗಳಿಗೂ ಪದ್ಯಗಳಿಗೂ ಸಂತೋಷಪಟ್ಟು ಇಂದಿರೆಯಕೈಗೆ ಒಂದು ಮೊಹರಿಯನ್ನು ಕೊಟ್ಟು ಫಕೀರನಿಗೆ ಕೊಡುವಂತೆ ಕಳುಹಿದಳು. ಇಂದಿರೆಯು ಕೂಡಲೆ ಫಕೀರನ ಬಳಿಗೆ ಬಂದು—"ಫಕೀರಜೀ, ನಮ್ಮ ಉದಯಪುರಿ ಮಹಾರಾಣಿಯವರು ನಿಮಗೆ ಈ ಬಹುಮಾನವನ್ನು ಕೊಟ್ಟುಬಾರೆಂದು ಕಳುಹಿರುವರು. ತೆಗೆದುಕೊಳ್ಳಿರಿ" ಎಂದು ಹೇಳಿ ಆ ಮೊಹರಿಯನ್ನು ಆತನಿಗೆ ಕೊಟ್ಟಳು. ಫಕೀ

ರನು ಅತ್ಯಂತ ಸಂತೋಷದಿಂದ ಇಂದಿರೆಯು ಕೊಟ್ಟ ಬಹುಮಾನವನ್ನು ಸ್ವೀಕರಿಸಿ ಒಂದುಸಲ ಅವಳ ಮುಖಕಮಲವನ್ನು ನೋಡಿದನು. ಈ ವರೆಗೂ ಪರಬ್ರಹ್ಮನನ್ನು ತಿಳಿಯಬೇಕೆಂದಿದ್ದ ಆತನ ಅಂತರ್ದೃಷ್ಟಿಯು ಇಂದಿರೆಯನ್ನು ನೋಡಿದೊಡನೆಯೇ ವಿಕಾಸಹೊಂದಿತು. ಆತನು ಸ್ವಲ್ಪಹೊತ್ತು ಯೋಚಿಸಿ ಕಡೆಗೆ " ಶುಭಾಂಗಿ, ನೀನು ಯಾರು! " ಎಂದು ಸಾಹಸದಿಂದ ಕೇಳಿದನು.

ಇಂದಿರಾ :— ನಾನು ಉದಯಪುರಿಬೇಗಮರವರ ದಾಸಿ

ಫಕೀರ :— ನೀನು ಮುಸಲ್ಮಾನಬಾಲೆಯೊ ! ಹಿಂದೂ ಬಾಲೆಯೊ ?

ಇಂದಿರಾ:— ನಾನು ಹಿಂದೂಬಾಲೆಯೇ

ಫಕೀರ:— ಹಾಗಾದರೆ ನೀನು ಇಲ್ಲಿಗೆ ಬರಲು ಕಾರಣ ?

ಇಂದಿರಾ:— ನನ್ನ ಗ್ರಹಚಾರವು ನನ್ನನ್ನಿಲ್ಲಿಗೆ ಕರೆತಂದಿರುವುದು.

ಫಕೀರನು ಇನ್ನೂ ಸ್ವಲ್ಪಹೊತ್ತು ಅವಳೊಡನೆ ಮಾತನಾಡಬೇಕೆಂದು ಪ್ರಯತ್ನಪಡುತ್ತಿದ್ದಂತೆಯೇ ಇಂದಿರೆಯು ಅಲ್ಲಿ ನಿಲ್ಲದೆ ಹೊರಟು ಹೋದಳು. ಫಕೀರನು ಅವಳ ಕಡೆಯೇ ದೃಷ್ಟಿಯಿಟ್ಟನು. ನೋಡುನೋಡುತ್ತಿದ್ದಂತೆಯೇ ಆತನ ಮುಖವು ಯೋಚನೆಗೆ ಗುರಿಯಾದಂತೆ ತೋರುತ್ತ ಒಂದಿತು. ಫಕೀರನು ಸ್ವಲ್ಪಹೊತ್ತು ಅಲ್ಲಿದ್ದು ಆ ಬಳಿಕ ಅಲ್ಲಿಂದ ಹೊರಟು ಹೋಗಿ ಅಂದಿನಿಂದ ದಿನವೂ ತಪ್ಪದೆ ಉದಯಪುರಿಯ ಜನಾನಾವನ್ನು ಸಮೀಪಿಸಿ ಭಿಕ್ಷಾಟನೆಯನ್ನು ಮಾಡುತ್ತಿದ್ದನು. ಅಲ್ಲಿದ್ದ ಸೇವಕರೂ ದ್ವಾರಪಾಲಕರೂ ಫಕೀರನಲ್ಲಿ ಅತ್ಯಂತ ಭಕ್ತಿವಿಶ್ವಾಸಗಳುಳ್ಳವರಾಗಿದ್ದರು. ಆದುದರಿಂದ ಫಕೀರನು ಆಗಾಗ ತನ್ನ ವಾಕ್ಚಾತುರ್ಯದಿಂದ ಇಂದಿರೆಯ ಪ್ರಸ್ತಾಪವನ್ನೆತ್ತಿ ಅವರಿಗೆ ಯಾವವಿಧವಾದ ಅನುಮಾನವೂ ಉಂಟಾಗದರೀತಿ ಉಪಾಯದಿಂದ ಅವಳ ಆಚಾರ, ವಿಚಾರಗಳನ್ನೂ ದಾಸೀವೃತ್ತಿಯಲ್ಲಿದ್ದರೂ ಅವಳ ಸ್ವಮತಾಭಿಮಾನ, ಗೌರವಬುದ್ಧಿ, ಧರ್ಮಚಿಂತನೆ, ಧೈರ್ಯ, ಸ್ಥೈರ್ಯಾದಿ ಸೌಶೀಲ್ಯಗಳನ್ನೂ ಕೇಳಿ ಅತ್ಯಂತ ಸಂತೋಷಪಟ್ಟನು. ಹಾಗೆಯೇ ದುರ್ಗಾದಾಸನ ವಿಚಾರವನ್ನೂ ತಿಳಿದನು. ಇಂದಿರಾ ದುರ್ಗಾದಾಸರನ್ನು

ಹೇಗಾದರೂ ಮಾಡಿ ಕಾರಾಗೃಹದಿಂದ ಬಿಡುಗಡೆ ಮಾಡಬೇಕೆಂದು ದೃಢ ಸಂಕಲ್ಪಮಾಡಿದನು. ಕಾರ್ಯಸಾಧನೆಗೆ ಉಪಾಯವನ್ನು ಚಿಂತಿಸುತ್ತ ರಾಣಿವಾಸದ ವಿಚಾರವನ್ನು ಅತ್ಯಂತ ಶ್ರದ್ಧೆಯಿಂದ ತಿಳಿಯುತ್ತ ಬಂದನು. ಉದಯಪುರಿ ರೋಷನಾರೆಯರಿಗೆ ಪರಸ್ಪರ ದ್ವೇಷವುಂಟಾಗಿರುವುದನ್ನೂ ಮಸಾವದನ ಸ್ವಭಾವವನ್ನೂ ಫರುಕ್‌ಷೈರನ ವೃತ್ತಾಂತವನ್ನೂ ಸುಲಭವಾಗಿ ತಿಳಿದನು. ತನ್ನ ವಾಕ್ಚಾತುರ್ಯದಿಂದಲೂ ನಡತೆಯಿಂದಲೂ ತಾನು ಅದ್ವಿತೀಯ ಪಂಡಿತನೂ ತ್ರಿಕಾಲಜ್ಞನೂ ಮಹಾನುಭಾವನೂ ಆಗಿರುವಂತೆ ಸೇವಕರಿಗೆ ದೃಢವಾದ ನಂಬಿಕೆಯನ್ನುಂಟುಮಾಡಿ ಅವರೆಲ್ಲರನ್ನೂ ತನ್ನ ವಶವರ್ತಿಗಳಾಗಿ ಮಾಡಿಕೊಂಡನು. ಹೀಗೆ ಅವನು ಸೇವಕರೊಡನೆ ಮಾತನಾಡುತ್ತಿದ್ದಾಗಲೆಲ್ಲಾ ಫಕೀರನು ತನ್ನ ಅಂಗಿಯಿಂದ ಒಂದು ಕಾಗದವನ್ನು ತೆಗೆದುಕೊಂಡು ಅದರ ಮೇಲೆ ಆಗಾಗ ಏನೇನನ್ನೋ ಗುರುತು ಮಾಡುತ್ತಿದ್ದನು.

ಈ ರೀತಿ ಕಪಟದಿಂದ ಸಂಚರಿಸುತ್ತಿದ್ದ ಫಕೀರನು ಎಂದಿನಂತೆ ಒಂದು ದಿನ ಉದಯಪುರಿಯ ಅಂತಃಪುರವನ್ನು ಪ್ರವೇಶಿಸಿದನು. ಅಂದು ಅಲ್ಲಿ ಅಲ್ಲೋಲಕಲ್ಲೋಲವಾಗಿದ್ದಿತು. ಸೇವಕರೆಲ್ಲರೂ ಭಯಚಿತ್ತರಾಗಿ ದಿಕ್ಕುದಿಕ್ಕುಗಳಿಗೂ ಓಡಿಹೋಗುತ್ತಿದ್ದರು. ಉದಯಪುರಿಯು ವಿಚಾರಸಮ್ಮೂಢಳಾಗಿ ಕುಳಿತು ಕಣ್ಣೀರು ಸುರಿಸುತ್ತಿದ್ದಳು. ಆಗ ಕಾರ್ಯಾಂತರವಾಗಿ ಹೋಗಿದ್ದ ಮಸಾವದನು ಅಲ್ಲಿಗೆ ಬಂದು ಕುತೂಹಲದಿಂದ ಇಷ್ಟು ಗಲಭೆಗೆ ಕಾರಣವೇನೆಂದು ಕೇಳಿದನು. "ಇಂದಿರೆಯು ಅಗೋಚರವಾಗಿರುವಳು. ಮಹಾರಾಣಿಯವರು ದುಃಖದಿಂದ ಊಟವನ್ನು ಬಿಟ್ಟು ಕುಳಿತಿರುವರೆಂದು" ಉತ್ತರವು ಬಂದಿತು. ಮಸಾವದನು ಸಿಡಿಲುಬಡಿದಂತೆ ನೆಲದಮೇಲೆ ಕುಕ್ಕರಿಸಿ ಬಿದ್ದು ಮಕ್ಕಳಂತೆ ರೋಧಿಸತೊಡಗಿದನು.

ಈ ವಿದ್ಯಮಾನವೆಲ್ಲವು ಫಕೀರನಿಗೆ ತಿಳಿಯಲು ಅವನು ಭಯಪಟ್ಟು, ಇಂದಿರೆಯೆಲ್ಲಿ ಹೋಗಿರಬಹುದೆಂದು ತನ್ನಲ್ಲಿಯೇ ತರ್ಕಿಸಲಾರಂಭಿಸಿದನು.

" ಓಡಿಹೋದರೆ ಎಲ್ಲಿ ಹೋಗಿರಬೇಕು ; ಹಾಗೆ ಓಡಿಹೋಗಲು ಕಾರಣವಿಲ್ಲ. ಉದಯಪುರಿಯು ಅತ್ಯಂತ ಆದರದಿಂದ ಪಾಲಿಸುತ್ತಿರುವಳು. ಒಂದುವೇಳೆ ಓಡಿಹೋಗಿರುವಳೆಂದೇ ಊಹಿಸಿದರೂ ಬುದ್ಧಿಶಾಲಿಯಾದ ಇಂದಿರೆಯು ತನ್ನ ಅಣ್ಣನನ್ನು ಬಿಡುಗಡೆಮಾಡದೆ ತಾನು ಹೀಗೆ ಅದೃಶ್ಯಳಾಗುವಳಲ್ಲ. ಇದೇನೋ ಮೋಸವಾಗಿದೆ. ಯಾರೋ ದ್ವೇಷಿಗಳಿರುವರು. ಇಂದಿರೆಗೆ ಇಲ್ಲಿ ದ್ವೇಷಿಗಳಿರಲು ಕಾರಣವೇನು ? ಓಹೋ ತಿಳಿಯಿತು. ಉದಯಪುರಿಯಲ್ಲಿ ಶತ್ರುತ್ವವನ್ನು ಸಾಧಿಸುತ್ತಿರುವ ರೋಷನಾರೆಯೇ ಈ ಕಾರ್ಯವನ್ನು ಮಾಡಿರುವುದರಲ್ಲಿ ಸಂಶಯವಿಲ್ಲ. ಈಗ್ಗೆ ೨-೩ ದಿನಗಳಿಂದ ಫರುಕ್‌ಷೈರನು ಅಂತಃಪುರದಲ್ಲಿ ಅಲ್ಲಲ್ಲಿ ಹೊಂಚಿ ತಿರುಗುತ್ತಿದ್ದುದಕ್ಕೆ ಈಗ ಕಾರಣವು ತಿಳಿಯಿತು. ಇರಲಿ, ಅವನನ್ನು ದಾರಿಗೆತಂದು ವಿಚಾರವನ್ನು ಚೆನ್ನಾಗಿ ತಿಳಿಯುವೆನು. " ಎಂದು ನಿರ್ಧರಿಸಿ, ಉದಯಪುರಿಯ ಜನಾನಾದಿಂದ ಹೊರಟು ಅರಬ್ಬಿ ಪಾರಸಿಹಾಡುಗಳನ್ನು ಹಾಡುತ್ತ ಅಡಿಗಡಿಗೆ ಅಲ್ಲಾ ಸ್ಮರಣೆಮಾಡುತ್ತ ರೋಷನಾರೆಯ ಅಂತಃಪುರವನ್ನು ಪ್ರವೇಶಿಸಿದನು. ಕೂಡಲೇ ಫರುಕ್‌ಷೈರನು ಬಂದು ಆತನನ್ನು ಇದಿರ್ಗೊಂಡು ಭಯಭಕ್ತಿಯಿಂದ ಸಲಾಮನ್ನು ಮಾಡಿ ಕೈಕಟ್ಟಿ ನಿಂತನು.

ಫಕೀರ:—ನಸುನಗುತ್ತ—"ಫರುಕ್‌ಷೈರ್ ! ನೀನು ಒಳ್ಳೇ ಅದೃಷ್ಟವಂತನೂ ಕಾರ್ಯದಕ್ಷನೂ ಅಹುದು. ನಿನ್ನ ಮೇಲೆ ನಿನ್ನ ಸ್ವಾಮಿಗೆ ಪೂರ್ಣಾನುಗ್ರಹವಿರುವುದು. ನಾನು ಅಮಲ್ ಲೆಕ್ಕವನ್ನು ನೋಡಿ ಹೇಳಿರುವೆನು. ನಿನ್ನ ಮನಸ್ಸಿನಲ್ಲಿ ಬಹುದಿನಗಳಿಂದಿರುವ ಕೋರಿಕೆಯು ಇಷ್ಟರಲ್ಲಿಯೇ ನೆರವೇರುವುದು. "

(ಫರುಕ್‌ಷೈರನು ನಗುತ್ತ ತಲೆಯನ್ನು ತಗ್ಗಿಸಿಕೊಂಡು ನಿಂತನು.)

ಫಕೀರ:—" ಇದೇಕೆ ನಗುವೆ ? ನಾನು ಸುಳ್ಳು ಹೇಳಿಲ್ಲ. ನಿನ್ನ ಮುಖವನ್ನು ನೋಡಿಯೇ ನಿನ್ನ ಮನೋಗತವನ್ನು ತಿಳಿದೆನು. ಬೇಕಾದರೆ ಹೇಳುವೆನು, ಕೇಳು " ಎಂದು ಆತನ ಕಿವಿಯಲ್ಲಿ ಏನೋ ರಹಸ್ಯವಾಗಿ ಹೇಳಿದನು.

ಫರುಕ್‌ಷೈರನು ವಿಸ್ಮಿತನಾಗಿ, "ಆಹ, ಇವನು ಸಾಮಾನ್ಯನಾಗಿಲ್ಲ, ನಾನು ಎಷ್ಟೋ ಫಕೀರರನ್ನು ನೋಡಿರುವೆನು ; ಆದರೆ ಇವನಂತೆ ಸರ್ವಜ್ಞನಾದವನನ್ನು ನಾನು ಎಲ್ಲಿಯೂ ಕಂಡುದಿಲ್ಲ. ಇವನ ಪ್ರಸನ್ನತೆಗೆ ಪಾತ್ರನಾದರೆ ನನ್ನ ಅಭೀಷ್ಟಸಿದ್ಧಿಯಾಗಲು ಸಂದೇಹವಿರದು" ಎಂದು ಯೋಚಿಸುತ್ತ ಆತನನ್ನು ಕುರಿತು—"ಫಕೀರಜೀ, ತಾವು ಇನ್ನೆಷ್ಟು ದಿನಗಳು ಈ ಪಟ್ಟಣದಲ್ಲಿರುವಿರಿ ?" ಎಂದು ಕೇಳಿದನು.

ಫಕೀರ:—ಇಷ್ಟು ದಿನಗಳೆಂಬುವುದು ನಮಗೇನುಗೊತ್ತು ! ಯಾವಾಗ ಬುದ್ಧಿಪುಟ್ಟಿದರೆ ಆಗ ಮತ್ತೊಂದು ಗ್ರಾಮಕ್ಕೆ ಹೋಗುವೆವು. ಎಲ್ಲೆಲ್ಲಿ ಭಕ್ತರಿರುವರೋ ಅಲ್ಲಿಗೆ ಹೋಗಿ ಅವರ ಕೋರಿಕೆಗಳನ್ನು ನೆರವೇರಿಸಬೇಕೆಂದು ನಮಗೆ ನಮ್ಮ ಗುರುಗಳು ಅಪ್ಪಣೆ ಮಾಡಿರುವರು. ಆದುದರಿಂದ ಭಕ್ತರ ಮನೋಭಿಪ್ರಾಯವನ್ನು ದಿವ್ಯದೃಷ್ಟಿಯಿಂದ ಗ್ರಹಿಸಿ ಅವರ ಕೋರಿಕೆಗಳನ್ನು ನೆರವೇರಿಸಿ, ಅವರನ್ನು ಸಂತೋಷಪಡಿಸುವುದೇ ನಮ್ಮ ಕೆಲಸವು. ಹಾಗೆಯೇ ಅಲ್ಲಾಭಕ್ತನಾದ ನಿನ್ನ ಮುಖವನ್ನು ನೋಡಿದೊಡನೆಯೇ ನಿನ್ನ ಅಭಿಮತವು ವಿದಿತವಾಯಿತು. ಈ ಜನಾನಾದಲ್ಲಿರುವ ಸೇವಕರಲ್ಲೆಲ್ಲಾ ನೀನೇ ಬುದ್ಧಿವಂತನು.

ಫರುಕ್‌ಷೈರನು ಫಕೀರನ ಮಾತಿಗೆ ಮರುಳಾಗಿ, ಆತನೊಡನೆ ರಹಸ್ಯವನ್ನು ಹೇಳಬೇಕೆಂದು ಆತನನ್ನು ತನ್ನ ಮನೆಗೆ ಕರೆದುಕೊಂಡುಹೋಗಿ, ಗುಪ್ತಸ್ಥಾನದಲ್ಲಿ ಕುಳಿತು ಹೀಗೆ ಸಂಭಾಷಿಸಿದನು:—

"ಫಕೀರಜೀ, ತಾವು ಸಾಕ್ಷಾತ್ ಅಲ್ಲಾ ಎಂದೇ ನಾನು ನಂಬಿ ನಿಮ್ಮನ್ನು ಆಶ್ರಯಿಸಿರುವೆನು. ನೀವೂ ನನ್ನನ್ನು ನಿಮ್ಮ ಮಗನಂತೆ ಭಾವಿಸಿ ನನ್ನ ಅಭಿಮತವನ್ನು ಸಿದ್ಧಿಗೊಳಿಸಿ ಅನುಗ್ರಹಬುದ್ಧಿಯಿಂದ ಕಾಪಾಡಬೇಕು. ಕಾರ್ಯಸಾಧನೆಯಾದ ಬಳಿಕ ನಾನು ತಮಗೆ ಬಹುಮಾನವನ್ನು ಕೊಡುವೆನು."

ಫಕೀರ:—ಹುಚ್ಚ ! ಮತ್ತೊಂದಾವರ್ತಿ ಹಾಗೆ ಹೇಳಬೇಡ. ನಾನು ಲಂಚವನ್ನು ತೆಗೆದುಕೊಳ್ಳುವವನಲ್ಲ. ಭಕ್ತರ ಕೋರಿಕೆಗಳನ್ನು ನೆರವೇರಿಸುವುದು ನನಗೆ ವಿಧಿ! ಲಂಚವನ್ನು ಮುಟ್ಟದೆ ಪರೋಪಕಾರವನ್ನು ಮಾಡಬೇಕೆಂದು ನನಗೆ ಗುರುಗಳ ಆಜ್ಞೆಯಾಗಿರುವುದು. ನನಗೆ ನೀನೇನೂ ಲಂಚವನ್ನು ಕೊಡಬೇಕಾಗಿಲ್ಲ. ನನ್ನ ಮಾತಿನಂತೆ ನೀನು ನಡೆಯುವುದಾದರೆ ನಿನಗೆ ಗುರುದತ್ತವಾದ ಉಂಗುರವೊಂದನ್ನು ಕೊಡುವೆನು. ಅದನ್ನು ಕೈಯಲ್ಲಿಟ್ಟುಕೊಂಡ ಬಳಿಕ ನೀನು ಯಾವಾಗಲೂ ಅನೃತವನ್ನಾಡಬಾರದು. ಹಾಗಿರುವುದಾದರೆ ನಿನ್ನ ಕೋರಿಕೆಯೀಡೇರುವುದು. ಆದರದು ನಿನಗೆ ದುಸ್ಸಾಧ್ಯವು!

ಫರುಕ್:—ಫಕೀರಜೀ, ತಾವು ಸ್ವಲ್ಪವೂ ಸಂದೇಹಪಡುಬೇಕಾಗಿಲ್ಲ. ನಾನು ಸ್ವಪ್ನದಲ್ಲಿಯೂ ಸುಳ್ಳು ಹೇಳುವುದಿಲ್ಲವೆಂದು ಪ್ರಮಾಣಮಾಡುವೆನು. ಉಂಗುರವನ್ನು ಅನುಗ್ರಹಿಸಿ.

ಫಕೀರ:—ಆ ಉಂಗುರವು ಸಾಮಾನ್ಯವಾದುದಲ್ಲ ಅದರ ಪ್ರಭಾವವು ಅದ್ಭುತವಾದುದು. ಅದನ್ನು ಧರಿಸಿ ನೀನು ನಿನ್ನ ಬೇಗಮಳ ಬಳಿಗೆ ಹೋದರೆ, ಆಕೆಗೆ ನೀನೊಬ್ಬ ದಿವ್ಯಸುಂದರ ಪುರುಷನಂತೆ ಕಾಣುವೆ. ಒಡನೆಯೇ ಅವಳು ನಿನ್ನಲ್ಲಿ ಮೋಹಗೊಳ್ಳುವಳು. ಇಂತಹ ಮಹಾತ್ಮ್ಯವುಳ್ಳ ಉಂಗುರವನ್ನು ಕೈಯಲ್ಲಿಟ್ಟ ಮಾತ್ರದಿಂದ ಸಂತೋಷವಲ್ಲ. ಅದಕ್ಕೆ ವ್ಯತಿರೇಕವಾಗಿ ನೀನು ನಡೆದುದೇ ಆದರೆ, ನೀನು ಖಂಡಿತವಾಗಿ ಮೃತ್ಯುವಿಗೆ ತುತ್ತಾಗುವೆ. ಒಂದುವೇಳೆ ಈ ಸಂಗತಿ ನಮ್ಮ ಗುರುಗಳಿಗೆ ತಿಳಿದುದೇ ಆದರೆ ಅಂತಹ ನೀಚನಿಗೆ ಉಂಗುರವನ್ನೇಕೆ ಕೊಟ್ಟೆಯೆಂದು ನನ್ನ ಮೇಲೆ ಆಗ್ರಹಿಸುವರು. ಆದುದರಿಂದ ಎಂತಹ ಸಮಯದಲ್ಲಿಯಾದರೂ ಸುಳ್ಳನ್ನಾಡದಿರುವವರಿಗೇ ಕೊಡಬೇಕು.

ಪರುಕ್:—ಫಕೀರಜೀ, ನಿಮಗೆ ಯಾವರೀತಿಯಿಂದ ನಂಬಿಕೆಯ

ನ್ನುಂಟುಮಾಡಲಿ ? ನಾನು ಯಾವಾಗಲೂ ಸುಳ್ಳು ಹೇಳುವುದಿಲ್ಲ. ಎಷ್ಟು ಬೇಕಾದರೂ ಪರೀಕ್ಷಿಸಬಹುದು.

ಫಕೀರ್:—ಹಾಗಾದರೆ, ನನ್ನ ಪ್ರಶ್ನೆಗಳಿಗೆ ನಿಜವಾದ ಉತ್ತರಗಳನ್ನು ಕೊಡು. ಆ ಬಳಿಕ ವಿಚಾರಮಾಡುವೆನು. ಆ ದಿನ ನಿಮ್ಮ ಬೇಗಂರವರ ಚಂದ್ರಹಾರವನ್ನು ನೀನೇನು ಮಾಡಿದೆಯೋ ಹೇಳು ?

ಫರುಕ್:—(ತನ್ನ ಕಳ್ಳತನವನ್ನು ಈತನು ಹೇಗೆ ತಿಳಿದನೆಂದು ವಿಸ್ಮಿತನಾಗಿ) ಸ್ವಾಮೀ ! ಅದು ಚಂದ್ರಹಾರವಲ್ಲ, ಸೂರ್ಯಹಾರ ; ಅದನ್ನು ಒಬ್ಬ ವರ್ತಕನಿಗೆ ಮಾರಿದೆನು.

ಫಕೀರ್:—ಶಹಬಾಸ್ ! ನಿಜವನ್ನು ಹೇಳಿದೆ. ನನಗೆ ತಿಳಿದಿದ್ದರೂ ನಿನ್ನನ್ನು ಪರೀಕ್ಷಿಸಲು ಹಾಗೆ ಕೇಳಿದೆ. ಆಗಲಿ, ನಿಮ್ಮ ಬೇಗಂ ಎಷ್ಟು ಮಂದಿಯನ್ನು ಸೆರೆಯಲ್ಲಿಟ್ಟಿರುವಳೋ ಹೇಳು ?

ಫರುಕ್:—ಇಪ್ಪತ್ತುಮೂರು ಜನರು ಸೆರೆಯಲ್ಲಿರುತ್ತಾರೆ.

ಫಕೀರನು ತನ್ನ ಜೇಬಿನಲ್ಲಿದ್ದ ಕಾಗದವನ್ನು ಹೊರಗೆ ತೆಗೆದು ಅದರಲ್ಲಿದ್ದ ಉಳಿದ ಸಾಲುಗಳನ್ನು ಮುಚ್ಚಿ ಫರುಕ್ ಷೈರನು ಹೇಳಿದ ಸಂಖ್ಯೆಯನ್ನು ಮಾತ್ರ ತೋರಿಸಿ, ತನಗೆ ಎಲ್ಲವೂ ತಿಳಿದಿರುವುದೆಂಬುದಕ್ಕೆ ಇದೇ ನಿದರ್ಶನವೆಂದನು.

ಫರುಕ್‌ಷೈರನು ಮತ್ತೂ ವಿಸ್ಮಿತನಾಗಿ ಫಕೀರನನ್ನೇ ನೋಡುತ್ತ ನಿಂತನು.

ಫಕೀರ:—ಫರುಕ್‌ಷೈರ್ ! ನಿನ್ನಿನ ರಾತ್ರಿ ನಿನ್ನ ಬೇಗಮಿನ ಅಪ್ಪಣೆಯಂತೆ ನೀನೇನು ಮಾಡಿರುವೆಯೋ ಹೇಳು. ಹಿಂತೆಗೆಯುತ್ತಿರುವೆಯೇಕೆ ? ನಾನೆಲ್ಲವನ್ನೂ ದಿವ್ಯದೃಷ್ಟಿಯಿಂದ ತಿಳಿದಿರುವೆನು. ನಿನ್ನ ಸತ್ಯಸಂಧತೆಯ ಪರೀಕ್ಷಾರ್ಥವಾಗಿ ಕೇಳಿರುವೆನು. ನಿಜವನ್ನು ಹೇಳು.

ಫರುಕ್‌ಷೈರ್:— ಫಕೀರಜೀ ! ನನ್ನಲ್ಲಿ ನೀವು ಇನ್ನಾದರೂ ನಂಬಿಕೆಯುಳ್ಳವರಾಗಬೇಕು. ನಮ್ಮ ಬೇಗಮರು ಉದಯಪುರಿಬೇಗಮರ ದಾಸಿಯಾದ ಹಿಂದೂಬಾಲೆಯೊಬ್ಬಳನ್ನು ಕೊಲ್ಲಿಸಬೇಕೆಂದು ಯೋಚಿಸಿ, ಅವಳನ್ನು ಹಿಡಿದು ತರಬೇಕೆಂದು ನನಗಾಜ್ಞಾಪಿಸಿದರು. ೨-೩ ದಿನಗಳಿಂದಲೂ ಆಕೆಯನ್ನು ಹಿಡಿಯಲು ಪ್ರಯತ್ನಿಸಿದರೂ ಸಮಯವು ಸಾಧಿಸಲಿಲ್ಲ. ನಿನ್ನಿನ ರಾತ್ರಿ ಹಿಡಿದುಕೊಂಡು ಒಂದು ಕಾರಾಗೃಹದಲ್ಲಿಟ್ಟೆನು. ಯಾರೊಡನೆಯೂ ಹೇಳಕೂಡದೆಂದು ನಮ್ಮ ಬೇಗಮರ ಅಪ್ಪಣೆಯಾಗಿರುವುದರಿಂದ ಹೇಳಲು ಹಿಂದೆಗೆದೆನು.

ಫಕೀರ:— ಸಂತೋಷವಾಯಿತು, ಫರುಕ್‌ಷೈರ್ ! ನಿನಗೆ ಯಜಮಾನಿಯಲ್ಲಿರುವ ಭಕ್ತಿ ಸ್ತುತ್ಯವಾದುದೇಸರಿ. ಕಾಫರರು ಅತಿದುರ್ಮಾರ್ಗರು. ಅವರನ್ನೇನುಮಾಡಿದರೂ ತೀರದು. ಇನ್ನು ನಿನ್ನಲ್ಲಿ ಸಂಶಯಪಡುವುದಿಲ್ಲ. ನಿನ್ನ ಅದೃಷ್ಟವು ಚನ್ನಾಗಿರುವುದರಿಂದ ಹಿಂದೆ ಎಷ್ಟೋ ಜನರು ಪ್ರಾರ್ಥಿಸಿದರೂ ಅಲಭ್ಯವಾದ ಉಂಗುರವು ಈಗ ನಿನಗೆ ಲಭಿಸಿರುವುದು. ಇದರಿಂದ ನಿನ್ನ ಕೋರಿಕೆಯನ್ನು ನೆರವೇರಿಸಿಕೊಳ್ಳಬಹುದು.

ಹೀಗೆ ಹೇಳಿ ತನ್ನ ಚೀಲದಲ್ಲಿದ್ದ ಉಂಗುರವೊಂದನ್ನು ತೆಗೆದು ಆತನ ಕೈಬೆರಳಿಗೆ ತಾನೇ ಹಾಕಿ--"ಅಯ್ಯಾ, ಫರುಕ್‌ಷೈರ್ ! ಹೀಗೆಯೇ ನಿಜವನ್ನು ಹೇಳುತ್ತಿರಬೇಕು ; ಎಚ್ಚರಿಕೆಯಿರಲಿ ! " ಎಂದು ಎಚ್ಚರಿಸಿದನು. ವ್ಯಾಘ್ರನಖದಿಂದ ಮಾಡಲ್ಪಟ್ಟ ಉಂಗುರಗಳು ಸಾಮಾನ್ಯವಾಗಿ ಫಕೀರರಲ್ಲಿರುವುವು. ಫಕೀರರು ಆ ಉಂಗುರಗಳನ್ನು ತಮ್ಮ ಕೈಯಿಂದಲೇ ತೆಗೆದು ಕೊಟ್ಟರೆ ಅವು ಅತ್ಯಂತ ಮಹತ್ವವುಳ್ಳುವೆಂದು ಮಹಮ್ಮದೀಯರ ನಂಬಿಕೆ. ಇದಲ್ಲದೆ ಅವರಿಗೆ ಜ್ಯೋತಿಷದಲ್ಲಿಯೂ ನಂಬಿಕೆಯಿರುವುದು. ಈ ಕಾರಣದಿಂದ ಫರುಕ್‌ಷೈರನು ಫಕೀರನ ಮಾತಿನಲ್ಲಿ ಪೂರ್ಣವಿಶ್ವಾಸವಿಟ್ಟು ಆತನನ್ನು ಕುರಿತು ನಮ್ರಭಾವದಿಂದ—" ಫಕೀರಜೀ, ಇನ್ನು ನನಗೆ ಅಪ್ಪಣೆಯಾಗಬೇಕು. ನಮ್ಮ ಬೇಗಮರು ಉದಯಕ್ಕೆ ಸರಿಯಾಗಿ

ಬರಹೇಳಿದ್ದರು ಇಷ್ಟು ಹೊತ್ತಾಯಿತು. ಇನ್ನು ಹೋದರೆ...... ಯಾವ ಶಿಕ್ಷೆಯಾದೀತೋ ತಿಳಿಯದು." ಎಂದು ಹೇಳಿದನು. ಅದಕ್ಕೆ ಫಕೀರನು—"ನಿನಗಿಷ್ಟು ಭಯಕ್ಕೆ ಕಾರಣವಿಲ್ಲ. ನಿನ್ನ ಉಂಗುರದ ಮಹಿಮೆಯನ್ನು ಪರೀಕ್ಷಿಸಲು ನೀನು ಒಂದುಸಲ ನಿಮ್ಮ ಬೇಗಮಿನ ಬಳಿಗೆ ಹೋಗಿ ಬಾ. ನೀನು ಬರುವವರೆಗೂ ನಾನಿಲ್ಲಿಯೇ ಇರುವೆನು. ಉಳಿದ ಮಾತು ಆಮೇಲಾಗಲಿ" ಎಂದನು. ಕೂಡಲೆ ಫರುಕ್‌ಷೈರನು ರೋಷನಾರೆಯನ್ನು ಕಾಣಲು ಹೊರಟನು.

ರೋಷನಾರೆಯು ತನ್ನ ಅಂತಃಪುರದಲ್ಲಿ ಒಬ್ಬಳೇ ಕುಳಿತು ಇಂದಿರೆಯನ್ನು ಕೊಂದು ತನ್ನ ಇಷ್ಟವನ್ನು ಈಡೇರಿಸಿಕೊಳ್ಳುವ ಆಲೋಚನೆಯಲ್ಲಿಯೂ ಅದಕ್ಕೆ ಕಾರಣಭೂತನಾದ ಫರುಕ್‌ಷೈರನನ್ನು ಇನ್ನೂ ಹೆಚ್ಚಾಗಿ ಮನ್ನಿಸಿ ಉಬ್ಬಿಸಬೇಕೆಂಬ ಆಲೋಚನೆಯಲ್ಲಿಯೂ ಇದ್ದಳು. ಅದೇ ಸಮಯದಲ್ಲಿಯೇ ಫರುಕ್‌ಷೈರನು ಅವಳ ಮುಂದೆ ಬಂದು ನಿಲ್ಲಲು, ಅವಳು ಸಂತೋಷದಿಂದ—''ಶಾಬಾಸ್! ಫರುಕ್‌ಷೈರ್! ನಿನ್ನ ಚಾತುರ್ಯಕ್ಕೂ ಸ್ವಾಮಿಭಕ್ತಿಗೂ ಮೆಚ್ಚಿದೆ. ನಿನ್ನ ಸಾಹಸಕ್ಕೆ ಸಂತೋಷಪಟ್ಟು ಈ ಕಾಸಿನಸರವನ್ನು ಬಹುಮಾನವಾಗಿ ಕೊಡುವೆನು ತೆಗೆದುಕೊ. ಇನ್ನು ಮುಂದೆ ನಿನಗಾವ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳುವೆನು. ಧೈರ್ಯವಾಗಿರು ; ನಿನ್ನಿಷ್ಟವು ನೆರವೇರುವುದು" ಎಂದು ಹೇಳಿದಳು.

ರೋಷನಾರೆಯ ಸ್ತುತಿವಚನವನ್ನು ಕೇಳಿ ಫರುಕ್‌ಷೈರನು ಇದೆಲ್ಲವೂ ತನ್ನ ಬೆರಳಿನಲ್ಲಿರುವ ಉಂಗುರದ ಪ್ರಭಾವವೆಂದೆಣಿಸಿ ಮನಸ್ಸಿನಲ್ಲಿ ಹಿಗ್ಗುತ್ತಿದ್ದನು. ರೋಷನಾರೆಯು ಸ್ವಲ್ಪಹೊತ್ತು ಅವನೊಡನೆ ಆಲೋಚಿಸಿ, ಇಂದಿರೆಯನ್ನು ಕೊಲ್ಲುವ ವಿಷಯದಲ್ಲಿ ಸೂಚನೆಗಳನ್ನು ಕೊಟ್ಟು ಕಳುಹಿದನು. ಫರುಕ್‌ಷೈರನು ಅವಳ ಅಪ್ಪಣೆಯನ್ನು ಹೊಂದಿ, ಅಲ್ಲಿಂದ ಹೊರಟು ತನಗಾಗಿ ಕಾದಿದ್ದ ಫಕೀರನ ಬಳಿಗೆ ಬಂದು ಕೈಜೋಡಿಸಿಕೊಂಡು ನಿಂತನು.

ಫಕೀರನು ದೂರದಿಂದಲೇ ಅವನ ಕೊರಳಲ್ಲಿದ್ದ ಕಾಸಿನಸರವನ್ನೂ ಅವನ ಮುಖದಲ್ಲಿ ತೋರುತ್ತಿದ್ದ ಉತ್ಸಾಹವನ್ನೂ ನೋಡಿ ಬಳಿಗೆ ಬಂದ ಬಳಿಕ "ನೋಡಿದಿಯಾ ಫರುಕ್‌ಷೈರ್? ಉಂಗುರದ ಮಹಿಮೆ ಈಗ ಗೊತ್ತಾಯಿತೆ? ನಿನ್ನನ್ನು ನಿನ್ನ ಯಜಮಾನಿ ಎಷ್ಟು ಉಪಚರಿಸಿದಳು? ಈ ಕಾಸಿನಸರದಿಂದ ನೀನು ಹೊಸಮದವಣಿಗನಂತೆಯೇ ಕಾಣುತ್ತಿರುವೆ. ನಿನ್ನ ಅದೃಷ್ಟವು ಚನ್ನಾಗಿದೆಯೆಂದು ನಂಬು" ಎಂದನು. ಫರುಕ್‌ಷೈರನು ತಾನು ಹೇಳದೆಯೇ ಫಕೀರನು ಎಲ್ಲವನ್ನೂ ತಿಳಿದವನಂತೆ ಆಡುತ್ತಿರುವುದನ್ನು ಕೇಳಿ ಆಶ್ಚರ್ಯದಿಂದ ಸುಮ್ಮನೆ ನಿಂತನು.

ಫಕೀರ:—ಏಕೆ; ಮಾತನಾಡುವುದಿಲ್ಲ? ಆಶ್ಚರ್ಯವೇಕೆ? ಅವಳು ನಿನ್ನಲ್ಲಿ ಕೆಲವು ರಹಸ್ಯಗಳನ್ನು ಕೂಡ ಹೇಳಿಲ್ಲವೆ? ನನಗೆ ಅದುಕೂಡ ಗೊತ್ತಾಗಿದೆ.

ಫರುಕ್:—ಫಕೀರ್ಜೀ! ಅನುಗ್ರಹಿಸಬೇಕು. ನೀವು ಸಾಕ್ಷಾತ್ ಅಲ್ಲಾ ಅವತಾರವೇ ಆಗಿರುವಿರಿ. ನಿಮ್ಮ ಉಂಗುರವು ನನಗೆ ಬಹಳ ಸಹಾಯಮಾಡಿತು. ನಮ್ಮ ಬೇಗಮರು ನನ್ನನ್ನು ನೋಡಿದೊಡಯೇ ಈ ಕಾಸಿನಸರವನ್ನು ಕೊಟ್ಟರು.

ಫಕೀರ:—ಅಷ್ಟೇ ಅಲ್ಲ; ಈ ಉಂಗುರದ ಪ್ರಭಾವವು ನಿನ್ನ ಶರೀರದಲ್ಲಿ ವ್ಯಾಪಿಸಿತೆಂದರೆ ನಿಮ್ಮ ಬೇಗಮಳು ನಿನ್ನನ್ನು ನಿಜವಾಗಿಯೂ ಪ್ರೇಮಭರದಿಂದ ಆಲಿಂಗಿಸಿಕೊಳ್ಳುವಳು.

ಫರುಕ್:—ಫಕೀರ್ಜೀ! ಅಷ್ಟಾದರೆ ನನ್ನಭಾಗ್ಯಕ್ಕೆ ಎಣೆಯೇಇಲ್ಲ!

ಫಕೀರ್:—ಇರಲಿ, ನಿನ್ನನ್ನು ಇನ್ನೂ ಕೆಲವು ದಿನಗಳ ವರೆಗೆ ಪರೀಕ್ಷಿಸಬೇಕೆಂದಿರುವೆನು. ಇದಕ್ಕಿಂತಲೂ ಉತ್ತಮವೂ ಅಧಿಕ ಮಹತ್ವವುಳ್ಳವೂ ಆಗಿರುವ ಉಂಗುರಗಳು ನನ್ನಲ್ಲಿರುವುವು. ಅವನ್ನು ಧರಿಸುವುದರಿಂದ ಸಮ್ರಾಟನ ಅರ್ಧಾಸನದಲ್ಲಿ ಕುಳಿತುಕೊಳ್ಳುವಷ್ಟು ಸನ್ಮಾನವನ್ನೂ ಜಗನ್ಮೋಹಕ ಸ್ವರೂಪವನ್ನೂ ಹೊಂದಬಹುದು. ಆದರೆ,

ನಿನ್ನಲ್ಲಿ ನಿಜವಾದ ಧರ್ಮಾಭಿಮಾನವೂ ಸ್ವಾಮಿಭಕ್ತಿಯೂ ಸತ್ಯಸಂಧತೆಯೂ ದೃಢವಾಗುವವರೆಗೆ ಕೊಡಲಾಗುವವಿಲ್ಲ.

ಫರುಕ್:—ಫಕೀರ್ಜೀ! ದಾಸನ ಮೇಲೆ ಅನುಗ್ರಹವಿಟ್ಟು ಇನ್ನೂ ಪರೀಕ್ಷಿಸಿ, ಪರೀಕ್ಷಾನಂತರದಲ್ಲಿಯಾದರೂ ಅವುಗಳನ್ನು ಇವನಿಗೇ ಕೊಟ್ಟು ಉದ್ಧರಿಸಿರಿ.

ಫಕೀರ:—ಆಗಲಿ, ನಿನ್ನೊಡನೆ ನಿನ್ನ ಯಜಮಾನಿಯು ಹೇಳಿದ ರಹಸ್ಯವನ್ನು ಬಾಯ್ತೆರೆದು ಹೇಳು. ನಿಜವಾಡುವೆಯೋ—ಸುಳ್ಳಾಡುವೆಯೋ ನಿರ್ಧರಿಸುವೆನು.

ಫರುಕ್:—ಇನ್ನು ಸ್ವಪ್ನದಲ್ಲಿಯೂ ಸುಳ್ಳಾಡುವನು ನಾನಲ್ಲ. ಹಿಂದೂಬಾಲೆಯನ್ನು ಚಿತ್ರಹಿಂಸೆಯಿಂದ ಕೊಲ್ಲಬೇಕೆಂದು ಕಟ್ಟುಮಾಡಿದರು; ನಾನು ಕತ್ತನ್ನು ಮಾತ್ರ ಕತ್ತರಿಸಿ ಬಿಡುವೆನೆಂದು ಹೇಳಿದುದಕ್ಕೆ ಅವರು ಒಪ್ಪಲಿಲ್ಲ.

ಫಕೀರ:—ಅದೆಲ್ಲಾ ಸರಿ; ಅವಳು ಮತ್ತಾವುದಕ್ಕೆ ಒಪ್ಪಿದಳೋ ಹೇಳು.

ಫರುಕ್:—ಒಂದುವೇಳೆ ಉದಯಪುರಿಬೇಗಮರು ತನ್ನ ಸಖಿಯಾದ ಇಂದಿರೆಯು ಕಾಣಲಿಲ್ಲವೆಂದು ಬಾದಶಹರೊಡನೆ ಹೇಳಿದುದೇ ಆದರೆ ಅವರು ತನ್ನ ಸೇವಕರಿಂದ ಅವಳನ್ನು ಹುಡುಕಿಸುವರೆಂದೂ ಎಲ್ಲಿಯೂ ಸಿಕ್ಕದಿದ್ದರೆ, ಯಾರಾದರೂ ಕೊಂದುಹಾಕಿ ನೆಲದಲ್ಲಿ ಹೂಳಿರಬಹುದೆಂದೂ ಹಿಸಿ ನೆಲವನ್ನೆಲ್ಲಾ ಅಗಿಸುವರೆಂದೂ ಯೋಚಿಸಿ, ಭೂಮಿಯಲ್ಲಿ ಹೂಳಲು ಸಮ್ಮತಿಸದೆ ಒಂದು ಹಗ್ಗಕ್ಕೆ ಇಂದಿರೆಯನ್ನು ಕಟ್ಟಿ ಯಮುನಾನದಿಯಲ್ಲಿ ಬಿಟ್ಟುಬಿಡಬೇಕೆಂದು ಹೇಳಿರುವರು.

ಫಕೀರ:—ಕಾಫರರನ್ನು ಹೀಗೆಯೇ ಮಾಡಬೇಕು. ಆದರೆ ರಾತ್ರಿ ಎರಡು ಜಾವದಮೇಲೆಯೇ ನದಿಯಲ್ಲಿ ಬಿಡಬೇಕಾದುದೇಕೆ? ದಕ್ಷಿಣ ದಿಕ್ಕಿನ ಬುರುಜಿನ ಮೇಲಿನಿಂದಲೇ ಬಿಡುವ ಯೋಚನೆಯೇನು ?

ಫರುಕ್:—ಫಕೀರ್ಜೀ! ತಿಳಿದೂ ಹೀಗೆ ಕೇಳುವುದನ್ನು ನೋಡಿದರೆ ಇನ್ನೂ ನನ್ನಮೇಲೆ ನಂಬಿಕೆಯಾಗಿಲ್ಲವೆಂದು ಊಹಿಸಬೇಕಾಗಿದೆ. ರಾತ್ರಿ ಎರಡು ಜಾವವಾದರೆ ಎಲ್ಲರೂ ನಿದ್ರೆಯಲ್ಲಿರುವರು; ಯಾರಿಗೂ ತಿಳಿಯುವುದಿಲ್ಲ. ಅವಲ್ಲದೆ ದಕ್ಷಿಣಬುರುಜು ಒಂದು ಮೂಲೆಯಲ್ಲಿದೆ. ಅಲ್ಲಿ ವಿಶೇಷ ಜನಸಂಚಾರವೂ ಇಲ್ಲ. ಅದೆಲ್ಲವೂ ಹಾಗಿರಲಿ?

ಫಕೀರ:—ಅದೇನು, ಹೇಳು—ಅನುಮಾನವೇಕೆ?

ಫರುಕ್:—ನಾನು ಈ ಕ್ರೂರ ಕಾರ್ಯವನ್ನು ಮಾಡುವೆನಲ್ಲಾ, ಇದರಿಂದ ನನಗೆ ಪಾಪಸಂಘಟನೆಯಾಗುವುದಿಲ್ಲವೆ?

ಫಕೀರ:—ನಿನಗೇಕೆ ಪಾಪವಾಗುವುದು? ಸ್ವಾಮಿವಾಕ್ಯವನ್ನು ಮೀರಿದರೆ ಮಾತ್ರ ಪಾಪಕ್ಕೆ ಗುರಿಯಾಗಬೇಕಾದೀತು! ಸ್ವಾಮಿವಾಕ್ಯದಂತೆ ಎಂತಹ ಕಾರ್ಯವನ್ನು ಮಾಡಿದರೂ ಪುಣ್ಯವೇ ಬರುವುದೆಂದು ಖುರಾನದಲ್ಲಿದೆ. ನಮ್ಮ ಪೈಗಂಬರರೂ ಹೀಗೆಯೇ ಹೇಳಿರುವರು. ಇದಲ್ಲದೆ, ಅತ್ಯಂತ ಮಹತ್ವವುಳ್ಳ ಉಂಗುರವು ನಿನ್ನ ಕೈಯಲ್ಲಿರುವವರೆಗೂ ನಿನಗೆ ಪಾಪಭೀತಿಯು ಬರುವುದಿಲ್ಲ. ನಿರ್ಭಯವಾಗಿ ನಿಮ್ಮಬೇಗಮಳ ಮಾತನ್ನುನಡೆಯಿಸು.

ಫರುಕ್:—ಇನ್ನು ಅಪ್ಪಣೆಯಾಗಲಿ, ನಾನು ಈ ರಾತ್ರಿಯೇ ಬೇಗಮರ ಆಜ್ಞೆಯನ್ನು ನಡೆಸಬೇಕಾಗಿದೆ.

ಫಕೀರನು ಫರುಕ್ಷೈರ್‌ನಿಂದ ರಹಸ್ಯವನ್ನೆಲ್ಲ ತಿಳಿದು ಅವನನ್ನು ಉಬ್ಬಿಸಿ, ಮತ್ತೆ ನಾಳೆ ತನ್ನನ್ನು ನೋಡುವಂತೆ ಹೇಳಿ ಅವನನ್ನು ಕಳುಹಿ ತಾನೂ ತನ್ನ ದಾರಿಯನ್ನು ಹಿಡಿದನು.

# ಇಪ್ಪತ್ತೊಂಭತ್ತನೆಯ ಪ್ರಕರಣ.

(ಅಬೂಪರ್ವತದ ಮೇಲೆ)

ವಿಮಲೆಯ ವಿಜ್ಞಾಪನ ಪತ್ರಿಕೆಯನ್ನು ನೋಡಿದುದು ಮೊದಲು ರಾಜಸಿಂಹನು ಅವಳ ಸಂರಕ್ಷಣೋಪಾಯಚಿಂತನದಲ್ಲಿಯೇ ನಿರತನಾಗಿ, ವಿಮಲೆಗೆ ಅಭಯ (ವಾಗ್ದಾನ) ಪತ್ರಿಕೆಯನ್ನು ಬರೆದು ತನ್ನ ಸೇವಕನೊಬ್ಬನ ಮೂಲಕ ಕೊಟ್ಟು ಕಳುಹಿದನು. ಶಿವಸಿಂಗನು ಶ್ಯಾಮಲಪಂಡಿತನೊಡನೆ ಪ್ರಯಾಣಮಾಡುತ್ತಿರುವಾಗ ಆತನನ್ನು ಪ್ರತಿಭಟಿಸಿದ ಭಟರಲ್ಲಿ ಇಬ್ಬರು ತಲೆತಪ್ಪಿಸಿಕೊಂಡು ಹೋಗಿ ಪುನಃ ಆತನೇ ಹಿಂತಿರುಗಿ ಬರಬಹುದೆಂಬ ನಿರೀಕ್ಷೆಯಿಂದ ದಾರಿಯಲ್ಲಿ ಹೊಂಚಿ ಕಾದಿದ್ದವರು, ರಾಜಸಿಂಹನಿಂದ ಪತ್ರವನ್ನು ತೆಗೆದುಕೊಂಡು ಬರುತ್ತಿದ್ದವನನ್ನು ಹಿಡಿದು ಅವನಿಂದ ಪತ್ರವನ್ನು ತೆಗೆದುಕೊಂಡು ಸಾದತ್‌ಖಾನನಿಗೆ ಒಪ್ಪಿಸಿದರು. ಸದತ್‌ಖಾನನು ಅವರ ಅಭಿಪ್ರಾಯವನ್ನು ಗ್ರಹಿಸಿ, ರಾಜಸಿಂಹನೇ ವಿಜಯಸಿಂಹನಿಗೆ ಸಹಾಯಕನಾಗಿ ಬರುವುದರಿಂದ ತನ್ನ ಸಹಾಯಕ್ಕೆ ಅಧಿಕ ಸೈನ್ಯವನ್ನು ಕಳುಹಬೇಕೆಂದು ಬಾದಷಹನಿಗೆ ಬರೆದುಕೊಂಡಿದ್ದನು. ರಾಜಸಿಂಹನ ಸೈನ್ಯವು ಯಾವಕ್ಷಣದಲ್ಲಿ ಮೇಲೆ ಬೀಳುವುದೋ—ಎಂಬ ಭೀತಿಯಿಂದ ಅತ್ಯಂತ ಜಾಗರೂಕನಾಗಿ ಸೈನ್ಯವನ್ನು ರಹಸ್ಯವಾಗಿರಿಸಿದ್ದನು.

ಇತ್ತ ಉದಯಪುರದಲ್ಲಿಯುವ ಸಮರಸನ್ನಾಹವು ನಡೆಯುತ್ತಿದ್ದಿತು. ರಾಜಸಿಂಹನು ಕ್ಷಾತ್ರತೇಜಸ್ಸಿನಿಂದಲೂ ಧರ್ಮದಮೇಲಿನ ಅಭಿಮಾನದಿಂದಲೂ ಅಬಲೆಯ ಮಾನಸಂರಕ್ಷಣೆಯನ್ನು ಮಾಡಬೇಕಾದ ಅವಶ್ಯ ಕರ್ತವ್ಯ ಪ್ರೇರಣೆಯಿಂದಲೂ ಮದೋನ್ಮತ್ತನೂ ಕ್ರೂರಿಯೂ ಆದ ಔರಂಗಜೇಬನ ಗರ್ವವನ್ನು ಮುರಿದು ಲೋಕಹಿತವನ್ನು ಸಾಧಿಸಬೇಕೆಂಬ ಭಾವನೆಯಿಂದಲೂ ಸಮಯದಲ್ಲಿ ಸಹಾಯಮಾಡಬೇಕಾದೀತೆಂದು ಸಕಲ ರಾಜ

ಪುತ್ರರನ್ನೂ ಕೋರಿದನು. ರಾಜಪುತ್ರರೂ ಸಂಭ್ರಮದಿಂದ ರಾಜಸಿಂಹನಿಗೆ ಸಹಾಯಮಾಡಲು ಸೈನ್ಯವನ್ನು ಸಿದ್ಧಮಾಡುತ್ತಿದ್ದರು. ಈ ಮಧ್ಯದಲ್ಲಿ ಯಾವ ಕಾರ್ಯವನ್ನು ಮಾಡಬೇಕಾದರೂ ವೈಕುಂಠಯೋಗಿಗೆ ತಿಳಿಸಿಯೇ ಮಾಡುತ್ತಿದ್ದ ರಾಜಸಿಂಹರಾಜನು ಯುದ್ಧವಿಚಾರವಾಗಿ ಪ್ರಸ್ತಾಪಿಸಲು ಅಚಲೇಶ್ವರಾಲಯಕ್ಕೆ ಹೋದನು. ಆತನು ಅಲ್ಲಿಗೆ ಬಂದಾಗ ಯೋಗಿಯು ಧ್ಯಾನದಲ್ಲಿದ್ದುದರಿಂದ ರಾಜಸಿಂಹನು ಆ ದೇವಾಲಯದಲ್ಲಿದ್ದ ಒಂದು ಮಂಟಪದಲ್ಲಿ ಕುಳಿತು ಯೋಗಿಯನ್ನು ದರ್ಶಿಸಲು ಸಮಯನಿರೀಕ್ಷೆಯಲ್ಲಿದ್ದನು. ಅಷ್ಟರಲ್ಲಿ ಅಲ್ಲಿಗೆ ಒಬ್ಬ ಬಾಲಕನನ್ನೆತ್ತಿಕೊಂಡು ಒಬ್ಬ ಭಿಲ್ಲಾಂಗನೆಯು ಬಾರಿಬಾರಿಗೂ ಬಾಲನನ್ನು ಮುದ್ದಿಸುತ್ತ ಹಾಡುಗಳನ್ನು ಹೇಳುತ್ತ ಗಗನದಲ್ಲಿ ಸಂಚರಿಸುವ ಪಕ್ಷಿಗಳನ್ನು ತೋರಿಸುತ್ತ ಆಲಯದಬಳಿಗೆ ಬಂದಳು. ರಾಜಸಿಂಹನು ಆ ಬಾಲನನ್ನು ನೋಡಿ ಯಾರಿರಬಹುದೆಂಬುದನ್ನು ಯೋಗಿಯಿಂದ ತಿಳಿಯಬೇಕೆಂದು ಎಣಿಸಿದನು.

ಸ್ವಲ್ಪಹೊತ್ತಿನೊಳಗಾಗಿ ಧ್ಯಾನವನ್ನು ಮುಗಿಸಿಕೊಂಡು ಯೋಗಿಯು ಹೊರಗೆ ಬಂದನು. ತತ್ಕ್ಷಣವೇ ರಾಜಸಿಂಹನು ಯೋಗಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಕೈಮುಗಿದು ನಿಂತನು. ಯೋಗಿಯು ರಾಜಸಿಂಹನಿಗೆ ಆಶೀರ್ವಾದವನ್ನು ಮಾಡಿ, ಆತನೊಡನೆ ಆಲಯದ ಹಿಂದುಗಡೆಯಲ್ಲಿದ್ದ ಮಂಟಪಕ್ಕೆ ಹೋಗಿ ಅಲ್ಲಿ ಕುಳಿತು ರಾಜಸಿಂಹನನ್ನು ಕುರಿತು ಕುಶಲಪ್ರಶ್ನೆ ಮಾಡಿದನು. ಆ ಬಳಿಕ ಅವರಿಬ್ಬರಿಗೂ ಹೀಗೆ ಸಂಭಾಷಣೆಗಳಾದವು:—

ರಾಜ:—ದೇವಾ! ಆಲಯಕ್ಕೆ ಬಂದಬಳಿಕ ಓರ್ವ ಭಿಲ್ಲಾಂಗನೆಯು ಒಬ್ಬ ಬಾಲನನ್ನೆತ್ತಿಕೊಂಡು ಬಂದಳು, ಆ ಬಾಲನಾರು?

ಯೋಗಿ:—ನಿನಗೆ ಗೊತ್ತಿಲ್ಲವೆ? ಆ ಬಾಲನೇ ಜೋಧಪುರಾಧೀಶನು!

ರಾಜ:—ಏನು ? ಆ ಬಾಲನೇ ಚಂದ್ರಾವತೀ ಕುಮಾರನೇ ? ಅಜಿತಸಿಂಗನೆ ?

ರಾಜಸಿಂಹನ ಆತುರತೆಯನ್ನು ನೋಡಿ ಆತನಿಗೆ ನಯನಪಾಲನು, ಚಂದ್ರಾವತಿಗೆ ಮಾಡಿದ ಮೋಸವನ್ನು ಇಂದಿರಾ ದುರ್ಗಾದಾಸರ ರಾಜ ಭಕ್ತಿ—ಶೌರ್ಯ—ಧೈರ್ಯಗಳನ್ನೂ ಪದ್ಮೆಯ ಚಮತ್ಕಾರವನ್ನೂ ಸವಿ ಸ್ತಾರವಾಗಿ ಹೇಳಿ, ಇನ್ನೂ ಸ್ವಲ್ಪ ಕಾಲದವರೆಗೆ ಈ ಬಾಲನನ್ನು ಇಲ್ಲಿಯೇ ಕಾಪಾಡಬೇಕಾಗಿರುವುದೆಂದೂ ಹೇಳಿದನು. ರಾಜಸಿಂಹನು ಅದನ್ನೆಲ್ಲಾ ಕೇಳಿ ಔರಂಗಜೇಬನ ದುರ್ನಡತೆಗೆ ಖತಿಗೊಂಡು ಆತನನ್ನು ತನ್ನಲ್ಲಿಯೇ ಧಿಕ್ಕರಿಸುತ್ತಿದ್ದನು.

ವೈಕುಂಠಯೋಗಿ:—ರಾಜಸಿಂಹ! ನೀನು ಬಂದ ಉದ್ದೇಶವೇನು?

ರಾಜ:—ಪರಾಭಿಪ್ರಾಯತತ್ವಜ್ಞರಲ್ಲಿ ವಿಜ್ಞಾಪಿಸಬೇಕೇ ? ಬಾದಷ ಹನು ಇನ್ನು ಎರಡು ಮೂರು ದಿನಗಳಲ್ಲಿಯೇ ಯುದ್ಧಕ್ಕೆ ಬರುವನಂತೆ.

ಯೊಗಿ:—ಕಾರಣವೇನು ?

ರಾಜ:—ರೂಪನಗರಾಧೀಶನಾದ ವಿಜಯಸಿಂಹನ ಮಗಳಾದ ವಿಮಲಾದೇವಿಯನ್ನು ತಾನು ಪರಿಗ್ರಹಿಸಬೇಕೆಂದು ಬಾದಷಹನು ತನ್ನಸೈನ್ಯ ವನ್ನು ರೂಪನಗರಕ್ಕೆ ಕಳುಹಲು ಸೈನ್ಯವುಬಂದು ಆ ಪಟ್ಟಣವನ್ನು ಮುತ್ತಿ ರುವುದು. ಕ್ಷಾತ್ರ ತೇಜೋವಿರಾಜಮಾನನಾದ ವಿಜಯಸಿಂಹನು ಹೆದ ರದೆ ಪ್ರಾಣವಿರುವವರೆಗೆ ಕ್ಷಾತ್ರಧರ್ಮವನ್ನು ಕಾಪಾಡುವೆನೆಂದು ಶಪಥ ಮಾಡಿರುವನು. ರಾಜಪುತ್ರರೆಲ್ಲರಿಗೂ ಈ ವೇಳೆಯಲ್ಲಿ ಸಹಾಯಮಾಡು ವುದು ಅಗತ್ಯವೆಂದು ಬರೆದು ಕಳುಹಿರುವನು. ಸುಕುಮಾರಿಯಾದ ವಿಮ ಲಾದೇವಿಯೂ ತನ್ನ ಅವಸ್ಥೆಯನ್ನು ಹೃದಯದ್ರಾವಕರೀತಿಯಲ್ಲಿ ವರ್ಣಿಸಿ ಯವನರಪಾಲುಮಾಡದೆ ತನ್ನ ಸತೀಧರ್ಮವನ್ನೂ ಅದರೊಡನೆಯೇ ಕ್ಷಾತ್ರತೇಜಸ್ಸನ್ನೂ ಕಾಪಾಡಬೇಕೆಂದು ಪ್ರಾರ್ಥಿಸಿರುವಳು. ಹಾಗೆ ಸಂರ ಕ್ಷಿಸದಿದ್ದರೆ ಯಜ್ಞೇಶ್ವರನಿಗೆ ಆಹುತಿಯಾಗುವುದಾಗಿಯೂ ಸಂಕಲ್ಪಿಸಿರು

ವಳು. ಆದುದರಿಂದ ನಾನು ಅವಳ ಸಂರಕ್ಷಣಾರ್ಥವಾಗಿ ನಮ್ಮ ಸಾಮಂತರಲ್ಲಿಯೂ ಮಿತ್ರವರ್ಗದವರಲ್ಲಿಯೂ ಪತ್ರಮುಖದಿಂದ ಸಹಾಯವನ್ನು ಕೋರಿರುವೆನು. ಯುದ್ಧಕ್ಕೆ ಹೊರಡುವ ಮೊದಲು ತಮ್ಮ ಸಂದರ್ಶನ ಲಾಭವನ್ನು ಹೊಂದಿ ಹೋಗಲು ಬಂದಿರುವೆನು.

ಯೋಗಿ:—ಬರುತಬರುತ್ತ ಬಾದಷಹನ ಕ್ರೂರಸ್ವಭಾವವು ಮೇರೆ ಮೀರುತ್ತಿರುವುದು.

ರಾಜ:—ತಮ್ಮ ಚರಣಾನುಗ್ರಹವಿರುವವರೆಗೂ ಈ ರಾಜಸಿಂಹನು ಇಂತಹ ನೂರುಮಂದಿ ಅಲಂಘೀರ ಬಾದಷಹರಿಗಾದರೂ ಭಯಪಡುವಂತಿಲ್ಲ ಕಂದಾಯವನ್ನು ಕೇಳಲು ಬಂದ ಯವನದೂತರನ್ನು ಹೆದರಿಸಿ ಓಡಿಸಿ ಬಾದಷಹನಿಗೆ ನಾಚಿಕೆಯಾಗುವಂತೆ ಒಂದು ಕಾಗದವನ್ನು ಬರೆದಿರುವೆನು.

ಯೋಗಿ:—ಇರಲಿ, ಅವನಿಗೆ ವಿವೇಕವನ್ನು ಬರೆದು ಕಳುಹಿದುದೂ ವಿಮಲಾದೇವಿಯ ಮಾನರಕ್ಷಣೆಗಾಗಿ ಬದ್ಧಕಂಕಣನಾಗಿರುವುದೂ ಶ್ಲಾಘನೀಯವೇ ಸರಿ. ಆದರೆ, ವಿಮಲಾದೇವಿಯ ಪಾಣಿಗ್ರಹಣದಲ್ಲಿ ನಿನ್ನ ಇಷ್ಟವು ಹೇಗಿದೆ? ಅವಳನ್ನು ನೀನೆಂದಾದರೂ ನೋಡಿರುವಿಯಾ ?

ರಾಜ:—ಹತ್ತು ವರ್ಷದವಳಾಗಿದ್ದಾಗ ಅವಳನ್ನು ನಾನೊಮ್ಮೆ ನೋಡಿದ್ದೆನು. ಈಗ ತಮ್ಮ ಅಪ್ಪಣೆಯಾದರೆ ಪಾಣಿಗ್ರಹಣ ಮಾಡುವೆನು.

ಯೋಗಿ:—ಮತ್ತೆಂದಾದರೂ ಅವಳನ್ನು ನೋಡಿದ್ದೆಯೋ ನೆನಪು ಮಾಡಿಕೋ ?

ರಾಜ:—ಇಲ್ಲ, ನೋಡಿಲ್ಲವೆಂದೇ ತೋರುವುದು.

ಯೋಗಿ:—ಹೋಗಲಿ, ನಿನ್ನ ಉಂಗುರವನ್ನಾದರೂ ಕೊಟ್ಟ ನೆನಪಿರುವುದೋ ?

ರಾಜ:—ನಾನು ಒಂದುದಿನ ಮೃಗಯಾವಿನೋದಕ್ಕಾಗಿ ಅರಣ್ಯಕ್ಕೆ ಹೋಗಿದ್ದಾಗ ಕೆಲವರು ಮುಹಮ್ಮದೀಯಭಟರು ನನ್ನನ್ನು ಪ್ರತಿಭಟಸಲು

ನಾನು ಅವರೊಡನೆ ಹೋರಾಡುತ್ತಿದ್ದೆನು. ಆ ಸಮಯದಲ್ಲಿ ತುರಗಾರೂಢರಾಗಿ ಬಂದು ನನಗೆ ತುಂಬ ಸಹಾಯಮಾಡಿ ಶತ್ರುಗಳನ್ನು ಓಡಿಸಿದ ರಾಜಪುತ್ರರಿಬ್ಬರಲ್ಲಿ ಪ್ರಮುಖನಾದವನೊಬ್ಬನಿಗೆ ನನ್ನ ಕೃತಜ್ಞತಾ ಪ್ರದರ್ಶನಕ್ಕಾಗಿ ನನ್ನ ಉಂಗುರವನ್ನಿತ್ತೆನು.

ಯೋಗಿ.—ಹಾಗಾದರೆ ನೀನು ವಿಮಲೆಯನ್ನು ನೋಡಲಿಲ್ಲವೆಂದು ಹೇಗೆ ಹೇಳುವೆ ?

ರಾಜ:—ನಾನೆಲ್ಲಿ ನೋಡಿದೆ ?

ಯೋಗಿ:—ನಿನ್ನ ಸಹಾಯಕ್ಕೆ ಒಂದಿದ್ದ ಆ ವೀರರಿಬ್ಬರೂ ಪುರುಷವೇಷಧಾರಿಗಳಾದ ವಿಮಲಾ-ಪದ್ಮಾದೇವಿಯರೆಂದು ತಿಳಿ.

ರಾಜ:—ಏನು ? ಅವರು ರೂಪನಗರದ ರಾಜಪುತ್ರಿಯರೆ ? ಉಂಗುರವನ್ನು ಪಡೆದವಳು ವಿಮಲೆಯೋ ? ನನಗೆ ಗುರುತು ಸಿಕ್ಕಲಿಲ್ಲವೇಕೆ ?

ಯೋಗಿ:—ಹೇಗಾದರೂ ಆಗಲಿ, ನೀನು ವಿಮಲಾದೇವಿಯನ್ನು ಗ್ರಹಿಸಿದಂತಾಯಿತು.

ರಾಜಸಿಂಹನು ತಲೆತಗ್ಗಿಸಿದನು. ರಾಜಸಿಂಹನಿಂದ ಉಂಗುರವನ್ನು ಪಡೆದ ಮೇಲೆ ಒಂದು ದಿನ ವಿಮಲಾ ಪದ್ಮೆಯರಿಬ್ಬರೂ ಅಚಲೇಶ್ವರಾಲಯಕ್ಕೆ ಬಂದಿದ್ದಾಗ ಯೋಗೀಶ್ವರನಿಗೆ ಸಂದರ್ಭವಶದಿಂದ ಸಂಗತಿಯನ್ನು ತಿಳಿಯಪಡಿಸಿದ್ದರು. ಇದಾವುದನ್ನೂ ಯೋಗಿಯು ತಿಳಿಸಲಿಲ್ಲವಾದುದರಿಂದ ರಾಜಸಿಂಹನು ಯೋಗಿಯು ಇದನ್ನು ಜ್ಞಾನಚಕ್ಷುಸ್ಸಿನಿಂದಲೇ ತಿಳಿದಿರಬೇಕೆಂದೂ ಈತನು ಜ್ಞಾನದಲ್ಲಿ ಸಾಕ್ಷಾತ್ ವಸಿಷ್ಠರ ಅವತಾರವೇ ಸರಿಯೆಂದೂ ಭಾವಿಸಿ ಮನಸ್ಸಿನಲ್ಲಿಯೇ ಯೋಗಿಯನ್ನು ಸ್ತುತಿಸುತ್ತಿದ್ದನು. ಸ್ವಲ್ಪ ಹೊತ್ತಾದಬಳಿಕ ಯೋಗಿಯು ರಾಜಸಿಂಹನನ್ನು ಕುರಿತು ಹೀಗೆ ಹೇಳಿದನು. "ರಾಜಸಿಂಹ ! ನೀನು ಯೋಚಿಸುತ್ತಿರುವುದೇನು ? ಸಕಲ ಸಾಮಂತ ರಾಜರ ಸಹಾಯವನ್ನು ಹೊಂದಿ ರೂಪನಗರಕ್ಕೆ ಒದಗಿರುವ ವಿಪತ್ತನ್ನು ಪರಿಹಾರಮಾಡು ; ಮರೆಹೊಕ್ಕ ಮಾನಿನಿಯಾದ ವಿಮಲಾದೇ

ವಿಯ ಮಾನಸಂರಕ್ಷಣೆಮಾಡಿ, ಅವಳ ಪಾಣಿಗ್ರಹಣದಿಂದ ಕೀರ್ತಿ-ವೈಭವಗಳನ್ನು ಹೊಂದುವವನಾಗು. ರಾಜಪುತ್ರ ವಂಶೋದ್ಧಾರಕನು ನೀನಲ್ಲದೆ ಮತ್ತಾರು? ಇತರ ಭೀತಚಿತ್ತರಾದ ರಾಜಪುತ್ರರು ಸುಮ್ಮನಿದ್ದುದರಿಂದಲೇ ಘಾತುಕನಾದ ಔರಂಗಜೇಬನು ಇಷ್ಟು ಕೊಬ್ಬಿ ಹೋಗಿರುವನು.''

ರಾಜ:— ಯೋಗಿಪುಂಗವ! ಇನ್ನು ಆತನ ಪುಂಡಾಟಗಳನ್ನು ತಡೆಯುವಂತಿಲ್ಲ. ಕಾರಣವಿಲ್ಲದೆ ನಾನಾಗಿ ಯುದ್ಧಕ್ಕೆ ಹೊರಡುವದು ಹೇಗೆಂದು ಈವರೆಗೆ ತಡೆದಿದ್ದೆನು. ಈಗ ಕಾರಣವುಂಟಾಗಿರುವುದರಿಂದ ಇನ್ನು ತಮ್ಮ ಆಶಿರ್ವಾದವನ್ನು ಹೊಂದಿ ರಾಜಪುತ್ರರ ಶೌರ್ಯವನ್ನು ಪ್ರಕಾಶಕ್ಕೆ ತಂದು ಆ ಯವನನಿಗೆ ಚೆನ್ನಾಗಿ ಬುದ್ಧಿಗಲಿಸುವೆನು.

ಇವರು ಮಾತನಾಡುವಷ್ಟರಲ್ಲಿಯೇ ಒಬ್ಬ ರಾಜಭಟನು ಅಲ್ಲಿಗೆ ಬಂದು ಯೋಗಿಗೆ ಕೈಮುಗಿದು "ಸ್ವಾಮಿ! ಜೋಧಪುರದಿಂದ ಮಹಾರಾಣಿ ಚಂದ್ರಾವತೀದೇವಿಯವರು ಬಂದಿರುವರು." ಎಂದು ನಿವೇದಿಸಿದನು. ಅದನ್ನು ಕೇಳಿ ಯೋಗಿಯು ಸಂತೋಷದಿಂದ "ಎಲ್ಲಿರುವರು?" ಎಂದು ಕೇಳಲು ಭಟನು "ಹತ್ತಿರದಲ್ಲಿರುವ ಗುಡಾರದಲ್ಲಿ ಕುಮಾರನೊಡನೆ ಇರುವರು." ಎಂದು ಹೇಳಿದನು. ಯೋಗಿಯು ರಾಜಸಿಂಹನನ್ನೂ ಜೊತೆಗೊಂಡು ಭಟನೊಡನೆ ಚಂದ್ರಾವತಿಯಿದ್ದೆಡೆಗೆ ಹೊರಟರು.

ಚಂದ್ರಾವತಿಯು ತನ್ನ ತೊಡೆಯಮೇಲೆ ಕುಮಾರ ಅಜಿತಸಿಂಗನನ್ನು ಮಲಗಿಸಿಕೊಂಡು ಬಾಲನ ನಿಮಿತ್ತವಾಗಿ ಹೊಂದಿದ ಕಷ್ಟಗಳನ್ನು ಸ್ಮರಿಸಿಕೊಳ್ಳುತ್ತ ಗದ್ಗದಸ್ವರದಿಂದ "ಅಯ್ಯೋ, ಸುಕುಮಾರ! ವೀರಾಗ್ರಣಿಯಾದ ಜೋಧಪುರಾಧೀಶನಿಗೆ ಕುಮಾರನಾಗಿ, ಸ್ವರ್ಣಖಚಿತವಾದ ತೊಟ್ಟಿಲೊಳು ಮಲಗುವುದಕ್ಕೆ ಯೋಗ್ಯನಾದ ನಿನಗೆ ಈ ತರಗೆಲೆಯ ಹಾಸಿಗೆಯಲ್ಲಿ ಮಲಗುವಂತೆ ವಿಧಿಯು ಬರೆದನೆ? ಈ ತಾಳೆಯ ಗರಿಯ ಗುಡಿಸಲೇ ನಿನಗೆ ರಾಜಭವನವಾಯಿತೇ? ಬಾಲಕಾ! ನಿನ್ನ ತಂದೆ ಬದುಕಿದ್ದರೆ ನಿನಗೀ ಅವಸ್ಥೆಯುಂಟಾಗುತ್ತಿದ್ದಿತೇ? ಅಯ್ಯೋ, ನಮಗೆ ಅಂತಹ ಭಾಗ್ಯವಿಶೇಷವೆಲ್ಲಿದೆ? ಘಾತ

ಕನಾದ ಔರಂಗಜೇಬನು ನಮ್ಮ ಪಾಲಿಗೆ ಯಮನೇ ಆಗಿ, ನಿನ್ನ ಅಣ್ಣ ನನ್ನೂ ನಿನ್ನ ತಂದೆಯನ್ನೂ ಬಲಿ ತೆಗೆದುಕೊಂಡನು. ಅಷ್ಟಕ್ಕೂ ತೃಪ್ತ ನಾಗದೆ ನಿನ್ನನ್ನೂ ಕೊನೆಗಾಣಿಸಬೇಕೆಂದು ಪ್ರಯತ್ನಿಸಿದನು. ಮತ್ತೆ ನಿನ್ನನ್ನು ನೋಡುವ ಭಾಗ್ಯವು ನನಗಿರುವುದೆಂದು ನಾನು ನಂಬಿರಲಿಲ್ಲ. ಇಂದಿರೆಯು ನಮಗೊದಗಿದ್ದ ಆಪತ್ತುಗಳನ್ನು ಪರಿಹರಿಸಿ ನಿನ್ನನ್ನು ಸಂರಕ್ಷಿ ಸದಿದ್ದರೆ ನಮಗೆ ಈ ವೇಳೆಗೆ ಯಾವಗತಿಯಾಗುತ್ತಿದ್ದಿತೋ... ..." ಎಂದು ಹೇಳುತ್ತ ಕಣ್ಣೀರುಸುರಿಸುತ್ತಿದ್ದಳು. ಅಷ್ಟರಲ್ಲಿ ರಾಜಸಿಂಹನೊಡನೆ ಬಂದ ಯೋಗಿಯು ಚಂದ್ರಾವತಿಯನ್ನು ಸಮಾಧಾನಪಡಿಸಿದನು. ರಾಜಸಿಂಹನು ಬಾಲನನ್ನೆತ್ತಿ ಆಡಿಸುತ್ತ ಕುಳಿತನು. ಯೋಗಿಯು ಚಂದ್ರಾವತಿಯನ್ನು ನೋಡಿ—"ಅಮ್ಮ, ನಿನ್ನ ಬಂಧುವಾದ ಈ ರಾಜಸಿಂಹನು ಯವನರ ಮೇಲೆ ಯುದ್ಧಕ್ಕೆ ಇನ್ನು ೨-೩ ದಿನಗಳಲ್ಲಿ ಹೊರಡುವನು. ಅವನಿಗೆ ರಾಜಪುತ್ರ ರೆಲ್ಲರೂ ಸಹಾಯ ಮಾಡುವುದು ಅವಶ್ಯಕರ್ತವ್ಯವಾಗಿದೆಯಾದುದರಿಂದ ನಿನ್ನ ಸೈನ್ಯವನ್ನು ಕಳುಹಿಸು" ಎಂದನು. ಚಂದ್ರಾವತಿಯು "ಯೋಗೀಂದ್ರಾ! ಉದಯಪುರದ ರಾಜರಲ್ಲದೆ ಯವನರ ಪುಂಡನ್ನಡಗಿಸಲು ಮುಂದೆನಿಲ್ಲುವ ಸಾಹಸಿಗಳಾರಿರುವರು ? ಆಪದ್ರಕ್ಷಕನಾದ ರಾಜಸಿಂಹನಿಗೆ ಸಹಾಯ ಕ್ಕಾಗಿ ಸೈನ್ಯವನ್ನು ಕಳುಹಲು ನನಗೆ ಹೇಳಬೇಕೆ ? ನಮ್ಮೆಲ್ಲರಿಗೂ ಈತನೇ ಆಪದ್ಬಂಧುವೆಂದು ನಾನು ನಂಬಿರುವೆನು" ಎಂದಳು.

ರಾಜಸಿಂಹನು ಚಂದ್ರಾವತಿಯನ್ನು ಸಂತೈಸಿ, ಯೋಗಿಯಿಂದ ಅಪ್ಪಣೆ ಹೊಂದಿ, ಚಂದ್ರಾವತಿಯನ್ನು ಕುರಿತು, "ತಾಯಿ, ಇನ್ನೂ ಕೆಲವು ಕಾಲ ದಮಟ್ಟಿಗೆ ಕುಮಾರನು ನನ್ನಲ್ಲಿರಲಿ, ನೀನು ಹೀಗೆ ಸಾಹಸ ಮಾಡಬಾರದು. ಮಾರ್ಗದಲ್ಲಿ ಶತ್ರುಪಕ್ಷದವರ ಕಣ್ಣಿಗೆ ಬಿದ್ದರೆ ಪ್ರಮಾದವಾದೀತು. ಕುಮಾ ರನ ಚಿಂತೆಯನ್ನು ಬಿಟ್ಟು ಧೈರ್ಯವಾಗಿರು." ಎಂದು ಹೇಳಿ ಅವಳನ್ನೂ ಸುಕುಮಾರನನ್ನೂ ಕರೆದುಕೊಂಡು ಹೊರಟು ಜೋಧಪುರದಲ್ಲಿ ಚಂದ್ರಾವ ತಿಯನ್ನು ಬಿಟ್ಟು, ಅಜಿತಸಿಂಹನನ್ನು ತನ್ನೊಡನೆ ಕರೆದುಕೊಂಡು ಹೊರಟು ಹೋದನು.

# ಮುಪ್ಪತ್ತನೆಯ ಪ್ರಕರಣ

ವಿಜಯಸಿಂಗನ ಸಹಾಯಕ್ಕಾಗಿ ರಾಜಪುತ್ರರೆಲ್ಲರೂ ಬರುವರೆಂಬುದನ್ನು ತಿಳಿದು ಸಾದತ್‌ಖಾನನು ಭೀತನಾಗಿ ತನಗೆ ಸಹಾಯಕ್ಕಾಗಿ ಸೈನ್ಯವನ್ನು ಕಳುಹಿಸಬೇಕೆಂದು ದಿನವೂ ಬಾದಶಹನಿಗೆ ಬರೆಯುತ್ತಿದ್ದನು. ಹೀಗೆ ದಿನವೂ ಬರೆದು ಕಳುಹುತ್ತಿದ್ದುದನ್ನು ನೋಡಿ ಬಾದಶಹನು, ರಾಜಪುತ್ರರೆಲ್ಲರೂ, ಐಕ್ಯಮತದಿಂದ ತನ್ನ ಮೇಲೆ ದಂಡೆತ್ತಿ ಬರುವುದಲ್ಲದೆ ಅವರೆಲ್ಲರಿಗೂ ರಾಜಸಿಂಹನೇ ಮುಖಂಡನಾಗಿ ನಿಲ್ಲುವುದರಿಂದ ತಾನೂ ಬಲವತ್ಪ್ರಯತ್ನವನ್ನೇ ಮಾಡಬೇಕೆಂದೂ ಈ ಯುದ್ಧದಲ್ಲಿ ರಾಜಪುತ್ರರೂ ರಾಜಸಿಂಹನೂ ತನಗೆ ಕೈಸೆರೆ ಸಿಕ್ಕುದುದೇ ಆದರೆ ಮುಂದೆ ತಾನು ನಿರಾತಂಕವಾಗಿರಬಹುದೆಂದೂ ಯೋಚಿಸಿ, ತನ್ನ ಸೈನ್ಯವೆಲ್ಲವನ್ನೂ ಒಟ್ಟುಗೂಡಿಸಿ ಯುದ್ಧಕ್ಕೆ ಹೊರಡಬೇಕೆಂದಿದ್ದನು. ಇಷ್ಟರಲ್ಲಿ ಮತ್ತೊಂದು ಕಾಗದವು ಸಾದತ್‌ಖಾನನಿಂದ ಕಳುಹಲ್ಪಟ್ಟಿತು. ಅದನ್ನು ಓದಿಕೊಂಡಾಕ್ಷಣವೇ ಬಾದಶಹನು ತನ್ನ ಸೇನಾನಾಯಕರಲ್ಲೊಬ್ಬನನ್ನು ಕರೆಯಿಸಿ ರೂಪನಗರದ ಮೇಲೆ ಇಂದಿನ ದಿನವೇ ದಂಡೆತ್ತಿ ಹೊರಡಬೇಕೆಂದೂ ತಾನು ನಾಳೆಯೇ ಹೊರಟು ಬರುವನೆಂತಲೂ ಹೇಳಿಕಳುಹಿದನು.

ಇಷ್ಟು ಮಾಡಿದ ಬಳಿಕ ಬಾದಶಹನು ಈ ಸಂಗತಿಯನ್ನು ತನ್ನ ಪಟ್ಟಮಹಿಷಿಯಾದ ಉದಯಪುರಿಗೆ ಹೇಳಬೇಕೆಂದು ಅಂತಃಪುರಕ್ಕೆ ಹೊರಟು ಬಂದನು. ಉದಯಪುರಿಯು ಇಂದಿರೆಯನ್ನು ಕಾಣದಂದಿನಿಂದ ಅತ್ಯಂತ ಪರಿತಾಪಪಡುತ್ತ ತನಗೆ ಸಾಧ್ಯವಾದ ಮಟ್ಟಿಗೂ ಡಿಲ್ಲಿ ನಗರದಲ್ಲೆಲ್ಲಾ ಹುಡುಕಿಸಿ ತನ್ನ ಪ್ರಾಣವನ್ನು ಕಾಪಾಡಿದುದಕ್ಕಾಗಿ ಆಕೆಗೆ ಬಹುಮಾನವನ್ನು ಕೂಡ ಕೊಡಲಿಲ್ಲವಲ್ಲಾ ಎಂದು ವಿಚಾರಗ್ರಸ್ತಳಾಗಿದ್ದಳು; ತನ್ನ ಮೇಲಿನ ದ್ವೇಷದಿಂದ ಜೋಷನಾರೆಯು ಇಂದಿರೆಯನ್ನು ಅಪಹರಿಸಿರಬಹುದೆಂದೂ

ಅವಳಿಂದ ಇಂದಿರೆಗೆ ಅಪಾಯವು ತಪ್ಪದೆಂದೂ ಚಿಂತಿಸಿ ಕಳವಳಿಸುತ್ತ ಕುಳಿತಿದ್ದುದರಿಂದ ಬಾದಶಹನು ಬಂದುದನ್ನು ಅವಳು ತಿಳಿಯಲಿಲ್ಲ. ಬಾದಶಹನು ಅವಳನ್ನು ನೋಡಿ ವ್ಯಾಕುಲದಿಂದ ಅವಳ ಬಳಿಯಲ್ಲಿ ಕುಳಿತು ತನ್ನ ಕೈಯನ್ನು ಅವಳ ಭುಜದ ಮೇಲಿರಿಸಿ ಪ್ರೀತಿಯಿಂದ ಹೀಗೆ ಸಂಭಾಷಿಸಿದನು—

"ಪ್ಯಾರೀ! ಇದೇನೀ ಅಗಾಧ ಚಿಂತೆ!"

ಉದಯ:—ಮಹಾರಾಜ! ರೋಷನಾರೆಯ ಕೋಪವಿನ್ನೂ ಶಾಂತವಾಗಿಲ್ಲ.

ಬಾದ:—ಪುನಃ ಏನಾದರೂ ತೊಂದರೆಯನ್ನು ಮಾಡಿದಳೊ?

ಉದಯ:—ನಿನ್ನಿನ ರಾತ್ರಿಯಿಂದಲೂ ಇಂದಿರೆಯ ಸುದ್ದಿಯೇ ಇಲ್ಲ. ಪಟ್ಟಣದಲ್ಲೆಲ್ಲಾ ಹುಡುಕಿಸಿದೆನು. ಎಲ್ಲಿಯೂ ಕಾಣಲಿಲ್ಲ.

ಬಾದ:—ಎಲ್ಲಿಗೋ ಓಡಿಹೋಗಿರಬಹುದು. ಇಷ್ಟು ಮಾತ್ರಕ್ಕೇ ವಿಚಾರವೇಕೆ?

ಉದಯ:—ಹಾಗೆ ಓಡಿಹೋಗುವವಳಾಗಿರಲಿಲ್ಲ. ಈ ಪಟ್ಟಣದಲ್ಲಿಯೇ ಇರುವಳು.

ಬಾದ:—ಪಟ್ಟಣದಲ್ಲೆಲ್ಲೆಲ್ಲಿಯೂ ಹುಡುಕಿಸಿನೆಂದು ಹೇಳಿದೆಯಲ್ಲವೆ? ಮತ್ತೆ ಇಲ್ಲಿಯೇ ಇರುವಳೆನ್ನುವೆ. ಹೇಗೆ?

ಉದಯ:—ನನಗೆ ಸಾಧ್ಯವಾದ ಸ್ಥಳಗಳಲ್ಲೆಲ್ಲ ಹುಡುಕಿಸಿದೆನು

ಬಾದ:—ನಿನಗೆ ಅಸಾಧ್ಯವಾದ ಸ್ಥಳಗಳೂ ಈಪಟ್ಟಣದಲ್ಲಿರುವವೋ.

ಉದಯ:—ಇದೆ, ಆದರೆ ಅದು ತಮ್ಮ ಅನುಗ್ರಹದಿಂದಲೇ ಆದುದು.

ಬಾದ:—ಅದಾವುದೋ ಹೇಳಬಾರದೇ?

ಉದಯ:—ಹೇಳುವೆನು. ಆದರೂ ತಮಗೆ ಕೂಡ ಆಸ್ಥಳವು ಅಸಾಧ್ಯವೆಂದೇ ತೋರುವುದು.

ಬಾದ:—ನೋಡುವ, ಬೇಗ ಹೇಳಬಾರದೇ! ಸುಮ್ಮನೆ ಕಾಲ ಕಳೆಯುತ್ತಿರುವುದೇಕೆ?

ಉದಯ:—ಎಲ್ಲಾ ಸ್ಥಳಗಳಲ್ಲಿಯೂ ಹುಡುಕಿಸಿದೆನು. ಆದರೆ ರೋಷನಾರೆಯ ಮಂದಿರದಲ್ಲಿ ಮಾತ್ರ ಹುಡುಕಿಸಲಾಗಲಿಲ್ಲ. ನೀವೇನಾದರೂ ಹುಡುಕಿಸಬಲ್ಲಿರೊ ?

ಬಾದ:—ಪ್ಯಾರಿ! ಆ ಇಂದಿರೆಗಾಗಿ ನೀನೇಕೆ ಇಷ್ಟು ಯೋಚಿಸುವೆ? ಇನ್ನು ಸ್ವಲ್ಪ ದಿನಗಳಲ್ಲಿಯೇ ಇಂದಿರೆಗಿಂತಲೂ ಜಾಣೆಯಾದ ರಾಜಕನ್ಯೆಯನ್ನು ನಿನ್ನ ದಾಸಿಯನ್ನಾಗಿ ನಿಯಮಿಸುವೆನು. ಈಗ ನಾನು ಒಂದು ಮಾತನ್ನು ಹೇಳಲು ಇಲ್ಲಿಗೆ ಬಂದಿರುವೆನು. ಅದೇನೆನ್ನುವಿಯೋ? ನಿನಗೂ ವಿಮಲೆಯ ಮೇಲಿನ ಕೋಪವನ್ನಂದಾದರೂ ತೀರಿಸಿಕೊಳ್ಳಬೇಕೆಂಬ ಅಪೇಕ್ಷೆಯಿದೆಯಲ್ಲವೆ! ನಿನ್ನ ಕೋರಿಕೆಯನ್ನು ನೆರವೇರಿಸಲು ನಾಳೆಯೇ ರೂಪನಗರದ ಮೇಲೆ ದಂಡೆತ್ತಿಹೊರಡಲು ಸಿದ್ಧನಾಗಿರುವೆನು. ನೀನೂ ನನ್ನೊಡನೆ ಬರುವೆಯಾ ?

ಉದಯ:—ಸ್ವತಃ ನೀವೇ ಹೋಗಬೇಕೇ? ಸೈನ್ಯವನ್ನು ಕಳುಹಿದರೆ ಆಗದೆ ?

ಬಾದ:—ಹಾಗಲ್ಲ! ರಾಜಪುತ್ರರೆಲ್ಲರೂ ವಿಜಯಸಿಂಹನ ಸಹಾಯಕ್ಕಾಗಿ ಬರುವರು. ರಾಜಸಿಂಹನು ಅವರೆಲ್ಲರಿಗೂ ಮುಂದಾಗಿ ಬರುವನಂತೆ! ಹೀಗಿರುವದರಿಂದ ನಾನು ಹೋಗದಿದ್ದರೆ ಹೇಗಾಗುವುದು? ಸಮಯವು ಹೇಗಿರುವುದೋ? ನೀನೂ ಜೊತೆಯಲ್ಲಿ ಹೊರಡುವೆಯೋ?

ಉದಯ:—ಹೊರಡುವುದೇನು? ನಾನು ಬದುಕಿರಬೇಕೆಂಬ ಆಶೆ ನಿಮಗಿದ್ದರೆ ನನ್ನನ್ನು ನಿಮ್ಮೊಡನೆಯೇ ಕರೆದುಕೊಂಡು ಹೋಗುವಿರಿ.

ಬಾದ:—ಕರೆದುಕೊಂಡು ಹೋಗಬೇಕೆಂದೇ ಕೇಳಿದೆನು. ನಾಳೆ ಹೊರಡಲು ಸಿದ್ಧವಾಗಿರು.

ಹೀಗೆ ಇವರು ಮಾತನಾಡುವಷ್ಟರಲ್ಲಿಯೇ ಮುನಾವದನು ಬಂದು "ಸೈನ್ಯವು ರೂಪನಗರಕ್ಕೆ ಹೊರಡುತ್ತಿದೆ. ಸಮಾಚಾರವನ್ನು ಪಾದಸನ್ನಿಧಾನಕ್ಕೆ ಮುಟ್ಟಿಸಲು ಬಂದೆನು." ಎಂದು ಬಾದಶಹನಿಗೆ ನಿವೇದಿಸಿದನು.

ಬಾದಶಹನು " ಸಂತೋಷ, ಇಪ್ಪತ್ತು ಗಾವುದಗಳ ದೂರ ಹೋಗಬೇ
ಗಿರುವುದರಿಂದ ದಾರಿಯಲ್ಲಿ ಒಂದು ಮುಜಲಿಯನ್ನು ಮಾತ್ರ ಮಾಡಿ ಜಾ
ತೆಯಾಗಿ ಹೋಗಬೇಕೆಂದು ಸೇನಾಪತಿಗೆ ಹೇಳು." ಎಂದು ಹೇಳಿ ಕ
ಪಿಸಿ, ಉದಯಪುರಿಯೊಡನೆ ಸೈನ್ಯವನ್ನು ನೋಡಲು ಬುರುಜಿನ ಹ
ಹೋಗಿ ನೋಡಲು ಹೊರಟನು. ಸಪ್ತಸಮುದ್ರಗಳು ಸೇರಿ ಪ್ರವ
ವುವೋ ಎಂಬಂತೆ ಆ ಸೇನಾಸಮೂಹವು ಪ್ರಯಾಣ ಮಾಡುತ್ತಿದ್ದುದ
ನೋಡಿ ಬಾದಶಹನೂ ಉದಯಪುರಿಯೂ ತಮಗೇ ಖಂಡಿತವಾಗಿ ಜ
ವಾಗುವುದೆಂದು ಸಂತೋಷಪಟ್ಟರು. ಅನಂತರ ಬಾದಶಹನು ಅಲ್ಲಿ
ಸ್ವಲ್ಪಹೊತ್ತು ನಿಂತಿದ್ದು ಅಲ್ಲಿಯೇ ನಮಾಜುಮಾಡಿ ತನ್ನ ಮಹಲಿಗೆ
ರಟು ಹೋದರು. ಇತ್ತ ಸಕಲ ಸೇನಾಸಮೂಹವೂ ಸ್ವಲ್ಪ ದೂರ ಹೊ
ಮೇಲೆ ಒಬ್ಬ ಫಕೀರನು ಎಲ್ಲಿಂದಲೋ ಬಂದು ಸೇನೆಯೊಡನೆ ಕ
ಹೋಗುತ್ತಿದ್ದನು. ಆದರೆ ಯಾವ ಕಾರಣದಿಂದಲೋ ಆ ಫಕೀರನು
ರೊಡನೆಯೂ ಮಾತನಾಡದೆ ಸುಮ್ಮನೆ ಹೋಗುತ್ತಿದ್ದನು.

---

## ಮುವತ್ತೊಂದನೆಯ ಪ್ರಕರಣ.

(ರಾಜಸಿಂಹನ ಪ್ರತಿಜ್ಞೆ.)

ರಾಜಸಿಂಹನ ಕೋರಿಕೆಯಂತೆ ಆತನ ಸಾಮಂತ ಮಿತ್ರಮಂಡಲಿ
ರಾಜರೆಲ್ಲರೂ ಸೈನ್ಯದೊಡನೆ ಸಹಾಯಕ್ಕೆ ಬಂದರು. ಜಯಪುರ, ಜೋ
ತಿಪುರ ಮೊದಲಾದ ಕೆಲವರು ಮಾತ್ರ ಬರಲಿಲ್ಲವಾದರೂ ಬಂದವರ
ತುಂಬ ಗೌರವದಿಂದ ಬರಮಾಡಿಕೊಂಡು ಅವರವರ ಮರ್ಯಾದೆಗೆ ತಕ್ಕ

ಸತ್ಕರಿಸಿ ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕ ಬಿಡಾರಗಳನ್ನು ಹಾಕಿಸಿದನು. ಉದಯಪುರದಲ್ಲಿ ಎಲ್ಲೆಲ್ಲಿ ನೋಡಿದರೂ ಸೈನಿಕರ ಕೋಲಾಹಲವೂ ರಾಜಪುತ್ರರ ಸಮರೋತ್ಸಾಹವೂ ತುಂಬಿ ತುಳುಕುತ್ತಿದ್ದುವು. ಪ್ರತಿ ದಿನವೂ ರಾಜಸಿಂಹನು ಅಶ್ವಾರೂಢನಾಗಿ ಬಂದು, ಸಹಾಯಕ್ಕಾಗಿ ಬಂದಿರುವ ರಾಜಪುತ್ರರೆಲ್ಲರಿಗೂ ಸರಿಯಾಗಿ ಉಪಚಾರಗಳು ನಡೆಯುವುವೋ ಹೇಗೆಂಬುದನ್ನು ರಹಸ್ಯವಾಗಿ ತಿಳಿದುಕೊಳ್ಳುತ್ತಲೂ ಸಮಕ್ಷ ಸಂಭಾಷಣೆಯಿಂದವರನ್ನು ಸಂಭಾವಿಸುತ್ತಲೂ ಬರುತ್ತಿದ್ದನು. ಸೈನಿಕರು ಯವನರ ಗರ್ವಭಂಗ ಮಾಡುವ ಸುಯೋಗವು ಪ್ರಾಪ್ತವಾಯಿತೆಂಬ ಸಂತೋಷದಿಂದ ಪರಮಾತ್ಮನ ಭಜನ ಸಂಕೀರ್ತನೆಗಳನ್ನು ಮಾಡುತ್ತಲೂ ಪರಸ್ಪರ ಅಭಿಮಾನದಿಂದ ಸಂಭಾಷಿಸುತ್ತಲೂ ಸಂಗೀತ ವಾದ್ಯಗಳಿಂದ ಮನಸ್ಸನ್ನು ಉಲ್ಲಾಸಗೊಳಿಸುತ್ತಲೂ ಬಗೆಬಗೆಯಾಗಿ ತಮ್ಮ ಸಂತೋಷೋತ್ಸಾಹಗಳನ್ನು ಪ್ರದರ್ಶಿಸುತ್ತಿದ್ದರು. ಪುರಜನರು ಸಹಾಯಕರಾಗಿ ಬಂದಿರುವ ಸೇನಾಸಮೂಹವನ್ನು ನೋಡುವ ಕುತೂಹಲದಿಂದ ಗುಂಪು ಗುಂಪಾಗಿ ಬಂದು ಬುರುಜುಗಳ ಮೇಲೆಯೂ ಗುಡ್ಡದ ಮೇಲೆಯೂ ನಿಂತು ನೋಡುತ್ತ ಬಂದಿರುವ ಸೇನೆಗಳಲ್ಲಿ "ಬುಂದೀರಾಜನ ಸೇನೆ ಇದು, ಭರತಪುರಾಧೀಶನ ಸೇನೆ ಇದು, ಜೋಧಪುರದ ಚಂದ್ರಾವತೀ ರಾಣಿ ಸೇನೆ ಇದು, ಅಲ್ವಾರ ರಾಜನ ಸೇನೆ ಇದು" ಎಂದು ಹೇಳಿಕೊಳ್ಳುತ್ತ ತಮ್ಮ ರಾಜನಿಗೇ ಜಯಲಕ್ಷ್ಮಿಯು ಒಲಿವಳೆಂದು ನಿರ್ಧರಿಸಿ ಸಂತೋಷಪಡುತ್ತಿದ್ದರು.

ರಾಜಸಿಂಹನ ವಿಶ್ವಾಸಗೌರವಕ್ಕೆ ಪಾತ್ರನಾಗಿದ್ದ ದುರ್ಗಾಚರಣ ಜೋಯಿಸನೆಂಬವನೊಬ್ಬ ಜ್ಯೋತಿಷಶಾಸ್ತ್ರಜ್ಞನು ಉದಯಪುರದಲ್ಲಿಯೇ ಇದ್ದನು. ಈತನೂ ಸೈನ್ಯವನ್ನು ನೋಡಬಂದವನು ತಾನು ಎಲ್ಲರಂತೆಯೂ ಸುಮ್ಮನಿರದೆ ತನ್ನ ಜ್ಯೋತಿಷಶಾಸ್ತ್ರ ಪಾಂಡಿತ್ಯವನ್ನು ಇವರಲ್ಲಿ ಪ್ರದರ್ಶಿಸುವೆನೆಂದು ಆಲೋಚಿಸಿ, ಒಂದೆಡೆ ಗುಂಪಾಗಿ ನಿಂತಿದ್ದ ರಾಜಪುತ್ರರ ಮಧ್ಯೇ ನುಗ್ಗಿ— "ಎಲೈ, ವೀರರೇ! ನಿಮಗೆ ಜಯವಾಗುವುದು, ನಿಮಗೆ ಜಯ

ಲಕ್ಷ್ಮೀ ಪ್ರಸನ್ನಳಾಗುವಳು. ನಾನು ಜ್ಯೋತಿಷ್ಯವನ್ನು ನೋಡಿ ಹೇಳುವವನು. ನನ್ನ ಮಾತು ಸುಳ್ಳಾಗುವುದಿಲ್ಲ." ಎಂದು ಹೇಳುತ್ತಿದ್ದನು. ಇದನ್ನು ಕೇಳಿ ಭಟರಲ್ಲಿ ಕೆಲವರು ತಮಗೆ ಮದುವೆಯಾವಾಗಲಾಗುವುದೆಂದೂ ಇನ್ನು ಕೆಲವರು ತಮ್ಮ ಸಂಸಾರವು ತನ್ನೊಡನೆ ಸೇರುವುದಾವಾಗಲೆಂದೂ ಇನ್ನು ಕೆಲವರು ಯುದ್ಧದಲ್ಲಿ ಯಾರಿಗೆ ಜಯವಾಗುವುದೆಂದೂ ಹೀಗೆ ಬಗೆಬಗೆಯಾಗಿ ಕೇಳುತ್ತ ಆ ಜೋಯಿಸನನ್ನು ಪೀಡಿಸಲಾರಂಭಿಸಿದರು. ಜೋಯಿಸನು ತಾಳ್ಮೆಯಿಂದ ಅವರವರ ಪ್ರಶ್ನೆಗಳಿಗೆ ಪ್ರತ್ಯುತ್ಪನ್ನೋಚಿತಗಳಿಂದ ಉತ್ತರಗಳನ್ನು ಕೊಡುತ್ತ ಬಂದನು.

ಇಷ್ಟರಲ್ಲಿ ಶ್ಯಾಮಲಪಂಡಿತನೂ ಅಲ್ಲಿಗೆ ಬಂದನು. ಈತನು ರಾಜಸಿಂಹನ ಅರಮನೆಯನ್ನು ಪ್ರವೇಶಿಸಿದಂದಿನಿಂದಲೂ ಜೋಯಿಸರಿಗೆ ಅತ್ಯಂತ ಸ್ನೇಹವುಳ್ಳವನಾಗಿದ್ದನು. ಜೋಯಿಸನೂ ಆತನ ಹಾಸ್ಯೋಕ್ತಿಗಳಿಗೆ ಆನಂದಿಸುತ್ತ ಆತನೊಡನೆಯೇ ಕಾಲವನ್ನು ಕಳೆಯುತ್ತಿದ್ದನು. ಅವರಿಬ್ಬರೂ ಅಣ್ಣತಮ್ಮಂದಿರಂತೆ ಎಲ್ಲಿಗೆ ಹೋದರೂ ಜೊತೆಯಲ್ಲಿಯೇ ಹೋಗುತ್ತಿದ್ದರು. ಆದರೆ ಈ ದಿನ ಮಾತ್ರ ಜೋಯಿಸನು ಹೇಳದೆ ಹೊರಟು ಬಂದುದರಿಂದ ಅವನನ್ನು ಎಲ್ಲೆಲ್ಲಿಯೋ ಹುಡುಕಿ ಕಡೆಗೆ ಈ ಗುಂಪಿನಲ್ಲಿದ್ದವನನ್ನು ಕಂಡು ಬಹುಪ್ರಯಾಸದಿಂದ ಜನರ ಗುಂಪನ್ನು ಭೇದಿಸಿಕೊಂಡು ಬಂದು ಜೋಯಿಸನನ್ನು ಸೇರಿದನು. ಜೋಯಿಸನು ಆತನನ್ನು ಆದರಿಸಿ ತನ್ನ ಪಕ್ಕದಲ್ಲಿದ್ದ ಬಂಡೆಯಮೇಲೆ ಕುಳ್ಳಿರಿಸಿಕೊಂಡನು. ಶ್ಯಾಮಲಪಂಡಿತನು ಜೋಯಿಸನನ್ನು ನೋಡಿ—

" ಜೋಯಿಸರೇ! ಎಲ್ಲರಿಗೂ ಜೋತಿಷ್ಯವನ್ನು ಹೇಳುವಿರಿ; ನನಗೆ ಮಾತ್ರ ಹೇಳಬೇಡವೋ? ಎಲ್ಲಿ ಹೇಳಿರಿ, ನಾನೊಂದು ಕಾರ್ಯವನ್ನು ಈಗ ಮನಸ್ಸಿನಲ್ಲಿ ನೆನಸಿಕೊಂಡಿರುವೆನು. ಅದಕ್ಕೆ ಫಲವನ್ನು ಹೇಳಬೇಕು.

ಜೋಯಿಸ:— ನೀವು ಸ್ಮರಿಸಿದ ಕಾರ್ಯವು ಸಿದ್ಧಿಸುವುದು. ಯುದ್ಧದಲ್ಲಿ ನಿಮಗೇ ಜಯವಾಗುವುದು.

ಶ್ಯಾಮಲ:—ಸರಿ, ಸರಿ. ಬಹು ಚೆನ್ನಾಗಿದೆ. ನಾನು ಸ್ಮರಿಸಿದ್ದೊಂದು ನೀವು ಹೇಳುವುದೊಂದು. ನಾನಿಲ್ಲಿಗೆ ರೂಪನಗರದಿಂದ ಬರುವಾಗ ನಮ್ಮ ಮನೆಯ ಹಸು ಗರ್ಭವಾಗಿತ್ತು. ಅದು ಈಗ ಕರುವನ್ನು ಹಾಕಿರುವುದೆ ಎಂದು ಸ್ಮರಿಸಿದೆನು. ನೀವು ಯುದ್ಧದ ವಿಚಾರತೆಗೆದಿರಿ. ಒಳ್ಳೆಯ ಜೋತಿಷ್ಯ! ಫಲವೆಂದರೆ ಇದೇ ಫಲ; ಹೋಗಲಿ, ಆ ಹಸುವಿನ ರೂಪವನ್ನಾದರೂ ಹೇಳುವಿರೊ ?

ಜೋಯಿಸ:—ಸರಿಯೆ, ಆ ಹಸು ಕಪ್ಪು ಬಣ್ಣ. ಮುಖದ ಮೇಲೆ ಬಿಳಿಯ ಮಚ್ಚೆಗಳಿರುವವು. ಕೊಂಬುಗಳು ಗಿಡ್ಡ....ಏನು ನಿಜವೊ ?

ಶ್ಯಾಮಲ:—ಓಹೋ! ನೀವು ಹೇಳುವಂತಹ ಹಸುಗಳು ಲೋಕದಲ್ಲೆಷ್ಟೋ ಇರುವುವು; ನಾನೂ ನೋಡಿರುವೆನು. ನಮ್ಮ ಮನೆಯಲ್ಲಿ ಮಾತ್ರ ಹಸುವೇ ಇಲ್ಲ.

ಹೀಗೆ ಶ್ಯಾಮಲಪಂಡಿತನು ವಿನೋದವಾಡಲು ಜೋಯಿಸನು ಸುಮ್ಮನಾದನು. ಪಂಡಿತನ ಹಾಸ್ಯೋಕ್ತಿಗಳಿಗೆ ಸುತ್ತಲಿದ್ದ ಭಟರು ಸಂತೋಷಿಸಿ, ಫಲಾದಿಗಳನ್ನಿತ್ತು ಸತ್ಕರಿಸಿದರು. ಪಂಡಿತನು ಅವನ್ನು ಸ್ವೀಕರಿಸಿ ಜೋಯಿಸನೊಡಗೊಂಡು ಅರಮನೆಗೆ ಹೊರಟು ಹೋದನು.

ಅಂದು ಸಾಯಂಕಾಲ ರಾಜಸಿಂಹನು ಸಹಾಯಕ್ಕಾಗಿ ಬಂದಿದ್ದ ರಾಜಪುತ್ರರೊಡನೆ ತನ್ನ ಮಹಲಿನ ಮಾಳಿಗೆಯ ಮೇಲೆ ಕುಳಿತು ಯುದ್ಧ ಸಂಬಂಧವಾಗಿ ಆಲೋಚಿಸುತ್ತ ಕುಳಿತಿದ್ದನು. ಕುಳಿತಿದ್ದವನ ದೃಷ್ಟಿ ದೂರದಲ್ಲಿ ಅಶ್ವಾರೂಢನಾಗಿ ಉದಯಪುರಾಭಿಮುಖನಾಗಿ ಬರುತ್ತಿದ್ದ ಸರದಾರನ ಕಡೆ ಬಿದ್ದಿತು. ರಾಜಸಿಂಹನು ಕುತೂಹಲದಿಂದ ಆತನನ್ನೇ ನಿರೀಕ್ಷಿಸುತ್ತಿದ್ದನು. ಬಳಿಯಲ್ಲಿದ್ದ ರಾಜಪುತ್ರರೂ ಆತನಾರಿರಬಹುದೆಂದು ಯೋಚಿಸುತ್ತ ಆತನನ್ನೇ ನೋಡುತ್ತಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ಆ ಸರದಾರನು ಪಟ್ಟಣ ಪ್ರವೇಶಮಾಡಿ ರಾಜಮಾರ್ಗಗಳನ್ನು ದಾಟಿ ಅರಮನೆಯ ಮುಂದೆ ಕುದುರೆಯಿಂದಿಳಿದು ದ್ವಾರಪಾಲಕನನ್ನು ಕುರಿತು—

"ಮಹಾರಾಜರ ಸಮಯವೇನೆಂದು" ಕೇಳಲು ಸೇವಕನೊಬ್ಬನು ಬಂದು ರಾಜಾಜ್ಞೆಯಿಂದ ಆತನನ್ನು ಕರೆದುಕೊಂಡು ಬಂದು ರಾಜಸಮ್ಮುಖದಲ್ಲಿ ನಿಲ್ಲಿಸಿದನು. ಸರದಾರನು ರಾಜಸಿಂಹನಿಗೆ ವಿನಯದಿಂದ ಕೈಮುಗಿದು ನಿಲ್ಲಲು, ರಾಜಸಿಂಹನು ವಿಚಾರವೇನೆಂದು ಪ್ರಶ್ನೆಮಾಡಿದನು. ಅದಕ್ಕಾತನು, "ಮಹಾರಾಜಾ! ಡಿಲ್ಲಿಯಿಂದ ಯುದ್ಧದ ವಿಷಯಗಳನ್ನೆಲ್ಲ ತಿಳಿದು ಬಂದಿರುವೆನು. ಅಲಂಘೀರನು ನಾಳಿನ ದಿನವೇ ಅಲ್ಲಿಂದ ಹೊರಡುವನು. ಸೈನ್ಯವನ್ನೆಲ್ಲ ಮೊದಲೇ ಕಳುಹಿರುವನು. ಆತನು ಮೊದಲು ರೂಪನಗರವನ್ನು ಸ್ವಾಧೀನಪಡಿಸಿಕೊಂಡು ಅನಂತರ ಇಲ್ಲಿಗೆ ಬರುವನೆಂಬ ವರ್ತಮಾನವಿರುವುದು. ನಾವೂ ಶೀಘ್ರವಾಗಿಯೇ ಹೊರಡಬೇಕು." ಎಂದು ನಿವೇದಿಸಿದನು. ರಾಜಸಿಂಹನು ಸ್ವಲ್ಪ ಹೊತ್ತು ಯೋಚಿಸಿ, ಮೊಗಲ್ ಸೈನ್ಯವು ರೂಪನಗರವನ್ನು ಸೇರುವುದಕ್ಕೆ ಮೊದಲೇ ತಾನು ಹೋಗಿ ಸಾದತ್‌ಖಾನನನ್ನು ಓಡಿಸಿ, ವಿಮಲಾದೇವಿಯನ್ನು ಕರೆದುಕೊಂಡು ಬಂದು ಉದಯಪುರದಲ್ಲಿಟ್ಟು ಅನಂತರ ಯುದ್ಧಕ್ಕೆ ಹೊರಡಬೇಕೆಂದು ನಿಶ್ಚಯಿಸಿ, ತನ್ನ ಸಾಮಂತರೊಡನೆ ತನ್ನ ಅಭಿಪ್ರಾಯವನ್ನು ಹೇಳಿದನು. ಅನಂತರ ಅವರ ಮುಂದೆ ವೀರಾವೇಶದಿಂದೆದ್ದು "ಶತ್ರುಗಳನ್ನು ಜಯಿಸಿದ ಹೊರತು ಉದಯಪುರವನ್ನು ನೋಡುವುದಿಲ್ಲ" ವೆಂದು ಶಪಥಮಾಡಿ ಒಡನೆಯೇ ಮಂತ್ರಿ ಸೇನಾನಾಯಕರನ್ನು ಕರೆಯಿಸಿ, ಅವರೆಲ್ಲರನ್ನೂ ಕುರಿತು— ಉದಯಪುರ ಸಂರಕ್ಷಣೆಗಾಗಿ ನಿಯಮಿಸಲ್ಪಟ್ಟಿರುವ ನಾಲ್ಕು ಸಾವಿರ ಸರದಾರರ ಹೊರತು ಮಿಕ್ಕವರೆಲ್ಲರೂ ಯುದ್ಧಸನ್ನದ್ಧರಾಗಿ ಈ ದಿನ ರಾತ್ರಿಯೇ ಹೊರಡಬೇಕು." ಎಂದು ಆಜ್ಞಾಪಿಸಿದನು.

ಆ ದಿನ ಸಾಯಂಕಾಲ, ರಾಜಸಿಂಹನು ಈ ರೀತಿ ಪ್ರತಿಜ್ಞೆಯನ್ನು ಮಾಡಿ ಎಲ್ಲರನ್ನೂ ಯುದ್ಧಕ್ಕೆ ಹೊರಡಲು ಹುರುಡಿಸಿದ ಬಳಿಕ ದುರ್ಗಾಚರಣ ಜೋಯಿಸರನ್ನು ಕರೆಯಿಸಿ ಆತನೊಡನೆ ಸ್ವಲ್ಪ ಹೊತ್ತು ಆಲೋಚಿಸಿ, ಶುಭಕರವಾದ ಫಲವನ್ನು ಕೇಳಿ ಅತ್ಯಂತ ಸಂತೋಷಪಟ್ಟು ಉಚಿತವಾದ

ಉಡಿಗೆಯನ್ನುಟ್ಟು ಪ್ರಯಾಣಕ್ಕೆ ಸನ್ನದ್ಧನಾದನು. ಇತ್ತ ಸೈನ್ಯಾಧಿಕಾರಿಗಳು ಎರಡು ಗಂಟೆಯೊಳಗಾಗಿ ಪ್ರಯಾಣಕ್ಕೆ ಸಿದ್ಧರಾಗಿ ಅರಮನೆಯ ಬಳಿ ಕಾದಿದ್ದರು. ರಾಜಸಿಂಹನು ಆನೆಯ ಮೇಲೆ ಕಟ್ಟಿದ್ದ ಒಂದು ಅಂಬಾರಿಯಲ್ಲಿ ಏರಿ ಕುಳಿತನು. ತತ್ಕ್ಷಣವೇ ಸುತ್ತುವರಿದಿದ್ದವರಿಂದ ಮಾಡಲ್ಪಟ್ಟ "ಜಯ ಜಯಕಾರ" ವೂ ವಾದ್ಯಗಳ ರವಗಳೂ ಅಶ್ವಗಜಾದಿಗಳ ಸಂತೋಷಸೂಚಕಗಳಾದ ಧ್ವನಿಗಳೂ ಒಟ್ಟುಗೂಡಿ ಭೂನಭೋಂತರಾಳಗಳನ್ನು ಭೇದಿಸುವಂತಾದುವು.

ಹೀಗೆ ಸಂಭ್ರಮದಿಂದ ರಾಜಸಿಂಹನು ಹೊರಟಕೂಡಲೆ ಮುಂದೆ ಕೆಲವು ಸೈನ್ಯವೂ ಆತನ ಹಿಂದೆ ಕೆಲವು ಸೈನ್ಯವೂ ಹೊರಟವು. ಸಾಮಂತರಾಜರು ಗಜಾರೂಢರಾಗಿಯೂ ರಥಾರೂಢರಾಗಿಯೂ ಹೊರಟರು. ಈ ಸಂಭ್ರಮವನ್ನು ನೋಡಲು ಪೌರರೆಲ್ಲರೂ ಉಪ್ಪರಿಗೆಗಳ ಮೇಲೆಯೂ ಬುರುಜುಗಳ ಮೇಲೆಯೂ ಹತ್ತಿ ನಿಂತಿದ್ದರು. ಸೂರ್ಯೋದಯವಾಗುವ ವೇಳೆಗೆ ಸೈನಿಕರಲ್ಲಿ ಒಬ್ಬರೂ ನಿಲ್ಲದೆ, ಎಲ್ಲರೂ ಉದಯಪುರವನ್ನು ಬಿಟ್ಟು ಯುದ್ಧರಂಗಕ್ಕೆ ಹೊರಟು ಹೋಗಿದ್ದರು.

---

## ಮೂವತ್ತೆಂಟನೆಯ ಪ್ರಕರಣ.

---

(ಯಮುನಾ ನದಿ)

ಫರುಕ್ ಸೈರನನ್ನು ತನ್ನ ಮಾಯಾ ಜಾಲದಲ್ಲಿ ಸಿಲುಕಿಸಿಕೊಂಡು ರೋಷನಾರೆಯು ಇಂದಿರೆಗೆ ಮಾಡಬೇಕೆಂದಿದ್ದ ಮೋಸಗಳನ್ನು ನಮ್ಮ ಫಕೀರನು ಉಪಾಯದಿಂದ ತಿಳಿದುಕೊಂಡನು. ನದಿಯಲ್ಲಿ ಬೀಳದಂತೆ ಇಂದಿರೆಯನ್ನು ಆರಾತ್ರಿ ಹೇಗಾದರೂ ಮಾಡಿ ತಪ್ಪಿಸಬೇಕೆಂದು ತಕ್ಕ

ಉಪಾಯುವನ್ನು ಯೋಚಿಸುತ್ತಿದ್ದನು. ಕಾಲಾತೀತವಾಗುವ ಮೊದಲೇ ತನ್ನ ಉಪಾಯವನ್ನಾಲೋಚಿಸಲು ಫರುಕ್ ಷೈರನನ್ನು ಕಳುಹಿಸಿ ಬಿಟ್ಟು ತನ್ನಲ್ಲಿಯೇ ಆಲೋಚಿಸುತ್ತ ರಾಣಿವಾಸದ ಬಳಿಗೆ ಬರುವಷ್ಟರಲ್ಲಿಯೇ ನಯನ ಪಾಲನು ಫಕೀರನಂತೆ ವೇಷವನ್ನು ಹಾಕಿಕೊಂಡು ರಾಣಿವಾಸದ ದ್ವಾರ ದಲ್ಲಿ ನಮ್ಮ ಫಕೀರನನ್ನು ಇದಿರ್ಗೊಂಡನು. ಇವನು ಕಾರಾಗೃಹದಿಂದ ತಪ್ಪಿಸಿಕೊಂಡು ಬಂದಂದಿನಿಂದಲೂ ಹೇಗಾದರೂ ಮಾಡಿ ಇಂದಿರೆಯನ್ನು ಕಾಪಾಡಬೇಕೆಂದು ಅನೇಕ ವೇಷಗಳನ್ನು ಧರಿಸಿ ಪ್ರತಿದಿನವೂ ಅಂತಃಪುರ ವನ್ನು ಪ್ರವೇಶಿಸುತ್ತ ನಯನಪಾಲನು ಅಲ್ಲಿಯ ರಹಸ್ಯಗಳೆಲ್ಲವನ್ನೂ ತಿಳಿದು ಕೊಂಡಿದ್ದನು. ಅನೇಕ ವೇಳೆ ನಮ್ಮ ಫಕೀರನೂ ನಯನಪಾಲನೂ ಪರ ಸ್ಪರ ನೋಡುತ್ತಿದರೂ ಒಬ್ಬರಲ್ಲೊಬ್ಬರು ಎಂದೂ ಮಾತನಾಡಿರಲಿಲ್ಲ. ನಮ್ಮ ಪಕೀರನು ಕೆಲವು ದಿನಗಳ ವರೆಗೆ ನಯನಪಾಲನನ್ನು ಗುರುತಿಸದಿ ದ್ದರೂ ಕ್ರಮಕ್ರಮವಾಗಿ ಆತನು ನಯನಪಾಲನೆಂದೂ ಇಂದಿರೆಯನ್ನು ರಕ್ಷಿ ಸುವುದಕ್ಕಾಗಿ ಪ್ರಯತ್ನಿಸುತ್ತಿರುವನೆಂದೂ ತಿಳಿದುಕೊಂಡನು. ಸಮಯ ಬಂದಾಗ ಆತನನ್ನು ಮಾತನಾಡಿಸಿ ಆತನ ಸಹಾಯವನ್ನು ಹೊಂದಬೇಕೆಂದಿ ದ್ದುದರಿಂದ ಫಕೀರವೇಷದಿಂದ ಬಂದ ನಯನಪಾಲನನ್ನು ಮಾತನಾಡಿಸಲು ಇದೇ ಸಮಯವೆಂದು ಭಾವಿಸಿ ಆತನೊಡನೆ ಸಂಭಾಷಣೆಗೆ ಪ್ರಾರಂಭಿಸಿದರು.

ಫಕೀರ :— ಹೋ ಫಕೀರ್ಜೀ! ಸಲಾಂ. ಎಲ್ಲಿಗೆ ಹೋಗುತ್ತಿರು ವಿರಿ ?

ರಯನ :— ಜನಾನಾದೊಳಗೆ ಭಿಕ್ಷೆಗಾಗಿ ಹೋಗುತ್ತಿರುವೆನು.

ಫಕೀರ :— ನೀವು ಫಕೀರ್ ದೀಕ್ಷೆ ಕೈಗೊಂಡು ಎಷ್ಟು ದಿನ ಗಳಾದುವು ?

ನಯನ :— ಆ ಸಂಗತಿಗಳೆಲ್ಲಾ ಏಕೆ ?

ಫಕೀರ :— ಅಯ್ಯಾ! ನಿನ್ನ ಪೂರ್ವ ವೃತ್ತಾಂತವನ್ನೂ ಈಗ ನೀನು ವೇಷಧರನಾಗಿ ರಾಣಿವಾಸದೊಳಗೆ ಪ್ರವೇಶಿಸಿ ಮಾಡಬೇಕೆಂದಿರುವ ಕಾರ್ಯ

ವಾವುದೆಂಬುದನ್ನೂ ನಾನು ಚನ್ನಾಗಿ ಬಲ್ಲೆನು. ನಾನು ಕೂಡ ಈ ವಿಷಯದಲ್ಲಿ ನಿನಗೆ ಗುರುವೇ ಸರಿ: ನಿಜಾಂಶವನ್ನು ಹೇಳು.

ಈ ಮಾತುಗಳಿಂದ ನಯನಪಾಲನು ಶಂಕೆಗೊಂಡು ಸುಮ್ಮನೇ ನಿಲ್ಲಲು, ನಮ್ಮ ಫಕೀರನು ಅವನನ್ನು ಕುರಿತು,—"ಅಯ್ಯಾ ; ಇನ್ನೂ ಅನುಮಾನವೇ? ನಿನ್ನ ಸಮಾಚಾರವನ್ನೆಲ್ಲವನ್ನೂ ನಾನು ಬಲ್ಲೆನು. ನೀನು ನಯನಪಾಲನಲ್ಲವೇ" ಎಂದನು.

ಪಾಪ! ನಯನಪಾಲನು ಅತ್ಯಂತ ಭೀತಚಿತ್ತನಾಗಿ ಫಕೀರನ ಕೈಗಳನ್ನು ಹಿಡಿದುಕೊಂಡು ದೈನ್ಯವಾಣಿಯಿಂದ—"ಸ್ವಾಮಿಾ, ದಯೆಯಿಟ್ಟು ನನ್ನ ರಹಸ್ಯವನ್ನು ಒಬ್ಬರಿಗೂ ತಿಳಿಸಬೇಡಿ; ಈ ದಿನ ನನ್ನನ್ನು ಹೇಗಾದರೂ ಮಾಡಿ ಕಾಪಾಡಿರಿ! ನಿಮಗೆ ಬೇಕಾದ ಬಹುಮಾನಗಳನ್ನು ಕೊಡುವೆನು." ಎಂದು ಅಭಯವನ್ನಿತ್ತು ನಯನಪಾಲನು ಫಕೀರನನ್ನೊಡಗೊಂಡುಹೋಗಿ ರಹಸ್ಯವಾದೊಂದೆಡೆಗೆ ಕರೆದೊಯ್ದು ಹೀಗೆ ಕೇಳಿದನು. "ಸ್ವಾಮಿಾ! ತಮ್ಮ ವಾಸಸ್ಥಾನವಾವುದು?"

ಫಕೀರ:—ಅಯ್ಯಾ! ಫಕೀರರಿಗೆ ಒಂದೇ ಕಡೆ ವಾಸವುಂಟೇ? ಭಕ್ತರ ಕೋರಿಕೆಗಳನ್ನು ನೆರವೇರಿಸುವುದೇ ನಮ್ಮ ಕೆಲಸ ನಿನ್ನ ಮುಖವನ್ನು ನೋಡಿದ ಕೂಡಲೆ ನೀನೊಬ್ಬ ರಾಜಪುತ್ರನೆಂದು ತಿಳಿದುಕೊಂಡೆನು. ಇಷ್ಟೇ ಅಲ್ಲ, ಇಂದಿರೆಯನ್ನು ಈ ನರಕವಾಸದಿಂದ ಬಿಡಿಸಿ ಕಾಪಾಡಬೇಕೆಂದು ನೀನು ಅಂತಃಪುರವನ್ನು ಪ್ರತಿನಿತ್ಯವೂ ಪ್ರವೇಶಿಸುತ್ತಿರುವುದನ್ನು ಕೂಡ ತಿಳಿದಿರುವೆನು. ಒಳ್ಳೆಯದು, ಇಂದಿರೆ ಎಲ್ಲಿರುವಳೆಂಬುದನ್ನೇನಾದರೂ ಬಲ್ಲೆಯೋ?

ನಯನ:—ನಿಮ್ಮ ಮಾತಿನಿಂದ ಆಕೆ ತಪ್ಪಿಸಿಕೊಂಡು ಓಡಿ ಹೋಗಿರುವಳೆಂದು ತಿಳಿಯುತ್ತದೆ. ಹಾಗಾಗಿದ್ದರೆ ನಾನು ಧನ್ಯನಾದೆನು.

ಫಕೀರ:—ಓಡಿಹೋಗಲಿಲ್ಲ. ರೋಷನಾರೆಯ ಸಮಿಾಪದಲ್ಲಿರುವಳು.

ನಯನ:—ಉದಯಪುರಿಯ ಸೇವೆಯನ್ನು ಬಿಟ್ಟು, ಕ್ರೂರಳಾದ ರೋಷನಾರೆಯಲ್ಲಿರಲು ಕಾರಣವೇನು ? ಎಲ್ಲಿರುವಳು ?

ಫಕೀರ;—ಅವಳ ಆಗ್ರಹಕ್ಕೆ ಕಾರಣಳಾದುದರಿಂದ ಕಾರಾಗೃಹ ದಲ್ಲಿಡಲ್ಪಟ್ಟಿರುವಳು.

ನಯನ:—ಹಾ ! ಕಷ್ಟ, ಕಷ್ಟ ! ಆಪತ್ತಿನಲ್ಲಿ ಸಿಕ್ಕಿರುವ ಇಂದಿರೆಗೆ ದಿಕ್ಕಾರು ?

ಫಕೀರ:—ಮತ್ತಾರು ಬೇಕು ! ಯಮುನಾ ನದಿಯೇ !

ನಯನ:—ಹಾಗೆಂದರೇನು ?

ಫಕೀರ:—ಅಯ್ಯೋ ! ವಿಚಾರವನ್ನೆಲ್ಲ ಅನಂತರ ತಿಳಿಸುವೆನು. ಮುಖ್ಯ ವಾದ ವಿಷಯವನ್ನು ಕೇಳು. ಈ ದಿನ ರಾತ್ರಿ ರೋಷನಾರೆಯು ಇಂದಿರೆ ಯನ್ನು ಯಮುನಾ ನದಿಯಲ್ಲಿ ಎತ್ತಿ ಹಾಕುವಳು. ಈ ರಹಸ್ಯವನ್ನು ನಾನು ಇದೇ ತಿಳಿದುಬಂದೆನು. ಈ ಪಟ್ಟಣದಲ್ಲಿ ನನಗೆ ಪರಿಚಿತರಾರೂ ಇಲ್ಲ ನಾವು ಹೀಗೆ ಕಾಲಯಾಪನೆ ಮಾಡಿದರೆ ಪ್ರಯೋಜನವಿಲ್ಲ. ಆದುದ ರಿಂದ ನೀನು ಈ ದಿನ ಹೇಗಾದರೂ ಮಾಡಿ ಒಂದುದೋಣಿಯನ್ನು ಸಂಪಾ ದಿಸಬೇಕು. ನಾವಿಬ್ಬರೂ ದೋಣಿಯನ್ನು ಹತ್ತಿ ಈ ರಾತ್ರಿ ಯಮುನಾ ನದಿಯಲ್ಲಿ ರಹಸ್ಯವಾಗಿದ್ದು ಆಕೆಯ ಪ್ರಾಣವನ್ನು ರಕ್ಷಿಸಬೇಕು.

ನಯನ:—ದೋಣಿಯನ್ನು ಈಗಲೇ ಸಂಪಾದಿಸುವೆನು. ಅದಕ್ಕೇ ನೂ ಚಿಂತಿಸಬೇಕಾಗಿಲ್ಲ.

ಫಕೀರ:—ಹಾಗಾದರೆ ಜಾಗ್ರತೆಯಾಗಿ ಹೋಗುವ ಬಾ.

ಎಂದು ಹೇಳಿ ಇಬ್ಬರೂ ಅಲ್ಲಿಂದ ಹೊರಟುಹೋದರು. ಇಷ್ಟರಲ್ಲಿ ಕ್ರಮಕ್ರಮವಾಗಿ ಸೂರ್ಯನು ಪಶ್ಚಿಮಾದ್ರಿಯನ್ನು ಅಲಂಕರಿಸಿದನು. ಪಕ್ಷಿಸಂಕುಲಗಳು ಕಲಕಲರವವನ್ನು ಮಾಡುತ್ತ ಗಗನಮಾರ್ಗದಲ್ಲಿ ಹಾರಾ ಡುತ್ತಿದ್ದುವು. ನೋಡುತ್ತಲಿದ್ದಂತೆಯೇ ಎಂತಹ ಕಲ್ಲೆದೆಯನ್ನಾದರೂ ದಲಿಸುವಂತಹ ಗಾಢಾಂಧಕಾರವು ಆಕ್ರಮಿಸಿ ಒಬ್ಬರ ಮುಖವಿನ್ನೊಬ್ಬ

ರಿಗೆ ಕಾಣದಂತಾಯಿತು. ಈ ಮಹಾಂಧಕಾರದಲ್ಲಿ ನೀಲವರ್ಣವಾದ ಜಲ ದಿಂದ ಪೂರ್ಣವಾಹಿನಿಯಾಗಿದ್ದ ಯಮುನಾನದಿಯು ನೋಡಲು ಅತ್ಯಂತ ಭಯಂಕರವಾಗಿದ್ದಿತು. ನದಿಯ ತರಂಗಗಳು ಮಹಾರಭಸದಿಂದ ಅಲ್ಲ ಕಲ್ಲೋಲವಾಗಿ ಉಬ್ಬಿ ಹೊರಳಾಡುತ್ತಿದ್ದುವು. ಎತ್ತ ನೋಡಿದರೂ ಎಲೆ ಗಳ ಶಬ್ದವೇ ಹೊರತು ನೀಲವರ್ಣದ ಜಲಪ್ರದೇಶವಾಗಲಿ ನದಿಯ ದಡ ಪ್ರದೇಶವಾಗಲಿ ಯಾವುದೂ ಕಾಣುತ್ತಿರಲಿಲ್ಲ. ಆದರೆ, ನದಿಯ ಒಂದು ಪಕ್ಕದಲ್ಲಿ ರೋಷನಾರೆಯ ಜನಾನವಿದ್ದಿತು. ಆಕೆಯಿದ್ದ ಸೌಧವು ಬಹು ಎತ್ತರವಾಗಿದ್ದುದರಿಂದ ಕೆಲವು ದೀಪಗಳು ಮಾತ್ರ ಕಾಣುತ್ತಿದ್ದುವು. ಈ ಸೌಧದ ಕೋಟೆಯ ಬುರುಜಿನ ಸಮೀಪದಲ್ಲಿಯೇ ನದಿಯು ಅತಿವೇಗ ದಿಂದ ಹರಿಯುತ್ತಿದ್ದಿತು.

ಆ ದಿನ ರಾತ್ರಿ ರೋಷನಾರೆಯು ತನ್ನ ಮುಖ್ಯ ಸೇವಕನಾದ ಫರುಕಷ್ಯೆರನನ್ನು ಹೊರತು ಮಿಕ್ಕವರೆಲ್ಲರನ್ನೂ ಆವಾವುದೋ ಕೆಲಸದ ನೆವ ಮಾಡಿ ಹೊರಗೆ ಕಳುಹಿದ್ದಳು. ರಾತ್ರಿ ಒಂದೂವರೆ ಜಾವವಾಯಿತು; ಪಟ್ಟಣದವರೆಲ್ಲರೂ ನಿದ್ರಿಸುತ್ತಿದ್ದುದರಿಂದ ಡಿಲ್ಲೀನಗರವೇ ನಿಶ್ಶಬ್ದವಾಗಿ ನಿದ್ರಿಸುವಂತಿದ್ದಿತು. ಎತ್ತ ನೋಡಿದರೂ ಮನುಷ್ಯಸಂಚಾರವಿರಲಿಲ್ಲ. ಆ ಸಮಯದಲ್ಲ ಪುರುಷರಿಬ್ಬರು ಒಂದು ದೋಣಿಯಲ್ಲಿ ಕುಳಿತು ಯಮುನಾ ನದಿಯಲ್ಲಿ ಒಂದು ಕಡೆಯಿಂದ ಬರುತ್ತಿದ್ದರು. ಅಲೆಗಳ ಹೊಡೆತದಿಂದ ಬಾರಿಬಾರಿಗೂ ಆ ದೋಣಿ ಅತ್ತಿತ್ತ ಹೊರಳುತ್ತಿದ್ದುದರಿಂದ ಆ ಪುರುಷರಿ ಬ್ಬರೂ ತಮ್ಮ ಪ್ರಾಣಗಳನ್ನು ಕೈಯಲ್ಲಿ ಹಿಡಿದುಕೊಂಡು ಅತಿಪ್ರಯಾ ಸದಿಂದ ಬರುತ್ತಿದ್ದರು. ಪ್ರವಾಹವೇಗದಿಂದ ಆ ದೋಣಿಯು ಯಾವ ಮೂಲೆಗೆ ಹೊರಟುಹೋಗುವುದೋ ಎಂದು, ಪಾಪ, ಆ ಪುರುಷರಿಬ್ಬರೂ ಭಯಾಕುಲಚಿತ್ತರಾಗಿ ಕಷ್ಟವನ್ನು ಗಣಿಸದೆ ಬಹುಪ್ರಯಾಸದಿಂದ ದೋಣಿ ಯನ್ನು ಎಳೆದುಕೊಂಡು ಬರುತ್ತಿದ್ದುದನ್ನು ನೋಡಿದರೆ ಇದೇ ಅವರಿಗೆ ಪ್ರಥಮಪ್ರಯತ್ನವೆಂದು ಹೇಳಬೇಕಾಗಿರುವುದು. ಸ್ವಲ್ಪ ಹೊತ್ತಿಗೆ ಆ

ದೋಣಿಯು ರೋಷನಾರೆಯ ಸೌಧದ ದಕ್ಷಿಣ ಬುರುಜಿನ ಗೋಡೆಗೆ ಸಮೀಪವಾಗಿ ನಿಂತಿತು. ಆಗ ಅವರು ತಮ್ಮ ದೋಣಿಯನ್ನು ನಿಲ್ಲಿಸಿದರೂ ಪ್ರವಾಹ ವೇಗವು ಒಂದು ಕಡೆಗೆ ಎಳೆಯುತ್ತಲೇ ಇದ್ದಿತು. ಇಷ್ಟರಲ್ಲಿ ಆ ಬುರುಜಿನ ಮೇಲೆ ಆವುದೋ ಶಬ್ದವಾಗಿ ಯಾರೋ ಮಾತಾಡುತ್ತಿರುವಂತೆ ದೋಣಿಯಲ್ಲಿದ್ದವರಿಗೆ ತಿಳಿಯಿತು. ಆದರೆ, ಕತ್ತಲೆಯು ಅತ್ಯಂತ ದಟ್ಟವಾಗಿದ್ದುದರಿಂದ ಕೆಳಗಿದ್ದವರು ಮೇಲಿದ್ದವರಿಗಾಗಲಿ, ಮೇಲಿದ್ದವರು ಕೆಳಗಿದ್ದವರಿಗಾಗಲಿ ಕಾಣಿಸಲು ಅವಕಾಶವಿಲ್ಲದೆ ಹೋಯಿತು. ಆದರೂ ದೋಣಿಯಲ್ಲಿದ್ದ ಪುರುಷರಿಬ್ಬರೂ ಮೇಲೆಯೇ ದೃಷ್ಟಿಯನ್ನು ಇಟ್ಟಿದ್ದರು. ಆಗ ಆ ಬುರುಜಿನ ಮೇಲಿನಿಂದ ಆವುದೋ ವಸ್ತುವೊಂದು ಮೆಲ್ಲಗೆ ಕೆಳಗೆ ಬರುತ್ತಿದ್ದಂತೆ ಕಾಣಬಂದಿತು. ತತ್‌ಕ್ಷಣವೇ ಅವರಿಬ್ಬರೂ ಮೆಲ್ಲನೆ ಮಾತನಾಡಿಕೊಳ್ಳುತ್ತ ತಮ್ಮ ದೋಣಿಯನ್ನು ಬುರುಜಿನ ಗೋಡೆಗೆ ಸಮೀಪವಾಗಿ ನಿಲ್ಲಿಸಿದರು. ಕ್ರಮಕ್ರಮವಾಗಿ ಆ ವಸ್ತು ಕೆಳಗೆ ಬಂದು ನೀರಿಗೆ ತಗಲಿದ ಕೂಡಲೆ ಅದಕ್ಕೆ ಕಟ್ಟಿದ್ದ ಹಗ್ಗವೂ ಸಹ ತೊಪ್ಪನೆ ನೀರಿನ ಮೇಲೆ ಬಿದ್ದಿತು. ಆಗ ನದಿಯಲ್ಲಿದ್ದ ಪುರುಷರಿಬ್ಬರೂ ತತ್‌ಕ್ಷಣವೇ ಆ ವಸ್ತುವನ್ನು ಹಿಡಿದುಕೊಂಡು ತಮ್ಮ ದೋಣಿಯಲ್ಲಿರಿಸಿ ಕೈಗಳಿಂದ ಮುಟ್ಟಿನೋಡಿ ಕುತೂಹಲದಿಂದ—“ಏನಿದು, ಧರಿಸಿರುವ ವಸ್ತ್ರಾದಿಗಳನ್ನು ನೋಡಿದರೆ ಪುರುಷನಂತಿರುವುದು.” ಎಂದು ಮಾತನಾಡುತ್ತ ಆ ಮನುಷ್ಯನ ನೆನೆದುಹೋಗಿದ್ದ ಬಟ್ಟೆಗಳನ್ನು ತೆಗೆದು ಬೇರೆ ಬಟ್ಟೆಗಳನ್ನುಡಿಸಿ ದೋಣಿಯ ಒಂದು ಮೂಲೆಯಲ್ಲಿ ಮಲಗಿಸಿ ಜೀವದಿಂದಿರುವನೋ ಇಲ್ಲವೋ ಎಂಬ ಶಂಕೆಯಿಂದ ಆತನ ಎದೆಯ ಮೇಲೆ ಕೈಯನ್ನಿಟ್ಟು ನೋಡಲು ಎದೆಯು ದಡದಡನೆ ಹೊಡೆದುಕೊಳ್ಳುತ್ತಿದ್ದುದರಿಂದ ಮೂರ್ಛಿತನಾಗಿರುವನೆಂದು ತಿಳಿದು ಸ್ವಲ್ಪ ಸಮಾಧಾನಪಟ್ಟರು. ಇಷ್ಟರಲ್ಲಿ ಮೊದಲಿನಂತೆಯೇ ಬುರುಜಿನ ಮೇಲಿನಿಂದ ಪುನಃ ಮತ್ತೆ ಯಾವುದೋ ಒಂದು ವಿಗ್ರಹವು ಕೆಳಗಿಳಿಸಲ್ಪಡುತ್ತಿದ್ದುದನ್ನು ಕಂಡು ಇಬ್ಬರೂ

ಸಂತೋಷದಿಂದ—"ನಮಗೆ ಬೇಕಾದ ವಸ್ತುವೇ ಇದಾಗಿರಬಹುದು" ಎಂದು ಹೇಳುತ್ತ ನೀರಿನ ಹತ್ತಿರಕ್ಕೆ ಬರುತ್ತಿದ್ದ ಆ ವಿಗ್ರಹವನ್ನು ತಮ್ಮ ಕೈಗಳಿಂದ ಹಿಡಿದುಕೊಂಡು ಆನಂದದಿಂದುಬ್ಬಿ ದೋಣಿಯ ಮತ್ತೊಂದು ಮೂಲೆಯಲ್ಲಿ ಮಲಗಿಸಿ ಮತ್ಯಾರಾದರೂ ಬರುವರೇನೋ ಎಂದು ಸ್ವಲ್ಪ ಹೊತ್ತು ನಿರೀಕ್ಷಿಸಿ, ಬ್ಯಾಂಜಿನ ಮೇಲೆ ಮನುಷ್ಯರ ಕಂಠಸ್ವರವು ಪೂರ್ಣವಾಗಿ ನಿಂತುಹೋದ ಕೂಡಲೆ ತಮ್ಮ ದೋಣಿಯನ್ನು ಅಲ್ಲಿಂದ ನಡೆಯಿಸುತ್ತ ಹೊರಟರು.

ದೋಣಿಯಲ್ಲಿ ಮಲಗಿದ್ದ ಇಂದಿರೆಯನ್ನೂ ಪುರುಷನನ್ನೂ ಒಬ್ಬನು ಉಪಚರಿಸುತ್ತಲಿದ್ದನು. ಮತ್ತೊಬ್ಬನು ದೋಣಿಯನ್ನು ನಡೆಯಿಸುತ್ತಿದ್ದನು. ಹೀಗೆ ಆ ರಾತ್ರಿ ನದಿಯಲ್ಲಿ ಸ್ವಲ್ಪ ದೂರ ಪ್ರಯಾಣಮಾಡಿದ ಬಳಿಕ ತಮ್ಮ ಬಳಿಯಲ್ಲಿದ್ದ ಚಮುಕಿ ಕಲ್ಲನ್ನು ತೆಗೆದು ಅಗ್ನಿಯನ್ನುಂಟುಮಾಡಿ ಮೂರ್ಛೆ ಬಿದ್ದಿದ್ದ ಎರಡು ವಿಗ್ರಹಗಳನ್ನೂ ನೋಡಿ ಇಂದಿರಾ ದುರ್ಗಾದಾಸರೆಂದು ತಿಳಿದು ತಾವು ಕೋರಿದುದಕ್ಕೂ ಅಧಿಕಲಾಭವಾಯಿತೆಂದು ಸಂತೋಷಿಸಿ ಮುಂದೆ ಹೊರಟರು. ಅನಂತರ ಉಪಚಾರಮಾಡುತ್ತಿದ್ದ ಪುರುಷನು ದೋಣಿಯನ್ನು ನಡೆಯಿಸುತ್ತಿದ್ದವನನ್ನು ಕುರಿತು:—"ಅಯ್ಯಾ! ನಾನು ಮಾಡುವ ಕಾರ್ಯಗಳು ಇನ್ನೂ ಅನೇಕವಾಗಿರುವುವು. ಇನ್ನು ನಾನು ನಿನ್ನೊಡನೆ ಬರಲಾರೆನು. ನಾವು ದಿಲ್ಲೀ ನಗರವನ್ನು ದಾಟಿ ಬಹು ದೂರ ಬಂದಿರುವೆವು. ನೀನಿರುವ ಗ್ರಾಮವು ಇಲ್ಲಿಗೆ ಸಮೀಪವಾಗಿಯೇ ಇರುವುದು. ಇನ್ನು ನೀನು ಇವರಿಬ್ಬರನ್ನೂ ಕರೆದುಕೊಂಡು ಹೋಗಿ ಕಾಪಾಡುತ್ತಿರು" ಎನ್ನಲಾತನು, ಅತ್ಯಂತ ಕೃತಜ್ಞತೆಯಿಂದ ಆತನನ್ನು ವಂದಿಸಿ ಹೊರಡಲನುಮತಿಸಲು, ಆತನು ದೋಣಿಯಿಂದಿಳಿದು ಪಕ್ಕದಲ್ಲಿದ್ದ ಗುಡ್ಡವನ್ನು ಹತ್ತಿ ಎಲ್ಲಿಗೋ ಹೊರಟು ಹೋದನು. ದೋಣಿಯನ್ನು ನಡೆಯಿಸುತ್ತಿದ್ದವನು ಬಹು ಜಾಗರೂಕತೆಯಿಂದ ನಡೆಯಿಸುತ್ತಿದ್ದನು. ಸ್ವಲ್ಪ ಹೊತ್ತಿನೊಳಗಾಗಿ ಇಂದಿರಾ ದುರ್ಗಾದಾಸರು ಮೂರ್ಛೆ

ಯಿಂದಿತ್ತಿತ್ತ ನಾಲ್ಕು ಕಡೆಯನ್ನೂ ನೋಡುತ್ತ, ತಾವು ನೀರಿನ ಮೇಲೆ ಹೋಗುತ್ತಿರುವುದನ್ನು ತಿಳಿದು ದಿಗ್ಭ್ರಮೆ ಹೊಂದಿ ಸುಮ್ಮನೆ ನೋಡುತ್ತಿರಲು, ಅವರ ಆಂದೋಳನವನ್ನು ನೋಡಿ ದೋಣಿಯನ್ನು ನಡೆಯಿಸುತಿದ್ದಾತನು—"ನೀವು ವಿಚಾರಪಡಬೇಕಾಗಿಲ್ಲ. ನಿಮ್ಮ ಪ್ರಾಣಗಳನ್ನು ಈ ದಿನ ನಾನು ಕಾಪಾಡಿದೆನು. ಇಲ್ಲದಿದ್ದಲ್ಲಿ ಆ ಕ್ರೂರಾತ್ಮಳಾದ ರೋಷನಾರೆಯು ನಿಮ್ಮನ್ನು ಕೊಲ್ಲಿಸುತ್ತಿದ್ದಳು." ಎಂದು ಧೈರ್ಯವನ್ನು ಹೇಳಿದನು. ಅದನ್ನು ಕೇಳಿದ ಕೂಡಲೆ ದುರ್ಗಾದಾಸನು ಧಿಗ್ಗನೆದ್ದು ಮುಂದೆ ಬಂದು ಆತನ ಬಳಿಯಲ್ಲಿ ಕುಳಿತು ಕೃತಜ್ಞತೆಯಿಂದ—

"ಅಯ್ಯಾ! ನಮ್ಮನ್ನು ಕಾಪಾಡಿದ ನೀನಾರು? ನೀನು ಮಾಡಿರುವ ಉಪಕಾರಕ್ಕೆ ನಾವು ಹೇಗೆ ಪ್ರತ್ಯುಪಕಾರ ಮಾಡಬೇಕು?

ನಯನ:—ಅಯ್ಯಾ! ನಾನು ಯಾರಾದರೇನು? ನಿಮಗೆ ಅಪಕಾರ ಮಾಡಿದವನೇ ಹೊರತು ಉಪಕಾರಿಯಲ್ಲ. ನಾನು ನಿಮಗೆ ಮಾಡಿರುವ ಅಪಕಾರಕ್ಕಾಗಿ ನಿಮ್ಮ ಸೇವೆಯನ್ನೆಷ್ಟುದಿನ ಮಾಡಿದರೂ ನಿಮ್ಮ ಅನುಗ್ರಹಕ್ಕೆ ಪಾತ್ರನಾಗುವಂತಿಲ್ಲ. ಪಾಪಭೂಯಿಷ್ಠವಾದೀ ದೇಹವನ್ನಿರಿಸಿಕೊಂಡಿರಬೇಕೆಂಬ ಅಭಿಲಾಷೆ ನನಗೆ ಸ್ವಲ್ಪವೂ ಇಲ್ಲ. ಇನ್ನು ನೀವಿಬ್ಬರೂ ಎಲ್ಲಿಗಾದರೂ ಹೋಗಿ ಜೀವದಿಂದಿದ್ದು ಸುಖವಾಗಿರುವಿರಾದರೆ ನಾನು ಧನ್ಯನಾದೆನೆಂದೇ ತಿಳಿದು ನನ್ನೀ ಜನ್ಮವನ್ನು ಕೊನೆಗಾಣಿಸಿಕೊಳ್ಳುವೆನು.

ದುರ್ಗಾ:—ಅಯ್ಯಾ! ನಿನ್ನೀ ಸಾಹಸಕ್ಕೆ ಕಾರಣವೇನು? ನೀನಾರು ನಿನ್ನ ಕಂಠಧ್ವನಿಯನ್ನು ಕೇಳಿದರೆ ಎಲ್ಲಿಯೋ ಕೇಳಿರುವಂತೆ ತೋರುವುದು. ಆ ನಯನಪಾಲನೊಬ್ಬನು ಹೊರತು ನಮ್ಮನ್ನು ಮೋಸಪಡಿಸಿದವನು ಮತ್ತಾವನೂ ಇಲ್ಲ.

ನಯನ:—ಅಯ್ಯಾ! ನಿಮ್ಮಲ್ಲಿ ದ್ರೋಹಿಯಾಗಿರುವ ನಯನಪಾಲನೆಂಬ ನೀಚನೇ ನಾನು—ಎಂದರೆ, ನೀನು ಪ್ರಕಾರಾಂತರವಾಗಿ ಭಾವಿಸಬೇಕಾಗಿಲ್ಲ. ಈಗ ನಾನು ಮೊದಲಿನ ನಯನಪಾಲನಾಗಿಲ್ಲ. ನನ್ನ

ವೃತ್ತಾಂತವನ್ನು ಸಮಗ್ರವಾಗಿ ಹೇಳುವೆನು, ಕೇಳು. ಎಂದು ಚಂದ್ರಾವತಿಯನ್ನು ಕರೆತರಲು ಬಂದುದು ಮೊದಲು, ಫಕೀರನ ಸಹಾಯವನ್ನು ಪಡೆದು ಇಂದಿರಾ—ದುರ್ಗಾದಾಸರ ಪ್ರಾಣಗಳನ್ನು ಕಾಪಾಡಿ ಕರೆತಂದ ವರೆವಿಗೂ ವಿವರಿಸಿದನು. ಅದನ್ನು ಕೇಳಿ ದುರ್ಗಾದಾಸನು ವಿಸ್ಮಯ ಕುತೂಹಲಗಳಿಂದ—"ನಯನಪಾಲ! ಆಪದ್ಬಂಧುವಾದ ಆ ಫಕೀರನು ಈಗಳೆಲ್ಲಿರುವನು ?" ಎಂದನು.

ನಯನ:—ನಿಮ್ಮಿಬ್ಬರನ್ನೂ ನನಗೊಪ್ಪಿಸಿ ಆತನು ಈಗಲೇ ದೋಣಿಯಿಂದಿಳಿದು ಹೊರಟುಹೋದನು.

ದುರ್ಗಾ:—"ಅಯ್ಯೋ! ನಮಗಿಷ್ಟು ಉಪಕಾರಮಾಡಿದ ಆ ಪುಣ್ಯಾತ್ಮನನ್ನು ನೋಡುವ ಭಾಗ್ಯವೂ ನಮಗಿಲ್ಲವಾಯಿತೇ ?" ಎಂದು ತುಂಬ ವ್ಯಥೆ ಪಟ್ಟನು.

ಇಂದಿರೆಯನ್ನು ನದಿಯಲ್ಲಿ ಹಾಕಿಸಿ ಕೊಲ್ಲಿಸಿದ ವರ್ತಮಾನವು ದುರ್ಗಾದಾಸನಿಗೆ ತಿಳಿದರೆ ಆತನಿಂದ ಪ್ರತೀಕಾರವಾಗದಿರಲಾರದೆಂದು ಶಂಕಿಸಿ, ಧೂರ್ತೆಯಾದ ರೋಷನಾರೆಯು ಫರುಕ್‌ಷೈರನ ಮೂಲಕ ಕಾರಾಗೃಹದಲ್ಲಿ ನಿದ್ರಿತನಾಗಿದ್ದ ದುರ್ಗಾದಾಸನನ್ನೂ ಹಿಡಿತರಿಸಿ, ಆತನ ಕಣ್ಣುಗಳನ್ನು ಕಟ್ಟಿಸಿ, ಇಬ್ಬರೂ ಸಾಯಲೆಂದಿಬ್ಬರನ್ನೂ ಒಟ್ಟಿಗೆ ನದಿಯಲ್ಲಿ ಬಿಟ್ಟಳು. ಇಬ್ಬರೂ ಏಕಕಾಲದಲ್ಲಿ ನದಿಗೆ ಕೆಡಹಲ್ಪಟ್ಟುದು ಕೂಡ ಶುಭಪ್ರದವೇ ಆಯಿತು. ಇರಲಿ, ನಯನಪಾಲನು ಪೂರ್ವದ ದುಸ್ವಭಾವವನ್ನು ಬಿಟ್ಟು ಪಶ್ಚಾತ್ತಾಪಪಡುತ್ತಿರುವುದನ್ನೂ ತಮ್ಮ ವಿಷಯದಲ್ಲಿ ಆತನು ತೋರಿಸುತ್ತಿದ್ದ ಗೌರವನನ್ನೂ ನೋಡಿ ದುರ್ಗಾದಾಸನು ಪರಮಾನಂದದಿಂದ ಆತನನ್ನು ಬಹುವಿಧವಾಗಿ ಅಭಿನಂದಿಸಿದನು. ಆ ಬಳಿಕ ನಯನಪಾಲನು ಶ್ರಾಂತರಾಗಿದ್ದಾ ಅಣ್ಣತಂಗಿಯರಿಬ್ಬರನ್ನೂ ಆ ರಾತ್ರಿ ತನ್ನ ಗ್ರಾಮಕ್ಕೆ ಕರೆದೊಯ್ದು ಆದರದಿಂದ ಉಪಚರಿಸಿ ಮರುದಿನವೇ ಆಬೂಪರ್ವತವನ್ನು ಕುರಿತು ಪ್ರಯಾಣಮಾಡಿದರು

# ಮುವ್ವತ್ತಮೂರನೆಯ ಪ್ರಕರಣ

## (ಜೋಹರ್.)

ರೂಪನಗರವನ್ನು ಮುತ್ತಿದ್ದ ಸಾದತ್‌ಖಾನನು ವಿಜಯಸಿಂಹನ ಸಹಾಯಕ್ಕಾಗಿ ರಾಜಪುತ್ರರಾರಾದರೂ ಬರುವರೇನೆಂದು ಕ್ಷಣಕ್ಷಣದಲ್ಲಿಯೂ ಭಯಪಡುತ್ತಿದ್ದನು. ಈ ಕಾರಣದಿಂದ ಆತನು ತನ್ನ ಭಟರನ್ನು ನಾಲ್ಕು ದಿಕ್ಕುಗಳಿಗೂ ಕಳುಹಿಸಿ, ಹೊಸ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದನೆಂಬುದು ಈವರೆಗೆ ನಮಗೆ ತಿಳಿದೇ ಇರುವುದು. ಬಾದಶಹನು ಸೇನಾಸಮೇತನಾಗಿ ಎಂದಿಗೆ ಬರುವನೆಂದು ಇದಿರು ನೋಡುತ್ತ ಒಂದು ಕ್ಷಣವನ್ನು ಯುಗದಂತೆ ಕಳೆಯುತ್ತಿದ್ದನು. ಒಂದುದಿನ ಆತನು, "ಔರಂಗಜೇಬನು ಸೇನಾಸಮೇತನಾಗಿ ಬರುತ್ತಿರುವನು. ಇನ್ನುಮೇಲೆ ನಿನ್ನ ಪ್ರಾಣಗಳು ನಿಲ್ಲಲಾರವು. ಈಗಲೇ ವಿಮಲಾದೇವಿಯನ್ನೊಪ್ಪಿಸಿ ಸಂಧಿ ಮಾಡಿಕೊಳ್ಳಬೇಕು." ಎಂದು ವಿಜಯಸಿಂಹನಿಗೆ ವರ್ತಮಾನವನ್ನು ಹೇಳಿ ಕಳುಹಿದನು. ಆಗ ಆ ರಾಜಶ್ರೇಷ್ಠನು ಆ ವಾರ್ತೆಯನ್ನು ತನ್ನ ಸೈನಿಕರಿಗೆ ತಿಳಿಸಿ, "ವಿಶ್ವಸನೀಯರೇ! ನೀವು ನಿಜವಾದ ರಜಪೂತವೀರಪುರುಷರಾಗಿದ್ದಲ್ಲಿ ಪೌರುಷವನ್ನು ವಹಿಸಿ ಪ್ರಾಣಗಳಮೇಲೆ ಆಶೆಯನ್ನು ತೊರೆದು ಮುಹಮ್ಮದೀಯರೊಡನೆ ಹೋರಾಡಿರಿ." ಎಂದನು. ಸೈನಿಕರು ಆತನ ಆಜ್ಞೆಯನ್ನು ಶಿರಸಾವಹಿಸಿ ನೂತನೋತ್ಸಾಹದಿಂದ ಉಬ್ಬಿದವರಾಗಿ ಕೋಟೆಯ ಬುರುಜುಗಳನ್ನು ಹತ್ತಿ ಕತ್ತಿ, ಪಿರಂಗಿ, ತುಪಾಕಿ ಮೊದಲಾದವುಗಳಿಂದ ಸಾದತ್‌ಖಾನನು ಕಳುಹಿದ ಸೈನ್ಯಕ್ಕೆ ಪ್ರತ್ಯುತ್ತರವನ್ನು ಕೊಡಲಾರಂಭಿಸಿದರು. ಅಂದು ಮೊಗಲರು ರಾಜಪುತ್ರರ ಕೋಲಾಹಲವನ್ನು ತಾಳದೆ ಹೋದರು. ಮೊದಲೇ ಸಾದತ್‌ಖಾನನ ಸೈನ್ಯವು ಸ್ವಲ್ಪ; ಅದರಲ್ಲಿಯೂ ನಿದ್ರಾಹಾರಗಳಿಲ್ಲದೆ, ಆರು ತಿಂಗಳಿಂದಲೂ ಕೋಟೆಯನ್ನು

ಮುತ್ತಿ ಬಲಹೀನರಾಗಿದ್ದರು. ಆದುದರಿಂದ ಅಂದು ಮುಹಮ್ಮದೀಯರು ಸಂಪೂರ್ಣವಾಗಿ ಅಪಜಯವನ್ನು ಹೊಂದಿದರು. ಸಾದತ್‌ಖಾನನು ಅತಿ ಚತುರನಾಗಿದ್ದುದರಿಂದ ತಕ್ಷಣವೇ ಯುದ್ಧವನ್ನು ನಿಲ್ಲಿಸಬೇಕೆಂದು ತನ್ನ ಸೇನಾಪತಿಗೆ ಅಪ್ಪಣೆಯನ್ನಿತ್ತನು.

ತನ್ನ ಸೇನೆಯು ಪೂರ್ಣವಾಗಿ ಸೋತುಹೋದುದರಿಂದಲೂ ಬಾದಶಹನು ಸೇನಾಸಮೇತನಾಗಿ ಬಾರದೆ ಹೋದುದರಿಂದಲೂ ರಾಜಪುತ್ರರು ಯಾವಕ್ಷಣದಲ್ಲಿ ಬಂದು ತನ್ನ ಮೇಲೆ ಬೀಳುವರೋ ಎಂಬ ಭೀತಿಯಿಂದಲೂ ಆತನ ಹೃದಯವು ಅಲ್ಲಕಲ್ಲೋಲವಾಗಿದ್ದಿತು. ಆದರೂ ಬುದ್ಧಿಶಾಲಿಯಾದ ಸಾದತ್‌ಖಾನನು ಉಪಾಯದಿಂದಲೇ ಗೆಲ್ಲಬೇಕೆಂದು ಯೋಚಿಸಿ ಬಾದಶಹನು ಸೇನಾಸಮೇತನಾಗಿ ಬರುತ್ತಿರುವನೆಂದೂ ವಿಜಯಸಿಂಹನೂ ಆತನ ಸೈನ್ಯವೂ ಹೆದರಿರುವರೆಂದೂ ವದಂತಿಯನ್ನು ಹುಟ್ಟಿಸಿದನು. ಇದನ್ನು ತಿಳಿದು ವಿಜಯಸಿಂಹನು ತನ್ನ ಸೈನ್ಯಕ್ಕೆ ಮತ್ತಷ್ಟು ಧೈರ್ಯವನ್ನು ಕೊಡುತ್ತ ಅತ್ಯಂತ ಜಾಗರೂಕನಾಗಿದ್ದನು. ಇಷ್ಟರಲ್ಲಿ ಸೂರ್ಯನು ಅಸ್ತಮಿಸಿದುದರಿಂದ ಜಗತ್ತೇ ಅಂಧಕಾರಮಯವಾಯಿತು.

ಆ ರಾತ್ರಿ ಸಾದತ್‌ಖಾನನು ಸೈನ್ಯವನ್ನು ಕೆಲವು ಭಾಗಗಳಾಗಿ ಮಾಡಿ ಮೂರು ನಾಲ್ಕು ಮೈಲಿಗಳ ವಿಸ್ತಾರವುಳ್ಳ ಪ್ರದೇಶದಲ್ಲಿ ಅಲ್ಲಲ್ಲಿ ಗುಂಪು ಗುಂಪಾಗಿರಿಸಿ, ತಾನು ಮಾತ್ರ ಕೆಲವು ಸೈನ್ಯದೊಡನೆ ಪಟ್ಟಣದ ಸಮೀಪದಲ್ಲಿಯೇ ಕಾದಿದ್ದನು. ಸಹಾಯಾರ್ಥವಾಗಿ ರಾಜಪುತ್ರರು ಯಾವ ದಿಕ್ಕಿನಿಂದ ಬಂದರೂ ಅವರ ಸಹಾಯವು ಸಕಾಲದಲ್ಲಿ ವಿಜಯಸಿಂಹನಿಗೊದಗದಂತೆ ತಡೆಯಬಹುದೆಂದೂ ಸೈನ್ಯವೆಲ್ಲವೂ ಒಂದೇ ಕಡೆಯಲ್ಲಿದ್ದರೆ ತನ್ನ ರಹಸ್ಯವು ಹೊರಬೀಳಬಹುದೆಂದೂ ಈ ಉಪಾಯವನ್ನು ತೆಗೆದನು. ಮತ್ತು ಅಡಿಗಡಿಗೆ ರಣದುಂದುಭಿಗಳನ್ನೂ ಜಯಭೇರಿಗಳನ್ನೂ ಹೊಡೆಯಿಸುತ್ತ ಅತ್ಯಂತ ಅಟ್ಟಹಾಸಗೈಯುತ್ತಿದ್ದನು. ಆತನ ಉದ್ದೇಶಕ್ಕೆ ಅನುಸಾರವಾಗಿ ರೂಪನಗರದ ಸೈನಿಕರು ಬಾದಶಹನು ಬಲವಾದ ಸೈನ್ಯದೊಡನೆ ಬಂದಿರು

ವನೆಂದೇ ತಿಳಿದರು; ಆದರೂ ಪ್ರಾಣದ ಮೇಲಿನ ಆಶೆಯನ್ನು ತೊರೆದು ಶತ್ರುಗಳೊಡನೆ ಪ್ರಚಂಡಯುದ್ಧ ಮಾಡಬೇಕೆಂದೇ ದೃಢ ಸಂಕಲ್ಪಮಾಡಿಕೊಂಡು ರಣೋನ್ಮತ್ತರಾಗಿದ್ದರು.

ವಿಜಯಸಿಂಹನು ಬಾದಶಹನು ಬಂದಿರುವನೆಂಬ ಸಂಗತಿಯನ್ನು ಕೇಳಿ ತನ್ನ ಸೈನ್ಯವು ಅಪರಿಮಿತವಾದ ಮೊಗಲ್‌ಸೇನೆಯೊಡನೆ ಹೇಗೆ ಪ್ರತಿಭಟಿಸುವುದೆಂದೂ ರಾಜಪುತ್ರರು ಈ ಸಮಯದಲ್ಲಿ ತನಗೆ ಸಹಾಯಮಾಡುವವರಾಗಿಲ್ಲವೆಂದೂ ಶಂಕಿಸಿದನು. ಆದರೂ ತ್ರಾಣಗುಂದಲಿಲ್ಲ; ಮನಸ್ಸಿನ ದೃಢವನ್ನು ಸಡಲಿಸಲಿಲ್ಲ; ಶತ್ರುಸೈನ್ಯವೆಷ್ಟಾದರೂ ಬರಲಿ, ಪ್ರಾಣವಿರುವವರೆಗೂ ಹೋರಾಡುವುದೇ ಸರಿಯೆಂದು ನಿಶ್ಚಯಿಸಿದನು. ಶತ್ರುಗಳನ್ನು ಉಪಾಯದಿಂದ ಹೊರಡಿಸಬಹುದೇನೆಂದು ಮತ್ತೆ ಯೋಚಿಸಿದನು; ಘೋರ ಯುದ್ಧವೊಂದಲ್ಲದೆ ಮತ್ತೇತರಿಂದಲೂ ಶತ್ರುಗಳನ್ನು ಚದರಿಸುವಂತಿಲ್ಲವೆಂದೂ ರೂಪನಗರವನ್ನು ಹಾಳುಮಾಡಿ, ರಾಜಪುತ್ರವಂಶವನ್ನು ನಿರ್ಮೂಲಗೈದು ವಿಮಲೆಯನ್ನು ಹಿಡಿದೊಯ್ಯಬೇಕೆಂದಿರುವ ಶತ್ರುಗಳನ್ನು ಹೊರಡಿಸುವುದು ಸುಲಭವಲ್ಲವೆಂದೂ ಜಗತ್ತೇ ತನ್ನ ಮೇಲೆ ಮುರಿದು ಬಿದ್ದರೂ ತಾನು ತನ್ನ ಮಗಳನ್ನು ಯವನ ಸಮ್ರಾಟನಿಗೆ ಕೊಡುವುದಿಲ್ಲವೆಂದೂ ನಿರ್ಧರಿಸಿ, ಸೈನಿಕರಿಗೆ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಿ ಯುದ್ಧಕ್ಕಾಗಿ ಹುರುಡಿಸುತ್ತಿದ್ದನು.

ತಂದೆಯ ಸಾಹಸ ಪ್ರಯಾಸಗಳನ್ನು ನೋಡಿದ ವಿಮಲೆಯು ತಾನೂ ಸೈನಿಕರ ಉತ್ಸಾಹಶಕ್ತಿ ಇಮ್ಮಡಿಯಾಗುವಂತೆ ಹುರಿದುಂಬಿಸುತ್ತ ತನ್ನ ತಂದೆಗೆ ಅತ್ಯಂತ ಸಹಾಯಕಳಾಗಿದ್ದಳು. ಆದರೂ ಆ ರಾತ್ರಿಯಲ್ಲಿ ಅವಳ ಮುಖ ವಿಕಾಸವು ಕುಂದಿ ತನ್ನಿಂದ ತನ್ನ ತಂದೆಗೂ ತನ್ನ ಮಾತೃಭೂಮಿಗೂ ತನ್ನ ಪ್ರಜೆಗಳಿಗೂ ಎಂತೆಂತಹ ಅನರ್ಥಗಳುಂಟಾಗುವುವೋ ಎಂಬ ವ್ಯಾಕುಲವೂ ರಾಜಸಿಂಹನೇ ತನಗೆ ರಕ್ಷಕನೆಂದೂ ಸಕಾಲದಲ್ಲಿ ಆತನು ಬಂದು ತನ್ನನ್ನು ವಿಪತ್ತಿನಿಂದ ಕಾಪಾಡುವನೆಂದೂ ನಂಬಿದ್ದ ತನಗೆ ಆತನ ಆಗಮ

ನವೇ ಕಾಣಬರಲಿಲ್ಲವಾದುದರಿಂದ ಇನ್ನಾತನ ಸಹಾಯವಾಗುವಂತಿಲ್ಲ ವೆಂಬ ನಿರಾಶೆಯೂ ವ್ಯಕ್ತವಾಗುವಂತಿದ್ದಿತು. ತನ್ನ ಮನಸ್ಸಿನ ಉದ್ವೇಗ ವನ್ನು ಸಹಿಸಲಾರದೆ, ರಜಪೂತರನ್ನು ಧಿಕ್ಕರಿಸುತ್ತಿದ್ದಳು; ಪದ್ಮೆಯು ವಿಮಲೆಯನ್ನು ಅನವರತವೂ ಎಡೆಬಿಡದೆ ಅನೇಕ ವಿಧದಿಂದ ಸಮಾಧಾನ ಪಡಿಸುತ್ತಿದ್ದಳು. ಆ ರಾತ್ರಿಯೆಲ್ಲ ಇಬ್ಬರೂ ನಿದ್ರೆಯಿಲ್ಲದೆ ಭೀತಿಯಿಂದಲೂ ಶೋಕದಿಂದಲೂ ಕಳವಳದಿಂದಲೂ ಮುಂದಿನ ತಮ್ಮ ಪರಿಣಾಮ ವೇನೆಂದು ವಿಚಾರಮಾಡುತ್ತಿದ್ದರು.

ಬರುತ ಬರುತ್ತ ಬೆಳಗಿನ ಜಾವವಾಯಿತು. ಆದರೆ ಇನ್ನೂ ಕತ್ತಲೆಯು ಪೂರ್ಣವಾಗಿ ಹೋಗಿರಲಿಲ್ಲ. ಆ ಸಮಯದಲ್ಲಿ ಉತ್ತರ ಭಾಗದಿಂದ ಕೆಲವು ಸೈನ್ಯವು ಅಸಂಖ್ಯಾತವಾದ ದೀಪಗಳಿಂದ ಕೂಡಿ ರೂಪನಗರದ ಕಡೆಗೆ ಬರುತ್ತಿದ್ದಿತು. ಸೈನಿಕರ ಸಂಖ್ಯೆ ಮಿತಿಮೀರಿದ್ದಿತು. ವಿಜಯಸಿಂಹನೂ ವಿಮಲೆಯೂ ಪದ್ಮೆಯೂ ಆ ಸೈನ್ಯವನ್ನು ನೋಡಿ ಡಿಲ್ಲಿನಗರದಿಂದ ಸೈನ್ಯವು ಬರುತ್ತಿರುವುದೆಂದು ನಿಶ್ಚಯಿಸಿದರು. ಶತ್ರುಸೈನ್ಯವು ಅಸಂಖ್ಯಾತವಾಗಿರು ವುದೆಂದೂ ತಮ್ಮ ಸೈನ್ಯವು ಶತ್ರುಸೈನ್ಯವನ್ನು ತಡೆಯಲಾರದೆಂದೂ ಈ ಸಾರಿ ತಮಗೆ ಅಪಜಯವಾಗುವುದರಲ್ಲಿ ಸಂದೇಹವಿಲ್ಲವೆಂದೂ ನಿರ್ಧರಿಸಿದರು. ಮೊಗಲರ ಸೇನೆಯು ದುರ್ಗವನ್ನು ಪ್ರವೇಶಿಸುವುದಕ್ಕಿಂತ ಮೊದಲೇ ಸ್ತ್ರೀಯರ ಮಾನವನ್ನು ಕಾಪಾಡುವ ಪ್ರಯತ್ನಗಳನ್ನು ಮಾಡಬೇಕೆಂದು ವಿಜಯಸಿಂಹನು ವಿಮಲೆಯನ್ನು ಸಮೀಪಿಸಿ ಧೈರ್ಯದಿಂದ—"ಅಮ್ಮಾ, ವಿಮಲಾ! ಇಂದಿಗೆ ನಮಗೂ ರೂಪನಗರಕ್ಕೂ ಋಣವು ತೀರಿತು. ಬಾದ ಶಹನು ಪ್ರಬಲ ಸೇನಾಸಮೇತನಾಗಿ ಬಂದಿರುವನು. ಇನ್ನೂ ಡಿಲ್ಲೀ ನಗರ ದಿಂದ ಸಾವಿರಾರು ಸೈನಿಕರು ಬರುತ್ತಲೇ ಇರುವರು. ಇಷ್ಟು ದಿನಗ ಳಿಂದಲೂ ಶತ್ರುಗಳೊಡನೆ ಹೋರಾಡಿ ಶ್ರಾಂತರಾಗಿರುವ ನಮ್ಮ ಸೈನಿಕರು ಆ ದೊಡ್ಡ ಸೈನ್ಯವನ್ನೆದುರಿಸುವುದು ಅಸಾಧ್ಯವು. ನಮಗೆ ಜಯವೆಂಬುದು ಇನ್ನು ಸ್ವಪ್ನಪ್ರಾಯವೇ ಸರಿ. ರಾಜಪುತ್ರರಲ್ಲಿ ಯಾರಾದರೂ ಸಹಾಯ

ಕ್ಕಾಗಿ ಬರುವರೆಂದು ಈವರೆಗೂ ನಿರೀಕ್ಷಿಸಿದೆನು; ನಿಷ್ಫಲವಾಯಿತು. ಇನ್ನು ನಾನಾವಿಚಾರವಾಗಿ ಸ್ವಲ್ಪವೂ ಯೋಚಿಸುವಂತಿಲ್ಲ."

ವಿಮಲೆಯು ಸ್ಥಿರಭಾವದಿಂದ ತಂದೆಯನ್ನು ಕುರಿತು,—" ಪ್ರಿಯ ಜನಕಾ! ನೀವು ಹೇಳಬೇಕೆಂದಿರುವ ಸಂಗತಿಗಳನ್ನೆಲ್ಲವನ್ನೂ ಗ್ರಹಿಸಿದೆನು. ಇದಕ್ಕಾಗಿ ನೀವು ಸ್ವಲ್ಪವೂ ವಿಚಾರ ಪಡಬೇಕಾಗಿಲ್ಲ. ಮಹಮ್ಮದೀಯರು ನಮ್ಮನ್ನು ಸೋಲಿಸಿ ಕೋಟೆಯನ್ನು ಪ್ರವೇಶಿಸಿ ನಮ್ಮ ಮಾನಧನವನ್ನು ಅಪಹರಿಸಲು ಬರುವಷ್ಟರಲ್ಲಿಯೇ ನಾವೆಲ್ಲರೂ ಹುತವಾಹನನ ಆಶ್ರಯವನ್ನು ಹೊಂದಿ ನಮ್ಮ ಮಾನ, ಅಭಿಮಾನ, ಸತೀಧರ್ಮವನ್ನು ಕಾಪಾಡಿಕೊಳ್ಳುವೆವು. ಕಾಮುಕನಾದ ಅಲಂಘೀರ ಬಾದಶಹನು ಕೋಟೆಯನ್ನು ಪ್ರವೇಶಿಸಿದರೆ ಆತನಿಗೆ ಭಸ್ಮರಾಶಿ ಹೊರತು ಒಬ್ಬ ರಾಜಪುತ್ರಸ್ತ್ರೀಯಾದರೂ ಕಾಣುವುದಿಲ್ಲ. ಮಹಮ್ಮದ್‌ಘೋರಿಯ ಕಾಲದಲ್ಲಿ ಸಂಯುಕ್ತಾದೇವಿಯೂ, ಅಲ್ಲಾವುದ್ದೀನನ ಕಾಲದಲ್ಲಿ ಪದ್ಮಿನೀದೇವಿಯೂ ಅಕಬರನ ಕಾಲದಲ್ಲಿ ಮೀರಾಬಾಯಿಯೂ ಶತ್ರುಗಳಿಂದ ಭಂಗವನ್ನು ಹೊಂದದೆ ತಮ್ಮ ತಮ್ಮ ದೇಹಗಳನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ ಮಾನಸಂರಕ್ಷಣೆ ಮಾಡಿಕೊಂಡು ಜಗತ್ತಿನಲ್ಲೆಲ್ಲಾ ಅಜರಾಮರವಾದ ಸತ್ಕೀರ್ತಿಶಾಲಿಗಳಾಗಿ ಪ್ರಕಾಶಿಸುತ್ತಿಲ್ಲವೇ? ಆ ಮಹಾ ಸಾಧ್ವೀಮಣಿಯರ ದಾಸಾನುದಾಸಿಯಾದೀ ವಿಮಲೆಯೂ ಆ ತಾಯಿಯರು ತೋರಿರುವ ಮಾರ್ಗವನ್ನೇ ಹಿಡಿದು ತನ್ನ ಮಾನವನ್ನು ಕಾಪಾಡಿಕೊಳ್ಳುವಳು. ಅಪ್ಪಾಜೀ! ನನ್ನ ಪುತ್ರಿಕಾವ್ಯಾಮೋಹದಿಂದ ಆಲಸ್ಯ ಮಾಡಬೇಡಿರಿ. ನನಗಾಗಿಯಾಗಲಿ, ನಮ್ಮ ದೇಶದ ನಾರೀಮಣಿಯರಿಗಾಗಿಯಾಗಲಿ ಚಿಂತಿಸಬೇಕಾಗಿಲ್ಲ. ನಮ್ಮ ಮುಂದಿನ ದಾರಿಯನ್ನು ನಾವು ಸಿದ್ಧಮಾಡಿಕೊಂಡೇ ಇರುವೆವು. ನೀವಿನ್ನು ಸತ್ವರದಿಂದ ರಣರಂಗವನ್ನು ಪ್ರವೇಶಿಸಿ ಶತ್ರುಗಳನ್ನು ನಾಶಮಾಡಿ ವೀರಸ್ವರ್ಗವನ್ನು ಪಡೆಯಬಹುದು. ಇದೋ ನಮ್ಮೆಲ್ಲರಿಗೂ ಇಹದಲ್ಲಿ ಇದೇ ಕಡೆಯ ಸಂದರ್ಶನವು. ಇನ್ನು ಸ್ವರ್ಗದಲ್ಲಿಯೇ ನಾವೆಲ್ಲರೂ ಒಬ್ಬರನ್ನೊಬ್ಬರು ನೋಡಬಹುದು." ಎಂದು ಸ್ಥಿರಗಂಭೀರ ಸ್ವರದಿಂದ ಹೇಳಿ ತಂದೆಗೆ ನಮಸ್ಕರಿಸಿದಳು. ಮಗಳ ಮನೋ

ದಾರ್ಢ್ಯಕ್ಕೆ ವಿಜಯಸಿಂಹನು ಅತ್ಯಂತ ಸಂತುಷ್ಟನಾಗಿ ಮಗಳ ತಲೆಯನ್ನು ಸವರಿ,—“ ತಾಯಿ, ವಿಮಲಾ ! ನಿನ್ನ ಸತ್ಯಸಂಕಲ್ಪಕ್ಕೆ ಭಗವಂತನು ಸತ್ಫಲವನ್ನು ದಯಪಾಲಿಸಲಿ. ಇನ್ನು ವಿಲಂಬವಿಲ್ಲ. ಈಗಲೇ ರಂಗಭೂಮಿಗೆ ಹೋಗುವೆನು. ನೀನೂ ಜಾಗ್ರತೆಯಾಗಿಯೇ ಜೋಹರ್ ಪದ್ಧತಿಯನ್ನು ಅವಲಂಬಿಸಿ ರಜಪೂತ ರಮಣಿಯರ ಧರ್ಮವನ್ನು ಕಾಪಾಡು ” ಎಂದು ಹೇಳಿ ಉತ್ತರಾಪೇಕ್ಷೆಯಿಲ್ಲದೆ ಹೊರಟುಹೋದನು.

ಜೋಹರ್—ಎಂದರೆ ರಣರಂಗದಲ್ಲಿ ತಮಗೆ ನಿಶ್ಚಯವಾಗಿ ಪರಾಜಯವಾಗುವುದೆಂದು ತಿಳಿದಾಗ ರಜಪೂತ ರಮಣಿಯರು ತಮ್ಮ ತಮ್ಮ ಪುರುಷರು ಯುದ್ಧಭೂಮಿಯಲ್ಲಿ ಹಿಮ್ಮೆಟ್ಟದೆ ಹೋರಾಡಿ ವೀರಸ್ವರ್ಗವನ್ನು ಹೊಂದುವಂತೆ ಹುರುಡಿಸಿ, ತಾವೆಲ್ಲರೂ ಸಂತೋಷದಿಂದ ಅಗ್ನಿದೇವನನ್ನು ಆರಾಧಿಸಿ ಒಟ್ಟಾಗಿ ಅಗ್ನಿಗೆ ತಮ್ಮ ದೇಹವನ್ನೊಪ್ಪಿಸುವುದೇ ಜೋಹರ್ ಎನ್ನಿಸುವುದು. ರಜಪೂತ ರಮಣಿಯರಿಗೆ ಇದೇ ಕಡೆಯ ಉಪಾಯವು. ಇದಲ್ಲದೆ ರಜಪೂತ ವೀರರು ತಮಗೆ ಪರಾಜಯವೇ ಸಿದ್ಧವೆಂದು ನಿರ್ಧರವಾದಾಗ ತಮ್ಮ ಸ್ತ್ರೀಯರು ಶತ್ರುಗಳಿಗೆ ವಶರಾಗಿ ಮಾನವನ್ನು ಕಳೆದುಕೊಳ್ಳದಿರಲೆಂದು ತಾವೇ ಸಂಹರಿಸಿ ಆ ಬಳಿಕ ನಿರಾತಂಕದಿಂದ ಯುದ್ಧಕ್ಕೆ ಹೋಗುವುದೂ ಉಂಟು. ಈ ಪದ್ಧತಿ ಆಂಧ್ರದೇಶದಲ್ಲಿಯೂ ಇದ್ದಿತು; ಇದಕ್ಕೆ ಫ್ರೆಂಚರು ಬೊಬ್ಬಿಲಿ ಕೋಟೆಯನ್ನು ಮುತ್ತಿದಾಗ ರಣಧೀರನಾದ ರಂಗರಾಯನು ರಾಣೀವಾಸದವರೆಲ್ಲರನ್ನೂ ಸಂಹರಿಸಿ ಯುದ್ಧಕ್ಕೆ ಒಂದುದೇ ನಿದರ್ಶನವು.

ವಿಜಯಸಿಂಹನು ಯುದ್ಧಭೂಮಿಯನ್ನು ಕುರಿತು ಹೊರಟುಹೋಗಲು ವಿಮಲಾದೇವಿಯು ಜಾಗ್ರತೆಯಾಗಿ ಅಗ್ನಿಯನ್ನು ಸೇರಿಸಬೇಕೆಂದು ಪದ್ಮೆಗೆ ಅಪ್ಪಣೆಯನ್ನಿತ್ತಳು. ತತ್‍ಕ್ಷಣವೇ ಪದ್ಮೆಯು ವಿಶಾಲವಾದ ಪ್ರದೇಶದಲ್ಲಿ ಇಂಧನಗಳನ್ನೂ ಗಂಧದ ಚಕ್ಕೆಗಳನ್ನೂ ಕರ್ಪೂರ ರಾಶಿಯನ್ನೂ ಅಸಂಖ್ಯಾತವಾದ ತುಪ್ಪದ ಕೊಡಗಳನ್ನೂ ತರಿಸಿ ಅಗ್ನಿದೇವನಿಗೆ ಸಮರ್ಪಿಸಿದಳು. ತತ್‍ಕ್ಷಣವೇ ರಜಪೂತ ಕಾಂತೆಯರ ಮಾನವನ್ನು ಕಾಪಾಡುವದಕ್ಕೋ ಎಂಬಂತೆ ಅಗ್ನಿದೇವನು ಮೇಘಮಂಡಲದವರೆಗೂ ಭಯಂಕರವಾಗಿ ಪ್ರಜ್ವಲ

ಸತೊಡಗಿದನು. ಆಗ ಅಂತಃಪುರದ ನಾರಿಯರೆಲ್ಲರೂ ತಮಗೆ ಇಷ್ಟವಾದ ಆಭರಣಗಳನ್ನು ಧರಿಸಿ, ಹರಿದ್ರಾ ಕುಂಕುಮಗಳನ್ನು ಪೂಜಾದ್ರವ್ಯಗಳೊಡನೆ ತಟ್ಟೆಗಳಲ್ಲಿರಿಸಿಕೊಂಡು ಬಂದು ಅಗ್ನಿಯ ಸುತ್ತಲೂ ನಿಂತರು. ವಿಮಲಾದೇವಿಯು ಮುಂದಾಗಿ ವೀತಿಹೋತ್ರನ ಬಳಿಯಲ್ಲಿ ನಿಂತು ರಜಪೂತರಮಣಿಯರೆಲ್ಲರೂ ಕೇಳುವಂತೆ ಹೀಗೆ ಹೇಳಿದಳು--

"ಓ ನನ್ನ ಪ್ರಿಯ ಸೋದರಿಯರೇ !

ನೀವೆಲ್ಲರೂ ನನ್ನ ದೆಸೆಯಿಂದ ಅತ್ಯಂತ ಕ್ಲೇಶಗಳನ್ನು ಸಹಿಸಬೇಕಾಯಿತು; ಆದರೂ ನೀವು ನನ್ನನ್ನು ತಿರಸ್ಕರಿಸದೆ ನನಗುಂಟಾಗಿರುವ ಆಪತ್ತಿಗಾಗಿ ನೀವೆಲ್ಲರೂ ಸಮದುಃಖಿನಿಯರಾಗಿ ನಿಮ್ಮ ಅನುಕಂಪನದಿಂದ ನನ್ನನ್ನು ಎಷ್ಟೋ ಸಮಾಧಾನಪಡಿಸಿರುವಿರಲ್ಲದೆ, ಇಂದು ನಮ್ಮ ಅಂತಿಮಧ್ಯೇಯವಾದ ಅಗ್ನಿಪ್ರವೇಶಕ್ಕೆ ಕೂಡ ಸಂತೋಷದಿಂದ ಬಂದಿರುವಿರಿ. ಈಗ ನಿಮಗೆ ನಾನೇನು ಹೇಳಬೇಕೋ ತಿಳಿಯೆನು. ಇಷ್ಟು ಹೇಳಬಲ್ಲೆ, ಈಗ ನಮ್ಮೀ ರೂಪನಗರಕ್ಕೆ ಬಂದಿರುವ ಆಪತ್ತಿನಂತೆ ಹಿಂದೆಯೂ ನಮ್ಮ ರಜಪೂತಸಾಧ್ವಿಯರ ಮಾನಹರಣಕ್ಕೆಂದು ಎಷ್ಟೋ ಆಪತ್ತುಗಳು ಬಂದಿದ್ದವು. ಆದರೂ ನಮ್ಮ ಪೂರ್ವಜರಾದ ಆ ಮಹಾತಾಯಿಯರು ತಮ್ಮ ಮಾನ ಧನಗಳನ್ನು ಕಳೆದುಕೊಳ್ಳದೆ ಪರಮ ಪವಿತ್ರ ಮೂರ್ತಿಯಾದ ಅಗ್ನಿಭಗವಾನನ ಸಹಾಯದಿಂದ ನಮಗೆಲ್ಲರಿಗೂ ಅತ್ಯುತ್ತಮವಾದ ಕರ್ತವ್ಯವನ್ನು ಬೋಧಿಸಿ ಕೀರ್ತಿಶೇಷರಾಗಿರುವರು. ಈಗ ನಾವು ಕೂಡ ಅವರ ಅನುಗಾಮಿಗಳಾಗಿ ಅನನ್ಯಶರಣ್ಯಭಾವದಿಂದ ನಮ್ಮೀ ನಶ್ವರದೇಹಗಳನ್ನು ಅಗ್ನಿ ಪುರುಷನಿಗೊಪ್ಪಿಸಿ, ನಮ್ಮ ಮಾನಧನಗಳನ್ನು ಕಾಪಾಡಿಕೊಳ್ಳಬೇಕಾದುದರಿಂದ ಈ ಸಮಯದಲ್ಲಿ ನಮ್ಮ ಮನಸ್ಸು ಆನಂದದಿಂದಿರುವಂತೆ ನಾವು ನಮ್ಮ ಪತಿದೈವವನ್ನೂ ಪರಮಾತ್ಮನನ್ನೂ ಜಗದಂಬೆಯನ್ನೂ ಸ್ಮರಿಸುತ್ತ ಅಗ್ನಿಯಲ್ಲಿ ಪ್ರವೇಶಿಸುವ."

ವಿಮಲಾದೇವಿಯ ಪ್ರಾರ್ಥನೆಯಿಂದ ರಾಜಪುತ್ರ ಸ್ತ್ರೀಯರೆಲ್ಲರೂ ಅತ್ಯಂತ ಉತ್ಸಾಹಿತರಾಗಿ ಅಗ್ನಿದೇವನನ್ನು ಸ್ತುತಿಸಿ ಅಗ್ನಿಪ್ರವೇಶಕ್ಕೆ ಸಿದ್ಧ

ರಾದರು. ಅಷ್ಟರಲ್ಲಿಯೇ ಅಶ್ವಾರೂಢನಾಗಿ ವಿಜಯೋತ್ಸಾಹದಿಂದ ತೇಜಃ ಪುಂಜನಾಗಿ ಪ್ರಕಾಶಿಸುತ್ತ ಆತುರಗಮನದಿಂದ ರಜಪೂತರಮಣಿಯರ ಅಗ್ನಿಪ್ರವೇಶವನ್ನು ತಡೆಯಲು ಬಂದ ರಾಜಸಿಂಹನು, ಅಗ್ನಿಪ್ರವೇಶಕ್ಕೆ ಮುಂದಾಗಿ ನಿಂತಿರುವ ವಿಮಲೆಯನ್ನೂ ಅವಳ ಮಾರ್ಗವನ್ನೇ ಅನುಸರಿಸುತ್ತಿರುವ ರಜಪೂತರಮಣಿಯರನ್ನೂ ನೋಡಿ ಘಟ್ಟಿಯಾಗಿ ಕೂಗಿ ಹೇಳಿದನು— "ಸಾಹಸವನ್ನು ನಿಲ್ಲಿಸಿರಿ, ರಜಪೂತರೇ ವಿಜಯಿಗಳಾದರು. ಮೊಗಲರು ಪರಾಜಿತರಾದರು. ವಿಜಯಸಿಂಹರಾಜನು ವಿಜಯೋತ್ಸಾಹದಿಂದ ಬರುತ್ತಿರುವನು. ನೋಡಿರಿ, ರಜಪೂತ ಸೈನ್ಯದ ಆನಂದ ಕೋಲಾಹಲಗಳನ್ನು."

ಅಮೃತೋಪಮವಾದೀ ವಾಕ್ಯದಿಂದ ವಿಮಲಾದೇವಿಯೂ ಇತರ ರಜಪೂತ ರಮಣಿಯರೂ ವಿಸ್ಮಿತರಾಗಿ ತಲೆಯೆತ್ತಿ ತಿರುಗಿ ನೋಡಿದರು; ರಾಜಸಿಂಹನು ಅಶ್ವಾರೋಹಿಯಾಗಿ ನಿಂತು, ಅಗ್ನಿಯನ್ನು ಆರಿಸಲು ಆಜ್ಞೆ ಮಾಡುತ್ತಿದ್ದುದನ್ನೂ ವಿಜಯಸಿಂಹನು ರಾಜಸಿಂಹನ ಬಳಿಗೆ ಆನಂದದಿಂದ ಬರುತ್ತಿದ್ದುದನ್ನೂ ಕಂಡರು; ಮನಸ್ಸಿನಲ್ಲಿಯೇ ಭಗವಂತನನ್ನು ಬಹುಪರಿಯಾಗಿ ಸ್ತುತಿಸಿ, ರಾಜಸಿಂಹನಿಗೆ ಧನ್ಯವಾದವನ್ನೊಪ್ಪಿಸಿದರು. ವಿಮಲೆಯ ಆನಂದಕ್ಕೆ ಪರಿಮಿತಿಯೇ ಇಲ್ಲವಾಯಿತು. ಪದ್ಮೆಯು ಸಮಾಧಾನಪಟ್ಟು ರಾಜಸಿಂಹನಿಗೆ ರಜಪೂತ ರಮಣಿಯರ ಕೃತಜ್ಞತೆಯನ್ನು ಸಲ್ಲಿಸಿದಳು. ಅಷ್ಟರಲ್ಲಿ ಅಲ್ಲಿಗೆ ವಿಜಸಿಂಹನೂ ಬಂದು ಸೇರಿದನು. ರಾಜಸಿಂಹನು ಸಕಾಲದಲ್ಲಿ ಬಂದು ತನಗೆ ಸಹಾಯಮಾಡಿ ಮೊಗಲರನ್ನು ಪರಾಜಿತರನ್ನಾಗಿ ಮಾಡಿದ ರೀತಿಯನ್ನು ವಿವರಿಸಿದನು. ರಜಪೂತ ರಮಣಿಯರೆಲ್ಲರೂ ರಾಜಸಿಂಹನನ್ನು ಕೊಂಡಾಡಿದರು. ಉತ್ತರಕ್ಷಣದಲ್ಲಿಯೇ ಅಗ್ನಿಯು ಆರಿಸಲ್ಪಟ್ಟಿತು. ರಜಪೂತ ರಮಣಿಯರು ಸ್ವಸ್ಥಾನಗಳನ್ನು ಸೇರಿದರು. ವಿಜಯಸಿಂಹನು ವಿಮಲೆಯ ಸಂರಕ್ಷಣೆಯ ಭಾರವನ್ನು ರಾಜಸಿಂಹನಿಗೇ ವಹಿಸಿದುದರಿಂದ, ರಾಜಸಿಂಹನು ವಿಜಯಸಿಂಹನ ಅಭಿಮತದಂತೆ ವಿಮಲೆಯನ್ನೂ ಪದ್ಮೆಯನ್ನೂ ತನ್ನ ರಾಜಧಾನಿಗೆ ಕರೆದೊಯ್ದನು.

# ಮುವ್ವತ್ತನಾಲ್ಕನೆಯ ಪ್ರಕರಣ

(ಮೂವರು ಪ್ರಯಾಣಿಕರು.)

ತಮಸ್ತೋಮ ವಿಧ್ವಂಸಕಾರಣನಾದ ಸೂರ್ಯನಾರಾಯಣನು ಇದೇ ಉದಯಾದ್ರಿಯನ್ನಲಂಕರಿಸಿದನು. ಸೂರ್ಯದೇವನ ಸಂದರ್ಶನದಿಂದುಂಟಾದ ಆನಂದಾತಿಶಯದಿಂದ ಶುಕಪಿಕಾದಿಪಕ್ಷಿನಿಕರಗಳು ತಮ್ಮ ಗೂಡುಗಳಿಂದ ಹೊರಗೆ ಬಂದು ಅಚಲೇಶ್ವರಾಲಯದ ಸುತ್ತಲೂ ಸೇರಿ ಆ ಸ್ವಾಮಿಯ ಸ್ತುತಿಪಾಠ ಮಾಡುತ್ತಿರುವುವೋ ಎಂಬಂತೆ ಧ್ವನಿಮಾಡುತ್ತಿದ್ದವು ಮಯೂರಗಳು ತಮ್ಮ ಗರಿಗಳನ್ನು ಪಸರಿಸಿ ಸಂತೋಷದಿಂದ ಅಲ್ಲಲ್ಲಿ ನಾಟ್ಯವಾಡುತ್ತಿದ್ದವು.

ಇಂತಹ ಸುಖಕರವಾದ ಪ್ರಭಾತದಲ್ಲಿ ಮೂವರು ಪುರುಷರು ಅಶ್ವಾರೂಢರಾಗಿ ಸಂಭಾಷಿಸುತ್ತ ಆ ಪರ್ವತದಮೇಲೆ ಒಂದು ಕಡೆಯಿಂದ ಬರುತ್ತಿದ್ದರು. ಮೂವರಲ್ಲಿ ಇಬ್ಬರು ಸ್ವಲ್ಪಹೆಚ್ಚುಕಡಮೆ ಒಂದೇ ರೂಪವುಳ್ಳವರಾಗಿ ಸಹೋದರರೆಂಬಂತೆ ಕಾಣಿಸುತ್ತಿದ್ದರು. ಮೂರನೆಯ ಪುರುಷನು ಆ ಇಬ್ಬರಲ್ಲಿ ಕಿರಿಯನ ಬಳಿಯಲ್ಲಿಯೇ ಕುದುರೆಯನ್ನು ನಡೆಯಿಸುತ್ತ ಮಾತು ಮಾತಿಗೂ ಆತನ ಕಡೆಯೇ ನೋಡುತ್ತಿದ್ದನು. ಮೂವರೂ ಬರುತ್ತಿದ್ದ ರೀತಿಯನ್ನು ನೋಡಿದರೆ, ೨-೩ ದಿನಗಳಿಂದ ಮಾರ್ಗಪ್ರಯಾಣದಲ್ಲಿಯೇ ಶ್ರಾಂತರಾಗಿರುವಂತೆ ತೋರುತ್ತಿದ್ದಿತು. ಅವರಲ್ಲಿಯೂ ಕಿರಿಯನು ಅತ್ಯಂತ ಶ್ರಾಂತನಾಗಿದ್ದನು. ಆಯಾಸವನ್ನು ತಡೆಯಲಾರದೆ ನಿಟ್ಟುಸಿರಿಡುತ್ತ ತುದಿನಾಲಿಗೆಯಿಂದ ತುಟಿಗಳನ್ನು ಸವರಿಕೊಳ್ಳುತ್ತಿದ್ದನು. ಉಳಿದೀರ್ವರೂ ಆತನಿಗೆ ಧೈರ್ಯವನ್ನು ಹೇಳುತ್ತ "ಇದೋ ಇದೇ ಅಬೂಪರ್ವತವು, ಅಚಲೇಶ್ವರಾಲಯವು ಸಮೀಪದಲ್ಲಿಯೇ ಇರುವುದು. ಸ್ವಲ್ಪ ಸಹಿಸಿಕೊಂಡರೆ ಜಾಗ್ರತೆಯಾಗಿಯೇ ಸೇರಬಹುದು." ಎಂದು ಆ ತರುಣನೊಡನೆ ಮಾತನಾ

ಹುತ್ತ ಬರುತ್ತಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ಮೂವರೂ ಪರ್ವತ ವನ್ನು ಸಮೀಪಿಸಿ ಅಲ್ಲಿ ತಮ್ಮ ಕುದುರೆಗಳಿಂದಿಳಿದು ಅವುಗಳನ್ನು ಒಂದು ಮರಕ್ಕೆ ಕಟ್ಟಿ ತಾವು ಪರ್ವತದ ಮೇಲಕ್ಕೆ ಹತ್ತಲಾರಂಭಿಸಿದರು.

ಪರ್ವತವು ಅತ್ಯಂತ ಕಡಿದಾಗಿಯೂ ಕಂಟಕಸಂಕೀರ್ಣವಾಗಿಯೂ ಕ್ರೂರಜಂತುಗಳಿಗೆ ಆವಾಸವಾದ ಪೊದರುಗಳನ್ನೂ ಗವಿಗಳನ್ನೂ ಹೊಂದಿ ಯೂ ಭಯಂಕರವಾಗಿದ್ದಿತು. ನಮ್ಮ ಮಾರ್ಗಸ್ಥರು ಅನೇಕ ಕಷ್ಟಗಳನ್ನ ನುಭವಿಸುತ್ತ ಬಹುಪ್ರಯಾಸದಿಂದ ಪರ್ವತಶಿಖರವನ್ನೇರಿ ಅಚಲೇಶ್ವರಾಲಯ ವನ್ನೂ ಸಮೀಪಿಸಿದರು. ಅಷ್ಟುಹೊತ್ತಿಗೆ ಸರಿಯಾಗಿ ಯೋಗಿರಾಜನು ಜಪವನ್ನು ಮುಗಿಸಿಕೊಂಡು ಆಲಯದಿಂದ ಹೊರಗೆ ಬರುತ್ತಿದ್ದನು. ಆತ ನನ್ನು ನೋಡಿದ ಕೂಡಲೆ ಮೂವರೂ ಭಕ್ತಿಯಿಂದ ನಮಸ್ಕರಿಸಿ ಕೈಮುಗಿದು ನಿಂತರು. ಯೋಗಿಯು ಆ ತರುಣರನ್ನು ಗುರ್ತಿಸದಿದ್ದರೂ ಎರಡನೆಯವ ನನ್ನು ಗುರ್ತಿಸಿ ಸಂತೋಷದಿಂದ "ದುರ್ಗಾದಾಸ, ಕ್ಷೇಮವಾಗಿರುವೆ ಯಷ್ಟೆ? ಡಿಲ್ಲಿಯಿಂದ ಹೇಗೆ ತಪ್ಪಿಸಿಕೊಂಡು ಬಂದೆ? ಇಂದಿರೆಯೆಲ್ಲಿ? ಇವರಾರು?" ಎಂದು ಕೇಳಿದನು. ದುರ್ಗಾದಾಸನು ಅತ್ಯಂತ ಗಂಭೀರ ದಿಂದ ಡಿಲ್ಲಿಗೆ ಹೋದುದು ಮೊದಲು ಇಂದಿರಾ ನಯನಪಾಲರೊಡನೆ ಹೊರಟು ಬರುವವರೆಗೆ ಎಲ್ಲಾ ಸಂಗತಿಗಳನ್ನೂ ಸವಿಸ್ತರವಾಗಿ ತಿಳಿಸಿದನು. ಅದನ್ನು ಕೇಳಿದ ಯೋಗಿಯು ಆತ್ಮಾನಂದದಿಂದ "ಅಯ್ಯಾ! ದುರ್ಗಾದಾಸ! ರೋ ಷನಾರೆಯ ಕ್ರೂರಸ್ವಭಾವವನ್ನು ನಾನು ಇದಕ್ಕೆ ಮೊದಲೇ ತಿಳಿದಿದ್ದೆನು. ನಯನಪಾಲನ ಸಹಾಯದಿಂದ ನೀವು ಹೇಗೆಯೋ ಗಂಡಾಂತರವನ್ನು ದಾಟಿ ಬಂದಿರಿ." ಎಂದು ಹೇಳಿ ನಯನಪಾಲನ ಕಡೆಗೆ ತಿರುಗಿ ಆತನ ಕೈಹಿಡಿದು, "ಅಯ್ಯಾ! ಮೊದಲು ನೀನು ದುರ್ಮಾರ್ಗದಲ್ಲಿದ್ದು ಕಡೆಗೆ ಪಶ್ಚಾತ್ತಾಪ ಹೊಂದಿ ಸನ್ಮಾರ್ಗಪ್ರವರ್ತಕನಾದ ಸಂಗತಿಯನ್ನು ತಿಳಿದೆನು. ಸಂತೋಷ! ಇನ್ನು ಮೇಲೆ ನೀನು ಕ್ಷತ್ರಿಯರ ಧರ್ಮಕ್ಕೆ ಕೀರ್ತಿಯನ್ನು ತರಬೇಕು." ಎಂದು ಅಭಿಮಾನಪೂರ್ವಕವಾಗಿ ಹೇಳಲು ನಯನಪಾಲನು ನಾಚಿಕೆಯಿಂದ ಮುಖವನ್ನು ತಗ್ಗಿಸಿಕೊಂಡು ಪುನಃ ಆ ಯೋಗಿಪುಂಗವನ ಪಾದಗಳಿಗೆ ನಮ

ಸ್ವೀಕರಿಸಿದನು. ಅನಂತರ ಯೋಗಿಯು ದುರ್ಗಾದಾಸನೊಡನೆ ರಾಜಸಿಂಹನ ಸಮಾಚಾರವನ್ನೆಲ್ಲಾ ತಿಳಿಸಿ, ಆ ಮರುದಿನದ ಪ್ರಾತಃಕಾಲಕ್ಕೆ ಆತನು ವಿಮಲೆಯೊಡನೆ ತನ್ನ ದರ್ಶನಕ್ಕೆ ಬರುವನೆಂದೂ ಬೇಕಾದಲ್ಲಿ ರಾಜಸಿಂಹನೊಡನೆ ಯುದ್ಧಕ್ಕೆ ಹೋಗಬಹುದೆಂದೂ ಹೇಳಲು ದುರ್ಗಾದಾಸನು ಸಮ್ಮತಿಸಿದನು. ನಯನಪಾಲನು ಮಾತ್ರ ವಿನಯದಿಂದ ಕೈಮೋಡಿಸಿ, "ಸ್ವಾಮಿ, ಕ್ಷಮಿಸಬೇಕು, ನಾನು ಮಾಡಬೇಕಾದ ಕೆಲಸಗಳು ಬಹಳವಾಗಿರುವುವು. ಔರಂಗಜೇಬನನ್ನು ಸೋಲಗೊಳಿಸಬೇಕೆಂದು ನಾನು ನಿಶ್ಚಯಿಸಿರುವೆನಾದುದರಿಂದ ಮೊದಲೇ ಹೋಗಿ ರಾಜಪುತ್ರರನ್ನು ಸೇರಿ ಆ ಪ್ರಯತ್ನದಲ್ಲಿರುವೆನು." ಎಂದು ಹೇಳಿ ಯೋಗಿಯಿಂದಲೂ ದುರ್ಗಾದಾಸನಿಂದಲೂ ಅನುಮತಿಯನ್ನು ಪಡೆದು ಹೊರಟನು.

ಇಂದಿರೆಯು, ಮೊದಲು ಯೋಗಿಯೂ ದುರ್ಗಾದಾಸನೂ ಸಂಭಾಷಿಸುತ್ತಿರುವಾಗಲೇ ಆಲಯವನ್ನು ಪ್ರವೇಶಿಸಿ ಪುರುಷ ವೇಷವನ್ನು ತೆಗೆದುಹಾಕಿ ನಿಜರೂಪವನ್ನು ಧರಿಸಿ ಅಲ್ಲಿ ಒಬ್ಬ ಭಿಲ್ಲಾಂಗನೆಯ ತೊಡೆಯಮೇಲೆ ಕುಳಿತು ಆಟವಾಡುತ್ತಿದ್ದ ಕುಮಾರ ಅಜಿತಸಿಂಹನನ್ನು ಎತ್ತಿಕೊಂಡು ಮುದ್ದಾಡುತ್ತಿದ್ದಳು. ತಾನು ಅತ್ಯಂತ ಕಷ್ಟನಷ್ಟಗಳಿಗೆ ಗುರಿಯಾಗಿ ಕಾಪಾಡಿದ ಬಾಲನನ್ನು ಕಂಡಕೂಡಲೇ ಅವಳ ಹೃದಯವು ಎಷ್ಟುಮಟ್ಟಿಗೆ ಆನಂದಪಟ್ಟಿರಬಹುದೆಂಬುದನ್ನು ಹೇಳಬೇಕೆ? ತನ್ನ ಶ್ರಮವು ಸಾರ್ಥಕವಾಗುವಂತೆ ಮಾಡಿದ ಪರಮಾತ್ಮನನ್ನು ಸ್ತುತಿಸುತ್ತ ರಾಜಕುಮಾರನನ್ನು ನಿಸರ್ಗ ಪುತ್ರವಾತ್ಸಲ್ಯದಿಂದ ಮುದ್ದಿಟ್ಟು ಆಲಿಂಗಿಸಿಕೊಳ್ಳುತ್ತ "ಸುಕುಮಾರ! ಜೋಧಪುರ ವಂಶಸಂರಕ್ಷಣಾರ್ಥವಾಗಿ ಕಾಬೂಲ್ ದೇಶದಲ್ಲಿ ನಯನಪಾಲನ ಮನೆಯಿಂದುಂಟಾದ ಕಷ್ಟಗಳೆಲ್ಲವನ್ನೂ ಸಹಿಸುದುದು ಇಂದಿಗೆ ಸಾರ್ಥಕವೆನಿಸಿತು. ನಿನ್ನ ಪ್ರಾಣಸಂರಕ್ಷಣಕ್ಕಾಗಿ ಗೊಲ್ಲರ ಹಳ್ಳಿಯನ್ನು ಪ್ರವೇಶಿಸಿ ಗೊಲ್ಲತಿಯ ವೇಷವನ್ನು ಧರಿಸಿದುದು ಈಗಲೀಗ ಸಾಫಲ್ಯವೆನಿಸಿತು! ದಯಾಮಯನಾದ ಭಗವಂತನು ನಮ್ಮ ಮನೋರಥವನ್ನು ನಡೆಯಿಸಿಕೊಟ್ಟನು; ನಾವು ನಮ್ಮ ರಾಜನನ್ನು ನೋಡಿ ಈಗಲೀಗ ಕೃತಸಂಕಲ್ಪರಾದೆವು. ಇನ್ನು ಜೋಧಪು

ರಕ್ಕೆ ನೀನೇ ಅಧೀಶನು"..........ಎಂದು ಬಗೆ ಬಗೆಯಾಗಿ ಬಣ್ಣಿಸಿ ಬಾಲನನ್ನು ಮುದ್ದಿಡುತ್ತಿದ್ದಳು. ಬಾಲನು ಇಂದಿರೆಯ ವಾಕ್ಯದ ಅರ್ಥವನ್ನು ತಿಳಿಯಲಸಮರ್ಥನಾಗಿದ್ದರೂ ಅವಳಾ ಪುತ್ರನಿರ್ವಿಶೇಷಪ್ರೇಮದಿಂದ ಅತ್ಯಂತ ಆತ್ಯಾಯಿತನಾಗಿ ಅವಳ ಲಾಲನೆಗಳಿಂದ ಕಿಲಕಿಲನೆ ನಗುತ್ತ ನಲಿದಾಡುತ್ತಿದ್ದನು. ಅಷ್ಟರಲ್ಲಿ ದುರ್ಗಾದಾಸನೊಡನೆ ಯೋಗಿಯೂ ಆಲಯದೊಳಗೆ ಪ್ರವೇಶಿಸಿದನು. ಇಂದಿರೆಯು ಬಾಲನನ್ನು ಕುಳ್ಳಿರಿಸಿ, ಯೋಗಿಗೆ ನಮಸ್ಕರಿಸಿದಳು. ಯೋಗಿಯು ಅತ್ಯಂತ ಆದರದಿಂದ, "ತಾಯಿ, ನಿನ್ನ ಅನುಗ್ರಹದಿಂದ ಜೋಧಪುರವಂಶವು ನಿಂತಿರುವುದು. ನಿನ್ನ ಪವಿತ್ರ ಚರಿತ್ರೆಯನ್ನು ನಾನು ಕೇಳಿ ಆತ್ಯಾನಂದ ಪಟ್ಟೆನು. ಕುಸುಮಕೋಮಲೆಯಾದ ನೀನು ರಾಜವಂಶವನ್ನುಳಿಸುವುದಕ್ಕಾಗಿ ಪಟ್ಟ ಕಷ್ಟವೂ ಆ ಮೂಲಕ ಪ್ರದರ್ಶಿತವಾದ ನಿನ್ನ ಮನೋದಾರ್ಢ್ಯ, ರಾಜಭಕ್ತಿ, ಕರ್ತವ್ಯನಿಷ್ಠೆಗಳೂ ವರ್ಣನಾತೀತವಾಗಿರುವುವು." ಎಂದು ಶ್ಲಾಘಿಸಿದನು.

ಆ ಮಾತನ್ನು ಕೇಳಿ ಇಂದಿರೆಯು ವಿನೀತ ಭಾವದಿಂದ—"ಇದೆಲ್ಲವೂ ಯೋಗಿರಾಜರ ಕೃಪೆಯಿಂದಲೇ ಆದುದಲ್ಲದೆ ನನ್ನ ಕರ್ತೃತ್ವಶಕ್ತಿಯಿಂದಾಯಿತೆಂದು ಹೇಳಲಾರೆನು. ರಾಣಿ ಚಂದ್ರಾವತೀದೇವಿಯ ಪಾತಿವ್ರತ್ಯ ಪ್ರಭಾವದಿಂದಲೂ ಕುಮಾರನ ಅದೃಷ್ಟಬಲದಿಂದಲೂ ಜೋಧಪುರದ ಪ್ರಜೆಗಳ ಸೌಭಾಗ್ಯದಿಂದಲೂ ಸ್ವರ್ಗವಾಸಿಯಾಗಿರುವ ಮಹಾರಾಜರ ಪುಣ್ಯ ಪ್ರಭಾವದಿಂದಲೂ ನಮ್ಮ ಅಣ್ಣನ ಪ್ರಯಾಸದಿಂದಲೂ ಈ ಕಾರ್ಯಗಳು ಫಲಿಸಿರುವುವೇ ಹೊರತು ಅನ್ಯಥಾ ಇಲ್ಲ" ಎಂದು ನುಡಿದಳು. ಇಂದಿರೆಯ ಮಾತಿಗೆ ಯೋಗಿಯು ಸಂತೋಷಪಟ್ಟು ಅಣ್ಣತಂಗಿಯರು ರಾಜಸಿಂಹನು ಬರುವವರೆಗೂ ವಿಶ್ರಮಿಸಿಕೊಂಡಿರುವಂತೆ ಹೇಳಿದನು.

ಇತ್ತ ನಯನಪಾಲನು ಯೋಗಿಯಿಂದ ಅಪ್ಪಣೆಹೊಂದಿ ಪರ್ವತವನ್ನಿಳಿದು ಬರುತ್ತ, ದೂರದಲ್ಲಿ ಕಾಲೂರಿ ನಿಂತಿದ್ದ ಬಾದಶಹನ ಸೈನ್ಯವನ್ನು ಕಂಡನು. ಒಡನೆ ಒಂದು ಎತ್ತರವಾಗಿದ್ದ ಮರವನ್ನೇರಿ, ಶತ್ರುವಿನ ಮಹಾ ಸೈನ್ಯವನ್ನು ನೋಡುತ್ತ ಹೀಗೆ ಆಲೋಚಿಸಲು ಆರಂಭಿಸಿದನು.

" ಈಗ ನಾನು ಮಾಡಬೇಕಾದುದೇನು ? ಸಕಲಸೇನಾಸಮೇತನಾಗಿ ಬಂದಿರುವ ಬಾದಶಹನೂ ಇಂದಿರಾ, ದುರ್ಗಾದಾಸ, ಅಜಿತಸಿಂಹಕುಮಾರ ಮೊದಲಾದವರೂ ಈಗ ನನ್ನ ಕೈಯಲ್ಲಿ ಸಿಕ್ಕಿರುವರು. ಈಗ ನಾನು ಯಾರಿಗೆ ಬೇಕಾದರೂ ಮೋಸ ಮಾಡಬಹುದು; ಯಾವಕಡೆಗೆ ಹೊರಳಬೇಕು ?" ಹಾ, ಇದೇನನರ್ಥಚಿಂತೆ! ನನ್ನನ್ನು ಬಲಾತ್ಕಾರವಾಗಿ ಕಾರಾಗ್ರಹದಲ್ಲಿರಿಸಿದ ಔರಂಗಜೇಬನನ್ನು ಮೋಸಪಡಿಸಬೇಕೆಂದು ಬಂದ ನಾನು ಈಗ ಯೋಚಿಸುವುದೇನು ? ಆದರೆ, ಔರಂಗಜೇಬನು ನನಗೆ ದ್ರೋಹಮಾಡಿದನೆ ? ಆತನ ಆಜ್ಞಾನುವರ್ತಿಯಾಗಿ ನಡೆಯಬೇಕಾಗಿದ್ದ ನಾನು ನಿಯಮಿತ ಕಾರ್ಯವನ್ನು ಮಾಡದೆಹೋದುದಕ್ಕೂ ಆತನಲ್ಲಿ ಸುಳ್ಳು ಹೇಳಿದುದಕ್ಕೂ ನನಗೆ ಶಿಕ್ಷೆಯಾಗುವುದು ನ್ಯಾಯವೇ ಸರಿ. ಜೋಧಪುರರಾಜ್ಯಸಂಪಾದನಕ್ಕಾಗಿಯೇ ನಾನು ಮೊದಲಿಂದಲೂ ಶ್ರಮ ಪಡುತ್ತಿದ್ದೆನು; ಈಗ ನನ್ನ ಉದ್ದೇಶಸಿದ್ಧಿಯಾಗುವ ಸಮಯವೊದಗಿದಂತೆ ಅವರೆಲ್ಲರೂ ಅಚಲೇಶ್ವರಾಲಯದಲ್ಲಿರುವ ಸಂಗತಿ ತಿಳಿದೇ ಇರುವುದು; ಇಷ್ಟೇ ಅಲ್ಲ, ಇಂದೋ ನಾಳೆಯೋ ರಾಜಸಿಂಹನೂ ವಿಮಲೆಯೂ ನನ್ನ ತಂತ್ರಜಾಲಕ್ಕೆ ಸಿಕ್ಕಿ ಬೀಳಬಹುದು. ಇವರೆಲ್ಲರನ್ನೂ ಹಿಡಿದು ಬಾದಶಹನಿಗೆ ಒಪ್ಪಿಸಿದರೆ ನನಗೆ ನಿಃಸಂದೇಹವಾಗಿ ಜೋದಪುರರಾಜ್ಯವು ಲಭಿಸಬಹುದಲ್ಲವೆ ? ಈಗೇನು ಮಾಡಲಿ ? ರಾಜ್ಯಲೋಭದಿಂದ ರಾಜಪುತ್ರರನ್ನು ಮೋಸಪಡಿಸಬೇಕೋ ? ಅಥವಾ ಸ್ವಮತಾಭಿಮಾನಿಯಾಗಿ ಧೂರ್ತ ಅಲಂಘೀರ ಬಾದಶಹನನ್ನು ಮೋಸಪಡಿಸಬೇಕೋ ?................"

ನಯನಪಾಲನು ಬಹುದೂರ ಆಲೋಚಿಸಿದನು; ಬಗೆಹರಿಯಲಿಲ್ಲ. ಕಡೆಗೆ ಪರ್ವತವನ್ನಿಳಿದು ಮೊದಲು ತಾನು ಕುದುರೆಯನ್ನು ಕಟ್ಟಿದ್ದ ಬಳಿಗೆ ಬಂದು ನೋಡಿದನು. ಕುದುರೆಯಿರಲಿಲ್ಲ; ಸುತ್ತಮುತ್ತಲೂ ಹುಡಿಕಿದನು, ಕಾಣಲಿಲ್ಲ ಶಂಕಿತನಾಗಿ ಹುಡುಕುತ್ತ ಮುಂದೆ ಹೊರಟನು; ಸ್ವಲ್ಪದೂರದಲ್ಲಿ ರಾಜಪುತ್ರನೋರ್ವನು ಅಶ್ವಾರೂಢನಾಗಿ ಬರುತ್ತಿದ್ದುದನ್ನು ಕಂಡ

ತತ್ಕ್ಷಣವೇ ಒಂದು ಕಡೆಯಲ್ಲಿ ಮರೆಯಾಗಿದ್ದು, ಅಶ್ವಾರೋಹಿಯು ಸಮೀಪಿಸಿದ ಕೂಡಲೆ ಅವನನ್ನು ಅಡ್ಡಗಟ್ಟಿ—"ಎಲಾ, ನೀನಾರು ? ಕಳ್ಳನಂತೆ ಕಾಣುವೆ, ನನ್ನ ಕುದುರೆಯನ್ನೇರಲು ಕಾರಣವೇನು ? ನಿಜವನ್ನು ಹೇಳಿದರೆ ಬದುಕುವೆ ; ಇಲ್ಲವಾದರೆ......"

ಅಶ್ವಾರೋಹಿಯುದಕ್ಕೆ ನಕ್ಕು—"ಅಯ್ಯಾ! ಅವಸರಪಡಬೇಡ. ಶಿವಸಿಂಗನು ಎಂದಿಗೂ ಕಳವೆಸಗಿಸುವನಲ್ಲ. ಇರಲಿ, ನಿನ್ನನ್ನು ಹಿಂದೆ ನೋಡಿರುವ ನೆನಪಿದೆ. ನೀನಾರು ಹೇಳು" ಎಂದನು.

ನಯನ:—"ನೀನೇ ಶಿವಸಿಂಗನಾಗಿದ್ದರೆ ಸಂತೋಷ ನನ್ನ ವೃತ್ತಾಂತವನ್ನು ತಿಳಿಯಬೇಕಾದರೆ, ಪರ್ವತದ ಮೇಲಿರುವ ದುರ್ಗಾದಾಸ-ಇಂದಿರಾದೇವಿಯರ ಬಳಿಯನ್ನು ಸೇರಿ, ತತ್ಕ್ಷಣವೇ ದುರ್ಗಾದಾಸನನ್ನು ಇಲ್ಲಿಗೆ ಕರೆದುಕೊಂಡು ಬಾ."

ನಯನಪಾಲನ ಮಾತನ್ನು ಕೇಳಿ. ಇಂದಿರಾ-ದುರ್ಗಾದಾಸರು ಬಂದಿರುವರೆಂಬ ಶುಭವರ್ತಮಾನವನ್ನು ತಿಳಿದು ಸಂತೋಷದಿಂದ, ಕೂಡಲೇ ಕುದುರೆಯಿಂದಿಳಿದು, ಕ್ಷಣವೂ ವಿಳಂಬಿಸದೆ, ಅವಸರದಿಂದ ಪರ್ವತವನ್ನೇರಿ ಹೋದನು. ಶಿವಸಿಂಗನು ಬಂದುದನ್ನು ನೋಡಿ ಯೋಗಿಯೂ ದುರ್ಗಾದಾಸನೂ ಆನಂದದಿಂದ ಅವನನ್ನು ಆದರಿಸಿದರು. ಶಿವಸಿಂಗನು ದುರ್ಗಾದಾಸನಿಂದ ನಯನಪಾಲನ ವೃತ್ತಾಂತವನ್ನು ಸಮಗ್ರವಾಗಿ ತಿಳಿದು ವಿಸ್ಮಿತನಾಗಿ, ಆತನ ಅಭಿಪ್ರಾಯದಂತೆ ದುರ್ಗಾದಾಸನನ್ನು ಜೊತೆಗೊಂಡು ಪರ್ವತವನ್ನು ಇಳಿದು ಬಂದು ನಯನಪಾಲನನ್ನು ಸೇರಿದನು.

ಅಷ್ಟರವರೆಗೂ ನಯನಪಾಲನು ತಾನು ಮುಂದೆ ವಹಿಸಬೇಕಾದ ಪಕ್ಷವಾವುದೆಂಬುದನ್ನು ನಿರ್ಧರಿಸಲರಿಯದೆ ಒಮ್ಮೆ ರಾಜ್ಯಲೋಭದಿಂದ ಔರಂಗಜೇಬನ ಕಡೆಗೂ ಒಮ್ಮೆ ಸ್ವಮತಾಭಿಮಾನಸ್ಫೂರ್ತಿಯಿಂದ ಅಚಲೇಶ್ವರಾಲಯದ ಕಡೆಗೂ ನೋಡುತ್ತ ಡೋಲಾಯಮಾನನಾಗಿ ಕುಳಿತಿದ್ದನು. ಶಿವಸಿಂಗನೊಡನೆ ದುರ್ಗಾದಾಸನು ಮುಂದೆಬಂದು ನಿಂತುದನ್ನು ನೋಡಿ

ನಯನಪಾಲನ ಮನಸ್ಸು ಸ್ಥಿರವಾಗಿ ಸ್ವಮತಾಭಿಮಾನದಿಂದ ಉಬ್ಬಿತು. ಥಟ್ಟನೆದ್ದು ದುರ್ಗಾದಾಸನ ಕೈಹಿಡಿದು ಆತನನ್ನು ಸ್ವಲ್ಪದೂರ ಕರೆದು ಕೊಂಡು ಹೋಗಿ ಆವುದೋ ಒಂದು ರಹಸ್ಯವನ್ನು ಆತನ ಕಿವಿಯಲ್ಲಿ ಹೇಳಿದನು. ಅದನ್ನು ಕೇಳಿ ದುರ್ಗಾದಾಸನು "ನಯನಪಾಲಾ! ಇದು ಒಳ್ಳೆಯ ಯುಕ್ತಿ!" ಎಂದು ಹೇಳಿದನು. ಅನಂತರ ನಯನಪಾಲನು ಶಿವಸಿಂಗನು ಬಿಟ್ಟಿದ್ದ ಕುದುರೆಯನ್ನೇರಿ ಕ್ಷಣಮಾತ್ರದಲ್ಲಿ ಅದೃಶ್ಯನಾದನು. ಶಿವಸಿಂಗನೂ ದುರ್ಗಾದಾಸನೂ ಅಚಲೇಶ್ವರಾಲಯವನ್ನು ಕುರಿತು ಹೊರಟು ಹೋದರು.

---

## ಮೂವತ್ತೊಂದನೆಯ ಪ್ರಕರಣ.

---

( ಹಾವನ್ನು ಹಾವೇ ಕಚ್ಚಿತು )

ಔರಂಗಜೇಬನು ಸೇನಾಸಮೇತನಾಗಿ ರೂಪನಗರದ ಸಮೀಪದಲ್ಲಿರುವುದನ್ನು ನೋಡಿ ನಯನಪಾಲನು ಆತನ ಬಳಿಗೆ ಜಾಗ್ರತೆಯಾಗಿ ಸೇರಬೇಕೆಂದು ಅತ್ಯಂತ ವೇಗವಾಗಿ ಅಶ್ವವನ್ನೋಡಿಸಿಕೊಂಡು ಬಂದು ಬಾದಶಹನ ಶಿಬಿರವನ್ನು ಸಮೀಪಿಸಿ ದಾರಿಯಲ್ಲಿದ್ದ ಮರಕ್ಕೆ ಕುದುರೆಯನ್ನು ಕಟ್ಟಿ ಶಿಬಿರವನ್ನು ಪ್ರವೇಶಿಸಲು ಬರುತ್ತಿದ್ದನು. ಇವನು ದೂರದಲ್ಲಿ ಬರುತ್ತಿರುವಾಗಲೇ ಮಹಮ್ಮದೀಯ ಭಟರು ಶತ್ರುಪಕ್ಷದವನು ಬರುತ್ತಿರುವನೆಂದು ತಮ್ಮತಮ್ಮ ಆಯುಧಗಳನ್ನು ಹಿಡಿದುಕೊಂಡು ಸಿದ್ಧರಾಗಿದ್ದರು. ಆದರೆ, ಇವನು ಸಮೀಪಿಸಿದ ಮೇಲೆ ಇವನನ್ನು ಗುರುತಿಸಿ ಆಯುಧಗಳನ್ನು ಕೆಳಗಿರಿಸಿ ಗಹಗಹಿಸಿ ನಕ್ಕರು.

ಬಾದಶಹನ ಶಿಬಿರವು ಅತ್ಯಂತ ವಿಸ್ತಾರವೂ ನೋಡಲು ಅತ್ಯಂತ ಭಯಂಕರವೂ ಆಗಿದ್ದಿತು. ಸುತ್ತಮುತ್ತಲೂ ದೊಡ್ಡ ದೊಡ್ಡ ಗುಡಾರ

ಗಳೂ ಆಯುಧಪಾಣಿಗಳಾಗಿದ್ದ ಭಟರ ಸಮೂಹವೂ ಕಾಣಬರುತ್ತಿದ್ದಿತು. ನಯನಪಾಲನು ಶಿಬಿರವನ್ನು ಪ್ರವೇಶಿಸಿ ಹೋಗುತ್ತಿರಲು ಅಲ್ಲಿದ್ದ ಸರದಾರರೂ ಸೈನ್ಯಾಧಿಕಾರಿಗಳೂ ಆತನ ಆಗಮನವನ್ನು ನೋಡಿ ಆಶ್ಚರ್ಯಪಟ್ಟರು. ಬಾದಶಹನ ಸೈನ್ಯದಲ್ಲಿವನು ಅನೇಕವರ್ಷಕಾಲ ಇದ್ದುದರಿಂದ ಎಲ್ಲರಿಗೂ ಇವನು ಚಿರಪರಿಚಿತನಾಗಿದ್ದನು. ಆದರೂ ಇವನು ಅವರಾರನ್ನೂ ಮಾತನಾಡಿಸಡೆ ಹೋಗುತ್ತಿರಲು ಅವರಲ್ಲಿ ಕೆಲವರು—"ಸೆರೆಯಲ್ಲಿ ಇದ್ದವನು ಮತ್ತೆ ಹೇಗೆ ತಪ್ಪಿಸಿಕೊಂಡು ಬಂದೆ" ಯೆಂದೂ ಮತ್ತೆ ಕೆಲವರು "ತಪ್ಪಿಸಿಕೊಂಡುಬಂದವನು ಮತ್ತೆಲ್ಲಿಗಾದರೂ ಹೋಗದೆ ಪುನಃ ಬಾದಶಹರ ಬಳಿಗೇಕೆ ಹೋಗುವೆ" ಎಂದೂ ಇನ್ನೂ ಕೆಲವರು "ಈ ಸಲ ಬಾದಶಹನು ನಿನ್ನನ್ನು ಕಠಿಣವಾಗಿ ಶಿಕ್ಷಿಸುವ" ನೆಂದೂ ಹೇಳುತ್ತಿದ್ದರು. ನಯನಪಾಲನು ಆದಾವುದಕ್ಕೂ ಉತ್ತರವನ್ನು ಕೊಡದೆ "ಬಾದಶಹರೆಲ್ಲಿರುವರು ? ಎಂದು ಕೇಳುತ್ತ ಮುಂಬರಿದು ಹೋಗುತ್ತಿದ್ದನು. ಸೈನಿಕರು ಬಹುಕಾಲ ಈತನ ಅಧಿಕಾರದಲ್ಲಿದ್ದುದರಿಂದಲೂ ಅನೇಕರು ಈತನಿಂದ ಉಪಕೃತರಾಗಿದ್ದುದರಿಂದಲೂ ಇವನನ್ನಾರೂ ತಡೆಯದೆ ಬಿಟ್ಟುಬಿಟ್ಟರು. ನಯನಪಾಲನು ಗುಡಾರಗಳೆಲ್ಲವನ್ನೂ ದಾಟಿ, ಬಾದಶಹನ ಶಿಬಿರವನ್ನು ಸಮೀಪಿಸಿ, ದ್ವಾರಪಾಲಕರಿಂದ ತಡೆಯಲ್ಪಟ್ಟು, ಅವರೊಡನೆ—"ನಾನು ಈಗ ಅತ್ಯಂತ ರಹಸ್ಯವೂ ಅವಸರವೂ ಆದ ರಾಜಕೀಯ ವಿಷಯವನ್ನು ಕುರಿತು ಬಾದಶಹರಲ್ಲಿ ಹೇಳಲು ಬಂದಿರುವೆನು. ವಿಳಂಬವಾದರೆ ಅಪಾಯವು ತಪ್ಪದು. ಈಗ ನೀವು ತಡೆದುದಕ್ಕೆ ಮುಂದೆ ನೀವೇ ಪಶ್ಚಾತ್ತಾಪಪಡಬೇಕಾಗುವುದು." ಎಂದು ಹೇಳಲು, ದ್ವಾರರಕ್ಷಕರು ಸ್ವಲ್ಪ ಭಯಪಟ್ಟು ಆತನನ್ನು ಒಳಗೆ ಹೋಗಲು ಬಿಟ್ಟರು.

ನಯನಪಾಲನು ಅತ್ಯಂತ ಮನೋಹರವಾಗಿ ಅಲಂಕೃತವಾಗಿದ್ದ ಶಿಬಿರವನ್ನೊಳಹೊಕ್ಕು ಬಂದನು. ಅಲ್ಲಲ್ಲಿ ಸೇವಕರು ನಿಯಮಿತ ಕಾರ್ಯಗ

ಳಲ್ಲಿ ಆಸಕ್ತರಾಗಿದ್ದರು: ಒಂದೆಡೆ ಸಭಾಸ್ಥಾನದಂತೆ ಕಟ್ಟಲ್ಪಟ್ಟು ಸುತ್ತಲೂ ಆಸನಗಳಿರಿಸಲ್ಪಟ್ಟಿದ್ದವು. ಅನೇಕ ಪ್ರಮುಖ ಉದ್ಯೋಗಸ್ಥರು ಆಸನಾಸೀನರಾಗಿ ಪ್ರಕಾಶಿಸುತ್ತಿದ್ದರು. ಆ ಸಭಾಸ್ಥಾನದ ಮಧ್ಯಪ್ರದೇಶದಲ್ಲಿ ಕನಕಸಿಂಹಾಸನಾಧಿಷ್ಠಿತನಾಗಿದ್ದ ಔರಂಗಜೇಬನು ವಿನೋದಕ್ಕಾಗಿ ಗುಡಿಗುಡಿಯನ್ನು ಸೇದುತ್ತ ಸಭಾಸದರೊಡನೆ ಪ್ರಸಂಗಮಾಡುತ್ತಿದ್ದನು. ನಯನಪಾಲನು ದೂರದಿಂದಲೇ ಬಾದಶಹನಿಗೆ ಸಲಾಮುಗಳನ್ನೊಪ್ಪಿಸಿ ವಿನೀತನಾಗಿ ಮುಂದೆ ಬಂದು ನಿಂತನು ಆತನನ್ನು ನೋಡಿ ವಿಸ್ಮಿತನಾಗಿ, "ಎಲಾ ನಯನಪಾಲಾ! ನಿನ್ನನ್ನು ಕಾರಾಗೃಹದಲ್ಲಿಟ್ಟಿದ್ದೆನಲ್ಲಾ! ಹೇಗೆ ಬಂದೆ?" ಎಂದು ಔರಂಗಜೇಬನು ಕೇಳಿದನು.

ನಯನ:— ಕ್ಷಮಿಸಬೇಕು! ಆಗ್ರಹಕ್ಕೆ ಪಾತ್ರನಾಗಿ ಕಾರಾಗೃಹಕ್ಕೊಯ್ಯಲ್ಪಟ್ಟ ನಾನು ಅಲ್ಲಿಂದ ತಪ್ಪಿಸಿಕೊಂಡು, ನಿಂತಲ್ಲಿ ನಿಲ್ಲದೆ ಅಲೆದು ರಾಜಪುತ್ರರ ರಹಸ್ಯಗಳೆಲ್ಲವನ್ನೂ ತಿಳಿದುಕೊಂಡು ತಮ್ಮ ಅನುಗ್ರಹಕ್ಕೆ ಪಾತ್ರನಾಗಲು ಬಂದಿರುವೆನು. ಈ ಬಾರಿ ಈ ಸೇವಕನ ಬಿನ್ನಪವನ್ನು ಅವಧರಿಸಿ ಇವನನ್ನು ಸೈನ್ಯದಲ್ಲಿ ಸೇರಿಸಿಕೊಂಡರೆ, ಇವನು ತನ್ನ ವೈರಿಗಳಾದ ರಜಪೂತರ ಮೇಲೆ ಬಿದ್ದು, ಅವರನ್ನು ನಾಶಪಡಿಸಿ, ಪ್ರಭುಚಿತ್ತಕ್ಕೆ ಆನಂದವನ್ನುಂಟುಮಾಡಬೇಕೆಂದು ಸಂಕಲ್ಪಿಸಿರುವೆನು. ನನ್ನ ಮಾತುಗಳನ್ನು ಉಪೇಕ್ಷಿಸಬಾರದು. ಈಗ ಜಾಗರೂಕರಾಗದಿದ್ದರೆ ಅಪಾಯಸಂಭವಿಸದಿರದು

ಔರಂಗ:—ನಯನಪಾಲಾ! ನಿನ್ನ ಪರಾಕ್ರಮ, ಶಪಥ, ಸ್ವಾಮಿಭಕ್ತಿಗಳೆಲ್ಲವೂ ಚಂದ್ರಾವತಿಯನ್ನು ಕರೆತರುವುದಾಗಿ ಹೇಳಿಹೋದಾಗಲೇ ವ್ಯಕ್ತವಾಗಿವೆ. ಮತ್ತೇಕೆ?

ನಯನ:—ಪ್ರಭುಗಳು ಹೀಗೆ ಹೇಳುವುದು ಶುಭಕರವಲ್ಲ. ಹಿಂದೆ ನಾನು ಪ್ರಭುಗಳ ಅನ್ನವನ್ನು ತಿಂದು ಜೀವಿಸಿರುವೆನಾದುದರಿಂದ ಆ ಋಣವನ್ನು ತೀರಿಸಲು ಈಗ ಸನ್ನಿಧಿಯಲ್ಲಿ ಕೆಲವು ರಹಸ್ಯವನ್ನು ತಿಳಿಸಲು ಬಂದಿರುವೆನು. ಇನ್ನು ತಮ್ಮ ಚಿತ್ತ!

ಬಾದಶಹನ ಇಂಗಿತವನ್ನು ತಿಳಿದು ಪರಿವಾರದವರು ದೂರ ಸಾರಿದರು. ಆ ಬಳಿಕ ನಯನಪಾಲನು ಬಾದಶಹನ ಆಜ್ಞೆಯಂತೆ ಸಮೀಪಕ್ಕೆ ಬಂದು ರಹಸ್ಯವಾಗಿ—"ರಾಜಾಧಿರಾಜಾ! ನಾನು ರಾಜಪುತ್ರರೊಡನೆ ಕಪಟಸ್ನೇಹದಿಂದಿದ್ದು ಅಲ್ಲಿ ತಮಗೆ ವಿರುದ್ಧವಾದ ಮಾತನಾಡಿ ದುರ್ಗಾದಾಸನೇ ಮೊದಲಾದವರ ಆಲೋಚನೆಗಳೆಲ್ಲವನ್ನೂ ತಿಳಿದುಕೊಂಡೆನು. ಆತನು ಸೆರೆಯಿಂದ ತಪ್ಪಿಸಿಕೊಂಡು ಬಂದು ತನ್ನ ತಂಗಿಯಾದ ಇಂದಿರೆಯೊಡನೆ ಈಗ ಆಬೂಪರ್ವತದಮೇಲೆ ವಸಿಸುತ್ತಿರುವನು. ಚಂದ್ರಾವತಿಯ ಕುಮಾರನೂ ಯೋಗಿಯ ಬಳಿಯಲ್ಲಿರುವನು. ನಾಳಿನ ಪ್ರಾತಃಕಾಲಕ್ಕೆ ವಿಮಲಾದೇವಿಯೊಡನೆ ರಾಜಸಿಂಹನು ಯೋಗಿಯ ಸಂದರ್ಶನಕ್ಕಾಗಿ ಆಬೂಪರ್ವತದ ಮೇಲಕ್ಕೆ ಬರುವನಂತೆ ! ಈಗ ನಾವು ಸ್ವಲ್ಪ ಯುಕ್ತಿ ಮಾಡಿದರೆ, ಅವರೆಲ್ಲರೂ ನಿರಾಯಾಸವಾಗಿ ನಮ್ಮ ಕೈಗೆ ಸಿಕ್ಕಿಬೀಳುವರು."

ಔರಂಗ:—ಶಾಬಾಸ್, ನಯನಪಾಲಾ! ನಿನ್ನ ಬುದ್ಧಿಗೆ ಮೆಚ್ಚಿದೆನು. ಒಳ್ಳೆಯ ರಹಸ್ಯವನ್ನು ತಿಳಿಸಿದೆ. ಸಂತೋಷ ! ಈಗಲೇ ನಮ್ಮ ಸೈನ್ಯವನ್ನು ಕಳುಹಿಸಿ ಅವರನ್ನು ಹಿಡಿಸುವೆನು.

ನಯನ:— ದೇವಾ! ಹಾಗೆ ಹೇಳಿದರೆ ಕಾರ್ಯಸಾಧನೆಯಾದಂತಲ್ಲ. ನಾವು ಬರುತ್ತಿರುವ ಸಮಾಚಾರವು ಅವರಿಗೆ ತಿಳಿದುದೇ ಆದರೆ ತಕ್ಷಣವೇ ಅವರು ಓಡಿಹೋಗುವರು. ಆಗ ಅವರನ್ನು ಹಿಡಿಯುವುದು ಅಸಾಧ್ಯವು. ಆದುದರಿಂದ ನಾವು ರಹಸ್ಯವಾಗಿ ಹೋಗಿ ಅವರನ್ನು ಹಿಡಿದುಕೊಳ್ಳಬೇಕು.

ಔರಂಗ:—ನಿನಗೆ ಹುಚ್ಚು ಹಿಡಿಯಿತೇನು ! ಪರ್ವತದ ಸುತ್ತಲೂ ನಾವು ಮುತ್ತಿಗೆ ಹಾಕಿದರೆ ಅವರೆಲ್ಲಿಗೆ ಹೋಗುವರು?

ನಯನ:—ನನಗೆ ಹುಚ್ಚು ಹಿಡಿದಿಲ್ಲ. ಅಚಲಯೋಗಿ ಮಹಾಮಾಯಾವಿಯೆಂಬುದು ಪ್ರಭುಚಿತ್ತಕ್ಕೆ ಗೊತ್ತಿಲ್ಲವೆಂದು ಭಾವಿಸಬೇಕಾಗಿದೆ. ಇಂದಿರಾ ದುರ್ಗಾದಾಸರ ಚಾತುರ್ಯವು ಅನುಭವಕ್ಕೆ ಬಂದೇ ಇರಬಹುದು

ಔರಂಗ: — ಹಾಗಾದರೆ ಈಗ ನೀನು ಹೇಳುವ ಉಪಾಯವೇನು?

ನಯನ:—ನಾಳಿನ ಪ್ರಾತಃಕಾಲ ರಾಜಸಿಂಹನು ವಿಮಲೆಯೊಡನೆ ಆ ಪರ್ವತಕ್ಕೆ ಬರುವನು. ಆದುದರಿಂದ ನಾವು ನಾಳಿನ ದಿನ ಮಧ್ಯಾಹ್ನವೇ ಆ ಪರ್ವತಕ್ಕೆ ಮುತ್ತಿಗೆಯನ್ನು ಹಾಕಬೇಕು. ಇಷ್ಟೇ ಅಲ್ಲದೆ ಆ ಪರ್ವತ ಪ್ರಾಂತ್ಯವು ಅರಣ್ಯಮಯವಾಗಿಯೂ ಕಣಿವೆಗಳಿಂದ ಕೂಡಿದುದಾಗಿಯೂ ಇರುವುದರಿಂದ ನಮ್ಮ ಸೈನ್ಯವನ್ನು ಚಿಕ್ಕ ಚಿಕ್ಕ ಭಾಗಗಳನ್ನಾಗಿ ಮಾಡಿ ಪರ್ವತವನ್ನು ಸಮೀಪಿಸಿ ಮರಗಳ ಮರೆಯಲ್ಲಿಯೂ ಕಣಿವೆಗಳಲ್ಲಿಯೂ ಸೈನ್ಯಗಳನ್ನು ರಹಸ್ಯವಾಗಿರಿಸಿ, ಪರ್ವತವನ್ನು ಮುತ್ತಬೇಕು. ಆ ಅರಣ್ಯ ಮಾರ್ಗಗಳನ್ನೂ ಕಣಿವೆಯದಾರಿಗಳನ್ನೂ ನಾನು ಚನ್ನಾಗಿ ತಿಳಿದಿರುವೆನು. ಆ ದಾರಿಯಲ್ಲಿ ನಾನು ಸೈನ್ಯವನ್ನು ರಹಸ್ಯವಾಗಿ ತೆಗೆದುಕೊಂಡು ಹೋಗ ಬಲ್ಲೆನು. ಇದರಮೇಲೆ ತಮ್ಮ ಚಿತ್ತ! ಇದರ ಪ್ರತಿಫಲವಾಗಿ ಜೋಧಪುರ ವನ್ನು ಮಾತ್ರ ನನಗೆ ದಯೆಪಾಲಿಸಬೇಕು.

ಔರಂಗಜೇಬನು ಸಮ್ಮತಿಸಿದುದಲ್ಲದೆ ಶುಭವರ್ತಮಾನವನ್ನು ಹೇಳಿ ದುದಕ್ಕಾಗಿ ಮುತ್ತಿನಹಾರವನ್ನು ನಯನಪಾಲನಿಗೆ ಬಹುಮಾನವಾಗಿ ಕೊ ಟ್ಟನು. ಅನಂತರ ಬಾದಶಹನು ತನ್ನ ಸೇನಾನಾಯಕನನ್ನು ಕರೆಯಿಸಿ ಒಂದು ಗಂಟೆಯೊಳಗಾಗಿ ಸೇನೆಯನ್ನು ಪ್ರಯಾಣಕ್ಕೆ ಸಿದ್ಧಮಾಡಿಸಬೇಕೆಂದು ಆಜ್ಞಾಪಿಸಿದನು; ಮೊಗಲ್‌ಸೇನೆ ಮೂರುದಿನಗಳ ಅವಧಿಯಲ್ಲಿಯೂ ಸಿದ್ಧವಾಗಲಾರದಸ್ಥಿತಿಯಲ್ಲಿದ್ದಿತು. ಆದರೂ ಔರಂಗಜೇಬನ ಆಜ್ಞೆಯನ್ನು ಉಪೇಕ್ಷಿಸುವ ಅಥವಾ ಪ್ರತಿಭಟಿಸುವ ಧೈರ್ಯವಿಲ್ಲದೆ ಅತಿ ಪ್ರಯಾಸ ದಿಂದ ಸಿದ್ಧವಾಗಬೇಕಾಯಿತು. ಇಷ್ಟು ಆಕಸ್ಮಿಕವಾಗಿ ಹೊರಡುವ ಕಾರ ಣವೇನೆಂಬ ಶಂಕೆಯು ಪ್ರತಿಯೊಬ್ಬ ಸೈನಿಕನನ್ನೂ ಬಾಧಿಸುತ್ತಿದ್ದರೂ ಬಾದ ಶಹನಲ್ಲಿ ಪ್ರಸ್ತಾಪಿಸುವಷ್ಟು ಸಾಹಸವು ಯಾರಿಗೂ ಉಂಟಾಗಲಿಲ್ಲ. ಸಾದ ತ್‌ಖಾನನು ಮಾತ್ರ ಧೈರ್ಯದಿಂದ ಮುಂದೆ ಬಂದು ಬಾದಶಹನಿಗೆ ಕೈ ಮುಗಿದು, "ಪ್ರಭುಗಳು ನಿರೂಪಿಸಬೇಕು. ಈಗ ನಾವು ಎಲ್ಲಿಗೆ ಹೊರಡ

ಬೇಕು? ಆಕಸ್ಮಿಕವಾಗಿ ಹೊರಡುವ ಕಾರಣವೇನು? ಸೈನ್ಯಾಧಿಪತಿಯಾಗಿರುವುದರಿಂದ ಕೇಳಬೇಕಾಯಿತು." ಎಂದು ಬಿನ್ನವಿಸಿದನು. ಅಷ್ಟರಿಂದಲೇ ಬಾದಶಹನು ಕ್ರೋಧಾನ್ವಿತನಾಗಿ—"ಆ ಸಂಗತಿಗಳೆಲ್ಲಾ ನಿನಗೇಕೆ? ಈಗ ನಾನೇ ಸೇನಾನಾಯಿಕನು. ನಾನು ಹೋದಕಡೆಗೆ ನೀನು ಬರಬೇಕು" ಎಂದು ನುಡಿಯಲು ಸಾದತ್‌ಖಾನನು ಮರುಮಾತಿಲ್ಲದೆ ಸೈನಿಕರೊಡನೆ ಹೊರಡಲು ಸಿದ್ಧನಾದನು.

ಔರಂಗಜೇಬನ ಆಜ್ಞೆಯಂತೆ ನಯನಪಾಲನು ತುರುಗಾರೂಢನಾಗಿ ಮುಂದೆ ಹೊರಟನು ಆತನ ಹಿಂದೆ ಫಾರಸೀಕ ತುರುಗವನ್ನೇರಿ ಬಾದಶಹನೂ ಆತನ ಹಿಂದೆ ಸೇನಾವಾರವೂ ಅದರ ಹಿಂದೆ ಜನಾನಾ ಸಮೂಹವೂ ಭೋಜನ ಸಾಮಗ್ರಿಗಳೂ ಯುದ್ಧದ ಸಾಹಿತ್ಯಗಳೂ ಕೆಲವರು ಭಟರೂ ಹೊರಟರು. ನಯನಪಾಲನು ಬಾದಶಹನೊಡನೆ ಪ್ರಸಂಗಿಸುತ್ತ ಹೋಗುತ್ತ ಆ ಪ್ರದೇಶದಲ್ಲಿ ಅರಣ್ಯಮಾರ್ಗಗಳನ್ನೂ ಕಣಿವೆಯ ದಾರಿಗಳನ್ನೂ ಆತನಿಗೆ ತೋರಿಸುತ್ತಾ—"ದೇವಾ! ನಾನು ಪಾದಸೇವೆಗೆ ಬಂದು ಸೇರುವ ಮೊದಲು ಈ ಅರಣ್ಯಪ್ರದೇಶದಲ್ಲಿಯೇ ಸಂಚರಿಸುತ್ತಿದ್ದೆನು. ಈ ಕಣಿವೆ ದಾರಿಗಳೆಲ್ಲವೂ ನನಗೆ ಚನ್ನಾಗಿ ಗೊತ್ತಿರುವುವು. ನನಗೆ ತಿಳಿಯದ ದಾರಿಯೇ ಇಲ್ಲಿರುವುದಿಲ್ಲ." ಎಂದು ಹೇಳುತ್ತಿದ್ದನು.

ನಯನಪಾಲನು ಕ್ರಮಕ್ರಮವಾಗಿ ತನ್ನ ಮಾತಿನಲ್ಲಿ ಪೂರ್ಣ ಭರವಸೆಯಿಟ್ಟ ಔರಂಗಜೇಬನನ್ನು ಸ್ವಲ್ಪದೂರ ಪರ್ವತದ ಅರಣ್ಯಮಾರ್ಗದಲ್ಲಿ ಕರೆದೊಯ್ಯುತ್ತಿದ್ದನು. ಆಬಳಿಕ ಒಂದು ಇಕ್ಕಟ್ಟಾದ ಕಣಿವೆಯಲ್ಲಿ ಪ್ರವೇಶಿಸಿದನು. ಔರಂಗಜೇಬನು ಕಣಿವೆಯ ದಾರಿಯು ಇಕ್ಕಟ್ಟಾಗಿ, ದಾರಿಯುದ್ದಕ್ಕೂ ಸೂಜಿಯಂತಿರುವ ಕಲ್ಲುಗಳು ಆವರಿಸಿದ್ದುದನ್ನು ನೋಡಿ, "ನಯನಪಾಲಾ! ಇದೇನು? ಈ ಮಾರ್ಗವು ಇಷ್ಟು ದುರ್ಗಮವಾಗಿರುವುದು? ಈ ಮಾರ್ಗದಲ್ಲಿ ಪ್ರಯಾಣಮಾಡುವುದು ಹೇಗೆ?" ಎಂದು ಕೇಳಲು ನಯನಪಾಲನು "ದೇವಾ! ಶಂಕೆಗೆ ಕಾರಣವಿಲ್ಲ. ಸ್ವಲ್ಪದೂರ ಮಾತ

ಹೀಗಿರುವುದು. ಆಮೇಲೆ ಸುಲಭವಾಗಿ ಪ್ರಯಾಣಮಾಡಬಹುದು. ನನ್ನ ಮಾತಿನಲ್ಲಿ ಭರವಸೆ ಇರಬೇಕು'' ಎಂದನು. ನಯನಪಾಲನೂ ಆತನ ಹಿಂದೆ ಬಾದಶಹನೂ ಆತನ ಹಿಂದೆ ಸೈನ್ಯಸಮೂಹವೂ ಅತ್ಯಂತ ಪ್ರಯಾಸದಿಂದ ಆ ಕಣಿವೆಯಲ್ಲಿ ಪ್ರವೇಶಿಸಿ ಹೋಗುತ್ತಿದ್ದುವು. ಭೋಜನ ಸಾಮಗ್ರಿ—ಯುದ್ಧಸಾಮಗ್ರಿಗಳೂ ಜನಾನಾ ಸಮೂಹವೂ ಇನ್ನೂ ಕಣಿವೆಯ ಹೊರಗಡೆಯಲ್ಲಿಯೇ ಇದ್ದುವು. ಅಷ್ಟರಲ್ಲಿಯೇ ಆಕಸ್ಮಿಕವಾಗಿ ಎಲ್ಲಿಂದಲೋ ಕೆಲವರು ರಾಜಪುತ್ರರು ನಾಗಾಲೋಟದಿಂದ ಬಂದು ಕಣಿವೆಯ ಬಾಗಿಲಲ್ಲಿ ಅಡ್ಡಗಟ್ಟಿದರು. ಪಾಪ! ಅವರೆಲ್ಲರೂ ದಿಗ್ಭ್ರಮೆಯಿಂದ ನಿಂತುಬಿಟ್ಟರು.

---

## ಮೂವತ್ತೆಂಟನೆಯ ಅಧ್ಯಾಯ.

---

(ರಾಜಪುತ್ರರ ಯುದ್ಧ)

ಮೊಗಲರು ಪ್ರವೇಶಿಸಿದ್ದ ಪರ್ವತಮಾರ್ಗವು ಒಂದು ಕಣಿವೆಯಂತೆ ಸುಮಾರು ಹತ್ತು ಹನ್ನೆರಡು ಮೈಲಿಗಳವರೆಗೂ ವ್ಯಾಪಿಸಿದ್ದಿತು. ಆ ಕಣಿವೆಯ ಇಕ್ಕಡೆಯಲ್ಲಿಯೂ ಮಹೋನ್ನತವಾದ ಪರ್ವತ ಪಂಕ್ತಿಗಳಿದ್ದವು. ಕಣಿವೆದಾರಿಯ ದ್ವಾರವು ಅತ್ಯಂತ ಸಂಕೋಚವಾಗಿ ಒಮ್ಮೆ ನಾಲ್ಕು ಜನರು ಮಾತ್ರ ಹೋಗಬಹುದಾಗಿದ್ದಿತು. ಭಯಂಕರವಾದ ಆ ಮಾರ್ಗದ ಎರಡು ಕಡೆಗಳಲ್ಲಿದ್ದ ಪರ್ವತಪಂಕ್ತಿಗಳೆರಡೂ ಕ್ರಮಕ್ರಮವಾಗಿ ಸ್ವಲ್ಪ ದೂರ ಹೋದಮೇಲೆ ಒಂದನ್ನೊಂದು ಸೇರಿಕೊಂಡಿದ್ದುವು. ಪ್ರಾರಂಭದಿಂದ ಪರ್ವತಸಂಧಿಯವರೆಗೂ ಆ ಕಣಿವೆಯ ಮಾರ್ಗವು ಕಲ್ಲುಗಳಿಂದಲೂ ಕಂಟಕವೃಂದಗಳಿಂದಲೂ ಕೂಡಿ, ಜನಸಂಚಾರಕ್ಕೆ ಅಸಾಧ್ಯವಾಗಿದ್ದಿತು.

ಇಂತಹ ಕಣಿವೆಯಲ್ಲಿ ಸೈನಿಕರೆಲ್ಲರೂ ಸಿಕ್ಕಿರುವಾಗ ಕೆಲವರು ರಾಜಪುತ್ರರು ಅಕಸ್ಮಾತ್ತಾಗಿ ಒಂದು ಕಣಿವೆಯ ದ್ವಾರದಲ್ಲಿ ಅಡ್ಡವಾಗಿ ನಿಂತುಕೊಂಡು ಒಳಗಿರುವವರನ್ನು ಹೊರಕ್ಕೆ ಬರದಂತೆ ಮಾಡಿರುವುದನ್ನು ಕುರಿತು ನಮ್ಮ ವಾಚಕರು ವಿಸ್ಮಿತರಾಗಬಹುದು; ಆದಿನ ನಯನಪಾಲನು ದುರ್ಗಾದಾಸನೊಡನೆ ಹೇಳಿಬಂದ ರಹಸ್ಯವೇನಿರಬಹುದೆಂಬುದು ಈಗ ಅವರ ವಿಚಾರಕ್ಕೆ ಬಂದರೆ, ವಿಸ್ಮಿತರಾಗುವಂತಿಲ್ಲ. ಏಕೆಂದರೆ ಅವನು, ದುರ್ಗಾದಾಸನೊಡನೆ ತಾನು ಈಗಲೇ ಹೋಗಿ ಔರಂಗಜೇಬನನ್ನು ಅನೇಕಯುಕ್ತಿಗಳಿಂದ ಮೋಸಪಡಿಸಿ ಸೈನ್ಯಸಮೇತನಾದಾತನನ್ನು ಈ ಕಣಿವೆಯ ಮಾರ್ಗವಾಗಿ ಕರತರುವುದಾಗಿಯೂ ಅಷ್ಟರಲ್ಲಿ ದುರ್ಗಾದಾಸನು ಓಡಿಹೋಗಿ ರಾಜಸಿಂಹನಿಗೆ ವರ್ತಮಾನವನ್ನು ಹೇಳಿ ಆತನು ಉದಯಪುರಕ್ಕೆ ಹೋಗುವುದನ್ನು ಬಿಟ್ಟು ರಾಜಪುತ್ರರೊಡನೆ ಸೇನಾಪರಿವೃತನಾಗಿ ಬಂದು ಬಾದಶಹನು ಕಣಿವೆಯೊಳಗೆ ಹೊಕ್ಕಕೂಡಲೆ ಕಣಿವೆಯ ದ್ವಾರವನ್ನು ಅಡ್ಡಗಟ್ಟುವಂತೆ ಮಾಡಿ, ಪರ್ವತದ ಮೇಲ್ಗಡೆಯಿಂದ ಯುದ್ಧಮಾಡುವಂತೆ ತಿಳಿಸಬೇಕೆಂಬುದಾಗಿಯೂ ರಹಸ್ಯವನ್ನು ಸೂಚಿಸಿರಬೇಕೆಂದೂ ದುರ್ಗಾದಾಸನು ಯೋಗಿಯ ಪರಾಮರ್ಶವನ್ನು ಪಡೆದು ರಾಜಸಿಂಹನಿಗೆ ವಿಚಾರವನ್ನು ತಿಳಿಸಲು, ರಾಜಸಿಂಹನು ಅದನ್ನು ಅನುಮೋದಿಸಿ ಪರ್ವತದ ಮೇಲೆ ತನ್ನ ಸೈನ್ಯವನ್ನು ಮರೆಯಾಗಿ ನಿಲ್ಲಿಸಿ, ಕೆಲವರು ಮಾತ್ರ ಕಣಿವೆಯ ದ್ವಾರವನ್ನು ಕಟ್ಟುವಂತೆ ಏರ್ಪಡಿಸಿರಬೇಕೆಂದೂ ನಾವು ಊಹಿಸಬಹುದಾಗಿದೆ.

ಹೇಗೂ ಮೊಗಲರು ಕಣಿವೆಯನ್ನು ಪ್ರವೇಶಿಸಿದ ಕೂಡಲೆ ಸಮೀಪದ ಗುಹೆಯಲ್ಲಿದ್ದ ರಾಜಪುತ್ರರು ಅಕಸ್ಮಾತ್ತಾಗಿ ಬಂದು ದ್ವಾರದಲ್ಲಿ ನಿಂತು ಅವರೊಡನೆ ಯುದ್ಧಮಾಡತೊಡಗಿದರು. ಬಾದಶಹನು ಮೊದಲೇ ನಯನಪಾಲನೊಡನೆ ಒಹುದೂರ ಮುಂದೆ ಹೊರಟುಹೋಗಿದ್ದುದರಿಂದ ಆತನಿಗೆ ಈ ಸಂಗತಿಯು ತಿಳಿಯಲಿಲ್ಲ. ಕ್ರಮ ಕ್ರಮವಾಗಿ ಯುದ್ಧವು ಘೋರವಾಗಲು, ಬಾದಶಹನು ದ್ವಾರದಲ್ಲೇನೋ ತೊಂದರೆಯಾಗಿರುವು

ದೆಂದು ಭಾಷಿಸಿ ಆತನು ನಯನಪಾಲನನ್ನು ನೋಡಿ,—"ನಯನಪಾ ಇದೇನು ? ದ್ವಾರದಲ್ಲೇನೋ ಅಲ್ಲಕಲ್ಲೋಲವಾಗಿರುವಂತೆ ಕಾಣು ಎಂದನು. ಆಗ ನಯನಪಾಲನು "ಸರ್ಕಾರ್, ಅಪ್ಪಣೆಯಾದರೆ ಈ ಹೋಗಿ ಸಮಾಚಾರವನ್ನು ತಿಳಿದುಕೊಂಡುಬರುವೆನು. ಇಷ್ಟುಮಾತ್ರ ತಾವು ಭಯಪಡುವುದೇಕೆ ? ನಾನಿರುವಾಗ ತಮಗೆ ಆವ ವಿಧವಾದ ಗೂ ಅವಕಾಶವಿರಲಾರದು" ಎಂದು ಹಿಂದಕ್ಕೆ ಬಂದು "ಇದೇನೀ ಕಲ್ಲೋಲವು ?" ಎಂದು ಸೈನಿಕರನ್ನು ವಿಚಾರಿಸುತ್ತ ಅತ್ಯಂತ ರೌ ಹೊಂದಿದವನಂತೆ ಕತ್ತಿಯನ್ನು ಗರಗರನೆ ತಿರಿಗಿಸುತ್ತಾ ದ್ವಾರದ ಬಂದು ರಾಜಪುತ್ರರಿಗೆ ರಹಸ್ಯವಾಗಿ ಸನ್ನೆಯನ್ನು ಮಾಡಲು, ಕ ರಾಜಪುತ್ರರು ಯುದ್ಧವನ್ನು ನಿಲ್ಲಿಸಿ ದ್ವಾರಬಲ್ಲಿ ಸ್ವಲ್ಪ ಸ್ಥಳವನ್ನು ಬಿ ಕೂಡಲೆ ನಯನಪಾಲನು ಚಮತ್ಕಾರದಿಂದ ದ್ವಾರದಲ್ಲಿ ಹೊಕ್ಕು ಪುತ್ರರನ್ನು ಸೇರಿದನು ಉತ್ತರಕ್ಷಣದಲ್ಲಿಯೇ ರಾಜಪುತ್ರರು ಸೇರಿ ಯುದ್ಧಮಾಡತೊಡಗಿದರು. ಇತ್ತ ಬಾದಶಹನು ನಯನಪಾಲನ ಆಗ ವನ್ನು ಎದುರು ನೋಡುತ್ತಿದ್ದನು. ಸ್ವಲ್ಪ ಹೊತ್ತಿನೊಳಗಾಗಿ ಯುದ್ಧವು ಪ್ರಬಲವಾಗಿ ಬಾದಶಹನವರೆಗೂ ವ್ಯಾಪಿಸಿತು. ಆಗ ಬ ಹನು ತನಗಾವುದೋ ವಿಪತ್ತು ಸಂಭವಿಸಿತೆಂದುತಿಳಿದು ತನ್ನ ಸೈನ್ಯಾ ಯೊಡನೆ ಆಲೋಚಿಸತೊಡಗಿದನು.

ಇಷ್ಟರಲ್ಲಿ ಇಕ್ಕಡೆಗಳಲ್ಲಿ ಪರ್ವತಗಳಮೇಲಿನಿಂದ ಭಿಲ್ಲರೂ ರಾ ತ್ರರೂ ಬಂದು ಮೊಗಲರೊಡನೆ ಹೋರಾಡತೊಡಗಿದರು. ಬಾದ ಈ ಸಮಾಚಾರವನ್ನು ತಿಳಿದು ಇದೆಲ್ಲವೂ ನಯನಪಾಲನು ಮಾಡಿದ ಮೋ ಸರಿ, ಎಂದು ನಿಶ್ಚಯಿಸಿ ತತ್ತರ ಪಡುತ್ತ ಹುಚ್ಚುಹಿಡಿದವನಂತೆ ಅರೆ, ದತ್ ಖಾನ್, ಅರೆ ಮಹಮ್ಮದ್ ಖಾನ್, ಅರೆ ಮಹಮ್ಮದಾಲಿ, ಕೂಗುತ್ತ ನಯನಪಾಲನನ್ನು ಮನಬಂದಂತೆ ಬಯ್ಯುತ್ತ, ಮೇಲ್ಗಡೆ ಭಿಲ್ಲರು ಕಲ್ಲುಗಳನ್ನೂ ಬಾಣಗಳನ್ನೂ ಮಳೆಯಂತೆ ಪ್ರಯೋಗಿಸು

ದನ್ನು ನೋಡಿ ತಡೆಯಲಾರದೆ ತನ್ನವರಿಗೆ, "ಪರ್ವತವನ್ನು ಹತ್ತಿರಿ, ಜಾಗ್ರತೆ-ಜಾಗ್ರತೆ!" ಎಂದು ಆಜ್ಞಾಪಿಸಿದನು. ಸಾಧಾರಣವಾಗಿ ಆ ಪರ್ವತವನ್ನು ಹತ್ತುವುದಕ್ಕೆ ಯಾರಿಂದಲೂ ಅಸಾಧ್ಯ. ಅದರಲ್ಲಿಯೂ ಮೇಲಿಂದ ಭಿಲ್ಲರು ಶಿಲಾವೃಷ್ಟಿಯನ್ನೂ ಬಾಣವೃಷ್ಟಿಯನ್ನೂ ಕರೆಯುತ್ತಿದ್ದರು. ಹೀಗಿರುವಾಗ ಅವರ ಪ್ರಯತ್ನವು ಹೇಗೆ ಸಾಗುವುದು ? ಸೈನಿಕರ ದುರವಸ್ಥೆಯನ್ನು ನೋಡಿ ಮತ್ತೆಲ್ಲಿಯಾದರೂ ಮಾರ್ಗವಿರುವುದೇನೆಂದು ಬಾದಶಹನೇ ಹುಡುಕಿನೋಡಿದನು. ಆ ಪರ್ವತಸಂಧಿಯಲ್ಲದೆ ಮತ್ತಾವುದೂ ಅವನಿಗೆ ಕಾಣಲಿಲ್ಲ. ಒಂದುಕಡೆಯು ಪರ್ವತದ ಮೇಲೆ ಸಕಲ ಸೇನಾಸಮೇತನಾಗಿ ದುರ್ಗಾದಾಸನೂ ಮತ್ತೊಂದು ಪರ್ವತದಮೇಲೆ ಭಿಲ್ಲರೊಡನೆ ಶಿವಸಿಂಗನೂ ನಯನಪಾಲನೂ ದ್ವಾರದಲ್ಲಿ ರಾಜಸಿಂಹನೂ ರಜಪೂತಸೇನೆಯೂ ಪುರುಷವೇಷಧಾರಿಣಿಯರಾಗಿದ್ದ ವಿಮಲೆಪದ್ಮೆಯರೂ ಕ್ಷಣವಿರಾಮವಿಲ್ಲದಂತೆ ಆಯುಧಗಳನ್ನು ಪ್ರಯೋಗಿಸುತ್ತಿದ್ದರು. ಸಾವಿರಾರು ಮೊಗಲರು ಶತ್ರುಗಳಿಗೆ ತಮ್ಮ ಪ್ರಾಣಗಳನ್ನೊಪ್ಪಿಸುತ್ತಿದ್ದರು. ಎತ್ತನೋಡಿದರೂ ಸ್ವಲ್ಪವೂ ವಿರಾಮವಿಲ್ಲದೆ ಶತ್ರುಗಳು ಯುದ್ಧಮಾಡುತ್ತಿದ್ದುದರಿಂದ ಎಲ್ಲಿ ಹೋಗುವುದಕ್ಕೂ ದಾರಿತೋರದೆ ಇಂದಿಗೆ ತಮ್ಮ ಆಯುಸ್ಸು ಮುಗಿಯಿತೆಂದು ಪರಿತಪಿಸುತ್ತಿದ್ದರು. ಕೈಗಳಲ್ಲಿ ಮಹತ್ತರವಾದ ಆಯುಧಗಳಿದ್ದರೂ ಅವರು ನಿರಾಯುಧರಂತೆ ನಿಲ್ಲಬೇಕಾಯಿತು. ಅಂತ್ಯಕಾಲದ ಅಲ್ಲಾಪ್ರಾರ್ಥನೆ ಮಾಡತೊಡಗಿದರು. ಯಾವಕಡೆಯಲ್ಲಿ ನೋಡಿದರೂ ರಾಜಪುತ್ರರೆ ! ಎಷ್ಟುದೂರನೋಡಿದರೂ ಭಿಲ್ಲರೆ! ಪರ್ವತಗಳೆರಡೂ ಆದಿನ ರಾಜಪುತ್ರರಿಂದಲೂ ಭಿಲ್ಲರಿಂದಲೂ ತುಂಬಿದ್ದವು. ಬಾದಶಹನಿಗೆ ಉದಯಪುರಿಯೇನಾದಳೋ-ಎಂಬ ಚಿಂತೆ ಬಹುವಾಯಿತು. ಚಿಂತೆಯು ಬಲವಾಗುತ್ತ ಬಂದಂತೆಲ್ಲಾ ತನ್ನ ಸೈನ್ಯವು ಶತ್ರುಗಳ ಪರಾಕ್ರಮವನ್ನು ಸಹಿಸದೆ ನೆಲಕ್ಕುರುಳುತ್ತಿದುದನ್ನೂ ಕ್ಷಣಕ್ಷಣಕ್ಕೂ ಶತ್ರುಪಕ್ಷದವರ ಅಟ್ಟಹಾಸವು ಹೆಚ್ಚುತ್ತಿದ್ದುದನ್ನೂ ನೋಡಿ ಕ್ರೋಧಮೂರ್ಛಿತನಾದನು

ಕಣಿವೆಯ ದ್ವಾರದಲ್ಲಿ ರಾಜಪುತ್ರರೊಡನೆ ವಿಮಲೆಪದ್ಮಿಯರೂ ಸೇರಿ ಮೊಗಲರೊಡನೆ ಘೋರವಾಗಿ ಯುದ್ಧಮಾಡುತ್ತಿರುವಾಗ ದೂರದಿಂದ ಸ್ತ್ರೀಯರ ಆರ್ತನಾದವು ಕೇಳಬಂದಿತು. ಆಗ ಅವರಿಬ್ಬರೂ ತಕ್ಷಣವೇ ಯುದ್ಧವನ್ನು ಬಿಟ್ಟು ಸ್ವಲ್ಪ ದೂರ ಹೋಗಿ ನೋಡಲು, ಕೆಲವು ಮಂದಿ ರಾಜಭಟರು ಮೊಗಲಾಯಿ ಜನಾನಾವನ್ನು ಮುತ್ತಿ ಎಲ್ಲಿಗೋ ಕರೆದು ಕೊಂಡು ಹೋಗುತ್ತಿದ್ದರು. ಈ ಮಹತ್ತರವಾದ ಯುದ್ಧಕ್ಕೆ ಕಾರಣಭೂತಳಾದವಳು ಉದಯಪುರಿಯೆಂದು ತಿಳಿದಿದ್ದರೂ ಆಕೆಗೆ ಅವಮಾನವುಂಟುಮಾಡುವುದು ಯೋಗ್ಯವಲ್ಲವೆಂದು ಭಾವಿಸಿ ಸದಯಹೃದಯೆಯಾದ ವಿಮಲೆಯು ರಾಜಪುತ್ರರ ಕೈಸೆರೆಸಿಕ್ಕಿ ಪರಿತಪಿಸುತ್ತಿದ್ದ ಉದಯಪುರಿಯ ಬಳಿಗೆ ಬಂದಳು. ಉದಯಪುರಿಯು ಪಶ್ಚಾತ್ತಾಪಪಡುತ್ತಾ ತನ್ನಲ್ಲಿ ತಾನೇ— "ಅಯ್ಯೋ! ನಿಷ್ಕಾರಣವಾಗಿ ರಾಜಪುತ್ರರ ಮೇಲೆ ಯುದ್ಧಕ್ಕೆ ಪ್ರೇರಿಸಿದೆನೇಕೆ? ವಿಮಲಾದೇವಿಯ ಪತ್ರವನ್ನು ನೋಡಿ ನಾನು ಸುಮ್ಮನಿರದೆ ರೋಷವನ್ನು ವಹಿಸಿ ಬಾದಶಹರನ್ನು ಕೆರಳಿಸಿದುದರಿಂದಲ್ಲವೇ ನನಗೀ ಶಿಕ್ಷೆಯಾಯಿತು" ಎಂದು ಹಲುಬುತ್ತಿದ್ದಳು.

ವಿಮಲೆಯು ಉದಯಪುರಿಯ ದುರವಸ್ಥೆಯನ್ನು ನೋಡಿ ಕನಿಕರಪಟ್ಟು ರಾಜಪುತ್ರರನ್ನು ಧಿಕ್ಕರಿಸಿ, ಸ್ತ್ರೀಯರನ್ನು ಹಿಂಸಿಸುವುದು ಪರಾಕ್ರಮವೆಂದು ಭಾವಿಸುವವರು ಕ್ರೂರರೆಂದೂ ನಿಜವಾದ ಶೂರರೆನಿಸದೆ ಹೇಡಿಗಳೆನಿಸುವರೆಂದೂ ಶತ್ರುಪಕ್ಷದ ಸ್ತ್ರೀಯರನ್ನು ಕೂಡ ಗೌರವಬುದ್ಧಿಯಿಂದ ನೋಡುವುದೂ ಸಮಾನಸ್ಕಂದರಾದ ಶತ್ರುಗಳೊಡನೆ ಪ್ರತ್ಯಕ್ಷವಾಗಿ ಹೋರಾಡುವುದೂ ನಿಜವಾದ ಪರಾಕ್ರಮವೆಂದೂ ಔರಂಗಜೇಬಿನಲ್ಲಿ ಪರಾಕ್ರಮವನ್ನು ತೋರಿಸಬೇಕೇ ಹೊರತು, ಅವನ ರಾಣಿವಾಸವನ್ನು ಹಿಂಸಿಸುವುದು ಸರಿಯಲ್ಲವೆಂದೂ ಸೈನಿಕರಿಗೆ ಬೋಧಿಸಿ, ದಾಸೀಜನರೊಡಗೂಡಿದ್ದ ಬಾದಶಹನ ಜನಾನಾವನ್ನು ಸಮೀಪದ ಗುಡಾರದಲ್ಲಿರಿಸಿ ಸುತ್ತಲೂ ಕಾವಲಿರಿಸಿ, ಅವರಿಗೆ ಬೇಕಾದ ಆಹಾರಸಾಮಗ್ರಿಗಳನ್ನೊದಗಿಸುವಂತೆ ಏರ್ಪಡಿಸಿದಳು.

ಜನಾನಾದವರು ರಾಜಪುತ್ರರ ಸೆರೆಯಿಂದ ತಮ್ಮನ್ನು ಬಿಡಿಸಿದುದಲ್ಲದೆ ತಮಗಿಷ್ಟು ಉಪಕಾರಮಾಡಿದವರಾರೋ ಎಂಬ ಕುತೂಹಲದಿಂದ ವಿಚಾರಿಸಲು, ಮಹಾರಾಣಿ ವಿಮಲಾದೇವಿಯೆಂದು ತಿಳಿದು, ಅಂತಹ ಅನುಕಂಪನ ಶೀಲಳಾದ ವಿಮಲಾದೇವಿಯಲ್ಲಿ ತಾನು ಚಿಂತಿಸಿದ ದ್ರೋಹಕ್ಕಾಗಿ ತನ್ನನ್ನು ತಾನೇ ಧಿಕ್ಕರಿಸಿಕೊಂಡಳು. ಉದಯಪುರಿಯ ದಾಸೀಜನರು ವಿಮಲೆಯ ಔದಾರ್ಯಗುಣವನ್ನು ಕೊಂಡಾಡಿದರು.

ಇತ್ತ ರಾಜಸಿಂಹನು ಮೊಗಲ್‌ಸೇನೆಯ ದೈನ್ಯಾವಸ್ಥೆಯನ್ನು ನೋಡಿ ಕನಿಕರಪಟ್ಟನಾದರೂ ಔರಂಗಜೇಬನನ್ನು ಪೂರ್ಣವಾಗಿ ಸೋಲಿಸಿದ ಹೊರತು ಆತನಲ್ಲಿ ದಯೆಯನ್ನು ತೋರಬಾರದೆಂದು ನಿಶ್ಚಯಿಸಿದನು. ಆದುದರಿಂದ ಬಾದಶಹನಿಗೆ ಹೀಗೆಂದು ಬರೆದು ಕಳುಹಿದನು.—

"ತಮ್ಮ ಇಷ್ಟಬಂದಂತೆ ಕ್ರೂರಕೃತ್ಯಗಳನ್ನು ಮಾಡುವುದು ಅತ್ಯಂತ ಶೋಚನೀಯವು. ನೀವು ಚಕ್ರವರ್ತಿಗಳಾದರೂ ರಾಜಪುತ್ರರು ಬಲಹೀನರೆಂದು ಭಾವಿಸಬಾರದು. ಹೇಯವಾದ ಜಿಜಿಯಾ ಕಂದಾಯವನ್ನು ಹಾಕಿ, ಪ್ರಜೆಗಳಿಗೆ ಅತ್ಯಂತ ಕಷ್ಟಗಳನ್ನುಂಟುಮಾಡಿರುವಿರೆಂದು ಕೇಳಿರುವೆನು ಈ ಕುತ್ಸಿತಭಾವನೆಯೆಂದಿಗಾದರೂ ನಾಶವಾಗಬಹುದೆಂದು ಈವರೆಗೆ ನಿರೀಕ್ಷಿಸಿದೆನು. ಆದರೂ ತಮಗೆ ಸನ್ಮಾರ್ಗವೆಂಬುದು ಗೋಚರವಾಗಿಲ್ಲ ಪೃಥವೀಸಿಂಗನನ್ನು ಕೊಂದಮಾತ್ರದಿಂದ ಜೋಧಪುರವು ಕೈವಶವಾಗುವುದೆಂದೂ ರಾಜಪುತ್ರರೆಲ್ಲರೂ ಹೀನಸತ್ವರಾಗಿ ಬಳೆತೊಟ್ಟುಕೊಂಡಿರುವರೆಂದೂ ಭಾವಿಸಿದ್ದರಲ್ಲವೇ? ಆಗಲಿ, ಜೋಧಪುರವಂಶಕ್ಕೇ ನೀವು ಮಾಡಿದ ಅಪಕಾರಗಳನ್ನು ಈಗಲಾದರೂ ಸ್ಮರಿಸಿಕೊಂಡು ಅದಕ್ಕಾದ ಪ್ರಾಯಶ್ಚಿತ್ತವಿದೆಂದು ತಿಳಿದು ಇನ್ನಾದರೂ ಬುದ್ಧಿಕಲಿತುಕೊಳ್ಳುವಿರೋ ಹೇಗೆ? ಬಡಬ್ರಾಹ್ಮಣರನ್ನು ಹಿಂಸಿಸಿ, ಜಿಜಿಯಾ ಕಂದಾಯವನ್ನು ಪಡೆಯುತ್ತಿದ್ದುದಕ್ಕೆ ಈಗ ಇಲ್ಲಿ ಸೈನ್ಯದೊಡನೆ ಅಹಾರವಿಲ್ಲದೆ ನರಳುವುದೇ ಪ್ರತಿಫಲವೆಂದು ತಿಳಿ

ಯಬಲ್ಲಿರಾ ? ಈಗಲೂ ನಿಮಗೆ ನಿಮ್ಮ ಡಿಲ್ಲೀ ನಗರದ ಮೇಲೆ ಆಶೆಯಿದ್ದರೆ ಈ ಮುಂದೆ ಹೇಳುವ ಕರಾರುಗಳಿಗೆ ಒಪ್ಪಬೇಕಾಗಿದೆ.—

೧. ಈಗ ನಿಮ್ಮ ಸ್ವಾಧೀನದಲ್ಲಿರುವ ರಜಪುತ್ರಸ್ಥಾನಗಳನ್ನು ಅವರವರ ಸ್ವಾಧೀನಕ್ಕೆ ಒಪ್ಪಿಸಿಬಿಡಬೇಕು,

೨. ಮಹಮ್ಮದೀಯಮತಕ್ಕೆ ಸೇರಬೇಕೆಂದು ಹಿಂದುಗಳನ್ನು ಬಾಧೆಪಡಿಸಬಾರದು,

೩. ಜಿಜಿಯಾ ಕಂದಾಯವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು,

೪. ಕ್ಷತ್ರಿಯ ಕನ್ಯೆಯರನ್ನು ಬಲವಂತವಾಗಿ ವಿವಾಹಮಾಡಿಕೊಳ್ಳಕೂಡದು.

ಈ ನಿಬಂಧನೆಗಳಿಗೆ ಸಮ್ಮತಿಸಿಡ ಪಕ್ಷದಲ್ಲಿ ನಿಮ್ಮನ್ನು ನಿಮ್ಮ ಬೇಗ ಮರೊಡನೆ ಡಿಲ್ಲೀ ನಗರಕ್ಕೆ ಹೋಗಗೊಡುವೆವು. ಇಲ್ಲದಿದ್ದರೆ, ನಿಮಗೆ ಈ ಕಣಿವೆಯೇ ಶಾಶ್ವತವಾದ ನಿವಾಸಸ್ಥಾನವೆಂಬುದು ಖಚಿತವಾಗಿರಲಿ ! ”

ಈ ರೀತಿಯಾಗಿ ಬರೆದು ಆ ಪತ್ರವನ್ನು ಬಬ್ಬ ಮಹಮ್ಮದೀಯ ಭಟನ ಕೈಯಲ್ಲಿ ಕೊಟ್ಟು ಕಳುಹಿದನು. ಅವನು ಅದನ್ನು ಒಡನೆಯೇ ಬಾದಶಹನಿಗೆ ಮುಟ್ಟಿಸಿದನು. ಪತ್ರವನ್ನು ನೋಡಿದ ಮಹಮ್ಮದೀಯ ಸೈನಿಕರು ತಮ್ಮ ಕಷ್ಟವು ನಿವಾರಣವಾದೀತೆಂದು ಹರ್ಷಪಟ್ಟರು. ಆದರೇನು ? ಅದನ್ನು ನೋಡಿದ ಕೂಡಲೇ ಔರಂಗಜೇಬನು ಆಗ್ರಹವ್ಯಗ್ರನಾಗಿ ಅದನ್ನು ತಂದಿತ್ತ ಭಟನ ತಲೆಯನ್ನು ಕಡಿದುಹಾಕಿದನು. ಇವನ ಈ ಕ್ರೂರ ಕೃತ್ಯವನ್ನು ಕೇಳಿ ರಾಜಸಿಂಹನು ಕಸಿಕರವನ್ನು ತೊರೆದು ಮತ್ತೆ ಮೊಗಲರೊಡನೆ ಯುದ್ಧಮಾಡಲು ಅಪ್ಪಣೆಯಿತ್ತನು. ರಾಜಪುತ್ರರೆಲ್ಲರೂ ಸಮರ ಕೋಲಾಹಲವನ್ನು ಮಾಡುತ್ತ ಶತ್ರುಗಳ ಮೇಲೆ ಶರವರ್ಷವನ್ನು ಸುರಿಸಿದರು.

ಅತ್ತ ನಯನಪಾಲನು ಶಿವಸಿಂಗನೊಡನೆಯೂ ಭಿಲ್ಲರೊಡನೆಯೂ ಸೇರಿ ಯುದ್ಧಮಾಡುತ್ತಿರಲು ಒಬ್ಬ ಫಕೀರನು ಎಲ್ಲಿಂದಲೋ ಬಂದು ಅವರನ್ನು ಸೇರಿದನು. ಆತನನ್ನು ನೋಡಿ ನಯನಪಾಲನು ಆಶ್ಚರ್ಯದಿಂದ— "ಮಹಾತ್ಮಾ! ನೀನು ಯಾವಾಗಬಂದೆ?" ಎಂದು ಕೇಳಿ ಶಿವಶಿಂಗನನ್ನು ಕುರಿತು—"ಮಿತ್ರನೆ! ಈ ಮಹಾನುಭಾವನೇ ದುರ್ಗಾದಾಸ ಇಂದಿರಾದೇವಿಯರಿಗೆ ಪ್ರಾಣದಾನಮಾಡಿದ ಪುಣ್ಯಪುರುಷನು!" ಎಂದು ಹೇಳಿದನು. ಶಿವಸಿಂಗನು ಅತ್ಯಾನಂದಹೊಂದಿ ಆತನನ್ನು ಬಹು ವಿಧವಾಗಿ ಶ್ಲಾಘಿಸಿದನು. ಅನಂತರ ನಯನಪಾಲನು ಶಿವಸಿಂಗನೊಡನೆ ಫಕೀರನನ್ನು ಜೊತೆಗೊಂಡು ಸ್ವಲ್ಪದೂರಹೋಗಿ ಅತನನ್ನು ಕುರಿತು ಹೀಗೆ ಸಂಭಾಷಿಸಿದನು:—

ನಯನ—ಮಹಾತ್ಮಾ! ನೀನು ಇಲ್ಲಿಗೆ ಬಂದ ಕಾರಣವೇನು?

ಫಕೀರ—ರಾಜಪುತ್ರರಿಗೆ ಸಹಾಯವಾಗ ಯುದ್ಧಮಾಡಬೇಕೆಂದು ಬಂದೆನು.

ನಯನ—ನಾವೆಲ್ಲರೂ ಇರುವಾಗ ನಿನಗೇಕೆ ಪ್ರಯಾಸ? ನಿನಗೆ ಯುದ್ಧಮಾಡುವುದಕ್ಕೆ ಬರುವುದೇ?

ಫಕೀರ—ಅಯ್ಯಾ! ಪ್ರಯಾಸವೇನಿದೆ? ನಮ್ಮಂಥವರಿಗೆ ಪರೋಪಕಾರವೇ ವ್ರತವು. ಇಷ್ಟೇಅಲ್ಲ ಲೋಕದಲ್ಲಿರುವ ಸರ್ವವಿಧ ಸೌಖ್ಯವನ್ನೂ ನಾನು ಅನುಭವಿಸಿ ತೃಪ್ತನಾಗಿರುವುದರಿಂದ ಪ್ರಾಣದ ಮೇಲೆ ನನಗೀಗ ಅಸೂಯೆಯುಂಟಾಗಿರುವುದು. ಯುದ್ಧದಲ್ಲಿ ಸತ್ತವರಿಗೆ ವೀರಸ್ವರ್ಗವು ಪ್ರಾಪ್ತವಾಗುವುದರಿಂದ ನಾನು ಈಗ ಶತ್ರುಗಳೊಡನೆ ಹೋರಾಡಿ ಪ್ರಾಣಬಿಡುವ ಅಪೇಕ್ಷೆಯಿಂದ ಬಂದಿರುವೆನು,

ಶಿವಶಿಂಗ ಫಕೀರರಾದ ತಾವು ಯುದ್ಧಮಾಡುವ ಅವಶ್ಯವಿಲ್ಲವಷ್ಟೆ?

ಪಕೀರ—ಹಾಗೆಂದು ಸುಮ್ಮನಿರುವಂತಿಲ್ಲ. ವಿಧರ್ಮಿಗಳೊಡನೆ ಹೋರಾಹೋರಿಯಿಂದ ಯುದ್ಧಮಾಡಿ ನನ್ನ ಭುಜಬಲ ಪರಾಕ್ರಮಗಳನ್ನು

ಲೋಕಕ್ಕೆ ಪ್ರಕಟಗೊಳಿಸುವೆನೆಂದು ಪ್ರತಿಜ್ಞೆ ಮಾಡಿರುವೆನು. ಅದರಂತೆ ನಡೆಯದಿದ್ದರೆ ಗತಿಯಿಲ್ಲ. ಈ ಸಮಯದಲ್ಲಿ ಯುದ್ಧಮಾಡುವುದಕ್ಕೆ ನನಗಾರೂ ಅಡ್ಡಿಯಾಗುವಂತಿಲ್ಲ.

ಎಂದು ಹೇಳಿ ಫಕೀರನು ಆಗಲೇ ತನ್ನ ಫಕೀರನ ವೇಷವನ್ನು ತೊರೆದು ರಾಜಪುತ್ರವೀರನಂತೆ ಉಡುಪನ್ನು ಧರಿಸಿ ಪ್ರಚಂಡ ಮಾರ್ತಾಂಡನಂತೆ ಪ್ರಕಾಶಿಸುತ್ತ ಯುದ್ಧರಂಗವನ್ನು ಸೇರಿ ಅಸಹಾಯಶೂರನಾಗಿ ಮೊಗಲರ ಸೈನ್ಯವನ್ನು ಚದರಿಸಿ ಶತ್ರುಪಕ್ಷದವರೂ ತಲೆದೂಗುವಂತೆ ಪರಾಕ್ರಮದಿಂದ ಯುದ್ಧಮಾಡುತ್ತಿರಲು ರಾಜಪುತ್ರರೂ ಭಿಲ್ಲರೂ ಈತನನ್ನು ನೋಡಿ ಆಶ್ಚರ್ಯಪಟ್ಟರು. ಈತನಾರೋ-ಎಲ್ಲಿಂದ ಬಂದನೋ-ಅದನ್ನಾರೂ ತಿಳಿಯಲಾರದೆ ಕುತೂಹಲದಲ್ಲಿದ್ದರು. ಇಂದಿರಾ ದುರ್ಗಾದಾಸ ಇವರಿಬ್ಬರು ಮಾತ್ರ ಪೂರ್ವವೃತ್ತಾಂತವನ್ನು ಸ್ಮರಿಸಿ, ಅವನಾರಾಗಿರಬಹುದೆಂದು ಸಂದೇಹಪಟ್ಟರು.

---

## ಮೂವತ್ತೇಳನೆಯ ಅಧ್ಯಾಯ.

---

ಆ ಮರುದಿನ ರಾಜಪುತ್ರರಿಗೂ ಮೊಗಲರಿಗೂ ಘೋರವಾದ ಯುದ್ಧವು ನಡೆಯಿತು. ನಯನಪಾಲನು ಆಗ್ರಹದಿಂದ ಬಾದಶಹನ ಮೇಲಿನ ಹಗೆಯನ್ನು ತೀರಿಸಿಕೊಳ್ಳಲು, ಅವಿಶ್ರಾಂತನಾಗಿ ಭಿಲ್ಲರಿಗೆ ಪ್ರೋತ್ಸಾಹವನ್ನುಂಟುಮಾಡುತ್ತ ಅದ್ವಿತೀಯ ಶೌರ್ಯದಿಂದ ಶತ್ರುಸೈನ್ಯವನ್ನು ನಿಗ್ರಹಿಸುತ್ತಿದ್ದನು. ಕಣಿವೆಯೊಳಗಿದ್ದ ಮೊಗಲರು ರಾಜಪುತ್ರರಿಗೂ ಭಿಲ್ಲರಿಗೂ ಪ್ರಯೋಗಿಸುತ್ತಿದ್ದ ಆಯುಧಗಳನ್ನು ಅವರು ಸುಲಭವಾಗಿಯೇ ತಡೆಯುತ್ತಿದ್ದುದರಿಂದ ಇಂತಹ ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದೆವೆಂಬ ರೋಷದಿಂದ

ಪರವಶರಾದ ಮೊಗಲರು ಹಿಂದು ಮುಂದೆ ನೋಡದೆ ರಾಜಪುತ್ರರನ್ನು ಕಡಿದುಹಾಕುತ್ತ ಬಂದರು. ಮಹಮ್ಮದೀಯರ ರೋಷಾಗ್ನಿಗೆ ಅನೇಕ ರಾಜಪುತ್ರರೂ ಭಿಲ್ಲರೂ ಆಹುತಿಯಾದರು. ಅವರ ತೀಕ್ಷ್ಣವಾದ ಖಡ್ಗಹತಿಯಿಂದ ನಯನಪಾಲನು ವೀರಸ್ವರ್ಗವನ್ನು ಪೊಂದಿದನು. ತತ್ಕ್ಷಣವೇ ಶಿವಸಿಂಗನು ಕೆಲವುಮಂದಿ ಭಿಲ್ಲರೊಡನೆ ಬಂದು ಆ ಕಳೇಬರವನ್ನು ನೋಡಿ ಮೊದಲು ರಾಜಪುತ್ರರಿಗೆ ಅನೇಕ ವಿಧವಾಗಿ ದ್ರೋಹವನ್ನೆಣಿಸಿದವನಾಗಿದ್ದರೂ ಪಶ್ಚಾತ್ತಾಪಪ್ರಾಯಶ್ಚಿತ್ತದಿಂದ ಪರಿಶುದ್ಧನಾಗಿ ಇಂದಿನ ವಿಜಯಕ್ಕೆ ಕಾರಣನಾಗಿ ವೀರಸ್ವರ್ಗವನ್ನು ಹೊಂದಿದನೆಂದು ಶ್ಲಾಘಿಸಿ, ಆತನ ಕಳೇಬರವನ್ನು ರಾಜಪುತ್ರರ ಕೈಯಿಂದಲೇ ತೆಗೆಯಿಸಿ, ರಾಜಗೌರವದಿಂದ ಸಂಸ್ಕಾರವಾಗುವಂತೆ ಏರ್ಪಡಿಸಿದನು.

ಆ ದಿನದ ಮಹಮ್ಮದೀಯರ ದುಃಸ್ಥಿತಿಯನ್ನು ಹೇಳಲಾಗುವಂತಿಲ್ಲ. ರಾಜಸಿಂಹನಿಗೆ ಕನಿಕರವುಂಟಾದರೂ ಬಾದಶಹನ ಮೂರ್ಖತೆಯಿಂದ ಅದು ಹಾಗೆಯೇ ಅಡಗಿತು. ಮೂರ್ಖನಾದ ಬಾದಶಹನು ಮುಂದಾಲೋಚನೆಯಿಲ್ಲದೆ ಸಂಧಿಯನ್ನು ನಿರಾಕರಿಸಿದನು; ಸೈನಿಕರೊಡನೆ ಕಣಿವೆಯ ದಾರಿಯಲ್ಲಿ ಸೆರೆಯಾಗಿಸಿಕ್ಕಿ ನಿದ್ರಾಹಾರಗಳಿಗೆ ಅವಕಾಶವಿಲ್ಲದೆ ಪ್ರಾಣಬಿಡುವ ದುರ್ಗತಿಗೆ ಗುರಿಯಾದನು. ಒಂದೆಡೆ ಹಸಿವು, ಬಾಯಾರಿಕೆಗಳ ಬಾಧೆ; ಮತ್ತೊಂದೆಡೆ, ಜನಾನಾದವರ ಅವಸ್ಥೆಯೇನಾಗಿರುವುದೋ ಉದಯಪುರಿಯು ಯಾವ ದುಃಖಕ್ಕೀಡಾಗಿರವಳೋ—ಎಂಬ ಚಿಂತೆ; ಇನ್ನೊಂದೆಡೆ ಹೊರಟುಗಿಲ್ಲದೆಯೂ ಛಳಿಯನ್ನು ತಡೆಯಲಾರದೆಯೂ ಸಂಕಟಪಡುತ್ತಿದ್ದ ಸೈನಿಕರ ಬೈಗುಳಗಳೂ; ಮತ್ತೊಂದುಕಡೆ ಇಕ್ಕಟ್ಟಾದ ಕಣಿವೆಯಲ್ಲಿ ರಾಶಿರಾಶಿಯಾಗಿ ಬಿದ್ದಿರುವ ಹೆಣಗಳ ದುರ್ಗಂಧವು—ಹೀಗೆ ನರಕಯಾತನೆಯನ್ನು ಅನುಭವಿಸುತ್ತ ಬಹುಕಷ್ಟದಿಂದ ಎರಡು ರಾತ್ರಿ ಎರಡು ಹಗಲುಗಳನ್ನು ಕಳೆದನು.

ಮೂರನೆಯ ದಿನವೂ ರಾಜಪುತ್ರರು ಯುದ್ಧಕ್ಕೆ ಪ್ರಾರಂಭಿಸಿದರು. ಮೊಗಲರು ತಮ್ಮ ಶಕ್ತಿಮೀರಿ ತುಪಾಕಿಗಳನ್ನೂ ಕತ್ತಿಗಳನ್ನೂ ಪ್ರಯೋಗಿಸುತ್ತಿದ್ದರು ಮೊದಲನೆಯ ದಿನ ಯುದ್ಧಕ್ಕೆ ಬಂದಿದ್ದ ಫಕೀರನು ಇಂದು ಶತ್ರುಗಳೊಡನೆ ಮಾಡುತ್ತಿದ್ದ ಯುದ್ಧವನ್ನು ನೋಡಿ ರಾಜಪುತ್ರರೂ ಭಿಲ್ಲರೂ ಆಶ್ಚರ್ಯಮಗ್ನರಾದರು. ರಾಜಪುತ್ರರಿಗೆ ಸಹಾಯಮಾಡಬೇಕೆಂದು ದೇವಸೇನಾಪತಿಯಾದ ಕುಮಾರಸ್ವಾಮಿಯೇ ಈ ರೂಪದಿಂದ ಬಂದಿರಬೇಕೆಂದು ಭಾವಿಸಿ ಆತನನ್ನೇ ನೋಡುತ್ತಿದ್ದರು. ಶತ್ರುಗಳ ಏಟುಗಳಿಂದ ಶರೀರವೆಲ್ಲ ರಕ್ತಪ್ರವಾಹದಿಂದ ಕೂಡಿದ್ದರೂ ಅದನ್ನು ಗಣಿಸದೆ ಅಸಮಾನ ಪರಾಕ್ರಮದಿಂದ ಯುದ್ಧಮಾಡುತ್ತಿದ್ದ ಆತನಿಗೆ ಹಿಂದಿನಿಂದ ಹೊಡೆಯಲ್ಪಟ್ಟ ಒಂದು ಕತ್ತಿಯ ಏಟು ಕುತ್ತಿಗೆಯ ಎಡಗಡೆಗೆ ತಗುಲಿತು. ತತ್‌ಕ್ಷಣವೇ ಆತನು ಆಯುಧ ಸಹಿತನಾಗಿ ಕೆಳಗೆ ಬಿದ್ದು ಮೂರ್ಛಿತನಾದನು. ಆತನ ಬಳಿಯಲ್ಲಿಯೇ ನಿಂತು ಯುದ್ಧಮಾಡುತ್ತಿದ್ದ ಶಿವಸಿಂಗನು ಆಕ್ಷಣದಲ್ಲಿಯೇ ಬಂದು ಉಪಚರಿಸಿ ನೋಡಿದನು ; ಫಕೀರನ ಜೀವವು ಸಂಶಯವನ್ನೇ ಹುಟ್ಟಿಸಿತು. ಆದರೂ ಅಚಲೇಶ್ವರನಲ್ಲಿ ಭರವಸೆಯಿಟ್ಟು ಕೆಲವು ಮಂದಿ ಭಿಲ್ಲರಿಂದ ಆತನನ್ನು ಮೆಲ್ಲನೊಯ್ದು ಒಂದು ಮರದ ನೆರಳಿನಲ್ಲಿ ಮಲಗಿಸಿ ಒಬ್ಬ ಭಿಲ್ಲನನ್ನು ನೋಡಿಕೊಳ್ಳುತ್ತಿರುವಂತೆ ನೇಮಿಸಿ ತಾನು ಯುದ್ಧಕ್ಕೆ ಹೊರಟು ಹೋದನು.

ಇಷ್ಟರಲ್ಲಿ ಮಾರ್ತಾಂಡನು ನಭೋಮಂಡಲಮಧ್ಯವರ್ತಿಯಾಗಿ ಅತ್ಯಂತ ತೀಕ್ಷ್ಣಕಿರಣಗಳಿಂದ ಜಗತ್ತನ್ನೇ ತಪಿಸುತ್ತಿದ್ದನು. ಸೂರ್ಯಕಿರಣಗಳಿಂದ ಆ ಕಣಿವೆಯ ಕಲ್ಲುಗಳೆಲ್ಲವೂ ಕಾದು ಅಗ್ನಿಕಣದಂತೆ ಸುಡುತ್ತಿದ್ದುವು. ಇತ್ತ ರಾಜಪುತ್ರರ ತೀಕ್ಷ್ಣಶರಪರಂಪರೆಗಳ ಘಾತದಿಂದಲೂ ಅತ್ತ ಸೂರ್ಯಕಿರಣದ ತೀಕ್ಷ್ಣತೆಯಿಂದಲೂ ತಪಿಸಿ ಕಡೆಗೆ ಬಾದಶಹನ ಭಯವನ್ನೂ ಬಿಟ್ಟು—“ಸರ್ಕಾರ್, ಹೀಗೆಯೇ ಇನ್ನೂ ಎರಡು ಗಂಟೆಯ ಕಾಲ ಯುದ್ಧ ಮಾಡಿದರೆ ನಮ್ಮಲ್ಲಿ ಒಬ್ಬರಾದರೂ ಉಳಿಯಲಾರರು. ಇನ್ನು ನಮ್ಮಿಂದ ಯುದ್ಧಮಾಡುವುದಕ್ಕಾಗದು” ಎಂದು ಹೇಳಿದರು. ಬಾದಶ

ಹನ ಆಗ್ರಹಕ್ಕೆ ಮೇರೆಯೇ ಇಲ್ಲವಾಯಿತು. ಆದರೂ ಏನು ಮಾಡಬಹುದು? ರೋಷವನ್ನು ತಾನೇ ಸಂವರಿಸಿಕೊಂಡನು ; ಜೀವಿಸಿದ್ದರೆ ಎಂದಾದರೂ ರಾಜಪುತ್ರರಮೇಲಿನ ಹಗೆತನವನ್ನು ತೀರಿಸಿಕೊಳ್ಳುವೆನೆಂದು ನಿರ್ಧರಿಸಿ, ಸೈನಿಕರ ದುರ್ಬಲತೆಯನ್ನು ನೋಡಿ ಕನಿಕರಪಟ್ಟು ರಾಜಸಿಂಹನಿಗೆ ಸಂಧಿಮಾಡಿಕೊಳ್ಳಲು ಒಡಂಬಟ್ಟಿರುವುದಾಗಿ ಹೇಳಿ ಕಳುಹಿಸಿದನು. ರಾಜಸಿಂಹನು ಸಂತೋಷದಿಂದ ಮೊಗಲರೆಲ್ಲರೂ ತಮ್ಮ ತಮ್ಮ ಆಯುಧಗಳನ್ನೆಲ್ಲಾ ಕಣಿವೆಯಲ್ಲಿಯೇ ಬಿಟ್ಟು ನಿರಾಯುಧರಾಗಿ ಹೊರಗೆ ಬರಬೇಕೆಂದೂ ಡಿಲ್ಲೀನಗರಕ್ಕೆ ಹೋಗುವಾಗ ಮಾರ್ಗಮಧ್ಯದಲ್ಲಿ ಅರಣ್ಯಜಂತುಗಳನ್ನು ಅಕಾರಣವಾಗಿ ಹಿಂಸೆಮಾಡಕೂಡದೆಂದೂ ಬಾದಶಹನಿಗೆ ಹೇಳಿಕಳುಹಲು ಅದಕ್ಕೂ ಆತನು ಸಮ್ಮತಿಸಬೇಕಾಯಿತು. ಹೀಗೆ ಒಪ್ಪಂದವು ನಡೆದಮೇಲೆ ರಾಜಸಿಂಹನು ಕಣಿವೆಯ ದ್ವಾರದಲ್ಲಿ ನಿಂತು ಯುದ್ಧಮಾಡುತ್ತಿದ್ದ ಭಿಲ್ಲರನ್ನು ಸರಿದು ನಿಲ್ಲುವಂತೆ ಕಟ್ಟುಮಾಡಿ ಮೊಗಲರು ಒಬ್ಬೊಬ್ಬರಾಗಿ ಹೊರಗೆ ಬರುವಂತೆ ಸೂಚಿಸಿದನು. ಅನ್ನಾಹಾರಗಳಿಲ್ಲದೆ ಬಾಡಿ ಬೆಂಡಾಗಿದ್ದ ಮೊಗಲರು ಒಣಗಿದ ಮೋರೆಯನ್ನು ತಗ್ಗಿಸಿಕೊಂಡು ಬರಿಗೈಯಿಂದ ಒಬ್ಬೊಬ್ಬರಾಗಿ ಬರುತ್ತಿದ್ದುದನ್ನು ರಾಜಪುತ್ರರೂ ಭಿಲ್ಲರೂ ದುರ್ಗಾದಾಸಶಿವಸಿಂಗರೂ ನೋಡಿ ಅವರ ಕ್ರೂರಕರ್ಮಕ್ಕೆ ಫಲವೆಂದು ಹೇಳುತ್ತಿದ್ದರು. ಶ್ಯಾಮಲಪಂಡಿತನ ವಿನೋದಕ್ಕೆ ತಡೆಯೇ ಇಲ್ಲವಾಯಿತು. "ಹೆಬ್ಬುಲಿ ಬೋನಿಗೆ ಸಿಕ್ಕಿ ಇಲಿಯಂತಾಯಿತು. ಬಲೆ, ವಿನೋದ!" ಎಂದು ಹಾಡಿ ಹಾಡಿ ಕುಣಿಯುತ್ತ ಸುತ್ತಲಿದ್ದವರನ್ನು ನಗಿಸುತ್ತಿದ್ದನು.

ಸೈನಿಕರೆಲ್ಲರೂ ಹೊರಗೆ ಬಂದಬಳಿಕ ಬಾದಶಹನು ಆಪ್ರದೇಶದಲ್ಲಿಯೇ ಬಿಡಾರವನ್ನು ಹಾಕಿಸಿ, ಎಲ್ಲರೂ ಆ ದಿನ ಅಲ್ಲಿಯೇ ವಿಶ್ರಮಿಸಿಕೊಳ್ಳಬೇಕೆಂದು ಆಜ್ಞಾಪಿಸಿದನು. ಬಾದಶಹನು ವಿಶ್ರಾಂತಿ ಹೊಂದುತ್ತಿರುವಷ್ಟರಲ್ಲಿ ರಾಜಸಿಂಹನು ಬಾದಶಹನ ಜನಾನಾವನ್ನು ಕೆಲವರು ಭಿಲ್ಲರ ಕಾವಲಿನೊಡನೆ ಅಲ್ಲಿಗೆ ಕಳುಹಿಕೊಟ್ಟನಲ್ಲದೆ ಸೈನ್ಯದವರಿಗೂ ಬಾದಶಹನಿಗೂ ಬೇ

ಕಾದಷ್ಟು ಆಹಾರ ಪದಾರ್ಥಗಳನ್ನು ಕಳುಹಿದನು. ರಾಜಸಿಂಹನು ತನ್ನ ಶತ್ರುಗಳಲ್ಲಿ ಕೂಡ ತೋರಿಸಿದ ಔದಾರ್ಯವನ್ನು ನೋಡಿ ಆತನ ಸದ್ಗುಣವನ್ನು ಶತ್ರುಪಕ್ಷದವರೂ ಕೊಂಡಾಡಿದರು. ಔರಂಗಜೇಬನಿಗೆ ಮಾತ್ರ ಮನಸ್ಸಮಾಧಾನವಿರಲಿಲ್ಲ. ಆದರೂ ಆವೇಳೆಯಲ್ಲಿ ಏನು ಮಾಡುವುದಕ್ಕೂ ಅವನಿಗೆ ಸಾಧ್ಯವಿರಲಿಲ್ಲ. ಪಾಪ, ದ್ವೇಷವನ್ನು ತನ್ನ ಹೃತ್ಕೋಶದಲ್ಲಿಯೇ ಅಡಗಿಸಿಕೊಂಡು ಮಾರನೆಯ ದಿನವೇ ಸೈನ್ಯಸಮೇತನಾಗಿ ಡಿಲ್ಲೀನಗರಕ್ಕೆ ಹೊರಟನು. ಕುಟಿಲನಾದ ಔರಂಗಜೇಬನು ಹೊರಟುಹೋಗುವವರೆಗೂ ರಾಜಸಿಂಹನು ಸೈನ್ಯದೊಡನೆ ಜಾಗರೂಕನಾಗಿದ್ದು ಅವನು ಹೊರಟುಹೋದ ಒಳಿಕ ಸೈನ್ಯಗಳಿಗೆ ವಿಶ್ರಾಂತಿಹೊಂದಲು ಅಪ್ಪಣೆಯಿತ್ತನು.

---

## ಮೂವತ್ತೊಂದನೆಯ ಪ್ರಕರಣ

---

(ಸುಖಾಗಮನ)

ಅಚಲೇಶ್ವರಾಲಯದಲ್ಲಿ ವೈಕುಂಠಯೋಗಿಯನ್ನು ನೋಡಿದುದು ಮೊದಲು, ಇಂದಿರೆಯು ವೈಕುಂಠಯೋಗಿಯ ಬಳಿಯಲ್ಲಿ ಗೌರವಬುದ್ಧಿಯನ್ನಿರಿಸಿ, ಪ್ರತಿದಿನವೂ ಅಚಲೇಶ್ವರಾಲಯದಲ್ಲಿ ಯೋಗಿಯ ಈಶ್ವರಾರಾಧನೆಗೆ ಪತ್ರ ಫಲಪುಷ್ಪಗಳನ್ನೊದಗಿಸುವುದೇ ಮೊದಲಾದ ಸೇವಾಕಾರ್ಯಗಳಿಂದ ಕಾಲಕ್ಷೇಪಮಾಡುತ್ತ ಯೋಗಿಯ ಉಪದೇಶಪ್ರಭಾವದಿಂದ ತನ್ನ ಮನಃಕ್ಲೇಶವನ್ನು ಪರಿತ್ಯಜಿಸಿ ಪರಮಾರ್ಥತತ್ವವನ್ನು ಚಿಂತನಮಾಡುತ್ತಿದ್ದಳು. ಯುದ್ಧವು ಸಮಾಪ್ತಿಯಾದ ದಿನದ ಸಾಯಂಕಾಲದಲ್ಲಿ ಎಂದಿನಂತೆ ಇಂದಿರೆಯು ಅಜಿತಸಿಂಹನನ್ನೆತ್ತಿಕೊಂಡು ಅಚಲೇಶ್ವರಾಲಯಕ್ಕೆ ಬಂದು ನೋಡಿದಳು. ಯೋಗಿಯು ಅಲ್ಲಿ ಕಾಣಲಿಲ್ಲ. ಆತನು ಬರುವವರೆಗೂ ಅಜಿತಕು

ಮಾರನೊಡನೆ ಅತ್ತಿತ್ತ ತಿರುಗಾಡಿ ಬರುವೆನೆಂದು ನಡೆತರುತ್ತ. "ಯುದ್ಧದಲ್ಲಿ ರಾಜಪುತ್ರರಿಗೆ ಸಹಾಯಕನಾಗಿ ಒಂದು ಅಪ್ರತಿಮ ಶೌರ್ಯಪರಾಕ್ರಮದಿಂದ ಶತ್ರುಗಳನ್ನು ನಿಪಾತಮಾಡಿದ ಆ ಧೀರನಾರು ? ಅವನು ನಿಜವಾಗಿಯೂ ಫಕೀರನೆ ? ಫಕೀರನ ಭುಜಗಳಲ್ಲಿ ಅಷ್ಟು ಶೌರ್ಯವೂ ಹೃದಯದಲ್ಲಿ ಅಂತಹ ಧೈರ್ಯೋತ್ಸಾಹಗಳೂ ಆ ದಿವ್ಯತೇಜಸ್ಸೂ ಹೇಗೆ ಬರಬೇಕು ?" ಎಂದು ಆಲೋಚಿಸುತ್ತಲೂ ಉತ್ತಮ ರಾಜಪುತ್ರವಂಶದಲ್ಲಿ ಜನ್ಮವೆತ್ತಿ, ಅಸಾಯುಶೂರನಾದ ರಜಪೂತ ವೀರನ ಪತ್ನಿಯಾಗಿ ವೀರಮಹಿಷಿಯೆನಿಸಿದ ತಾನು ಅನುಭವಿಸಿದ ಕಷ್ಟಕ್ಲೇಶಗಳನ್ನು ನೆನೆನೆನೆದು ಕ್ಲೇಶಪಡುತ್ತಲೂ "ಪತಿಯ ತೇಜೋವಧೆಮಾಡಿದ ಪಾಪಕ್ಕೆ ಇದೇ ನನಗೆ ಪ್ರಾಯಶ್ಚಿತ್ತವಲ್ಲವೇ ? ಜಯಪರಾಜಯಗಳು ದೈವಾಧೀನವೆಂದು ತಿಳಿದಿದ್ದರೂ, ಅಭಿಮಾನದಿಂದ ಬೀಗಿದ ನಾನು ಅಂದು ನಿರ್ವಂಚನೆಯಿಂದ ಶತ್ರುಗಳೊಡನೆ ಹೋರಾಡಿ, ಕಡೆಗೆ ನಿರ್ವಾಹವಿಲ್ಲದೆ ಹಿಂತಿರುಗಿ ಬಂದ ಪತಿಯನ್ನು—ಯುದ್ಧದಲ್ಲಿ ಶ್ರಾಂತನಾಗಿ ಬಂದಿದ್ದಾತನನ್ನು—ಗೌರವಿಸುವ ಮಾತು ಹಾಗಿರಲಿ, ರಾಣಿ ಚಂದ್ರಾವತಿಯು ಯಶವಂತಸಿಂಹ ಮಹಾರಾಜನನ್ನು ಧಿಕ್ಕರಿಸಿದಂತೆ ನಾನೂ ಧಿಕ್ಕರಿಸಿದುದರ ಫಲವಲ್ಲವೇ ನನಗೀಗತಿ ಪ್ರಾಪ್ತವಾಯಿತು ? ನನ್ನ ತಿರಸ್ಕಾರ ವಾಕ್ಯಗಳಿಂದ ತಪ್ತನಾದಾಮಹಾತ್ಮನು ನನ್ನನ್ನು ಹೇಗೆ ಕ್ಷಮಿಸುವನು ? ಆಕ್ಷಣವೇ ನನ್ನ ಮೇಲಿನ ವ್ಯಾಮೋಹವನ್ನು ತೊರೆದು ಹೊರಟುಹೋದಾತನನ್ನು ಸಂದರ್ಶಿಸಲು ನಾನು ಪಟ್ಟ ಶ್ರಮವು ಇಂದಿಗಾದರೂ ಸಾಫಲ್ಯವೆನಿಸಿತೆ ? ಸ್ವಪ್ನದಲ್ಲಿ ಕೂಡ ಆತನ ಸುಕ್ಷೇಮವಾರ್ತೆಯನ್ನು ಕೇಳುವ ಭಾಗ್ಯವು ನನಗೆ ಲಭಿಸಿರುವುದೇ ? ಪತಿಭಾಗ್ಯವು ನನ್ನ ಅದೃಷ್ಟದಲ್ಲಿನ್ನು ಬರೆದಿರುವುದೆ ? ಪತಿವಿಯೋಗವನ್ನು ಹೊಂದಿ ವ್ಯಥೆಪಡುತ್ತಿರುವ ನಾರೀಜನ್ಮಕ್ಕೆ ಧಿಕ್ಕಾರವು. ನನ್ನಂತಹ ಸಾಹಸಗಾರ್ತಿಯರ ದುರ್ಜೀವನಕ್ಕೆ ಧಿಕ್ಕಾರವು ! ನಿಸ್ಸಾರವಾದೀಜನ್ಮಕ್ಕೆ ಮುಂದೆ ಗತಿಯೇನು ? ಅನಾಥೆಯರಾದ ಮಹಿಳೆಯರಿಗೆ ಜಗನ್ನಾಥನ ಭಜನೆಯೇ ಗತಿ !" ಹೀಗೆ

ಹೇಳುತ್ತ, ಮಂದಗತಿಯಿಂದ ಬರುತ್ತಿರುವಾಗ, ಸ್ವಲ್ಪ ದೂರದಲ್ಲಿ " ಊ ........ಊ........ಊ........" ಎಂದು ಒಂದು ವಿಧವಾದ ಯಾತನಾಸ್ವರವು ಕೇಳಿಸಿತು. ಇಂದಿರೆಯು ಕುತೂಹಲದಿಂದ ಸ್ವರವು ಕೇಳಿಬಂದ ಕಡೆಗೆ ಹೊರಟುಬಂದು, ಒಂದು ಮರದ ಕೆಳಗೆ ತಳಿರುಹಾಸಿಗೆಯಮೇಲೆ ಮಲಗಿ, ಶರೀರದಲ್ಲೆಲ್ಲ ಶಸ್ತ್ರಘಾಯಗಳಿಂದ ರಕ್ತವು ಸುರಿಯುತ್ತಿರಲು, ವ್ರಣದ ಯಾತನೆಯಿಂದಲೂ ಬಾಯಾರಿಕೆಯಿಂದಲೂ ಬಾಯ್ಬಿಡುತ್ತ ನರಳುತ್ತಿರುವ ವೀರಪುರುಷನೊರ್ವನನ್ನೂ ಆತನ ಬಳಿಯಲ್ಲಿ ಕುಳಿತು ಗಾಳಿಬೀಸುತ್ತಿದ್ದ ಭಿಲ್ಲನನ್ನೂ ಕಂಡು ಸಮಾಚಾರವೇನೆಂದು ಕೇಳಿದಳು. ಭಿಲ್ಲನು,— " ತಾಯಿ! ಈತನೊಬ್ಬ ರಾಜಪುತ್ರನಂತಿರುವನು. ಈತನ ಚರಿತ್ರೆ ಅತ್ಯದ್ಭುತವಾಗಿರುವುದು ಫಕೀರನ ವೇಷದಿಂದ ರಾಜಪುತ್ರರಿಗೆ ಸಹಾಯವಾಗಿ ಮೊಗಲರೊಡನೆ ಘೋರವಾದ ಯುದ್ಧ ಮಾಡಿದನು. ಶತ್ರುಗಳ ಶಸ್ತ್ರಘಾತಗಳಿಂದ ಶರೀರವೆಲ್ಲಾ ಘಾಯವಾಗಿ ಮೂರ್ಛೆಬೀಳಲು, ನಮ್ಮ ಪ್ರಭು ಶಿವಸಿಂಗಮಹಾರಾಜನು ಈತನನ್ನು ಎತ್ತಿಕೊಂಡು ಬಂದು ಇಲ್ಲಿ ಮಲಗಿಸಿ, ನನ್ನನ್ನು ಕಾವಲಿರಿಸಿ ಹೋಗಿರುವನು. " ಎಂದು ಉತ್ತರವಿತ್ತನು

ಇಂದಿರೆಯು ಕುತೂಹಲಾಧಿಕ್ಯದಿಂದ ಬಂದು ಮಲಗಿದ್ದಾತನನ್ನು ದೃಷ್ಟಿಸಿ ನೋಡಿ ಪೂರ್ವವೃತ್ತಾಂತವಾವುದನ್ನೋ ನೆನಪಿಗೆತಂದು— " ನಾನಷ್ಟು ಭಾಗ್ಯವಂತಳೆ? ಇದು ಕೇವಲ ನನ್ನ ಭ್ರಾಂತಿ!" ಎಂದು ತನ್ನಲ್ಲಿ ತಾನೇ ಆಲೋಚಿಸುತ್ತಿರುವಾಗ ಮಲಗಿದ್ದಾತನು ಬಾಯಾರಿಕೆ ಯೆಂದು ನಾಲಿಗೆಯನ್ನು ನೀಡಿ, ನೀರು-ನೀರೆಂದು ಮೆಲ್ಲನೆ ಹೇಳುತ್ತಿದ್ದುದನ್ನು ಕೇಳಿ ತತ್ಕ್ಷಣವೇ ಕಂಕುಳಲ್ಲಿದ್ದ ಅಜಿತಕುಮಾರನನ್ನು ಕೆಳಗೆ ಕುಳ್ಳಿರಿಸಿ, ಬಾಲನಮುಂದೆ ಒಂದು ಹಣ್ಣನ್ನಿರಿಸಿ, ಭಿಲ್ಲನಿಗೆ ಹೇಳಿ ನೀರನ್ನು ತರಲು ಹೊರಟುಹೋದಳು.

ಅಷ್ಟರಲ್ಲಿ ಮಹಮದೀಯ ಭಟ್ಟನೊಬ್ಬನು ಖಡ್ಗಪಾಣಿಯಾಗಿ ರೋಷಾವೇಷದಿಂದ ಪ್ರಮತ್ತನಂತಾಗಿ ಘರ್ಜಿಸುತ್ತ ಅಲ್ಲಿಗೆ ಬಂದು

ಅಟ್ಟಹಾಸದಿಂದ—“ ಎಲಾ: ನನ್ನ ತಮ್ಮನನ್ನು ಕೊಂದುದಕ್ಕೆ ನಿನಗೆ ತಕ್ಕ ಶಿಕ್ಷೆಯಾಯಿತಲ್ಲವೆ? ಆಗಲಿ, ನಿನ್ನ ಪ್ರಾಣವನ್ನೂ ಈ ಬಾಲನ ಪ್ರಾಣವನ್ನೂ ನನ್ನ ದ್ವೇಷಕ್ಕೆ ಬಲಿ ತೆಗೆದುಕೊಳ್ಳುವೆನು. “ ಎಂದು ಕರ ಖಡ್ಗವನ್ನು ತಿರಿಗಿಸುತ್ತ ಬಂದನು. ಅಷ್ಟರಲ್ಲಿ ಭಿಲ್ಲನು ಆಗ್ರಹದಿಂದೆ ದ್ದು ಬಲವಾದ ದಂಡವನ್ನು ಹಿಡಿದುಕೊಂಡು ಬಂದು ಆತನನ್ನು ಅಡ್ಡಗಟ್ಟಿ ದೃಢಮುಷ್ಟಿಯಿಂದ ಆತನ ಕೈಗಳನ್ನು ಹಿಡಿದು ಸ್ವಲ್ಪ ದೂರ ಎಳೆದುಕೊಂಡು ಅವನೊಡನೆ ದ್ವಂದ್ವಯುದ್ಧಕ್ಕೆ ನಿಂತನು. ಭಿಲ್ಲನು ಎಷ್ಟು ಹೋರಾಡಿದರೂ ಕಡೆಗೆ ಮಹಮ್ಮದೀಯನ ಖಡ್ಗಕ್ಕೆ ತುತ್ತಾಗಿ ಕೆಳಗೆ ಬಿದ್ದನು. ಮಹಮ್ಮದೀಯನು ಮತ್ತೂ ರಭಸದಿಂದ ಮಲಗಿದ್ದ ರಾಜಪುತ್ರನ ಎಳಿಗೆ ಬಂದನು. ಯಾತನೆ ಒನ್ನು ಸಹಿಸಲಾರದೆ ನರಳುತ್ತಿದ್ದ ರಾಜಪೂತವೀರನು ಶತ್ರುವಿನ ಅಟ್ಟಹಾಸವನ್ನು ಕೇಳಿ ಕಣ್ತೆರದು ನೋಡಿ ರೋಷದಿಂದ ಪರವಶನಾಗಿ ಧಿಗ್ಗನೆದ್ದು ಕಟಿಯಲ್ಲಿದ್ದ ಖಡ್ಗವನ್ನು ಹಿರಿದು ರಭಸದಿಂದ ಮೇಲೆ ಬೀಳಲು ಬರುತ್ತಿದ್ದ ಮಹಮ್ಮದೀಯನ ಕೊರಳಿಗೆ ಸರಿಯಾಗಿ ಹೊಡೆದನು. ಮಹಮ್ಮದೀಯನು ಗತಪ್ರಾಣನಾಗಿ ಕೆಳಗೆ ಬಿದ್ದನು. ರಾಜಪುತ್ರನು ಮತ್ತೆ ಆಯಾಸದಿಂದ ಮೂರ್ಛಿತನಾಗಿ ಬಿದ್ದುಬಿಟ್ಟನು.

ನೀರನ್ನು ತರಲು ಹೋಗಿದ್ದ ಇಂದಿರೆಯು ಎಲೆಗಳಿಂದ ಪಾತ್ರವನ್ನು ಮಾಡಿ ಅದರಲ್ಲಿಯೇ ನೀರನ್ನು ತುಂಬಿಕೊಂಡು ಅವಸರದಿಂದ ಬರುತ್ತಾ ಅಲ್ಲೆಲ್ಲಾ ರಕ್ತವು ಸುರಿದಿದ್ದುದನ್ನೂ ಅಲ್ಲಿ ಸತ್ತುಬಿದ್ದಿದ್ದ ಭಿಲ್ಲನ ಮತ್ತೂ ಮಹಮ್ಮದೀಯನ ದೇಹಗಳನ್ನೂ ಕಂಡು ತನ್ನ ಬಾಲಕನ ಗತಿಯೇನಾಗಿರುವುದೋ ಎಂಬ ಭಯದಿಂದ ಜಾಗ್ರತೆಯಾಗಿ ಬಂದುನೋಡಿ ಆಡುತಲಿದ್ದ ಅಜಿತಕುಮಾರನನ್ನು ಕಂಡು ಸಂತೋಷಪಟ್ಟು ರಾಜಪುತ್ರನ ಬಳಿಗೆ ಬಂದು, ಆತನ ಮುಖದ ಮೇಲೆ ನೀರನ್ನು ಎಳಿದು, ಮೊದಲು ತುಟಿಗಳನ್ನು ನೆನಿಸಿ, ಸ್ವಲ್ಪಸ್ವಲ್ಪವಾಗಿ ನೀರನ್ನು ಕುಡಿಸಿದಳು.

ಇಂದಿರೆಯ ಈ ಆದರೋಪಚಾರದಿಂದ ರಾಜಪುತ್ರನು ಚೇತರಿಸಿಕೊಂಡು ತನಗೆ ಚೈತನ್ಯವನ್ನುಂಟುಮಾಡಿದವರಾರೆಂದು ಕಣ್ತೆರೆದು ಇಂದಿರೆಯನ್ನು ಎವೆಮುಚ್ಚದೆ ನೋಡಿ, ಪ್ರೇಮಾತಿಶಯದಿಂದಲೂ ಆತುರದಿಂದಲೂ ಅವಳ ಕೊರಳಮೇಲೆ ತನ್ನ ಬಲಗೈಯಿರಿಸಿ, —"ಪ್ರಾಣೇಶ್ವರೀ! ಇಂದಿರಾ! ಇಂದಿರಾ! ಇನ್ನೂ ಗುರ್ತಿಸಲಿಲ್ಲವೆ? ನನ್ನನ್ನು ಮರತೇ ಬಿಟ್ಟೆಯಾ ಎಂದು ಕೂಗುತ್ತ ಮತ್ತೆ ಮೂರ್ಛಿತನಾದನು.

ಇಂದಿರೆಯ ಅಂತಸ್ಥವಾಗಿದ್ದ ದುಃಖವು ಹೊರಹೊಮ್ಮಿತು; ಕಣ್ಣಳಲ್ಲಿ ಸಂತತ ಧಾರೆಯಾಗಿ ನೀರು ಸುರಿದುಹೋಯಿತು. ಪತಿಯ ಶಿರವನ್ನು ತನ್ನ ತೊಡೆಯ ಮೇಲಿರಿಸಿ ಶೈತ್ಯೋಪಚಾರ ಮಾಡಿದಳು. ಬಹಳ ಹೊತ್ತಿನ ಮೇಲೆ ರೂಪಸಿಂಗನು ಎಚ್ಚತ್ತು, —"ಇಂದಿರಾ! ಈಗಲಾದರೂ ನಿನ್ನ ಪತಿಯು ವೀರಪುರುಷನೆಂದು ಸಂಭಾವಿಸುವೆಯಾ? ಹಿಂದಿನ ತಪ್ಪನ್ನು ಮನ್ನಿಸುವೆಯಾ? ಎಂದು ಪ್ರಾರ್ಥಿಸಿದನು.

ಇಂದಿರೆ:—"ನಾಥಾ! ಅನೇಕ ನಿಷ್ಠುರೋಕ್ತಿಗಳಿಂದ ದೇಶತ್ಯಾಗಿಗಳನ್ನಾಗಿ ಮಾಡಿದ ಈ ದಾಸಿಯ ಅಪರಾಧವನ್ನು ತಾವು ಕ್ಷಮಿಸಬೇಕಲ್ಲದೆ. ತಾವು ಕ್ಷಮೆಯನ್ನು ಕೋರುವುದೇಕೆ?"

ರೂಪಸಿಂಗ:—ಪ್ರಾಣೇಶ್ವರಿ! ಇನ್ನು ಚಿಂತೆಯನ್ನು ಬಿಟ್ಟುಬಿಡು, ಅಚಲೇಶ್ವರನ ಅನುಗ್ರಹದಿಂದ ಇಷ್ಟುಮಟ್ಟಿಗಾಯಿತು. ನಿನ್ನನ್ನು ನೋಡುವ ಭಾಗ್ಯವಿಲ್ಲವೆಂದು ಹತಾಶನಾಗಿದ್ದ ನನಗೆ ಮತ್ತೆ ನಿನ್ನ ಸಂದರ್ಶನವಾಯಿತು. ಜಗದ್ವಿಖ್ಯಾತವಾದ ನಿನ್ನ ಕೀರ್ತಿಯನ್ನು ಕುರಿತು ನಾನು ಅತ್ಯಂತ ಹೆಮ್ಮೆಪಡುತ್ತಿರುವೆನು. ಇದಕ್ಕೂ ಹೆಚ್ಚಾಗಿ ನಾನೇನನ್ನು ಹೇಳಲಿ?

ಇಂದಿರೆಗೆ ಪತಿಯ ಮಾತುಗಳಿಂದ ಆನಂದವೂ ಆತನ ಶರೀರದ ಘಾಯಗಳನ್ನು ನೋಡಿ ಬದುಕುವನೋ ಇಲ್ಲವೋ ಎಂಬ ಸಂಶಯವೂ ಏಕಕಾಲದಲ್ಲಿ ಉಂಟಾಗಲು ಮಾತಿಲ್ಲದೆ ನೋಡುತ್ತಿದ್ದಳು. ಪತ್ನಿಯ ಸಂದೇಹವನ್ನು ನೋಡಿ ರೂಪಸಿಂಗನು, —"ಇಂದಿರಾ! ಭಯಪಡಬೇಕಾಗಿಲ್ಲ

ಅಂದು ನೀನು ಕೋಟೆಯ ಬಾಗಿಲನ್ನು ಭದ್ರಪಡಿಸಿ ನನ್ನನ್ನು ಹಿಂದಕ್ಕೆ ಕಳುಹಿಸುದುಮೊರಗಲು, ನಾನು ನನ್ನ ಶೌರ್ಯವನ್ನು ನಿನಗೆ ಪ್ರಕಟಿಸಿದಲ್ಲದೆ ನಿನ್ನ ಮುಖಾವಲೋಕನವನ್ನು ಮಾಡುವದಿಲ್ಲವೆಂದು ನಿರ್ಧರಿಸಿ, ಗೋಲಕೊಂಡಕ್ಕೆ ಹೋಗಿ ಅಲ್ಲಿ ಸರದಾರನಾಗಿದ್ದೆನು. ಅಲ್ಲಿಯ ನವಾಬನು ನನ್ನನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದನು. ಔರಂಗಜೇಬನು ಸೇನೆಯನ್ನು ಸಿದ್ಧಪಡಿಸುತ್ತಿರುವನೆಂದು ಕೆಲವು ದಿನಗಳ ಕೆಳಗೆ ಒಬ್ಬ ಶ್ರೋತ್ರಿಯ ಬ್ರಾಹ್ಮಣನು ಬಂದು ನವಾಬನ ಪಂಡಿತರಿಗೆ ತಿಳಿಸಲು ಮಂತ್ರಿ ಮಾದಣ್ಣ ಪಂಡಿತರು, ಸಮಾಚಾರವನ್ನು ತಿಳಿದು ಬರಬೇಕೆಂದು ನನ್ನನ್ನು ದಿಲ್ಲಿಗೆ ಕಳುಹಿಸಿದರು. ನಾನು ವೇಷಾಂತರದಿಂದ ದಿಲ್ಲಿಯಲ್ಲೆಲ್ಲಾ ಸಂಚರಿಸಿ, "ಔರಂಗಜೇಬನಿಂದ ನಮಗಾವ ಅಪಾಯವೂ ಇಲ್ಲವೆಂದೂ ನಾವು ಭಯಪಡಬೇಕಾಗಿಲ್ಲವೆಂದೂ" ಗೋಲಕೊಂಡಕ್ಕೆ ಬರೆದು ಕಳುಹಿ, ಫಕೀರನ ವೇಷವನ್ನು ಧರಿಸಿ ಜನಾನಾದಲ್ಲಿ ಸಂಚರಿಸುತ್ತಾ ಬರುತ್ತಿದ್ದಾಗ ನಿನ್ನನ್ನು ಕಂಡೆನು. ಆ ಬಳಿಕ ರೋಷನಾರೆಯ ಕ್ರೂರಕೃತ್ಯದಿಂದ ಯಮುನೆಯ ಪಾಲಾಗುತ್ತಿದ್ದ ನಿನ್ನನ್ನೂ ನಿನ್ನ ಅಣ್ಣನನ್ನೂ ನಾನೇ ನಯನಪಾಲನ ಸಹಾಯದಿಂದ ಕಾಪಾಡಿದೆನು. ಈ ಯುದ್ಧದಲ್ಲಿ ನನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಬೇಕೆಂದು ನನ್ನ ಪರಾಕ್ರಮವೆಲ್ಲವನ್ನೂ ತೋರಿಸಿದೆನು. ನನ್ನ ಶೌರ್ಯ-ಮನಸ್ಥೈರ್ಯ-ಸಾಹಸಗಳೆಲ್ಲವೂ ನಿನಗೆ ವಿದಿತವಾಗಿರುವದರಿಂದ ಇನ್ನು ನಾನು ಬದುಕಿದರೂ ಸರಿಯೇ ಸತ್ತರೂ ಸರಿಯೇ" ಎಂದು ಹೇಳಿದನು.

ಇಷ್ಟರಲ್ಲಿ ವೈಕುಂಠಯೋಗಿಯೂ ಅದೇ ದಾರಿಯಲ್ಲಿಯೇ ಬರುತ್ತಾ ಇಂದಿರಾ ರೂಪಸಿಂಗರ ಸ್ಥಿತಿಯನ್ನು ನೋಡಿ, ಕೌತುಕದಿಂದ ಅಲ್ಲಿಯೇ ಬಂದು ನೋಡಿ ಆ ಬಳಿಕ ಸಂತೋಷದಿಂದ, "ಧನ್ಯ! ರೂಪಸಿಂಗ! ನೀನೇ ಧನ್ಯ! ತಾಯಿ ಇಂದಿರಾ! ನೀನು ಭಾಗ್ಯವತಿ! ಭಯಪಡಬೇಡ ರೂಪಸಿಂಗನು ಬದುಕುವನು." ಎಂದು ಹೇಳಿ ವನಸ್ಪತಿಗಳನ್ನು ತಂದು ಗಾಯಗಳಿಗೆಲ್ಲ ಲೇಪವನ್ನು ಹಾಕಿ ಕುಡಿವುದಕ್ಕೂ ಕೊಟ್ಟನು. ವನಸ್ಪತಿಗಳ ಶಕ್ತಿಯಿಂದ

ಲೂ ಯೋಗಿಯ ತಪಃಪ್ರಭಾವದಿಂದಲೂ ರೂಪಸಿಂಗನಿಗೆ ಬಾಧೆ ಕಡಿಮೆ ಯಾಗುತ್ತ ಬಂದವು.

ಇಷ್ಟರಲ್ಲಿ ಶಿವಸಿಂಗನೂ ದುರ್ಗಾದಾಸನೂ ಅಲ್ಲಿಗೆ ಬಂದರು. ದುರ್ಗಾದಾಸನು, ತನ್ನ ತಂಗಿ, ತನ್ನ ತೊಡೆಯಮೇಲೆ ಪುರುಷನೋರ್ವನ ತಲೆಯನ್ನಿಟ್ಟುಕೊಂಡು ಕುಳಿತಿರುವುದನ್ನು ನೋಡಿ ಮಂತ್ರಮುಗ್ಧನಂತೆ ನಿಂತನು. ದುರ್ಗಾದಾಸನ ಸ್ಥಿತಿಯನ್ನು ನೋಡಿ ಸ್ಮಿತವದನನಾಗಿ ಯೋಗಿಯು "ಅಯ್ಯಾ ದುರ್ಗಾದಾಸ! ನೀನು ಅನ್ಯಥಾ ಭಾವಿಸಬೇಡ. ನಿನ್ನ ತಂಗಿಯ ಪತಿಯಾದ ರೂಪಸಿಂಗನೇ ಈತನು. ಫಕೀರನ ವೇಷದಿಂದ ನಿಮ್ಮಿಬ್ಬರ ಪ್ರಾಣವನ್ನು ಉಳಿಸಿದವನೂ ಯುದ್ಧದಲ್ಲಿ ನಿಮಗೆ ಜಯವಾಗುವಂತೆ ಶತ್ರುಗಳೊಡನೆ ಕಾದಾಡಿದವನೂ ಈತನೇ!" ಎಂದು ಶ್ಲಾಘಿಸಿದನು.

ದುರ್ಗಾದಾಸನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಅನೇಕ ಬಗೆಯಿಂದ ರೂಪಸಿಂಗನನ್ನು ಅಭಿನಂದಿಸಿದನು. ಶಿವಸಿಂಗನು ನಯನಪಾಲನೊಡನೆ ಈತನು ಸಂಭಾಷಿಸಿದುದು ಮೊದಲು ಯುದ್ಧದಲ್ಲಿ ಶ್ರಾಂತನಾಗಿ ಕೆಳಗೆ ಬೀಳುವವರೆಗೂ ಶತ್ರುಗಳಿಗೆ ತೋರಿಸಿದ ಪರಾಕ್ರಮಾದಿಗಳನ್ನು ವರ್ಣಿಸಿದನು. ಈ ಮಾತುಗಳಿಂದ ಇಂವಿರೆಗಾದ ಆನಂದಾತಿಶಯವನ್ನು ವರ್ಣಿಸಲಳವಲ್ಲದಂತಾಯಿತು. ರೂಪಸಿಂಗನು ತನ್ನ ಬಾಲರಾಜನಾದ ಅಜಿತಕುಮಾರನನ್ನು ಅಪ್ಪಿ ಮುದ್ದಾಡುತ್ತ ತನ್ನ ಆಯಾಸವನ್ನೆಲ್ಲ ಮರೆತನು.

---

## ಪರಿಸಮಾಪ್ತಿ.

ಇಲ್ಲಿಗೆ ಕಥೆ ಸಮಾಪ್ತವಾಯಿತು. ವಿಜಯಸಿಂಹನು ಶಿವಸಿಂಗನ ಮಾಡಿದ ಸಾಹಸಕೃತ್ಯಗಳಿಗೆ ಸಂತುಷ್ಟನಾಗಿ ಮಗನನ್ನು ಆದರದಿಂದ ರೂಪನಗರಕ್ಕೆ ವೈಭವಪೂರ್ವಕವಾಗಿ ಕರೆಯಿಸಿಕೊಂಡನು. ಸುಮುಹೂರ್ತದಲ್ಲಿ ವಿಮಲೆಯನ್ನು ರಾಜಸಿಂಹನಿಗೂ ಪದ್ಮೆಯನ್ನು ಶಿವಸಿಂಗನಿಗೂ ಕೊಟ್ಟು ಅತ್ಯಂತ ವೈಭವದಿಂದ ವಿವಾಹವನ್ನು ಮಾಡಿದನು. ಚಂದ್ರಾವತಿಯು

ವೈಕುಂಠಯೋಗಿಯ ಅನುಗ್ರಹವನ್ನು ಹೊಂದಿ ಅಜಿತಕುಮಾರನನ್ನು ಕರೆದುಕೊಂಡುಬಂದು ಜೋಧಪುರದ ಪಟ್ಟವನ್ನು ಕಟ್ಟಿದಳು. ರೂಪಸಿಂಗ-ಇಂದಿರೆಯರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಪಟ್ಟಣದಲ್ಲಿ ಮಹೋತ್ಸಾಹದಿಂದ ಮೆರವಣಿಗೆಯನ್ನು ಮಾಡಿಸಿ ಬಹುವಾಗಿ ಸನ್ಮಾನಿಸಿದಳು.

ವಾಚಕರು ತಿಳಿಯಬೇಕಾದ ವಿಷಯವು ಮತ್ತೊಂದಿರುವುದು. ಏನೆಂದರೆ, ಮೊದಲನೆಯ ಪ್ರಕರಣದಲ್ಲಿ ಕಾಬೂಲ್ ದೇಶಕ್ಕೆ ಉತ್ತರಪತ್ರವನ್ನು ತೆಗೆದುಕೊಂಡು ಹೋಗುತ್ತಿದ್ದ ಮುಹಮ್ಮದೀಯನೂ ಯಶವಂತಸಿಂಹನ ಮರಣಸಮಯದಲ್ಲಿ ದುರ್ಗಾದಾಸನಿಗೆ ಒಂದು ಕಾಗದವನ್ನು ತಂದುಕೊಟ್ಟ ಮುಹಮ್ಮದೀಯನೂ ಔರಂಗಜೇಬನು ಸೈನ್ಯವನ್ನು ಸಿದ್ಧಪಡಿಸುತ್ತಿರುವನೆಂದು ಗೋಲಕೊಂಡದಲ್ಲಿ ಮಾದಣ್ಣಪಂಡಿತರಿಗೆ ವರ್ತಮಾನವನ್ನು ಕೊಟ್ಟುಹೋದ ಶ್ರೋತ್ರಿಯ ಬ್ರಾಹ್ಮಣನೂ ಯಾರಾರಿರಬಹುದೆಂದು ಶಂಕಿಸಬಹುದು. ಆ ಮೂರು ಕಾರ್ಯಗಳನ್ನು ನಿರ್ವಹಿಸಿದವನೂ ಒಬ್ಬನೇ! ಅತನೇ ನಮ್ಮ ವೈಕುಂಠಯೋಗಿ. ಅತನು ಆಗಾಗ ನಾಲ್ಕೈದು ದಿನಗಳವರೆಗೆ ಯಾರಿಗೂ ಕಾಣದಂತೆ ಇರುತ್ತಿದ್ದುದರಿಂದ ಅಲ್ಲಿದ್ದ ಭಿಲ್ಲರು ಸ್ವಾಮಿಗಳು ಅಂತರ್ಧಾನರಾಗಿರುವರೆಂದು ಭಾವಿಸುತ್ತಿದ್ದರು. ವಾಸ್ತವಿಕಾಂಶವು ಹಾಗಲ್ಲ. ರಾಜಪುತ್ರರಿಗೆ ಸಂಭವಿಸಬಹುದಾಗಿರುವ ಕಷ್ಟಗಳನ್ನು ಮುಂಚಿತವಾಗಿ ತಿಳಿದುಕೊಳ್ಳುವುದಕ್ಕಾಗಿ ವೇಷಾಂತರಗಳಿಂದ ದೇಶದಲ್ಲೆಲ್ಲಾ ಸಂಚರಿಸುತ್ತ ರಹಸ್ಯ ವೃತ್ತಾಂತವನ್ನು ಸಂಗ್ರಹಿಸಿ ಉತ್ತರೋತ್ತರ ಪತ್ರಗಳನ್ನು ತಂದಿತ್ತು ಉಪಾಯಗಳನ್ನು ಸೂಚಿಸುತ್ತ ರಾಜಪುತ್ರರಿಗೆ ಅತ್ಯಂತ ಸಹಾಯಕನಾಗಿದ್ದನು. ಈ ಯೋಗಿವರ್ಯನು ಈಗಲೂ ಆಬೂಪರ್ವತದ ಮೇಲೆ ಗುಹೆಯಲ್ಲಿ ತಪಸ್ಸು ಮಾಡುತ್ತಿರುವನೆಂದೂ ರಾಜಪುತ್ರರಾಜರಿಗೆ ಕಷ್ಟಗಳು ಸಂಭವಿಸಿದಾಗ ದಿವ್ಯದೃಷ್ಟಿಯಿಂದ ತಿಳಿದು ರೂಪಾಂತರದಿಂದ ಬಂದು ಅವರಿಗೆ ಸಹಾಯ ಮಾಡುವನೆಂದೂ ಆ ಪರ್ವತದಲ್ಲಿರುವ ಭಿಲ್ಲರು ಈಗಲೂ ನಂಬಿರುವರು.